TIGHT BINDING BOOK

TEXT FLY WITHIN THE BOOK ONLY

THE BOOK WAS DRENCHED

UNIVERSAL
LIBRARY
OU_202003
UNIVERSAL
LIBRARY

OUP—901—26-3-70—5,000

OSMANIA UNIVERSITY LIBRARY

Call No. K 349.54 A 53B. V.I Accession No. K 350.

Author [illegible]

Title [illegible]

This book should be returned on or before the date last marked below.

ಆನಂದ ಕರ್ಣಾಟಕ ಗ್ರಂಥರತ್ನಮಾಲೆ. ಸಂ. ೨.

ಶ್ರೀಃ.

ಶ್ರೀ ವ್ಯಾಸ ಮಹರ್ಷಿ ಪ್ರಣೀತ

ಶ್ರೀಮದ್ಭಾಗವತವು

ಕರ್ಣಾಟಕ ವಚನವು

(ಪ್ರಥಮ ದ್ವಿತೀಯಸ್ಕಂಧಗಳು.)

ಶ್ರೀಮದ್ಯದುಶೈಲನಿವಾಸರಸಿಕ

ಪಂಡಿತ ದೇವತಶಿಖಾಮಣಿ ಆಳಸಿಂಗರಾಜಾರ್ಯವಿರಚಿತವು.

Vol I.

(ದ್ವಿತೀಯಮುದ್ರಣ.)

ಮದ್ರಾಸು

ಆನಂದಮುದ್ರಾಕ್ಷರಶಾಲೆಯಲ್ಲಿ ಮುದ್ರಿತವಾಗಿ

ಆರ್. ವೇಂಕಟೇಶ್ವರಕಂಪೆನಿಯವರಿಂದ

ಪ್ರಕಟಿಸಲ್ಪಟ್ಟಿದೆ.

1918

[ALL RIGHTS RESERVED]

All Rights Reserved.
CHECKED. 1951 Checked 1963

ಕಾಪಿರೈಟ್, ೧೯೫೮—ಈ ಪುಸ್ತಕದ ಸರ್ವಸ್ವಾತಂತ್ರ್ಯವೂ ಮದ್ರಾಸ್, ಆರ್. ವೇಂಕಟೇಶ್ವರಕಂಪನಿಯವರಿಗೆ ಸೇರಿದೆ. ಇದಕ್ಕೆ ಇಂಡಿಯಾದೇಶದ ಮತ್ತು ಹೊರದೇಶದ ಕಾಪೀರೈಟ್ ತೆಗೆಯಲ್ಪಟ್ಟಿದೆ ಈ ಪುಸ್ತಕವನ್ನು ಸಂಪೂರ್ಣವಾಗಿಯಾಗಲಿ, ಅಥವಾ ಇದರ ಯಾವುದಾದರೂ ಭಾಗವನ್ನಾಗಲಿ, ಪ್ರತ್ಯೇಕವಾಗಿ ಪ್ರಕಟಿಸುವುದಕ್ಕೂ, ಭಾಷಾಂತರೀಕರಿಸಿ ವಿಕ್ರಯಿಸುವುದಕ್ಕೂ ಬೇರೊಬ್ಬರಿಗೂ ಬಾಧ್ಯತೆಯಿರದು. ಈ ಪುಸ್ತಕದೊಳಗಿನ ಭಾವಗಳನ್ನಾಗಲಿ, ಪದಗಳನ್ನಾಗಲಿ, ಚಿತ್ರಪಟಗಳನ್ನಾಗಲಿ, ಇತರರು ಕಾಪೀಮಾಡಿದಪಕ್ಷದಲ್ಲಿ, ಅಂತವರು ಕಾಪೀರೈಟನ್ನು ಉಲ್ಲಂಘಿಸಿದಂತಾಗುವುದು. ಆದುದರಿಂದ ಯಾವ ಭಾಗದಲ್ಲಿಯಾದರೂ ಈ ಕಾಪೀರೈಟನ್ನು ಉಲ್ಲಂಘಿಸಿದವರು, ನಷ್ಟದ ದಾವೆಗೆ ಗುರಿಯಾಗುವರೆಂದು ಇದರಿಂದ ತಿಳಿಯಪಡಿಸಿದೆ.

ಪ್ರಥಮಸ್ಕಂಧದ ವಿಷಯಾನುಕ್ರಮಣಿಕೆ.

ಅಧ್ಯಾಯಸಂಖ್ಯೆ.	ವಿಷಯಗಳು.	ಪುಟಸಂಖ್ಯೆ
	ಶ್ರೀಮದ್ಭಾಗವತ ಮಾಹಾತ್ಮ್ಯವು.	೧
	ದುಂಧುಕಾರಿವೃತ್ತಾಂತವು.	೧೯
	ಅವತಾರಿಕೆ.	೪೧
೧.	ಮಂಗಳಶ್ಲೋಕಾರ್ಥವು.	೪೫
	ಸೂತನ ಬಳಿಗೆ ಬಂದು ಶೌನಕಾದಿಗಳು ಪ್ರಶ್ನಮಾಡಿದುದು.	೫೬
೨.	ಸೂತನು ಶೌನಕಾದಿಗಳಿಗೆ ಪರಮಪುರುಷಾರ್ಥಸ್ವರೂಪವನ್ನು ತಿಳಿಸಿದುದು.	೬೦
೩.	ಭಗವಂತನ ಇಪ್ಪತ್ತೊಂದವತಾರಗಳು.	೭೪
೪.	ವ್ಯಾಸಮಹರ್ಷಿಯು ಚಿಂತಾಕುಲನಾಗಿ ದುಃಖಿಸುತಿದ್ದಾಗ ನಾರದನು ಆತನ ಬಳಿಗೆ ಬಂದುದು.	೮೩
೫.	ವ್ಯಾಸ ನಾರದ ಸಂವಾದವು.	೮೯
,,	ನಾರದನು ತನ್ನ ಪೂರ್ವಜನ್ಮಚರಿತ್ರವನ್ನು ತಿಳಿಸಿದುದು.	೯೫
೬.	ನಾರದನು ತಾನು ವನಪ್ರವೇಶಮಾಡಿದುದನ್ನೂ, ತನಗೆ ಶ್ರೀ ಮನ್ನಾರಾಯಣನು ಪ್ರತ್ಯಕ್ಷವಾದುದನ್ನೂ ವ್ಯಾಸನಿಗೆ ತಿಳಿಸಿ, ಅವನ ಅನುಮತಿಯನ್ನು ಪಡೆದು ಹಿಂತಿರುಗಿ ಹೋದುದು.	೯೯
೭.	ವ್ಯಾಸಮುನಿಯು ಭಾಗವತವನ್ನು ರಚಿಸಿ ಶುಕಮುನಿಗೆ ಉಪದೇಶಿಸಿದುದು,	೧೦೫
೮.	ಪಾಂಡವರು ಗಂಗಾತೀರಕ್ಕೆ ಬಂದುದು. ಕುಂತಿಯ ಪ್ರಾರ್ಥನೆಯಮೇಲೆ ಕೃಷ್ಣನು ಹಸ್ತಿನಾಪುರದಲ್ಲಿ ನಿಂತುದು.	೧೧೫
೯.	ಧರ್ಮರಾಜನು ತನ್ನ ತಮ್ಮಂದಿರೊಡನೆಯೂ, ಶ್ರೀಕೃಷ್ಣನೊಡನೆಯೂ ಭೀಷ್ಮಾಚಾರ್ಯನ ಬಳಿಗೆ ಬಂದು, ಅವನಿಂದ ಧರ್ಮೋಪದೇಶವನ್ನು ಹೊಂದಿದುದು. ಭೀಷ್ಮನು ಶ್ರೀಕೃಷ್ಣನನ್ನು ಸ್ತುತಿಸುತ್ತ ದೇಹತ್ಯಾಗವನ್ನು ಮಾಡಿದುದು.	೧೨೨

೯. ಭೀಷ್ಮನು ದೇಹಾವಸಾನಕಾಲದಲ್ಲಿ ಶ್ರೀಕೃಷ್ಣನನ್ನು ಸ್ತುತಿಸಿದುದು. ೧೩೦

೧೦. ಶ್ರೀಕೃಷ್ಣನು ಧರ್ಮರಾಜನನ್ನು ರಾಜ್ಯಭಾರಕ್ಕಾಗಿ ನಿಯಮಿಸಿ ತಾನು ದ್ವಾರಕೆಗೆ ಹೊರಟುದು. ೧೩೪

೧೧. ಶ್ರೀಕೃಷ್ಣನು ದ್ವಾರಕೆಯನ್ನು ಪ್ರವೇಶಿಸಿದುದು. ೧೪೦

೧೨. ಪರೀಕ್ಷಿನ್ಮಹಾರಾಜನ ಜನನವು. ೧೪೬

೧೩. ವಿದುರನು ಹಸ್ತಿನಾಪುರಕ್ಕೆ ಬಂದು ಧೃತರಾಷ್ಟ್ರನಿಗೆ ಹಿತವನ್ನು ಹೇಳಿದುದು. ಧೃತರಾಷ್ಟ್ರನಿರ್ಗಮನವು. ನಾರದಾಗಮನವು. ೧೫೦

೧೪. ಧರ್ಮರಾಜನು ದುಶ್ಶಕುನಗಳನ್ನು ಕಂಡು ಚಿಂತಾಕುಲನಾಗಿದ್ದುದು. ಅರ್ಜುನಾಗಮನವು. ೧೬೩

೧೫. ಅರ್ಜುನನು ದ್ವಾರಕಾಪುರವೃತ್ತಾಂತವನ್ನು ಧರ್ಮರಾಜನಿಗೆ ತಿಳಿಸಿದುದು. ಪಾಂಡವನಿರ್ಗಮನವು. ೧೬೯

೧೬. ಪರೀಕ್ಷಿದ್ರಾಜನ ವೃತ್ತಾಂತವು. ೧೭೯

೧೭. ಕಲಿಪುರುಷನು ಧರ್ಮದೇವತೆಯನ್ನು ಕಾಲಿಂದೊದೆದುದು. ೧೮೬

೧೮. ಪರೀಕ್ಷಿದ್ರಾಜನು ಬೇಟೆಗೆ ಹೋದುದು, ಶೃಂಗಿಶಾಪವು.

೧೯. ಪರೀಕ್ಷಿನ್ಮಹಾರಾಜನು ಚಿಂತಾಕುಲನಾಗಿ ದುಃಖಿಸಿದುದು. ೨೦೩

ದ್ವಿತೀಯಸ್ಕಂಧದ ವಿಷಯಾನುಕ್ರಮಣಿಕೆ.

೧. ಹರಿಕೀರ್ತನಪ್ರಶಂಸೆ. ಋಷ್ಯಾಂಗಚರಿತ್ರವು. ಅಷ್ಟಾಂಗಯೋಗವಿವರಣೆ. ವಿರಾಡ್ರೂಪವರ್ಣನೆ ೨೧೧

೨. ಭಕ್ತಿಯೋಗದ ಮಹಿಮೆ ಧೂಮ್ರಾಕ್ಷೋದ್ಧಾರಾದಿಗತಿಗಳ ವಿವರಣವು. ೨೧೯

೩. ಶುಕನು ಪರೀಕ್ಷಿತ್ತಿಗೆ ಹರಿಭಕ್ತಿಮಾರ್ಗದ ಪ್ರಾಶಸ್ತ್ಯವನ್ನೂ, ಆ ಹರಿಯೊಬ್ಬನೇ ಮೋಕ್ಷಾದಿಸರ್ವಫಲಪ್ರದನೆಂದೂ ತಿಳಿಸಿದುದು. ೨೩೨

೪. ಪರೀಕ್ಷದ್ರಾಜನು ಶುಕಮುನಿಯನ್ನು ಕುರಿತು ಲೋಕಸೃಷ್ಟಿಯ ಕ್ರಮವನ್ನು ಕೇಳಿದುದು. ೨೩೭

೫. ನಾರದನು ಬ್ರಹ್ಮನಿಂದ ಪ್ರಪಂಚಸೃಷ್ಟಿಕ್ರಮವನ್ನು ಪ್ರಶ್ನೆಮಾಡಿ ತಿಳಿದುದು. ೨೪೧

೬. ಪುರುಷಸೂಕ್ತ ಕ್ರಮದಿಂದ ಪರಮಪುರುಷನೆಸ್ವರೂಪವಿವರಣವು. ವಿರಾಡ್ವಿಭೂತಿವರ್ಣನವು. ೨೫೦

೭. ಬ್ರಹ್ಮದೇವನು ನಾರದನಿಗೆ ಭಗವದವತಾರಗಳನ್ನೂ, ಆಯಾ ಅವತಾರಗಳಲ್ಲಿ ನಡೆದ ಕಾರ್ಯಗಳನ್ನೂ, ಅವತಾರಪ್ರಯೋಜನಗಳನ್ನೂ ತಿಳಿಸಿದುದು. ೨೬೨

,, ವರಾಹಾವತಾರವು. ,,

,, ಸುಯಜ್ಞಾವತಾರವು. ,,

,, ಕಪಿಲಾವತಾರವು. ೨೬೩

ದತ್ತಾತ್ರೇಯಾವತಾರವು. ,,

,, ಮುನಿಕುಮಾರಾವತಾರವು. ೨೬೪

ನರನಾರಾಯಣಾವತಾರವು. ,,

,, ಧ್ರುವವರಪ್ರದಾವತಾರವು. ೨೬೭

,, ಪೃಥುಚಕ್ರವರ್ತಿಯ ಅವತಾರವು. ೨೬೬

ಋಷಭಾವತಾರವು. ,,

,, ಹಯಗ್ರೀವಾವತಾರವು. ೨೬೭

೭	ಮತ್ಸ್ಯಾವತಾರವು.	೨೬೮
,,	ಕೂರ್ಮಾವತಾರವು.	,,
,,	ನೃಸಿಂಹಾವತಾರವು.	೨೬೯
	ಗಜೇಂದ್ರವರದಾವತಾರವು.	,,
,,	ವಾಮನಾವತಾರವು.	೨೭೦
,,	ಹಂಸಾವತಾರವು.	೨೭೨
,,	ಆಯಾಮನ್ವಂತರಗಳಲ್ಲಿ ಬೇರೆಬೇರೆಯಾಗಿ ಕೈಕೊಂಡ ಅವತಾರಗಳು.	,,
,,	ಧನ್ವಂತರಿಯ ಅವತಾರವು.	೨೭೩
,,	ಪರಶುರಾಮಾವತಾರವು.	,,
,,	ಶ್ರೀರಾಮಾವತಾರವು.	,,
,,	ಕೃಷ್ಣಾವತಾರವು.	೨೭೪
,,	ವ್ಯಾಸಾವತಾರವು.	೨೭೯
,,	ಬೌದ್ಧಾವತಾರವು.	,,
,,	ಕಲ್ಕ್ಯವತಾರವು.	,,

೮. ಪರೀಕ್ಷಿದ್ರಾಜನು ಇನ್ನೂ ಬೇರೆಬೇರೆ ವಿಷಯಗಳನ್ನು ಕುರಿತು ಶುಕಮುನಿಯನ್ನು ಪ್ರಶ್ನೆಮಾಡಿದುದು. ೨೮೬

೯. ಶುಕಮುನಿಯು ಪರೀಕ್ಷಿದ್ರಾಜನ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರವನ್ನು ಹೇಳಿದುದು. ೨೯೦

೧೦. ಶುಕಮುನಿಯು ಪರೀಕ್ಷಿದ್ರಾಜನಿಗೆ ಸೃಷ್ಟ್ಯಾದಿಕ್ರಮವನ್ನೂ ಜೀವಾತ್ಮಪರಮಾತ್ಮಸ್ವರೂಪವನ್ನೂ ಇತರವಿಷಯಗಳನ್ನೂ ತಿಳಿಸಿದುದು ೩೦೫

ಪ್ರಥಮ ದ್ವಿತೀಯಸ್ಕಂಧಗಳೊಳಗಿನ ಪಟಗಳ ಪಟ್ಟಿ.

ಸೂತಪೌರಾಣಿಕನು ಶೌನಕಾದಿಗಳಿಗೆ ಭಗವತ್ಕಥೆಗಳನ್ನು ಹೇಳಿದುದು. ೬೦

ಕ್ಷೀರಾಬ್ಧಿಯಲ್ಲಿ ನಾರಾಯಣನು ಯೋಗನಿದ್ರೆಯಲ್ಲಿದ್ದುದು. ನಾಭಿಕಮಲದಿಂದ ಚತುರ್ಮುಖೋತ್ಪತ್ತಿಯು. ೭೪

ಶುಕನು ಬಂದಾಗ ದೇವತಾಸ್ತ್ರೀಯರು ನದಿಯಲ್ಲಿ ಸ್ನಾನಮಾಡುತ್ತ ದಿಗಂಬರೆಯರಾಗಿದ್ದು, ವ್ಯಾಸನು ಬರುವುದನ್ನು ಕಂಡೊಡನೆ ವಸ್ತ್ರವನ್ನು ಸುತ್ತಿಕೊಳ್ಳುವುದು. ೮೪

ಅರ್ಜುನನು ಅಶ್ವತ್ಥಾಮನನ್ನು ರಥದ ಕಂಬಕ್ಕೆ ಕಟ್ಟಿ ಕರೆತಂದು, ದ್ರೌಪದಿಯ ವಶಕ್ಕೆ ಒಪ್ಪಿಸಿದುದು. ೧೧೦

ಧರ್ಮರಾಜನು ತನ್ಮಂತ್ರಿಯೊಡನೆ ಭೀಷ್ಮನಬಳಿಗೆ ಬಂದು, ಅಲ್ಲಿ ಶ್ರೀಕೃಷ್ಣನ ಸನುಕ್ಷದಲ್ಲಿ ಧರ್ಮೋಪದೇಶವನ್ನು ಪಡೆದುದು. ೧೨೫

ಪರೀಕ್ಷಿದ್ರಾಜನಿಗೆ ಧರ್ಮರಾಜನು ಪಟ್ಟವನ್ನು ಕಟ್ಟಿದುದು. ೧೭೭

ಪರೀಕ್ಷಿತ್ತು ಶಮೀಕನ ಕೊರಳಿಗೆ ಸತ್ತಹಾವನ್ನು ಮಾಲೆಹಾಕಿದುದು. ೧೯೯

ಪರೀಕ್ಷಿದ್ರಾಜನ ಬಳಿಗೆ ಶುಕಮುನಿಯು ಬಂದುದು. ೨೦೮

ಶ್ರೀ.

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ.

ಶ್ರೀ ಮದ್ಭಾಗವತ ಮಾಹಾತ್ಮ್ಯವು.

ಪೂರ್ವದಲ್ಲಿ ಒಮ್ಮೆ ಶೌನಕಮಹಾಮುನಿಯು, ನೈಮಿಶಾರಣ್ಯದಲ್ಲಿ ಸೂತಪೌರಾಣಿಕನ ಬಳಿಗೆ ಬಂದು ನನುಸ್ಕರಿಸಿ ''ಎಲೈ ಮಹಾತ್ಮನೆ! ಕರ್ಣರಸಾಯನರೂಪವಾದ ಕಥೆಯೊಂದನ್ನು ನನಗೆ ವಿಸ್ತರಿಸಿ ತಿಳಿಸಬೇಕು. ಅಜ್ಞಾನವನ್ನು ನೀಗಿಸಿ, ಭಕ್ತಿಜ್ಞಾನವೈರಾಗ್ಯಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ ದಾರಿಯಾವುದು? ಈ ಕಲಿಯುಗದ ಪ್ರಾಬಲ್ಯದಿಂದ ಸಮಸ್ತಜೀವರಾಶಿಗಳೂ ರಾಕ್ಷಸಪ್ರಕೃತಿಯನ್ನು ಹೊಂದಿ ಕೆಡುತ್ತಿರುವುವು. ಈ ದೋಷನಿವೃತ್ತಿಗೆ ಮಾರ್ಗವಾವುದು ? ಪರಮಯೋಗಿಗಳಿಗೂ ದುರ್ಲಭವಾದ ಮೋಕ್ಷವನ್ನು ಸಾಧಿಸುವುದಕ್ಕೆ ಉಪಾಯವಾವುದು?" ಎಂದನು. ಅದಕ್ಕಾ ಸೂತನು ಶೌನಕನನ್ನು ಕುರಿತು ''ಎಲೈ ಮುನಿಶ್ರೇಷ್ಠನೆ! ಈ ಕಲಿಯುಗದಲ್ಲಿ ಶ್ರೀ ಶುಕಮಹಾಮುನಿಯಿಂದುಪದೇಶಿಸಲ್ಪಟ್ಟ ಭಾಗವತವೇ ಸರ್ವಾರ್ಥಸಿದ್ಧಿಯನ್ನುಂಟುಮಾಡತಕ್ಕದ್ದು. ಕಲಿಕಾಲವೆಂಬ ಕ್ರೂರಸರ್ಪದ ಬಾಯಿಂದ ತಪ್ಪಿಸಿ ಕಾಪಾಡುವುದಕ್ಕೆ, ಶ್ರೀಮದ್ಭಾಗವತಕಥಾನುಸಂಧಾನವೇ ಸರ್ವೋತ್ತಮನಾದ ಸಾಧನವು. ಮನಶ್ಶುದ್ಧಿಗೆ ಇದಕ್ಕಿಂತಲೂ ಮೇಲಾದ ಉಪಾಯಾಂತರವಿಲ್ಲ. ಜನ್ಮಾಂತರದಲ್ಲಿ ವಿಶೇಷಸುಕೃತಗಳನ್ನು ಮಾಡಿದ್ದವರಿಗಲ್ಲದೆ ಆ ಭಾಗವತವೆಂಬ ಶಾಸ್ತ್ರವು ಸುಲಭವಲ್ಲ. ಹಿಂದೆ ಶುಕಮುನಿಯು ಪರೀಕ್ಷಿದ್ರಾಜನಿಗೆ ಭಾಗವತವನ್ನು ಪದೇಶಿಸುವುದಕ್ಕಾಗಿ ಸಭೆಗೆ ಬಂದು ಕುಳಿತೊಡನೆ, ದೇವತೆಗಳೆಲ್ಲರೂ ತಮ್ಮಲ್ಲಿದ್ದ ಅಮೃತಕಲಶದೊಡನೆ ಬಂದು, ಆ ಮಹರ್ಷಿಗೆ ನಮಸ್ಕರಿಸಿ ''ಎಲೈ ಮಹಾಮುನಿಯೆ ? ಇದೋ! ನಾವು ತಂದಿರುವ ಈ ಅಮೃತಕಲಶವನ್ನು ಸ್ವೀಕರಿಸು! ಇದನ್ನು ನಿನ್ನ

ಭಕ್ತನಾದ ಪರೀಕ್ಷಿದ್ರಾಜನಿಗೆ ಕೊಟ್ಟು, ಈಗ ನೀನು ಅವನಿಗೆ ಅನುಗ್ರಹಿಸಿ ಕೊಡಬೇಕೆಂದಿರುವ ಶ್ರೀಮದ್ಭಾಗವತಕಥಾಮೃತವನ್ನು ನಮಗೆ ಕೊಡು ! ಎಂದು ವಿನಯದಿಂದ ಪ್ರಾರ್ಥಿಸಿದರು. ಹೀಗೆ ದೇವತೆಗಳು ಕೇಳುತ್ತಿರಲು, ಶುಕಮಹಾಮುನಿಯು ತನ್ನೊಳಗೆ ತಾನು ಆ ದೇವತೆಗಳ ಸ್ವಾರ್ಥಪರತೆಯನ್ನೂ, ತಂತ್ರವನ್ನೂ ನೋಡಿ ನಗುತ್ತ "ಆಹಾ! ಆ ಸುಧೆಯೆಲ್ಲಿ? ಈ ಕಥಾಮೃತವೆಲ್ಲಿ? ಸಾಮಾನ್ಯವಾದ ಗಾಜನ್ನು ,ಬೆಲೆಯುಳ್ಳ ರತ್ನ ಕೊಡಸಿ ಹೋಲಿಸುವುದೇ?" ಎಂದು ಚಿಂತಿಸಿ, ತಾನುದ್ಧೇತಿಸಿದ ಆ ಕಥಾಮೃತವನ್ನು, ಪರಮ ಭಕ್ತನಾದ ಪರೀಕ್ಷಿದ್ರಾಜನಿಗಲ್ಲದೆ,ಭಕ್ತಿಹೀನರಾದ ಆ ದೇವತೆಗಳಿಗೆ ಕೊಡುವುದಕ್ಕೆ ಇಷ್ಟಪಡಲಿಲ್ಲ. ಹೀಗೆ ಭಾಗವತವೆಂಬ ಕಥಾಮೃತವು ದೇವತೆಗಳಿಗೂ ದುರ್ಲಭವಾಯಿತು. ಕೂನೆಗೆ ಈ ಸತ್ಕಥಾಶ್ರವಣದಿಂದ ಪರೀಕ್ಷಿದ್ರಾಜನಿಗೆ ಅತಿಸುಲಭವಾಗಿ ಮೋಕ್ಷವುಂಟಾದುದನ್ನು ನೋಡಿ, ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನಿಗೂ ಆಶ್ಚರ್ಯವು ಹುಟ್ಟಿತು ಆಗ ಬ್ರಹ್ಮನು ಈ ಮಹಾಗ್ರಂಥದ ಮಹಿಮೆಯನ್ನು ಇನ್ನೂ ಸ್ಪಷ್ಟವಾಗಿ ಪರೀಕ್ಷಿಸಬೇಕೆಂದು ನಿಶ್ಚಯಿಸಿ, ಸತ್ಯಲೋಕದಲ್ಲಿ ಒಂದು ದೊಡ್ಡ ತುಲೆಯನ್ನು ಕಟ್ಟಿ, ಸಮಸ್ತಧರ್ಮಸಾಧನಗಳನ್ನೂ ಒಂದು ಕಡೆಯಲ್ಲಿರಿಸಿ, ಈ ಮಹಾಗ್ರಂಥವನ್ನೇ ಬೇರೊಂದು ಕಡೆಯಲ್ಲಿಟ್ಟು ತೂಗಿದನು. ಆಗಲೂ ಇದರಲ್ಲಿಯೇ (ಭಾಗವತ) ಗೌರವವು ಕಂಡುಬಂದಿತು. ಇದನ್ನು ನೋಡಿ ಅಲ್ಲಿದ್ದ ಸಮಸ್ತಋಷಿಗಳೂ ಆತ್ಯಾಶ್ಚರ್ಯವನ್ನು ಹೊಂದಿದರು. ಭಾಗವತವೆಂಬುದು ಸಾಕ್ಷಾದ್ಭಗವತ್ಸ್ವರೂಪವಾಗಿ ಭೂಮಿಯಲ್ಲಿ ಪ್ರಚಾರಗೊಂಡಿರುವ ಶಾಸ್ತ್ರವೇ ಹೊರತು ಬೇರೆಯಲ್ಲವೆಂದು ನಿಶ್ಚಯಿಸಿದರು. ಇದರ ಪಠನಶ್ರವಣಗಳಿಂದ ತಪ್ಪದೆ ಮೋಕ್ಷಫಲವು ಸಿದ್ಧಿಸುವುದೆಂಬ ನಿಶ್ಚಯವೂ ಹುಟ್ಟಿತು. ಎಲೆ ಶೌನಕನೆ ! ಈ ಭಾಗವತವನ್ನು ಏಳುದಿವಸಗಳಲ್ಲಿ ಶ್ರವಣಮಾಡಿದವರಿಗೆ, ಸರ್ವಪ್ರಕಾರದಿಂದಲೂ ಮುಕ್ತಿಯು ಕೈಗೂಡುವುದು. ಪೂರ್ವದಲ್ಲಿ ಈ ವಿಷಯವನ್ನೇ ಪರಮದಯಾಳುಗಳಾದ ಸನಕಾದಿಗಳು ನಾರದನಿಗೆ ತಿಳಿಸಿರುವರು ಅದಕ್ಕೆ ಮೊದಲೇ ನಾರದನು ಚತುರ್ಮುಖಬ್ರಹ್ಮನಿಂದ ಈ ಪುಣ್ಯಕಥೆಯನ್ನು ಕೇಳಿದ್ದರೂ, ಸಪ್ತಾಹಶ್ರವಣವೆಂಬ ವಿಧಿಯುನೂತ್ರ ಅವನಿಗೆ ಸನಕಾ

ದಿಗಳಿಂದಲೇ ಉಪದೇತಿಸಲ್ಪಟ್ಟಿತು." ಎಂದನು. ಆಗ ಶೌನಕನು ತಿರುಗಿ ಸೂತಪೌರಾಣಿಕನನ್ನು ಕುರಿತು ,,ಎಲೈ ಮಹಾತ್ಮನೆ! ಕೇವಲಯೋಗ್ಯ ದರ್ಶನದಲ್ಲಿಯೇ ಆಸಕ್ತನಾಗಿ, ನಿಂತ ಕಡೆಯಲ್ಲಿ ನಿಲ್ಲದೆ ಲೋಕಸಂಚಾರಿಯಾಗಿ ತಿರುಗುತ್ತಿರುವ ನಾರದನಿಗೆ, ಈ ಸಪ್ತಾಹವಿಧಿಯನ್ನನುಸರಿಸಿ ಭಾಗವತವನ್ನು ಕೇಳಬೇಕೆಂಬ ಪ್ರೀತಿಯು ಹೇಗೆ ಹುಟ್ಟಿತು? ಸನಕಾದಿಗಳೊಡನೆ ಅವನಿಗೆ ಸಮಾಗಮಂಟಾದುದು ಹೇಗೆ? ಇದರ ವಿವರವನ್ನು ನನಗೆ ತಿಳಿಸಬೇಕು" ಎಂದನು. ಅದಕ್ಕಾ ಸೂತಪೌರಾಣಿಕನು, ಶೌನಕನನ್ನು ಕುರಿತು ,,ಶೌನಕಾ! ಈ ವಿಷಯದಲ್ಲಿ ಒಂದು ಪೂರ್ವವೃತ್ತಾಂತವುಂಟು. ಹೇಳುವೆನು ಕೇಳು! ಮೊದಲೊಮ್ಮೆ ನಾರದನು, ಜ್ಞಾನಭಕ್ತಿವೈರಾಗ್ಯಗಳ ಸಾಧನೆಗೆ ಭೂಮಿಯೇ ಉತ್ತಮಸ್ಥಾನವೆಂದು ತಿಳಿದು, ಈ ಭೂಲೋಕಕ್ಕೆ ಬಂದನು. ಆಗ ಈ ಸಮಸ್ತಭೂಮಿಯೂ ಕಲಿದೋಷದಿಂದ ದೂಷಿತವಾಗಿತ್ತು. ಸತ್ಯವಾಗಲಿ, ತಪಸ್ಸಾಗಲಿ, ದಾನ ಧರ್ಮ ದಯಾ ದಾಕ್ಷಿಣ್ಯಾದಿಗಳಾಗಲಿ ಯಾವುದೊಂದೂ ಕಾಣುತ್ತಿರಲಿಲ್ಲ. ಒಬ್ಬೊಬ್ಬರೂ ತಮ್ಮತಮ್ಮ ಹೊಟ್ಟೆ ಹೊರೆಯುವುದರಲ್ಲಿಯೇ ನಿರತರಾಗಿದ್ದರೇಹೊರತು, ಧರ್ಮದಲ್ಲಿ ಯಾರೊಬ್ಬರಿಗೂ ದೃಷ್ಟಿಯಿಲ್ಲ. ಸಮಸ್ತಪ್ರದೇಶವೂ ಪಾಷಂಡಪ್ರಚುರವಾಗಿದ್ದಿತು. ವಿರಕ್ತರೆನಿಸಿಕೊಂಡವರೂ ಸ್ತ್ರೀಲೋಲರಾಗಿರುತಿದ್ದರು. ಮನೆಯಲ್ಲಿನ್ನ ಸ್ತ್ರೀಯರಿಗೇ ಸ್ವಾತಂತ್ರ್ಯವು' ಮೈದುನನೇಬುದ್ಧಿಕಲಿಸುವವನು! ಕನ್ಯಾವಿಕ್ರಯವು ಹೆಚ್ಚಿತು! ದಂಪತಿಗಳಲ್ಲಿ ಸ್ವಲ್ಪವಾದರೂ ಸಾಮನಸ್ಯವಿಲ್ಲ! ಪುಣ್ಯಾಶ್ರಮಗಳೂ ಪುಣ್ಯತೀರ್ಥಗಳೂ, ದೇವಾಲಯಗಳೂ ನೀಚಜಾತಿಯವರಿಂದಾವೃತವಾಯುವು. ಹುಡುಕಿ ನೋಡಿದರೂ ಯೋಗಿಯಾಗಲಿ, ಜ್ಞಾನಿಯಾಗಲಿ, ಸಿದ್ಧನಾಗಲಿ, ಸದಾಚಾರಪರನಾಗಲಿ ಒಬ್ಬನಾದರೂ ಸಿಕ್ಕುತ್ತಿರಲಿಲ್ಲ. ಕಲಿದೋಷವೆಂಬ ಕಾಡುಗಿಚ್ಚಿನಿಂದ ಸಮಸ್ತಸಿದ್ಧಿಗಳೂ ಭಸ್ಮವಾಗುತಿದ್ದುವು. ಜನರು ಅನ್ನವಿಕ್ರಯದಿಂದಲೂ, ಬ್ರಾಹ್ಮಣರು ವೇದವಿಕ್ರಯದಿಂದಲೂ, ಸ್ತ್ರೀಯರು ರೂಪವಿಕ್ರಯದಿಂದಲೂ ಜೀವಿಸುತಿದ್ದರು. ಹೀಗೆ ಸಮಸ್ತಭೂಭಾಗವೂ ಕಲಿದೋಷಪ್ರಚುರವಾಗಿರುವುದನ್ನು ನೋಡಿ ನಾರದನು, ಪುಷ್ಕರಪ್ರಯಾಗಾದಿದಿವ್ಯತೀರ್ಥಗಳೆಲ್ಲವನ್ನೂ ಸುತ್ತಿ, ಎಲ್ಲಿಯೂ ಮನಸ್ಸಿಗೆ ನೆಮ್ಮದಿಯಿಲ್ಲ

ದೆ, ಕೊನೆಗೆ ಕೃಷ್ಣಪರಮಾತ್ಮನಿಗೆ ಲೀಲಾಸ್ಥಾನವಾಗಿದ್ದ ಯಮುನಾ ತೀರಕ್ಕೆ ಬಂದು ಸೇರಿದನು. ಅಲ್ಲಿ ನಡುವಯಸ್ಸಿನ ಹೆಂಗಸೊಬ್ಬಳು ಕೇವಲ ದುಃಖಾಕುಲೆಯಾಗಿ ಕುಳಿತಿದ್ದಳು. ಅವಳ ಪಾರ್ಶ್ವದಲ್ಲಿ ವೃದ್ಧರಿಬ್ಬರು ಪ್ರಜ್ಞೆಯಿಲ್ಲದೆ ಮೇಲುಸಿರುಬಿಡುತ್ತ ಮಲಗಿದ್ದರು. ಆ ಯುವತಿಯು ಅವರಿಬ್ಬರನ್ನೂ ನಾನಾವಿಧವಾಗಿ ಉಪಚರಿಸಿ ಸಮಾಧಾನವನ್ನು ಹೇಳುತ್ತ, ತನ್ನ ಕಷ್ಟವನ್ನು ನೀಗುಸುವರಾರೆಂದು ನಾನಾದಿಕ್ಕುಗಳಿಗೆ ಕಣ್ಣಿಟ್ಟು ನೋಡುತ್ತ, ಸಂಕಟವನ್ನು ತಡೆಯಲಾರದೆ ಅವರ ಮುಂದೆ ಕುಳಿತು ಬಹಳವಾಗಿ ರೋದಿಸುತಿದ್ದಳು. ಬೇರೆ ನೂರಾರುಮಂದಿ ಸ್ತ್ರೀಯರು ಅವಳಿಗೆ ಬಾರಿಬಾರಿಗೂ ದುಃಖಸಮಾಧಾನವನ್ನು ಮಾಡಿ ಉಪಚರಿಸುತಿದ್ದರು. ಈ ಸನ್ನಿವೇಶವನ್ನು ನೋಡಿ ನಾರದನಿಗೆ! ಆಶ್ಚರ್ಯವು ಹುಟ್ಟಿತು. ಅದರ ನಿಜಾಂಶವನ್ನು ತಿಳಿಯಬೇಕೆಂಬ ಕುತೂಹಲದಿಂದ ನಾರದನು ಮುಂದೆ ಬರುವಷ್ಟರಲ್ಲಿ, ಆ ತರುಣಿಯೇ ಸಂಭ್ರಮದಿಂದ ತಟ್ಟನೆ ಮೇಲೆದ್ದುಬಂದು ,,ಎಲೆ ಸೌಮ್ಯನೆ! ನಿಲ್ಲು ನಿಲ್ಲು! ನನ್ನ ವ್ಯಸನವನ್ನು ನೀಗಿಸು! ನಿನ್ನ ದರ್ಶನಮಾತ್ರದಿಂದಲೇ ಸಮಸ್ತಲೋಕವೂ ಪಾಪವನ್ನು ನೀಗಿ ಸುಖವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ನನ್ನ ಮುಂದಿನ ಭಾಗ್ಯಕ್ಕೆ ನಿನ್ನ ದರ್ಶನವೇ ಸೂಚಕವಾಗಿರುವುದು. ನಿನ್ನ ಮಾತಿನಿಂದ ನನಗೆ ತಪ್ಪದೆ ಈ ದುಃಖವು ನೀಗಬಹುದು." ಎಂದಳು. ಆಗ ನಾರದನು ಅವಳನ್ನು ಕುರಿತು. ,,ಎಲೆ ಭದ್ರೆ! ನೀನು ಯಾರು ? ಈ ವೃದ್ಧರಾರು?ನಿನ್ನನ್ನು ಸುತ್ತಿ ಉಪಚರಿಸುತ್ತಿರುವ ಈ ಸ್ತ್ರೀಯರಾರು ? ನಿನ್ನ ದುಃಖಕ್ಕೆ ಕಾರಣವೇನು?" ಎಂದು ಕೇಳಿದನು. ಅದಕ್ಕಾ ತರುಣಿಯು ನಾರದನನ್ನು ಕುರಿತು ,,ಎಲ್ಲೆ ಮಹಾತ್ಮನೆ! ನಾನು ಭಕ್ತಿಯು! ಈ ವೃದ್ಧರಿಬ್ಬರೂ ಜ್ಞಾನವೈರಾಗ್ಯಗಳೆಂಬ ನನ್ನ ಮಕ್ಕಳು! ಕಲಿದೋಷದಿಂದ ಇವರಿಗೆ ಈ ದುರವಸ್ಥೆಯುಂಟಾಗಿರುವುದು. ಈ ಸ್ತ್ರೀಯರೆಲ್ಲರೂ ಗಂಗಾದಿಪುಣ್ಯನದಿಗಳು. ಇವರೆಲ್ಲರೂ ನನ್ನ ಸೇವಾರ್ಥವಾಗಿಯೇ ಇಲ್ಲಿಗೆ ಬಂದಿರುವರು ! ದೇವತೆಗಳೂ ನನ್ನನ್ನು ಎಷ್ಟೋ ಪ್ರೀತಿಯಿಂದಾದರಿಸುತಿದ್ದರೂ, ನನ್ನ ಮನಸ್ಸಿಗೆ ನೆಮ್ಮದಿಯಿಲ್ಲದಂತಿದೆ. ಎಲೆ ಪೂಜ್ಯನೆ ! ನನ್ನ ಪೂರ್ವವೃತ್ತಾಂತವೆಲ್ಲವನ್ನೂ ಇನ್ನೂ ವಿಶದವಾಗಿ ತಿಳಿಸುವೆನು ಕೇಳು.

*ನಾನು ನೊದಲು ದ್ರವಿಡದೇಶದಲ್ಲಿ ಹುಟ್ಟಿದವಳು. ಕರ್ಣಾಟಕದೇಶದಲ್ಲಿ ಬಳೆದವಳು. ಮಹಾರಾಷ್ಟ್ರದೇಶದ ಕೆಲವುಭಾಗಗಳಲ್ಲಿಮಾತ್ರ ಮೂಲೆ ಮೂಲೆಗಳಲ್ಲಿ ಅಡಗಿದ್ದು, ಕೊನೆಗೆ ಗುರ್ಜರದೇಶದಲ್ಲಿ ಕೇವಲಜೀರ್ಣದಶೆ ಯನ್ನು ಹೊಂದಿದೆನು. ಅಲ್ಲಿ ಅತಿಭಯಂಕರವಾದ ಕಲಿಸಂಬಂಧದಿಂದ ಪಾ ಷಂಡಿಗಳ ಬಾಧೆಗೆ ಸಿಕ್ಕಿ, ಶಕ್ತಿಗುಂದಿ, ಈ ನನ್ನ ಮಕ್ಕಳೊಡನೆ ಬಹಳ ದೀನ ದಶೆಯನ್ನು ಹೊಂದಿದೆನು. ಆದರೆ ಒಮ್ಮೆ ನಾನು ಅಕಸ್ಮಾತ್ತಾಗಿ ಬೃಂದಾ ವನಕ್ಕೆ ಹೋದಾಗ, ಅಲ್ಲಿ ನನಗೆ ತಿರುಗಿ ಈ ರೂಪವೂ, ಈ ಯೌವನವೂ ಪ್ರಾಪ್ತವಾಗಿ ಹೊಸಯುವತಿಯಂತಾದರೂ, ಇಲ್ಲಿ ಮಲಗಿರುವ ನನ್ನ ಮಕ್ಕಳುಮಾತ್ರ, ಇನ್ನೂ ತಲೆಯೆತ್ತಲಾರದೆ ಮಲಗಿರುವರು. ಈ ಸ್ಥಳ ವನ್ನು ಬಿಟ್ಟು ವಿದೇಶಕ್ಕಾದರೂ ಹೋಗುವೆನೆಂದರೆ, ಈ ನನ್ನ ಮಕ್ಕಳು ಬಹಳ ಜೀರ್ಣದಶೆಯಲ್ಲಿರುವುದರಿಂದ ಅದಕ್ಕೂ ಅವಕಾಶವಿಲ್ಲದೆ ಬಹಳ ವಾಗಿ ದುಃಖಿಸುತ್ತಿರುವೆನು. ಎಲೈ ಮುನಿಸತ್ತಮನೆ! ಲೋಕದಲ್ಲಿ ತಾ ಯಿಯು ವೃದ್ಧಳಾಗಿ, ಮಕ್ಕಳು ಯೌವನವುಳ್ಳವರಾಗಿರುವುದು ಸಹಜವು. ನಾವು ಮೂವರೂ ಒಂದಾಗಿರುವಕಾಲದಲ್ಲಿ, ನಾನು ಯುವತಿಯಾಗಿಯೂ, ಈ ನನ್ನ ಮಕ್ಕಳು ವೃದ್ಧರಾಗಿಯೂ ಇರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ. ಈ ವೈಪರೀತ್ಯವನ್ನು ನೋಡಿ ನನ್ನಮನಸ್ಸಿನಲ್ಲಿ ಆಶ್ಚರ್ಯವೂ, ದುಃಖವೂ ಹೆಚ್ಚುತ್ತಿರುವುದು. ಎಲೈಮಹಾತ್ಮನೆ! ಇದರ ಕಾರಣವೇನೆಂಬು ದನ್ನು ನೀನು ನನಗೆ ದಯೆಯಿಟ್ಟು ತಿಳಿಸುವೆಯಾ?" ಎಂದಳು. ಅದಕ್ಕಾ ನಾರದನು "ಎಲೆ ಭದ್ರೆ! ಇದರ ಕಾರಣವೆಲ್ಲವನ್ನೂ ನಾನು ಜ್ಞಾನದೃಷ್ಟಿ ಯಿಂದ ತಿಳಿದು ಹೇಳುವೆನು. ದುಃಖವನ್ನು ಬಿಡು. ಶ್ರೀಮನ್ನಾರಾಯಣನು ನಿನಗೆ ಸುಖವನ್ನುಂಟುಮಾಡುವನು" ಎಂದು ಹೇಳಿ, ಕ್ಷಣಮಾತ್ರದಲ್ಲಿಯೇ ತನ ಜ್ಞಾನದೃಷ್ಟಿಯಿಂದ ಅದರ ಪೂರ್ವವೃತ್ತಾಂತಗಳೆಲ್ಲವನ್ನೂ ಚೆನ್ನಾಗಿ ತಿಳಿದು ಹೇಳಲಾರಂಭಿಸಿದನು.

---

* ಇಲ್ಲಿ "ಉತ್ಪನ್ನಾ ದ್ರವಿಡೇ ಸಾಹಂ ವೃದ್ಧಿಂ ಕರ್ಣಾಟಕೇ ಗತಾ । ಕ್ವಚಿತ್ಕ್ವಚಿನ್ಮಹಾರಾಷ್ಟ್ರೇ ಗುರ್ಜರೇ ಜೀರ್ಣತಾಂ ಗತಾ॥" ಎಂದು ಮೂಲವು.

"ಎಲೆ ಬಾಲೆ! ಕೇಳು! ಈ ಕಲಿಯುಗವಾದರೋ ಅತಿಕ್ರೂರವಾದುದು. ಇದರಿಂದ ಲೋಕದಲ್ಲಿ ಸದಾಚಾರವೆಲ್ಲವೂ ಕೆಟ್ಟುಹೋದುವು. ತಪಸ್ಸು ಮಾಧಿಗಳೆಲ್ಲವೂ ನಷ್ಟವಾದುವು. ಜನರೆಲ್ಲರೂ ದುಷ್ಕರ್ಮದಲ್ಲೆ ಪ್ರವರ್ತಿಸಿ, ಆಸುರಪ್ರಕೃತಿಯನ್ನು ಹೊಂದಿರುವರು. ಸತ್ಪುರುಷರು ದುಃಖವನ್ನನುಭವಿಸುತ್ತಿರುವರು. ದುರ್ಜನರು ಸಂತೋಷದಿಂದುಬ್ಬುತ್ತಿರುವರು. ದುಷ್ಟರಿಂದುಂಟಾದ ಭಾರವನ್ನು ಸಹಿಸಲಾರದೆ ಭೂದೇವಿಯು ಕ್ರಮಕ್ರಮವಾಗಿ ಕುಗ್ಗುತ್ತಿರುವಳು. ನಿನ್ನ ನ್ನಾಗಲಿ,ನಿನ್ನ ಮಕ್ಕಳನ್ನಾಗಲಿ ಕಣ್ಣೆತ್ತಿ ನೋಡುವವರೇ ಇಲ್ಲದಂತಾಗಿರುವುದು. ಇದರಿಂದಲೇ ನಿಮಗೆ ಈ ವಿಧವಾದ ಜೀರ್ಣದಶೆಯುಂಟಾಯಿತು ಆದರೆ ಬೃಂದಾವನಕ್ಷೇತ್ರದ ಸಂಬಂಧದಿಂದ, ತಿರುಗಿ ನಿನಗೆ ಈ ಹೊಸಯೌವನವುಂಟಾಯಿತು. ಆ ಕ್ಷೇತ್ರವೊಂದೇ ಈಗ ಪರನು ಪುಣ್ಯವೆನಿಸಿಕೊಂಡಿರುವುದು. ಆ ಸ್ಥಳವೊಂದರಲ್ಲೆಯೇ ಈಗ ದೈವಭಕ್ತಿಯು ನಲಿದಾಡುತ್ತಿರುವುದು. ಈ ನಿನ್ನ ಮಕ್ಕಳಿಗೆ ಅಲ್ಲಿ ಹೋಗುವುದಕ್ಕೂ ಅವಕಾಶವಿಲ್ಲವಾದುದರಿಂದ, ಈ ಜೀರ್ಣದಶೆಯಲ್ಲೆ ನರಳುತ್ತಿರುವರು."ಎಂದನು. ಅದಕ್ಕಾಭಕ್ತಿಯು "ಎಲೈ ಮಹಾತ್ಮನೆ! ಅಷ್ಟುಧಾರ್ಮಿಕನಾದ ಪರೀಕ್ಷಿನ್ಮಹಾರಾಜನಿರುವಾಗಲೂ, ಇಲ್ಲಿ ಆ ಕಲಿಗೆ ಹೇಗೆ ಪ್ರವೇಶವುಂಟಾಯಿತು? ಪರಮದಯಾಳುವಾದ ಶ್ರೀಮಹಾವಿಷ್ಣುವಾದರೂ ಈ ಅಧರ್ಮಪ್ರಾಬಲ್ಯವನ್ನು ನೋಡಿ ಹೇಗೆ ಸಹಿಸುತ್ತಿರುವನು ? ಈ ಸಂದೇಹವನ್ನು ನನಗೆ ನೀಗಿಸಬೇಕು" ಎಂದಳು. ಇದನ್ನು ಕೇಳಿ ನಾರದನು "ಎಲೆ ಭದ್ರೆ ಕೇಳು! ಯಾವಾಗ ಶ್ರೀಕೃಷ್ಣಪರಮಾತ್ಮನು ಈ ಭೂಮಿಯನ್ನು ಬಿಟ್ಟು ಶಾಶ್ವತವಾದ ತನ್ನ ಸ್ಥಾನಕ್ಕೆ ಸೇರಿದನೋ, ಆ ದಿನದಿಂದಲೇ ಕಲಿಯು ಈ ಭೂಮಿಯಲ್ಲಿ ಕಾಲಿಟ್ಟನು. ಪರೀಕ್ಷಿತ್ಸಾಮ್ರಾಜನು ದಿಗ್ವಿಜಯಕ್ಕಾಗಿ ಹೊರಟ ಕಾಲದಲ್ಲಿ ಆ ಕಲಿಯು ಇವನ ದೃಷ್ಟಿಗೆ ಗೋಚರಿಸಿದನು. ಆದರೆ ಅವನು ಈ ರಾಜನನ್ನು ನೋಡದೊಡನೆ, ಅತ್ಯಂತದೈನ್ಯದಿಂದ ಇವನಲ್ಲಿಯೇ ಮರೆಹೊಕ್ಕನು. ಅದಕ್ಕಾಗಿ ರಾಜನು ಆ ಕಲಿಯನ್ನು ಕೊಲ್ಲದೆ ಕೃಪಾಪರವಶನಾಗಿ ಬಿಟ್ಟುಬಿಟ್ಟನು. ಆದರೇನು? ಈ ಕಲಿಪ್ರಾಬಲ್ಯದಿಂದ ಲೋಕದಲ್ಲಿ ಸಮಸ್ತಸತ್ಕರ್ಮಗಳೂ ಕೆಟ್ಟುಹೋಗಿದ್ದರೂ, ತಪಸ್ಸಿನಿಂದಲೂ, ಯೋಗಾಭ್ಯಾಸಸಮಾ

ಥಿಗಳಿಂದಲೂ ಲಭ್ಯವಾಗದ ಮಹಾಫಲಗಳೆಲ್ಲವೂ ಈ ಕಲಿಕಾಲದಲ್ಲಿ ಭಗವ
ತ್ಕೀರ್ತನವೊಂದರಿಂದಲೇ ಲಭಿಸುವುವು. ಇತರಸತ್ಕರ್ಮಸಾರವೆಲ್ಲವೂ ಈ
ಕಲಿಕಾಲದಲ್ಲಿ ಕೆಟ್ಟುಹೋಗಿರುವುವು. ಮನೆಮನೆಗಳಲ್ಲಿಯೂ ಬಾಹ್ಮಣರು
ಧನಧಾನ್ಯಗಳ ಆಸೆಯಿಂದಲೇ ಪುರಾಣಕಥೆಗಳನ್ನು ಹೇಳಲಾರಂಭಿಸಿರುವರು.
ಇದರಿಂದ ಕಥಾಸಾರವೂ ಕೆಟ್ಟುಹೋಯಿತು. ಕೇವಲನಾಸ್ತಿಕರಾದ ಕ್ರೂರ
ಕರ್ಮಿಗಳೇ ಪುಣ್ಯತೀರ್ಥಗಳಲ್ಲಿ ಸೇರಿರುವರು. ಇದರಿಂದ ತೀರ್ಥಸಾರವು
ಕೆಟ್ಟಿತು. ಕೇವಲದುರಾಕಾಗ್ರಸ್ತರಾಗಿ, ಕಾಮಕ್ರೋಧವಶರಾದವರೂಕೂ
ಡ ತಪೋನಿರತರಾದುದರಿಂದ, ತಪಸ್ಸಿನ ಸಾರವೂ ಕೆಟ್ಟಿತು. ಹೀಗೆಯೇ ಅಪಾ
ತ್ರಸಂಬಂಧದಿಂದ ಕಲಿಕಾಲದಲ್ಲಿ ಸತ್ಕರ್ಮಗಳ ಸಾರವೆಲ್ಲವೂ ನಷ್ಟವಾಯಿ
ತು. ಇದು ಕಲಿಕಾಲದ ಸಹಜಧರ್ಮವಾದುದರಿಂದ. ಈ ವಿಷಯದಲ್ಲಿ ಬೇರೆ
ಯಾರನ್ನೂ ಅಪರಾಧಿಗಳೆಂದು ಹೇಳುವುದಕ್ಕಿಲ್ಲ. ಇದರಿಂದಲೇ ಪುಂಡರೀ
ಕಾಕ್ಷನೂಕೂಡ ಸಂತಸಿಕೊಂಡಿರುವನು" ಎಂದನು. ಇದನ್ನು ಕೇಳಿ ಭಕ್ತಿಯು
ನಾರದನ ಮಹಾಮಹಿಮೆಯನ್ನು ನೋಡಿ ಆಶ್ಚರ್ಯಭರಿತಳಾಗಿ, ಅವನಿಗೆ ನಮ
ಸ್ಕರಿಸಿ, ಈ ಕ್ರೂರವಾದ ಕಲಿಕಾಲದಲ್ಲಿ ತನ್ನನ್ನು ಪ್ರತಿಷ್ಠಿಸುವುದಕ್ಕೆ ಉಪಾಯ
ವೇನುವುದೆಂದು ಚಿಂತಾಕುಲೆಯಾಗಿ ನಿಂತಿದ್ದಳು.

ಆಗ ನಾರದನು ತಿರುಗಿ ಆ ಭಕ್ತಿಯನ್ನು ನೋಡಿ "ಎಲೆ ಭದ್ರೆ! ನೀನೇಕೆ ಚಿಂತಿಸುವೆ? ಶ್ರೀಕೃಷ್ಣನ ಪಾದಕಮಲವನ್ನು ಸ್ಮರಿಸುತ್ತಿರು! ನಿನ್ನ ದುಃಖವು ನೀಗುವುದು. ಯಾವನು ಪೂರ್ವದಲ್ಲಿ ದ್ರೌಪದಿಯ ಮಾನ
ಸಂರಕ್ಷಣವನ್ನು ಮಾಡಿದನೋ, ಯಾವನು ಗೋಪಸ್ತ್ರೀಯರನ್ನು ಪ್ರತಿಷ್ಠಿಸಿದ
ನೋ, ಆ ಪರಮಾತ್ಮನು ನಿನ್ನ ಭಾಗಕ್ಕೆ ಇಲ್ಲದೆಹೋಗುವನೆ? ದಯಾಸಮುದ್ರ
ನಾದ ಆತನಿಗೆ ನೀನೇ ಪ್ರಾಣಕ್ಕಿಂತಲೂ ಪ್ರಿಯತಮಳು ನೀನು ಮನಃಪೂ
ರ್ವಕವಾಗಿ ಬಂದಾವರ್ತಿ ಕರದಪಕ್ಷದಲ್ಲಿ, ಆತನು ಕೇವಲ ನೀಚರ ನಿವಾಸಗಳಿ
ಗಾದರೂ ಬಂದು ಸೇರಬಲ್ಲನಾರನು. ಕೃತ ತ್ರೇತಾ ದ್ವಾಪರಗಳೆಂಬ ಹಿಂದಿನ
ಮೂರುಯುಗಗಳಲ್ಲಿಯೂ, ಜ್ಞಾನವೈರಾಗ್ಯಗಳೆರಡೂ ಮೋಕ್ಷಸಾಧಕಗಳಾಗಿ
ದ್ದುವು. ಈ ಕಲಿಕಾಲದಲ್ಲಿಯೋ ಕೇವಲಭಕ್ತಿಯೊಂದೇ ಬ್ರಹ್ಮಸಾಯುಜ್ಯವ
ನ್ನುಂಟುಮಾಡತಕ್ಕದ್ದು. ಈನಿಶ್ಚಯದಿಂದಲೇ ಸಚ್ಚಿದಾನಂದಸ್ವರೂಪನಾದ

ಆ ಪರಮಾತ್ಮನು ನಿನ್ನನ್ನು ಈ ಲೋಕದಲ್ಲಿ ಸೃಷ್ಟಿಸಿದನು. ಹಿಂದೆ ನೀನೊ ಮ್ಮೆ ಆತನಿಗೆ ಕೈಮುಗಿದು,-"ನಾನು ಮಾಡತಕ್ಕ ಕಾರ್ಯವೇ"ನೆಂದು ಕೇಳಿದುದ ಕ್ಕೆ, ತನ್ನ ಭಕ್ತರನ್ನು ಪ್ಥರಿಸುತ್ತಿರಬೇಕೆಂದು ನಿನಗೆ ಆಜ್ಞಾಪಿಸಿರುವನು.ನೀನೂ ಅದನ್ನು ಸಂತೋಷಪೂರ್ವಕವಾಗಿ ಅಂಗೀಕರಿಸಿದೆ. ಆದರಮೇಲೆ ಭಗವಂತನು ನಿನ್ನಲ್ಲಿ ಬಹಳಪ್ರಸನ್ನನಾಗಿ, ಆ ಕಾರ್ಯಕ್ಕಾಗಿಯೇ ನಿನಗೆ ಮುಕ್ತಿಯನ್ನು ದಾ ಸಿಯನ್ನಾಗಿಯೂ, ಈ ಜ್ಞಾನವೈರಾಗ್ಯಗಳನ್ನು ಪುತ್ರರನ್ನಾಗಿಯೂ ಮಾ ಡಿರುವನು. ಎಲೆ ಭಪ್ರೆ ! ನಿನ್ನ ನಿಜಸ್ವರೂಪದಿಂದ ನೀನು ವೈಕುಂಠದಲ್ಲಿ ನೆಲೆಸಿರುವೆ. ಈ ಭೂಮಿಯಲ್ಲಿ ಛಾಯಾರೂಪದಿಂದ ಮುಕ್ತಿಜ್ಞಾನವೈರಾ ಗ್ಯಗಳೊಡನೆ ಸೇರಿ ಬಂದು, ಕೃತಯುಗದಿಂದ ದ್ವಾಪರಾಂತದವರೆಗೆ ಮಹಾ ನಂದದಿಂದ ಸಮಸ್ತಭೂಭಾಗವನ್ನೂ ವ್ಯಾಪಿಸಿದೆ ! ಕಲಿಯು ಪ್ರಾಪ್ತವಾ ದೊಡನೆ ಪಾಷಂಡಬಾಧೆಯಿಂದ ಮುಕ್ತಿಯು ಕ್ಷೀಣಗತಿಹೊಂದಿದುದನ್ನು ನೋಡಿ, ನೀನೇ ಆಕೆಯನ್ನು ಹಿಂತಿರುಗಿ ವೈಕಂಠಕ್ಕೆ ಕಳುಹಿಸಿಬಿಟ್ಟೆ ? ಆದ ರೇನು? ಈಗಲೂ ನೀನು ನೆನೆಸಿದಕ್ಷಣದಲ್ಲಿ ಆ ಮುಕ್ತಿದೇವಿಯು ಇಲ್ಲಿಗೆ ಬಂದು ಹೋಗುವುದರಲ್ಲಿ ಸಂದೇಹವಿಲ್ಲ. ಜ್ಞಾನವೈರಾಗ್ಯಗಳೆಂಬ ಇವರಿಬ್ಬರೂ ನಿನಗೆ ಪುತ್ರಭೂತರಾಗಿ ನಿನ್ನ ಪೋಷಣೆಗೊಳಪಟ್ಟು ನಿನ್ನ ವಶದಲ್ಲಿಯೇ ಇರುವರು. ಕಲಿದೋಷದಿಂದ ಇವರಿಗೆ ಈ ದುಸ್ಥಿತಿಯು ಬಂದಿರುವುದು. ಹಾಗಿದ್ದರೂ ನೀನು ಚಿಂತಿಸಬೇಡ. ಇದಕ್ಕಾಗಿ ನಾನೊಂದು ತಕ್ಕ ಉಪಾ ಯವನ್ನು ಯೋಚಿಸಿ ಹೇಳುವೆನು. ಎಲೆ ಶುಭಾಂಗಿ! ಈ ಕಲಿಯುಗಕ್ಕೆ ಸಮಾನ ವಾದ ಕಾಲವು ಬೇರೊಂದಿಲ್ಲ! ಈ ಕಾಲದಲ್ಲಿ ನಿನ್ನನ್ನು ಪ್ರತಿಯೊಂದು ಮನೆ ಯಲ್ಲಿಯೂ, !ಪ್ರತಿಯೊಂದು ಜನದಲ್ಲಿಯೂ ನೆಲೆಗೊಳಿಸುವುದಕ್ಕೆ ನಾನು ಪ್ರಯತ್ನಿಸುವೆನು.ಎಲ್ಲರೂ ಸಮಸ್ತಧರ್ಮಗಳನ್ನೂ ಬಿಟ್ಟು ನಿನ್ನೊಬ್ಬಳನ್ನೇ ಆಶ್ರಯಿಸುವಂತೆ ಮಾಡುವೆನು. ಈರೀತಿಯಾಗಿ ನಿನಗೆ ಸರ್ವತೋಮು ಖವಾದ ಪ್ರವೃತ್ತಿಯನ್ನುಂಟುಮಾಡದಿದ್ದ ಪಕ್ಷದಲ್ಲಿ, ಆಗ ನಾನು ಹರಿದಾಸ ನಲ್ಲವೆಂದೇ ತಿಳಿ! ಎಲೆ ಭಪ್ರೆ! ಈ ಕಾಲದಲ್ಲಿ ನಿನ್ನ ಆಶ್ರಯದಿಂದ ಪಾಪಿಗಳೂ ಕೂಡ ನಿರ್ಭಯವಾಗಿ ವಿಷ್ಣುಲೋಕವನ್ನು ಸೇರಬಹುದು,ಯಾರ ಮನಸ್ಸಿನಲ್ಲಿ ಪ್ರೇಮರೂಪವಾದ ಈ ಭಗವದ್ಭಕ್ತಿಯು ನೆಲೆಗೊಳ್ಳುವುದೋ, ಅಂತವರು

ಸ್ವಪ್ನದಲ್ಲಿಯೂ ನರಕವೆಂಬುದನ್ನು ಕಾಣಲಾರರು. ಪ್ರೇತವಾಗಲಿ, ಪಿಶಾಚವಾಗಲಿ, ರಕ್ಷಸ್ಸಾಗಲಿ, ಭಕ್ತ್ಯುಕ್ತವಾದಮನಸ್ಸುಳ್ಳವರನ್ನು ಮುಟ್ಟಿಬದುಕಲಾರದು. ಶ್ರೀಮನ್ನಾರಾಯಣನು ಭಕ್ತ್ಯಿಂದ ಹೇಗೆ ವಶನಾಗುವನೋ ಹಾಗೆ ತಪಸ್ಸಿನಿಂದಲೂ, ವೇದಾಧ್ಯಯನದಿಂದಲೂ, ಜ್ಞಾನದಿಂದಲೂ, ಸತ್ಕರ್ಮದಿಂದಲೂ ಸಾಧ್ಯನಾಗಲಾರನು. ಈ ವಿಷಯದಲ್ಲಿ ಗೋಪಸ್ತ್ರೀಯರೇ ಪ್ರಮಾಣವು. ಇತರಯುಗಗಳಲ್ಲಿ ಮನುಷ್ಯರು ಸಾವಿರಾರು ಜನ್ಮವನ್ನೆತ್ತಿದಮೇಲಲ್ಲದೆ ಅವರಿಗೆ ಭಕ್ತ್ಯಲ್ಲಿ ಪ್ರೀತಿಯು ಹುಟ್ಟದು. ಮುಖ್ಯವಾಗಿ ಈ ಕಲಿಕಾಲದಲ್ಲಿ ಭಕ್ತ್ಯೇ ಪ್ರಧಾನವು. ಈಕಾಲದಲ್ಲಿ ಭಕ್ತ್ಯುಹೊರತುಬೇರೆ ಉಪಾಯವಿಲ್ಲ ಭಕ್ತ್ಯಿಂದ ಶ್ರೀಕೃಷ್ಣನನ್ನು ಕರೆತಂದು ಕಣ್ಣ ಮುಂದೆ ನಿಲ್ಲಿಸಬಹುದು! ಭಕ್ತ್ಯುದ್ರೋಹಿಗಳಿಗೆ ಮೂರುಲೋಕದಲ್ಲಿ, ಎಲ್ಲಿದ್ದರೂ ದುಃಖವು ತಪ್ಪಿದುದಲ್ಲ. ಇದರಿಂದಲೇ ಪೂರ್ವದಲ್ಲಿ ಭಕ್ತ್ಯನಿಂದಕನಾದದೂರ್ವಾಸನು ಮಹಾದುಃಖಕ್ಕೆ ಸಿಕ್ಕಿಬಿದ್ದನು. ಎಷ್ಟೇವ್ರತಗಳನ್ನು ನಡೆಸಿದರೂ, ಎಷ್ಟೇತೀರ್ಥಯಾತ್ರೆಗಳನ್ನು ನಡೆಸಿದರೂ, ಎಷ್ಟೇ ತಪಸ್ಸುಗಳನ್ನಾಚರಿಸಿದರೂ, ಎಷ್ಟೇಯಾಗಗಳನ್ನು ನಡೆಸಿದರೂ ಇಷ್ಟೊಂದು ಫಲವು ಲಭಿಸಲಾರದು. ಈ ಕಾಲದಲ್ಲಿ ಭಕ್ತ್ಯೊಂನೇ ಮುಕ್ತಿಪ್ರದವು" ಎಂದನು. ಹೀಗೆ ಭಕ್ತ್ಯು ನಾರದನ ಮುಖದಿಂದ ತನ್ನ ಮಹಿಮೆಯನ್ನು ಕೇಳಿದಮೇಲೆ, ಅವಳಿಗೆ ಸಂತೋಷದಿಂದ ಮೈಯೆಲ್ಲವೂ ಉಬ್ಬಿತು. ಸಂತೋಷಪರವಶಳಾದ ಆಕೆಯು ತಿರುಗಿ ನಾರದನನ್ನು ಕುರಿತು. "ಆಹಾ! ನಾರದಾ! ನೀನಲ್ಲವೇ ಪರಮಭಾಗ್ಯಶಾಲಿಯು! ನಿನಗೊಬ್ಬನಿಗೇ ನನ್ನಲ್ಲಿ ನಿಶ್ಚಲವಾದ ಪ್ರೀತಿಯು! ನಾನೂ ನಿನ್ನನ್ನು ಎಂದೆಂದಿಗೂಬಿಟ್ಟಿರದೆ ನಿನ್ನ ಮನಸ್ಸಿನಲ್ಲಿಯೇ ಸ್ಥಿರವಾಗಿ ನಿಲ್ಲುವೆನು. ಪರಮಕೃಪಾಳುವಾದ ನಿನ್ನಿಂದಲ್ಲವೇ ನನ್ನ ಮನೋವ್ಯಥೆಯೆಲ್ಲವೂ ಕ್ಷಣಮಾತ್ರದಲ್ಲಿ ನೀಗಿತು. ಆದರೇನು? ಈ ನನ್ನ ಮಕ್ಕಳು ಪ್ರಜ್ಞೆಯಿಲ್ಲದೆ ಬಿದ್ದಿರುವರು. ಹೇಗಾದರೂ ಮಾಡಿ ನೀನು ಇವರನ್ನೆಚ್ಚರಿಸಬೇಕು" ಎಂದಳು. ಈಮಾತನ್ನು ಕೇಳಿ ನಾರದನು ದಯಾರ್ದ್ರಹೃದಯನಾಗಿ, ಆ ವೃದ್ಧರ ದೇಹಗಳನ್ನು ಕೈಗಳಿಂದ ಸವರುತ್ತ, ಅವರ ಕಿವಿಯಲ್ಲಿ ಮುಖವನ್ನಿಟ್ಟು, "ಎಲ್ಲೆ ಜ್ಞಾನವೈರಾಗ್ಯಗಳಿರಾ! ಚೇತರಿಸಿ ಕೊಳ್ಳಿರಿ" ಎಂದು ಉಚ್ಚಧ್ವನಿಯಿಂದ ಕೂಗಿದನು. ಬಾರಿಬಾ

ಗೂ ಅವರ ಕಿವಿಯಲ್ಲಿ ವೇದವೇದಾಂತವಾಕ್ಯಗಳನ್ನೂ ಗೀತೆಗಳಿನ್ನೂ,ಬೋಧಿಸಿದನು. ನಾರದನು ಎಷ್ಟಾವರ್ತಿ ಅವರ ಕಿವಿಗಳಲ್ಲಿ ಮಂತ್ರಗಳನ್ನು ಪದೇತಿಸಿದರೂ, ಅವರು ಕಣ್ಣುಗಳನ್ನು ತೆರೆಯಲಾರದೆ ಮರದ ತುಂಡುಗಳಂತೆ ನಿಶ್ಚೇಷ್ಟರಾಗಿಯೇ ಬಿದ್ದಿದ್ದರು. ಅದನ್ನು ನೋಡಿ ನಾರದನು ಮುಂದೇನು ಮಾಡಬೇಕೆಂದು ತೋರದೆ ಚಿಂತಾಕುಲನಾಗಿ ಹರಿಧ್ಯಾನವನ್ನು ಮಾಡುತ್ತನಿಂತಿದ್ದನು. ಇಷ್ಟರಲ್ಲೆ ಆಕಾಶದಲ್ಲೆ ಆಶರೀರವಾಕ್ಯೊಂದು ನುಡಿಯಿತು "ಎಲೆ ಮಹರ್ಷಿಯೆ! ಚಿಂತಿಸಬೇಡ! ನಿನ್ನ ಪ್ರಯತ್ನವು ಕೈಗೂಡುವುದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ನೀನೊಂದು ಸತ್ಕರ್ಮವನ್ನು ನಡೆಸಬೇಕಾಗಿರುವದು. ಆ ಕರ್ಮವಾವುದೆಂಬುದನ್ನು ಸಾಧುತಿರೋಮಣಿಗಳಾದ ಕೆಲವುಮಹಾತ್ಮರು ನಿನಗೆ ಉಪದೇತಿಸುವರು. ಆ ಕರ್ಮವನ್ನು ನೀನು ನಡೆಸಿದೆಯಾದರೆ ಇವರ ವಾರ್ಥಕವೂ, ಇವರ ಸಿದ್ಧಿಯೂ ಒಡನೆಯೇ ನೀಗುವುದು. ಈಭಕ್ತಿಗೂ ಲೋಕದಲ್ಲಿ ಸರ್ವತೋಮುಖವಾದ ಪ್ರಸಾರವುಂಟಾಗುವುದು"ಹೀಗೆಂದು ಆಲ್ಲೆದ್ದವರೆಲ್ಲರಿಗೂ ಕೇಳುವಂತೆ ಆಕಾಶವಾಣಿಯು ನುಡಿಯಿತು.ಅದನ್ನು ಕೇಳಿ ನಾರದನಿಗೂ ಆಶ್ಚರ್ಯವುಂಟಾಯಿತು. ಆದರೆ ಆಗ ನಾರದನಿಗೆ ಯಾರಿಂದ ತಾನು ಉಪದೇಶಹೊಂದಬೇಕೆಂಬ ವಿಷಯವುಮಾತ್ರ ಸ್ಪಷ್ಟವಾಗಿ ತಿಳಿಯಲಿಲ್ಲ. ಹೀಗೆ ಗೂಢವಾಗಿ ಆಕಾಶವಾಣಿಯು ಸೂಚಿಸಿದ ಮಾರ್ಗವು ತನಗೆ ಹೇಗೆ ಕೈಗೂಡುವುದೆಂದು ತಿಳಿಯದೆ ಚಿಂತಿಸುತ್ತಿದ್ದನು. ಕೊನೆಗೆ ನಾರದನು ಅವರೆಲ್ಲರನ್ನೂ ಅಲ್ಲಿಯೇ ಬಿಟ್ಟು, ಒಂದೊಂದು ಪುಣ್ಯತೀರ್ಥಗಳಿಗೂ ಹೋಗಿ, ಆ ಮಹಾತ್ಮರಾರೆಂಬುದನ್ನು ಹುಡುಕುತ್ತ ಬಂದನು. ಬಾರಿಯಲ್ಲಿ ಕಂಡಕಂಡಮಹರ್ಷಿಗಳೆಲ್ಲರನ್ನೂ ಪ್ರಶ್ನೆಮಾಡುತಿದ್ದನು.ಯಾರೂಅದರ ನಿಶ್ಚಯವನ್ನು ತಿಳಿಸಲಾರದೆಹೋದರು ಕೆಲವರು ಅಸಾಧ್ಯಕಾರ್ಯವೆಂದು ನಿರಾಕರಿಸಿದರು. ಮತ್ತೆ ಕೆಲವರು ಈ ಮಾತನ್ನು ಕೇಳಿದೊಡನೆ ಮೌನದಿಂದ ಪರಾಙ್ಮುಖರಾಗಿ ಹೋಗುತಿದ್ದರು. ಇವೆಲ್ಲವನ್ನೂ ನೋಡಿ ನಾರದನಿಗೆ ಮನಸ್ಸಿನಲ್ಲೆದ್ದ ಕಳವಳವು ಇನ್ನೂ ಹೆಚ್ಚಿತು. ಕೊನೆಗೆ ಕಠಿನವಾದ ತಪಸ್ಸಿನಿಂದಲಾದರೂ ತನ್ನ ಕಾರ್ಯವನ್ನು ಸಾಧಿಸಬೇಕೆಂದು ನಿಶ್ಚಯಿಸಿ,ನಾರದನು ಬದರಿಕಾಶ್ರಮಕ್ಕೆ ಬಂದನು.ಇಷ್ಟರಲ್ಲಿ ಕೋಟಿಸೂರ್ಯಸಮಾನವಾದ ತೇಜಸ್ಸುಳ್ಳ

ಸನಕಾದಿಮಹರ್ಷಿಗಳು ಮುಂದೆ ಬರುತ್ತಿರುವುದನ್ನು ಕಂಡನು. ಒಡನೆಯೇ ನಾರದನು ಪರಮಸಂತೋಷದಿಂದ ಅವರನ್ನು ಕುರಿತು ''ಎಲ್ಲೆಬೆಷಿಕುಮಾರರೇ! ಭಾಗ್ಯವಶದಿಂದ ನಿಮ್ಮ ದರ್ಶನವು ನನಗೆ ಲಭಿಸಿತು. ಕೃಪೆಯಿಟ್ಟು ನನ್ನ ಕೋರಿಕೆಯನ್ನು ನಡೆಸಿಕೊಡಬೇಕು. ನೀವಾದರೋ ಮಹಾಯೋಗಿಗಳು. ಅನೇಕಶಾಸ್ತ್ರಗಳನ್ನು ಕೇಳಿ ಬಲ್ಲವರು. ಯಾವಾಗಲೂ ಹರಿಕೀರ್ತನೆಯಲ್ಲಿಯೇ ನಿರತರಾಗಿ ವೈಕುಂಠದಲ್ಲಿ ವಾಸಮಾಡತಕ್ಕವರು- ಹಿರಿಯರಿಗಿಂತಲೂ ಹಿರಿಯರೆನಿಸಿಕೊಂಡರೂ ವಾರ್ಧಕಬಾಧೆಯಿಲ್ಲದೆ ಯಾವಾಗಲೂ ಐದುವರ್ಷದ ಕುಮಾರಂತೆ ಕಾಣುತ್ತಿರುವಿರಿ! ಹರಿಕೀರ್ತನೆಯೊಂದೇ ನಿಮ್ಮ ಜೀವನವು. ಹರಿಯೊಬ್ಬನೇ ರಕ್ಷಕನೆಂದು ನಂಬಿದವರು ಎಲ್ಲೆ ಮಹಾತ್ಮರೆ! ಪೂರ್ವದಲ್ಲಿ ಜಯವಿಜಯರೆಂಬ ವೈಕುಂಠದ್ವಾರಪಾಲಕರು ಕೋಪಸೂಚಕವಾದ ನಿಮ್ಮ ಭ್ರೂಭಂಗವನ್ನು ನೋಡಿದಮಾತ್ರದಿಂದಲೇ ಭೂಮಿಗೆ ಬಿದ್ದು, ಒಡನೆಯೇ ನಿಮ್ಮ ಕೃಪಾಬಲದಿಂದ ತಿರುಗಿ ಪೂರ್ವಸ್ಥಾನವನ್ನು ಸೇರಿರುವರು.ದಯಾಳುಗಳಾದ ನೀವು ನನ್ನಲ್ಲಿ ಅನುಗ್ರಹವನ್ನು ಮಾಡಿ ನನ್ನ ಕೋರಿಕೆಯನ್ನು ಈಡೇರಿಸಿ ಕೊಡಬೇಕು. ಅಶರೀರವಾಣಿಯು ಸೂಚಿಸಿದ ಉಪಾಯವನ್ನು ನಿಮ್ಮಿಂದಲೇ ನಾನು ತಿಳಿಯಬೇಕಾಗಿರುವುದು ಭಕ್ತಿ, ಜ್ಞಾನ, ವೈರಾಗ್ಯಗಳಿಗೆ ಕ್ಷೇಮವನ್ನುಂಟುಮಾಡುವುದಕ್ಕೆ ನಾನು ನಡೆಸಬೇಕಾದ ಕರ್ಮವೇನೆಂಬುದನ್ನು ನೀವೇ ನನಗೆ ಉಪದೇಶಿಸಬೇಕು"ಎಂದನು-ಅದಕ್ಕಾ ಕುಮಾರರು ನಾರದನನ್ನು ಕುರಿತು '' ಎಲ್ಲೆ ಋಷಿಸತ್ತಮನೆ ! ಚಿಂತಿಸಬೇಡ. ಇದಕ್ಕೆ ಸುಲಭಸಾಧ್ಯವಾದ ಒಂದುಪಾಯವಿರುವುದು. ಯಾವಾಗಲೂ ಹರಧ್ಯಾನನಿರತನಾಗಿ ವಿರಕ್ತರಿಗೆ ತಿರೋಧಾತ್ಮಪ್ರಾಯನಾಗಿರುವ ನಿನ್ನಂತೆ ಲೋಕದಲ್ಲಿ ಧನ್ಯನಾರುಂಟು?ಲೋಕದಲ್ಲಿ ವಿಷ್ಣುಭಕ್ತಿಯನ್ನು ನೆಲೆಗೊಳಿಸುವುದಕ್ಕೆ ನೀನಲ್ಲದೆ ಬೇರೆ ಯಾರು ಸಮರ್ಥರು?ಪುರಾತನ ಮಹರ್ಷಿಗಳು ಪುಣ್ಯಸಂಪಾದನೆಗಾಗಿ ಎಷ್ಟೆಷ್ಟೋ ಮಾರ್ಗಗಳನ್ನು ಹೇಳಿರುವರು. ಅವೆಲ್ಲವೂ ಕೇವಲಶ್ರಮಸಾಧ್ಯಗಳು! ಶ್ರಮಪಟ್ಟು ಆ ಕರ್ಮಗಳನ್ನು ನಡೆಸಿದರೂ ಅವು ಅಶಾಶ್ವತಗಳಾದ ಸ್ವರ್ಗಾದಿಫಲಗಳನ್ನುಮಾತ್ರವೇ ಕೊಡತಕ್ಕುವು. ಎಲ್ಲೆ ತಾಪಸೋತ್ತಮನೆ! ಮೋಕ್ಷಸಾಧಕವಾದ ಮಾರ್ಗವೇಬೇ

ರೆ! ಅದು ಕೇವಲಗೋಪ್ಯವಾಗಿರುವುದು. ಅದನ್ನು ಪದೇತಿಸತಕ್ಕ ಮಹಾವು ರುಷನೂಕೂಡ ಭಾಗ್ಯದಿಂದಲ್ಲದೆ ಲಭಿಸಲಾರನು. ಮೊದಲು ಆಕಾಶವಾಣಿ ಯು ನಿನಗೆ ಯಾವ ಸತ್ಕರ್ಮವನ್ನು ಸಾಧಿಸಬೇಕೆಂದು ಸೂಚಿಸಿತೋ ಅದ ನ್ನು ಈಗ ನಾವುವ್ಯಕ್ತವಾಗಿ ತಿಳಿಸುವೆವು ಕೇಳು. ಲೋಕದಲ್ಲಿ ದ್ರವ್ಯಯಜ್ಞ ಗಳೆಂದೂ, ತಪೋಯಜ್ಞಗಳೆಂದೂ, ಯೋಗಯಜ್ಞಗಳೆಂದೂ, ವೇದಾಧ್ಯ ಯನಗಳೆಂದೂ ಅನೇಕಸತ್ಕರ್ಮಗಳುಂಟು. ಇವೆಲ್ಲಕ್ಕಿಂಕಲೂ ಜ್ಞಾನಯ ಜ್ಞವೆಂಬುದೇ ಸರ್ವೊತ್ತಮವು- ಪೂರ್ವದಲ್ಲಿ ಶುಕಾದಿಮಹರ್ಷಿಗಳಿಂದ ಹೇಳ ಲ್ಪಟ್ಟ ಭಾಗವತಕಥಾಪ್ರಸಂಗವೇ ಈ ಜ್ಞಾನಯಜ್ಞಗಳಲ್ಲಿ ಅತ್ಯುತ್ತಮವೆ ನಿಸಿಕೊಳ್ಳುವುದು.ಅದರಿಂದ ಭಕ್ತಿಜ್ಞಾನವೈರಾಗ್ಯಗಳಿಗೂಪೂರ್ಣವಾದಬಲ ವುಂಟಾಗುವುದು ಈ ಭಾಗವತಪ್ರಸಂಗವನ್ನು ಕೇಳಿದೊಡನೆ ಸಿಂಹಗರ್ಜನೆ ಯನ್ನು ಕೇಳಿದ ನರಿಗಳಂತೆ ಈಗಿನ ಕಲಿದೋಷಗಳೆಲ್ಲವೂ ಓಡಿಹೋಗುವುವು. ಈಕಥಾಪ್ರಸಂಗವೆಂಬ ಜ್ಞಾನಯಜ್ಞವನ್ನು ಸಾಧಿಸಿದೊಡನೆಪ್ರತಿಯೊಂದು ಮನೆಯಲ್ಲಿಯೂ,ಪ್ರತಿಯೊಬ್ಬ ಮನುಷ್ಯನಲ್ಲಿಯೂ ಭಕ್ತಿಯೆಂಬುದು ನಲಿದಾ ಡುತ್ತಿರುವುದು."ಎಂದರು.ಇದನ್ನು ಕೇಳಿ ನಾರದನು ತಿರುಗಿ ಋಷಿಕುಮಾರ ರನ್ನು ಕುರಿತು ,,ಎಲೈಮಹಾತ್ಮರೆ ! ನಾನು ಹಿಂದೆ ಎಷ್ಟೆಷ್ಟೋವಿಧದಿಂದ ವೇದವೇದಾಂತಗಳನ್ನೂ, ಗೀತಾವಾಕ್ಯಗಳನ್ನೂ ಉಪದೇತಿಸಿ, ಆ ಜ್ಞಾನವೈ ರಾಗ್ಯಗಳನ್ನು ಎಚ್ಚರಿಸುವುದಕ್ಕೆ ಪ್ರಯತ್ನಿಸಿದೆನು. ಆ ನನ್ನ ಪ್ರಯತ್ನ ವೊಂ ದೂ ಕೈಗೂಡಲಿಲ್ಲ ಹೀಗಿರುವಾಗ ಈ ಭಾಗವತಕಥಾಪ್ರಸಂಗದಿಂದಮಾ ತ್ರ ಅವರಿಗೆ ಪ್ರಜ್ಞೆಯುಂಟಾಗುವುದು ಹೇಗೆ? ಆ ಭಾಗವತಕಥೆಯಲ್ಲಿಯಾದ ರೂ ಪ್ರತಿಶ್ಲೋಕದಲ್ಲಿಯೂ, ಪ್ರತಿಪದದಲ್ಲಿಯೂ ವೇದಾರ್ಥಗಳಲ್ಲದೆ ಬೇರೆ ಯೆಲ್ಲ ! ಹೀಗಿರುವಾಗ ವೇದಾಂತಗಳಿಗಿಂತಲೂ ಗೀತಾವಾಕ್ಯಗಳಿಗಿಂತಲೂ ಭಾಗವತಕಥೆಯಲ್ಲಿರುವವಿಶೇಷವೇನೆಂದು ನನಗೆ ಸಂದೇಹವುಹುಟ್ಟಿರುವುದು. ಈ ಸಂದೇಹವನ್ನು ಪರಿಹರಿಸಬೇಕು"ಎಂದನು. ಆದಕ್ಕಾ ಋಷಿಕುಮಾರರು ,,ಎಲೈ ಮಹರ್ಷಿಯೇ! ಕೇಳು! ವೇದೋಪನಿಷತ್ತುಗಳ ಮುಖ್ಯಸಾರವೇ ಈ ಭಾಗವತಕಥಾರೂಪವಾಗಿ ಹುಟ್ಟಿರುವುದು. ಅದರಿಂದಲೇ ಈ ಕಥೆಯು ಅವಕ್ಕಿಂತಲೂ ಅತ್ಯುತ್ತಮವೆನಿಸಿಕೊಂಡಿರುವುದು. ಇದರಿಂದುಂಟಾಗತಕ್ಕ

ಫಲವೂ ನಿರತಿಶಯವಾಗಿರುವುದು. ಹಾಲಿನಲ್ಲಿರುವ ಬೆಣ್ಣೆಯನ್ನೂ, ಕಬ್ಬಿನಲ್ಲಿರುವ ಸಕ್ಕರೆಯನ್ನೂ ಪ್ರತ್ಯೇಕಿಸಿ ತೆಗೆದಮೇಲೆ, ಅವುಗಳ ರುಚಿಯೇ ಬೇರೆಯಾಗಿರುವಂತೆ, ವೇದವೇದಾಂತಗಳಿಂದ ಪ್ರತ್ಯೇಕಿಸಿ ತೆಗೆದ ಈ ಭಾಗವತಕಥಾಮೃತವು ಅವಕ್ಕಿಂತಲೂ ವಿಶೇಷಫಲಪ್ರದವೆಂಬುದನ್ನು ಹೇಳತಕ್ಕುದೇನು ? ಮಹಾಮಂತ್ರಸ್ವರೂಪವಾದ ಈ ಭಾಗವತವೆಂಬ ಪುರಾಣವು ಈ ಲೋಕದಲ್ಲಿ ಭಕ್ತಿಜ್ಞಾನವೈರಾಗ್ಯಗಳನ್ನು ನೆಲೆಗೊಳಿಸುವುದಕ್ಕಾಗಿಯೇ ಪ್ರಚಾರಪಡಿಸಲ್ಪಟ್ಟಿರುವುದು. ಎಲೈ ಋಷಿಶ್ರೇಷ್ಠನೆ ! ಇದೂ ಹಾಗಿರಲಿ ! ಪೂರ್ವದಲ್ಲಿ ವ್ಯಾಸಮುನಿಯು, ಲೋಕೋಜ್ಜೀವನಾರ್ಥವಾಗಿ ವೇದವೇದಾಂತಾರ್ಥಗಳನ್ನೂ, ಗೀತೆಯನ್ನೂ ಪ್ರಚಾರಗೊಳಿಸಿದಮೇಲೆಯೂಕೂಡ, ಮನಸ್ಸಿಗೆ ನೆಮ್ಮದಿಯಿಲ್ಲದೆ ಚಿಂತಾಕುಲನಾಗಿರುವುದನ್ನು ನೋಡಿ,ನೀನೇ ಆತನಿಗೆ ಜಗತ್ಪೂಜ್ಯಲೋಕರೂಪವಾಗಿ ಭಾಗವತವನ್ನುಪದೇಶಿಸಿದೆಯಲ್ಲವೆ? ಅದನ್ನು ಕೇಳಿದೊಡನೆ ಆತನು ನಿಶ್ಚಿಂತನಾದನಲ್ಲವೆ? ಹೀಗಿರುವಾಗ ನೀನೇ ಹೀಗೆ ಆಶ್ಚರ್ಯದಿಂದ ಪ್ರಶ್ನೆಮಾಡುವುದೆಂದರೇನು ? ಈ ವಿಷಯದಲ್ಲಿ ನಿನ್ನ ಸಂದೇಹಕ್ಕೆ ಕಾರಣವೇನಿರುವುದು ? ಇದರಿಂದ ಎಂತಹ ವಿಪತ್ತಾದರೂ,ದುಃಖವಾದರೂ ನೀಗಿ ಹೋಗುವುದರಲ್ಲಿ ಸಂದೇಹವಿಲ್ಲ" ಎಂದರು.

ಈ ವಾಕ್ಯವನ್ನು ಕೇಳಿ ನಾರದನಿಗೆ ಮಹತ್ತಾದ ಸಂತೋಷವುಂಟಾಯಿತು. ಭಕ್ತಿಜ್ಞಾನವೈರಾಗ್ಯಗಳನ್ನು ದೃಢಪಡಿಸುವುದಕ್ಕಾಗಿ ಭಾಗವತಕಥಾಶ್ರವಣವೆಂಬ ಜ್ಞಾನಯಜ್ಞವನ್ನೇ ತಾನೂ ಸಾಧಿಸಬೇಕೆಂದು ನಿಶ್ಚಯಿಸಿಕೊಂಡನು. ಈ ಯಜ್ಞವನ್ನು ಸಾಧಿಸುವುದಕ್ಕೆ ಉತ್ತಮವಾದ ಸ್ಥಳವಾವುದೆಂದು ಆತನ ಮನಸ್ಸಿನಲ್ಲಿ ತಿರುಗಿ ಮತ್ತೊಂದು ಚಿಂತೆಯು ಹುಟ್ಟಿತು. ಈ ಸಂದೇಹಪರಿಹಾರಕ್ಕಾಗಿ ನಾರದನು ತಿರುಗಿ ಆ ಋಷಿಕುಮಾರರನ್ನು ಕುರಿತು ,,ಎಲೈಮಹಾತ್ಮರೆ ! ಈ ಯಜ್ಞವನ್ನು ನಡೆಸುವುದಕ್ಕೆ ತಕ್ಕ ಸ್ಥಳವಾವುದು? ಈ ಪುಣ್ಯಕಥೆಗಳನ್ನು ಎಷ್ಟುದಿನಗಳವರೆಗೆ ಕೇಳುತ್ತಿರಬೇಕು? ಈ ಕಥಾಶ್ರವಣಕಾಲದಲ್ಲಿ ಅನುಸರಿಸಬೇಕಾದವಿಧಿನಿಯಮಗಳೇನು?"ಎಂದನು.ಅದಕ್ಕಾ ಋಷಿಕುಮಾರರು,,ನಾರದಾ! ಕೇಳು! ಗಂಗಾದ್ವಾರದ ಸಮೀಪದಲ್ಲಿ ಆನಂದವೆಂಬ

ಒಂದು ಘಟ್ಟವಿರುವುದು. ಅದು ಅನೇಕಋಷಿಗಳಿಂದಲೂ, ದೇವಗಂಧರ್ವಾದಿ
ಗಳಿಂದಲೂ ಸೇವಿತವಾಗಿ, ಏಕಾಂತವಾಗಿಯೂ, ಅತಿಪವಿತ್ರವಾಗಿಯೂ
ಮನೋಹರವಾಗಿಯೂ ಇರುವುದು. ನೀನು ಈ ಜ್ಞಾನಯಜ್ಞವನ್ನು ನಡೆಸ
ವುದಕ್ಕೆ ಅದೇ ಸರ್ವೋತ್ತಮವಾದ ಸ್ಥಳವು. ಅಲ್ಲಿ ಶ್ರವಣಮಾಡುವುದರಿಂದ
ಆ ಕಥೆಗೂ ಅಪೂರ್ವವಾದ ಒಂದು ರುಚಿಯುಂಟಾಗುವುದು.ಭಾಗವತಕಥಾ
ಪ್ರಸಂಗವು ಎಲ್ಲಿ ನಡೆಯುವುದೋ, ಅಲ್ಲಿಗೆ ಭಕ್ತಿಯು ತಪ್ಪದೆ ಬಂದು ಸೇರು
ವಳು. ಅಲ್ಲಿ ನೀನು ಕಥಾರಂಭವನ್ನು ಮಾಡಿಕೊಡನೆ, ಭಕ್ತಿಯು ಜೀರ್ಣದೇ
ಹವುಳ್ಳ ತನ್ನ ಮಕ್ಕಳೊಡನೆ ತಾನಾಗಿಯೇ ಬಂದು ಸೇರುವುದರಲ್ಲಿ ಸಂದೇ
ಹವಿಲ್ಲ. ಅಲ್ಲಿಗೆ ಬಂದು ಸೇರಿದಾಗ ಆ ಮೂವರಿಗೂ ಹೊಸಯೌವನವುಂಟಾ
ಗುವುದು" ಎಂದರು.

ಈ ಮಾತನ್ನು ಕೇಳಿ, ಆ ಋಷಿಕುಮಾರರೂ ನಾರದಸೊಡಗೂಡಿ
ಗಂಗಾತೀರಕ್ಕೆ ಬಂದು ಸೇರಿದರು. ಅವರೆಲ್ಲರೂ ಅಲ್ಲಿಗೆ ಬಂದ ವೃತ್ತಾಂತವು
ಸಮಸ್ತಲೋಕಗಳಿಗೂ ವ್ಯಾಪಿಸಿತು ಭಾಗವತಕಥಾಮೃತವನ್ನು ಪಾನ
ಮಾಡಬೇಕೆಂಬ ಆತುರದಿಂದ ಅನೇಕವೈಷ್ಣವರೂ, ಮಹರ್ಷಿಗಳೂ, ವೇ
ದಾಂತಿಗಳೂ, ಮಂತ್ರದೇವತೆಗಳೂ, ಷಟ್ಶಾಸ್ತ್ರಗಳೂ, ಇತರ ಪುರಾಣಗಳೂ
ಸಮಸ್ತಪುಣ್ಯತೀರ್ಥಗಳೂ ಆತುರದಿಂದ ಬಂದುಸೇರಿದುವು. ಆಗ ನಾರದನು
ಆ ಋಷಿಕುಮಾರರಿಗೆ ಉತ್ತಮವಾದ ಆಸನಗಳನ್ನು ಕೊಟ್ಟು, ಅವರನ್ನು
ಕುಳ್ಳಿರಿಸಿದಮೇಲೆ, ಅಲ್ಲಿ ನೆರೆದಿದ್ದವರೆಲ್ಲರೂ ಕ್ರಮವಾಗಿ ಆ ಋಷಿಕುಮಾ
ರರಿಗೆ ವಂದಿಸಿ,ಭಾಗವತಕಥಾಮೃತವನ್ನು ಕೇಳಬೇಕೆಂಬ ಉತ್ಸಾಹದಿಂದ ಕೆಲ
ವರು ಜಯಶಬ್ದಗಳನ್ನೂ,ಕೆಲವರು ನಮಶ್ಶಬ್ದಗಳನ್ನೂ ಹೇಳುತಿದ್ದರು.ಶಂಖ,
ಭೇರಿ,ಮೊದಲಾದ ಮಂಗಳವಾದ್ಯಗಳೆಲ್ಲವೂ ನುಡಿಸಲ್ಪಡುತಿದ್ದುವು. ನಾನಾ
ಕಡೆಗಳಿಂದ ಪುಷ್ಪಾಂಜಲಿಗಳು ಎರಚಲ್ಪಡುತಿದ್ದುವು. ದೇವತೆಗಳು ಅಂತ
ರಿಕ್ಷದಲ್ಲಿ ವಿಮಾನವನ್ನೇರಿಬಂದು,ಕಲ್ಪವೃಕ್ಷದಹೂಗಳನ್ನು ವರ್ಷಿಸುತಿದ್ದರು.
ಹೀಗೆ ಎಲ್ಲರೂ ತಮ್ಮತಮ್ಮ ಉತ್ಸಾಹಗಳನ್ನು ತೋರಿಸಿ,ಏಕಾಗ್ರಚಿತ್ತರಾ
ಕುಳಿತಮೇಲೆ, ಋಷಿಕುಮಾರರು ನಾರದನಿಗೆ ಭಾಗವತಮಹಿಮೆಯನ್ನು ತಿ
ಸುವುದಕ್ಕೆ ತೊಡಗಿದರು. ,, ಭಕ್ತಾಗ್ರಣೀ! ಕೇಳು! ಮೊದಲು ಶುಕಶಾಸ್ತ್ರ

ರೂಪವಾದ ಆ ಭಾಗವತದ ಮಹಿಮೆಯನ್ನು ಹೇಳುವೆವು. ಭಾಗವತದ ಕಥೆಯನ್ನು ಕಿವಿಯಿಂದ ಕೇಳಿದಮಾತ್ರದಿಂದಲೇ ಮುಕ್ತಿಯು ಕರಗತವಾಗುವುದು. ಶ್ರೀಮಹಾವಿಷ್ಣುವ್ಯಾವಾಗಲೂ ಅಂತವರ ಮನಸ್ಸಿನಲ್ಲಿ ನೆಲೆಗೊಳ್ಳುವನು. ಭಾಗವತವೆಂಬುದು ಹದಿನೆಂಟುಸಹಸ್ರಗ್ರಂಥಗಳುಳ್ಳದಾಗಿ, ಹನ್ನೆರಡುಸ್ಕಂಧಗಳಾಗಿ ವಿಭಾಗಿಸಲ್ಪಟ್ಟು, ಪರೀಕ್ಷಿದ್ರಾಜನಿಗೂ, ಶುಕಮಹರ್ಷಿಗೂ ನಡೆದ ಸಂವಾದರೂಪವಾಗಿರುವುದು. ಭಾಗವತಕಥೆಯು ಕಿವಿಯಲ್ಲಿ ಬೀಳುವವರೆಗೆಮಾತ್ರವೇ ಮನುಷ್ಯನು ಅಜ್ಞಾನವಶನಾಗಿ ಸಂಸಾರದಲ್ಲಿ ನರಳುತ್ತಿರುವನು. ಅನೇಕಶಾಸ್ತ್ರಗಳನ್ನು ಕೇಳಿದರೂ, ಪರಸ್ಪರವಿರೋಧದಿಂದ ಕೇವಲ ಭ್ರಾಂತಿಜನಕಗಳಾದ ಪುರಾಣಗಳನ್ನು ಕೇಳಿದರೂ, ಅಷ್ಟೊಂದು ಫಲವು ಲಭಿಸಲಾರದು. ಮೋಕ್ಷಪ್ರಾಪ್ತಿಗೆ ಈ ಭಾಗವತಕಥೆಯೊಂದೇ ಮುಖ್ಯಕಾರಣವು. ಸಾವಿರಾರು ಅಶ್ವಮೇಧಗಳನ್ನು ನಡೆಸಿದರೂ, ನೂರಾರು ವಾಜಪೇಯಗಳನ್ನು ನಡೆಸಿದರೂ, ಈ ಪುಣ್ಯಕಥೆಯ ಕಲಾಮಾತ್ರಕ್ಕೂ ಎಣೆಯಾಗಲಾರದು. ಗಂಗೆ, ಕಾಶಿ, ಪುಷ್ಕರ, ಪ್ರಯಾಗೆ, ಮುಂತಾದ ಅನೇಕ ಪುಣ್ಯತೀರ್ಥಗಳನ್ನು ಸುತ್ತಿಬಂದರೂ ಈ ಕಥಾಶ್ರವಣದಿಂದುಂಟಾಗುವ ಫಲಕ್ಕೆ ಸಮನಾಗಲಾರದು. ನಾರದಾ! ನೀನು ಉತ್ತಮಗತಿಯನ್ನು ಪೇಕ್ಷಿಸುವವನಾದರೆ, ಅದರಲ್ಲಿ ಅರ್ಧಶ್ಲೋಕವನ್ನಾಗಲಿ, ಒಂದು ಶ್ಲೋಕಪಾದವನ್ನಾಗಲಿ ನಿನ್ನ ಬಾಯಿಂದುಚ್ಚರಿಸಿದರೆ ಸಾಕು ! ವೇದಗಳಾಗಲಿ, ಪುರುಷಸೂಕ್ತವಾಗಲಿ, ದ್ವಾದಶಾಕ್ಷರಮಂತ್ರವಾಗಲಿ, ಶ್ರೀಮಹಾವಿಷ್ಣುವಾಗಲಿ, ಈ ಭಾಗವತಕಥೆಗಿಂತ ಬೇರೆಯಾದುದಲ್ಲ. ಈ ಭಾಗವತಕಥೆಯನ್ನು ಅರ್ಥಜ್ಞಾನಪೂರ್ವಕವಾಗಿ ಯಾವನು ಓದುವನೋ, ಅವನಿಗೆ ಕೋಟಿ ಜನ್ಮಗಳಿಂದ ಸಂಚಿತವಾದ ಪಾಪವೂಕೂಡ ನಿವೃತ್ತವಾಗುವುದರಲ್ಲಿ ಸಂದೇಹವಿಲ್ಲ. ಈ ಪುಣ್ಯಕಥೆಯಲ್ಲಿ ಒಂದು ವಾಕ್ಯವನ್ನು ಪಠಿಸಿದರೂಕೂಡ ಅನೇಕರಾಜಸೂಯಾಶ್ವಮೇಧಗಳ ಫಲವುಂಟಾಗುವುದು. ಅತ್ಯಂಕಾಲದಲ್ಲಿ ಈ ಕಥಾಶ್ರವಣವನ್ನು ಮಾಡಿದವರಿಗೆ ಶ್ರೀಮನ್ನಾರಾಯಣನು ತಾನಾಗಿಯೇ ಮುಕ್ತಿಯನ್ನು ಕೈಗೂಡಿಸುವನು. ಈ ಕಥೆಯನ್ನು ಒಂದಾವರ್ತಿಯಾದರೂ ಕಿವಿಯಿಂದ ಕೇಳದವನ ಜನ್ಮವೇ ಕೇವಲನಿರರ್ಥಕವು. ಈ ಭಾಗವತ

ಕಥೆಯನ್ನು ಕೇಳತಕ್ಕ ಭಾಗ್ಯವೂಕೂಡ ಪೂರ್ವಾರ್ಜಿತವಾದ ಪುಣ್ಯದಿಂದಲ್ಲದೆ ಲಭಿಸಲಾರದು. ಆದುದರಿಂದ ಎಲೈ ಋಷಿಶ್ರೇಷ್ಠನೆ! ನೀನು ಈ ಕಥೆಯನ್ನು ಬಹಳಶ್ರದ್ಧೆಯಿಂದ ಕೇಳಬೇಕು. ಇದಕ್ಕೆ ದಿನನಿಯಮಗಳೇನೂ ಇಲ್ಲ. ಅನವರತವೂ ಈ ಕಥೆಯನ್ನು ಕೇಳುತ್ತಿರಬಹುದು. ಸತ್ಯವ್ರತದಿಂದಲೂ, ಬ್ರಹ್ಮಚರ್ಯೆಯಿಂದಲೂ ಬಹಳ ನಿಷ್ಠನಾಗಿ,ಇದನ್ನು ಅನವರತವೂ ಶ್ರವಣಮಾಡುತ್ತಿರಬೇಕು. ಆದರೆ ಈ ಕಲಿಕಾಲದಲ್ಲಿ ಅಷ್ಟೊಂದು ದೃಢವ್ರತವನ್ನು ನಡೆಸುವುದು ಸಾಧ್ಯವಿಲ್ಲದುದರಿಂದಲೂ, ಅಷ್ಟು ದೀರ್ಘಕಾಲದವರೆಗೆ ದೀಕ್ಷೆಯನ್ನು ವಹಿಸಿ, ಮನಸ್ಸನ್ನು ತಡೆದು ನಿಯಮದಲ್ಲಿರುವುದೂ ಕಷ್ಟವಾದುದರಿಂದಲೂ,ಇದಕ್ಕೆ ಸಪ್ತಾಹಶ್ರವಣವೆಂಬ ಸುಲಭೋಪಾಯವೊಂದು ಆಶುಕ ಮಹರ್ಷಿಯ ಅಜ್ಞೆಯಿಂದಲೇ ಏರ್ಪಟ್ಟಿರುವುದು. ಶ್ರಾವಣಮಾಘಮಾಸಗಳಲ್ಲಿ ಶ್ರದ್ಧೆಯಿಂದ ಕೇಳುವವರಿಗೆ ಯಾವಫಲವುಂಟೋ ಆ ಫಲವು ಸಪ್ತಾಹಶ್ರವಣದಿಂದಲೇ ಲಭಿಸುವುದು. ಈ ಕಲಿಕಾಲವೆಂಬುದು ಕೇವಲದೋಷಪ್ರಚುರವಾದುದರಿಂದಲೂ, ಈ ಕಾಲದಲ್ಲಿ ಮನಸ್ಸನ್ನು ತಡೆಯಿಡುವುದು ಅಸಾಧ್ಯವಾದುದರಿಂದಲೂ,ಮನುಷ್ಯನ ಆಯುಃಪರಿಮಾಣವೂ ಈಗಬಹಳಸ್ವಲ್ಪವಾಗಿರುವುದರಿಂದಲೂ,ರೋಗಬಾಧೆಯು ಹೆಚ್ಚಿರುವುದರಿಂದಲೂ,ಈ ಕಾಲಕ್ಕೆ ಸಪ್ತಾಹಶ್ರವಣವೆಂಬ ಸುಲಭೋಪಾಯವು ಏರ್ಪಟ್ಟಿರುವುದು. ತಪಸ್ಸು,ಯೋಗ,ಸಮಾಧಿ,ಮುಂತಾದುವುಗಳಿಂದ ಶ್ರಮಪಟ್ಟು ಸಾಧಿಸಬೇಕಾದ ಫಲಗಳೆಲ್ಲವೂ ಅನಾಯಾಸದಿಂದಲೇ ಈ ಸಪ್ತಾಹಶ್ರವಣದಿಂದ ಲಭಿಸುವುವು."ಎಂದು ಸನಕಾದಿಋಷಿಕುಮಾರರು ನಾರದನಿಗೆ ಭಾಗವತಕಥಾಮಾಹಾತ್ಮ್ಯವನ್ನು ವಿವರಿಸಿ ಹೇಳಿದರು " ಎಂದು ಸೂತಪೌರಾಣಿಕನು ಹೇಳಿದುದನ್ನು ಕೇಳಿ, ಶೌನಕಮಹಾಮುನಿಯು ತಿರುಗಿ ,,ಎಲೈ ಸೂತನೆ! ಈ ಭಾಗವತಕ್ಕೆ ಅಷ್ಟೊಂದು' ಮಹಾಮಹಿಮೆಯುಂಟಾಗುವುದಕ್ಕೆ ಕಾರಣವೇನು ?" ಎಂದು ಕೇಳಿದನು. ಅದಕ್ಕಾ ಸೂತನು. ,,ಶೌನಕಾ ! ಕೇಳು ! ಹಿಂದೆ ಶ್ರೀಕೃಷ್ಣನು, ತನ್ನ ಅವತಾರಪ್ರಯೋಜನವನ್ನು ಮುಗಿಸಿಕೊಂಡು, ತನ್ನ ನಿಜಸ್ಥಾನವಾದ ವೈಕುಂಠಕ್ಕೆ ಹೊರಡುವುದಕ್ಕೆ ಸಿದ್ಧನಾಗಿದ್ದಾಗ, ಪರಮಭಕ್ತನಾದ ಉದ್ಧವನು, ಆತನನ್ನು ಕುರಿತು ಪ್ರಾರ್ಥಿಸುವನು. ,,ಎಲೈ ಪರಮಾ

ತ್ಮನೆ! ಈಗ ಲೋಕದಲ್ಲಿ ಭಯಂಕರನಾದ ಕಲಿಯು ತಲೆದೋರಿರುವುದು. ನರೆಲ್ಲರೂ ಕ್ರೂರಸ್ವಭಾವವನ್ನವಲಂಬಿಸುತ್ತಿರುವರು. ದುಷ್ಟರ ಸಹವಾಸದಿಂದ ಸತ್ಪುರುಷರ ಸ್ವಭಾವವೂ ಕೆಡುತ್ತಿರುವುದು. ಹೀಗೆ ಬಲಭಾರದಿಂದ ಕುಗ್ಗುತ್ತಿರುವ ಈ ಭೂಮಿಗೆ ಇನ್ನು ರಕ್ಷಕರಾರು?ಗೋರೂಪಿಣಿಯಾದ ಈ ಭೂದೇವಿಯು ಇನ್ನುಮೇಲೆ ಯಾರನ್ನಾಶ್ರಯಿಸಬೇಕು? ದೇವಾ ! ನೀನು ಹೊರತು ಇವಳ ಕಷ್ಟವನ್ನು ನೀಗಿಸುವುದಕ್ಕೆ ಬೇರೆ ಯಾರೂ ಸಮರ್ಥರೆಂದು ನನಗೆ ತೋರಲಿಲ್ಲ. ಆದುದರಿಂದ ಭಕ್ತವತ್ಸಲನಾದ ನೀನು ಸಜ್ಜನರನ್ನುದ್ಧರಿಸುವುದಕ್ಕಾಗಿ,ಈ ಲೋಕದಲ್ಲೆಯೇ ಸ್ಥಿರವಾಗಿ ನಿಂತಿರಬೇಕು. ನೀನು ಅಪ್ರಾಕೃತನಾಗಿದ್ದರೂ ಭಕ್ತೋದ್ಧರಣಾರ್ಥವಾಗಿಯೇ ಹೀಗೆ ಪ್ರಾಕೃತದೇಹವನ್ನು ಹೊಂದಿ ಬಂದವನಲ್ಲವೆ? ಈಗ ನೀನು ಈ ಲೋಕವನ್ನು ಬಿಟ್ಟುಹೋದರೆ, ನಿನ್ನ ಭಕ್ತರೆಲ್ಲರೂ ನಿನ್ನನ್ನಗಲಿ ಇಲ್ಲಿರುವುದು ಹೇಗೆ? ಆದುದರಿಂದ ನೀನು ಇಲ್ಲಿಯೇ ನಿಲ್ಲಬಾರದೆ?" ಎಂದು ಪ್ರಾರ್ಥಿಸಿದನು.

ಉದ್ಧವನ ಈ ಮಾತನ್ನು ಕೇಳಿ ಶ್ರೀಕೃಷ್ಣನು, ತನ್ನ ಭಕ್ತೋದ್ಧಾರಾರ್ಥವಾಗಿ ತಾನು ಮುಂದೆ ಮಾಡಬೇಕಾದುದೇನೆಂದು ತನ್ನಲ್ಲಿಯೇ ಆಲೋಚಿಸಿ, ಕೊನೆಗೆ ತನ್ನ ಚರಿತ್ರರೂಪವಾದ ಶ್ರೀಭಾಗವತವನ್ನು ತನಗೆ ಪ್ರತಿನಿಧಿಯನ್ನಾಗಿ ಮಾಡಿ, ಆದರಲ್ಲಿ ತನ್ನ ತೇಜಸ್ಸನ್ನು ನೆಲೆಗೊಳಿಸಿದನು. ಆದುದರಿಂದ ಈ ಭಾಗವತಕಥೆಯೆಂಬುದು ಸಾಕ್ಷಾತ್ಪರಮಾತ್ಮನ ವಾಙ್ಮಯವಾದ ಶರೀರದಂತೆ, ಲೋಕದಲ್ಲಿ ಬೆಳಗುತ್ತಿರುವುದು. ಶ್ರವಣಪಠನಾದಿಗಳಿಂದ ಸಮಸ್ತವಿಧದಲ್ಲಿಯೂ ಇದು ಪಾಪನಿನಾಶಕವಾಗಿರುವುದು. ಅದರಲ್ಲಿಯೂ ಸಪ್ತಾಹಶ್ರವಣವೆಂಬುದು ಎಲ್ಲಕ್ಕಿಂತಲೂ ಉತ್ತಮವಾದ ಧರ್ಮವು. ಕಲಿಕಾಲದಲ್ಲಿ ಬೇರೆ ಧರ್ಮಗಳೆಲ್ಲಕ್ಕೂ ಪ್ರತಿನಿಧಿಯಾಗಿ ನೀ ಈ ಧರ್ಮವೊಂದು ಏರ್ಪಟ್ಟಿರುವುದು. ದುಃಖಭಾರಿದಾರ್ಢ್ಯಾದಿಕಷ್ಟಗಳನ್ನು ನೀಗಿಸುವುದಕ್ಕೂ, ಪಾಪನಿವಾರಣೆಗೂ, ಕಾಮಕ್ರೋಧಾದಿಗಳನ್ನು ಜಯಿಸುವುದಕ್ಕೂ, ಈ ಕಲಿಕಾಲದಲ್ಲಿ ಇದೊಂದೇ ಸಾಧನವು. ಈ ಭೂಲೋಕದಲ್ಲಿ ಕಲಿಯೆಂಬ ವೈಷ್ಣವಮಾಯೆಯನ್ನು ತಪ್ಪಿಸಿಕೊಳ್ಳಬೇಕೆಂದರೆ ದೇವತೆಗಳಿಗೂ ಸಾಧ್ಯವಲ್ಲ. ಇನ್ನು ಮನುಷ್ಯರ ಪಾಡೇನು? ಇದರ ಪರಿಹಾರಕ್ಕಾಗಿಯೇ ಸಪ್ತಾಹಶ್ರವಣವೆಂಬ ವಿಧಿಯು ಏರ್ಪಟ್ಟಿರುವುದು"ಎಂದರು.

ಹೀಗೆ ಸನಕಾದಿಮುನಿಗಳು ನಾರದನಿಗೆ ಭಾಗವತಮಹಿಮೆಯನ್ನು ತಿಳಿಸುತ್ತಿರುವಾಗ, ಆ ಸಭಾಮಧ್ಯದಲ್ಲಿ ಎಲ್ಲರಿಗೂ ಆಶ್ಚರ್ಯವುಂಟಾಗುವಂತೆ ಒಂದು ವೈಚಿತ್ರ್ಯವು ನಡೆಯಿತು. ಭಕ್ತಿಯು ಕೇವಲತರುಣವಯಸ್ಸುಳ್ಳ ತನ್ನ ಇಬ್ಬರು ಮಕ್ಕಳನ್ನೂ ಕರೆದುಕೊಂಡು, ಪರಮಸಂತೋಷಭರಿತಳಾಗಿ, ಗೋವಿಂದನಾಮೋಚ್ಚಾರಣವನ್ನು ಮಾಡುತ್ತ ಸಭಾಮಧ್ಯದಲ್ಲಿ ಬಂದು ನಿಂತಳು. ಎಲ್ಲರೂ ಆ ಮೂವರ ರೂಪಯೌವನಾದಿಗಳನ್ನು ನೋಡಿ ಆಶ್ಚರ್ಯಭರಿತರಾದರು. ಅಷ್ಟೊಂದು ಜೀರ್ಣದಶೆಯಲ್ಲಿದ್ದ ಭಕ್ತಿಜ್ಞಾನವೈರಾಗ್ಯಗಳಿಗೆ ಹೀಗೆ ಯೌವನೋದಯವುಂಟಾಗುವುದಕ್ಕೆ ಕಾರಣವೇನೆಂದು ಮನಸ್ಸಿನಲ್ಲಿ ಚಿಂತಿಸುತ್ತಿದ್ದರು. ಆಗ ಋಷಿಕುಮಾರರು ''ಭಾಗವತ ಕಥಾಮಹಿಮೆಯೇ ಇದಕ್ಕೆ ಕಾರಣ" ವೆಂದು ಹೇಳಿ, ಅವರೆಲ್ಲರಿಗೂ ಸಂದೇಹನಿವೃತ್ತಿಯನ್ನುಂಟುಮಾಡಿದರು. ಆಮೇಲೆ ಭಕ್ತಿಯು ಋಷಿಕುಮಾರರಿಗೆ ನಮಸ್ಕರಿಸಿ ''ಎಲೈ ಮಹಾತ್ಮರೆ! ಕಲಿದೋಷದಿಂದ ಜೀರ್ಣಳಾದ ನಾನು,ನಿಮ್ಮ ಅನುಗ್ರಹಬಲದಿಂದ ತಿರುಗಿ ಈ ವಿಧನಾದ ದೇಹಪುಷ್ಟಿಯನ್ನು ಹೊಂದಿದೆನು. ಇನ್ನು ಮುಂದೆ ನನಗೆ ಸುಖನಾದ ನಿವಾಸಸ್ಥಾನವಾವುದು? ಈ ಕಲಿಕಾಲದಲ್ಲಿ ನನ್ನನ್ನು ಪುರಸ್ಕರಿಸುವವರಾರು?"ಎಂದಳು. ಅದಕ್ಕಾ ಋಷಿಕುಮಾರರು,''ಎಲೆ ದೇವಿ! ನೀನು ಯಾವಾಗಲೂ ವಿಷ್ಣುಭಕ್ತರ ಮನಸ್ಸಿನಲ್ಲಿ ಸುಖವಾಗಿರಬಹುದು. ಅಲ್ಲೆ ನಿನ್ನನ್ನು ಕಲಿದೋಷಗಳು ಕಣ್ಣೆತ್ತಿಯೂ ನೋಡಲಾರವು." ಎಂದರು ಅದುನೊಡನೆ ಭಕ್ತಿಗೆ ಈ ಕಲಿಕಾಲದಲ್ಲಿ ವಿಷ್ಣುಭಕ್ತರ ಮನಸ್ಸೇ ನಿರಪಾಯವಾದ ಸ್ಥಾನವಾಯಿತು."ಎಂದು ಹೇಳಿ ಸನಕಾದಿಗಳು ತಿರುಗಿ ನಾರದನನ್ನು ಕುರಿತು, ''ಎಲೈ ನಾರದಮುನೀಂದ್ರನೆ! ಇದೇ ಭಾಗವತದ ಮಹಿಮೆಯು. ಈ ಭಾಗವತವೆಂಬುದು ಸಾಕ್ಷಾತ್ಪರಬ್ರಹ್ಮಸ್ವರೂಪವಾದುದು. ಇದನ್ನು ಪಠನಮಾಡಿದವರೂ,ಕೇಳಿದವರೂ ಸಾಕ್ಷಾತ್ ಶ್ರೀಕೃಷ್ಣನ ಸಾಮ್ಯವನ್ನೇ ಹೊಂದುವರು.ಲೋಕದಲ್ಲಿ ಇದಕ್ಕೆ ಸಮಾನವಾದ ಧರ್ಮವು ಬೇರೊಂದೂ ಇಲ್ಲ. ಎಲೈ ಮಹರ್ಷಿಯೆ! ಈ ಸಪ್ತಾಹಶ್ರವಣದಿಂದ ಎಂತಹ ಮಹಾಪಾತಕಗಳಾದರೂ ನಿವಾರಣಹೊಂದುವುವು. ಬ್ರಹ್ಮಸ್ವಾಪಹಾರ ವ್ಯಭಿಚಾರಗಳೇ ಮೊದಲಾದ ಪಾಪಕಾರ್ಯಗಳಿಂದುಂಟಾದ ಬ್ರಹ್ಮರಾಕ್ಷಸ ಪಿಶಾ

ಚಾಂಡಿಜನ್ಮಗಳೊಕೂಡ ಇದರಿಂದ ವಿಮೋಚನಹೊಂದುವುವು. ಈ ವಿಷಯದಲ್ಲಿ ನಿನಗೊಂದು ಇತಿಹಾಸವನ್ನು ಹೇಳುವೆನು ಕೇಳು.

ದುಂಧುಕಾರಿವೃತ್ತಾಂತವು.

ಪೂರ್ವದಲ್ಲಿ ತುಂಗಭದ್ರಾತೀರದಲ್ಲಿ ಉತ್ತಮನಾದ ಒಂದುಪಟ್ಟಣ ವಿದ್ದಿತು. ಅಲ್ಲಿನ ನಿವಾಸಿಗಳೆಲ್ಲರೂ ವರ್ಣಾಶ್ರಮಧರ್ಮನಿರತರಾಗಿದ್ದರು. ಅದರಲ್ಲಿ ಆತ್ಮದೇವನೆಂಬ ಒಬ್ಬ ಬ್ರಾಹ್ಮಣನಿದ್ದನು. ಅವನು ನಾಲ್ಕುವೇದಗಳನ್ನೂ ತಿಳಿದವನು. ಶ್ರೌತಸ್ಮಾರ್ತ ಕರ್ಮಗಳಲ್ಲಿ ನಿರತನಾದವನು. ಎರಡನೆಯ ಸೂರ್ಯನಂತೆ ತೇಜಸ್ವಿಯು. ಆತನು ಭಿಕ್ಷಾವೃತ್ತಿಯಿಂದಲೇ ಬಹಳ ಧನವನ್ನು ಸಂಪಾದಿಸುತ್ತಿದ್ದನು ಅವನ ಪತ್ನಿಗೆ ದುಂಧುಲಿಯೆಂದು ಹೆಸರು. ಆಕೆಯು ಬಹಳ ರೂಪವತಿ!ಸತ್ಕುಲದಲ್ಲಿ ಹುಟ್ಟಿದವಳು. ಆದರೆ ತಾನು ಹಿಡಿದ ಹಟವನ್ನು ಮಾತ್ರ ಎಂದಿಗೂ ಬಿಡದೆ, ತನ್ನ ಮಾತನ್ನೇ ಸಾಧಿಸುವ ಸ್ವಭಾವವುಳ್ಳವಳು. ಊರುಮಾತುಗಳನ್ನಾಡುವುದರಲ್ಲಿಯೇ ವಿಶೇಷವಾಗಿ ಕಾಲವನ್ನು ಕಳೆಯುತ್ತ, ಬಹಳ ಬಾಯಾಳಿಯೆನಿಸಿಕೊಂಡಿದ್ದಳು. ಅವಳ ಮನಸ್ಸಿನಲ್ಲಿ ದಯೆಯೆಂಬುದು ಸ್ವಲ್ಪಮಾತ್ರವೂ ಇರಲಿಲ್ಲ. ಮಾತಿಗೆ ಮೊದಲೇ ಕಲಹವನ್ನು ತೆಗೆಯುವಳು. ಗೃಹಕೃತ್ಯವನ್ನು ಬಹಳ ಒಪ್ಪದಿಂದ ನಡೆಸುತ್ತ, ಬಹಳ ಜಿಪುಣತನದಿಂದ ಕಾಲವನ್ನು ಕಳೆಯುತಿದ್ದಳು. ಹೀಗೆ ಆ ದಂಪತಿಗಳಿಬ್ಬರೂ ಪರಸ್ಪರಪ್ರೀತಿಯಿಂದಿದ್ದರೂ, ಅವರಲ್ಲಿದ್ದ ಹಣವಾಗಲಿ, ಭೋಗಸಾಮಗ್ರಿಗಳಾಗಲಿ ಯಾವುದೂ ಅವರ ಸುಖಕ್ಕೆ ಒದಗಲಿಲ್ಲ. ಅಷ್ಟು ಹಣವಿದ್ದರೂ ಕಷ್ಟದಿಂದಲೇ ಕಾಲವನ್ನು ಕಳೆಯುತಿದ್ದರು. ಬಹುಕಾಲದವರೆಗೆ ಅವರಿಗೆ ಸಂತಾನವೂ ಉಂಟಾಗಲಿಲ್ಲ. ಆ ಸಂತಾನಪ್ರಾಪ್ತಿಗಾಗಿ ಅವರಿಗೆ ಕೊನೆಕೊನೆಗೆ ಧರ್ಮಕಾರ್ಯಗಳನ್ನು ನಡೆಸಬೇಕೆಂಬ ಬುದ್ಧಿಯು ಹುಟ್ಟಿತು. ಬಡಬಗ್ಗರಿಗೂ, ಬ್ರಾಹ್ಮಣರಿಗೂ, ಗೋದಾನಗಳನ್ನೂ, ಭೂದಾನಗಳನ್ನೂ, ಸುವರ್ಣದಾನಗಳನ್ನೂ ಮಾಡುತ್ತ ಬಂದರು. ಈ ನೆವದಿಂದ ಅವರಲ್ಲಿದ್ದ ಹಣದಲ್ಲಿ ಅರ್ಧಭಾಗವು ಕಳೆದುಹೋಯಿತು. ಇಷ್ಟಾದರೂ ಆ ದಂಪತಿಗಳಿಗೆ ಒಂದು ಗಂಡುಕೂಸಾಗಲಿ, ಹೆಣ್ಣುಕೂಸಾಗಲಿ ಯಾವುದೂ ಹುಟ್ಟಲಿಲ್ಲ.

ಇದರಿಂದ ಆ ಬ್ರಾಹ್ಮಣನಿಗೆ ಮೇಲೆಮೇಲೆ ಚಿಂತೆಯು ಹೆಚ್ಚಿತು. ಹೀಗೆ ಚಿಂತಾಕುಲನಾದ ಬ್ರಾಹ್ಮಣನು, ಜಿಹಾಸೆಯಿಂದ ದೇಶಭ್ರಷ್ಟನಾಗಿ, ಅರಣ್ಯಕ್ಕೆ ಹೋಗಿ, ಅಲ್ಲಲ್ಲಿ ಸುತ್ತುತ್ತಾ, ಬಹಳ ದಾಹದಿಂದ ಪೀಡಿತನಾಗಿ ಒಂದು ಕೆರೆಯಬಳಿಗೆ ಬಂದನು. ಅಲ್ಲಿ ನೀರನ್ನು ಕುಡಿದು ಸಂತಾನಚಿಂತೆಯಿಂದಲೇ ಕೊರಗುತ್ತ ಕುಳಿತನು. ಇಷ್ಟರಲ್ಲಿ ಆ ಕಡೆಗೆ ಒಬ್ಬ ಸನ್ಯಾಸಿಯು ಬಂದುಸೇರಿದನು. ಆ ಸನ್ಯಾಸಿಯನ್ನು ಕಂಡೊಡನೆ ಈ ಬ್ರಾಹ್ಮಣನು, ಆ ವನಬಳಿಗೆ ಹೋಗಿ, ಅವನ ಪಾದಗಳನ್ನು ಹಿಡಿದು ನಮಸ್ಕರಿಸಿ, ದುಃಖದಿಂದ ಸಿಟ್ಟುಸಿರನ್ನು ಬಿಡುತ್ತ ಅವನಮುಂದೆ ನಿಂತನು. ಆಗ ಆ ಯತಿಯು, ಬ್ರಾಹ್ಮಣನನ್ನು ಕುರಿತು ದುಃಖಕಾರಣವನ್ನು ವಿಚಾರಿಸಲು ಆ ಬ್ರಾಹ್ಮಣನು, ''ಎಲ್ಲೈ ಯತೀಶ್ವರನೆ! ನಾನೇನು ಹೇಳಲಿ? ಇದು ನನ್ನ ಪಾಪಶೇಷವು. ಸಂತಾನವಿಲ್ಲವೆಂಬ ದುಃಖಕ್ಕಾಗಿ ನಾನು ಪ್ರಾಣತ್ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿ ಇಲ್ಲಿಗೆ ಹೊರಟುಬಂದೆನು. ಸಂತಾನವಿಲ್ಲದ ಮನುಷ್ಯನು ಬದುಕಿದರೇನು? ಸತ್ತರೇನು? ಮಕ್ಕಳಿಲ್ಲದ ಮನೆಯೂ, ಸಂತತಿಯಿಲ್ಲದ ಕುಲವೂ, ಕೇವಲಶೂನ್ಯಪ್ರಾಯವಲ್ಲದೆ ಬೇರೆಯಲ್ಲ! ಎಲೈ ಮಹಾತ್ಮನೆ! ಪಾಪಿಯಾದ ನಾನು ಮನೆಗೆ ತಂದು ಸಾಕಿದ ಹಸುವೂ ಬಂಜೆಯಾಯಿತು. ನಾನು ನಟ್ಟ ಗಿಡವೂ ಫಲಿಸದೆಹೋಯಿತು. ನಾನು ಮನೆಯೆಲ್ಲೆ ತಂಬಿಟ್ಟ ಹಣ್ಣುಕಾಯಿಗಳೂ ಬಣಗಿಹೋಗುವುವು. ಸಂತಾನವಿಲ್ಲದ ನಾನು ಎಷ್ಟೋ ಪ್ರೀತಿಯಿಂದ ಕೊಟ್ಟ ಹವ್ಯಕವ್ಯಗಳನ್ನು ಕೂಡ ದೇವತೆಗಳಾಗಲಿ, ಬ್ರಾಹ್ಮಣರಾಗಲಿ, ಆದರದಿಂದ ಗ್ರಹಿಸಲಾರರು. ಇಂತಹ ನಾನು ಲೋಕದಲ್ಲಿ ಬದುಕಿ ಫಲವೇನು" ಎಂದು ಗಟ್ಟಿಯಾಗಿ ಅಳುವುದಕ್ಕೆ ತೊಡಗಿದನು. ಇದನ್ನು ನೋಡಿ ಯತಿಗೆ, ಆ ಬ್ರಾಹ್ಮಣನಲ್ಲಿ ಕರುಣೆ ಹುಟ್ಟಿತು. ತನ್ನ ಧ್ಯಾನದೃಷ್ಟಿಯಿಂದ ಆ ಬ್ರಾಹ್ಮಣನ ಅದೃಷ್ಟವು ಹೇಗಿರಬಹುದೆಂಬುದನ್ನು ಕಂಡುಕೊಂಡು, ಅವನನ್ನು ಕುರಿತು ''ಬ್ರಾಹ್ಮಣಾ! ಇನ್ನುಮೇಲೆ ನೀನು ಈ ಸಂತಾನಚಿಂತೆಯೆಂಬ ಅಜ್ಞಾನವನ್ನು ತೊರೆದುಬಿಡು! ಅವರವರ ಕರ್ಮಗತಿಯನ್ನು ಮೀರಿಹೋಗುವುದು ಯಾರಿಗೂ ಸಾಧ್ಯವಲ್ಲ. ಈ ಸಂಸಾರವಾಸನೆಯನ್ನು ಬಿಟ್ಟು, ಮನಸ್ಸಿನಲ್ಲಿ ವಿವೇಕವನ್ನು ತಂದುಕೊಳ್ಳುವನಾಗು! ನಿನ್ನ ಹಣೆಯ ಬರಹ

ವೇನೆಂಬುದನ್ನು ನಾನು ಈಗಲೇ ಓದಿತಿಳಿದುಕೊಂಡೆನು! ಇನ್ನೇಳು ಜನ್ಮ ಗಳವರೆಗೂ ನಿನಗೆ ಸಂತಾನವು ಲಭಿಸದು. ಇದಕ್ಕಾಗಿ ನೀನು ಚಿಂತಿಸ ಬೇಡ! ಈ ಸಂತಾನದಿಂದ ಮನುಷ್ಯನಿಗೆ ಕಷ್ಟವೇಹೊರತು ಸುಖವಿ ಲ್ಲವು. ಪೂರ್ವದಲ್ಲಿ ಸಗರಚಕ್ರವರ್ತಿಯು ಅರುವತ್ತುಸಾವಿರಮಂದಿ ಮಕ್ಕಳ ನ್ನು ಪಡೆದು ಯಾವ ಸುಖವನ್ನು ಹೊಂದಿದನು? ಎಲೆ ಬ್ರಾಹ್ಮಣನೆ! ಈ ಕುಟುಂಬವಾಸೆಯನ್ನು ಬಿಟ್ಟುಬಿಡು! ಸನ್ಯಾಸದಲ್ಲಿ ಸರ್ವವಿಧದಲ್ಲಿಯೂ ಸುಖವುಂಟು" ಎಂದನು. ಆದಕ್ಕಾಬ್ರಾಹ್ಮಣನು "ಎಲೈಯತೀಶ್ವರನೆ! ಈಗ ನನಗೆ ಈ ನಿನ್ನ ವಿವೇಕಬೋಧನೆಯೊಂದೂ ಮನಸ್ಸಿಗೆ ಹಿಡಿಯವು. ನಿನ್ನ ತಪೋಬಲದಿಂದ ನನಗೆ ಸಂತಾನವನ್ನು ಕೊಡುವುದಾದರೆ ಕೊಡು. ಇಲ್ಲವಾದರೆ ನಿನ್ನ ಮುಂದೆಯೇ ನಾನು ಪ್ರಾಣವನ್ನು ಬಿಡುವೆನು. ಸಂ ತಾನಸುಖವನ್ನು ತೊರೆದು ಕೇವಲಶುಷ್ಕವಾದ ಸನ್ಯಾಸವನ್ನು ಪರಿಗ್ರ ಹಿಸುವುದರಿಂದ ಫಲವೇನು? ಪುತ್ರಪೌತ್ರರೊಡಗೂಡಿ ಸಂಸಾರಸುಖವನ್ನು ಅನುಭವಿಸುವ ಗೃಹಸ್ಥಾಶ್ರಮವೇ ಸರ್ವೋತ್ತಮವಲ್ಲದೆ ಬೇರೆಯಲ್ಲ"ಎಂದನು. ಹೀಗೆ ಆ ಬ್ರಾಹ್ಮಣನು ಹಟವಾದದಿಂದ ಹೇಳುವ ಮಾತನ್ನು ಕೇಳಿ ತಿರುಗಿ ಆ ಸನ್ಯಾಸಿಯು "ಬ್ರಾಹ್ಮಣಾ! ಬೇಡ! ಈ ಹಟದಿಂದ ನೀನು ಬಹಳ ಕಷ್ಟಕ್ಕೆ ಗುರಿಯಾಗುವೆಯಲ್ಲದೆ ಬೇರೆಯಲ್ಲ. ನೀನು ನಿನ್ನ ಕರ್ಮಬಲವನ್ನು ನೀರಿ ಸಂತಾನವನ್ನು ಪಡೆದರೂ, ಆದರಿಂದ ನೀನು ಬಹಳ ಅನರ್ಥಗಳಿಗೆ ಗುರಿಯಾಗುವೆಯೇಹೊರತು ಲೇಶಮಾತ್ರವೂ ಸುಖವಿರದು. ಇನ್ನು ನಿನ್ನ ಹಣೆಯ ಬರಹವಿದ್ದಂತಾಗಲಿ," ಎಂದು ಹೇಳಿ, ಅವನ ಕೈಗೆ ಒಂದು ಫಲವ ನ್ನು ಮಂತ್ರಿಸಿ ಕೊಟ್ಟು, "ಇದೋ! ಈ ಫಲವನ್ನು ನಿನ್ನ ಪತ್ನಿಗೆ ಕೊಟ್ಟು ಇದನ್ನು ಭಕ್ಷಿಸುವಂತೆ ಹೇಳು! ನೀವಿಬ್ಬರೂ ಒಂದು ವರುಷದವರೆಗೆ ಬಹಳ ನಿಯಮದಿಂದಿರಬೇಕು. ಆದರಿಂದಾಚೆಗೆ ಅತಿಶುದ್ಧನಾದ ಪುತ್ರನೊಬ್ಬನು ಹುಟ್ಟುವನು" ಎಂದು ಹೇಳಿ ತನ್ನ ಮಾರ್ಗವನ್ನು ಹಿಡಿದು ಹೊರಟುಹೋ ದನು. ಬ್ರಾಹ್ಮಣನೂ ಇತ್ತಲಾಗಿ ತನ್ನ ಮನೆಗೆ ಬಂದು ಹಣ್ಣನ್ನು ತನ್ನ ಪ ತ್ನಿಯಾದ ದುಂಧುಲಿಯ ಕೈಗೆ ಕೊಟ್ಟು, ಬೇರೆ ಕಾರ್ಯಾತುರದಿಂದ ತಾನು ಹೊರಗೆ ಹೋದನು.

ದುಂಧುಲಿಯು ಕೇವಲ ವಕ್ರಬುದ್ಧಿಯುಳ್ಳವಳಾದುದರಿಂದ, ಆ ಹಣ್ಣನ್ನು ಕೈಗೆ ತೆಗೆದುಕೊಂಡಕೂಡಲೆ, ಅವಳಿಗೆ ಮನಸ್ಸಿನಲ್ಲಿ ವಿಚಿತ್ರವಾದ ಒಂದು ಚಿಂತೆಯು ಹುಟ್ಟಿತು. ಆ ಹಣ್ಣನ್ನು ಕೈಯಲ್ಲಿಟ್ಟುಕೊಂಡು ತನ್ನ ಸಖಿಯಮುಂದೆ ಕುಳಿತು ಅಳುವುದಕ್ಕಾರಂಭಿಸಿದಳು. ''ಅಯ್ಯೋ! ಇದೇನು? ಈ ಹಣ್ಣನ್ನು ತಿಂದರೆ ನನ್ನ ಗತಿಯೇನು? ಛಿ! ನಾನೆಂದಿಗೂ ಇದನ್ನು ತಿನ್ನುವವಳಲ್ಲ! ಇದನ್ನು ತಿಂದೊಡನೆ ಗರ್ಭವು ಬೆಳೆಯುವುದರಲ್ಲಿ ಸಂದೇಹವಿಲ್ಲ. ಗರ್ಭವು ಬೆಳೆಯುತ್ತ ಬಂದಹಾಗೆಲ್ಲಾ ಹೊಟ್ಟೆಯು ಉಬ್ಬಿಕೊಳ್ಳುವುದು. ಸರಿಯಾಗಿ ಅನ್ನವೂ ಸೇರುವುದಿಲ್ಲ. ಮೈಯಲ್ಲಿ ಶಕ್ತಿಯೂ ತಗ್ಗುವುದು. ಆ ಸ್ಥಿತಿಯಲ್ಲಿ ಮನೆಯ ಕೆಲಸಗಳು ಹೇಗೆ ನಡೆಯಬೇಕು? ಒಂದುವೇಳೆ ಕಳ್ಳಕಾಕರಾಗಲಿ, ಕೊಳ್ಳೆಹೊಡೆಯುವರಾಗಲಿ, ಈ ಗ್ರಾಮಕ್ಕೆ ನುಗ್ಗಿಬಿಟ್ಟರೆ ನಾನು ಹೊರಲಾರದ ಆ ಹೊಟ್ಟೆಯನ್ನು ಹೊತ್ತುಕೊಂಡು, ಹಣಕಾಸುಗಳನ್ನೂ ಸಾಗಿಸಿಕೊಂಡು ಓಡುವುದು ಹೇಗೆ? ಒಂದುವೇಳೆ ಗರ್ಭವು ಬೆಳೆದು ಹೊಟ್ಟೆಯಲ್ಲಿಯೇ ತಂಗಿಬಿಟ್ಟರೆ ಅದನ್ನು ಹೊರಗೆ ತೆಗೆಯುವುದು ಹೇಗೆ? ಒಂದುವೇಳೆ ಶಿಶುವು ಗರ್ಭಕೋಶದಲ್ಲಿ ಅಡ್ಡಲಾಗಿ ಸಿಂತುಹೋದರೆ ಆಗ ನನಗೆ ಮರಣವಲ್ಲದೆ ಬೇರೆ ಗತಿಯೇನು? ಅಥವಾ ಕ್ರಮಪ್ರಸವವಾದರೂ, ಇಷ್ಟು ಸುಕುಮಾರವಾದ ಮೈಯುಳ್ಳ ನಾನು, ಆ ಪ್ರಸವವೇದನೆಯನ್ನು ಹೇಗೆ ಸಹಿಸಲಿ! ಗರ್ಭಶ್ರಮದಿಂದ ಮನೆಯ ಕೆಲಸಗಳಲ್ಲಿ ನಾನು ಎಚ್ಚರತಪ್ಪಿರುವುದನ್ನು ನೋಡಿದಮಾತ್ರದಲ್ಲಿಯೇ, ನನ್ನ ನಾದಿನಿಯು ಮನೆಯ ಸರ್ವಸ್ವವನ್ನೂ ಸಾಗಿಸಿಬಿಡುವಳು. ಅಷ್ಟುದೂರವೇಕೆ? ಈ ಹಣ್ಣನ್ನು ತಿಂದ ಮೇಲೆ ಆ ಸನ್ಯಾಸಿಯು ಹೇಳಿದಂತೆ ಅಷ್ಟು ನಿಯಮಗಳನ್ನನುಸರಿಸುವುದಕ್ಕಾದರೂ ನನ್ನಿಂದ ಹೇಗೆ ಸಾಧ್ಯವು? ಇಷ್ಟು ಶ್ರಮಪಟ್ಟು ಒಂದುಮಗುವನ್ನು ಪಡೆದರೂ ಅದನ್ನು ಪೋಷಿಸುವುದಕ್ಕಾಗಿ ಎಷ್ಟೋ ಕಷ್ಟಪಡಬೇಕಾಗುವುದು. ಇವೆಲ್ಲವನ್ನೂ ಯೋಚಿಸಿದರೆ ಹೆಂಗಸಾಗಿ ಹುಟ್ಟಿದವಳು ಬಂಜೆಯಾಗಿರುವುದೇ ಮೇಲೆಂದು ತೋರುವುದು! ಅಥವಾ ವಿಧವೆಯಾಗಿದ್ದರೂ ಉತ್ತಮವೇ!" ಎಂದು ತನ್ನ ಮನಸ್ಸಿನಲ್ಲಿಯೇ ಕುತರ್ಕಗಳನ್ನು ಮಾಡಿಕೊಂಡು ಆ ಹಣ್ಣನ್ನು ಭಕ್ಷಿಸಿದಹಾಗೆಯೇ ಇದ್ದುಬಿಟ್ಟಳು! ಗಂಡನು ಮನೆಗೆ ಬಂದು ಕೇಳಿದಾಗ ತಾನು ಆ ಹಣ್ಣನ್ನು ಭಕ್ಷಿಸಿದುದಾಗಿಯೂ ಹೇಳಿಬಿಟ್ಟಳು.

ಅದರಮೇಲೆ ಇವಳಿಗೆ ಆ ಸುಳ್ಳನ್ನು ದಕ್ಕಿಸಿಕೊಳ್ಳುವುದಕ್ಕೆ ಉಪಾಯವೇನೆಂಬ ಚಿಂತೆಯು ಹುಟ್ಟಿತು. ಒಮ್ಮೆ ಅವಳ ತಂಗಿಯು ಆಕಸ್ಮಾತ್ತಾಗಿ ಮನೆಗೆ ಬಂದಾಗ ಅವಳೊಡನೆ ಈ ರಹಸ್ಯಗಳೆಲ್ಲವನ್ನೂ ಹೇಳಿಕೊಂಡು ''ಅಯ್ಯೋ! ತಂಗಿ! ನಾನೇನುಮಾಡಲಿ? ನನ್ನ ಪತಿಯು ವರಪ್ರಸಾದದಿಂದ ನನಗೆ ತಂದುಕೊಟ್ಟ ಹಣ್ಣನ್ನು ನಾನು ಭಕ್ಷಿಸಿಬಿಟ್ಟಿರುವುದಾಗಿ ಸುಳ್ಳಾಡಿರುವೆನು. ನಾನು ಗರ್ಭಿಣಿಯಾಗದಿದ್ದರೆ ನನ್ನ ವಂಚನೆಯು ಹೊರಗೆ ಬೀಳುವುದು. ಮುಂದೇನು ಮಾಡಬೇಕೆಂದು ತೋಚಲಿಲ್ಲ. ಇದಕ್ಕಾಗಿ ಆಹೋರಾತ್ರವೂ ಕೊರಗಿ ಸಾಯುತ್ತಿರುವೆನು. ಇದಕ್ಕೇನಾದರೂ ಉಪಾಯವನ್ನು ಹೇಳಬಲ್ಲೆಯಾ?" ಎಂದಳು ಅದಕ್ಕಾ ತಂಗಿಯು, ''ಅಕ್ಕಾ! ಚಿಂತಿಸಬೇಡ! ಇಡೋ ನಾನು ಗರ್ಭಿಣಿಯಾಗಿರುವೆನು ಪ್ರಸವವಾದಮೇಲೆ ಈ ಮಗುವನ್ನೇ ಕೊಡುವೆನು. ಅದುವರೆಗೆ ನೀನೂ ಗರ್ಭಿಣಿಯಂತೆ ನಟಿಸುತ್ತ, ಹೊರಗೆ ಬಾರದೆ ಸುಖವಾಗಿ ಮನೆಯಲ್ಲೆಯೇ ಇರು. ಆದರೆ ನನ್ನ ಗಂಡನು ಇದಕ್ಕೊಪ್ಪುವನೋ ಇಲ್ಲವೋ ಎಂಬ ಸಂದೇಹವು ನಿನಗಿರಬಹುದು! ನೀನು ಸ್ವಲ್ಪಹಣವನ್ನು ಕೊಡುವುದಾದರೆ ಅವನನ್ನೂ ಒಪ್ಪಿಸಿಬಿಡಬಹುದು. ನನ್ನ ಗರ್ಭವೇನಾಯಿತೆಂದು ಜನರು ಕೇಳುವಪಕ್ಷದಲ್ಲಿ, ಗರ್ಭವು ಚೆನ್ನಾಗಿ ಬೆಳೆಯುವುದಕ್ಕೆ ಮೊದಲು ಆರುತಿಂಗಳಲ್ಲಿಯೇ ಪ್ರಸವವಾದುದರಿಂದ ಹುಟ್ಟುವಾಗಲೇ ಆ ಶಿಶುವು ಸತ್ತುಹೋಯಿತೆಂದು ನಾನು ಪ್ರವಾದವನ್ನು ಹುಟ್ಟಿಸುವೆನು. ಪ್ರತಿದಿನವೂ ನಿನ್ನ ಮನೆಗೆ ಬಂದು ಆ ಮಗುವನ್ನೂ ಪೋಷಿಸುತ್ತಿರುವೆನು. ಈಗ ನೀನು ಬಚ್ಚಿಟ್ಟಿರುವ ಹಣ್ಣನ್ನು ನನ್ನ ಮನೆಯ ಹಸುವಿಗೆ ತಿನ್ನಿಸಿಬಿಡು! ಗರ್ಭವುಂಟಾಗುವುದೋ ಇಲ್ಲವೋ ಎಂದು ಪರೀಕ್ಷಿಸುವೆವು" ಎಂದಳು. ಸ್ತ್ರೀಯರ ಕ್ರೂರಸ್ವಭಾವಕ್ಕೆ ತಕ್ಕಂತೆ ಆ ಕಾರ್ಯಗಳೆಲ್ಲವೂ ಹಾಗೆಯೇ ನಡೆಸಲ್ಪಟ್ಟುವು. ಕೆಲವು ಕಾಲದಮೇಲೆ ದುಂಧುಲಿಯ ತಂಗಿಯು, ಒಂದುಗಂಡುಮಗುವನ್ನು ಪ್ರಸವಿಸಿದಳು. ದ್ರವ್ಯಾಸೆಯಿಂದ ಆಕೆಯ ಪತಿಯೇ ಆ ಮಗುವನ್ನು ತಂದು ರಹಸ್ಯವಾಗಿ ದುಂಧುಲಿಗೆ ಒಪ್ಪಿಸಿಬಿಟ್ಟನು. ಆ ದುಂಧುಲಿಯೂಕೂಡ ತನಗೆ ಗಂಡುಮಗುವು ಹುಟ್ಟಿದುದಾಗಿ ಪತಿಗೆ ತಿಳಿಸಿದಳು. ಆತ್ಮದೇವನೆಂಬ ಬ್ರಾಹ್ಮಣನು ಪರಮಸಂತೋಷದಿಂದ ಬ್ರಾಹ್ಮಣರಿಗೆ ಬೇಕಾದ ದಾನಗಳನ್ನು

ಕೊಟ್ಟು,ಜಾತಕರ್ಮಾದಿಸಂಸ್ಕಾರಗಳನ್ನೂ ನಡೆಸಿದನು. ಗೀತವಾದ್ಯಾದಿ ಮಂಗಳಧ್ವನಿಗಳೊಡನೆ ಬಹಳ ವೈಭವದಿಂದ ಶುಭಕಾರ್ಯಗಳೆಲ್ಲವೂ ನಡೆಸಲ್ಪಟ್ಟವು. ಆಮೇಲೆ ದುಂಧುಲಿಯು ತನ್ನ ಪತಿಯನ್ನು ಕುರಿತು ''ನಾಥಾ!ನನ್ನ ಎದೆಯಲ್ಲಿ ಸ್ತನ್ಯವಿಲ್ಲ! ನಾನು ಈ ಮಗುವನ್ನು ಹೇಗೆ ಪೋಷಿಸಲಿ? ಈಗಲೇ ನನ್ನ ತಂಗಿಯು ಪ್ರಸವಿಸಿ ಆತಿಶುವು ಮೃತವಾಯಿತು!ಅವಳಲ್ಲಿ ಬೇಕಾದಷ್ಟು ಸ್ತನ್ಯವಿರುವುದು. ಅವಳನ್ನು ಕರೆತಂದು ನಮ್ಮ ಮನೆಯಲ್ಲಿಟ್ಟುಕೊಂಡರೆ ಅವಳೇ ನಮ್ಮ ಮಗುವನ್ನು ಪೋಷಿಸುವಳು"ಎಂದಳು. ಆ ಬ್ರಾಹ್ಮಣನು ಅದನ್ನೂ ನಂಬಿ,ಅದರಂತೆಯೇ ಒಪ್ಪಿಕೊಂಡನು ಆಮೇಲೆ ಆ ತಿಶುವಿಗೆ ದುಂಧುಕಾರಿಯೆಂದು ನಾಮಕರಣವನ್ನೂ ಮಾಡಿದನು. ಇದು ಹೀಗಿರಲು ಮೂರು ತಿಂಗಳಾದಮೇಲೆ ಅತ್ತಲಾಗಿ ಆ ಹಣ್ಣನ್ನು ತಿನ್ನಿಸಿದ ಹಸುವಿನ ಗರ್ಭದಿಂದ ಅತ್ಯದ್ಭುತವಾದ ದಿವ್ಯರೂಪವುಳ್ಳ ಒಂದು ಗಂಡುಮಗುವು ಜನಿಸಿತು.ಆಬ್ರಾಹ್ಮಣನಿಗೆ ಕೊನೆಮೊದಲಿಲ್ಲದ ಆಶ್ಚರ್ಯವೂ, ಸಂತೋಷವೂ ಹುಟ್ಟಿತು. ಆ ತಿಶುವಿಗೂ ತಾನೇ ಜಾತಕರ್ಮಾದಿಸಂಸ್ಕಾರಗಳೆಲ್ಲವನ್ನೂ ನಡೆಸಿದನು. ಈ ಆಶ್ಚರ್ಯವನ್ನು ನೋಡುವುದಕ್ಕಾಗಿ ಊರಿನ ಜನರೆಲ್ಲರೂ ಒಂದುನೆರೆದರು ಅವರೆಲ್ಲರೂ ಆ ಮಗುವನ್ನು ನೋಡಿ ಒಬ್ಬರಿಗೊಬ್ಬರು, ''ಆಹಾ! ಈ ಬ್ರಾಹ್ಮಣನ ಭಾಗ್ಯವೇ ಭಾಗ್ಯವು! ಬಹುಕಾಲದಿಂದ ಸಂತಾನವಿಲ್ಲದೆ ಕೊರಗುತಿದ್ದ ಈ ಬ್ರಾಹ್ಮಣನಿಗೆ,ಹೆಂಡತಿಯಲ್ಲಿಯೂ ಪುತ್ರಸಂತಾನವಾದುದಲ್ಲದೆ, ಮನೆಯಲ್ಲಿ ಸಾಕಿದ ಧೇನುವೂಕೂಡ ದಿವ್ಯರೂಪವುಳ್ಳ ಪುತ್ರನನ್ನು ಪ್ರಸವಿಸಿ ಕೊಟ್ಟಿತಲ್ಲವೆ?" ಎಂದು ಒಬ್ಬೊಬ್ಬರೂ ಕೊಂಡಾಡುತಿದ್ದರು. ಇಷ್ಟಾದರೂ ಅದರ ರಹಸ್ಯವುಮಾತ್ರ ಯಾರಿಗೂ ತಿಳಿಯಲಿಲ್ಲ. ಆಮೇಲೆ ಬ್ರಾಹ್ಮಣನು ಆ ತಿಶುವಿಗೆ ಗೋವಿನ ಕಿವಿಯಂತೆ ಕಿವಿಗಳಿರುವುದನ್ನುನೋಡಿ, ಅದಕ್ಕೆ ಗೋಕರ್ಣನೆಂದೇಹೆಸರಿಟ್ಟನು. ಆ ತಿಶುಗಳಿಬ್ಬರೂ ಕ್ರಮಕ್ರಮವಾಗಿ ವೃದ್ಧಿಹೊಂದುತ್ತ ಬಂದರು. ಸಮವಯಸ್ಸುಳ್ಳವರಾಗಿ ಇಬ್ಬರೂ ಯೌವನವನ್ನು ಹೊಂದಿದರು. ಆದರೆ ಗೋಕರ್ಣನೆಂಬವನು ಕ್ರಮಕ್ರಮವಾಗಿ ಪಂಡಿತನೂ ಜ್ಞಾನಿಯೂ ಆಗುತ್ತ ಬಂದನು.ದುಂಧುಕಾರಿಯಾದರೋ ಕೇವಲ ಮೂಢನಾಗಿದ್ದು ಸ್ನಾನಶೌಚಾಚಾರಗಳೆಲ್ಲವನ್ನೂ ಬಿಟ್ಟನು. ಕಾಮಕ್ರೋ

ಥಾವು ದುರ್ಗುಣಗಳೆಲ್ಲವೂ ಇವನಲ್ಲಿ ನೆಲೆಗೊಂಡುವು. ಕದಿಯುವುದು, ಇತರರಮನೆಗೆ ಬೆಂಕಿಯಿಡುವುದು, ಅರಿಯದ ಮಕ್ಕಳನ್ನು ಬಾವಿಗೆ ತಳ್ಳುವುದು, ಕಂಡಕಂಡವರೆಲ್ಲವರನ್ನೂ ಹಿಂಸಿಸುವುದು, ಅಂಗಹೀನರಾದ ಬಡಬಗ್ಗರನ್ನು ಹಾಸ್ಯಮಾಡುವುದು, ಇವೇಮೊದಲಾದ ಕ್ರೂರಕೃತ್ಯಗಳೆಲ್ಲವನ್ನೂ ನಡೆಸುತ್ತ ಬಂದನು. ಜಾರಶೃತ್ಯದಲ್ಲಿ ಬಿದ್ದು ಪಿತ್ರಾರ್ಜಿತವಾದ ಧನವೆಲ್ಲವನ್ನೂ ನಾಶಮಾಡಿಬಿಟ್ಟನು ದುರ್ಬಲರಾದ ತಂದೆತಾಯಿಗಳನ್ನು ಹೊಡೆದು ಬಡಿದು ಹಿಂಸಿಸಿ, ಮನೆಯಲ್ಲಿದ್ದ ಪಾತ್ರಪಥಾರ್ಥಗಳೆಲ್ಲವನ್ನೂ ಮಾರುತ್ತಿದ್ದನು. ಕೊನೆಗೆ ಆತ್ಮದೇವನು ಈ ಹಿಂಸೆಯನ್ನು ತಡೆಯಲಾರದೆ ಬೀದಿಬೀದಿಯಲ್ಲಿ ಅಳುವುದಕ್ಕೆ ತೊಡಗಿದನು. ''ಅಯ್ಯೋ! ಇಂತಹ ದುಷ್ಪುತ್ರನು ಹುಟ್ಟುವುದಕ್ಕಿಂತಲೂ, ನನ್ನ ಪತ್ನಿಯು ಮೊದಲಿನಂತೆ ಬಂಜೆಯಾಗಿದ್ದರೇ ಎಷ್ಟೋಮೇಲಾಗಿತ್ತು. ಆಯಾ! ನನಗಿನ್ನೇನುಗತಿ! ನಾನೆಲ್ಲಿಗೆ ಹೋಗಲಿ? ನನ್ನ ದುಃಖವನ್ನು ನೀಗಿಸುವವರಾರು? ಈ ಕಷ್ಟದಲ್ಲಿ ಬದುಕಿರುವುದಕ್ಕಿಂತಲೂ ಪ್ರಾಣವನ್ನಾದರೂ ಬಿಡಬಹುದು!"ಎಂದು ಕೂಗಿಕೊಳ್ಳುತಿದ್ದನು. ಇದೇ ಸಮಯದಲ್ಲಿ ಮಹಾಜ್ಞಾನಿಯಾದ ಗೋಕರ್ಣನೆಂಬ ಪುತ್ರನು ತಂದೆಯ ಬಳಿಗೆ ಬಂದು, ಅವನನ್ನು ಸಮಾಧಾನಪಡಿಸುತ್ತ ವಿರಕ್ತಿಮಾರ್ಗಗಳನ್ನು ಪದೇಶಿಸಿ, ''ಜನಕಾ! ಈ ಸಂಸಾರವೆಂಬುದು ಕೇವಲದುಃಖರೂಪವಾಗಿ ಸುಖಭ್ರಾಂತಿಯನ್ನುಂಟುಮಾಡುವುದೇಹೊರತು ಇದರಲ್ಲಿ ಏನೇನೂ ಸಾರವಿಲ್ಲವು. ನಿಸ್ಸಾರವಾದ ಈ ಸಂಸಾರದಲ್ಲಿ. ಮಕ್ಕಳಾರಿಗೆ? ಧನವಾರಿಗೆ? ಒಬ್ಬರಿಗೊಬ್ಬರಿಗೆ ಏನೇನೂ ಸಂಬಂಧವಿಲ್ಲವು. ದೀಪದಲ್ಲಿ ಸ್ನೇಹ (ಎಣ್ಣೆ) ವಿರುವವರೆಗೂ ಅದು ಜ್ವಲಿಸುವಂತೆ, ಮನುಷ್ಯನೂಕೂಡ ಇತರವಸ್ತುಗಳಲ್ಲಿ ಸ್ನೇಹವನ್ನು ತೋರಿಸಿದಷ್ಟೂ ದುಃಖಾಗ್ನಿಯಿಂದ ಬೇಯಬೇಕಾಗಿರುವುದು. ಅಯ್ಯಾ! ಮುಖ್ಯವಾಗಿ ಒಂದು ವಿಷಯವನ್ನು ಹೇಳುವೆನು ಕೇಳು? ಮಹೇಂದ್ರನಿಗಾಗಲಿ, ಚಕ್ರವರ್ತಿಗಾಗಲಿ ದುಃಖವೆಂಬುದು ತಪ್ಪದು. ಏಕಾಂತವಾಸಿಯಾದ ವಿರಕ್ತನೊಬ್ಬನೇ ಲೋಕದಲ್ಲಿ ಪರಮಸುಖಿಯು! ಇನ್ನುಮೇಲಾದರೂ ಈ ಅಜ್ಞಾನವನ್ನು ಬಿಟ್ಟುಬಿಡು! ಈ ಮೋಹಸಂಬಧದಿಂದ ನರಕಪ್ರಾಪ್ತಿಯಲ್ಲದೆ ಬೇರೆಯಲ್ಲ! ಈ ದೇಹವೆಂಬುದು ಹೇಗಿದ್ದರೂ ಯಾವಾಗಲೋ ಒಮ್ಮೆ ಬಿದ್ದುಹೋಗುವುದು. ಆದು

ದರಿಂದ ನೀನು ಇವೆಲ್ಲವನ್ನೂ ಬಿಟ್ಟು ವೈರಾಗ್ಯವನ್ನು ವಹಿಸಿ ಕಾಡಿನಲ್ಲಿರು." ಎಂದನು. ಈ ಮಾತನ್ನು! ಕೇಳಿದೊಡನೆ ಬ್ರಾಹ್ಮಣನಿಗೆ ತನ್ನ ಮಗನಲ್ಲಿ ಒಂದು ವಿಧವಾದ ಗುರುಭಾವವು ಹುಟ್ಟಿತು. ಆದರಿಂದ ಆ ಬ್ರಾಹ್ಮಣನು ತಿರುಗಿ ಗೋಕರ್ಣನನ್ನು ದೈನ್ಯದಿಂದ ಪ್ರಾರ್ಥಿಸುವನು. "ವತ್ಸ! ಗೋಕರ್ಣಾ! ನಾನು ಕಾಡಿನಲ್ಲಿ ಹೋಗಿ ನಡೆಸಬೇಕಾದ ಕಾರ್ಯವೇನು? ಅದನ್ನಾದರೂ ವಿಸ್ತರಿಸಿ ನನಗೆ ತಿಳಿಸು! ಅಜ್ಞಾನಾಂಧಕಾರದಲ್ಲಿ ಮುಳುಗಿಹೋಗಿರುವ ನನ್ನನ್ನು ಉದ್ಧರಿಸುವ ಭಾರವು ನಿನ್ನದು" ಎಂದನು. ಆದಕ್ಕಾ ಗೋಕರ್ಣನು "ಜನಕಾ ಕೇಳು? ರಕ್ತಮಾಂಸಗಳಿಂದ ಕೇವಲಹೇಯವಾದ ಈ ದೇಹದಲ್ಲಿ ಅಭಿಮಾನವನ್ನು ಬಿಟ್ಟುಬಿಡು! ಹೆಂಡತಿ ಮಕ್ಕಳಲ್ಲಿಯೂ ಮಮತೆಯನ್ನು ಬಿಡು? ಈ ಜಗತ್ತೆಲ್ಲವೂ ಕವಲನಶ್ವರವೆಂದು ದೃಢವಾಗಿ ನಂಬು! ಆದುದರಿಂದ ಭಕ್ತಿನಿಷ್ಠನಾಗಿ ವೈರಾಗ್ಯವನ್ನನುಸರಿಸು! ಸದ್ಧರ್ಮವನ್ನಾಶ್ರಯಿಸು! ಲೌಕಿಕಧರ್ಮಗಳನ್ನು ತ್ಯಜಿಸು! ಸಾಧುಗಳನ್ನು ಸೇವಿಸು! ಭೋಗವಾಸನೆಯನ್ನು ಬಿಡು! ಬೇರೊಬ್ಬರ ದೋಷಗುಣಗಳನ್ನು ವಿಚಾರಿಸುವುದರಲ್ಲಿ ದೃಷ್ಟಿಯಿಡದಿರು! ಯಾವಾಗಲೂ ಭಾಗವತಕಥಾಮೃತವನ್ನು ಪಾನಮಾಡುವುದರಲ್ಲಿ ನಿರತನಾಗು!" ಎಂದನು ಆತ್ಮದೇವನೆಂಬ ಬ್ರಾಹ್ಮಣನು ಅರುವತ್ತುವರ್ಷದ ಮುದುಕನಾಗಿದ್ದರೂ, ತನ್ನ ಮಗನ ಬಾಯಿಂದ ಆ ಮಾತನ್ನು ಕೇಳಿದೊಡನೆ ಮನಸ್ಸನ್ನು ದೃಢಪಡಿಸಿಕೊಂಡು ವಿರಕ್ತನಾಗಿ ಕಾಡಿಗೆ ಹೊರಟನು. ಅಲ್ಲಿ ಅನವರತವೂ ಹರಿಸೇವಾಪರನಾಗಿ, ಶ್ರೀಭಾಗವತ ದಶಮಸ್ಕಂಧವನ್ನು ಅನುದಿನವೂ ಪಠಿಸುತಿದ್ದು, ಶ್ರೀಕೃಷ್ಣಸಾಯುಜ್ಯರೂಪವಾದ ಮೋಕ್ಷವನ್ನು ಹೊಂದಿದನು.

ಇತ್ತಲಾಗಿ ತಂದೆಯು ವನಕ್ಕೆ ಹೊರಟಕೂಡಲೆ, ದಂಧುಕಾರಿಯು ತನ್ನ ತಾಯಿಯನ್ನು ಹೊಡೆದು ಬಡಿದು ಹಿಂಸಿಸುತ್ತ "ಹಣವನ್ನೆಲ್ಲಿ ಬಚ್ಚಿಟ್ಟಿರುವೆ ಹೇಳು! ಇಲ್ಲದಿದ್ದರೆ ಕೊಲ್ಲುವೆನು." ಎಂದು ಹೆದರಿಸುತ್ತಿದ್ದನು. ಈ ಭಯಕ್ಕಾಗಿ ದುಂಧುಲಿಯು ಅದೇರಾತ್ರಿಯಲ್ಲಿ ಯಾರೂ ಕಾಣದಹಾಗೆ ಬಾವಿಯಲ್ಲಿ ಬಿದ್ದುಸತ್ತಳು. ಅತ್ತಲಾಗಿ ಗೋಕರ್ಣನೆಂಬವನು ಯೋಗನಿಷ್ಠನಾಗಿ ತೀರ್ಥಯಾತ್ರೆಗೆ ಹೊರಟು, ಪುಣ್ಯಕ್ಷೇತ್ರಗಳನ್ನು ಸುತ್ತುತಿದ್ದು

ನು. ಇವನಿಗೆ ಸುಖದುಃಖಗಳಾಗಲಿ, ಶತ್ರುಮಿತ್ರರಾಗಲಿ, ಜಂಥುಬಳಗವಾಗ ಲಿ, ಈ ಯಾವ ವಿಥವಾದ ಸಂಬಂಥವೂ ಇಲ್ಲದುದರಿಂದ,ಇವನು ನಿಶ್ಚಂತನಾ ಗಿದ್ದನು. ದುಂಥುಕಾರಿಯಾದರೋ ಮನೆಯಲ್ಲಿಯೇ ಕುಳಿತು, ಐದುಮಂದಿ ಸೂಳೆಯರನ್ನು ಕಟ್ಟಿಕೊಂಡು, ಅವರನ್ನು ಪೋಷಿಸುವುದಕ್ಕೂ ಕೈಲಾಗದೆ ಕಳವಳಿಸುತ್ತ, ಅಕೃತ್ಯಗಳನ್ನು ನಡೆಸುವುದಕ್ಕೆ ತೊಡಗಿದನು. ಈ ವೇಶ್ಯೆಯ ರಾದರೋ ಅವನನ್ನು ಮೇಲೆಮೇಲೆ ಒಡವೆಗಳಿಗಾಗಿ ನಿರ್ಬಂಥಿಸುತಿದ್ದರು. ಕೇವಲಕಾಮಾಂಥನಾದ ಆ ದುಂಥುಕಾರಿಯು, ಅವರ ಮಾತಿಗೆ ಮರು ಳಾಗಿ, ಜೀವದನ್ನೇಲೆಯೂ ಆಸೆಯಿಡದೆ, ಮನೆಯಿಂದ ಹೊರಟು, ದಾರಿಗ ಳ್ಳನಾಗಿ ಪ್ರಯಾಣಿಕರ ತಲೆಯನ್ನೊಡೆದು,ಸಿಕ್ಕಿದ ಹಣವನ್ನೂ, ಒಡವೆಗಳ ನ್ನೂ, ವಸ್ತ್ರಗಳನ್ನೂ ಕದ್ದುತಂದು ಕೊಡುತಿದ್ದನು. ಹೀಗೆ ಕಳ್ಳತನದಿಂದ ಲೇ ಬಹಳದ್ರವ್ಯವನ್ನು ತಂದು ಸೇರಿಸಿಬಿಟ್ಟನು. ಇಷ್ಟೊಂದು ದ್ರವ್ಯ ರಾತಿಯನ್ನು ನೋಡಿದಮೇಲೆ ಆ ವೇಶ್ಯೆಯರಿಗೆ ಒಂದು ದುರಾಲೋಚನೆಯು ಹುಟ್ಟಿತು. ಅವರೆಲ್ಲರೂ ಒಂದಾನೊಂದುರಾತ್ರಿ ಏಕಾಂತದಲ್ಲಿ ಒಂದಾಗಿ ಕಲೆತು, ತಮ್ಮೊಳಗೆ ಒಬ್ಬರಿಗೊಬ್ಬರು ಮಂತ್ರಾಲೋಚನೆಯನ್ನು ನಡೆಸಿಕೊಂ ಡರು. ''ಆಹಾ ! ಈ ನೀಚನೇನೋ ಪ್ರತಿದಿನವೂ ಚಾತುರ್ಯದಿಂದಲೇ ಹಣವ ನ್ನು ತಂದು ಸೇರಿಸುತ್ತಿರುವನು! ಹೀಗಿರುವಾಗ ಇವನು ಎಂಬಾದರೂ ಒಮ್ಮೆ ರಾಜಭಟರ ಕೈಗೆ ಸಿಕ್ಕಿ ಬಿಳುವುದರಲ್ಲಿ ಸಂದೇಹವಿಲ್ಲ. ರಾಜಭಟರ ಕೈಗೆ ಸಿಕ್ಕಿದಮೇಲೆ ಇವನಿಗೆ ಮರಣದಂಡನೆಯಲ್ಲದೆ ಬೇರೆಯಿಲ್ಲ ! ಇವನು ಇದು ವರೆಗೆ ತಂದು ಸೇರಿಸಿರುವ ದ್ರವ್ಯವನ್ನೂ ಅವರೇ ಕೈಸೇರಿಸಿಕೊಂಡುಬಿಡು ವುದರಲ್ಲಿ ಸಂದೇಹವಿಲ್ಲ. ಆಗ ನಮಗೆ ಈ ಹಣವೂ ಕೈತಪ್ಪಿಹೋಗುವುದು. ನಾವು ನಿರ್ಗತಿಕರಾಗಿ ಅಲೆಯಬೇಕಾಗುವುದು. ಆದುದರಿಂದ ಈ ಅನರ್ಥಗ ಳೆಲ್ಲವೂ ಉಂಟಾಗುವುದಕ್ಕೆವೊದಲು, ನಾವೇ ಇವನನ್ನೇಕೆ ಕೊಂದುಬಿಡ ಬಾರದು? ಏನಾದರೂ ಉಪಾಯದಿಂದ ನಾವೆಲ್ಲರೂ ಸೇರಿ ಇವನನ್ನು ಕೊಂ ದುಬಿಟ್ಟರೆ, ನಮ್ಮಲ್ಲಿರುವ ಹಣವನ್ನು ಸಂಗ್ರಹಿಸಿಕೊಂಡು ನಾವು ಬೇರೆಲ್ಲಿ ಯಾದರೂ ಕಣ್ಮರೆಯಾಗಿ ಹೊರಟುಹೋಗಬಹುದು. ಆಗ ಹಣವಾದರೂ ನನಗೆ ದಕ್ಕಬಹುದಲ್ಲವೆ ? " ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು

ಅದರಂತೆಯೇ ನಿಶ್ಚಯಿಸಿಬಿಟ್ಟರು. ರಾತ್ರಿಯಲ್ಲಿ ದುಂಧುಕಾರಿಯು ಮನೆಗೆ ಬಂದಮೇಲೆ ಅವನಿಗೆ ಬೇಕಾದ ಉಪಚಾರಗಳೆಲ್ಲವನ್ನೂ ನಡೆಸಿ ಸುಖವಾಗಿ ಮಲಗಿಸಿಬಿಟ್ಟರು. ಅವನು ಗಾಢನಿದ್ರೆಯಲ್ಲಿರುವ ಸಮಯದಲ್ಲಿ,ಆ ಐದು ಮಂದಿವೇಶ್ಯೆಯರೂ ಏಕಕಾಲದಲ್ಲಿ ಅವನಮೇಲೆ ಬಿದ್ದು, ಅವನ ಬಾಯಿಗೆ ಬಟ್ಟೆಯನ್ನು ತುರುಕಿ, ಕೈಕಾಲುಗಳನ್ನು ಹಗ್ಗಗಳಿಂದ ಬಿಗಿದು, ಅವನ ಕೊರಲಿಗೆ ನೇಣನ್ನು ಬೀರಿ ಎಳೆಯುವುದಕ್ಕೆ ತೊಡಗಿದರು- ಇಷ್ಟಾದರೂ ಅವನು ಸಾಯಲಿಲ್ಲ. ಈ ಪ್ರಯತ್ನವು ವಿಫಲವಾದುದರಿಂದ ಅವರೆಲ್ಲರಿಗೂ ಭಯವು ಹುಟ್ಟಿತು. ಹೇಗಾದರೂ ಅವನನ್ನು ಕೊಂದುಬಿಡಬೇಕೆಂದೇ ನಿಶ್ಚಯಿಸಿ, ಕೆಲವರು ಉರಿಯುವ ಕೊಳ್ಳಿಯನ್ನು ತಂದು ಅವನ ಬಾಯಿಗೆ ತುರುಕಿದರು. ಕೊನೆಗೆ ಅವನು ಆ ಹಿಂಸೆಯನ್ನು ತಡೆಯಲಾರದೆ ಸತ್ತನು ಸಾಹಸಿಕೆಯರಾದ ಆ ಐದುಮಂದಿ ಸೂಳೆಯರೂ ಸೇರಿ, ಆ ನಿಸೇಶನದಲ್ಲಿಯೇ ಒಂದು ಹಳ್ಳವನ್ನು ತೋಡಿ, ಆ ರಾತ್ರಿಯೇ ಅದರಲ್ಲಿ ಆ ಹೆಣವನ್ನು ಹೂಳಿಬಿಟ್ಟರು. ಇಷ್ಟಾದರೂ ಈ ರಹಸ್ಯವು ಆ ಊರಿನಲ್ಲಿ ಬೇರೆ ಯಾರಿಗೂ ತಿಳಿಯಲಿಲ್ಲ. ಯಾರಾದರೂ ಬಂದು ದುಂಧುಕಾರಿಯಿಲ್ಲಿರುವನೆಂದು ಕೇಳಿದಾಗ, ಆ ವೇಶ್ಯೆಯರು ದ್ರವ್ಯಾರ್ಜನೆಗಾಗಿ ಎಲ್ಲಿಯೋ ದೇಶಾಂತರಕ್ಕೆ ಹೋಗಿರುವನೆಂದೂ, ಕೆಲವುದಿನಗಳಲ್ಲಿಯೇ ಹಿಂತಿರುಗಿ ಬರಬಹುದೆಂದೂ ತಿಳಿಸುತ್ತ ಬಂದರು. ನಾರದಾ ! ವೇಶ್ಯಾಸ್ತ್ರೀಯರ ಕ್ರೂರಸ್ವಭಾವವನ್ನೂ, ಅವರ ಸಾಹಸವನ್ನೂ ನೋಡಿದೆಯಾ ? ಮುಖ್ಯವಾಗಿ ಲೋಕದಲ್ಲಿ ಮನುಷ್ಯನು ಬುದ್ಧಿಶಾಲಿಯಾಗಿದ್ದರೆ ಸ್ತ್ರೀಯರನ್ನು ಮಾತ್ರ ಎಂದೆಂದಿಗೂ ನಂಬಬಾರದು. ಅವರನ್ನು ನಂಬಿದವನು ಅಪಾರವಾದ ದುಃಖಕ್ಕೆ ಗುರಿಯಾಗದಿರಲಾರನು! ಸ್ತ್ರೀಯರು ಕಾಮುಕರನ್ನು ಕಂಡರೆ ಅವರನ್ನು ಮತ್ತಷ್ಟು ಮರುಳುಮಾಡುವುದಕ್ಕಾಗಿ ಮೇಲೆಮೇಲೆ ಪ್ರಿಯವಾಕ್ಯಗಳನ್ನು ನುಡಿಯುತ್ತ, ಮಾತಿನಲ್ಲಿ ಅಮೃತವನ್ನೇ ಸುರಿಸುತ್ತಿರುವರು. ಅವರ ಹೃದಯವನ್ನು ಪರೀಕ್ಷಿಸಿದಪಕ್ಷದಲ್ಲಿ ಅದು ಅತೀತೀಕ್ಷ್ಣವಾದ ಕತ್ತಿಯ ಮೊನೆಯಲ್ಲದೆ ಬೇರೆಯಲ್ಲ! ಹೆಂಗಸರ ಪ್ರೇಮವೆಂಬುದು ಯಾರಲ್ಲಿಯೂ ನಿಜವಾದುದಲ್ಲ! ಈ ವಿಷಯವು ಹಾಗಿರಲಿ! ಮುಂದಿನ ವೃತ್ತಾಂತವನ್ನು ಹೇಳುವೆನು ಕೇಳು! ಆಮೇಲೆ ಆ ಐದು

ಮಂದಿವೇಶ್ಯೆಯರೂ ತನ್ನಲ್ಲಿದ್ದ ಹಣವನ್ನು ಹಂಚಿಕೊಂಡು, ಯಾರಿಗೂ ತಿಳಿಯದಂತೆ ದೇಶಭ್ರಷ್ಟರಾಗಿ ಹೊರಟುಹೋದರು. ಇತ್ತಲಾಗಿ ದುಂಧುಕಾರಿಗೆ ಅವನ ಕ್ರೂರಕೃತ್ಯಗಳಿಗೆ ಫಲರೂಪವಾಗಿ ಪಿಶಾಚಜನ್ಮವುಂಟಾಯಿತು. ಇವನು ಗಾಳಿಯಂತೆ ಅನೃಶ್ಯನಾಗಿ ಕಾಡುಕಾಡಾಗಿ ತಿರುಗುತ್ತ, ಮಳೆಗಾಳಿಗೆ ಸಿಕ್ಕಿ, ಬಿಸಿಲಲ್ಲಿ ಬೆಂದು, ಹಸಿವುತಾಯಾರಿಕೆಗಳಿಂದ ಬಹಳವಾಗಿ ಬಳಲಿ, ಅಹೋರಾತ್ರವೂ ಸಂಕಟದಿಂದ ಕೊರಗುತಿದ್ದನು. ಕೇಳುವವರು ದಿಕ್ಕಿಲ್ಲದೆ, ಅಗಾಗ ‘‘ಅಯ್ಯೊ ದೈವವೆ!’’ ಎಂದು ಕೂಗಿಕೂಗಿ ಹೊರಳಿಡುತಿದ್ದನು. ಕೆಲವು ಕಾಲದಮೇಲೆ ಅತ್ತಲಾಗಿ ತೀರ್ಥಯಾತ್ರೆಯಲ್ಲಿದ್ದ ಗೋಕರ್ಣನಿಗೆ ಈ ದುಂಧುಕಾರಿಯು ಮೃತನಾದನೆಂಬ ವೃತ್ತಾಂತವು ಕರ್ಣಾಕರ್ಣಿಕೆಯಾಗಿ ಕಿವಿಗೆ ಬಿದ್ದಿತು. ಬೇರೆ ಯಾರೂ ದಿಕ್ಕಿಲ್ಲದುದರಿಂದ ಇವನು ಅನಾಥಪ್ರೇತವಾಗಿ ಸತ್ತಿರುವನೆಂದೆಣಿಸಿ, ಗೋಕರ್ಣನು, ತಮನಿಗೆ ತಾನೇ ತನ್ನ ಕೈಯಿಂದ ಗಯಾಶ್ರಾದ್ಧವನ್ನು ನಡೆಸಿದನು. ಇದಲ್ಲದೆ ತಾನು ಹೋದ ಪುಣ್ಯತೀರ್ಥಗಳೊಳಗೆಲ್ಲಾ ಇವನಿಗೆ ಶ್ರಾದ್ಧಕಾರ್ಯವನ್ನು ನಡೆಸುತ್ತ ಬಂದನು. ಹೀಗೆ ಗೋಕರ್ಣನು ತೀರ್ಥಯಾತ್ರೆಯನ್ನು ಮುಗಿಸಿಕೊಂಡು,ಕೊನೆಗೆ ತನ್ನ ಪಟ್ಟಣಕ್ಕೆ ಹಿಂತಿರುಗಿದನು. ಬೀಡಿಯಲ್ಲಿ ಯಾರ ಕಣ್ಣಿಗೂ ಕಾಣಿಸದಂತೆ ರಾತ್ರಿಯಲ್ಲಿ ತನ್ನ ಗ್ರಾಮದೊಳಗೆ ಪ್ರವೇಶಿಸಿ, ಪೊದಲು ದುಂಧುಕಾರಿಯು ವಾಸಮಾಡುತ್ತಿದ್ದ ಮನೆಗೆ ಬಂದು ಅಂಗಳದಲ್ಲಿ ಮಲಗಿಬಿಟ್ಟನು. ಹೀಗೆ ಮಲಗಿರುವಾಗ ಇವನಿಗೆ ಅರ್ಧರಾತ್ರಿಯಲ್ಲಿ ಮುಖಾಭಯಂಕರವಾದ ಒಂದು ಪಿಶಾಚಸ್ವರೂಪವು ಕಣ್ಣಿಗೆ ಕೋಚರಿಸಿತು. ಆ ಭೂತವಾದರೋ ಇದ್ದಲ್ಕಿದ್ದಹಾಗೆಯೇ ಒಮ್ಮೆ ಬೆಗರಿನಂತೆಯೂ, ಒಮ್ಮೆ ಅನೆಯಂತೆಯೂ, ಮತ್ತೊಮ್ಮೆ ಎಮ್ಮೆಯಂತೆಯೂ ಕಾಣಿಸಿಕೊಳ್ಳುವುದು ! ಇನ್ನೊಮ್ಮೆ ಇಂಬಾಗ್ನಿ ದೇವತೆಗಳಂತೆ ಕಣ್ಣಿಗೆ ತೋರುವುದು! ನೋಡುತ್ತಿರುವಾಗಲೇ ತಿರುಗಿ ಪುರುಷಸ್ವರೂಪದಿಂದ ನಿಲ್ಲುವುದು! ಈ ಭಯಂಕರಸ್ವರೂಪವನ್ನು ನೋಡಿಯೂಕೂಡ ಗೋಕರ್ಣನು ಧೈರ್ಯಗುಂದದೆ, ಮನಸ್ಸಿನಲ್ಲಿ ‘‘ಆಹಾ! ಯಾವನೋ ತನ್ನ ಪಾಪಕರ್ಮದಿಂದ ಈ ದುರ್ಗತಿಯನ್ನು ಹೊಂದಿರುವನು. ಇರಲಿ! ವಿಚಾರಿಸಿನೋಡುವೆನು.”ಎಂದು ನಿಶ್ಚಯಿಸಿ,ಆ ಭೂತವನ್ನು ನೋಡಿ ‘‘ಎಲ್ಲೆ!ನೀನು ಯಾರು?

ನಿನಗೆ ಇಂತಹ ಕ್ರೂರಸ್ವರೂಪವುಂಟಾಗುವುದಕ್ಕೆ ಕಾರಣವೇನು ? ನೀನು ಪ್ರೇತವೆ? ಪಿಶಾಚವೆ?ಬ್ರಹ್ಮರಾಕ್ಷಸನೆ?ನಿಜವನ್ನು ಹೇಳು"ಎಂದನು. ಈ ಮಾತನ್ನು ಕೇಳಿದೊಡನೆ ಆ ವ್ಯಕ್ತಿಯು ಗಟ್ಟಿಯಾಗಿ ರೋದಿಸುವುದಕ್ಕೆ ತೊಡಗಿತು. ಬಾಯಿಂದ ಮಾತುಗಳನ್ನಾಡಲಾರದೆ ಕೆಲವು ಸನ್ನೆಗಳನ್ನು ಮಾಡಿತು. ಇದನ್ನು ನೋಡಿ ಗೋಕರ್ಣನು ಕೈಗೆ ಸ್ವಲ್ಪನೀರನ್ನು ತೆಗೆದುಕೊಂಡು, ಆ ದನ್ನು ಮಂತ್ರಿಸಿ,ಆಭೂತದಮೇಲೆ ಪ್ರೋಕ್ಷಿಸಿದನು. ಇದರ ಪ್ರಭಾವದಿಂದ ಆ ಭೂತಕ್ಕೆ ಮಾತಾಡುವ ಶಕ್ತಿಯುಂಟಾಯಿತು. ಒಡನೆಯೇ ಆ ಭೂತವು ತನ್ನ ಪೂರ್ವವೃತ್ತಾಂತವನ್ನು ಹೇಳತೊಡಗಿತು. ''ಗೋಕರ್ಣಾರ್ಯ ! ನಾನು ನಿನ್ನಣ್ಣನಾದ ದುಂಧುಕಾರಿಯು! ನನ್ನ ದುಷ್ಕರ್ಮದಿಂದ ನನಗೆ ಈ ದುರವಸ್ಥೆಯುಂಟಾಯಿತು. ನಾನು ನಡೆಸಿದ ಪಾಪಕೃತ್ಯಗಳನ್ನು ಅಷ್ಟಿಷ್ಟೆಂದು ಹೇಳಾಲಾರೆನು. ಜನರೆಲ್ಲರಿಗೂ ಕಂಟಕಪ್ರಾಯನಾಗಿದ್ದೆನು. ಕೊನೆಗೆ ನಾನು ನಂಬಿದ್ದ ಸ್ತ್ರೀಯಿಂದಲೇ ನನಗೆ ಈ ಮರಣವುಂಟಾಯಿತು. ಈ ಪ್ರೇತರೂಪದಿಂದ ಗಾಳಿಯನ್ನು ಕುಡಿದು ಜೀವಿಸುತ್ತಿರುವೆನು. ಎಲ್ಲೆ ಕೃಪಾಸಮುದ್ರನೆ! ನೀನು ಈ ಸೆರೆಯಿಂದ ನನ್ನನ್ನು ಬಿಡಿಸಿ ಉದ್ಧರಿಸಬೇಕು" ಎಂಬತು. ಇದನ್ನು ಕೇಳಿ ಗೋಕರ್ಣನು ''ಅಹಾ ! ಇದೇನಾಶ್ಚರ್ಯವು ? ನಿನಗಾಗಿ ನಾನು ಶಾಸ್ತ್ರೋಕ್ತವಾಗಿ ಗಯಾಶ್ರಾದ್ಧವನ್ನು ನಡೆಸಿಬಂದೆನು. ಆದರಿಂದಲೂ ನಿನಗೆ ವಿಮೋಚನವಾಗಲಿಲ್ಲವೆ ? ಗಯಾಶ್ರಾದ್ಧದಿಂದಲೇ ಮುಕ್ತಿಯಿಲ್ಲದಮೇಲೆ ನನಗೆ ಬೇರೆ ಯಾವ ಉಪಾಯವೂ ತೋರಲಿಲ್ಲವು. ಎಲ್ಲೆ ಪ್ರೇತವೆ ! ಮುಂದೆ ಇದಕ್ಕಾಗಿ ಮಾಡಬೇಕಾದ ಕಾರ್ಯವನ್ನು ನೀನೇ ತಿಳಿಸಬೇಕು" ಎಂದನು. ಅದಕ್ಕಾಪ್ರೇತವು ''ಗೋಕರ್ಣಾರ್ಯ ! ಇಂತಹ ಗಯಾಶ್ರಾದ್ಧವು ಒಂದುಮಾತ್ರವಲ್ಲ ಅಂತಹ ನೂರುಶ್ರಾದ್ಧಗಳನ್ನು ಮಾಡಿದರೂ ನನ್ನ ಪಾಪವು ವಿಮೋಚನಹೊಂದುವಹಾಗಿಲ್ಲ!ನನ್ನ ಜನ್ಮಾವಧಿ ನಾನು ಅಷ್ಟೊಂದು ಕ್ರೂರಕರ್ಮಗಳನ್ನು ನಡೆಸಿರುವೆನು ! ಇದಕ್ಕಾಗಿ ನೀನು ಯಾವುದಾದರೂ ಬೇರೆ ಉಪಾಯವನ್ನು ಯೋಚಿಸಬೇಕು" ಎಂದಿತು. ಈ ಮಾತನ್ನು ಕೇಳಿ ಗೋಕರ್ಣನು ವಿಸ್ಮಿತನಾಗಿ ''ಎಲೆ ಭೂತವೆ ! ಹಾಗಿದ್ದ ಮೇಲೆ,ಆ ಕಾರ್ಯವು ಈಗ ನನ್ನಿಂದ ಸಾಧ್ಯವಲ್ಲ! ಆದರೂ ಚಿಂತೆಯಿಲ್ಲ! ನೀನು

ಭಯಪಡಬೇಡ! ಇದುವರೆಗಿದ್ದಂತೆಯೇ ನೀನು ಇನ್ನೂ ಸ್ವಲ್ಪಕಾಲದವರೆಗೆ ಸಹಿಸಿಕೊಂಡಿರು ! ನಿನ್ನ ಮುಕ್ತಿಗೆ ಸಾಧಕವಾದ ಮಾರ್ಗವನ್ನು ನಾನು ಬೇರೆ ಯಾರಿಂದಾದರೂ ವಿಚಾರಿಸಿ, ಅದರಂತೆ ಪ್ರಯತ್ನಿಸುವೆನು. ಇನ್ನು ನಿನ್ನ ನಿಜಸ್ಥಾನಕ್ಕೆ ನೀನು ಹೋಗು!" ಎಂದನು. ಈ ಮಾತನ್ನು ಕೇಳಿ ದುಂಧುಕಾರಿಯು, ಕಣ್ಮರೆಯಾಗಿ ತನ್ನ ಸ್ಥಾನಕ್ಕೆ ಹೊರಟುಹೋದನು. ಇತ್ತಲಾಗಿ ಗೋಕರ್ಣನು ಪಾಪಿಗೆಯಲ್ಲಿ ಮಲಗಿದ್ದಂತೆಯೇ, ಮುಂದೆ ನೂಡಬೇಕಾದ ಉಪಾಯವೇನೆಂದು ಆ ರಾತ್ರಿಯೆಲ್ಲವೂ ಚಿಂತಿಸುತಿದ್ದನು. ಯಾವುದೊಂದು ಮಾರ್ಗವೂ ಅವನ ಮನಸ್ಸಿಗೆ ತೋರಲಿಲ್ಲ ! ಬೆಳಗಾದಮೇಲೆ ಆ ಗ್ರಾಮಸ್ಥರ ಸೇಕರು ಗೋಕರ್ಣನ ಬಳಿಗೆ ಬಂದು, ಪ್ರೀತಿಯಿಂದ ಅವನ ಯೋಗಕ್ಷೇಮಗಳನ್ನು ವಿಚಾರಿಸುತಿದ್ದರು. ಗೋಕರ್ಣನು ಅವರೆಲ್ಲರಿಗೂ ರಾತ್ರಿಯಲ್ಲಿ ನಡೆದ ವೃತ್ತಾಂತಗಳನ್ನು ತಿಳಿಸುತ್ತ, ಮುಂದೆ ದುಂಧುಕಾರಿಗೆ ಪಿಶಾಚಜನ್ಮವನ್ನು ಬಿಡಿಸುವುದಕ್ಕೆ ಯಾತಾದರೂ ತಕ್ಕ ಉಪಾಯವನ್ನು ಹೇಳಬೇಕೆಂದು ಕೇಳುತಿದ್ದನು. ಎಷ್ಟೋಮಂದಿ ವಿದ್ವಾಂಸರೂ, ಜ್ಞಾನಿಗಳೂ, ಯೋಗಿಗಳೂ, ಬ್ರಹ್ಮವಾದಿಗಳೂ ಈ ವಿಚಾರವನ್ನು ಕುರಿತು ಅನೇಕಶಾಸ್ತ್ರಗಳನ್ನು ಪರಿಶೀಲಿಸಿನೋಡುತಿದ್ದರು. ಯಾರಿಗೂ ಯಾವುದೊಂದು ಮಾರ್ಗವೂ ತೋರಲಿಲ್ಲ. ಅವರಲ್ಲಿ ಕೆಲವರು ಈ ಪಿಶಾಚಜನ್ಮವಿಮೋಚನಕ್ಕೆ ಸೂರ್ಯಾನುಗ್ರಹವನ್ನು ಸಂಪಾದಿಸಿ, ಆ ಸೂರ್ಯದೇವನ ಆಜ್ಞೆಯಂತೆ ನಡೆಸಬೇಕಲ್ಲದೆ ಬೇರೆಮಾರ್ಗವಿಲ್ಲವೆಂದು ನಿಶ್ಚಯಿಸಿ ತಿಳಿಸಿದರು. ಆಗ ಗೋಕರ್ಣನು ತನ್ನ ಯೋಗಬಲದಿಂದ ಸೂರ್ಯನ ಗತಿಯನ್ನು ತಡೆದು ,,ಓ ಸರ್ವಜಗತ್ಸಾಕ್ಷಿಯಾದ ಸೂರ್ಯದೇವನೆ ! ನಿನಗೆ ನಮಸ್ಕಾರವು! ನೀನು ನನ್ನಲ್ಲಿ ಅನುಗ್ರಹವಿಟ್ಟು ದುಂಧುಕಾರಿಗೆ ಮುಕ್ತಿಹೇತುವಾದ ಮಾರ್ಗವನ್ನು ತಿಳಿಸಬೇಕು" ಎಂದು ಬಾರಿಬಾರಿಗೂ ಪ್ರಾರ್ಥಿಸಿದನು. ಆಗ ಸೂರ್ಯನು, ದೂರದಿಂದಲೇ ಗೋಕರ್ಣನನ್ನು ನೋಡಿ ,,ಗೋಕರ್ಣಾ ! ಸಪ್ತಾಹಶ್ರವಣವೆಂಬ ವಿಧಿಯಿಂದ ಶ್ರೀಭಾಗವತವನ್ನು ಕೇಳುವುದು ಹೊರತು, ಈ ಪಿಶಾಚಜನ್ಮವಿಮೋಚನಕ್ಕೆ ಬೇರೆ ಮಾರ್ಗವಿಲ್ಲವೆಂದು ತಿಳಿಸಿದನು. ಅಲ್ಲಿದ್ದವರೆಲ್ಲರೂ ಧರ್ಮರೂಪವಾದ ಈ ಸೂರ್ಯನ ವಾಕ್ಯವನ್ನು ಕೇಳಿ, ಗೋಕರ್ಣನನ್ನು ಕುರಿತು, ,,ಗೋಕರ್ಣಾ! ಇದು ಬಹಳ ಸುಲಭವಾದ ಕಾ

ರ್ಯವು. ಹೇಗಾದರೂ ಪ್ರಯತ್ನಿಸಿ ನೀನು ಈ ಕಾರ್ಯವನ್ನು ಸಾಧಿಸಬೇಕು" ಎಂದರು. ಕೋಕರ್ಣನೂ ಅದರಂತೆಯೇ ನಡೆಸುವುದಾಗಿ ನಿಶ್ಚಯಿಸಿ ಕೊಂಡು ಸಪ್ತಾಹಶ್ರವಣವಿಧಿಯಿಂದ ಶ್ರೀಭಾಗವತವನ್ನು ಪಠನಮಾಡು ವುದಕ್ಕೆ ತೊಡಗಿದನು. ಈ ವೃತ್ತಾಂತವನ್ನು ಕೇಳಿದೊಡನೆ, ದೇಶದೇಶ ಗಳಿಂದಲೂ, ಗ್ರಾಮಗ್ರಾಮಗಳಿಂದಲೂ, ಅನೇಕಜನರು ಬಂದು ಸೇರಿದರು. ಕುಂಟರು, ಕುರುಡರು, ಮಂತಾದ ಅಂಗಹೀನರೆಲ್ಲರೂ ಬಂದು ತಮ್ಮ ತಮ್ಮ ಪೂರ್ವಾರ್ಜಿತಪಾಪವಿಮೋಚನೆಗಾಗಿ ಕೇಳುವುದಕ್ಕೆ ಕುಳಿತರು. ಬಹಳ ವಾದ ಜನಸಮುದಾಯವು ಸೇರಿತು. ಈ ಗೋಕರ್ಣನು ಶಾಸ್ತ್ರೋಕ್ತವಿಧಿ ಯಿಂದ ಭಾಗವತಕಥಾನುಸಂಧಾನಮಾಡುವುದಕ್ಕಾಗಿ ಶುದ್ಧವಾದ ಆಸನ ದಮೇಲೆ ಕುಳಿತನು. ಇವನು ಕಥಾರಂಭವನ್ನು ಮಾಡುವಷ್ಟರಲ್ಲಿಯೇ ಪ್ರೇತರೂಪಿಯಾದ ಆ ದುಂಧುಕಾರಿಯೂಕೂಡ, ಅಲ್ಲಲ್ಲಿ ಸುತ್ತಿಬಂದು ಆಕ ಸ್ಮಾತ್ತಾಗಿ ಇದೇಸ್ಥಳಕ್ಕೆ ಬಂದು ಸೇರಿದನು. ತಲ್ಲೆ ಕಣ್ಮಿರೆಯಲ್ಲಿ ಕುಳಿತು ತಾನೂ ಆ ಕಥೆಯನ್ನು ಕೇಳುವುದಕ್ಕೆ ಅನುಕೂಲವಾದ ಸ್ಥಳವಾವುದೆಂದು ಸುತ್ತಲೂ ಹುಡುಕುತ್ತ ಬಂದು, ಬಂದು ಕಡೆಯಲ್ಲಿ ಬಂದು ದೊಡ್ಡ ಬಿದಿರುಮೆಳೆಯನ್ನು ಕಂಡನು. ಅದರಬುಡದ ಬಳಿಯಲ್ಲಿಗಿಣ್ಣುಗಳಂತೆ ಕೂಡಿದ ಬಂದು ದೊಡ್ಡ ಬಿದಿರಿನ ಬುಡದಲ್ಲಿ,ಬಲವಾದೊಂದು ರಂಧ್ರವು ಕಾಣಿಸಿತು ಅದು ಬಹಳ ರಹಸ್ಯವಾದ ಸ್ಥಳವಾಗಿದ್ದುದರಿಂದ, ಈ ಪ್ರೇತವು ಸೂಕ್ಷ್ಮ ರೂಪವನ್ನುಹೊಂದಿ, ಆ ರಂಧ್ರದಲ್ಲಿ ಪ್ರವೇಶಿಸಿ ಕಥಾಶ್ರವಣಕ್ಕಾಗಿ ಕುಳಿತಿತ್ತು. ಯಾವಾಗಲೂ ಸಂಚಾರಸ್ವಭಾವವುಳ್ಳ ಗಾಳಿಯೆ ಸ್ವರೂಪ ವಿಂದಿದ್ದು ಈ ಪ್ರೇತಕ್ಕೆ,ನಿಶ್ಚಲನಾಗಿ ಕುಳಿತುಕೇಳುವುದಕ್ಕೆ ಅದು ಅನುಕೂಲ ವಾದ ಸ್ಥಲವಾಯಿತು. ಇಷ್ಟರಲ್ಲಿ ಇತ್ತಲಾಗಿ ಗೋಕರ್ಣನು ತಾನು ಕಥಾ ರಂಭವನ್ನು ಮಾಡುವುದಕ್ಕೆ ಮೊದಲು, ವಿಷ್ಣುಭಕ್ತನಾಗಿಯೂ, ಶುದ್ಧಸಂ ಗಿಯೂ ಇರುವ ಬಾಹ್ಮಣನೊಬ್ಬನನ್ನು ತನ್ನ ಮುಂದೆ ಮುಖ್ಯಶ್ರಾವಕನ ನ್ನಾಗಿಟ್ಟುಕೊಂಡು, ಶ್ರೀಭಾಗವತದ ಕಥೆಯನ್ನು ಪ್ರಥಮಸ್ಕಂಧದಿಂದಾ ರಂಭಿಸಿ ಹೇಳತೊಡಗಿದನು. ಹಗಲೆಲ್ಲವೂ ಕಥಾಶ್ರವಣವನ್ನುಮಾಡಿ, ಆ ದಿನದ ಕಥಾಭಾಗವನ್ನು ಮುಗಿಸುವಷ್ಟರಲ್ಲಿ, ಅಕಸ್ಮಾತ್ತಾಗಿ ಸಮೀಪದಲ್ಲಿದ್ದ

ಆ ದೊಡ್ಡ ಬಿದಿರುಮೆಳೆಯಿಂದ ಮಹಾಧ್ವನಿಯೊಂದು ಹೊರಟಿತು ! ಜನರೆಲ್ಲರೂ ಆಶ್ಚರ್ಯದಿಂದ ನೋಡುತಿದ್ದಹಾಗೆಯೇ ಆ ಮೆಳೆಯನಡುವೆ ಏಳುಗಿಣ್ಣುಗಳುಳ್ಳ ಒಂದು ಬಿದಿರಿನಲ್ಲಿ, ಕೆಳಗಿನ ಗಿಣ್ಣು ಥಟ್ಟನೆ ಸೀಳಿಹೋಯಿತು. ನಿಜಸ್ಥಿತಿಯೇನೆಂದು ಯಾರಿಗೂ ತಿಳಿಯಲಿಲ್ಲ ! ಹಾಗೆಯೇ ಮರುದಿನವೂ ಗೋಕರ್ಣನು ಮುಂದಿನ ಕಥೆಯನ್ನಾರಂಭಿಸಿದನು. ಸಾಯಂಕಾಲದಲ್ಲಿ ಆ ದಿನದ ಕಥೆಯನ್ನು ಮುಗಿಸುತ್ತಿರುವಾಗ ಮತ್ತೊಂದು ಗಿಣ್ಣು ಭಿನ್ನವಾಯಿತು ಮೂರನೆಯ ದಿನದಲ್ಲಿಯೂ ಹಾಗೆಯೇ ಮೂರನೆಯ ಗಿಣ್ಣು ಭೇದಿಸಿತು. ಹೀಗೆ ಏಳು ದಿನಗಳೊಳಗಾಗಿ ಆ ಬಿದಿರಿನಲ್ಲಿದ್ದ ಏಳು ಗಿಣ್ಣುಗಳೂ ಒಂದೊಂದಾಗಿ ಒಡೆಯುತ್ತ ಬಂದುವು. ಈ ಏಳುದಿನಗಳೊಳಗಾಗಿ ಗೋಕರ್ಣನು ಶ್ರೀಭಾಗವತದ ಹನ್ನೆರಡುಸ್ಕಂಧಗಳನ್ನೂ ಮುಗಿಸಿದನು ಈ ಕಥೆಯು ಮುಗಿಯುವಷ್ಟರಲ್ಲಿ ಆ ಬಿದಿರಿನಲ್ಲಿ ಗಾಳಿಯ ರೂಪದಿಂದ ಸೇರಿಕೊಂಡಿದ್ದ ದುಂಧುಕಾರಿಗೆ, ಪಿಶಾಚಜನ್ಮವು ಬಿಟ್ಟು ಹೋಗಿ, ಒಡನೆಯೇ ಅವನಿಗೆ ಒಂದು ದಿವ್ಯವಾದ ರೂಪವುಂಟಾಯಿತು. ಕೊರಲಿನಲ್ಲಿ ತುಲಸೀಮಾಲಿಕೆಯನ್ನೂ, ನಡುವಿನಲ್ಲಿ ಪೀತಾಂಬರವನ್ನೂ ಧರಿಸಿ, ಮೇಘದಂತೆ ಶ್ಯಾಮಲವಾದ ದೇಹಕಾಂತಿಯಿಂದಲೂ, ಕಿರೀಟಕುಂಡಲಾದಿಗಳಿಂದಲೂ ಅಲಂಕೃತವಾದ ಒಂದು ದಿವ್ಯಾಕೃತಿಯು ಆ ಬಿದಿರುಮೆಳೆಯಿಂದ ಹೊರಗೆ ಬಂದು,ಗೋಕರ್ಣನಿಗೆ ನಮಸ್ಕರಿಸಿ, ''ಎಲೆ ಮಹಾತ್ಮನೆ; ನಿನ್ನ ಕೃಪಾಬಲದಿಂದ ನನಗೆ ಪಿಶಾಚಜನ್ಮವು ನಿವೃತ್ತವಾಯಿತು ! ಲೋಕದಲ್ಲಿ ಭಾಗವತವೊಂದೇ ಪರಮಧನ್ಯವಾದುದು! ಸಮಸ್ತಪಾಪಗಳನ್ನೂ ನೀಗಿಸತಕ್ಕುದು. ಪಿಶಾಚಾದಿಕ್ರೂರಜನ್ಮಗಳನ್ನೂ ವಿಮೋಚನಮಾಡುವುದು. ಅದರಲ್ಲಿಯೂ ಸಪ್ತಾಹಶ್ರವಣವೆಂಬ ವಿಧಿಗೆ ಸಮಾನವಾದ ಧರ್ಮವು ಬೇರೊಂದಿಲ್ಲ! ಇದೇ ಮುಕ್ತಿಗೆ ಸರ್ವೋತ್ತಮವಾದ ಸಾಧನವು. ಇದಕ್ಕೆ ಸಮಸ್ತಪಾಪಗಳೂ ನಡುಗುವುವು! ಎಂತಹ ಕ್ರೂರಪಾತಕವಾದರೂ ಅಗ್ನಿಯಲ್ಲಿ ಹಾಕಿದ ಸಮಿತ್ತುಗಳಂತೆ ಇದರಿಂದ ಕ್ಷಣಮಾತ್ರದಲ್ಲಿ ದಗ್ಧವಾಗುವುದು. ಈ ಕಾಲದಲ್ಲಿ, ಈ ಲೋಕದಲ್ಲಿ, ಒಂದುಮಾತ್ರವಿರ್ಯಾದರೂ ಈ ಭಾಗವತಕಥೆಯನ್ನು ಕೇಳಿದವರ ಜನ್ಮವು ನಿರರ್ಥಕವು. ಕೇವಲನಶ್ವರವಾದ ಈ ಮನುಷ್ಯ

ದೇಹವು ಈ ಲೋಕದಲ್ಲಿರುವುದರೊಳಗಾಗಿ, ಶುಕಶಾಸ್ತ್ರರೂಪವಾದ ಈ ಭಗವತ್ಕಥೆಯನ್ನು ಕೇಳದಮೇಲೆ, ಆ ದೇಹವನ್ನು ಹೊತ್ತು ಫಲವೇನು ? ಈ ದೇಹವೆಂಬುದು ಮಲಮೂತ್ರಗಳೆಂಬ ದುರ್ಗಂಧವಸ್ತುಗಳನ್ನು ತುಂಬುವು ದಕ್ಕಾಗಿ, ಎಲುಬುಗಳೆಂಬ ಸ್ತಂಭಗಳನ್ನು ನಿಲ್ಲಿಸಿ, ನರಗಳೆಂಬ ಹಗ್ಗಗಳಿಂದ ಬಿಗಿದು, ರಕ್ತಮಾಂಸಗಳಿಂದ ಮೆತ್ತನೆಯನ್ನು ಹಾಕಿ, ಚರ್ಮದಿಂದ ಮುಚ್ಚಿ ಮಾಡಿದ ಒಂದು ಸಣ್ಣ ಮನೆಯೇಹೊರತು ಬೇರೆಯಲ್ಲ ! ಜರಾರೋಗಗಳೇ ಮುಂತಾದ ಸಮಸ್ತದುಃಖಗಳಿಗೂ ಈಡಾಗಿ,ಎಷ್ಟೆಷ್ಟು ತುಂಬಿದರೂ ತುಂಬದೆ, ಕ್ಷಣಕ್ಷಣಕ್ಕೂ ಕೊಳೆಯಿಂದಮಾತ್ರ ತುಂಬುತ್ತಿರುವ ಈ ಶರೀರವೆಂಬುದು, ಈಗಲೋ, ನಾಳೆಯೋ ಬಿದ್ದುಹೋಗತಕ್ಕುದಲ್ಲದೆ ಸ್ಥಿರವಾದುದಲ್ಲ. ತತ್ವಜ್ಞಾನಿಗಳು ಈ ದೇಹವೆಂಬುದಕ್ಕೆ ಕ್ರಿಮಿಗಳೆಂದೂ, ಕಶ್ಮಲವೆಂದೂ, ನಿಸ್ಸಾರವಾದ ಬೂದಿಯೆಂದೂ ನಾನಾಮಾಂತರವನ್ನಿಟ್ಟಿರುವರು. ಹಗಲಲ್ಲಿ ಚೆನ್ನಾಗಿ ಸಂಸ್ಕರಿಸಿ ಪಕ್ವಮಾಡಿದ ಅನ್ನವು, ರಾತ್ರಿಯಹೊತ್ತಿಗೆ ಹಳಸಿಹೋಗುವುದಲ್ಲವೆ? ಅಂತಹ ಅನ್ನರಸದಿಂದ ಪೋಷಿತವಾದ ಈ ದೇಹವು ಎಷ್ಟುದಿನಗಳವರೆಗೆ ನಿಲ್ಲಬಹುದು?ಎಲ್ಲೈಮಹಾತ್ಮನೆ! ಸಪ್ತಾಹಶ್ರವಣದಿಂದ ಶ್ರೀಕೃಷ್ಣನನ್ನು ಕರೆತಂದುಕಣ್ಣ ಮುಂದೆ ನಿಲ್ಲಿಸಬಹುದು. ಈ ಕಾಲದಲ್ಲಿ ದೋಷನಿವೃತ್ತಿಗೆ ಇದೊಂದೇ ಮಾರ್ಗವು. ನೀರಿನಲ್ಲಿ ಗುಳ್ಳೆಗಳಂತೆಯೂ,ಕಶ್ಮಲದಲ್ಲಿ ಕ್ರಿಮಿಗಳಂತೆಯೂ,ಮನುಷ್ಯರುಸಾಯವುದಕ್ಕಾಗಿಯೇ ಈಲೋಕದಲ್ಲಿ ಹುಟ್ಟುವರು, ಇಂತಹ ಸ್ಥಿತಿಯಲ್ಲಿಯೂ ಈ ಕಥಾಶ್ರವಣವನ್ನು ಮಾಡುವುದರಿಂದ ಫಲವೇನು? ಈ ಕಥಾಶ್ರವಣದಿಂದ ಕೇವಲಜಡವಾಗಿ ಬಿಗಿದ ಕಟ್ಟಿಗೆಯೂಕೂಡ ಭಿನ್ನವಾಗಿ,ಅದರ ಗ್ರಂಥಿಯು ಭೇದಿಸಿತಲ್ಲವೆ? ಇನ್ನು ಇದರಿಂದ ಅತಿಸೂಕ್ಷ್ಮವಾದ ಮನಸ್ಸಿನ ಗ್ರಂಥಿಯು ಬಿಟ್ಟುಹೋಗುವುದರಲ್ಲಿ ಸಂದೇಹವೇನಿದೆ ? ಸಪ್ತಾಹಶ್ರವಣವನ್ನು ಮಾಡಿದಪಕ್ಷದಲ್ಲಿ, ಮನಸ್ಸಿನ ಅಜ್ಞಾನವೆಂಬ ಗ್ರಂಥಿಯು ಭಿನ್ನವಾಗುವುದರೊಡನೆ, ಸಮಸ್ತಸಂದೇಹಗಳೂ ನೀಗಿಹೋಗುವುವು. ಕರ್ಮಗಳೆಲ್ಲವೂ ನಾಶಹೊಂದುವುವು. ಮುಕ್ತಿಯು ಕರಗತವಾಗುವುದು" ಎಂದನು. ಇಷ್ಟರಲ್ಲಿಯೇ ಅತ್ಯಂತತೇಜೋವಿಶಿಷ್ಟವಾದ ಒಂದು ದಿವ್ಯವಿಮಾನವು, ಅನೇಕ ವಿಷ್ಣುದೂತರೊಡನೆ ಆಕಾಶದಿಂದಿಳಿಯಿತು.

ಅಲ್ಲಿದ್ದವರೆಲ್ಲರೂ ನೋಡುತಿದ್ದಹಾಗೆಯೇ ಆ ವಿಷ್ಣು ದೂತರು, ದುಂಧುಲೀಪು ತ್ರನನ್ನು ಕೈಪಿಡಿದು ವಿಮಾನದಲ್ಲಿ ಕುಳ್ಳಿರಿಸಿಕೊಂಡರು. ಆ ವಿಮಾನವು ಒಡನೆಯೇ ಮೇಲೆಹಾರಿತು! ಇಷ್ಟರಲ್ಲಿ ಗೋಕರ್ಣನು, ಆಶ್ಚರ್ಯಪರವಶನಾಗಿ ಆ ಹರಿದಾಸರನ್ನು ನೋಡುತ್ತ, "ಎಲೈವಿಷ್ಣು ದೂತರೆ! ಏನೇನು? ಈ ಸತ್ಕಥಾ ಶ್ರವಣವೆಂಬ ಪುಣ್ಯಕ್ಕೆ ಇಲ್ಲಿನ ಸಭಾಜನವೆಲ್ಲವೂ ಸಮಭಾಗಿಗಳಾಗಿರುವಾಗ ಇವರೆಲ್ಲರನ್ನೂ ಬಿಟ್ಟು ದುಂಧುಕಾರಿಯೊಬ್ಬನನ್ನು ಮಾತ್ರ ನೀವು ಕರೆದು ಕೊಂಡು ಹೋಗುವುದಕ್ಕೆ ಕಾರಣವೇನು? ಹೀಗೆ ಫಲಭೇದವುಂಟಾದುದೇಕೆ?" ಎಂದನು. ಆದಕ್ಕಾವಿಷ್ಣು ದೂತರು, "ಗೋಕರ್ಣಾ! ಇವರೆಲ್ಲರೂ ಒಂದಾಗಿ ಕಥಾಶ್ರವಣ ಮಾಡಿದುದೇನೋ ನಿಜವು! ಆದರೆ ಶ್ರವಣಕ್ರಮದಲ್ಲಿ ಈ ದುಂಧುಕಾರಿಗೂ, ಇವರಿಗೂ ಬಹಳ ಭೇದವುಂಟು ಆದರಿಂದಲೇ ಈ ವಿಧವಾದ ಫಲಭೇದವುಂಟಾಯಿತು. ಇವರೆಲ್ಲರೂ ಒಂದಾಗಿ ಶ್ರವಣಮಾಡಿದವರಾದರೂ, ಇವನಂತೆ ಮನನಮಾಡಿದವರಲ್ಲ ಪ್ರೇತಸ್ವರೂಪನಾದ ಈ ದುಂಧುಕಾರಿಯು, ಏಳುರಾತ್ರಿಗಳವರೆಗೂ ನಿರ್ಜಲೋಪವಾಸದಿಂದಿದ್ದು ಕಥಾಶ್ರವಣಮಾಡಿದ. ಬಹಳದೃಢಮನಸ್ಸಿನಿಂದ ಅದನ್ನು ಮನನಮಾಡಿರುವನು. ಅದೃಢವಲ್ಲದ ಜ್ಞಾನವೂ, ಎಚ್ಚರವಿಲ್ಲದ ಶ್ರವಣಾಭ್ಯಾಸವೂ, ನಂಬಿಕೆಯಿಲ್ಲದ ಮಂತ್ರವೂ, ಸ್ಥಿರ ಮನಸ್ಸಿಲ್ಲದ ಜಪವೂ, ವಿಷ್ಣುಭಕ್ತರಿಲ್ಲದ ದೇಶವೂ, ಅಪಾತ್ರದಲ್ಲಿ ಮಾಡಿದ ದಾನವೂ, ಆಚಾರವಿಲ್ಲದ ಕುಲವೂ, ಕೇವಲ ಶೂನ್ಯಪ್ರಾಪ್ತಿಯೆನ್ನಲೆ ಬೇರೆಯಲ್ಲ! ಮುಖ್ಯವಾಗಿ ಕಥಾಶ್ರವಣಮಾಡತಕ್ಕವರಿಗೆ ಗುರುವಿನಲ್ಲಿ ವಿಶ್ವಾಸವೂ, ತನ್ನಲ್ಲಿ ದೈನ್ಯಬುದ್ಧಿಯೂ, ಮನೋಜಯವೂ, ದೃಢಮನಸ್ಸೂ ಪೂರ್ಣವಾಗಿರಬೇಕು! ಇವೆಲ್ಲವೂ ಕ್ರಮವಾಗಿದ್ದಹೊರತು ಪುರಾಣಶ್ರವಣಕ್ಕೆ ತಕ್ಕಫಲವು ಲಭಿಸದು! ಆದುದರಿಂದ ಇವರೆಲ್ಲರೂ ಮತ್ತೊಮ್ಮೆ ನಿಯಮಪೂರ್ವಕ ಕಥಾಶ್ರವಣವನ್ನು ಮಾಡುವಪಕ್ಷದಲ್ಲಿ ಇವರಿಗೂ ಮುಕ್ತಿಯು ಲಭಿಸುವುದರಲ್ಲಿ ಸಂದೇಹವಿಲ್ಲ! ಗೋಕರ್ಣಾ! ನೀನು ಮತ್ತೊಮ್ಮೆ ಇವರಿಗೆ ಆದೇ ಕಥೆಯನ್ನು ಪಠೇತಿಸು! ನಿನ್ನೊಡನೆ ಅವರಿಗೂ ಉತ್ತಮಲೋಕಪ್ರಾಪ್ತಿಯಾಗುವುದು." ಎಂದು ಹೇಳಿ ಆ ವಿಷ್ಣು ದೂತರೆಲ್ಲರೂ ವಿಮಾನಾರೂಢರಾಗಿ ಹರಿಕೀರ್ತನವನ್ನು ಮಾಡುತ್ತ ದುಂಧುಕಾರಿಯೊಡನೆ ವೈಕುಂಠಕ್ಕೆ ತೆರಳಿದರು.

ಇತ್ತಲಾಗಿ ಗೋಕರ್ಣನು ತಿರುಗಿ ಶ್ರಾವಣಮಾಸದಲ್ಲಿ ಸಪ್ತಾಹವಿಧಿಯಿಂದ ಕಥೆಯನ್ನಾರಂಭಿಸಿದನು. ಅದನ್ನು ಪೂರೈಸಿದಕ್ಷಣವೇ ಮೊದಲಿಗಿಂತಲೂ ಅತಿಶಯವಾದ ಮತ್ತೊಂದಾಶ್ಚರ್ಯವು ನಡೆಯಿತು! ಸಾಕ್ಷಾನ್ಮಹಾವಿಷ್ಣುವೇ ತನ್ನ ಭಕ್ತರೊಡನೆ ವಿಮಾನಾರೂಢನಾಗಿ ಕೆಳಗಿಳಿದು ಬಂದು, ಸಭಾಮಧ್ಯದಲ್ಲಿ ನಿಂತನು. ಈ ದಿವ್ಯಸ್ವರೂಪವನ್ನು ಕಂಡೊಡನೆ ಅಲ್ಲಿದ್ದವರೆಲ್ಲರೂ ಸಂಭ್ರಮದಿಂದ ಮೇಲೆದ್ದುನಿಂತು, ಅತ್ಯಾನಂದಪರವಶರಾಗಿ ಸ್ತೋತ್ರಮಾಡತೊಡಗಿದರು. ನಾನಾಕಡೆಗಳಿಂದಲೂ, ಜಯಶಬ್ದಗಳೂ, ನಮಶ್ಶಬ್ದಗಳೂ ಹೊರಡುತಿದ್ದುವು. ಇವರ ಮಹೋತ್ಸಾಹವನ್ನು ನೋಡಿ ಭಗವಂತನು ತಾನಾಗಿಯೇ ತನ್ನ ಪಾಂಚಜನ್ಯದಿಂದ ಶಂಖಧ್ವನಿಯನ್ನು ಮಾಡುತ್ತ, ಗೋಕರ್ಣನಬಳಿಗೆ ಬಂದು, ತನ್ನ ನಾಲ್ಕುತೋಳುಗಳಿಂದಲೂ ಅವನನ್ನು ಬಿಗಿದಪ್ಪಿ, ತನ್ನೊಡನೆ ಸಮಾನಭಾವವನ್ನು ತೋರಿಸಿದನು. ಅಲ್ಲಿ ಕಥಾಶ್ರವಣಮಾಡುತಿದ್ದವರೆಲ್ಲರಿಗೂ ತನ್ನ ಸಂಕಲ್ಪದಿಂದ ಸಾರೂಪ್ಯವನ್ನೂ ಕೊಟ್ಟನು. ಆ ಗ್ರಾಮದಲ್ಲಿದ್ದ ಸಮಸ್ತಪ್ರಾಣಿಗಳನ್ನೂ ಕರೆತಂದು ವಿಮಾನದಲ್ಲೇರಿಸಿ, ಪರಮಯೋಗಿಗಳಿಗೂ ದುರ್ಲಭವಾದ ವಿಷ್ಣುಲೋಕಕ್ಕೆ ಕಳುಹಿಸಿಬಿಟ್ಟನು. ಪರಮಭಕ್ತನಾದ ಆ ಗೋಕರ್ಣನನ್ನುಮಾತ್ರ ತನ್ನೊಡನೆಯೇ ಕರೆದುಕೊಂಡು ಸಂತೋಷದಿಂದ ತನ್ನ ಗೋಲೋಕಕ್ಕೆ ಬಂದು ಸೇರಿದನು. ಪೂರ್ವದಲ್ಲಿ ರಾಮಸಂದ ಅಯೋಧ್ಯಾವಾಸಿಗಳೆಲ್ಲರಿಗೂ ಯೋಗಿದುರ್ಲಭವಾದ ಉತ್ತಮಲೋಕವು ಲಭಿಸಿದಂತೆ, ಈಗಲೂ ಶ್ರೀಕೃಷ್ಣಕೃಪೆಯಿಂದ ಅಲ್ಲಿನ ನಿವಾಸಿಗಳೆಲ್ಲರಿಗೂ, ಸೂರ್ಯಚಂದ್ರರಿಗೂ, ಸಿದ್ಧರಿಗೂ, ಪ್ರವೇಶಿಸಲಸಾಧ್ಯವಾದ ಉತ್ತಮಲೋಕವು ಲಭಿಸಿತು. ನಾರದಾ! ಇದೀಗ ಶ್ರೀಭಾಗವತಕಥಾಮಹಿಮೆಗೆ ನಿದರ್ಶನವಾದ ಇತಿಹಾಸವು ಚಿತ್ರಕೂಟದಲ್ಲೆರುವ ಶಾಂಡಿಲ್ಯಮಹಾಮುನಿಯೂಕೂಡ ಅತಿಪವಿತ್ರವಾದ ಈ ಇತಿಹಾಸವನ್ನು ಆಗಾಗ ಅನುಸಂಧಾನಮಾಡುತ್ತಿರುವನು. ಈ ಇತಿಹಾಸವನ್ನು ಒಂದಾವರ್ತಿ ಕೇಳಿದಮಾತ್ರಕ್ಕೆ, ಪಾಪಗಳೆಲ್ಲವೂ ನೀಗುವುವು. ಶ್ರಾದ್ಧಕಾಲದಲ್ಲಿ ಇದನ್ನು ಪಠಿಸುವುದರಿಂದ ಪಿತೃದೇವತೆಗಳು ತೃಪ್ತಿಹೊಂದುವರು. ಪ್ರತಿದಿನವೂ ಪಾರಾಯಣಮಾಡುವುದರಿಂದ ಪುನರ್ಜನ್ಮವನ್ನು ನೀಗಿಸಿ ಮು

ಕ್ತಿಯನ್ನು ಕೈಗೂಡಿಸುವುದು" ಎಂದರು. ಹೀಗೆ ಸನಕಾದಿಗಳು ನಾರದನಿಗೆ ಭಾಗವತದ ಮಹಿಮೆಯನ್ನೂ, ಅದಕ್ಕೆ ನಿದರ್ಶಕವಾದ ಇತಿಹಾಸವನ್ನೂ ಹೇಳಿದಮೇಲೆ, ಸಪ್ತಾಹಶ್ರವಣವನ್ನು ನಡೆಸತಕ್ಕ ಕ್ರಮಗಳನ್ನೂ, ಅದಕ್ಕೆ ಬೇಕಾದ ಸಹಾಯದ್ರವ್ಯಸಾಮಗ್ರಿಗಳನ್ನೂ, ಈ ಧರ್ಮವನ್ನು ನಡೆಸತಕ್ಕಕಾಲದಲ್ಲಿ ಅನುಸರಿಸಬೇಕಾದ ವ್ರತೋಪವಾಸಾದಿನಿಯಮಗಳನ್ನೂ ಕ್ರಮವಾಗಿ ವಿವರಿಸಿದರು. ಭಾಗವತಪಾರಾಯಣವನ್ನು ಮುಗಿಸಿದಮೇಲೆ ಶಾಂತ್ಯರ್ಥವಾಗಿ ನಡೆಸಬೇಕಾದಬ್ರಾಹ್ಮಣಭೋಜನ ದಾನಾದಿಧರ್ಮಗಳನ್ನೂ ವಿವರಿಸಿದರು. ಅದರಿಂದಾಚೆಗೆ ತಾವೂಸಪ್ತಾಹಕ್ರಮದಿಂದಲೇ ನಾರದನಿಗೂ, ಅಲ್ಲಿದ್ದ ಇತರಜನರಿಗೂ ಭಾಗವತಕಥೆಯನ್ನು ಆಮೂಲಾಗ್ರವಾಗಿ ವಿಸ್ತರಿಸಿ ಹೇಳಿದರು. ಏಳುದಿನಗಳವರೆಗೆ ಎಲ್ಲರೂ ನಿಯಮವನ್ನು ಹಿಡಿದು ಭಾಗವತಕಥೆಯನ್ನು ಕೇಳಿಮುಗಿಸಿದಮೇಲೆ, ಶಾಸ್ತ್ರೋಕ್ತವಾಗಿ ಭಗವಂತನನ್ನು ಸ್ತೋತ್ರಮಾಡುತಿದ್ದರು. ಭಕ್ತಿಜ್ಞಾನವೈರಾಗ್ಯಗಳಿಗೆ ಹೊಸಯೌವನವುಂಟಾಯಿತು. ನಾರದನೂ ತಾನು ಬಹುಕಾಲದಿಂದ ಪ್ರಯತ್ನಿಸುತಿದ್ದ ಕಾರ್ಯವು ಕೈಗೂಡಿದುದರಿಂದ ಕೃತಾರ್ಥನಾದನು. ಆತನ ಸರ್ವಾಂಗಗಳೂ ಸಂತೋಷದಿಂದ ಪುಳಕಿತವಾದುವು. ಹೀಗೆ ಪರಮಾನಂದಭರಿತನಾದ ನಾರದನು, ಸನಕಾದಿಗಳ ಮುಂದೆ ಕೈಮುಗಿದು ನಿಂತು, ಸಂತೋಷದಿಂದ ಕುಗ್ಗಿದ ಕಂಠಸ್ವರವುಳ್ಳವನಾಗಿ ವಿಜ್ಞಾಪಿಸುವನು ''ಎಲೈ ಮಹಾತ್ಮರೆ! ಪರಮದಯಾಳುಗಳಾದ ನಿಮ್ಮ ಅನುಗ್ರಹದಿಂದ ನಾನು ಧನ್ಯನಾದೆನು! ನಿಮ್ಮ ಕೃಪಾಬಲದಿಂದ ಈಗ ನಾನು ಆ ಶ್ರೀಮನ್ನಾರಾಯಣನನ್ನೇ ನನ್ನಲ್ಲಿ ಕರೆದಿಟ್ಟುಕೊಂಡಂತಾಯಿತು. ವೈಕುಂಠವಾಸಿಯಾದ ಮಹಾವಿಷ್ಣುವು, ಈ ಕಥಾಶ್ರವಣಮಾತ್ರದಿಂದ ತಾನಾಗಿಯೇ ಬಂದು ಕಣ್ಣುಮುಂದೆನಿಲ್ಲುವಾಗ, ಇದಕ್ಕಿಂತಲೂ ಬೇರೆ ಧರ್ಮವಾವುದುಂಟು?" ಎಂದು ಬದ್ಧಾಂಜಲಿಯಾಗಿ ಸ್ತುತಿಸುತಿದ್ದನು. ಇಷ್ಟರಲ್ಲಿಯೇ ಮಹಾಜ್ಞಾನಿಯಾಗಿಯೂ, ವ್ಯಾಸಪುತ್ರನಾಗಿಯೂ ಇದ್ದ ಶುಕಮಹಾಮುನಿಯು ಗಂಭೀರಧ್ವನಿಯಿಂದ ಭಾಗವತಶ್ಲೋಕಗಳನ್ನು ಪಠಿಸುತ್ತ ಮೆಲ್ಲಗೆ ಬಂದು ಸಭಾಮಧ್ಯದಲ್ಲಿ ನಿಂತನು. ದಿವ್ಯತೇಜಸ್ಸಿನಿಂದ ಬೆಳಗುವ ಹದಿನಾರುವಯಸ್ಸಿನ ಕುಮಾರನಾದ ಈ ಶುಕಮುನಿಯನ್ನು ಕಂಡೊಡನೆ

ಎಲ್ಲರೂ ಥಟ್ಟನೆ ಪ್ರತ್ಯುತ್ಥಾನಮಾಡಿ ಅವನಿಗೆ ಪೀಠವನ್ನು ಕೊಟ್ಟುಕುಳ್ಳಿರಿಸಿದರು. ನಾರದನೂ ಮುಂದೆ ಬಂದು ಯಥಾವಿಧಿಯಾಗಿ ಅವನನ್ನು ಪೂಜಿಸಿದನು. ಹೀಗೆ ಸುಖಾಸೀನನಾದ ಶುಕನು ಮುಂದಿದ್ದವರೆಲ್ಲರನ್ನೂ ನೋಡಿ "ಎಲ್ಲೆ ರಸಜ್ಞರೆ! ವಿಷ್ಣುಭಕ್ತರಾದ ನೀವೆಲ್ಲರೂ, ವೇದಗಳೆಂಬ ಕಲ್ಪವೃಕ್ಷಗಳಿಂದ ಗಿಳಿಕಚ್ಚಿಬಿದ್ದ ಹಣ್ಣಿನಂತೆ, ಶುಕಮುಖದಿಂದ ಹೊರಟು, ರಸಪೂರ್ಣವಾಗಿರುವ ಈ ಭಾಗವತವೆಂಬ ಪುರಾಣವನ್ನು ಮರಣಕಾಲದವರೆಗೂ ಬಿಡದೆ ಅನುಸಂಧಾನಮಾಡುತ್ತ, ಅದರ ರಸವನ್ನು ಪಾನಮಾಡಿರಿ! ಈಗ್ರಂಥದಲ್ಲಿ ನಿರ್ದುಷ್ಟವಾದ ಈಶ್ವರಾರಾಧನರೂಪಧರ್ಮವು ಉಪದೇಶಿಸಲ್ಪಡುವುದು. ಕರ್ಮಕಾಂಡದಲ್ಲಿ ಸ್ತುತಿಸಲ್ಪಟ್ಟ ಅಗ್ನಿಷ್ಟೋಮಾದಿದೇವತೆಗಳಂತಲ್ಲದೆ, ನಿತ್ಯವಾಗಿಯೂ ಅಪರಿಮಿತಫಲದಾಯಕವಾಗಿಯೂ ಇರುವ ವಿಷಯವೇ ಇದರಿಂದ ಬೋಧಿಸಲ್ಪಡುವುದು! ಇತರ ಧರ್ಮಗಳಿಂದೇನೂ ಫಲವಿಲ್ಲವು. ಈ ಭಾಗವತವನ್ನು ಕೇಳತಕ್ಕವರ ಹೃದಯದಲ್ಲಿ ಶ್ರೀಮನ್ನಾರಾಯಣನು ನಿತ್ಯವಾಸವನ್ನು ಮಾಡುವನು. ಸಮಸ್ತಪುರಾಣಗಳಿಗೂ ತಿಲಕಪ್ರಾಯವಾಗಿ, ವಿಷ್ಣುಭಕ್ತರಿಗೆ ಧನರೂಪವಾಗಿ, ಉತ್ತಮಜ್ಞಾನಬೋಧಕವಾದ ಈ ಗ್ರಂಥಪಠನದಿಂದ ಚೇತನನಿಗೆ ಮುಕ್ತಿಯು ಕರಗತವಾಗುವುದು. ಸ್ವರ್ಗದಲ್ಲಿಯಾಗಲಿ, ಸತ್ಯಲೋಕದಲ್ಲಿಯಾಗಲಿ, ಕೈಲಾಸದಲ್ಲಿಯಾಗಲಿ, ವೈಕುಂಠದಲ್ಲಿಯಾಗಲಿ, ಈ ಕಥಾಮೃತವೆಂಬ ರಸವು ಲಭಿಸಲಾರದು. ಆದುದರಿಂದ ಎಂದೆಂದಿಗೂ ನೀವು ಇದನ್ನೇ ಅನುಸಂಧಾನಮಾಡುತ್ತಿರಬೇಕು" ಎಂದನು. ಶುಕಮುನಿಯು ಈ ಮಾತನ್ನು ಹೇಳುತ್ತಿರುವಾಗಲೇ ಶ್ರೀಮನ್ನಾರಾಯಣನು ಪ್ರಹ್ಲಾದ, ಬಲಿ, ಉದ್ಧವ ಅರ್ಜುನನೇ ಮೊದಲಾದ ತನ್ನ ಭಕ್ತರಿಂದ ಪರಿವೃತನಾಗಿ ಸಭಾಮಧ್ಯದಲ್ಲಿ ಬಂದು ನಿಂತನು. ನಾರದನು ಯಥೋಚಿತವಾಗಿ ಆ ಭಗವಂತನನ್ನು ಪೂಜಿಸಿ, ದಿವ್ಯಾಸನವನ್ನು ಕೊಟ್ಟು ಕುಳ್ಳಿರಿಸಿದನು. ಒಡನೆಯೇ ಎಲ್ಲರೂ ಸೇರಿ ಹರಿಕೀರ್ತನವನ್ನಾರಂಭಿಸಿದರು. ಈ ಕೀರ್ತನವನ್ನು ಕೇಳುವುದಕ್ಕಾಗಿ ಬ್ರಹ್ಮರುದ್ರರಿಬ್ಬರೂ ತಮ್ಮಪತ್ನಿಯರೊಡನೆ ಬಂದುಸೇರಿದರು. ಪ್ರಹ್ಲಾದನು ಕೈತಾಳವನ್ನು ಹಾಕುವುದಕ್ಕೆ ತೊಡಗಿದನು. ಉದ್ಧವನು ಕಂಚಿನ ತಾಳವನ್ನು ನುಡಿಸುತಿದ್ದನು. ನಾರದನು ವೀಣಾಗಾನ

ವನ್ನು ಮಾಡಿದನು. ಅರ್ಜುನನು ರಾಗಗಳನ್ನಾಲಾಪಿಸುವುದಕ್ಕೆ ತೊಡಗಿದನು. ದೇವೇಂದ್ರನು ಮೃದಂಗವನ್ನು ಹಿಡಿದನು. ಸನಕಾದಿಗಳು ನಡುನಡುವೆ ಜಯಶಬ್ದಗಳನ್ನು ಹೇಳುತಿದ್ದರು. ವ್ಯಾಸಪುತ್ರನಾದ ಶುಕನು, ಸೂತ್ರಧಾರಿಯಂತೆ ರಸಭಾವಗಳನ್ನು ತೋರಿಸುತಿದ್ದನು. ಇವರೆಲ್ಲರನಡುವೆ ಭಕ್ತಿ ಜ್ಞಾನವೈರಾಗ್ಯಗಳೆಂಬ ಆ ಮೂವರೂ ನರ್ತನವನ್ನು ಮಾಡತೊಡಗಿದರು ಈ ಕೀರ್ತನೆಯು ಮುಗಿದಮೇಲೆ ಭಕ್ತವತ್ಸಲನಾದ ಶ್ರೀಮನ್ನಾರಾಯಣನು ಎಲ್ಲರನ್ನೂ ಪ್ರಸನ್ನದೃಷ್ಟಿಯಿಂದ ನೋಡುತ್ತ, ''ಎಲೆಭಕ್ತಾಗ್ರಣಿಗಳೇ! ನಿಮ್ಮ ಕೀರ್ತನಗಳಿಂದನಾನು ಪ್ರೀತನಾದೆನು!ಬೇಕಾದ ವರಗಳನ್ನು ಕೇಳಿರಿ! ನಿಮ್ಮ ಕೋರಿಕೆಯನ್ನು ನಡೆಸಿಕೊಡುವೆನು"ಎಂದನು. ಆಗ ಆವರೆಲ್ಲರೂ ಬದ್ಧಾಂಜಲಿಗಳಾಗಿ ನಿಂತು, ''ಮಹಾಪ್ರಭೂ! ಈಗ ನಾವು ನಿನ್ನಿಂದಪೇಕ್ಷಿಸಬೇಕಾದ ಅನುಗ್ರಹವು ಬೇರೆ ಯಾವುದೂ ಇಲ್ಲವು. ಈ ಕಲಿಕಾಲದಲ್ಲಿ ಸಪ್ತಾಹಶ್ರವಣವನ್ನು ಮಾಡತಕ್ಕವರ ಹೃದಯದಲ್ಲಿ ನೀನು ನಿತ್ಯಸಾನ್ನಿಧ್ಯವನ್ನು ಮಾಡಬೇಕು. ಈ ಮನೋರಥವನ್ನುಮಾತ್ರ ಈಡೇರಿಸಿಕೊಟ್ಟರೆ ಸಾಕು" ಎಂದರು. ಆಗ ಭಗವಂತನು ''ತಥಾಸ್ತು" ಎಂದು ಹೇಳಿ ಅಂತರ್ಧಾನವನ್ನು ಹೊಂದಿದನು. ಆಮೇಲೆ ನಾರದನು ಸನಕಸನಂದನಾದಿ ಋಷಿಕುಮಾರನ್ನೂ, ಶುಕಾದಿಮುನಿಗಳನ್ನೂ ನಮಸ್ಕರಿಸಿ ಯಥೋಚಿತವಾಗಿ ಸತ್ಕರಿಸಿ ಕಳುಹಿಸಿಕೊಟ್ಟನು."

ಸೂತಪೌರಾಣಿಕನು ಶೌನಕಮುನಿಗೆ ಈ ಚರಿತ್ರವನ್ನು ತಿಳಿಸಿದಮೇಲೆ, ತಿರುಗಿ ಶೌನಕನು, ''ಎಲೈ ಸೂತನೆ! ಮೊದಲು ಈ ಭಾಗವತವನ್ನು ಶುಕಮುನಿಯು ಪರಿಕ್ಷಿದ್ರಾಜನಿಗೆ ಉಪದೇಶಿಸಿದ ಕಾಲವಾವುದು? ಆಮೇಲೆ ಗೋಕರ್ಣನು ಯಾವಾಗ ಇದನ್ನು ಅನುಸಂಧಾನಮಾಡಿದನು? ಅದರಿಂದಾಜೆಗೆ ಸನಕಾದಿಗಳು ಇದನ್ನು ನಾರದನಿಗೆ ಉಪದೇಶಿಸಿದ ಕಾಲವಾವುದು? ಈ ಸಂದೇಹವನ್ನು ಪರಿಹರಿಸಬೇಕು" ಎಂದು ಕೇಳಿದನು. ಅದಕ್ಕಾ ಸೂತನು ''ಶೌನಕಾ ಕೇಳು! ಕೃಷ್ಣನಿರ್ಯಾಣವಾಗಿ ಈ ಕಲಿಯುಗದಲ್ಲಿ ಮೂವತ್ತುವರುಷಗಳು ಕಳೆದಮೇಲೆ, ಭಾದ್ರಪದಮಾಸದ ನವಮೀತಿಥಿಯಲ್ಲಿ ಶುಕನು ಈ ಕಥೆಯನ್ನು ಪರಿಕ್ಷಿದ್ರಾಜನಿಗೆ ಉಪದೇಶಿಸಿದನು. ಅದರಿಂದಾಜೆಗೆ

ಇನ್ನೂರುವರುಷಗಳಮೇಲೆ ಆಷಾಢಶುದ್ಧನವಮಿಯಲ್ಲಿ, ಗೋಕರ್ಣನು ಈ ಕಥೆಯನ್ನುಪದೇಶಿಸಿದನು. ಅದರಿಂದಾಚೆಗೆ ಮೂರುಸಾವಿರವರುಷಗಳಮೇಲೆ ಕಾರ್ತಿಕಶುದ್ಧ ನವಮಿಯಲ್ಲಿ ಬ್ರಹ್ಮಪುತ್ರರಾದ ಸನಕಾದಿಗಳು ಇದನ್ನು ನಾರದನಿಗೆ ಉಪದೇಶಿಸಿದರು. ಇದೇ ಇದರ ಕಾಲಕ್ರಮವು" ಶೌನಕಾ! ಮುಖ್ಯವಾಗಿ ಕಲಿಯುಗದಲ್ಲಿ ಈ ಭಾಗವತವೊಂದೇ ಸರ್ವಪಾಪನಿವಾರಕವು! ಇದೊಂದೇ ಮುಕ್ತಿಗೆ ಮುಖ್ಯಸಾಧನವು ! ಇದೊಂದೇ ಭಗವಂತನಿಗೆ ಪ್ರಿಯವಾದುದು! ಸಮಸ್ತಧರ್ಮಗಳಿಗಿಂತಲೂ ಇದೊಂದೇ ಮೇಲಾದುದು! ವಿಷ್ಣುಭಕ್ತಿಯುಳ್ಳವರಿಗೆ ಯಾವವಿಧದಿಂದಲೂ ಕೊರತೆಯಿಲ್ಲವು. ಲೋಕಸಂಹಾರಕನಾದ ಯಮನೂಕೂಡ ಜೀವರಾಶಿಯನ್ನೆಳೆಯುವುದಕ್ಕಾಗಿ ಪಾಶವನ್ನು ಕೈಯಲ್ಲಿ ಹಿಡಿದು ನಿಂತಿರುವ ತನ್ನ ದೂತರನ್ನು ನೋಡಿ, ಅವರ ಕಿವಿಯಲ್ಲಿ ''ಎಲೈ ದೂತರೆ! ನೀವು ಭಗವತ್ಕಥಾಶ್ರವಣಪರರಾದವರಲ್ಲಿಮಾತ್ರ ಕೈಯಿಡಬೇಡಿರಿ! ಇತರ ಜೀವರಾಶಿಗಳಮೇಲೆ ನಮ್ಮ ಅಧಿಕಾರವೇಹೊರತು ವಿಷ್ಣುಭಕ್ತರಮೇಲಿಲ್ಲವು." ಎಂದು ಹೇಳಿರುವನು. ಮುಖ್ಯವಾಗಿ ಯಾವನು ಈ ಭಾಗವತಕಥೆಯನ್ನು ಪಠಿಸುವನೋ, ಯಾವನು ಅದನ್ನು ಭಕ್ತಿಯಿಂದಕೇಳುವನೋ, ಅವನಿಗೆ ಯಾವ ಮನೋರಥವೂ ದುರ್ಲಭವಲ್ಲ " ಎಂದು ಸೂತಪೌರಾಣಿಕನು ಶೌನಕನಿಗೆ ಹೇಳಿದನು.*

---

* ಈ ಭಾಗವತಮಾಹಾತ್ಮ್ಯವು ಪಾದ್ಮಪುರಾಣದ ಉತ್ತರಖಂಡದಲ್ಲಿರುವ ಆರ ಧ್ಯಾಯಗಳಿಂದ ಸಂಗ್ರಹಿಸಲ್ಪಟ್ಟಿದೆ.

ಶ್ರೀರಸ್ತು.

ಶ್ರೀಕೃಷ್ಣಾಯ ಪರಬ್ರಹ್ಮಣೇ ನಮಃ

ಪರಮಕಾರುಣಿಕನಾಗಿಯೂ, ಸಮಸ್ತಕಲ್ಯಾಣಗುಣವಿಶಿಷ್ಟನಾಗಿಯೂ ಇರುವ ಶ್ರೀಮನ್ನಾರಾಯಣನು, ಮೊದಲು ಲೋಕೋಜ್ಜೀವನಾರ್ಥವಾಗಿ, ಚೇತನರಿಗೆ ಧರ್ಮಸ್ವರೂಪವನ್ನೂ, ಬಹ್ಮಸ್ವರೂಪವನ್ನೂ ಬೋಧಿಸತಕ್ಕ ಭಾಗದ್ವಯಾತ್ಮಕವಾದ ವೇದವನ್ನು ಚತುರ್ಮುಖಬ್ರಹ್ಮನಿಗುಪದೇಶಿಸಿದನು. ದುರವಗಾಹವಾದ ಆ ವೇದಾರ್ಥವನ್ನು ತಿಳಿಯಲಾರದೆ ಜನರು ಭ್ರಾಂತರಾಗಿ, ಸಂಸಾರಪಾಶದಲ್ಲಿ ಸಿಕ್ಕಿ ನರಳುತ್ತಿರುವುದನ್ನು ನೋಡಿ, ಸತ್ಯವತೀದೇವಿಯಲ್ಲಿ ಭಗವದಂಶದಿಂದವತರಿಸಿದ ಪರಾಶರಪುತ್ರನಾದ ವ್ಯಾಸಮಹಾಮುನಿಯು, ಆವರಲ್ಲಿ ಮರುಕಗೊಂಡು, ಆ ವೇದಾರ್ಥಗಳನ್ನು ಜನರಿಗೆ ಸುಲಭಗ್ರಾಹ್ಯವಾಗುವಂತೆ ಸೂತ್ರರೂಪದಿಂದ ಸಂಗ್ರಹಿಸಿ ಪ್ರಚಾರಗೊಳಿಸಬೇಕೆಂದೆಣಿಸಿ, ತನ್ನ ಶಿಷ್ಯನಾದ ಜೈಮಿನಿಯಿಂದ ಧರ್ಮಸ್ವರೂಪಬೋಧಕವಾದ ಪೂರ್ವಭಾಗಾರ್ಥವನ್ನು ಅದೇರೀತಿಯಲ್ಲಿ ಪ್ರಚಾರಗೊಳಿಸಿದನು. ಬ್ರಹ್ಮಜ್ಞಾನಜನಕವಾದ ಉತ್ತರಭಾಗವನ್ನು ಬ್ರಹ್ಮಸೂತ್ರಗಳಿಂದ ತಾನೇ ವಿವರಿಸಿದನು. ಇಷ್ಟರಲ್ಲಿಯೂ ತೃಪ್ತಿಯಿಲ್ಲದೆ, ಅದೇ ವೇದಾರ್ಥಗಳನ್ನು ಮಿತ್ರವಾಕ್ಯದಂತೆ ಇನ್ನೂ ಸುಲಭವಾಗಿ ತಿಳಿಸಬೇಕೆಂದೆಣಿಸಿ, ಪಂಚಮವೇದ

ವೆಂದು ಪ್ರಸಿದ್ಧಿಗೊಂಡ ಶ್ರೀಮಹಾಭಾರತವೆಂಬ ಇತಿಹಾಸವನ್ನು ರಚಿಸಿ, ಅದರಲ್ಲಿ ಪ್ರಾಯಕವಾಗಿ ಪೂರ್ವಭಾಗಾರ್ಥಗಳನ್ನೇ ವಿಶೇಷವಾಗಿ ವಿವರಿಸಿದನು. ಅದರಂತೆ ಉತ್ತರಭಾಗಾರ್ಥವನ್ನೂ ವಿಶೇಷಿಸಿ ತೋರಿಸುವುದಕ್ಕಾಗಿ ವೇದಾಂತೋಪಬೃಂಹಣವಾದ ಈ ಭಾಗವತವೆಂಬ ಪುರಾಣವನ್ನು ರಚಿಸಲಾರಂಭಿಸಿ, ಗ್ರಂಥಾದಿಯಲ್ಲಿ ಪರಮಾತ್ಮಧ್ಯಾನರೂಪವಾದ ಇಷ್ಟದೇವತಾ ಪ್ರಾರ್ಥನೆಯನ್ನು ಮಾಡುವನು.

ಕೆಲವರು ಇದನ್ನು ಶುಕಪ್ರಣೀತವೆಂದು ಹೇಳುವರು. ಈ ಗ್ರಂಥವು ಶುಕಕೃತವೆಂದು ಹೇಳುವುದರಿಂದ ಈ ಭಾಗವತದಲ್ಲಿಯೇ ಮುಂದೆ ಅನೇಕ ವಚನಗಳಿಗೆ ವಿರೋಧವುಂಟಾಗುವುದು. ಇದನ್ನು ವ್ಯಾಸಪ್ರಣೀತವೆಂದು ಹೇಳಬೇಕೇಹೊರತು ಶುಕಪ್ರಣೀತವೆಂದು ಹೇಳುವುದಕ್ಕೆ ಅವಕಾಶವಿಲ್ಲ. ಮೊದಲು ವ್ಯಾಸಮಹಾಮುನಿಯು ನಾರದಾಜ್ಞೆಯಿಂದ ಈ ಗ್ರಂಥವನ್ನು ರಚಿಸಿ, ಅದನ್ನು ತನ್ನ ಪುತ್ರನಾದ ಶುಕಮುನಿಗೆ ಹೇಳಿದನೋಲೆ, ಶುಕಮುನಿಯು ಇದನ್ನು ತನ್ನ ಭಕ್ತನಾದ ಪರೀಕ್ಷಿದ್ರಾಜನಿಗೆ ಉಪದೇಶಿಸಿ, ಅನುಕೂಲಕವಾಗಿ ಲೋಕದಲ್ಲಿ ಪ್ರಚಾರಕ್ಕೆ ತಂದಿರುವನು. ಆದುದರಿಂದ ಪುರಾಣಾಂತರಗಳಲ್ಲಿರುವ ಶುಕಪ್ರೋಕ್ತವೆಂಬ ವಾಕ್ಯಕ್ಕೆ ಶುಕಮುನಿಯಿಂದ ಪ್ರಚಾರಗೊಳಿಸಲ್ಪಟ್ಟುದೆಂದೇ ಅರ್ಥವನ್ನು ಗ್ರಹಿಸಬೇಕು.

ಇದೇ ಭಾಗವತವೆಂಬ ಹೆಸರಿನಿಂದ,ದೇವೀಭಾಗವತವೇ ಮೊದಲಾದ ಗ್ರಂಥಾಂತರಗಳಿದ್ದರೂ,ಪುರಾಣಾಂತರಗಳಲ್ಲಿ ಹೇಳಿರುವ ಲಕ್ಷಣಗಳನ್ನನುಸರಿಸಿ, ವ್ಯಾಸಪ್ರೋಕ್ತವಾದ ಈ ಭಾಗವತಕ್ಕೇ ವಿಶೇಷ ಪ್ರಾಮಾಣ್ಯವೂ, ಪ್ರಾಶಸ್ತ್ಯವೂ, ಉಪಾದೇಯತ್ವವೂ ಏರ್ಪಡುವುದು. ಸ್ಕಾಂದಪುರಾಣದ ಉತ್ತರಖಂಡದಲ್ಲಿ ಈ ಗ್ರಂಥಲಕ್ಷಣವು ವ್ಯಕ್ತವಾಗಿ ಹೇಳಲ್ಪಟ್ಟಿರುವುದು.

"ಗ್ರಂಥೋಽಷ್ಟಾದಶಸಾಹಸ್ರೋ ದ್ವಾದಶಸ್ಕಂಧಸಮ್ಮಿತಃ |
ಹಯಗ್ರೀವಬ್ರಹ್ಮವಿದ್ಯಾ ಯತ್ರ ವೃತ್ರವಧಸ್ತಥಾ
ಗಾಯತ್ರ್ಯಾಶ್ಚ ಸಮಾರಂಭೋ ಯತ್ರ ಭಾಗವತಂವಿದುಃ ||"

ಎಂದರೆ, ಗಾಯತ್ರೀಮಂತ್ರದಿಂದಾರಂಭಿಸಿ, ಹದಿನೆಂಟು ಸಾವಿರಗ್ರಂಥಗಳ ನ್ನೊಳಕೊಂಡು, ಹನ್ನೆರಡುಸ್ಕಂಧಗಳುಳ್ಳದಾಗಿ, ವೃತ್ರವಧ ವೃತ್ತಾಂ

ತವನ್ನೂ, ಹಯಗ್ರೀವಬ್ರಹ್ಮವಿದ್ಯೆ (ಮಂತ್ರ) ಯನ್ನೂ ಪ್ರತಿಪಾದಿಸತಕ್ಕ ಗ್ರಂಥವು ಭಾಗವತವೆನಿಸುವುದೆಂದು ಇದರಲಕ್ಷಣವು. ಇದರಂತೆಯೇ ಮಾತ್ಸ್ಯಪುರಾಣದಲ್ಲಿಯೂಕೂಡ.

"ಆರಭ್ಯ ಯತ್ರ ಗಾಯತ್ರೀಂ ವರ್ಣ್ಯತೇ ಧರ್ಮವಿಸ್ತರಃ|
ವೃತ್ರಾಸುರವಧಶ್ಚಾಪಿ ಯತ್ರ ಭಾಗವತಂ ವಿದುಃ ||"

ಎಂಬ ಲಕ್ಷಣವು ಪ್ರತಿಪಾದಿತವಾಗಿದೆ. ಈ ಲಕ್ಷಣವನ್ನನುಸರಿಸಿ,ಗ್ರಂಥಾದಿಯಲ್ಲಿರುವ ಮಂಗಳಶ್ಲೋಕದಲ್ಲಿ ಶಬ್ದಾರ್ಥಗಳೆರಡರಿಂದಲೂ ಗಾಯತ್ರೀಮಂತ್ರಾರ್ಥವು ಹೇಳಲ್ಪಡುವುದು. ಅದರಂತೆಯೇ ಮುಂದೆ ಕ್ರಮವಾಗಿ ವೃತ್ರವಧವೃತ್ತಾಂತವೂ, ಹಯಗ್ರೀವಮಂತ್ರವೂ ಪ್ರತಿಪಾದಿತವಾಗುವುವು. ಈ ವಿವರಗಳೆಲ್ಲವೂ ಅಲ್ಲಲ್ಲಿನ ವ್ಯಾಖ್ಯಾನಗಳಿಂದ ವ್ಯಕ್ತವಾಗುವುವು.

ಶ್ರೀಕೃಷ್ಣಾಯ ನಮಃ.

ಶ್ರೀಮದ್ಭಾಗವತವು

ಪ್ರಥಮಸ್ಕಂಧವು.

ಶ್ಲೋ॥ ಜನ್ಮಾದ್ಯಸ್ಯ ಯತೋಽನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ ಸ್ವರಾಟ್ ।
ತೇನೇ ಬ್ರಹ್ಮ ಹೃದಾ ಯ ಆದಿಕವಯೇ ಮುಹ್ಯಂತಿ ಯತ್ಸೂರಯಃ ।
ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಽ(ಮೃ)ಮೃಷಾ ।
ಧಾಮ್ನಾ ಸ್ವೇನ ಸದಾನಿರಸ್ತಕುಹಕಂ ಸತ್ಯಂ ಪರಂ ಧೀಮಹಿ ॥ ೧ ॥

ಯಾವ ಶ್ರೀಮನ್ನಾರಾಯಣನು ಸಕಲಜಗತ್ಕಾರಣನಾಗಿ, ಸರ್ವಾಂತರ್ಯಾಮಿಯಾಗಿ, ಸರ್ವಜ್ಞನಾಗಿ, ಸರ್ವಶಕ್ತನಾಗಿ ಸರ್ವಸ್ವತಂತ್ರನಾಗಿ

ವ್ಯಾಖ್ಯಾನವು:—ಪೂಜ್ಯರಾದ ವ್ಯಾಸಮಹರ್ಷಿಗಳಿಂದ ಗ್ರಂಥಾದಿಯಲ್ಲಿ ಇಷ್ಟದೇವತಾಪ್ರಾರ್ಥನರೂಪವಾಗಿ ರಚಿತವಾದ ಈ ಮಂಗಳಶ್ಲೋಕವು, ಪರಬ್ರಹ್ಮಸ್ವರೂಪನಿರೂಪಕವಾದುದರಿಂದ, ಇದಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತಗಳೆಂಬ ಮತತ್ರಯಕ್ಕೂ ಅನುಸಂಧಾನವಾಗಿ ಪೂರ್ವಾಚಾರ್ಯರಿಂದ ಬೇರೆಬೇರೆ ಅರ್ಥಭೇದಗಳು ವಿವರಿಸಲ್ಪಟ್ಟಿರುವುವು ಈ ಶ್ಲೋಕದಲ್ಲಿ ಆಪಾತದಿಂದ ತೋರುವ ಮುಖ್ಯಾರ್ಥವನ್ನುಮಾತ್ರ ಮೇಲೆ ಸಂಗ್ರಹವಾಗಿ ಕಾಣಿಸಲ್ಪಟ್ಟಿರುವುದು. ಇತರವಿಶೇಷಾರ್ಥಗಳನ್ನೂ ಮತಾಂತರ ವ್ಯಾಖ್ಯಾನಗಳನ್ನೂ ಈ ಕೆಳಗೆ ಕ್ರಮವಾಗಿ ನೋಡಬಹುದು.

(ಅರ್ಥೇಷು) ಚಿದ್ರಚಿದ್ವಸ್ತುಗಳಲ್ಲಿ (ಅನ್ವಯಾತ್) ಅನುಪ್ರವೇಶಮಾಡಿರುವುದರಿಂದಲೂ, (ಇತರತಶ್ಚ) ಬೇರೆಯಾಗಿ ಕರ್ತೃತ್ವರೂಪದಲ್ಲಿರುವುದರಿಂದಲೂ (ಯತಃ) ಯಾವ ಪರಮಾತ್ಮನಿಂದ.(ಅಸ್ಯ) ಈ ಪ್ರಪಂಚದ, (ಜನ್ಮಾದಿ) ಸೃಷ್ಟಿಸ್ಥಿತಿಲಯಗಳೆಲ್ಲವೂ ಉಂಟಾಗುವುವೋ, ಅಂತಹ ಸತ್ಯಸ್ವರೂಪನಾದ ಶ್ರೀಮನ್ನಾರಾಯಣನನ್ನು ವಂದಿ

ಬೆಳಗುವನೋ, ಯಾವನ ದಿವ್ಯಮಂಗಳವಿಗ್ರಹವನ್ನು ನೋಡಿ ನಿತ್ಯಸೂರಿಗ

ಸುವೆವು" ಎಂಬುದಾಗಿ ಒಂದೊಂದುವಾಕ್ಯಕ್ಕೂ ಕೊನೆಯವಾಕ್ಯದೊಡನೆ ಅನ್ವಯವು. ಲೋಕದಲ್ಲಿ ಒಂದೊಂದುಕಾರ್ಯಕ್ಕೂ ನಿಮಿತ್ತಕಾರಣವೆಂದೂ, ಉಪಾದಾನ ಕಾರಣವೆಂದೂ ಎರಡು ಬಗೆಯ ಕಾರಣಗಳುಂಟು. ಒಂದು ಗಡಿಗೆಯನ್ನು ನಿರ್ಮಿಸಬೇಕಾದರೆ ಕುಂಬಾರನು ಅದಕ್ಕೆ ನಿಮಿತ್ತಕಾರಣವೆನಿಸುವನು. ಮಣ್ಣು ಉಪಾದಾನ ಕಾರಣವಾಗುವುದು. ಇದರಂತೆಯೇ ಪರಮಾತ್ಮನು ಪ್ರಕೃತಿಪುರುಷನೈಲಕ್ಷಣ್ಯದಿಂದ ಅವುಗಳಿಗೆನಿಯಾಮಕನಾಗಿದ್ದು, ಸ್ಥೂಲರೂಪವಾದ ಈಪ್ರಪಂಚವನ್ನು ಸೃಷ್ಟಿಸಶಕ್ತನಾಗಿಯೂ, ತಾನೇ ಆ ಪ್ರಪಂಚವೆಂಬ ಕಾರ್ಯರೂಪದಲ್ಲಿ ಸೇರಿರತಕ್ತನಾಗಿಯೂ ಇರುವುದರಿಂದ, ಆ ಪರಮಾತ್ಮನೇ ಈ ಪ್ರಪಂಚಕ್ಕೆ ನಿಮಿತ್ತೋಪಾದಾನಗಳೆಂಬ ಎರಡು ವಿಧದಲೂ ಕಾರಣನಾಗಿರುವನೆಂದು ಭಾವವು. ''ಯತೋವಾ ಇಮಾನಿ ಭೂತಾನಿ ಜಾಯಂತೇ,ಯೇನ ಜಾತಾನಿ ಜೀವಂತಿ, ಯತ್ಪ್ರಯಂತ್ಯಭಿಸಂವಿಶಂತಿ"ಇತ್ಯಾದಿ ಶ್ರುತ್ಯರ್ಥಗಳು ಇದರಿಂದ ನಿರೂಪಿಸಲ್ಪಡುವುವು. ಆದರೆ ಲೋಕದಲ್ಲಿ ಒಂದೇ ವಸ್ತುವಿಗೆ ಉಭಯವಿಧ ಕಾರಣತ್ವವೂ ಅಸಂಭಾವಿತವಲ್ಲವೆ? ಎಂದರೆ (ಅಭಿಜ್ಞಃ) ಸರ್ವಜ್ಞನು, ಸರ್ವಶಕ್ತನೆಂಬುದಕ್ಕೂ ಇದೇ ಸೂಚಕವು. ಆದುದರಿಂದ ಸರ್ವಜ್ಞನಾಗಿಯೂ, ಸರ್ವಶಕ್ತನಾಗಿಯೂ, ಇರುವ ಪರಮಾತ್ಮನಿಗೆ ಈ ಉಭಯವಿಧಕಾರಣತ್ವವೂ ಒಪ್ಪುವುದೆಂದು ಭಾವವು. ಈ ಜ್ಞಾನಶಕ್ತಿಗಳೆರಡೂ, ಅವನಿಂ ಪೂರ್ಣಲಬ್ಧವಾಗಿ, ಅವನೂ ಕರ್ಮವಶ್ಯನಾಗಿರಬಹುದು. ಹಾಗಿದ್ದಮೇಲೆ ಅವನಲ್ಲಿ ಅತಿಶಯವೇನು?" ಎಂದರೆ (ಸ್ವರಾಟ್) ಅವನು ತನಗೆ ತಾನೇ ಸರ್ವಸ್ವತಂತ್ರನಾಗಿದ್ದು,ಕರ್ಮವಶರಾದ ಜೀರೆಯವರಿಗೆ ಪ್ರೇರಕನೇಪೊರತು,ತಾನು ಕರ್ಮವಶ್ಯನಲ್ಲವೆಂದು ಭಾವವು. ಹೀಗೆ ಪರಮಾತ್ಮನು ಈ ಪ್ರಪಂಚದ ಸೃಷ್ಟ್ಯಾದಿಗಳಿಗೆ ಉಭಯವಿಧದಿಂದಲೂ ಕಾರಣವೆಂಬುದು ಜೀರೆಜೀರೆ ಶ್ರುತಿಪ್ರಮಾಣಗಳಿಂದ ಸಿದ್ಧವಾಗುವುದು. ''ಸರ್ವಂ ಖಲ್ವಿದಂ ಬ್ರಹ್ಮ, ಐತದಾತ್ಮ್ಯಮಿದಂ ಸರ್ವಂ,ಅಯಮಾತ್ಮಾ ಬ್ರಹ್ಮ, ತತ್ತ್ವಮಸಿ,''ಇತ್ಯಾದಿ ಶ್ರುತಿವಾಕ್ಯಗಳು ಅನ್ವಯಪ್ರತಿಪಾದಕಗಳಾಗಿ ಉಪಾದಾನಕಾರಣತ್ವವನ್ನು ನಿರೂಪಿಸುವುವು ''ತದೈಕ್ಷತ, ಯಃ ಪೃಥಿವ್ಯಾಂ ತಿಷ್ಠನ್, ಪೃಥಿವ್ಯಾ ಅಂತರೋಯಂ,ಪೃಥಿವೀ ನವೇದ,ಯಸ್ಯ ಪೃಥಿವೀ ಶರೀರಂ, ಯಃ ಪೃಥಿವೀಮಂತರೋ ಯಮಯತಿ ಯ ಆತ್ಮನಿತಿಷ್ಠನ್ನಾತ್ಮನೋಂತರೋಯಮಾತ್ಮಾ ನ ವೇದ, ಯಸ್ಯಾತ್ಮಾ ಶರೀರಂ ಯ ಆತ್ಮಾನಮಂತರೋಯಮಯತಿ" ಇತ್ಯಾದಿಶ್ರುತಿನಾಕ್ಯಗಳು ವ್ಯತಿರೇಕಪ್ರತಿಪಾದಕಗಳಾಗಿ ನಿಮಿತ್ತಕಾರಣತ್ವವನ್ನು ತೋರಿಸುವುವು. ಆದರೆ ಸರ್ವಶಕ್ತನಾದ ಈಶ್ವರನು,ಜಗತ್ಸೃಷ್ಟಿಯನ್ನು ಮಾಡುವ ವಿಷಯದಲ್ಲಿ ಸಮರ್ಥನಾಗಿದ್ದರೂ ಇರಬಹುದು. ಆದರೂ ಜಗತ್ಸೃಷ್ಟಿಗೆ ಏನಾದರೂ ಒಂದು ಫಲೋದ್ದೇಶವಿರಬೇಕಲ್ಲವೆ? ಬುದ್ಧಿಪೂರ್ವಕ

ಳೂಕೂಡ ಮೋಹಪರವಶರಾಗುವರೋ, ಯಾವನು ಚೇತನೋಜ್ಜೀವನಾ

ವಾಗಿ ಯಾವನು ಯಾವ ಕಾರ್ಯವನ್ನಾರಂಭಿಸಬೇಕಾದರೂ, ಅದರಿಂದುಂಟಾಗುವ ಪ್ರಯೋಜನವು ಸ್ವಾರ್ಥವಾಗಿಯಾಗಲಿ, ಪರಾರ್ಥವಾಗಿಯಾಗಲಿ ಇರಬೇಕು. ಅಪಾಪ ಸಮಸ್ತಕಾಮನಾದ ಪರಬ್ರಹ್ಮನಿಗೆ ಈ ಜಗತ್ಸೃಷ್ಟಿಯಿಂದ ಹೊಂದಬೇಕಾದ ಫಲವೇನೂ ಇರುವುದಿಲ್ಲ ಅಥವಾ ಕರುಣಾಳುವಾದ ಭಗವಂತನು ಈ ಸೃಷ್ಟಿಕಾರ್ಯವನ್ನು ಪರಾನುಗ್ರಹಾರ್ಥವಾಗಿಯೇ ನಡೆಸುವವಕ್ಷದಲ್ಲಿ,ಇದನ್ನು ಯಾವಾಗಲೂ ಸುಖಪೂರ್ಣವನ್ನಾಗಿಯೇ ಇಡುತಿದ್ದನೇನೊ?ಆದರೆ, ಜನ್ಮ ಜರಾ ಮರಣ ನರಕಾದಿಗಳಾದ ನಾನಾದುಃಖಗಳಿಗೆಲ್ಲಕ್ಕೂ ಈ ಜೀವರಾಶಿಯನ್ನು ಗುರಿಮಾಡುತ್ತಿರಲಿಲ್ಲ. ಹೀಗೆ ನಿಷ್ಪ್ರಯೋಜನವಾದ ಈ ಸೃಷ್ಟಿಕಾರ್ಯಕ್ಕೆ ಆ ಬ್ರಹ್ಮನನ್ನು ಕಾರಣನಾಗಿ ಹೇಳುವುದು ಹೇಗೆ ? ಎಂಬ ಶಂಕೆಯನ್ನು ನಿವಾರಿಸುವುದಕ್ಕಾಗಿ ಮುಂದಿನ ವಾಕ್ಯದಲ್ಲಿ ಇವರ ಪ್ರಯೋಜನವನ್ನು ತಿಳಿಸುವರು. (ಯಃ) ಯಾವ ಪರಮಾತ್ಮನು (ಹೃದಾ) ಸಂಕಲ್ಪದಿಂದಲೇ (ಆದಿಕವಯೇ) ಚತುರ್ಮುಖಬ್ರಹ್ಮನಿಗಾಗಿ, (ಬ್ರಹ್ಮ) ಪರಬ್ರಹ್ಮಸ್ವರೂಪಗಳನ್ನು ತಿಳಿಸತಕ್ಕ ವೇದವನ್ನು (ತೇನೇ) ಏರ್ಪರಿಸಿದನೋ. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಇತ್ಯಾದಿ ಶ್ರುತ್ಯರ್ಥವು ಇದರಿಂದ ನಿರೂಪಿತವಾಗುವುದು. ಲೋಕೋಜ್ಜೀವನಕ್ಕಾಗಿ ಈ ಶಾಸ್ತ್ರಪ್ರವರ್ತನನನ್ನು ಹೇಗೆ ಮಾಡಿದನೋ, ಅದರಂತೆಯೇ ಜಗತ್ಸೃಷ್ಟಿಯೂ ಲೋಕಹಿತಾರ್ಥವಲ್ಲದೆ ಬೇರೆಯಲ್ಲವೆಂದು ಸೂಚಿತವಾಗುವುದು ಆದುದರಿಂದ ದಯಾಸಾಗರನಾದ ಭಗವಂತನು, ಚೇತನರಿಗೆ ಮೋಕ್ಷೋಪಯೋಗಿಯಾದ ಜ್ಞಾನಪ್ರವೃತ್ತಿಯನ್ನುಂಟುಮಾಡತಕ್ಕ ಕರಣಕಳೇಬರಗಳನ್ನು ಕೊಡುವುದಕ್ಕಾಗಿಯೇ ಈ ಜಗತ್ಸೃಷ್ಟಿಯನ್ನು ಮಾಡಿದನೆಂದು ಗ್ರಾಹ್ಯವು ಹೀಗಿರುವಾಗಲೂ ಚೇತನರಿಗೆ ಗರ್ಭದುಃಖಾದ್ಯನುಭವಗಳು ಅನೇಕವರ ಕರ್ಮಮೂಲಕವಾದುದರಿಂದ ಈ ದೋಷಕ್ಕೆ ಈಶ್ವರನು ಭಾಗಿಯಾಗಲಾರನೆಂದೂ ಭಾವವು. "ವೇದೋಪದೇಶವಿಲ್ಲದುದರಿಂದುಂಟಾಗುತಿದ್ದ ಅನರ್ಥವೇನು?" ಎಂದರೆ, ಅವನ್ನು ತೋರಿಸುವರು. "ಮುಹ್ಯನ್ತಿ ಯಂ ಸೂರಯಃ" (ಸೂರಯಃ) ಜ್ಞಾನವಂತರೂಕೂಡ (ಯಂ) ಯಾವ ಪರಮಾತ್ಮನನ್ನು ಕುರಿತು, (ಮುಹ್ಯಂತಿ) ಮೋಹಗೊಳ್ಳುವರೋ, ಎಂದರೆ, ತಾನುಮಹಾಜ್ಞಾನಿಗಳಿಗೂ ಅಗೋಚರವಾದ ಮಹಿಮೆಯುಳ್ಳವನಾದುದರಿಂದ, ದುರ್ಜ್ಞೇಯವಾದ ತನ್ನ ಸ್ವರೂಪವನ್ನು ತಿಳಿಸುವುದಕ್ಕಾಗಿಯೇ ವೇದಗಳನ್ನುಪದೇಶಿಸಿದನೆಂದರ್ಥವು. ಅಥವಾ "ಮುಹ್ಯಂತಿ ಯಂ ಸೂರಯಃ" ನಿತ್ಯಸೂರಿಗಳಿಗೂ ಮೋಹವನ್ನುಂಟುಮಾಡತಕ್ಕ ದಿವ್ಯಮಂಗಳವಿಗ್ರಹವುಳ್ಳವನೆಂದೂ ಹೇಳಬಹುದು. ಮತ್ತು "ತೇಜೋವಾರಿಮೃದಾಂ ಯತೋ ವಿನಿಮಯಃ" (ತೇಜೋವಾರಿಮೃದಾಂ) ಪೃಥಿವ್ಯಪ್ತೇಜಸ್ಸುಗಳ, (ವಿನಿ

ರ್ಥವಾಗಿ ಚತುರ್ಮುಖಬ್ರಹ್ಮನಿಗೂವೇದಗಳನ್ನು ಪದೇತಿಸಿದನೋ, ಯಾವನು

ಮಯ:) ಪರಸ್ಪರಮಿಶ್ರೀಕರಣವು, (ಯತ:) ಯಾವ ಪರಬ್ರಹ್ಮನಿಂದ ನಡೆಯುತೋ, ಎಂದರೆ, ಅಂಡಸೃಷ್ಟಿಗೆ ಮೊದಲು ಬೇಬೇರೆಯಾಗಿದ್ದ ಪೃಥಿವ್ಯಾದಿಭೂತಗಳನ್ನು ಸೃಷ್ಟಿಕಾರ್ಯಕ್ಕುಪಯೋಗವಾಗುವಂತೆ ಒಂದಾಗಿ ಸೇರಿಸುವುದೇ ತ್ರಿವೃತ್ಕರಣವೆನಿಸುವುದು. ಇದನ್ನೇ ಪಂಚೀಕರಣವೆಂದೂ ಹೇಳುವರು. ಪೃಥಿವಿ ಮೊದಲಾದ ಪಂಚಭೂತಗಳನ್ನೂ ಯಥಾಯೋಗ್ಯವಾಗಿ ಮಿಶ್ರಮಾಡಿಡುವುದಕ್ಕೆ ಪಂಚೀಕರಣವೆಂದು ಹೆಸರು. ಹೀಗೆ ತ್ರಿವೃತ್ಕರಣದಿಂದ ಅಂಡಸೃಷ್ಟಿಯೆಂದೂ, ಅಂಡಸೃಷ್ಟಿಯಾದಮೇಲೆ ಚತುರ್ಮುಖೋತ್ಪತ್ತಿಯೆಂದೂ ''ತದಂಡಮಭವದ್ಧೈಮಂ'' ''ತಸ್ಮಿನ್ ಜಜ್ಞೇ ಸ್ವಯಂಬ್ರಹ್ಮ'' ಎಂಬ ಪ್ರಮಾಣಗಳಿಂದ ಸಿದ್ಧವಾಗುವುದು. ಆದುದರಿಂದ ಅಂಡೋತ್ಪತ್ತಿಗೆ ಮೊದಲೇ ನಡೆಯಬೇಕಾದ ಈ ತ್ರಿವೃತ್ಕರಣವು ಪರಮಾತ್ಮಕರ್ತೃಕವಲ್ಲದೆ ಬೇರೆಯಲ್ಲವೆಂಬುದು ಸಿದ್ಧವು.

ಆದರೆ ''ಹಂತಾಹಮಿಮಾಸ್ತಿಸ್ರೋ ದೇವತಾ ಅನೇನ ಜೀವೇನಾತ್ಮನಾನುಪ್ರವಿಶ್ಯ ನಾಮರೂಪೇ ವ್ಯಾಕರವಾಣಿ,ತಾಸಾಂ ತ್ರಿವೃತಂ ತ್ರಿವೃತಮೇಕೈಕಾಂ ಕರವಾಣಿ"ಎಂದು ಪರಮಾತ್ಮನು ತಾನೇ ತ್ರಿಮೂರ್ತಿಗಳಾಗಿಯೂ, ತಾನೇ ಜೀವಾತ್ಮಸ್ವರೂಪದಿಂದ ಸಮಸ್ತಶರೀರಗಳಲ್ಲಿಯೂ ಅನುಪ್ರವೇಶಮಾಡಿ ನಾಮರೂಪಭೇದಗಳನ್ನುಂಟುಮಾಡುವುದಾಗಿಯೂ, ತ್ರಿವೃತ್ಕರಣಕ್ಕೂ ತಾನೇ ಕರ್ತನಾಗಿಯೂ ಇರುವಂತೆ ಮೇಲಿನ ಶ್ರುತಿವಾಕ್ಯದಿಂದ ವ್ಯಕ್ತವಾಗುವುದಲ್ಲವೆ ? ಹೀಗೆ ಭಗವಂತನೂ ಸೃಷ್ಟಿಗೆ ಬಳಿಕಟ್ಟಿದ್ದಮೇಲೆ ಅವನಿಗೂ ಅನಿತ್ಯತ್ವಾದಿದೋಷಗಳು ಸಂಬಂಧಿಸಿರಬೇಕಲ್ಲವೆ? ಎಂದರೆ (ಯತ್ರ ತ್ರಿಸರ್ಗೋಮೃಷಾ) ಯಾವ ಪರಮಾತ್ಮನಲ್ಲಿಮಾತ್ರ (ತ್ರಿಸರ್ಗಃ) ತ್ರಿವೃತ್ಕರಣಪೂರ್ವಕವಾದ ಸೃಷ್ಟಿಯು (ಮೃಷಾ) ಮಿಥ್ಯೆಯಾಗುವುದೋ, ಎಂದರೆ ಆ ಸೃಷ್ಟಿದೋಷವು ಭಗವಂತನನ್ನುಮಾತ್ರ ಸ್ಪರ್ಶಿಸದೆಂದು ಭಾವವು. ಇನ್ನುಳಿದುಮಾತ್ರ ಆ ದೋಷವು ಅಂಟುವಿರುವುದು ಹೇಗೆ? ಎಂದರೆ ''ಧಾಮ್ನಾ ಸ್ವೇನ ನಿರಸ್ತಕುಹಕಂ'' ತನ್ನ ತೇಜಸ್ಸಿನಿಂದಲೇ ಸಮಸ್ತದೋಷಗಳನ್ನೂ ನಾಶಮಾಡಿಸಿಬಿಟ್ಟಿರುವನು. (ತಂ) ಅಂತಹ ಮಹಾಮಹಿಮೆಯುಳ್ಳವನಾಗಿಯೂ, (ಸತ್ಯಂ) ನಿತ್ಯನಾಗಿಯೂ, (ಪರಂ) ಬ್ರಹ್ಮರುದ್ರಾದಿಗಳಿಗಿಂತಲೂ ಮೇಲೆನಿಸಿಕೊಂಡವನಾಗಿಯೂ ಇರುವ ಶ್ರೀಮನ್ನಾರಾಯಣನನ್ನು (ಧೀಮಹಿ) ಧ್ಯಾನಿಸುವೆವು" ಎಂದನ್ವಯವು.

ಇದರಿಂದ ಶುದ್ಧಸ್ವರೂಪದಲ್ಲಿ ಸೂಕ್ಷ್ಮಚಿದಚಿದ್ವಿಶಿಷ್ಟನಾದ ಪರಮಾತ್ಮನು ಚೇತನೋಜ್ಜೀವನಾರ್ಥವಾಗಿ ಸೃಷ್ಟಿಕಾರ್ಯಕ್ಕನುಕೂಲಿಸುವಂತೆ ಪಂಚಭೂತಸಂಯೋಗವನ್ನೂ,ವೇದೋಪದೇಶವನ್ನೂ ಮಾಡುವುದರಿಂದ ನಿಮಿತ್ತಕಾರಣವೆನಿಸಿಕೊಂಡು,

ಜಗತ್ಸೃಷ್ಟಿಗೆ ಮೊದಲು, ಮುಂಬಿನ ಸೃಷ್ಟಿಕಾರ್ಯಕ್ಕನುಕೂಲಿಸುವಂತೆ, ಪೃ

ಕಾರ್ಯರೂಪವಾದ ಸ್ಥೂಲಚಿದಚಿತ್ತುಗಳಲ್ಲಿಯೂ ತಾನೇ ಅನುಪ್ರವೇಶಮಾಡುವುದರಿಂದ ಉಪಬೃಂಹಣಕಾರಣವೆನಿಸುವನು. ಹೀಗೆ ಸ್ಥೂಲಸೂಕ್ಷ್ಮಚಿದಚಿದ್ವಿಶಿಷ್ಟನಾದ ಪರಮಾತ್ಮನಿಗೆ ಅಭೇದವನ್ನು ಹೇಳುವುದೇ ವಿಶಿಷ್ಟಾದ್ವೈತಮತಾಭಿಪ್ರಾಯವು.

ಶುದ್ಧಾದ್ವೈತಮತಾನುಸಾರವಾದ ವ್ಯಾಖ್ಯಾನವು.

(ಯತಃ) ಯಾವ ಪರಬ್ರಹ್ಮದಿಂದ (ಅಸ್ಯ) ಈ ಪ್ರಪಂಚದ (ಜನ್ಮಾದಿ) ಸೃಷ್ಟಿಸ್ಥಿತಿಲಯಗಳು (ಅನ್ವಯಾತ್) ಆತನ ಸ್ಥಿತಿಯಿಂದಲೂ (ಇತರತಶ್ಚ) ಅಭಾವದಿಂದಲೂ ಉಂಟಾಗುವುವೋ, ಅಂತಹ ಪರಬ್ರಹ್ಮನನ್ನು ಧ್ಯಾನಿಸುವೆನೆಂದು ಭಾವ. ಅನ್ವಯವ್ಯತಿರೇಕಗಳೆಂದರೆ "ಯತ್ಸತ್ತ್ವೇ ಯತ್ಸತ್ತ್ವಂ ಯದಭಾವೇ ಯದಭಾವಃ" ಯಾವುದಿದ್ದಾಗ ಯಾವುದಿರುವುದೋ, ಯಾವುದಿಲ್ಲದಿದ್ದಾಗ ಅದೂ ಇಲ್ಲದೆ ಹೋಗುವುದೋ ಇಂತಹ ಸಂಬಂಧಕ್ಕೆ ಅನ್ವಯವ್ಯತಿರೇಕಗಳೆಂದು ಹೆಸರು. ಈ ಸಂಬಂಧವು ಕಾರ್ಯಕಾರಣಗಳಲ್ಲಿಯೇ ಪ್ರಸರ್ತಿಸುವುದು. ಹೇಗೆಂದರೆ ಮಣ್ಣಿದ್ದಾಗಲೇ ಗಡಿಗೆಯಿರುವುದೇ ಹೊರತು ಮಣ್ಣನ್ನು ಬಿಟ್ಟು ಗಡಿಗೆಯಿಲ್ಲ. ಅದಂತೆ ಕಾರಣರೂಪವಾದ ಪರಬ್ರಹ್ಮವಿದ್ದಾಗಲೇ ಕಾರ್ಯರೂಪವಾದ ಜಗತ್ತಿರುವುದೇ ಹೊರತು ಬ್ರಹ್ಮವಿಲ್ಲದಾದ ಜಗತ್ತಿಲ್ಲವೆಂದು ಭಾವ. ಅಥವಾ ಅನ್ವಯವ್ಯತಿರೇಕಗಳೆಂಬುದಕ್ಕೆ ಅನುವೃತ್ತಿವ್ಯಾವೃತ್ತಿಗಳೆಂದೂ ಅರ್ಥಾಂತರವನ್ನು ಹೇಳಬಹುದು. ಅನುವೃತ್ತಿಯೆಂದರೆ ತನ್ನ ಸ್ವರೂಪದಿಂದಲೇ ಇರುವುದು ವ್ಯಾವೃತ್ತಿಯೆಂದರೆ ಬೇರೆರೂಪಕ್ಕೆ ತಿರುಗುವುದು. ಮಣ್ಣು ಕಾರಣಾವಸ್ಥೆಯಲ್ಲಿ ನಿಜಸ್ವರೂಪದಿಂದಿದ್ದು, ಕಾರ್ಯಾವಸ್ಥೆಯಲ್ಲಿ ಘಟರೂಪಕ್ಕೆ ತಿರುಗುವಂತೆ, ಬ್ರಹ್ಮವೂ ಕೂಡ ತನ್ನ ಸದ್ರೂಪದಿಂದ ಕಾರಣವಾಗಿದ್ದು, ಜಗದ್ರೂಪದಿಂದ ಕಾರ್ಯವಾಗಿ ತೋರುವುದು. ಇದರಿಂದ, ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣವೆನಿಸುವುದೆಂದು ಭಾವ. ಮೊದಲು ಸ್ವಸ್ವರೂಪದಲ್ಲಿದ್ದ ಬಂಗಾರವು, ಬಿಮ್ಮೆ ಕುಂಡಲಾದ್ಯಾಕಾರಕ್ಕೆ ತಿರುಗಿದ್ದು, ಪುನಃ ಸ್ವಸ್ವರೂಪದಲ್ಲಿಯೇ ನಿಲ್ಲುವಂತೆ, ಪರಬ್ರಹ್ಮವೂ ಕೂಡ. ಪೃಥಿವ್ಯಾದ್ಯಾಕಾರದಿಂದ ಬಿನ್ನೋ, ಮ್ಮೆ ಪರಿಣಮಿಸಿ, ಮತ್ತೊಮ್ಮೆ ಆ ಕಾರ್ಯರೂಪವನ್ನು ಬಿಟ್ಟು ಸ್ವಸ್ವರೂಪವನ್ನೇ ಹೊಂದುತ್ತಿರುವುದೆಂದು ಭಾವ. ಉಭಯವಿಧಕಾರಣತ್ವವೂ ಬಂದಕ್ಕೇ ಸಿದ್ಧಿಸುವುದು. ಲೋಕಾನುಭವವಿರುದ್ಧವಾದರೂ, ಪರಮಾತ್ಮನು ಸರ್ವಶಕ್ತನಾದುದರಿಂದ, ಇದು ಅವನಲ್ಲಿಮಾತ್ರ ಸಿದ್ಧಿಸುವುದೆಂಬುದಕ್ಕೆ ವೇದವಲ್ಲಿ ಅನೇಕಪ್ರಮಾಣಗಳುಂಟು. "ಸರ್ವಂ ಖಲ್ವಿದಂ ಬ್ರಹ್ಮ" ಈ ಲೋಕವೆಲ್ಲವೂ 'ಬ್ರಹ್ಮಸ್ವರೂಪವೇ? "ಐತದಾತ್ಮ್ಯಮಿದಂ ಸರ್ವಂ" ಇವೆಲ್ಲವೂ ಬ್ರಹ್ಮಸ್ವರೂಪವು," ಎಂಬವುಗಳಿಂದ ಉಪಾದಾನಕಾರಣತ್ವವೂ,

ವಿಧಿ,ಅಪ್ಪು,ತೇಜಸ್ಸು,ಇವುಗಳಪರಸ್ಪರಸಂಮೇಳನರೂಪವಾದ ತ್ರಿವೃತ್ಕರಣ

"ಯತೋವಾ ಇಮಾನಿ ಭೂತಾನಿ ಜಾಯಂತೇ" "ಯತಸ್ಸರ್ವಾಣಿ ಭೂತಾನಿ ಭವಂತ್ಯಾದಿಯುಗಾಗಮೇ । ಯಸ್ಮಿಂಶ್ಚ ಪ್ರಳಯಂ ಯಾಂತಿ ಪುನರೇವ ಯುಗಕ್ಷಯೇ" ಇತ್ಯಾದಿಶ್ರುತಿಸ್ಮೃತಿವಾಕ್ಯಗಳಿಂದ ನಿಮಿತ್ತಕಾರಣತ್ವವೂ ಸಿದ್ಧವಾಗುವುದು. ಆದರೆ ಅನಾದಿಯಾದ ಮಾಯೆಯೂ ಜಗತ್ತಿಗೆ ಕಾರಣಭೂತವಾಗುವುದಲ್ಲವೆ? ಅದನ್ನೇ ಇಲ್ಲಿ ಧ್ಯಾನವಿಷಯವನ್ನಾಗಿ ಹೇಳಿರಬಾರದೆ ? ಎಂದರೆ, ಅದನ್ನು ನಿಷೇಧಿಸುವರು (ಅಭಿಜ್ಞಃ) ಸರ್ವಜ್ಞನು. (ಅರ್ಥೇಷು) ಆಕಾಶಾದಿಕಾರ್ಯಗಳಲ್ಲಿ (ಅಭಿಜ್ಞಃ) ಸರ್ವಜ್ಞನು, ಅಥವಾ ಜಾಗರೂಕನೆಂದರ್ಥವು. ಇದರಿಂದ ಜಡವಾದ ಪ್ರಕೃತಿಯು ಧ್ಯಾನವಿಷಯವಲ್ಲವೆಂದು ಸಿದ್ಧವಾಗುವುದು. ಮತ್ತು (ಸ್ವರಾಟ್) ಸ್ವಯಂಪ್ರಕಾಶನು. ಅಥವಾ ಸ್ವತಸ್ಸಿದ್ಧವಾದ ಜ್ಞಾನದಿಂದ ಪ್ರಕಾಶಿಸುವನು. ಆದರೆ "ಹಿರಣ್ಮಯಗರ್ಭಸ್ಸಮವರ್ತತಾಗ್ರೇ ಭೂತಸ್ಯ ಜಾತಃ ಪತಿರೇಕ ಆಸೀತ್" ಎಂಬ ಶ್ರುತಿಯಂತೆ, ಮೇಲೆ ಹೇಳಿದ ಗುಣಗಳೆಲ್ಲವೂ ಚತುರ್ಮುಖಬ್ರಹ್ಮನಿಗೂ ಇರುವುದರಿಂದ, ಅವನನ್ನೇ ಧ್ಯಾನವಿಷಯವಾಗಿ ಹೇಳಬಾರದೆ?" ಎಂದರೆ ಆ ಶಂಕೆಯನ್ನು ನಿವಾರಿಸುವರು. (ತೇನೇ ಬ್ರಹ್ಮ ಹೃದಾ ಯ ಆದಿಕವಯೇ) ಯಾವ ವೇದವನ್ನು ಕುರಿತು ಪಂಡಿತರೂಕೂಡ ಮರುಳಾಗುವರೋ, ಆ ಶಬ್ದಬ್ರಹ್ಮನನ್ನು ಚತುರ್ಮುಖಬ್ರಹ್ಮನಿಗೂ ಮನಸ್ಸಿನಿಂದ ಉಪದೇಶಿಸಿದವನು. "ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ" ಎಂಬ ಶ್ರುತ್ಯರ್ಥವು ಇಲ್ಲಿ ಸೂಚಿತವಾಗುವುದು. ಮತ್ತು (ಯತ್ರ) ಯಾವ ಪರಬ್ರಹ್ಮನಲ್ಲಿ (ತ್ರಿಸರ್ಗಃ) ಮಾಯಾಗುಣಗಳಾದ ಸತ್ವರಜಸ್ತಮಸ್ಸುಗಳಿಂದುಂಟಾದ ಭೂತೇಂದ್ರಿಯದೇವತಾರೂಪಸೃಷ್ಟಿಯು (ತೇಜೋವಾರಿಮೃದಾಂ) ತೇಜಸ್ಸು, ನೀರು, ಭೂಮಿ, ಇವುಗಳ ಬದಲಾವಣೆಯಂತೆ, ಎಂದರೆ ಬಂದು ಮತ್ತೊಂದರಹಾಗೆ ತೋರುವಂತೆ (ಮೃಷಾ) ಅಸತ್ಯವೋ, ಅಂತಹ ಪರಮಾತ್ಮನೆಂದನ್ವಯವು. ಬಿಸಿಲುಜಳದಲ್ಲಿ ಜಲಬುದ್ಧಿಯು ಹೇಗೆ ನಿಜವಲ್ಲವೋ, ಹಾಗೆಯೇ ಪರಬ್ರಹ್ಮವಿಷಯದಲ್ಲಿ ಗುಣಜನ್ಯವಾದ ಸೃಷ್ಟಿಯು ಕೇವಲಭ್ರಾಂತಿಯೇಪೊರತು ನಿಜವಲ್ಲವೆಂದು ಭಾವವು. ಮತ್ತು (ಧಾಮ್ನಾ ಸ್ವೇನ ಸದಾನಿರಸ್ತಕುಹಕಂ) ತನ್ನ ತೇಜಸ್ಸಿನಿಂದ ಮಾಯಾಮಯವಾದ ಈ ಪ್ರಪಂಚನನ್ನು ಯಾವಾಗಲೂ ನಾಶಪೊಂದಿಸುತ್ತಿರುವನು. (ಸತ್ಯಂ) ಸತ್ಯಸ್ವರೂಪನು (ತಂ) ಅಂತಹ (ಪರಂ) ಪರಬ್ರಹ್ಮನನ್ನು (ಧೀಮಹಿ) ಧ್ಯಾನಿಸುವೆವು.

ಇದರ ಮುಖ್ಯಾರ್ಥವೇನೆಂದರೆ, ಪರಬ್ರಹ್ಮವೊಂದೇ ಸತ್ಯವು. ಆ ಪರಬ್ರಹ್ಮವೇ ರೂಪಾಂತರದಿಂದ ಈ ಪ್ರಪಂಚರೂಪವಾಗಿ ತೋರಿ, ಆಗಾಗ ಆ ಮಾಯಾಪ್ರಪಂ

ವೆಂಬ ಕಾರ್ಯವನ್ನು ನಡೆಸಿದನೋ, ಯಾವನ ವಿಷಯದಲ್ಲಿಮಾತ್ರ ಈತ್ರಿವೃತ್ಕ

ಚನವನ್ನು ತನ್ನಲ್ಲಿಯೇ ಅಡಗಿಸಿಕೊಳ್ಳುತ್ತಿರುವುದರಿಂದ, ಜಗತ್ತಿನ ಸೃಷ್ಟಿಸ್ಥಿತಿಲಯಗಳೆಂಬ ಕಾರ್ಯಗಳು ನಡೆಯುತ್ತಿರುವುವು. ಸರ್ವಜ್ಞನಾಗಿಯೂ, ಸ್ವಯಂಪ್ರಕಾಶವುಳ್ಳವನಾಗಿಯೂ ಇರುವ ಆ ಪರಮಾತ್ಮನು ಯೋಗಿಗಳಿಗೂ, ಮೋಹವನ್ನುಂಟುಮಾಡತಕ್ಕ ವೇದಗಳನ್ನು ಬ್ರಹ್ಮನಿಗೆ ಉಪದೇಶಿಸಿದನು. ಪೃಥಿವ್ಯಾದಿಭೂತಗಳಲ್ಲಿ ಹುಟ್ಟುವ ರೂಪಾಂತರದಂತೆ ಇವನಲ್ಲಿ ತ್ರಿಗುಣಸೃಷ್ಟಿಸಂಬಂಧವು ಸತ್ಯವಲ್ಲ. ತನ್ನ ತೇಜೋಮಂಡಲದಿಂದ ಮಾಯಾಮಯವಾದ ಈ ಪ್ರಪಂಚವನ್ನು ಯಾವಾಗಲೂ ನಿರಸನಮಾಡುತ್ತ ಸತ್ಯಸ್ವರೂಪದಿಂದಿರುವ ಆ ಪರಬ್ರಹ್ಮನೇ ಧ್ಯಾನವಿಷಯನೆಂದು ಮುಖ್ಯಾರ್ಥವು.

ವ್ಯತಿರೇಕಾರ್ಥವು.

(ಸತ್ಯಂ ಪರಂ ಧೀಮಹಿ) ನಿರತಿಶಯಾನಂದಸ್ವರೂಪನಾಗಿಯೂ, ಸರ್ವೋತ್ಕೃಷ್ಟನಾಗಿಯೂ ಇರುವ ಶ್ರೀಮನ್ನಾರಾಯಣನನ್ನು ಧ್ಯಾನಿಸುವೆವೆಂದರ್ಥವು. ಆದರೆ ಪ್ರತ್ಯಕ್ಷವಾಗಿ ಕಣ್ಣಿಗೆ ಕಾಣದ ನಾರಾಯಣನೊಬ್ಬನಿರುವನೆಂಬುದಕ್ಕೆ ಪ್ರಮಾಣವೇನು? ಎಂದರೆ, ಲಕ್ಷಣವನ್ನು ಹೇಳುವರು. (ಅನ್ವಯವ್ಯತಿರೇಕಾಭ್ಯಾಂ) ಅನ್ವಯವ್ಯತಿರೇಕಗಳೆಂಬ ಎರಡುವಿಧದ ಅನುಮಾನಗಳಿಂದಲೂ, (ಅಸ್ಯ) ಈ ಪ್ರಪಂಚಕ್ಕೆ (ಜನ್ಮಾದಿ) ಸೃಷ್ಟಿ, ಸ್ಥಿತಿ, ಲಯ, ಬಂಧನ, ಮೋಕ್ಷನ, ಬಂಧ, ಮೊದಲಾದುವುಗಳೆಲ್ಲವೂ (ಯತಃ) ಯಾವ ನಾರಾಯಣನಿಂದಲೇ ಆಗುವುವೋ, ಅಂತಹ ಪರಮಾತ್ಮನನ್ನು ಧ್ಯಾನಿಸುವೆವೆಂದನ್ವಯವು. ಹೀಗೆ ಜಗತ್ಸೃಷ್ಟ್ಯಾದಿಕಾರಣನೆಂಬುದು ಆ ಪರಮಾತ್ಮನೊಬ್ಬನಿಗೆಮಾತ್ರವೇ ಒಪ್ಪುವುದರಿಂದ "ಕಾರಷ್ಟಂತು ಧ್ಯೇಯಃ" ಎಂಬಂತೆ ಆತನೇ ಧ್ಯೇಯನೆಂದೂ ಭಾವವು. ಆದರೆ ಪರಮಾಣುಪುಂಜಕ್ಕೆ ಜಗತ್ಕಾರಕತ್ವವಿಲ್ಲವೆ? ಎಂದರೆ, ಪರಮಾಣುಗಳು ಜಡವಸ್ತುಗಳಾದುದರಿಂದ ಅದಕ್ಕೆ ಜಗತ್ಕಾರಕತ್ವವನ್ನು ಹೇಳುವುದಕ್ಕಿಲ್ಲ! ಬಂದುವೇಳೆ ಪರಮಾಣುಗಳಿಗೇ ಚೈತನ್ಯವನ್ನಂಗೀಕರಿಸಿ ಅದನ್ನು ಸಾಧಿಸುವುದಕ್ಕೂ ಅವಕಾಶವಿಲ್ಲ. ಹಾಗಿದ್ದರೆ ಪ್ರಳಯವೇ ಇಲ್ಲದೆ ಹೋಗಬೇಕಾಗುವುದು. ಅಥವಾ ಆ ಪರಮಾಣುಗಳಲ್ಲಿಯೇ ಚೇತನಾಚೇತನಗಳೆಂಬ ಎರಡುವಿಭಾಗಗಳುಂಟೆಂದು ಗ್ರಹಿಸಿದಪಕ್ಷದಲ್ಲಿಯೂ, ಅವೇಡನ್ನೂ ಸೇರಿಸುವುದಕ್ಕಾದರೂ ಬೇರೊಂದು ಕಾರಣವಿಲ್ಲದೆ ತೀರದಷ್ಟೆ? ಆದನ್ನೇ ಈಗ ನಾವು ಪರಬ್ರಹ್ಮವೆಂದು ಹೇಳುವೆವು. ಇದಕ್ಕಾಗಿಯೇ ವ್ಯಾಸಮಹರ್ಷಿಗಳು ಬ್ರಹ್ಮಸೂತ್ರದಲ್ಲಿ "ಸಮುದಾಯೋಭಯಹೇತುಕೇಽಪಿ ತದಪ್ರಾಪ್ತಿಃ" ಎಂದುಹೇಳಿ ಪರಮಾಣುವಾದವನ್ನು ನಿರಾಕರಿಸುವರು. ಹಾಗೂ ಆಗಲಿ! ಹಾಲು ಮೊಸರಾದುವುಗಳು ಅಚೇತನಗಳಾ

ರಣದಿಂದುಂಟಾದ, ಗುಣತ್ರಯಾತ್ಮಕವಾದ ಸೃಷ್ಟ್ಯಾದಿವಿಕಾರಗಳು ಅಂಟಲಾ

ದ್ದರೂ, ತಮಗೆ ತಾವೇ ವಿಕಾರಹೊಂದುವಂತೆ ಪ್ರಕೃತಿಗೇ ಜಗತ್ಕಾರಣತ್ವವನ್ನಂಗೀಕರಿಸಬಾರದೆ? ಎಂದರೆ(ಅರ್ಥಸ್ವಭೆಜ್ಞಾ)ಜಡವಾದ ಮಾಯೆಗೆ ಸರ್ವಜ್ಞತ್ವವು ಅಸಂಭಾವಿತವಾದುದೆಂದ ಆ ಶಂಕೆಯೂ ನಿರಸ್ತವಾಗುವುದು. ಇದಲ್ಲದೆ ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನೆನ್ನುಕುರಿತು ''ತಾನ್ಯಹಂ ವೇದ ಸರ್ವಾಣಿ ನತ್ವಂ ವೇತ್ಥಪರಂತಪ" ಅರ್ಜುನಾ! ನಿನಗೂ ನನಗೂ ಲೆಕ್ಕವಿಲ್ಲದಷ್ಟು ಜನ್ಮಗಳು ಕಳೆದು ಹೋದುವು. ಆದರೆ ಅವೆಲ್ಲವನ್ನೂ ನಾನು ಬಲ್ಲೆನು!ನೀನು ಕಾಣೆ!" ಎಂದು ಹೇಳಿರುವುದರಿಂದ, ಸರ್ವಜ್ಞತ್ವವೆಂಬ ಗುಣವು ಆ ನಾರಾಯಣನಿಗೊಬ್ಬನಿಗಲ್ಲದೆ ಬೇರೆಯವರಿಗಿಲ್ಲವೆಂದೂ ಸಿದ್ಧವಾಗುವುದು. ಇವನಿಗೂಮೇಲೆ ರುದ್ರಾದಿದೇವತೆಗಳಿಗೆ ಆಗುಣವಿರಬಾರದೆ?ಎಂದರೆ(ಸ್ವರಾಟ್) ತನಗೆತಾನೇ ಪ್ರಭುವೇಹೊರತು ಇವನಿಗೆಮೇಲೆ ಬೇರೊಬ್ಬರಿಲ್ಲವೆಂದು ತಾತ್ಪರ್ಯವು. ''ಯಂ ಕಾಮಯೇ ತಂ ತಮುಗ್ರಂ ಕೃಣೋಮಿ" ನನಗೆ ಇಷ್ಟಬಂದವರನ್ನು ಈಶ್ವರನನ್ನಾಗಿ ಮಾಡುವೆನು.ಎಂಬೀ ಶ್ರುತ್ಯರ್ಥವನ್ನು ಆಲೋಚಿಸಿದಪಕ್ಷದಲ್ಲಿ.ರುದ್ರಾದಿಗಳಿಗೂಕೂಡ, ನಾರಾಣನುಗ್ರಹದಿಂದಲೇ ಜ್ಞಾನಾದಿಗುಣಗಳುಂಟಾಗುವಂತೆ ಸ್ಪಷ್ಟವಡುವುದು. ಆದರೆ ಅಪಾರವಾದ ವೇದದಲ್ಲಿ ಕೆಲವುಶ್ರುತಿಗಳುಮಾತ್ರ ಹರಿಸರ್ವೋತ್ತಮತ್ವವನ್ನು ಹೇಳಿದನುತ್ರಕ್ಕೆ,ಅವರಲ್ಲಿ ನಿಶ್ಚಯವೇನು? ಎಂದರೆ. ಮುಂದಿನಸಾಕ್ಯದಿಂದ ಅದನ್ನು ಪರಿಹರಿಸುವರು.(ತೇನೇ ಬ್ರಹ್ಮ ಹೃದಾ ಯ ಆದಿಕವಯೇ)ಬ್ರಹ್ಮನಿಗೂ ವೇದಗಳನ್ನು ವಿಸ್ತರಿಸಿದವನಾವುದರಿಂದ, ಆ ನಾರಾಯಣನೇ ಸರ್ವೋತ್ತಮನೆಂದು ಭಾವವು ಚತುರ್ಮುಖಬ್ರಹ್ಮನೊಬ್ಬನಿಗೆ ವೇದಗಳನ್ನುಪದೇಶಿಸಿದಮಾತ್ರಕ್ಕೆ, ಇತರರೆಲ್ಲರ ಮೇಲೂ ಅವನಿಗೆ ಸರ್ವಾಧಿಪತ್ಯವು ಹೇಗೆ ಸಿದ್ಧಿಸುವುದು?" ಎಂದರೆ, ''ಪ್ರಜಾಪತೇ ನ ತ್ವದೇತಾನ್ಯನ್ಯೋ ವಿಶ್ವಾಜಾತಾನಿ ಪರಿತಾಬಭೂವ"ಎಲೈ ಬ್ರಹ್ಮನೇ, ನಿನ್ನಿಂದ ಈ ಸಮಸ್ತ ಭೂತಗಳೂ ಹುಟ್ಟಿ, ನಿನ್ನ ಸುತ್ತಲೂ ಆವರಿಸಿರುವುವು. ನಿನಗೆಮೇಲೆ ಬೇರೊಬ್ಬರಿಲ್ಲವು. ಎಂದು ಭಗವಂತನೇ ಹೇಳಿರುವುದರಿಂದ.ಆ ಚತುರ್ಮುಖನು ನಿರತಿಶಯ ಪ್ರಭಾವವುಳ್ಳವನೆಂದು ಸ್ಪಷ್ಟವಾಗುವುದು. ಅಂತಹ ಬ್ರಹ್ಮನಿಗೂ ವೇದೋಪದೇಶವನ್ನು ಮಾಡಿದ ನಾರಾಯಣನು ಸರ್ವಾಧಿಪತಿಯೆಂದು ಹೇಳುವುದಕ್ಕೆ ಸಂದೇಹವೇನು? ಹಾಗಿದ್ದರೆ ಅಂತಹ ಬ್ರಹ್ಮನಿಗೆ ಈ ಉಪದೇಶವೇಕೆ? ಎಂದರೆ (ಮುಹ್ಯಂತಿ ಯತ್ಸೂರಯಃ) ಬ್ರಹ್ಮಾದಿಗಳೂ ಅದರರ್ಥವನ್ನು ಉಪದೇಶವಿಲ್ಲದೆ ಗ್ರಹಿಸಲಾರರೆಂದು ತಾತ್ಪರ್ಯವು.

ಆದರೆ ಸೃಷ್ಟ್ಯಾದಿಗೆ ಮೊದಲೇ ಇದ್ದ ಭಗವಂತನು ಈ ಜಗತ್ಸೃಷ್ಟ್ಯಾದಿಕಾರ್ಯವನ್ನು ದ್ದೇಶಿಸಿದುದೇಕೆ ? ಯಾವುದಾದರೂ ಪ್ರಯೋಜನವನ್ನುದ್ದೇಶಿಸಿ ಸೃಷ್ಟಿಸಿದನೆಂದು

ರವೋ, (ಮಿಥ್ಯಾಭೂತವಾಗುವುದೋ) ಯಾವನು ತನ್ನ ತೇಜಸ್ಸಿನಿಂದಲೇ

ಹೇಳಿದಪಕ್ಷದಲ್ಲಿ, ಅದಕ್ಕೆ ಮೊದಲು ಅಪೂರ್ಣಕಾಮನಾಗಿದ್ದವನಿಗೆ ಸೃಷ್ಟಿಸಾಮರ್ಥ್ಯವೂ ಇರಲಾರದೆಂದೇ ಹೇಳಬೇಕಲ್ಲವೆ?" ಎಂದರೆ (ತೇಜೋವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋಮೃಷಾ) ಪೃಥಿವ್ಯಪ್‌ತೇಜಸ್ಸುಗಳ ಕಾರ್ಯದಂತೆ ಮಾಯಾಗುಣಸೃಷ್ಟಿಯು ಆತನ ವಿಷಯಲ್ಲಿಮಾತ್ರ ವಿಫಲವು. ಎಂದರೆ ಆತನಿಗೆ ಮೊದಲಿಲ್ಲದ ಫಲವನ್ನು ಕೈಗೂಡಿಸುವುದಕ್ಕೋಸ್ಕರವಲ್ಲವೆಂದು ತಾತ್ಪರ್ಯವು. ಹಾಗಿದ್ದರೆ ನಿಷ್ಪ್ರಯೋಜನವಾಗಿ ಪ್ರವೃತ್ತಿಯು ಹೇಗೆ ಸಂಭವಿಸುವುದು, ಎಂದರೆ "ದೇವಸ್ಯೈಷ ಸ್ವಭಾವೋಯಮಾಪ್ತಕಾಮಸ್ಯ ಕಾ ಸ್ಪೃಹಾ" ಭಗವಂತನಿಗೆ ಈ ಸೃಷ್ಟಿಕಾರ್ಯವು ಸ್ವಭಾವವೇ ಹೊರತು ಪೂರ್ಣಕಾಮನಾದ ಆತನಿಗೆ ಬೇರೆ ಯಾವ ಕೋರಿಕೆಯೂ ಇಲ್ಲವೆಂದೂ, "ಲೋಕವತ್ತು 'ಲೀಲಾಕೈವಲ್ಯಂ" ಭಗವಂತನಿಗೆ ಈ ಲೋಕವು ಲೀಲಾಕೈವಲ್ಯವೆಂದೂ ಹೇಳಲ್ಪಟ್ಟಿರುವುದು. ಆದುದರಿಂದ ಪೂರ್ಣಕಾಮನಾದ ಪರಮಾತ್ಮನಿಗೆ ಸೃಷ್ಟಿಯಲ್ಲಿ ಪ್ರವೃತ್ತಿಯು ಕೇವಲಲೀಲಾರ್ಥವೆಂದು ಸಿದ್ಧವು. ಇದೇ ವಾಕ್ಯದಲ್ಲಿ (ಅಮೃಷಾ) ಎಂಬ ಪದವಿಭಾಗವನ್ನು ಮಾಡಿ, ಅರ್ಥಾಂತರವನ್ನೂ ಹೇಳಬಹುದು. (ಯಥಾ) ಯಾವಪ್ರಕಾರವಾಗಿ (ತೇಜೋವಾರಿಮೃದಾಂ) ಪೃಥಿವ್ಯಪ್ ತೇಜಸ್ಸುಗಳ (ವಿನಿಮಯಃ) ಕಾರ್ಯವುಂಟಾಗುವುದೋ, ಅದೇರೀತಿಯಲ್ಲಿ ಈಶ್ವರನಲ್ಲಿಯೂಕೂಡ (ತ್ರಿಸರ್ಗಃ) ಜೀವೇಶ್ವರಜಡಸೃಷ್ಟಿಯು (ಅಮೃಷಾ) ಸತ್ಯವೆಂದು ಭಾವವು. ಜೀವೇಶ್ವರಜಡಸೃಷ್ಟಿಗಳ ಕ್ರಮವೇನೆಂದರೆ:-ಬಿಂದೇ ತೇಜಸ್ಸುಪಾರ್ಥಿವಾದಿಪದಾರ್ಥಗಳಲ್ಲಿ ಅಂತರ್ಗತವಾಗಿದ್ದು, ಅವುಗಳನ್ನು ಮಥಿಸಿದಾಗ ಹೊರಗೆ ಬರುವಂತೆ, ಈಶ್ವರನು ಜಗತ್ತನ್ನು ಸೃಷ್ಟಿಸಿ, ನಾನಾರೂಪದಿಂದ ಅವುಗಳಲ್ಲಿ ಅಂತರ್ಯಾಮಿಯಾಗಿ ಪ್ರವೇಶಿಸಿ, ಭಕ್ತಾನುಗ್ರಹಾರ್ಥವಾಗಿ ಪಾಸುದೇವಾದ್ಯವತಾರಗಳನ್ನು ಧರಿಸಿ, ಆಗಾಗ ತನ್ನ ತೇಜಸನ್ನು ಪ್ರಕಾಶಪಡಿಸುವನು ಇದೇ ಈಶ್ವರಸೃಷ್ಟಿಯು. ಸೂರ್ಯನು ಪ್ರಕಾಶಿಸುವಾಗ ಸಮಸ್ತಜಲೋಪಾಧಿಗಳಲ್ಲಿಯೂ ಅವನ ಪ್ರತಿಬಿಂಬವುಂಟಾಗುವಂತೆ, ಸೂಕ್ಷ್ಮಸ್ಥೂಲೋಪಾಧಿಗಳಲ್ಲಿ ಪ್ರತಿಬಿಂಬಭೂತಗಳಾದ ಜೀವಗಳು ಪರಬ್ರಹ್ಮನಿಂದಲೇ ಉಂಟಾಗುವುವು. ಇದೇ ಜೀವಸೃಷ್ಟಿಯು. ಕುಂಬಾರನು ಮಣ್ಣನ್ನು ತೆಗೆದು ಘಟಾದಿಗಳನ್ನು ಸೃಷ್ಟಿಸುವಂತೆ, ಭಗವಂತನು ಜಡಪ್ರಕೃತಿಯನ್ನು ಗ್ರಹಿಸಿ ಅಹಂಕಾರಾದಿಜಡಗಳನ್ನೇ ಸೃಷ್ಟಿಸುವನು ಇದೇ ಜಡಸೃಷ್ಟಿಯು. ಅವನಲ್ಲಿ ಈ ವಿಧವಾದ ಜೀವೇಶ್ವರ ಜಡಸೃಷ್ಟಿಗಳು ಸತ್ಯವೆಂದು ಭಾವವು. ಆದರೆ ತೇಜಸ್ಸುಮೊದಲಾದುವುಗಳಿಂದ ಹುಟ್ಟುವ ಕೆಡಿ, ಮೊದಲಾದುವುಗಳು ಮಿಥ್ಯೆಯಾಗುವಂತೆ, ಭಗವಂತನ ಈ ಸೃಷ್ಟಿಯೂ ಮಿಥ್ಯಾಭೂತವಾಗುವುದೆಂಬ ಅರ್ಥವು ತೋರುವುದಲ್ಲವೆ? ಎಂ

ಆ ಬಗೆಯ ಅಜ್ಞಾನಗಳೆಲ್ಲವನ್ನೂ ಅಡಗಿಸಬಲ್ಲನೋ, ಯಾವನು ಯಾವ ಬಗೆಯ ವಿಕಾರಕ್ಕೂ ಒಳಗಾಗದ ಸತ್ಯಸ್ವರೂಪನೋ, ಅಂತಹ

ದರೆ (ಧಾಮ್ನಾ ಸ್ವೇನ ಸದಾ ನಿರಸ್ತಕುಹಕಂ) ಸ್ವಸ್ವರೂಪಜ್ಞಾನದಿಂದ ಯಾವಾಗಲೂ, ನಿರಸಿಸಲ್ಪಟ್ಟ, ಇಂದ್ರಜಾಲಾದಿಮಾಯೆಗಳುಳ್ಳವನು. ಎಂದರೆ ಮಾಯಾಮಯವಾದ ಸೃಷ್ಟಿಯನ್ನು ಮಾಡತಕ್ಕವನಲ್ಲನೆಂದು ಭಾವ. ಇತಂಹ (ಸತ್ಯಂ) ನಿರತಿಶಯಾನಂದಾನುಭವರೂಪನಾದ (ಪರಂ) ಪರಮಾತ್ಮಸ್ವರೂಪನಾದ ನಾರಾಯಣನೆನ್ನು (ಧೀಮಹಿ) ಧ್ಯಾನಿಸುವೆವೆಂದರ್ಥವು.

ಇದರಿಂದ ಭಗವಂತನೇ ಈ ಜಗತ್ತಿನ ಸೃಷ್ಟ್ಯಾದಿಗಳಿಗೆ 'ಕಾರಣಭೂತನು ಸರ್ವಜ್ಞನು, ಸರ್ವಾಧಿಪತಿಯು, ಚತುರ್ಮುಖಬ್ರಹ್ಮನಿಗೂ ಜ್ಞಾನೋಪದೇಶಮಾಡಿದವನು ಲೀಲಾರ್ಥವಾಗಿ ಜೀವೇಶ್ವರಜಡಸೃಷ್ಟಿಗಳೆಂಬ 'ತ್ರಿಸರ್ಗದಲ್ಲಿ ಪ್ರವೃತ್ತಿಯುಳ್ಳವನು ನಿರತಿಶಯಾನಂದಾನುಭವಸ್ವರೂಪನು ಇಂತಹ ನಾರಾಯಣನೊಬ್ಬನೇ, ಸರ್ವಗುಣಸಂಪೂರ್ಣನಾಗಿಯೂ ಸರ್ವೋತ್ತಮನಾಗಿಯೂ. ಈ ಜೀವಜಡಪ್ರಪಂಚಗಳಿಂದ ಭಿನ್ನನಾಗಿಯೂ ಇರುವನೆಂದು ದ್ವೈತಾರ್ಥವು.

ಗಾಯತ್ರೀ ಮಂತ್ರಾರ್ಥಸೂಚನವು.

''ಗಾಯತ್ಯುಪಕ್ರಮೋ ಯತ್ರ ತತ್ರ ಭಾಗವತಂವಿದುಃ''ಎಂಬ ಪುರಾಣೋಕ್ತ ಲಕ್ಷಣವನ್ನನುಸರಿಸಿ, ಈ ಪ್ರಥಮಶ್ಲೋಕದಲ್ಲಿ ಗಾಯತ್ರೀಮಂತ್ರಾರ್ಥವು ಸೂಚಿತವಾಗುವುದು. ಗಾಯತ್ರೀಮಂತ್ರಾರ್ಥವೇನೆಂದರೆ:—(ಯಃ ನಃ ಧಿಯಃ ಪ್ರಚೋದಯಾತ್) ''ಯಾವ ಪರಮಾತ್ಮನು ನಮ್ಮ ಬುದ್ಧಿಗೆ ಪ್ರೇರಕನೋ, (ಸವಿತುಃ ದೇವಸ್ಯ) ಸೃಷ್ಟಿಕರ್ತನಾಗಿಯೂ, ಸ್ವಯಂಪ್ರಕಾಶವುಳ್ಳವನಾಗಿಯೂ ಇರುವ ಆ ಸರ್ವೇಶ್ವರನ (ವರೇಣ್ಯಂ ಅತ್ಯುತ್ತಮವಾದ) (ಭರ್ಗಃ) ತೇಜಸ್ಸನ್ನು, (ಧೀಮಹಿ) 'ಧ್ಯಾನಿಸುವೆವು" ಎಂಬುದು ಗಾಯತ್ರೀಮಂತ್ರಾರ್ಥವು. ಇದರಂತೆಯೇ ಈ ಮಂಗಳಶ್ಲೋಕದಲ್ಲಿಯೂಕೂಡ (ಜನ್ಮಾದ್ಯಸ್ಯಯತಃ) ಎಂಬುದಾಗಿ ಜಗತ್ಕಾರಣತ್ವವನ್ನು ಹೇಳುವುದರಿಂದ, ಸವಿತೃಪದಾರ್ಥವು ಸೂಚಿತವಾಗುವುದು. (ಸ್ವರಾಟ್) ಎಂಬುದರಿಂದ ದೇವಶಬ್ದಾರ್ಥವು ಸೂಚಿತವಾಗುವುದು. (ವರಂ) ಎಂಬಶಬ್ದದಿಂದ ವರೇಣ್ಯ ಶಬ್ದಾರ್ಥವು ಸೂಚಿತವಾಗುವುದು. ವೇದೋಪದೇಶಕನೆಂಬುದರಿಂದ (ಧಿಯೋ ಯೋ ನಃ ಪ್ರಚೋದಯಾತ್) ಎಂಬ ವಾಕ್ಯಾರ್ಥವು ಬೋಧಿತವಾಗುವುದು. (ಧಾಮ್ನಾ ಸ್ವೇನ) ಎಂಬುದರಿಂದ ಭರ್ಗಶಬ್ದಾರ್ಥವು ಸೂಚಿತವಾಗವುದು. (ಧೀಮಹಿ) ಎಂಬ ಪದವು ಶಬ್ದಾರ್ಥಗಳೆರಡರಿಂದಲೂ, ಗಾಯತ್ರೀಮಂತ್ರವನ್ನು ಹೊಲುವುದು.

ನಿರತಿಶಯಾನಂದಕಲ್ಯಾಣಗುಣಗಣಾವಿತಿಷ್ಟನಾದ ಪರಮಾತ್ಮನನ್ನು ಧ್ಯಾನಿಸುವೆವು.

ಶ್ಲೋ॥ ಧರ್ಮಃ ಪ್ರೋಜ್ಝಿತಕೈತವೋऽತ್ರ ಪರಮೋ ನಿರ್ಮತ್ಸರಾಣಾಂ ಸತಾಂ
ವೇದ್ಯಂ ವಾಸ್ತವಮತ್ರ ವಸ್ತು ಶಿವದಂ ತಾಪತ್ರಯೋನ್ಮೂಲನಂ ।
ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾ ಪರೈರೀಶ್ವರ ।
ಸದ್ಯೋ ಹೃದ್ಯವರುಧ್ಯತೇऽತ್ರ ಕೃತಿಭಿಶ್ಶುಶ್ರೂಷುಭಿಸ್ತತ್ಕ್ಷಣಾತ್॥

ಈ ಗ್ರಂಥದಲ್ಲಿ ನಿಷ್ಕಪಟವಾಗಿಯೂ, ಸರ್ವೋತ್ತಮಫಲಪ್ರದವಾಗಿಯೂ, ನಿರ್ಮತ್ಸರರಾದ ಸತ್ಪುರುಷರಿಗೆ ಸೇವ್ಯವಾಗಿಯೂ ಇರುವ ಭಕ್ತಿರೂಪವಾದ ಧರ್ಮವು ಪ್ರತಿಪಾದಿಸಲ್ಪಡುವುದು ಮತ್ತು ಇದರಲ್ಲಿ ಆಧ್ಯಾತ್ಮಿಕಾದಿ ತಾಪತ್ರಯಗಳನ್ನು ನೀಗಿಸಿ, ಸರ್ವೋತ್ತಮವಾದ ಶ್ರೇಯಸ್ಸನ್ನು ಕೈಗೂಡಿಸತಕ್ಕುದಾಗಿ, ಅಪ್ರಾಕೃತಸಹಜಗುಣಾವಿತಿಷ್ಟನಾಗಿರುವ ಪರಾತ್ಪರ ವಸ್ತುವಿನ ಸ್ವರೂಪವು ವೇದ್ಯವಾಗುವುದು. ಮಹರ್ಷಿಪ್ರೋಕ್ತವಾಗಿ, ಕೇವಲಭಕ್ತಿಪ್ರದಾನವಾದ ಈ ಭಾಗವತವೆಂಬ ಗ್ರಂಥವಿರುವಾಗ, ಬೇರೆ ಯಾವ ಶಾಸ್ತ್ರಗಳಿಂದೇನು? ಲೋಕದಲ್ಲಿ ಯಾವ ಧನ್ಯರು ಈ ಸದ್ಗ್ರಂಥವನ್ನು ಕೇಳಬೇಕೆಂದಪೇಕ್ಷಿಸುವರೋ, ಅಂತವರ ಹೃದಯದಲ್ಲಿ ಆಕ್ಷಣವೇ ಸರ್ವೇಶ್ವರನು ತಾನೇ ಬಂದು ಸಿಕ್ಕಿಬಿಳುವನು.

ಶ್ಲೋ ॥ ನಿಗಮಕಲ್ಪತರೋರ್ಗಲಿತಂ ಫಲಂ ।
ಶುಕಮುಖಾದಮೃತದ್ರವಸಂಯುತಂ ।
ಪಿಬತ! ಭಾಗವತಂ ರಸಮಾಲಯಂ ।
ಮುಹುರಹೋ! ರಸಿಕಾ ಭುವಿ ಭಾವುಕಾಃ ॥

ಎಲೈ ರಸಜ್ಞರಾದ ಸಜ್ಜನರೆ! ವೇದಗಳೆಂಬ ಕಲ್ಪವೃಕ್ಷದಿಂದ ಗಿಳಿಕಚ್ಚಿಬಿದ್ದ ಹಣ್ಣಿನಂತೆ, ಸರ್ವವೇದಸಾರಭೂತವಾಗಿ, ಶುಕಮುನಿಯ ಮುಖದಿಂದ ಹೊರಟಿರುವ ಈ ಭಾಗವತವು, ಅಮೃತಸಮಾನವಾದ ರಸವನ್ನು ಸ್ರವಿಸುವಂತಿರುವುದು. ಆದುದರಿಂದ ನೀವೆಲ್ಲರೂ ಇದರ ರಸವನ್ನು ನಿಮ್ಮ ಮರಣಾವಧಿಯಾಗಿ ಬಾರಿಬಾರಿಗೂ ಆಸ್ವಾದಿಸುತ್ತಿರಬೇಕು!"

ಮೊದಲು ಒಂದಾನೊಂದು ಕಾಲದಲ್ಲಿ ಶೌನಕಾದಿಮಹಾಮುನಿಗಳು ಅನೇಕದೇವತೆಗಳಿಗೆನಿತ್ಯನಿವಾಸವಾದ*ನೈಮಿಶಾರಣ್ಯದಲ್ಲಿ†ಪರಮಪದಪ್ರಾಪ್ತಿಗಾಗಿ ಸಹಸ್ರವರುಷಗಳವರೆಗೆ ನಡೆಸಬೇಕಾದ ಸತ್ರಯಾಗವನ್ನು ನಡೆಸುತಿದ್ದರು. ಈನಡುವೆ ಒಂದಾನೊಂದುದಿನದಲ್ಲಿ, ಈ ಮಹರ್ಷಿಗಳೆಲ್ಲರೂ ಉಷಃಕಾಲದಲ್ಲಿಯೇ ಎದ್ದು ಸ್ನಾನಮಾಡಿ, ಅಘ್ರ್ಯವನ್ನುಕೊಟ್ಟು, ಅಗ್ನಿಕಾರ್ಯ್ಯಗಳನ್ನೂ ತೀರಿಸಿಕೊಂಡು, ಸೂತಪೌರಾಣಿಕನಬಳಿಗೆ ಬಂದು, ಅವನನ್ನು ಯಥೋಚಿತವಾಗಿ ಸತ್ಕರಿಸಿ, ಸುಖಾಸೀನನಾಗಿದ್ದ ಆತನನ್ನು ಅತ್ಯಾದರದಿಂದ ಪ್ರಶ್ನೆಮಾಡುವರು ‡ ‘‘ಎಲೈ ದೋಷರಹಿತನಾದ ಸೂತನೆ!

---

* ಪೂರ್ವದಲ್ಲಿ ಮಹರ್ಷಿಗಳು ತಮಗೆ ತಪೋಯೋಗ್ಯವಾದ ಪುಣ್ಯಸ್ಥಳವಾವುದೆಂದು ಬ್ರಹ್ಮನನ್ನು ಪ್ರಾರ್ಥಿಸಲು, ಬ್ರಹ್ಮನು ಮನೋಮಯವಾದ ಒಂದು ಚಕ್ರವನ್ನು ನಿರ್ಮಿಸಿ, ಅದನ್ನು ಭೂಲೋಕದಕಡೆಗೆ ಪ್ರಯೋಗಿಸಿ, ಅದರ ನೇಮಿಯು (ಬಳಿಯು)ಯಾವ ಸ್ಥಳದಲ್ಲಿ ಮುರಿದು ಚಕ್ರವ ನಿಂತುಬಿಡುವುದೋ, ಅದೇ ಉತ್ತಮ ಕ್ಷೇತ್ರವೆಂದು ತಿಳಿಸಿದನು. ಅದರಂತೆ ಋಷಿಗಳು ಆ ಚಕ್ರವನ್ನು ಹಿಂಬಾಲಿಸಿದಾಗ, ಆ ಚಕ್ರವು ಈ ಸ್ಥಳದಲ್ಲಿ ನಿಂತುಹೋಯಿತು (ನೇಮಿಶ್ಶೀರ್ಯತ ಇತಿ ನೇಮಿಶಮೇವ ನೈಮಿಶಂ) ಎಂಬ ವ್ಯುತ್ಪತ್ತಿಯನ್ನನುಸರಿಸಿ ಬ್ರಹ್ಮನ ರಥಚಕ್ರದ ನೇಮಿಯು ಮುರಿದು ಬಿದ್ದ ಈ ಸ್ಥಳಕ್ಕೆ ನೈಮಿಶಕ್ಷೇತ್ರವೆಂದು ಹೆಸರಾಯಿತು.

† ಇಲ್ಲಿ ‘‘ಸ್ವರ್ಗಾಯ ಲೋಕಾಯ’’ ಎಂದು ಮೂಲವು. ‘‘ಸ್ವರ್ಗೇ ಲೋಕೇ ಅಮೃತತ್ವಂ ಭಜನ್ತೇ’’ ಇತ್ಯಾದಿಶ್ರುತಿಗಳನ್ನನುಸರಿಸಿ, ಇಲ್ಲಿ ಸ್ವರ್ಗವೆಂಬುದಕ್ಕೆ ಪರಮಪದವೆಂದೇ ಅರ್ಥವನ್ನು ಗ್ರಹಿಸಬೇಕು. ಹಾಗಿಲ್ಲದೆ ಇಂದ್ರಲೋಕವೆಂದು ಹೇಳಿದಪಕ್ಷದಲ್ಲಿ, ಕೇವಲಮೋಕ್ಷಾಪೇಕ್ಷೆಯಲ್ಲಿರುವ ಶೌನಕಾದಿಮಹರ್ಷಿಗಳ ಸ್ವಭಾವಕ್ಕೂ, ಉದ್ದೇಶಕ್ಕೂ ವಿರುದ್ಧವಾಗಿ, ಅಲ್ಪಸುಖವುಳ್ಳ ಸ್ವರ್ಗಪ್ರಾಪ್ತಿಗಾಗಿ ಅವರು ಅಷ್ಟೊಂದು ದೊಡ್ಡಯಾಗವನ್ನು ಪಕ್ರಮಿಸಿದಂತಾಗುವುದು.

‡ ವ್ಯಾಸರು ಈ ಗ್ರಂಥವನ್ನು ರಚಿಸಿದ ಬಹುಕಾಲದಮೇಲೆ, ಸೂತನು ಶೌನಕಾದಿಗಳಿಗೆ ಇದನ್ನು ಹೇಳುವನಾದುದರಿಂದ, ಸೂತಶೌನಕರ ಪ್ರಶ್ನೋತ್ತರರೂಪವಾದ ಈ ಮೊದಲಿನ ಕೆಲವು ಭಾಗಗಳುಮಾತ್ರ ವ್ಯಾಸಪ್ರೋಕ್ತವಲ್ಲವೆಂದು ಕೆಲವರ ಅಭಿಪ್ರಾಯವುಂಟು. ಇದು ತಪ್ಪು! ಮೊದಲಿನಿಂದ ಕೊನೆಯವರೆಗೂ ಈ ಗ್ರಂಥವು ಇದೇವಿಧವಾದ ಪ್ರಶ್ನೋತ್ತರರೂಪದಲ್ಲಿರುವುದರಿಂದ, ಮುಂದೆಮುಂದೆಯೂ ಇದೇಆಕ್ಷೇಪಣೆಗೆ ಅವ

ನೀನು ಅನೇಕಪುರಾಣಗಳನ್ನೂ, ಇತಿಹಾಸಗಳನ್ನೂ ಚೆನ್ನಾಗಿ ತಿಳಿದವನು! ಎಷ್ಟೋ ಧರ್ಮಶಾಸ್ತ್ರಗಳನ್ನೋದಿದವನು. ಈಗಲೂ ನೀನು ಅವುಗಳನ್ನು ಆಗಾಗ ಇತರರಿಗೆ ತಿಳಿಸುತ್ತಲೂ ಇರುವೆಯಷ್ಟೆ? ಮತ್ತು ವೇದವಿತ್ತುಗಳಲ್ಲಿ ಮೇಲೆನಿಸಿಕೊಂಡ ಪೂಜ್ಯನಾದ ಬಾದರಾಯಣನೂ, (ವ್ಯಾಸನೂ) ಪರ ತತ್ವವನ್ನೂ, ಪ್ರಕೃತಿಪುರುಷಸ್ವರೂಪವನ್ನೂ ತಿಳಿದ ಇನ್ನೂ ಅನೇಕಮಹ ರ್ಷಿಗಳೂ, ಯಾವಯಾವ ಪುರಾಣೇತಿಹಾಸಗಳನ್ನು ರಚಿಸಿರುವರೋ, ಯಾ ವಯಾವ ಶಾಸ್ತ್ರಗಳನ್ನು ವಿಧಿಸಿರುವರೋ, ಅವೆಲ್ಲವೂ ನಿನಗೆ ತಿಳಿದಂತೆ ಮ ತ್ತೊಬ್ಬರಿಗೆ ತಿಳಿಯವು! ಎಲೈ ಸೌಮ್ಯನೆ! *ವ್ಯಾಸಾನುಗ್ರಹದಿಂದ ನೀನು ಅದರ ರಹಸ್ಯವೆಲ್ಲವನ್ನೂ ಚೆನ್ನಾಗಿ ತಿಳಿದವನು? ಗುರುಗಳು ನಿನ್ನಂತೆ ಭಕ್ತಿ ಯುಕ್ತನಾದ ಶಿಷ್ಯನಿಗೆ ಎಷ್ಟೇ ರಹಸ್ಯಾರ್ಥವನ್ನಾದರೂ ಮರೆಸದೆ ಹೇಳುವರು. ಎಲೈ ಆಯುಷ್ಮಂತನೆ! ಲೋಕದಲ್ಲಿ ಮನುಷ್ಯನಿಗೆ ವಿಶೇ ಷಶ್ರೇಯಸ್ಕರವಾವುದೋ ಆ ವಿಷಯವನ್ನು ನೀನು ಅಲ್ಲಲ್ಲಿ ಪುರಾಣಾದಿಗಳಿಂ ದ ನಿಶ್ಚಯಿಸಿ ತಿಳಿದಿರುವೆಯಷ್ಟೆ!ಸಾಮಾನ್ಯವಾಗಿ ಈ ಕಲಿಯುಗದಲ್ಲಿ ಮುಂ ದೆ ಹುಟ್ಟುವ ಜನರೆಲ್ಲರೂ ಅಲ್ಪಾಯುಷ್ಯವುಳ್ಳವರು!ಮತ್ತು ಜಡಸ್ವಭಾವವು ಳ್ಳವರು! ಮಂದಬುದ್ಧಿಯುಳ್ಳವರು! ಯಾವಾಗಲೂ ತಾಪತ್ರಯದಲ್ಲಿ ಸಿಕ್ಕಿ ನರಳುತ್ತಿರುವರು.ಆದುದರಿಂದ ಇವರು ಎಂದಾದರೂ ಒಮ್ಮೆ ಶ್ರೇಯಸ್ಸಾ ಧನೆಗಾಗಿ ಪ್ರಯತ್ನಿಸಿದರೂ, ನಡುನಡುವೆ ಅನೇಕವಿಘ್ನಗಳಿಂದ ಪ್ರತಿಹತ ರಾಗಿ, ಆಶಾಭಂಗವನ್ನು ಹೊಂದುವರು. ಈ ಕಾರಣಗಳಿಂದ ಕಲಿಯುಗದಲ್ಲಿ

ಕಾಶವಾಗುವುದು. ಆದುದರಿಂದ ತ್ರಿಕಾಲಜ್ಞನಾದ ವ್ಯಾಸಮುನಿಯು, ಮುಂದೆ ನಡೆಯ ಬಹುದಾದ ಸಂಗತಿಯನ್ನು, ಮೊದಲು ತಾನೇ ಅನುವಾದಮಾಡಿ ತೋರಿಸುತ್ತ, ಈ ಗ್ರಂಥರಚನೆಯನ್ನು ಮಾಡಿರುವನೆಂದು ಗ್ರಾಹ್ಯವು.

* ಜೀವಾತ್ಮಪರಮಾತ್ಮತತ್ತ್ವವನ್ನು ತಿಳಿಸುವ ಶಾರೀರಕಮೀಮಾಂಸಾಶಾಸ್ತ್ರ ದಲ್ಲಿ, ಬ್ರಾಹ್ಮಣಾದಿಮೂರುವರ್ಣದವರಿಗೆಹೊರತು ಇತರಜಾತಿಯವರಿಗೆ ಅಧಿಕಾರವಿಲ್ಲ ವೆಂದು ಶಾಸ್ತ್ರಸಿದ್ಧವು. ಇದರಂತೆ ಸೂತಪೌರಾಣಿಕರಿಗೆ ಆ ಶಾಸ್ತ್ರವನ್ನೋದುವ ಅಧಿ ಕಾರವಿಲ್ಲದಿದ್ದರೂ, ಪುರಾಣೇತಿಹಾಸಗಳನ್ನೋದುವುದರಿಂದಲೇ ಅವರಿಗೆ ವ್ಯಾಸಾನು ಗ್ರಹದಿಂದ ತತ್ತ್ವಜ್ಞಾನವುಂಟಾಗಿ, ಬ್ರಹ್ಮವೇದಿಗಳಾದ ಋಷಿಗಳಿಗೂ ತತ್ತ್ವೋಪ ದೇಶಕರಾದರೆಂದು ತಿಳಿಯಬೇಕು.

ಹುಟ್ಟುವ ಮನುಷ್ಯರು ಕೇವಲಭಾಗ್ಯಹೀನರೆಂದು ಹೇಳುವುದಕ್ಕೆ ಏನೇನೂ ಸಂದೇಹವಿಲ್ಲ. ಇದಲ್ಲದೆ ಕಲಿಯುಗದ ಜನರು,ತಮಗೆ ತೋರಿದ ಧರ್ಮಾದಿಗಳನ್ನು ಸಾಧಿಸಬೇಕಾಗಿದ್ದರೂಕೂಡ, ಅದರ ಸಾಧನಗಳು ನಾನಾವಿಧಗಳಾಗಿರುವುದರಿಂದ, ಎಷ್ಟೋ ವಿಷಯಗಳನ್ನು ಕೇಳಬೇಕಾಗಿರುವುದು ! ಅವುಗಳನ್ನು ಕೊನೆಮುಟ್ಟಿಸುವುದಕ್ಕೂ ಎಷ್ಟೋ ಶ್ರಮಪಡಬೇಕಾಗುವುದು. ನಡೆಸತಕ್ಕ ಕರ್ಮಗಳೂ ಅಪರಿಮಿತವಾಗಿರುವುವು. ಆದುದರಿಂದ ಎಲೈ ಸೂತನೆ! ನೀನು ಪುರಾಣಾದಿಗಳ ಸಾರವೆಲ್ಲವನ್ನೂ ಸಂಗ್ರಹಿಸಿ, ಅವುಗಳಲ್ಲಿ ಯಾವುದು ನಿನ್ನ ಬುದ್ಧಿಗೆ ಮುಖ್ಯವೆಂದು ತೋರಿರುವುದೋ,ಅದನ್ನು ನಮಗೂ ಅನುಗ್ರಹಿಸಿ ತಿಳಿಸಬೇಕು ! ಸುಲಭವಾಗಿ ಪರಮಪದವನ್ನು ಸಾಧಿಸುವುದಕ್ಕೆ ನಿನಗೆ ತಿಳಿದಮಟ್ಟಿಗೆ ಉತ್ತಮವಾದ ಉಪಾಯವೇನೆಂಬುದನ್ನು ನಮಗೆ ತಿಳಿಸು ! ಎಲೈ ಸಾಧುತಿಲೋಮಣೀ ! ಆ ಉಪಾಯವನ್ನು ಕೇಳಿದಮಾತ್ರದಿಂದಲೇ ನಮ್ಮ ಮನಸ್ಸಿನ ಕಲ್ಮಷಗಳೆಲ್ಲವೂ ನೀಗಿ ಪ್ರಸನ್ನವಾಗುವಂತೆ, ಸುಲಭೋಪಾಯವನ್ನು, ನೀನೋದಿರುವ ಸಗ್ರಂಥಗಳಿಂದ ಸಂಗ್ರಹಿಸಿಯಾಗಲಿ,ನಿನ್ನ ಬುದ್ಧಿಯಿಂದೂಹಿಸಿಯಾಗಲಿ ತಿಳಿಸಬೇಕು! ಎಲೈ ಮಹಾತ್ಮನೆ! ನಿನಗೆ ಮಂಗಳವಾಗಲಿ ! ಭಕ್ತರಕ್ಷಕನಾದ ಭಗವಂತನು ಈ ಭೂಮಿಯಲ್ಲಿ ಯಾವ ಕಾರ್ಯವನ್ನು ನಡೆಸುವುದಕ್ಕಾಗಿ ದೇವಕೀದೇವಿಯಲ್ಲಿ ವಸುದೇವಪುತ್ರನಾಗಿ ಅವತರಿಸಿದನೋ,ಅದರ ರಹಸ್ಯಗಳೆಲ್ಲವನ್ನೂ ನೀನು ಚೆನ್ನಾಗಿ ಬಲ್ಲವನು. ಅದನ್ನು ನಾವೂ ಕೇಳಬೇಕೆಂದಿರುವೆವು. ಕೃಷ್ಣಾವತಾರವು ಲೋಕದಲ್ಲಿ ಶತ್ರುಮಿತ್ರರೆಂಬ ಭೇದವಿಲ್ಲದೆ ಸಮಸ್ತಪ್ರಾಣಿಗಳಿಗೂ ಕ್ಷೇಮವನ್ನೂ, ಮೇಲ್ಮೆಯನ್ನೂ ಕೈಗೂಡಿಸಿರುವುದು. ಆ ಶ್ರೀಕೃಷ್ಣನಾಮವನ್ನು ಅಜ್ಞಾನದಿಂದೊಮ್ಮೆ ಸ್ಮರಿಸಿದಮಾತ್ರದಲ್ಲಿಯೂಕೂಡ,ಭಯಂಕರವಾದ ಸಂಸಾರವೆಂಬ ಪಾಶವು ಬಿಟ್ಟುಹೋಗುವುದು. ಅವನ ನಾಮಸ್ಮರಣಕ್ಕೆ ಮಹಾಭಯವೂ ಕೂಡ ಭಯಪಡುವುದು. ಆಶ್ಚರ್ಯವೇ ? ಆತನ ಪಾದಸಂಬಂಧದಿಂದ ಪವಿತ್ರರಾಗಿ, ಶಮದಮಾದಿಗುಣಾನ್ವಿತಶ್ರೇಷ್ಠರಾದ ಮಹರ್ಷಿಗಳ ಪಾದವನ್ನು ಮುಟ್ಟಿದಮಾತ್ರದಿಂದಲೇ,ಚೇತನರ ಜನ್ಮವು ಪವಿತ್ರವಾಗುವುದಲ್ಲವೆ?ಆತನಪಾದತೀರ್ಥರೂಪವಾದ ಗಂಗೆಯೂಕೂಡ ಸ್ನಾನಪಾನಾದಿಗಳಿಂದ ತನ್ನನ್ನು ಸೇವಿ

ಸುವವರನ್ನು ಪವಿತ್ರರನ್ನಾಗಿ ಮಾಡುವುದಲ್ಲವೆ? ಪುಣ್ಯಶ್ಲೋಕನಾಗಿಯೂ, ದೇವಾದಿದೇವತೆಗಳಿಂದ ಸ್ತುತಿಸಲ್ಪಟ್ಟವನಾಗಿಯೂ ಇರುವ ಆ ಭಗವಂತನ ಕೀರ್ತಿಯು, ಕಲಿಕಲ್ಮಷಗಳೆಲ್ಲವನ್ನೂ ನೀಗಿಸುವಾಗ, ಮನಶ್ಶುದ್ಧಿಯನ್ನು ಪೇಕ್ಷಿಸತಕ್ಕ ಯಾವ ಮನುಷ್ಯನುತಾನೇ ಅವನ ಚರಿತ್ರೆಗಳನ್ನು ಕೇಳದೆಬಿಡುವನು! ಎಲ್ಲೆ ಸೂತನೆ! ಅತಿವಿಸ್ತರಗಳಾದ ಆ ಭಗವಲ್ಲೀಲೆಗಳು, ನಾರದಾದಿ ಮಹರ್ಷಿಗಳಿಂದಲೂ ಸ್ತುತಿಸಲ್ಪಡುವುವು ಆದುದರಿಂದ ಅತನ ಚರಿತ್ರವನ್ನು ಕೇಳಬೇಕೆಂಬ ಅಭಿರುಚಿಯು ನಮಗೂ ಬಹಳವಾಗಿರುವುದು ತನ್ನ ಮಾಯೆಯಿಂದ ಸೃಷ್ಟ್ಯಾದ್ಯವತಾರಲೀಲೆಗಳನ್ನು ನಡೆಸುತ್ತಿರುವ ಆ ಭಗವಂತನ ಅವತಾರಚರಿತ್ರೆಗಳೆಲ್ಲವನ್ನೂ ವಿವರಿಸು! ಆ ಮಹಾತ್ಮನ ಚರಿತ್ರೆಗಳನ್ನು ಕೇಳುವುದರಲ್ಲಿ ಎಷ್ಟಾದರೂ ತೃಪ್ತಿಯೆಂಬುದಾಗುವುದಿಲ್ಲ. ಕೇಳುತಿದ್ದಹಾಗೆ ಆದು ಮೇಲೆಮೇಲೆ ಹೊಸರುಚಿಯನ್ನು ಹುಟ್ಟಿಸುತ್ತಿರುವುದು ಪೂರ್ವದಲ್ಲಿ ಲೀಲಾಮಾನುಷವಿಗ್ರಹವನ್ನು ಧರಿಸಿದ ತ್ರೈಕೃಷ್ಣನು ಬಲರಾಮಸಮೇತನಾಗಿ ಈ ಲೋಕದಲ್ಲಿ ಅತಿಮಾನುಷಕೃತ್ಯಗಳನ್ನು ನಡೆಸಿದನಲ್ಲವೆ! ಮನೋಹರಗಳಾಗಿಯೂ, ಮುಕ್ತಿದಾಯಕಗಳಾಗಿಯೂ ಇರುವ ಆ ತ್ರೈಕೃಷ್ಣನ ಚರಿತ್ರಗಳು ಕೇವಲಮೂಢರಿಗೂಕೂಡ ಮನಸ್ಸನ್ನು ಕರಗಿಸುವುವು. ಹೀಗಿರುವಾಗ, ಜ್ಞಾನಿಗಳಾಗಿಯೂ, ರಸಜ್ಞರಾಗಿಯೂ ಇರುವವರ ಮನಸ್ಸಿಗೆ ರುಚಿಯನ್ನು ಹುಟ್ಟಿಸುವುದರಲ್ಲಿ ಸಂದೇಹವೇಸಿದೆ? ಆದುದರಿಂದ ಎಲ್ಲೆ ಮಹಾತ್ಮನೆ! ನೀನು ಆ ಕೃಷ್ಣಾವತಾರಕಥೆಗಳನ್ನು ನಮಗೆ ತಪ್ಪದೆ ತಿಳಿಸಬೇಕು. ಈಗಲಾದರೋ ನಮ್ಮ ತಪಸ್ಸಿಗೆ ವಿಘ್ನಕರವಾದ ಕಲಿಕಾಲವು ಪ್ರಾಪ್ತವಾಯಿತು ಯಾವುದಾದರೂ ಉಪಾಯದಿಂದ ಆ ಕಲಿಯನ್ನು ಜಯಿಸಬೇಕೆಂದುದ್ದೇಶಿಸಿ ನಾವು ಎಷ್ಟೆಷ್ಟೋ ಪ್ರಯತ್ನಗಳನ್ನು ಮಾಡಿದೆವು. ಯಾವುದರಿಂದಲೂ ಆದು ಸಾಧ್ಯವಾಗುವಂತೆ ತೋರಲಿಲ್ಲ! ಆದರಿಂದ ಈಗ ನಾವು ಈ ವಿಷ್ಣುಕ್ಷೇತ್ರದಲ್ಲಿ ಮಹಾವಿಷ್ಣುಪ್ರೀತಿಗಾಗಿ, ಸಹಸ್ರಸಂವತ್ಸರಗಳವರೆಗೆ ನಡೆಸಬೇಕಾದ ದೀರ್ಘಸತ್ರವೆಂಬ ಯಾಗವನ್ನು ನಡೆಸುತ್ತಿರುವೆವು. ನಡುನಡುವೆ ಭಗವಚ್ಚರಿತ್ರವನ್ನು ಕೇಳುವುದಕ್ಕೂ ನಮಗೆ ಬೇಕಾದಷ್ಟು ಅವಕಾಶವಿರುವುದು. ಬೇರೆ ಯಾವ ಉಪಾಯದಿಂದಲೂ ಈ ಕಲಿಯನ್ನು ದಾಟುವುದು ನಮ್ಮಿಂದ ಸಾಧ್ಯ

ವಿಲ್ಲ. ಹೀಗೆ ನಾವು ಈ ಕಲಿಬಾಧೆಯನ್ನು ತಪ್ಪಿಸಿಕೊಳ್ಳಲಾರದೆ ಕಳವಳಿಸು ತ್ತಿರುವಾಗ,ಸಮುದ್ರಪ್ರವಾಹದಲ್ಲಿ ಸಿಕ್ಕಿಬಿದ್ದವರಿಗೆ, ನಾವಿಕರ ಸಹಾಯವು ಸಿಕ್ಕಿದಂತೆ, ಭಗವಂತನೇ ನಿನ್ನನ್ನು ನಮಗೆ ತೋರಿಸಿಕೊಟ್ಟಂತಾಯಿತು. ಆ ದುದರಿಂದ ಈ ಕಲಿಯೆಂಬ ಮಹಾಸಮುದ್ರವನ್ನು ದಾಟುವುದಕ್ಕೆ ನೀನು ನಮಗೆ ನಾವಿಕನಾಗಿ, ಆ ಕೃಷ್ಣಚರಿತ್ರವನ್ನೇ ಹಡಗಿನಂತೆ ಸಾಧನವನ್ನಾ ಗಿಟ್ಟುಕೊಂಡು,ನಮ್ಮನ್ನು ದಡ್ಡರಿಸಬೇಕು.ಭಕ್ತಿಯೋಗಾರಾಧ್ಯನಾಗಿಯೂ,ಸ ಮಸ್ತಧರ್ಮಗಳಿಗೂ ಪರಿಪಾಲಕನಾಗಿಯೂ, ಬ್ರಹ್ಮಕುಲಕ್ಕೆ ಹಿತನಾ ಗಿಯೂ ಇರುವ ಆ ಶ್ರೀಕೃಷ್ಣನು, ನಿಜಲೋಕವನ್ನು ಸೇರಿದಮೇಲೆ, ಇಲ್ಲಿನ ವರ್ಣಾಶ್ರಮಧರ್ಮಗಳೆಲ್ಲಕ್ಕೂ ರಕ್ಷಕರಾರು? ಕಲಿದೋಷದಿಂದ ಈ ಕಾಲದಲ್ಲಿ ಧರ್ಮವು ಕೇವಲ ನಿಸ್ಸಾರವಾಗಿರುವುದು. ಭಗವಚ್ಚರಿತ್ರವೊಂ ದೇ ಈ ಕಲಿದೋಷವನ್ನು ನೀಗಿಸಬೇಕಲ್ಲದೆ ಬೇರೆಯಲ್ಲ ! ಆದುದರಿಂದ ನೀ ನು ನಮ್ಮಲ್ಲಿ ಪೂರ್ಣಾನುಗ್ರಹವನ್ನು ತೋರಿಸಿ,ಆ ಶ್ರೀಕೃಷ್ಣನ ಅವತಾರ ಚರಿತ್ರಗಳನ್ನು ತಿಳಿಸಬೇಕು" ಎಂದರು ಇದು ಪ್ರಥಮಾಧ್ಯಾಯವು.

ಸೂತನು ಶೌನಕಾದಿಗಳಿಗೆ ಪರಮಪುರುಷಾರ್ಥ ಸ್ವರೂಪವನ್ನು ತಿಳಿಸಿದುದು.

ಹೀಗೆ ಶೌನಕಾದಿಗಳು ಶ್ರೀಕೃಷ್ಣಚರಿತ್ರವಿಷಯವಾಗಿ ಪ್ರಶ್ನಮಾಡಿ ದುದನ್ನು ಕೇಳಿದೊಡನೆ, ಸೂತಪೌರಾಣಿಕನು ಬಹಳ ಸಂತೋಷಗೊಂಡವ ನಾಗಿ, ಅವರ ಪ್ರಾರ್ಥನೆಯನ್ನು ಅಭಿನಂದಿಸುತ್ತ, ಅವರ ಕೋರಿಕೆಯಂತೆ ಭಗ ವಚ್ಚರಿತ್ರವನ್ನು ಹೇಳತೊಡಗಿ, ಕಥಾರಂಭಕ್ಕೆ ಮೊದಲು,ಈ ಪುರಾಣಕ್ಕೆ ಪ್ರ ಥಮಪ್ರವರ್ತಕರಾದ ಶುಕಮುನಿಯನ್ನು ಧ್ಯಾನಿಸುವನು.''ಯೋಗೀಶ್ವರನೆನಿ ಸಿಕೊಂಡ ಯಾವ ಮಹಾತ್ಮನು, ಬ್ರಹ್ಮೋಪಾಸನದಲ್ಲಿ ಸಿದ್ಧಿಯನ್ನು ಪಡೆದು ಕೃತಕೃತ್ಯನಾದಮೇಲೆ, ಲೌಕಿಕಸಂಬಂಧಗಳೆಲ್ಲವನ್ನೂ ಪರಿತ್ಯಾಗ ಮಾಡಿ, ತಂದೆತಾಯಿಗಳನ್ನೂ ಬಿಟ್ಟು,ಸನ್ಯಾಸವನ್ನು ವಹಿಸಿ,ಏಕಾಕಿಯಾಗಿ ಹೊರಟನೋ, ಅಂತಹ ಮಹಾಜ್ಞಾನಿಯಾದ ಯಾವ ಪುತ್ರನ ವಿರಹವನ್ನು ಸಹಿಸಲಾರದೆ, ವ್ಯಾಸಮುನಿಯು,ತಾನೂ ಅವನನ್ನು ಹಿಂಬಾಲಿಸಿ,''ಪುತ್ರಾ"!

ಎಂದು ಕೂಗುತ್ತಿರಲು, ಆ ಶುಕನ ಜ್ಞಾನಸಂಬಂಧದಿಂದ ಆ ಕಾಡಿನಲ್ಲಿದ್ದ ಮರಗಿಡುಗಳೆಲ್ಲವೂ ತಾವೇ ಶುಕಸ್ವರೂಪಗಳಾವಂತೆ "ಇದೋ! ಇಲ್ಲಿರುವೆನು" ಎಂದು ಪ್ರತಿಧ್ವನಿಯನ್ನು ಕೊಟ್ಟುವೋ, ಹೀಗೆ ಜ್ಞಾನವ್ಯಾಪ್ತಿಯಿಂದ ಸಮಸ್ತಭೂತಗಳ ಹೃದಯದಲ್ಲಿಯೂ ಪ್ರಕಾಶಿಸುತ್ತಿರುವ ಆ ಮಹರ್ಷಿಯನ್ನು ನಮಸ್ಕರಿಸುವೆನು. ಯಾವ ಮುನಿಶ್ರೇಷ್ಠನು, ಸರ್ವವೇದಸಾರಭೂತವಾಗಿಯೂ, ಪುರಾಣಗಳಲ್ಲಿ ಅಧ್ಯಾತೀಯನಾಗಿಯೂ, ಸ್ವಾತ್ಮಪರಮಾತ್ಮತತ್ತ್ವವನ್ನು ಪ್ರಕಾಶಪಡಿಸುವವಿಷಯದಲ್ಲಿ ದೀಪಶಾಸ್ತ್ರಾಯವಾಗಿಯೂ, ಸಂಸಾರನಿವೃತ್ತಿಯಲ್ಲಿ ಅಪೇಕ್ಷೆಯಿಲ್ಲದವರಿಗೂಕೂಡ, ಆ ವಿಧವಾದ ಅಜ್ಞಾನವನ್ನು ನೀಗಿಸಿ, ಮೋಕ್ಷಾಪೇಕ್ಷೆಯನ್ನು ಹುಟ್ಟಿಸತಕ್ಕುದಾಗಿಯೂ ಇರುವ ಶ್ರೀಭಾಗವತವೆಂಬ ಪುರಾಣದ ರಹಸ್ಯವನ್ನು ಮೊದಲು ತನ್ನ ನಿಜಾನುಭವಕ್ಕೆ ತಂದುಕೊಂಡು, ಆಮೇಲೆ ಲೋಕೋಜ್ಜೀವನಾರ್ಥವಾಗಿ ಅದನ್ನು ದಯೆಯಿಂದ ಪ್ರಕಾಶಗೊಳಿಸಿದನೋ, ಅಂತಹ ವ್ಯಾಸಪುತ್ರನಾದ ಶುಕಮುನಿಯನ್ನು ಮರೆಹುಗುವೆನು.*ಭಗವದಂಶದಿಂದವತರಿಸಿ,ಬದರಿಕಾಶ್ರಮದಲ್ಲಿ ಲೋಕ

---

* ಇಲ್ಲಿ "ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ । ದೇವೀಂ ಸರಸ್ವತೀಂ ವ್ಯಾಸಂ ತತೋಜಯಮುದೀರಯೇತ್" ಎಂದು ಮೂಲವು ಈ ಶ್ಲೋಕಾರ್ಥವನ್ನು ಚೆನ್ನಾಗಿ ಪರ್ಯಾಲೋಚಿಸಿದರೆ. ಇದರಲ್ಲಿ ವಾಚ್ಯವಾಗಿ ಹೇಳಿರುವಂತೆ ನರನಾರಾಯಣರು, ಸರಸ್ವತಿ, ವ್ಯಾಸರು; ಇವರುಮಾತ್ರವೇ ಅಲ್ಲದೆ, ಈ ಭಾಗವತಗ್ರಂಥಕ್ಕೆ ಪ್ರವರ್ತಕರಾದ ಇನ್ನೂ ಕೆಲವುಮಂದಿ ಆಚಾರ್ಯರನ್ನು ನಮಸ್ಕರಿಸಬೇಕೆಂಬ ಅರ್ಥವೂ ಸೂಚಿತವಾಗುವುದು. ಇಲ್ಲಿನ ಗುರುಪರಂಪರಾಕ್ರಮವೇನೆಂದರೆ, ಮೊದಲು ವಿಷ್ಣುವಿನ ನಾಲ್ಕನೆಯ ವ್ಯೂಹವಾದ ಅನಿರುದ್ಧನು, ತನ್ನನಾಭಿಕಮಲದಲ್ಲಿ ಹುಟ್ಟಿದ ಚತುರ್ಮುಖಬ್ರಹ್ಮನಿಗೆ ಭಾಗವತಚತುಃಶ್ಲೋಕಿಯನ್ನುಪದೇಶಿಸಿದನು. ಆ ಚತುರ್ಮುಖನಿಂದ ನಾರದನಿಗೂ, ನಾರದನಿಂದ ವ್ಯಾಸನಿಗೂ ಇವೇ ಚತುಃಶ್ಲೋಕಿಯು ಕ್ರಮಪ್ರಾಪ್ತವಾಗಿ ಬಂದಿತು. ಆಮೇಲೆ ವ್ಯಾಸನು ಅದರ ಆಧಾರದಮೇಲೆ ಈ ಗ್ರಂಥವನ್ನು ರಚಿಸಿ, ತನ್ನಪುತ್ರನಾದ ಶುಕಮುನಿಗೆ ಉಪದೇಶಿಸಿದನು. ಶುಕಮುನಿಯಿಂದ ಸೂತಾದಿಗಳಿಗೆ ಉಪದೇಶವಾಯಿತು. ಅದುದರಿಂದ ಇಲ್ಲಿ ಸೂತನು, ತನಗೆ ಈ ಗ್ರಂಥವನ್ನುಪದೇಶಿಸಿದ ಶುಕಮುನಿಯನ್ನು ನಮಸ್ಕರಿಸಿ, ಅದರಿಂದಾಚೆಗೆ ಕ್ರಮವಾಗಿ ವ್ಯಾಸನಾರದಾದಿಗಳನ್ನು ಸ್ತುತಿಸಬೇಕಾಗಿರುವುದು. ನರನಾರಾಯಣರಿಬ್ಬರೂ ಅನಿರುದ್ಧನಿಗೆ ಕಾರಣಭೂತನಾದ

ಕ್ಷೇಮಾರ್ಥವಾಗಿ ತಪೋನಿಷ್ಠರಾಗಿರುವ ನರನಾರಾಯಣರನ್ನೂ, ಬ್ರಹ್ಮಪತ್ನಿಯಾದ ವಾಗ್ದೇವತೆಯನ್ನೂ, ವ್ಯಾಸಮಹಾಮುನಿಯನ್ನೂ, ಮೊದಲು ನಮಸ್ಕರಿಸಿ, ಆಮೇಲೆ ದುರಿತಜಯರೂಪವಾದ ಈ ಪುರಾಣವನ್ನು ವಚಿಸಬೇಕಾಗಿರುವುದು" ಎಂದು ಗ್ರಂಥಪ್ರವರ್ತಕರಾದ ಆಚಾರ್ಯರ ಪರಂಪರೆಯನ್ನು ಧ್ಯಾನಿಸಿ, ಶೌನಕಾದಿಗಳನ್ನು ಕುರಿತು ಹೇಳುವರು "ಎಲ್ಲೆ ಮುನಿಶ್ರೇಷ್ಠರೆ! ನೀವು ಕೇಳಿದ ಕೃಷ್ಣಸಂಬಂಧವಾದ ಈ ಪ್ರಶ್ನೆವು ಅತ್ಯಂತಶ್ಲಾಘ್ಯವಾದುದು. ಈ ನಿಮ್ಮ ಪ್ರಶ್ನೆವು ನಿಮಗೆ ಮಾತ್ರವಲ್ಲದೆ ಸಮಸ್ತ ಜಗತ್ತಿಗೂ ಕ್ಷೇಮಕರವಾದುದು. ಆ ಶ್ರೀಕೃಷ್ಣನ ನಾಮಸ್ಮರಣಮಾತ್ರದಿಂದಲೇ ಮನಸ್ಸು ಪ್ರಸನ್ನವಾಗುವುದು. ಎಲ್ಲೆ ಮಹರ್ಷಿಗಳೆ! ಲೋಕದಲ್ಲಿ ಮನುಷ್ಯರಿಗೆ ನಿರತಿಶಯವಾದ ಶ್ರೇಯಸ್ಸನ್ನೂ, ಅದಕ್ಕೆ ಸಾಧನವಾದ ಉತ್ತಮಧರ್ಮವೂ ಯಾವುದೆಂದು ಕೇಳಿದಿರಲ್ಲವೆ? ಹೇಳುವೆನು ಕೇಳಿರಿ! ಸಂಸಾರನಿವೃತ್ತಿಪೂರ್ವಕವಾಗಿ, ಬ್ರಹ್ಮಾನಂದಾನುಭವಾತ್ಮಕವಾದ ಮೋಕ್ಷವೊಂದೇ ಮನುಷ್ಯರಿಗೆ ನಿರತಿಶಯವಾದ ಶ್ರೇಯಸ್ಸಲ್ಲದೆ ಬೇರೆಯಲ್ಲ! ಫಲಾಪೇಕ್ಷೆಯೆಂಬ ವಿಘ್ನಗಳಿಗೊಳಗಾಗದೆ, ಮನಶ್ಶುದ್ಧಿಯನ್ನುಂಟುಮಾಡಿ, ಭಗವಂತನಲ್ಲಿ ಭಕ್ತಿಯನ್ನು ಹುಟ್ಟಿಸುವುದಕ್ಕೆ ಸಹಕಾರಿಯಾದ ಧರ್ಮವಾವುದುಂಟೋ, ಅದೇ ಲೋಕದಲ್ಲಿ ಉತ್ತಮಧರ್ಮವೆನಿಸುವುದು. ಷಾಡ್ಗುಣ್ಯಪರಿಪೂರ್ಣನಾದ ಆ ವಾಸುದೇವನಪಿಷಯದಲ್ಲಿ ಹುಟ್ಟಿದ ಭಕ್ತಿಯು, ತಾನಾಗಿಯೇ ಮನಸ್ಸನ್ನು ಶುದ್ಧಮಾಡಿ, ವೈರಾಗ್ಯವನ್ನು ಹುಟ್ಟಿಸಿ, ಬೇರೆಯಾವ ವಿಧದಿಂದಲೂ ಲಭಿಸಲಾರದ ಭಗವತ್ಸಾಕ್ಷಾತ್ಕಾರರೂಪವಾದ ಜ್ಞಾನವನ್ನೂ ಉಂಟುಮಾಡುವುದು. ಲೋಕದಲ್ಲಿ ಮನುಷ್ಯರು ತಮ್ಮ ತಮ್ಮ ವರ್ಣಾಶ್ರಮೋಚಿತವಾದ ಧರ್ಮವನ್ನು ಲೋಪಿಸಲ್ಲದೆ ಎಷ್ಟೇ ಚೆನ್ನಾಗಿನಡೆಸುತ್ತ ಬಂದರೂ, ಅದು ಭಗವದ್ಗುಣಾನುಸಂಧಾನದಲ್ಲಿ ರುಚಿರೂಪವಾ

ವಿಷ್ಣುವಿನ ಅವತಾರವಾದುದರಿಂದ, ಅವರೂ ಇಲ್ಲಿನ ಗುರುಪರಂಪರೆಯಲ್ಲಿ ಸೇರಿರುವರು. ಈ ಶ್ಲೋಕದಲ್ಲಿ (ದೇವೀಂ) ಎಂಬ ಪದಪ್ರಯೋಗದಿಂದ (ದೇವಸ್ಯ ಚತುರ್ಮುಖಸ್ಯ ಪತ್ನೀ ದೇವೀ) ಎಂಬ ವ್ಯುತ್ಪತ್ತಿಯನ್ನನುಸರಿಸಿ, ಬ್ರಹ್ಮನಾರದರ ಹೆಸರೂ ಸೂಚಿತವಾಗುವುದು. ಹೀಗೆಯೇ ಪರಂಪರಾಸಂಬಂಧದಿಂದ ಅನಿರುದ್ಧಚತುರ್ಮುಖನಾರದರೂ ಇಲ್ಲಿ ನಮಸ್ಕಾರ್ಯರೆಂಬುದು ಅರ್ಥಸಿದ್ಧವು.

ಭಕ್ತ್ಯಯನ್ನು ಹುಟ್ಟಿಸುವುದಕ್ಕೆ ಸಹಕಾರಿಯಾಗದೆ, ಇತರ ಫಲೋದ್ದೇಶದಿಂದ ಕೂಡಿದುದಾಗಿದ್ದರೆ, ಅಂತಹ ಧರ್ಮಾಚರಣವೆಲ್ಲವೂ ವೃಥಾಶ್ರಮಕಾರಣವೇಹೊರತು ಬೇರೆಯಲ್ಲ. ಪುರುಷಾರ್ಥಗಳಲ್ಲಿ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ವಿಭಾಗಗಳಿದ್ದರೂಕೂಡ, ಮೋಕ್ಷವೊಂದೇ ನಿರತಿಶಯವಾದ ಪುರುಷಾರ್ಥವೆನಿಸುವುದು ಧರ್ಮಾರ್ಥಕಾಮಗಳೆಂಬಿವು ಮೂರೂ ತಾವಾಗಿ ಪುರುಷಾರ್ಥಗಳೆನಿಸಿಕೊಳ್ಳುವುದೇ ಇಲ್ಲ. ಇವು ಮುಕ್ತಿಸಾಧನವಾದ ಭಕ್ತಿಗೆ ಕಾರಣಗಳಾಗುವುವೇಹೊರತು ನೇರವಾಗಿ ಮುಕ್ತಿಗೆ ಸಾಧನಗಳೂ ಆಲ್ಲ! ಧರ್ಮಕ್ಕೆ ಅರ್ಥವೇ ಫಲವೆಂದೂ, ಅರ್ಥಕ್ಕೆ ಕಾಮವೇ ಫಲವೆಂದೂ, ಕಾಮಕ್ಕೆ ಇಂದ್ರಿಯತೃಪ್ತಿಯೇ ಪ್ರಯೋಜನವೆಂದೂ, ಆ ಇಂದ್ರಿಯತೃಪ್ತಿಗೆ ಜೀವನವೇ ಫಲವೆಂದೂ, ಆ ಜೀವನಕ್ಕೆ ತಿರುಗಿ ಧರ್ಮಸಾಧನವೇ ಫಲವೆಂದೂ ಲೌಕಿಕರಾದ ಕೆಲವರು ಹೇಳುವುದುಂಟು! ಇದು ವಿವೇಚನೆಯಿಲ್ಲದೆ ಹೇಳುವ ವರ ಮಾತಲ್ಲದೆ ಬೇರೆಯಲ್ಲ! ಫಲಾಭಿಸಂಧಿಯಿಲ್ಲದೆ ನಡೆಸತಕ್ಕ ಧರ್ಮವು ಉತ್ತಮಧರ್ಮವೆನಿಸುವುದು. ಇಂತಹ ಧರ್ಮವು ಭಕ್ತ್ಯಯನ್ನು ಹುಟ್ಟಿಸಿ, ಆ ಮೂಲಕವಾಗಿ ಮೋಕ್ಷಸಾಧಕವಾಗುವುದು! ಇಂತಹ ಧರ್ಮಕ್ಕೆ ಅರ್ಥವನ್ನು (ಧನವನ್ನು) ಫಲವೆಂದು ಹೇಳಲಾಗದು! ಇದರಂತೆಯೇ ಅರ್ಥಕ್ಕೆ ಧರ್ಮವೊಂದೇ ಪ್ರಯೋಜನವಲ್ಲದೆ ಕಾಮವು ಫಲವೆನಿಸಲಾರದು. ಅನ್ನಪಾನಾದಿರೂಪವಾಗಿರುವ ಕಾಮವೆಂಬುದನ್ನೂ ಕೂಡ, ತನ್ನ ಜೀವಧಾರಣೆಗೆ ಬೇಕಾದಷ್ಟನ್ನು ಮಾತ್ರವೇ ಅನುಭವಿಸುವುದಕ್ಕೆ ಸಾಧ್ಯವು ಹೀಗೆ ಕಾಮಕ್ಕೆ ಜೀವಧಾರಣೆಯೇ ಮುಖ್ಯಪ್ರಯೋಜನವಾಗಿರುವಾಗ, ಅದಕ್ಕೆ ಇಂದ್ರಿಯತೃಪ್ತಿಯನ್ನು ಫಲವೆಂದು ಹೇಳುವುದು ಹೇಗೆ? ಅದರಂತೆಯೇ ಲೋಕದಲ್ಲಿ ಜೀವನಕ್ಕೆ ಕರ್ಮಗಳಿಂದ ಸಾಧ್ಯವಾದ ಧರ್ಮವು ಫಲವೆನಿಸಿಕೊಳ್ಳುವುದಿಲ್ಲ. ಅಂತಹ ಜೀವನಕ್ಕೆ ತತ್ತ್ವಜಿಜ್ಞಾಸೆಯೊಂದೇ ಫಲವು. ಈ ಕಾರಣಗಳಿಂದಲೇ ತತ್ತ್ವಜ್ಞರು ಧನವಿದ್ದಪಕ್ಷದಲ್ಲಿ ಫಲಾಭಿಸಂಧಿಯಿಲ್ಲದ ಧರ್ಮವನ್ನು ಸಂಪಾದಿಸಿ, ಆ ಧರ್ಮವನ್ನು ಮೋಕ್ಷಸಾಧಕವಾದ ಭಕ್ತ್ಯೋಗಕ್ಕೆ ಸಹಕಾರಿಯನ್ನಾಗಿ ಮಾಡಬೇಕಲ್ಲದೆ, ಆ ಧನವನ್ನು ಕಾಮನಿಮಿತ್ತವಾಗಿ ವ್ಯಯಮಾಡಕೂಡದೆನ್ನುವರು. ಅದರಂತೆಯೇ ಅನ್ನಪಾನಾದಿರೂಪವಾದ ಕಾಮಸಮೃದ್ಧಿಯಿದ್ದಾಗಲೂ

ಡ, ಅದರಿಂದ ದೇಹಧಾರಣವನ್ನು ಮಾಡಿಕೊಂಡು, ಆ ಜೀವನಕ್ಕೆ ತತ್ತ್ವಜಿ
ಜ್ಞಾಸೆಯನ್ನೇ ಮುಖ್ಯಫಲವನ್ನಾಗಿ ಮಾಡಬೇಕು. ಇಷ್ಟೇಕೊರತು ಆ
ಕಾಮವನ್ನು ಇಂದ್ರಿಯಪ್ರೀತಿಗಾಗಿ ಉಪಯೋಗಿಸಲಾಗದು. ''ಜೀವನಕ್ಕೆ
ತತ್ತ್ವಜಿಜ್ಞಾಸೆಯೇ ಫಲವೆನಿಸಿದಪಕ್ಷದಲ್ಲಿ, ಆ ತತ್ವವೆಂಬುದಾವುದು?'' ಎಂ
ದರೆ; ಕೇವಲಜ್ಞಾನಸ್ವರೂಪವಾಗಿ, ಪರಬ್ರಹ್ಮವೆಂದೂ, ಪರಮಾತ್ಮನೆಂ
ದೂ, ಭಗವಂತನೆಂದೂ ಹೇಳಲ್ಪಡುವ ಪರಾತ್ಪರವಸ್ತುವನ್ನೇ ತತ್ತ್ವಜ್ಞರು
ತತ್ತ್ವವೆಂದು ಹೇಳುವರು. ಎಲೈ ಮಹರ್ಷಿಗಳೆ ! ಲೋಕದಲ್ಲಿ ಶ್ರದ್ಧಾಳುಗ
ಳಾದ ಮುನಿಗಳು, ವೇದೋಕ್ತಗಳಾದ ಯಜ್ಞಯಾಗಾದಿಧರ್ಮಗಳಿಂದ ಪೋ
ಷಿತವಾಗಿಯೂ, ಆತ್ಮಜ್ಞಾನವೈರಾಗ್ಯಗಳಿಂದ ಕೂಡಿದುವಾಗಿಯೂ ಇರುವ
ಭಕ್ತಿಯಿಂದಲೇ ಜೀವಾತ್ಮನಲ್ಲಿ ಅಂತರಾತ್ಮನಾಗಿರುವ ಬ್ರಹ್ಮಶಬ್ದವಾಚ್ಯ
ನಾದ ಭಗವಂತನನ್ನು ಸಾಕ್ಷಾತ್ಕರಿಸುವರು. ಆದುದರಿಂದ ಮನುಷ್ಯರು ತ
ಮ್ಮತಮ್ಮ ವರ್ಣಾಶ್ರಮಭೇದವನ್ನನುಸರಿಸಿ, ವಿಧ್ಯುಕ್ತಗಳಾದ ಧರ್ಮಗಳನ್ನು
ಕ್ರಮವಾಗಿ ನಡೆಸುತ್ತಬಂದರೆ, ಅದು ಇತರಪ್ರತಿಬಂಧಕಗಳೆಲ್ಲವನ್ನೂ ನೀಗಿ
ಸಿ, ಭಗವತ್ಪ್ರೀತಿಗೆ ಕಾರಣವಾದ ಭಕ್ತಿಯನ್ನು ನೆಲೆಗೊಳಿಸುವುದು.ಆ ಧರ್ಮ
ಗಳಿಗೂ ವಿಷ್ಣುಪ್ರೀತಿಯೇ ಫಲವಾಗುವುದು.ಹೀಗೆ ಧರ್ಮಾನುಷ್ಠಾನವನ್ನು ಕ್ರ
ಮವಾಗಿ ನಡೆಸುವುದುಮಾತ್ರವೇ ಅಲ್ಲ! ಭಗವತ್ಕಥಾಶ್ರವಣಾದಿಗಳೂ ಕೂಡ
ಭಕ್ತಿಯೋಗಕ್ಕೆ ಸಹಕಾರಿಗಳಾಗುವುವು. ಆದುದರಿಂದ ನಾವೆಲ್ಲರೂ ನಿಶ್ಚಲ
ವಾದ ಮನಸ್ಸಿನಿಂದ, ಭಕ್ತಪರಿಪಾಲಕನಾಗಿಯೂ, ಷಾಡ್ಗುಣ್ಯಪರಿಪೂರ್ಣ
ನಾಗಿಯೂ ಇರುವ ಆ ಶ್ರೀಹರಿಯ ಪುಣ್ಯಕಥೆಗಳನ್ನು ಪ್ರತಿದಿನವೂ ಕೇಳುತ್ತಿ
ರಬೇಕು! ಪ್ರತಿದಿನವೂ ಅವನ ಗುಣಗಳನ್ನು ಕೀರ್ತಿಸುತ್ತಿರಬೇಕು! ಯಾವಾಗ
ಲೂ ಆತನನ್ನೇ ಸ್ಮರಿಸುತ್ತಿರಬೇಕು. ಅಹರ್ನಿಶವೂ ಅವನನ್ನೇ ಪೂಜಿಸಬೇಕು.
ಬುದ್ಧಿಶಾಲಿಗಳಾದವರು, ಭಗವದ್ಭಾಗ್ಯವೆಂಬ ಖಡ್ಗದಿಂದಲೇ ತಮ್ಮ ಕರ್ಮ
ಬಂಧವನ್ನು ಛೇದಿಸುವರು. ಅಂತಹ ಭಗವತ್ಕಥೆಯಲ್ಲಿ ಯಾವನಿಗೆತಾನೇ
ಅಭಿರುಚಿಯುಂಟಾಗದು ? ಕೇವಲಥಾಮ್ನಾಚರಣಮಾತ್ರದಿಂದಲೇ ಭಗವ
ದ್ಭಕ್ತಿಯು ಹುಟ್ಟುವುದೆಂದೂ ಹೇಳುವುದಕ್ಕಿಲ್ಲ ! ಭಗವತ್ಕಥೆಯಲ್ಲಿ ಅಭಿರು
ಚಿಯನ್ನು ಹುಟ್ಟಿಸುವುದಕ್ಕೆ, ಮಹಾತ್ಮರ ಸಹವಾಸವೂ, ಗಂಗಾದಿಪುಣ್ಯತೀ

ರ್ಥಗಳ ಸೇವನವೂ ಸಹಕಾರಿಗಳಾಗಿರುವುವು. ಆದುದರಿಂದ ಮನುಷ್ಯರು ತಮ್ಮ ತಮ್ಮ ವರ್ಣಾಶ್ರಮಧರ್ಮಗಳ ಬಲದಿಂದ ಪ್ರತಿಬಂಧಕಸಾಮಗ್ರಿಗಳೆಲ್ಲವನ್ನೂ ನೀಗಿಸಿಕೊಂಡು, ಶ್ರದ್ಧಾಳುಗಳಾಗಿದ್ದರೆ, ಅಂತವರಿಗೆಮೇಲೆಹೇಳಿದ ಸತ್ಸಹವಾಸಾದಿಗಳಿಂದ ವಾಸುದೇವಕಥಾಶ್ರವಣಾದಿಗಳಲ್ಲಿ ರುಚಿಯು ಹುಟ್ಟುವುದು. ಆ ಶ್ರೀಕೃಷ್ಣನು, ನಿಜಕಥಾಶ್ರವಣಕೀರ್ತನಗಳಿಂದಲೇ ಜೀವನನ್ನು ಪವಿತ್ರನನ್ನಾಗಿ ಮಾಡುವನು ತನ್ನ ಕಥೆಯನ್ನು ಕೇಳತಕ್ಕವರ ಮನಸ್ಸಿನಲ್ಲಿ ಅಂತರ್ಯಾಮಿಯಾಗಿ ನೆಲೆಗೊಂಡು, ಅವರ ಹೃದಯದಲ್ಲಿ ಭಕ್ತಿಗೆ ವಿರೋಧಿಗಳಾದ ಪಾಪಗಳೆಲ್ಲವನ್ನೂ ತಾನಾಗಿಯೇ ನೀಗಿಸುವುದರಿಂದ ಸರ್ವಸುಹೃತ್ತೆಸಿಸಿಕೊಂಡಿರುವನು. ಹೀಗೆ ನಿತ್ಯವೂ ಭಾಗವತಸೇವಾಪೂರ್ವಕವಾದ ಭಗವದ್ಗುಣಶ್ರವಣದಿಂದ, ಮನಸ್ಸಿನಕಲ್ಮಷಗಳೆಲ್ಲವೂ *ಪ್ರಾಯಕವಾಗಿ ನೀಗಿ, ದೃಢವಾದ ಭಕ್ತಿಯು ಹುಟ್ಟುವುದು ! ಆದರಿಂದಾಚೆಗೆ ಮನಸ್ಸನ್ನು ಕೆಡಿಸತಕ್ಕ ರಜಸ್ತಮೋಗುಣಜನ್ಯಗಳಾದ ಕಾಮಲೋಭಾದಿಗಳೊಂದೂ ಅದರ ಸಮೀಪಕ್ಕೆ ಹೊದ್ದಲಾರವು. ಆ ಮನಸ್ಸು ಸತ್ವಗುಣವೊಂದರಲ್ಲಿಯೇ ನೆಲೆಸಿ ಪ್ರಸನ್ನವಾಗುವುದು. ಹೀಗೆ ಪ್ರಸನ್ನಮನಸ್ಸುಳ್ಳವನಾಗಿ, ಸಂಗಗಳನ್ನು ತೊರೆದು, ವಿರಕ್ತನಾದವನಿಗೆ, ಅಭಕ್ತಿಪರಿಕಾರದಿಂದ ಭಗವಂತನ ಗುಣಸ್ವರೂಪಾದಿಗಳನ್ನು ಯಥಾಸ್ಥಿತವಾಗಿ ಸಾಕ್ಷಾತ್ಕರಿಸತಕ್ಕ ಜ್ಞಾನವೂ ಹುಟ್ಟುವುದು ಭಕ್ತಿಯ ಫಲವೇ ಜ್ಞಾನವು. ಪರಮಾತ್ಮಸಾಕ್ಷಾತ್ಕಾರರೂಪವಾದ ಈ ಜ್ಞಾನವು ಹುಟ್ಟಿದಕ್ಷಣವೇ ಭಗವತ್ಪ್ರಾಪ್ತಿಗೆ ಪ್ರತಿಬಂಧಕಗಳಾದ ಹಿಂದುಮುಂದಿನ ಪಾಪಕರ್ಮಗಳೂ ನಾಶಹೊಂದುವುವು. ತನ್ಮೂಲಕಗಳಾದ

---

* ಇಲ್ಲಿ ಮನಸ್ಸಿನ ಕಲ್ಮಷಗಳೆಲ್ಲವೂ ಪ್ರಾಯಕವಾಗಿ ನಶಿಸುವುವೆಂಬುದರಿಂದ, ಆಗಲೂ ಪಾಪಗಳೆಲ್ಲವೂ ನಿಶ್ಶೇಷವಾಗಿ ಕಳೆಯಲಿಲ್ಲವೆಂದು ಸೂಚಿತವಾಗುವುದು. ಇದರಿಂದ, ತತ್ಕಾಲದಲ್ಲಿ ಭಕ್ತಿಗೆ ಪ್ರತಿಬಂಧಕಗಳೆಲ್ಲವೂ ನೀಗಿದ್ದರೂ, ಭಗವತ್ಪ್ರಾಪ್ತಿಗೆ ಪ್ರತಿಬಂಧಕಗಳಾಗಿರುವ ಉತ್ತರಪೂರ್ವಾಘಗಳೆಂಬಿವುಮಾತ್ರ, ಆ ಭಕ್ತಿಯು ಪರಿಪಕ್ವವಾದಹೊರತು ಬಿಟ್ಟುಹೋಗತಕ್ಕವುಗಳಲ್ಲವೆಂದು ಸಿದ್ಧವಾಗುವುದು,

ಸಮಸ್ತಸಂಶಯಗಳೂ, ಅಜ್ಞಾನವಿಪರೀತಜ್ಞಾನಾದಿಗಳೆಲ್ಲವೂ ಬಿಟ್ಟುಹೋಗುವುವು. ಮನಸ್ಸಿನಲ್ಲಿ ನೆಲೆಗೊಂಡಿರುವ ಅಹಂಕಾರಮಮಕಾರಾದಿಗಳೂ ನತಿಸುವುವು. ಇವೆಲ್ಲವೂ ನಿವೃತ್ತವಾದಮೇಲೆ ಬ್ರಹ್ಮಪ್ರಾಪ್ತಿಯೂ,ಬ್ರಹ್ಮಾನುಭವವೂ ಪ್ರಯತ್ನವಿಲ್ಲದೆ ತನಗೆತಾನೇ ಸಿದ್ಧಿಸುವುವು. ಹೀಗೆ ಮೋಕ್ಷವೇ ಪುರುಷಾರ್ಥವಾಗಿಯೂ, ಭಕ್ತಿಯೇ ಅದಕ್ಕೆ ಮುಖ್ಯಸಾಧನವಾಗಿಯೂ ಇರುವುದರಿಂದ, ಇದರ ತತ್ತ್ವವನ್ನು ತಿಳಿದ ಪ್ರಾಜ್ಞರು ಪರಮಾದರಪೂರ್ವಕವಾಗಿ ಮನಃಪ್ರಸಾದವನ್ನುಂಟುಮಾಡತಕ್ಕ ಆ ಹರಿಭಕ್ತಿಯೊಂದನ್ನೇ ದೃಢವಾಗಿ ಹಿಡಿಯುವರು ''ಜಗತ್ಸೃಷ್ಟಿಮೊದಲಾದ ಕಾರ್ಯಗಳಿಗೆ ಬ್ರಹ್ಮರುದ್ರಾದಿಗಳೂ ಕಾರಣಭೂತರಾಗಿರುವಾಗ,ಹರಿಭಕ್ತಿಯೊಂದೇ ಮೋಕ್ಷಸಾಧಕವೆಂದು ಹೇಳುವುದು ಹೇಗೆ?"ಎಂದರೆ, *ಸತ್ವವೆಂದೂ, ರಜಸ್ಸೆಂದೂ, ತಮಸ್ಸೆಂದೂ

---

* ಈ ತ್ರಿಮೂರ್ತಿಗಳಲ್ಲಿ ವಿಷ್ಣುವೇ ಪರಮಪುರುಷನೆಂದೂ, ಅವನೇ ಬ್ರಹ್ಮರುದ್ರಾದಿರೂಪದಲ್ಲಿ ಸೇರಿ ಸೃಷ್ಟಿಸಂಹಾರಾದಿಗಳನ್ನು ನಡೆಸುವನೆಂದೂ ಗ್ರಾಹ್ಯವು. ಬ್ರಹ್ಮರುದ್ರರಿಬ್ಬರೂ, ಜೀವಕೋಟಿಯಲ್ಲಿ ಸೇರಿ ಹಿಂದೆ ಹೇಳಿದಂತೆ ವಿಷ್ಣುವಿಗೆ ಶರೀರಭೂತರಾದುದರಿಂದ, ಆ ಹೆಸರುಗಳೂ, ಶರೀರಿಯಾದ ವಿಷ್ಣುವಿಗೇ ಸಲ್ಲುವುವೇ ಹೊರತು, ಈ ಮೂವರಿಗೂ ಸ್ವರೂಪಸಾಮ್ಯವಿಲ್ಲ ಆದುದರಿಂದ ಪರಮಪುರುಷನಾದ ಶ್ರೀಮನ್ನಾರಾಯಣನು,ಶರೀರಾತ್ಮಭಾವದಿಂದ ಬ್ರಹ್ಮರುದ್ರರಾಗಿರುವನೆಂದೂ,ತಾನೇ ಸಾಕ್ಷಾತ್ತಾಗಿ ತನ್ನ ಸಂಕಲ್ಪದಿಂದ ಅವತಾರಗಳನ್ನೆತ್ತಿ ತ್ರಿಮೂರ್ತಿಗಳ ನಡುವೆವಿಷ್ಣುವೆನಿಸಿಕೊಳ್ಳುವನೆಂದೂ ಗ್ರಾಹ್ಯವು. ಆದುದರಿಂದ ತ್ರಿಮೂರ್ತಿಗಳಲ್ಲಿ ವಿಷ್ಣುನಾಮಕವೇ ಆ ಪರಮಪುರುಷನು. ಬ್ರಹ್ಮರುದ್ರರಿಬ್ಬರೂ ಆ ಪುರುಷನಿಗೆ ಶರೀರಭೂತರಾದ ಜೀವಾತ್ಮರೆಂದು ಸಿದ್ಧವು.ಆದರೆ ಮೇಲಿನ ಮೂಲದಲ್ಲಿ''ಆ ಪರಮಪುರುಷನೊಬ್ಬನೇ ವಿಷ್ಣು ಬ್ರಹ್ಮರುದ್ರರೆಂಬ ನಾಮಭೇದದಿಂದ ಸೃಷ್ಟಿ ಮೊದಲಾದ ಕಾರ್ಯಗಳನ್ನು ನಡೆಸುವನೆಂದಿರುವುದರಿಂದ, ಆ ತ್ರಿಮೂರ್ತಿಗಳಿಗೆ ಹೆಸರಿನಲ್ಲಿ ಭೇದವೇಹೊರತು, ವಸ್ತುಭೇದವಿಲ್ಲವೆಂದು ಸೂಚಿತವಾಗುವುದಲ್ಲವೆ?ಇದಕ್ಕನುಗುಣವಾಗಿಶ್ರುತಿಗಳಲ್ಲಿಯೂ ''ಬ್ರಹ್ಮಾ ನಾರಾಯಣಃ, ಶಿವಶ್ಚ ನಾರಾಯಣಃ"ಎಂಬುದಾಗಿ ಸ್ವರೂಪೈಕ್ಯವೇ ಹೇಳಲ್ಪಡುವುದು. ಅದರಂತೆಯೇ ಸ್ಮೃತಿವಾಕ್ಯಗಳಲ್ಲಿಯೂ '' ಸರ್ಗಸ್ಥಿತ್ಯಂತಕರಣೀಂ ಬ್ರಹ್ಮವಿಷ್ಣುಶಿವಾತ್ಮಿಕಾಂ। ಸಂಜ್ಞಾಂ ಯಾತಿ ಭಗವಾನೇಕ ಏವ ಜನಾರ್ದನಃ"ಎಂದು ತ್ರಿಮೂರ್ತಿಗಳಿಗೆ ಸಂಜ್ಞಾಭೇದವುಮಾತ್ರವೇ ಹೇಳಲ್ಪಟ್ಟಿರುವುದು. ಇದಲ್ಲದೆ ಒಬ್ಬನೇ ಹರ್ಯಾದಿಸಂಜ್ಞೆಗಳನ್ನು

ಮೂರುಗುಣಗಳುಂಟು. ಇವು ಮೂರೂ ಕೇವಲಪ್ರಕೃತಿಯ ಗುಣಗಳು.

ಪೊಂದುವನೆಂಬುದರಿಂದ, ಈ ತ್ರಿಮೂರ್ತಿಗಳಿಗಿಂತಲೂ ಬೇರೆಯಾದ ಪರತತ್ತ್ವವೊಂದುಂಟೆಂದೂ ಸೂಚಿತವಾಗುವುದು. ಇದರಮೇಲೆ''ಯಸ್ಮಿ ನ್ಬ್ರಹ್ಮ ವಿಷ್ಣು ರುದ್ರಾಸ್ತೇಸ ಕ್ವೇಸಂಪ್ರಸೂಯಂತೇ,ತೇನೇದಂ ಪೂರ್ಣಂ ಪುರುಷೇಣ ಸರ್ವಂ, ತತೋಯದುತ್ತರತರಂತದರೂಪಮನಾಮಯಮ್,ಯ ಏತದ್ವಿದುರಮೃತಾಸ್ತೇ ಭವಂತಿ"ಎಂಬಶ್ರುತಿವಾಕ್ಯದಲ್ಲಿ, ಬ್ರಹ್ಮ ವಿಷ್ಣು ಪ್ರಭೃತಿಗಳೆಲ್ಲರೂ ಬೇರೊಂದು ಪರತತ್ತ್ವದಿಂದ ಹುಟ್ಟಿದುದಾಗಿಯೂ,(ತತೋಯದುತ್ತರತರಂ)ಎಂದು ತ್ರಿಮೂರ್ತಿಗಳಿಗಿಂತಲೂ ಆ ತತ್ತ್ವವು ಪರವೆನಿಸಿ, ಬೇರೆಯಾಗಿರುವುದಾಗಿಯೂ, ಅದೇ ಮೋಕ್ಷಹೇತುವೆಂಬುದಾಗಿಯೂ ಹೇಳಲ್ಪಟ್ಟಿರುವುದು. ಇದೂ ಅಲ್ಲದೆ''ಅಮೃತಸ್ಯೈಷ ಸೇತುಃ"ಎಂಬುದಾಗಿ ವಿಷ್ಣುವು ಮೋಕ್ಷಕ್ಕೆ ಸೇತುವಾಗಿರುವನೆಂದರೆ ಮೋಕ್ಷಪ್ರಾಪ್ತಿಗೆ ದಾರಿಯಾಗಿರುವನೆಂಬುದರಿಂದ, ತ್ರಿಮೂರ್ತಿಗಳಿಗಿಂತಲೂ ಬೇರೆಯಾದ ಪರತತ್ತ್ವವೊಂದುಂಟೆಂದೂ,ಅದೇ ಮುಮುಕ್ಷುಗಳಿಗೆ ಪ್ರಾಪ್ಯಸ್ಥಾನವೆಂದೂ, ಸಕಲಜಗತ್ಕಾರಣವೆಂದೂ ಸಿದ್ಧವಾಗುವುದು.ಹೀಗಿರಲು ನಾರಾಯಣನೇ ಪರಮಪುರುಷನೆಂದೂ,ಅವನೇ ಮುಕ್ತಿಗೆ ಸ್ಥಾನನೆಂದೂ ಹೇಳುವುದು ಹೇಗೆ?" ಎಂದು ಕೆಲವರು ಆಕ್ಷೇಪಿಸಬಹುದು. ಇವುಗಳಿಗೆ ಸಮಾಧಾನವೇನೆಂದರೆ:—ಪರಮಪುರುಷನೊಬ್ಬನೇ ತ್ರಿಮೂರ್ತಿಗಳಾದನೆಂದಮಾತ್ರಕ್ಕೆ, ಅವನಿಗೂ ತ್ರಿಮೂರ್ತಿಗಳಿಗೂ ಏಕ್ಯವನ್ನು ಹೇಳಬೇಕೆಂಬ ನಿರ್ಬಂಧವೇನೂ ಏರ್ಪಡುವುದಿಲ್ಲ.''ಬ್ರಹ್ಮಾ ನಾರಾಯಣಃ ಶಿವಶ್ಚ ನಾರಾಯಣಃ"ಎಂಬ ವಾಕ್ಯಗಳಲ್ಲಿ ಸ್ವರೂಪೈಕ್ಯವ್ಯತಿರೇಕವಿದ್ದರೂ,''ನಾರಾಯಣಾದ್ಬ್ರಹ್ಮಾ ಜಾಯತೇ, ನಾರಾಯಣಾದ್ರುದ್ರೋ ಜಾಯತೇ"ಇತ್ಯಾದಿಗಳಾದ ಬೇರೆವಾಕ್ಯಗಳಿಂದ ಆ ಸಂದೇಹವು ಪರಿಹೃತವಾಗಿ,ಬ್ರಹ್ಮರುದ್ರರಿಗೆ ನಾರಾಯಣನೇ ಉತ್ಪತ್ತಿಕಾರಣನೆಂದು ವ್ಯಕ್ತವಾಗುವುದು. ಇದೇ ಅರ್ಥದಲ್ಲಿ ಇನ್ನೂ ಅನೇಕಶ್ರುತಿಸ್ಮೃತಿವಾಕ್ಯಗಳುಂಟು ''ಏಕೋ ಹವೈ ನಾರಾಯಣ ಆಸೀನ್ನ ಬ್ರಹ್ಮಾ ನೇಶಾನಃ"ಆದಿಯಲ್ಲಿ ನಾರಾಯಣನೊಬ್ಬನುಹೊರತು ಬ್ರಹ್ಮರುದ್ರಾದಿಗಳಾರೂ ಇರಲಿಲ್ಲವೆಂದೂ, ''ಸ ಮುನಿರ್ಭೂತ್ವಾ ಸನುಚಿಂತಯತ್" ''ತತ ಏತೇ ವ್ಯಜಾಯಂತ ವಿಶ್ವೇ ಹಿರಣ್ಯಗರ್ಭೋಗ್ನಿರ್ಯಮವರುಣರುದ್ರೇಂದ್ರಾಃ:" ''ಯನ್ನಾಭಿಪದ್ಮಾದಭವತ್ಸ ಮಹಾತ್ಮಾಪ್ರಜಾಪತಿಃ। ತತ್ಸ ಬ್ರಹ್ಮಾ ಚತುರ್ಮುಖೋಽಜಾಯತ, ಸೋಗ್ರೇ ಭೂತಾನಾಂ ಮೃತ್ಯುಮಸೃಜತ್ ತ್ಸ ಕ್ಷಂ ತ್ರಿಶಿರಸ್ಕಂ ತ್ರಿಪಾದಂ.ಖಂಡಪರಶುಂ"ಇತ್ಯಾದಿ ವಾಕ್ಯಗಳಿಂದ ಶ್ರೀಮನ್ನಾರಾಯಣನ ಮನಸ್ಸಂಕಲ್ಪದಿಂದ, ಅವನ ನಾಭಿಯಲ್ಲಿ ಬ್ರಹ್ಮನು ಜನಿಸಿ,ಆಮೇಲೆಬ್ರಹ್ಮನೇ ರುದ್ರನನ್ನು ಸೃಷ್ಟಿಸಿದಹಾಗೆ ವ್ಯಕ್ತವಾಗುವುದು. ''ಆದ್ಯೋ ನಾರಾಯಣೋ ದೇವಸ್ತ

ಇವು ಜೀವಾತ್ಮನಲ್ಲಿಯಾಗಲಿ ಪರಮಾತ್ಮನಲ್ಲಿಯಾಗಲಿ ಇರತಕ್ಕವುಗಳಲ್ಲ, ಪ

ಸ್ಮಾದ್ಬ್ರಹ್ಮಾತತೋಭವಃ''''ಕ ಇತಿ ಬ್ರಹ್ಮಣೋ ನಾಮ ಈಶೋಪಂಪರ್ವದೇಹಿನಾಂ ಆವಾಂ ತ್ವದಂಗಸಂಭೂತೌ ತಸ್ಮಾತ್ಕೇಶವನಾಮಭಾಕ್" ಇತ್ಯಾದಿ ವಾಕ್ಯಗಳಿಂದ ಲೂ ನಾರಾಯಣನಿಂದ ಬ್ರಹ್ಮನೂ, ಇವನಿಂದ ರುದ್ರನೂ ಜನಿಸಿದಂತೆ ಸಿದ್ಧವಾಗುವು ದು.ಮತ್ತು ''ವಿಭೂತಯೋ ಹರೇರೇತಾ ಜಗತಸ್ಸೃಷ್ಟಿ ಹೇತವಃ''ಎಂಬುದಾಗಿಬ್ರಹ್ಮ ರುದ್ರಾದಿಗಳೆಲ್ಲರೂ ನಾರಾಯಣನ ವಿಭೂತಿಗಳೆಂದೂ,''ಏತೌಪ ತ್ರೌ ಪಿಬುಧ ಶ್ರೇಷ್ಠೌ ಪ್ರಸಾದಕೋಽಧಜೌ ಸ್ಮೃತೌ । ತದಾದರ್ಶಿತಪಂಥಾನೌ ಸೃಷ್ಟಿಸಂಹಾರಕಾರಕೌ" ''ಹರೋ ಹರತಿ ತದ್ವಶಃ" ಎಂಬುದಾಗಿ ಬ್ರಹ್ಮರುದ್ರಾದಿಗಳ ಪ್ರವರ್ತನೆಗಳೆಲ್ಲವೂ ಆ ನಾರಾಯಣನ ಅಧೀನಗಳೆಂದೂ,''ತದಾಂತರಾತ್ಮಾ ಮಮಚ ಯೇಚಾನ್ಯೇ ದೇಹಿಸಂಜ್ಞಿ ತಾಃ । ಸರ್ವೇಷಾಂ ಸಾಕ್ಷಿಭೂತೋಸೌ" ಎಂಬುದರಿಂದ, ನಾರಾಯಣನಿಗೂ, ಬ್ರಹ್ಮರು ದ್ರಾದಿಗಳಿಗೂ ಶರೀರಾತ್ಮಭಾವರೂಪವಾದ ಸಂಬಂಧವುಂಟೆಂದೂ ವ್ಯಕ್ತವಾಗುವುದು. ಹೀಗೆ ಅನೇಕ ಶ್ರುತಿಸ್ಮೃತಿಗಳಿಂದ ಬ್ರಹ್ಮರುದ್ರರು ನಾರಾಯಣನಿಂದಲೇ ಸೃಷ್ಟಿಸಲ್ಪ ಟ್ಟು, ಆತನಿಗಧೀನರಾಗಿ, ಆತನಿಗೆ ಶರೀರಭೂತರಾಗಿಯೂ ಇರುವುದರಿಂದ, ತ್ರಿಮೂರ್ತಿ ಗಳನ್ನು ಏಕವಸ್ತುವಾಗಿ ಹೇಳುವುದಕ್ಕೆಲ್ಲ. ಬ್ರಹ್ಮರುದ್ರವಾಚಕಗಳಾದ ಶಬ್ದಗಳು ದೇಹಾತ್ಮಭಾವದಿಂದ ಆ ನಾರಾಯಣನಲ್ಲಿ ವರ್ತಿಸುವುವೇಹೊರತು ಸ್ವರೂಪೈಕ್ಯ ದಿಂದಲ್ಲವೆಂದು ಗ್ರಾಹ್ಯವು. ಆದರೆ ಬ್ರಹ್ಮವಿಷ್ಣುರುದ್ರೇಂದ್ರಾಸ್ತೇ ಸರ್ವೇ ಸಂಪ್ರಸೂ ಯಂತೇ" ''ತತೋ ಯದುತ್ತರತರಂ" ಈ ವಾಕ್ಯಗಳಿಂದ ತ್ರಿಮೂರ್ತಿಗಳಿಗೆ ಉತ್ಪತ್ತಿ ಯೂ, ತ್ರಿಮೂರ್ತಿಗಳಿಗಿಂತಲೂ ಮೇಲಾದ ಬೇರೊಂದು ತತ್ವವುಂಟೆಂಬ ಭಾವವೂ ಸೂಚಿತವಾಗುವಾಗ,ವಿಷ್ಣುವಿಗೆ ಪರತ್ವವು ಹೇಗೆ ? ಎಂದರೆ, ಬ್ರಹ್ಮರುದ್ರರು ಕರ್ಮ ವಶದಿಂದ ಹುಟ್ಟುತಕ್ಕವರೆಂದೂ ವಿಷ್ಣುವುಮಾತ್ರ''ಆಜಾಯಮಾನೋ ಬಹುಧಾ ವಿಜಾ ಯತೇ" ಎಂಬಂತೆ ತನ್ನ ಸಂಕಲ್ಪದಿಂದ ತಾನೇ ಅವತರಿಸತಕ್ಕವನೆಂದೂ ಭೇದವನ್ನು ಗ್ರಹಿಸಬೇಕು. ಹಾಗೆಯೇ(ತತೋ ಯದುತ್ತರತರಂ) ಎಂಬುದರಿಂದ ನಾರಾಯಣನಿಗಿಂ ತಲೂ ಮೇಲಾದ ಬೇರೊಂದು ತತ್ವವುಂಟೆಂದು ಗ್ರಹಿಸಕೂಡದು. ಈ ಶ್ರುತಿವಾಕ್ಯಕ್ಕೆ ಹಿಂದುಮುಂದಿನ ವಾಕ್ಯಗಳೆಲ್ಲವೂ ನಾರಾಯಣನಿಗೇ ಮಹಾಪುರುಷತ್ವವನ್ನು ಹೇಳು ತ್ತಿರುವಾಗ, ನಡುವೆ ಇರುವ ಈ ವಾಕ್ಯವೂಕೂಡ ಆ ನಾರಾಯಣನ ಪರತ್ವವನ್ನೇ ಹೇಳಿರಬೇಕೇಹೊರತು ಬೇರೊಬ್ಬ ಪುರುಷನನ್ನು ಹೇಳಿದ್ದಪಕ್ಷದಲ್ಲಿ, ಆ ವಾಕ್ಯಕ್ಕೆ ಪೂ ರ್ವೋತ್ತರಗಳೊಡನೆ ಸಂಬಂಧವಿಲ್ಲದೇಹೋಗುವುದರಿಂದ (ತತೋ ಯದುತ್ತರತರಂ) ಎಂಬಲ್ಲಿ (ತತಃ) ಮೇಲಿನ ಕಾರಣಗಳಿಂದ (ಯತ್) ಪುರುಷಶಬ್ದವಾಚ್ಯವಾದ ತತ್ವ

ರಮಪುರುಷನೊಬ್ಬನೇ ಶರೀರಾತ್ಮಭಾವದಿಂದ ಆ ಮೂರುಗುಣಗಳಿಂದಕೂಡಿ ಈ ಜಗತ್ತಿನ ಸ್ಥಿತಿ ಮೊದಲಾದ ಕಾರ್ಯಗಳನ್ನು ನಡೆಸುವುದಕ್ಕಾಗಿ,ವಿಷ್ಣುಬ್ರಹ್ಮರುದ್ರರೆಂಬ ನಾಮರೂಪಭೇದಗಳನ್ನು ಹೊಂದುವನು. ಇವರಲ್ಲಿ ಸತ್ವಮೂರ್ತಿಯಾದವಿಷ್ಣುವಿನಿಂದಲೇ ಮನುಷ್ಯರಿಗೆ(ಮೋಕ್ಷಪ್ರಾಪ್ತಿಯವರೆಗೆ) ಸರ್ವವಿಧಗಳಾದ ಶ್ರೇಯಸ್ಸುಗಳೂ ಕೈಗೂಡುವುವು. ‘‘ಮೇಲೆ ಹೇಳಿದಮೂರೂ ಸಮವಾಗಿ ಪ್ರಕೃತಿಯ ಗುಣಗಳಾಗಿರುವಾಗ, ಅವುಗಳಲ್ಲಿ ಸತ್ತ್ವವೊಂದೇ ಮೋಕ್ಷಹೇತುವೆಂಬುದಕ್ಕೆ ಆಧಾರವೇನು? ಎಂದರೆ, ಪೃಥಿವೀವಿಕಾರವಾದ ಒಂದುಕಟ್ಟಿಗೆಯಲ್ಲಿ, ಮೊದಲು ಹೊಗೆಯು ಕಾಣಿಸಿಕೊಂಡು, ಆಮೇಲೆ ಅಗ್ನಿಯು ಹುಟ್ಟುವುದಲ್ಲವೆ? ಇವೆರಡೂ ಒಂದೇ ಕಟ್ಟಿಗೆಯಿಂದ ಹೊರಟಿದ್ದರೂ, ಹೊಗೆಯು ಪ್ರಕಾಶರಹಿತವಾಗಿ ನಿಷ್ಪ್ರಯೋಜನವಾಗುವುದು. ಅದರಿಂದಾಚೆಗೆ ಹುಟ್ಟುವ ಅಗ್ನಿಯಾದರೋ ವೇದಪ್ರತಿಪಾದ್ಯವಾಗಿ, ತೇಜೋವಿಶಿಷ್ಟವಾಗಿರುವುದು. ಸ್ವರ್ಗಪ್ರಾಪ್ತಿಗೂ ಅದೇ ಕಾರಣವೆನಿಸಿಕೊಂಡಿರುವುದು. ಇದರಂತೆಯೇ ಲೋಕದಲ್ಲಿ ಸುಷುಪ್ತನಾದ ಮನುಷ್ಯನಿಗೆ ಮೊದಲು ತಮಸ್ಸು ಕವಿದಿರುವುದು.ಅದರಿಂದಾಚೆಗೆ ರಜಸ್ಸು ಹುಟ್ಟುವುದು.ತದನಂತರದಲ್ಲಿ ಮನಸ್ಸನ್ನು ಪ್ರಸಾದಗೊಳಿಸತಕ್ಕ ಸತ್ವವು ಹುಟ್ಟುವುದು.ಇವೆಲ್ಲವೂ ಪ್ರಕೃತಿಜನ್ಯಗಳೇ ಆಗಿದ್ದರೂ, ಸತ್ವವೊಂದೇ ಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವೆನಿಸಿರುವುದು. ಹೀಗೆ ಸತ್ವವೇ ಪರಬ್ರಹ್ಮಸಾಕ್ಷಾತ್ಕಾರಕ್ಕೆ ಸಾಧನವಾಗಿಯೂ,ಅಂತಹ ಸತ್ವಕ್ಕೆ ಪ್ರವರ್ತಕನಾದ ಶ್ರೀಮನ್ನಾರಾಯಣನೇ ಶ್ರೇಯಃಪ್ರದನಾಗಿಯೂ ಇರುವುದರಿಂದ, ಪೂರ್ವಕಾಲದ ಮಹರ್ಷಿಗಳೆಲ್ಲರೂ, ಸತ್ವಪ್ರವರ್ತಕನಾಗಿ, ಶುದ್ಧನಾಗಿರುವ ಆ ಭಗವಂತನನ್ನೇ ಮುಖ್ಯವಾಗಿ ಉಪಾಸನೆಮಾಡುತ್ತ ಬಂದರು. ಈಗಲೂ ಅದರಂತೆಯೇ ಸತ್ವಮೂರ್ತಿ

ವಾವುದೋ ಅದೇ (ಉತ್ತರತರಂ) ಮೇಲೆನಿಸಿಕೊಳ್ಳುವುದು ಎಂಬರ್ಥವನ್ನು ಗ್ರಹಿಸಬೇಕು. ಹಾಗೆಯೇ (ಅಮೃತಸ್ಯೈಷ ಸೇತುಃ)ಎಂಬಲ್ಲಿಯೂಕೂಡ ವಿಷ್ಣುವು ಬೇರೊಂದು ತತ್ವಕ್ಕೆ ಪ್ರಾಪಕನೆಂದು ಗ್ರಹಿಸಕೂಡದು. ವಿಷ್ಣುವು ತನಗೆತಾನೇ ಪ್ರಾಪಕನೆಂಬುದೇ ಅದರರ್ಥವು. ಹೀಗೆ ನಾರಾಯಣನೇ ಪರಮೇಶ್ವರುಷನೆಂಬುದಕ್ಕೆ ಅನೇಕಶ್ರುತಿಸ್ಮೃತಿವಾಕ್ಯಗಳುಂಟು (ವೀರರಾಘವೀಯವು).

ಯಾದ ಮಹಾವಿಷ್ಣುವನ್ನು ಭಕ್ತಿಯಿಂದ ಉಪಾಸನಮಾಡುವವರಿಗೆ ಸರ್ವ ವಿಧದಲ್ಲಿಯೂ ಕ್ಷೇಮವುಂಟು. ಇದನ್ನು ಬಿಟ್ಟು ರಜಸ್ತಮೋಗುಣಪ್ರಧಾನರಾದ ಬ್ರಹ್ಮಾದಿಗಳನ್ನು ಭಜಿಸತಕ್ಕವರಿಗೆ ಲಭಿಸತಕ್ಕ ಫಲವು, ಕಾಲಕ್ರಮದಿಂದ ಕ್ಷಯಿಸಿ ಹೋಗುವುದೇಹೊರತು,ಶಾಶ್ವತವಲ್ಲ! ಆದರೆ ಕೆಲಕೆಲವರುದೇವತಾಂತರಗಳನ್ನೂ ಭಜಿಸುವುದುಂಟಲ್ಲವೆ? ಎಲ್ಲರೂ ಸತ್ವಮೂರ್ತಿಯಾದಆ ವಿಷ್ಣುವೊಬ್ಬನನ್ನೇ ಏಕೆ ಭಜಿಸಬಾರದು?ಎಂದರೆ, ಜೀವಗಳಲ್ಲಿಯೂ ಶರೀರ ಸಂಬಂಧದಿಂದ ಈ ವಿಧವಾದ ಗುಣಭೇದಗಳುಂಟು. ಮೋಕ್ಷಾಪೇಕ್ಷೆಯುಳ್ಳವರೆಲ್ಲರೂ ಸತ್ವಪ್ರಧಾನರಾಗಿರುವುದರಿಂದ, ರಜಸ್ತಮೋಗುಣಪ್ರಧಾನರಾದ ಇತರದೇವತೆಗಳನ್ನು ಬಿಟ್ಟು ಶುದ್ಧಸತ್ವಮೂರ್ತಿಯಾದಶ್ರೀಮನ್ನಾರಾಯಣನ ಅವತಾರಗಳನ್ನೇ ಭಜಿಸುವರು. ಇಂತವರು ಯಾವಾಗಲೂ ಶಾಂತಸ್ವಭಾವವುಳ್ಳವರು. ಇವರಿಗೆ ದೇವತಾಂತರಗಳಲ್ಲಿಯಾಗಲಿ, ಆ ದೇವತೆಗಳನ್ನು ಉಪಾಸನೆಮಾಡುವವರಲ್ಲಿಯಾಗಲಿ ಅಸೂಯಾದಿಗಳುಂಟಾಗವು. ರಜಸ್ತಮಸ್ಸ್ವಭಾವವುಳ್ಳವರಾದರೋ,ಶಾಶ್ವತಸುಖವಾದ ಮೋಕ್ಷದಲ್ಲಿ ದೃಷ್ಟಿಯಿಡದೆ,ಐಶ್ವರ್ಯವನ್ನೂ,ಅಧಿಕಾರವನ್ನೂ, ಪುತ್ರಸಂತಾನಾದಿಗಳನ್ನೂ ಅಪೇಕ್ಷಿಸಿ ತಮ್ಮಂತೆಯೇ ರಜಸ್ತಮಸ್ಸ್ವಭಾವವುಳ್ಳ ಪಿತೃದೇವತೆಗಳನ್ನೂ,ಭೂತಪತಿಗಳನ್ನೂ, ಬ್ರಹ್ಮಾದಿಗಳನ್ನೂ ಭಜಿಸುವರು. ಆದುದರಿಂದ ಲೋಕದಲ್ಲಿ ಮನುಷ್ಯರಿಗೆ ತಮ್ಮತಮ್ಮ ಗುಣಕ್ಕನುಸಾರವಾಗಿಯೇ ದೇವತಾಂತರಗಳಲ್ಲಿಯೂ ಭಕ್ತಿಯು ಹುಟ್ಟುವುದು.¡ಎಲೈ ಮಹರ್ಷಿಗಳೆ ? ಆಷ್ಟೇಕೆ?ಯಾವ ವೇದಗಳಾಗಲಿ, ಯಾವ ಯಜ್ಞಗಳಾಗಲಿ, ವೇದಾಂತವಿಹಿತಗಳಾದ ಯೋಗಗಳಾಗಲಿ, ಸ್ಮಾರ್ತಕ್ರಿಯೆಗಳಾಗಲಿ, ಆ ವಾಸುದೇವನನ್ನೇ ವಿಷಯೀಕರಿಸುವುವು. ಮತ್ತು ಜ್ಞಾನವಾಗಲಿ, ತಪಸ್ಸಾಗಲಿ, ವೇದೋಕ್ತಧರ್ಮಗಳಾಗಲಿ, ಎಲ್ಲವೂ ಅಂತರಾತ್ಮನಾದ ಆ ವಾಸುದೇವನಿಗೇ ಸಲ್ಲುವುವು. ಸ್ವರ್ಗಾದಿಫಲಗಳೂಕೂಡ ತದೀಯಾನಂದದ ಅಂಶಭೂತವಾಗಿಯೇ ಇರುವುದರಿಂದ, ಅವೂ ವಾಸುದೇವಪರವೆನಿಸುವುವು. ಸಮಸ್ತಶಾಸ್ತ್ರಾರ್ಥಗಳೂ ವಾಸುದೇವನಲ್ಲಿಯೇ ವರ್ತಿಸುವುವು.ಸಮಸ್ತಕ್ಕೂ ವಾಸುದೇವನೇ ಮುಖ್ಯಶ್ರಯನು. ಏಕೆಂದರೆ:—ಸೃಷ್ಟಿಗೆ ಮೊದಲು ನಾಮರೂಪವಿಭಾಗಗಳಿಲ್ಲದ

ಸೂಕ್ಷ್ಮಚಿದಚಿತ್ತುಗಳನ್ನೇ ತನ್ನ ಶರೀರವನ್ನಾಗಿ ಹೊಂದಿ, ತಾನೊಬ್ಬನೇ ತೋರುತಿದ್ದ ಪರಮಾತ್ಮನು, ತನಗೆ ಶರೀರಭೂತವಾಗಿಯೂ, ಸತ್ವಾದಿಗುಣ ಭೇದಗಳುಳ್ಳುದಾಗಿಯೂ, ಮಹದಾದಿಪೃಥಿವೀಪರ್ಯಂತವಾಗಿ ಕಾರ್ಯಕಾರಣ ರೂಪದಿಂದ ಪರಿಣಮಿಸತಕ್ಕುದಾಗಿಯೂ ಇರುವ ಆ ಪ್ರಕೃತಿಯಿಂದಲೇ ಜಗತ್ತನ್ನು ಸೃಷ್ಟಿಸಿ,ಆ ಸ್ಥೂಲವಸ್ತುಗಳೊಂದೊಂದರಲ್ಲಿಯೂ ತಾನೂ ಆಡಗಿರುವನು. ಹಾಗಿದ್ದರೂ ತಾನುಮಾತ್ರ ಆ ಗುಣಗಳ ಸಂಬಂಧವಿಲ್ಲದಿರುವನು. ಹೀಗೆ ಆ ಪರಮಾತ್ಮನು, ಪ್ರಕೃತಿರೂಪವಾದ ಸಮಸ್ತವಸ್ತುಗಳಲ್ಲಿಯೂ ವ್ಯಾಪಿಸಿರುವುದಲ್ಲದೆ,ಆದೇ ಪ್ರಕೃತಿಸಂಬಂಧವಾದಶರೀರದಲ್ಲಿಸೇರಿಕೊಂಡಿರುವ ಜೀವನನ್ನೂ ತನಗೆ ಶರೀರವನ್ನಾಗಿ ಮಾಡಿಕೊಂಡು, ಒಂದೊಂದುಜೀವದಲ್ಲಿಯೂ ಅನುಪ್ರವೇಶಮಾಡಿರುವನು. ಹೀಗೆ ಸರ್ವಾತ್ಮಕನಾದ ಆ ಭಗವಂತನು, ಮಾಯಾ (ಪ್ರಕೃತಿ) ಗುಣಕಾರ್ಯಗಳಾದ ಒಂದೊಂದು ವಸ್ತುವಿನಲ್ಲಿಯೂ, ದೇವಾದಿಶರೀರಗಳಲ್ಲಿಯೂ, ಆ ಶರೀರಾಂತರ್ಗತವಾದ ಒಂದೊಂದು ಜೀವದಲ್ಲಿಯೂ ಸೇರಿರುವುದರಿಂದ, ಆಯಾಶರೀರಗಳ, ಮತ್ತು ಅವುಗಳಲ್ಲಿರುವ ಜೀವಾತ್ಮನ ಧರ್ಮಗಳೆಲ್ಲಕ್ಕೂ ತಾನೇ ಆಶ್ರಯನಾದಂತೆ ತೋರುವನೇ ಹೊರತು, ವಾಸ್ತವಕ್ಕೆ ಈ ಪ್ರಕೃತಿಗುಣಗಳೊಂದೂ ಅವನಲ್ಲಿ ಸಂಬಂಧಿಸಲಾರವು. ಹೀಗೆ ಆ ಪರಮಾತ್ಮನು ಸರ್ವಾಂತರ್ಯಾಮಿಯಾದುದರಿಂದ ಚಿದಚಿದ್ರೂಪವಾದ ಈ ಪ್ರಪಂಚದಲ್ಲಿ ಆತನಿಲ್ಲದ ವಸ್ತುವೊಂದಾದರೂ ಇರುವುದಕ್ಕವಕಾಶವಿಲ್ಲ! ಆದುದರಿಂದಲೇ ವೇದಾದಿಗಳೆಲ್ಲವೂ ಆ ವಾಸುದೇವನೊಬ್ಬನಲ್ಲಿಯೇ ವರ್ತಿಸುವುವು. ಮುಖ್ಯವಾಗಿ*ನಾವು ಯಾವುದನ್ನು ದ್ವೈತವೆಂದು

---

* ಈ ಸ್ಥಳದಲ್ಲಿ ತಿಳಿಯಬೇಕಾದ ಮುಖ್ಯಾಂಶವೇನೆಂದರೆ:—ಚಿತ್ತು, ಅಚಿತ್ತು, ಈಶ್ವರನೆಂದು ಮೂರುತತ್ತ್ವಗಳು. ಚಿತ್ತೆಂದರೆ ಚೇತನಸಮುದಾಯವು. ಅಚಿತ್ತೆಂದರೆ ಅಚೇತನಗಳಾದ ಘಟಪಟಾದಿವಸ್ತುಗಳಾಗಿಯೂ, ಪ್ರಾಣಿಗಳ ದೇಹರೂಪವಾಗಿಯೂ ಪರಿಣಮಿಸತಕ್ಕ ಪ್ರಕೃತಿ. ಇವು ಮೂರೂ ಸ್ವತಸ್ಸಿದ್ಧವಾಗಿ ನಿತ್ಯವೆನಿಸಿಕೊಂಡಿರುವುವು. ಶರೀರದಲ್ಲಿ ಜೀವಾತ್ಮನು ಸೇರಿಕೊಂಡಿರುವಂತೆ,ಈಶ್ವರನು ಈ ಎರಡುತತ್ತ್ವಗಳಲ್ಲಿಯೂ ಅಂತರ್ಯಾಮಿಯಾಗಿದ್ದು ಅವುಗಳಿಗೆ ತಾನೇ ಧಾರಕನಾಗಿಯೂ, ಪೋಷಕನಾಗಿಯೂ,ನಿಯಾಮಕನಾಗಿಯೂ ಇರುವನು. ಚಿದಚಿತ್ತುಗಳೆರಡೂ ಈಶ್ವರನಿಗೆ ಶರೀರ

ಕಾರ್ಯವನ್ನು ಮಾಡಿದರೂ,ಅವೆಲ್ಲವೂ ಅಂತರಾತ್ಮನಾದ ಆ ವಾಸುದೇವನಲ್ಲಿ ಯೇ ವರ್ತಿಸುವುವು.ಎಲ್ಲೆಲ್ಲಿಯೂ ಒಂದೇಬಗೆಯತೇಜಸ್ಸುಳ್ಳ ಅಗ್ನಿಯು ತನ ಗಾಶ್ರಯವಾದ ಹುಲ್ಲು,ಕಟ್ಟಿಗೆ,ಮೊದಲಾದ ವಸ್ತುಗಳಿಗೆ ತಕ್ಕಂತೆ ಹೆಸರಿನ ಲ್ಲಿಯೂ,ಆಕೃತಿಯಲ್ಲಿಯೂ ಬೇರ್ಪಡುವಂತೆ, ಜೀವನೂಕೂಡ, ಸರ್ವಕಾಲ ಸ ರ್ವಾವಸ್ಥೆಗಳಲ್ಲಿಯೂಒಂದೇವಿಧವಾದಜ್ಞಾನಾನಂದಸ್ವರೂಪನಾಗಿದ್ದರೂ, ತಾನು ಸೇರಿದ ದೇಹಗುಣಕ್ಕೆ ತಕ್ಕಂತೆ, ದೇವನೆಂದೂ, ಮನುಷ್ಯನೆಂದೂ, ತಿರ್ಯಕ್ಕೆಂದೂ,ನಾನಾಭೇದಗಳಿಂದ ತೋರುವನು. ಹಾಗೆಯೇ ಸರ್ವೇಶ್ವರನೂ ಕೂಡ ಜೀವಾತ್ಮನನ್ನೇ ತನಗೆ ಶರೀರವನ್ನಾಗಿ ಮಾಡಿಕೊಂಡು, ತನ್ಮೂಲಕ

ಭೂತವಾಗಿ, ಆತನ ನಿಯಮನಕ್ಕೆ ಒಳಪಟ್ಟಿರುವುವು. ಪ್ರಪಂಚಸೃಷ್ಟಿಗೆ ಮೊದಲು ಈ ಚಿದಚಿತ್ತುಗಳೆರಡೂ ಈಗ ಕಾಣುವ ನಾಮರೂಪಭೇದಗಳೊಂದೂ ಇಲ್ಲದೆ,ಭಗವಂತನಿಗೆ ಶರೀರವಾಗಿ,ಅವನೊಡನೆ ಏಕಾಕಾರವಾಗಿಯೇ ಇದ್ದುವು. ಇದೇ ಅವುಗಳ ಸೂಕ್ಷ್ಮಾವಸ್ಥೆ ಯು. ಉಪ್ಪು, ಸಕ್ಕರೆ ಇವುಗಳೆರಡೂ ಹಾಲಿನಲ್ಲಿ ಕರಗಿದಾಗ, ಅವು ಮೂರೂ ಒಂದಾ ಗಿ ಸೇರಿ,ಹಾಲೊಂದೇ ಕಣ್ಣಿಗೆ ಕಾಣುವಂತೆ, ಈಶ್ವರನೊಬ್ಬನೇ ಕಾಣುತಿದ್ದನು "ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಂ" ಎದು ಸೃಷ್ಟಿಗೆಮೊದಲು ಎರಡ ನೆಯದಿಲ್ಲದೆ ಬ್ರಹ್ಮವೊಂದೇ ಇತ್ತೆಂಬ ಶ್ರುತಿಗೆ ಇದೇ ಅರ್ಥವು. ಅದರಿಂದಾಚೆಗೆ ಈಶ್ವ ರನು "ತದೈಕ್ಷತ ಬಹು ಸ್ಯಾಂ ಪ್ರಜಾಯೇಯ" ಎಂದು ತಾನೇ ಅನೇಕವಸ್ತುಗಳಾಗಿ ಹುಟ್ಟುವಂತೆ ಸಂಕಲ್ಪಿಸಿಕೊಂಡು, ಚಿದಚಿತ್ತುಗಳೆನ್ನು ಬೇರೆಬೇರೆ ನಾಮರೂಪವಿಭಾಗ ಗಳಿಂದ ಬೇರ್ಪಡುವಂತೆ ಸ್ಥೂಲಾಕಾರಕ್ಕೆ ತಿರುಗಿಸಿದನು. ಇದೇ ಅವುಗಳ ಸ್ಥೂಲಾ ವಸ್ಥೆಯು. ಇದೇ ಸೃಷ್ಟಿಯೆನಿಸುವುದು. ಇವುಗಳ ಸಮುದಾಯವೇ ಈ ಜಗತ್ತು. ಈ ಸ್ಥೂಲಾವಸ್ಥೆಯಲ್ಲಿಯೂಕೂಡ ಒಂದೊಂದರಲ್ಲಿಯೂ ಈಶ್ವರನು ಅಂತರ್ಯಾಮಿಯಾ ಗಿರುವನು. ಹೀಗೆ ಚಿದಚಿತ್ತುಗಳೆರಡೂ ಸೂಕ್ಷ್ಮಾವಸ್ಥೆಯಲ್ಲಿಯಾಗಲಿ, ಸ್ಥೂಲಾವಸ್ಥೆ ಯಲ್ಲಿಯಾಗಲಿ, ಈಶ್ವರನಿಗೆ ಶರೀರವಾಗಿ ಅವನನ್ನಗಲದಿರುವುವು. ಈಶ್ವರನು ಅವುಗ ಳಿಗೆ ಆತ್ಮರೂಪದಿಂದಿರುವನು. ಆದುದರಿಂದ ಶರೀರಭೇದದಿಂದ ಹುಟ್ಟಿರುವ ರಾಮ, ಸೋಮ ಇವೇ ಮೊದಲಾದ ನಾಮಾಂತರಗಳೆಲ್ಲವೂ ಅದರೊಳಗಿನ ಜೀವಾತ್ಮನವರೆ ಗೂ ಸಲ್ಲುವಂತೆ, ಶರೀರಭೂತಗಳಾದ ಜೀವಗಳಿಗೂ, ಇತರವಸ್ತುಗಳಿಗೂ ವಾಚ ಕಗಳಾದ ಶಬ್ದಗಳೆಲ್ಲವೂ ಅಂತರ್ಯಾಮಿಯಾದ ಆ ಪರಮಾತ್ಮನ ವಿಷಯವಾಗಿಯೇ ಕೊನೆಮುಟ್ಟುವುವೆಂದು ತಿಳಿಯಬೇಕು.

ವಾಗಿ ಪ್ರಕೃತಿಮಯವಾದ ದೇಹದಲ್ಲಿ ಪ್ರವೇಶಿಸಿ, ರೂಪಭೇದವನ್ನು ಕಾಣಿಸುವನು. ಹೀಗೆ ಪರಮಾತ್ಮನು ಚಿದಚಿತ್ತುಗಳ ಮೂಲಕವಾಗಿ ನಾಮರೂಪ ಭೇದಗಳನ್ನೂ, ಜೀವಾತ್ಮನ ಮೂಲಕವಾಗಿ ಸುಖದುಃಖಾದ್ಯನುಭವಗಳನ್ನೂ ಹೊಂದುವಂತೆ ತೋರಿದರೂ, ಆ ನಾಮರೂಪಭೇದಗಳೆಲ್ಲವೂ ಆಯಾಶರೀರಗಳಲ್ಲಿಮಾತ್ರವೇ ಪರ್ಯವಸಾನಹೊಂದುವುವು. ಸುಖದುಃಖಾದ್ಯನುಭವಗಳೂ, ಪುಣ್ಯಪಾಪಕರ್ಮಗಳೂ, ಜೀವನಲ್ಲಿಮಾತ್ರವೇ ಪರ್ಯವಸಿತವಾಗುವುವು. ಇಷ್ಟೇಹೊರತು, ಅಂತರಾತ್ಮನಾದ ಆ ಭಗವಂತನಿಗೆ ಇವುಗಳ ಸಂಬಂಧವೇನೂ ಇರುವುದಿಲ್ಲ. ಹೀಗೆ ಭಗವಂತನು, ಸತ್ವಾದಿಗುಣಮಯಗಳೆನಿಸಿಕೊಂಡ ವೃಥಿವ್ಯಾದಿ ಪಂಚಭೂತಗಳು, ಗಂಧಾದಿಸೂಕ್ಷ್ಮಗಳು, ಜ್ಞಾನೇಂದ್ರಿಯಕರ್ಮೇಂದ್ರಿಯಗಳು, ಅಂತಃಕರಣ, ಇವೇ ಮೊದಲಾದ ಪದಾರ್ಥಗಳನ್ನು ಕೂಡಿಸಿ, ತನ್ನಿಂದಲೇ ನಿರ್ಮಿಸಲ್ಪಟ್ಟ ದೇವಾದಿಶರೀರಗಳಲ್ಲಿ ಜೀವಶರೀರಿಯಾಗಿ ಪ್ರವೇಶಿಸಿ, ಆ ಜೀವದ್ವಾರದಿಂದಲೇ ರೂಪರಸಗಂಧಾದಿವಿಷಯಗಳನ್ನನುಭವಿಸುವನು. ಆ ಜೀವನಮೂಲಕವಾಗಿಯೇ ಪಾಪಪುಣ್ಯಗಳನ್ನೂ ನಡೆಸುತ್ತಿರುವನು. ಹೀಗೆ ಸರ್ವೇಶ್ವರನು ತಾನೊಬ್ಬನಾಗಿದ್ದರೂ, ಚಿದಚಿದ್ರೂಪವಾದ ಆ ಶರೀರಸಂಬಂಧದಿಂದಲೇ ನಾಮರೂಪಭೇದಗಳನ್ನೂ, ಸುಖದುಃಖಾದಿ ಭೋಗಗಳನ್ನೂ, ಕರ್ತೃತ್ವವನ್ನೂ ಹೊಂದಿದಂತೆ ಕಾಣುವನೇಹೊರತು, ವಾಸ್ತವದಲ್ಲಿ ಅವನಿಗೆ ಅವುಗಳೊಡನೆ ಯಾವ ವಿಧದಲ್ಲಿಯೂ ಸಂಬಂಧವಿಲ್ಲ. ನಾಮರೂಪಭೇದಗಳೆಲ್ಲವೂ ಪ್ರಕೃತಿಸಂಬಧವಾದುವು. ಕರ್ತೃತ್ವಾದಿಗಳೆಲ್ಲವೂ ಜೀವಾತ್ಮಸಂಬಂಧವಾದುವು. ಹೀಗೆ ಲೋಕಸೃಷ್ಟಿಗೆ ಕಾರಣನಾದ ಸರ್ವೇಶ್ವರನು, ಸಾಧುಜನಗಳಲ್ಲಿ ಕರುಣೆಯುಳ್ಳವನಾಗಿ, ಕರ್ಮವಶರಾದ ಚೇತನರನ್ನು ಉದ್ಧರಿಸುವುದಕ್ಕಾಗಿಯೇ ಸತ್ವಗುಣವನ್ನವಲಂಬಿಸಿ, ದೇವತಿರ್ಯಙ್ಮನುಷ್ಯಾದಿರೂಪಗಳಾದ ಆಕಾರಭೇದಗಳನ್ನು ತನ್ನ ಲೀಲೆಯಿಂದಲೇ ಪರಿಗ್ರಹಿಸಿ ಲೋಕಗಳನ್ನು ರಕ್ಷಿಸುತ್ತಿರುವನು. ಇದು ಎರಡನೆಯ ಅಧ್ಯಾಯವು.

ಭಗವಂತನ ಇಪ್ಪತ್ತೊಂದವತಾರಗಳು

ಎಲೈ ಶೌನಕಾದಿಮಹರ್ಷಿಗಳೆ! ಪರಮಾತ್ಮನು ಮೊಟ್ಟಮೊದಲು ಲೀಲಾರ್ಥವಾಗಿ ಲೋಕವನ್ನು ಸೃಷ್ಟಿಸಬೇಕೆಂದಪೇಕ್ಷಿಸಿ, ಏಕಾದಶೇಂದ್ರಿಯಗಳುಳ್ಳುದಾಗಿಯೂ, ಪಂಚಭೂತಾತ್ಮಕವಾಗಿಯೂ, ಹದಿನಾರುಕಳೆಗಳುಳ್ಳುದಾಗಿಯೂ, ಮಹದಾದಿಸಮಷ್ಟಿತತ್ವಸಮೂಹವಾಗಿಯೂ, ಅಂಡಕಾರಣವಾಗಿಯೂ ಇರುವ*ಪುರುಷರೂಪವನ್ನು ಮೊದಲು ತಾನೇ ಗ್ರಹಿಸಿದನು. ಆತನು ಜಲಮಧ್ಯದಲ್ಲಿ ಯೋಗನಿದ್ರೆಯಿಂದಿರುವಾಗ, ಆತನ ನಾಭಿಯೆಂಬ ಮಡುವಿನಲ್ಲಿ ಹುಟ್ಟಿದ ಕಮಲದಿಂದ, ಮರೀಚಿ ಮೊದಲಾದ ಪ್ರಜಾಪತಿಗಳಿಗೆ ಪತಿಯಾದ ಬ್ರಹ್ಮನು ಹುಟ್ಟಿದನು. ಆತನಿಗೆ ಶರೀರಭೂತವಾದ ಪ್ರಕೃತಿಯ ಏಕದೇಶಪರಿಣಾಮಗಳಿಂದಲೇ ಈ ಸಮಸ್ತಲೋಕಗಳೂ ಏರ್ಪಟ್ಟಿರುವುವು. ಹೀಗೆ ಬ್ರಹ್ಮನಿಗೂ, ಸಮಸ್ತಲೋಕಗಳಿಗೂ ಕಾರಣನಾದ ಭಗವಂತನ ರೂಪವು, ಕೇವಲಸತ್ವಮಯವಾಗಿಯೂ, ಶುದ್ಧವಾಗಿಯೂ, ಸರ್ವೋತ್ತಮವಾಗಿಯೂ ಇರುವುದು. ಅದನ್ನೇ ಅನಿರುದ್ಧರೂಪವೆಂದು ಹೇಳುವರು. ಆ ರೂಪವನ್ನು ಸೂಕ್ಷ್ಮದೃಷ್ಟಿಯುಳ್ಳ ಯೋಗಿಗಳುಮಾತ್ರ ಉತ್ತಮಜ್ಞಾನವಿಶಿಷ್ಟವಾದ ತಮ್ಮ ಮನಸ್ಸಿನಿಂದ ನೋಡಬಲ್ಲರು. ಅನಿರುದ್ಧನಾಮಕವಾದ ಆ ರೂಪವು, ಸಾಮಾನ್ಯಪುರುಷಸ್ವರೂಪವಲ್ಲ! ಸಹಸ್ರಪಾದಗಳು! ಸಹಸ್ರಭುಜಗಳು! ಸಹಸ್ರಮುಖಗಳು! ಸಾವಿರತೊಡೆಗಳು! ಇವುಗಳಿಂದ ಮಹಾದ್ಭುತವಾಗಿ, ಸಹಸ್ರತಿರಸ್ಸುಗಳಿಂದಲೂ, ಸಹಸ್ರನೇತ್ರಗಳಿಂದಲೂ, ಸಾವಿರಕಿವಿಗಳಿಂದಲೂ, ಸಾವಿರಮೂಗುಗಳಿಂದಲೂ, ಸಹಸ್ರಕಿರೀಟಕುಂಡಲಗಳಿಂದಲೂ ಶೋಭಿಸುತ್ತಿರುವುದು. ಈ ಅನಿರುದ್ಧಸ್ವರೂಪವೇ ಮುಂದಿನ*ಅವತಾರಗ

ಇದರಿಂದ ಭಗವಂತನಿಗೆ, ಶುದ್ಧಸತ್ವಮಯವಾದ ಪರಸ್ವರೂಪವೊಂದು, ಚೇತನಮಿಶ್ರವಾಗಿ, ಪ್ರಕೃತಿವಿಕಾರಗಳಾದ ಮಹದಾದಿತತ್ತ್ವಸಮೂಹದ ರೂಪವೊಂದು. ಹೀಗೆ ಎರಡುರೂಪವುಂಟೆಂದು ತಿಳಿಯಬೇಕು.

* ಅವತಾರಗಳಲ್ಲಿ ಕೆಲವು ಭೇದಗಳುಂಟು. ಅನುಪ್ರವೇಶಾವತಾರವೆಂದೂ, ಸ್ವರೂಪಾವತಾರವೆಂದೂ ಮುಖ್ಯವಾಗಿ ಎರಡುಭೇದಗಳು. ದೇವಾದಿಶರೀರಗಳಲ್ಲಿ ಸೇರಿ ಅವತರಿಸುವುದು ಅನುಪ್ರವೇಶವೆನಿಸುವುದು. ನಿಜರೂಪದಿಂದಲೇ ಅವತರಿಸುವುದು

ಳೆಲ್ಲಕ್ಕೂ ಕಾರಣಭೂತವಾದುದು. ಇದೇ ಸಮಸ್ತಪ್ರಪಂಚಕ್ಕೂ ಬೀಜಭೂತವು. ಇದಕ್ಕೆ ಅಪಕ್ಷಯಾದಿವಿಕಾರಗಳೊಂದೂ ಇಲ್ಲವು. ಆದುದರಿಂದ ಇದು ಅಪ್ರಾಕೃತವೆನಿಸುವುದು. ಈ ಅನಿರುದ್ಧನಿಗೆ ಶರೀರಾಂಶವಾದ ಚಿದಚಿತ್ತತ್ವಗಳ ಒಂದುಭಾಗದಿಂದ ದೇವತಿರ್ಯಙ್ಮನುಷ್ಯಾದಿಗಳೆಲ್ಲವೂ ಉದ್ಭವಿಸಿದುವು. ಆ ದೇವನೇ ಮೊದಲು ಚತುರ್ಮುಖಶರೀರನಾಗಿ ಸನತ್ಕುಮಾರರೂಪದಿಂದವತರಿಸಿ, ನಿರ್ವಿಘ್ನವಾಗಿ ಬ್ರಹ್ಮಚರ್ಯವನ್ನು ಸಲಿಸಿದನು. ಇದೇ ಮೊದಲನೆಯ ಅವತಾರವು. ಯಜ್ಞೇಶ್ವರನಾದ ಆ ಭಗವಂತನೇ ಲೋಕಾಭಿವೃದ್ಧಿಗಾಗಿ ಪ್ರಯತ್ನಿಸಿ, ಪಾತಾಳದಲ್ಲಿ ಹುದುಗಿಹೋಗಿದ್ದ ಭೂಮಿಯನ್ನುದ್ಧರಿಸುವುದಕ್ಕಾಗಿ ವರಾಹಶರೀರವನ್ನು ಧರಿಸಿದನು. ಇದು ಎರಡನೆಯ ಅವತಾರವು. ಭಗವಂತನ ಮೂರನೆಯ ಅವತಾರವು ಋಷಿಜನ್ಮವು. ಇದರಲ್ಲಿ ನಾರದರೂಪವನ್ನು ಹೊಂದಿ,* ನಿವೃತ್ತಿಧರ್ಮವುಳ್ಳವರು ಪ್ರವೃತ್ತಿಧರ್ಮಗಳನ್ನು ನಡೆಸಕೂಡದೆಂಬ ಪಿಳುಪನ್ನು ತೋರಿಸುವ ಪಾಂಚರಾತ್ರಶಾಸ್ತ್ರವನ್ನು ವಿವರಿಸಿದನು. ನಾಲ್ಕನೆಯ ಅವತಾರದಲ್ಲಿ ಧರ್ಮಪುರುಷನ ಭಾರ್ಯೆಯಾದ ಮೂರ್ತಿದೇವಿಯಲ್ಲಿ, ನರನಾರಾಯಣರೂಪದಿಂದ ಹುಟ್ಟಿ ಶಮದಮಾದಿಗುಣಗಳಿಂದ ಕೂಡಿದ ದುಶ್ಚರವಾದ ತಪಸ್ಸನ್ನು ನಡೆಸಿದನು. ಅದರಿಂದಾ ಜೆಗೆ ಕಪಿಲಾವತಾರವನ್ನೆತ್ತಿ, ಸಿದ್ಧರಿಗೆ ಅಧಿಪತಿಯಾಗಿ, ಕಾಲದೋಷದಿಂದ ಅಳಿಸಿಹೋಗಿದ್ದುದಾಗಿ

ಸ್ವರೂಪಾವತಾರವು. ಭಗವಂತನಿಗೆ ಇವೆರಡೂ ಕರ್ಮಾಧೀನಗಳಲ್ಲವಾದುದರಿಂದ, ಅವತಾರವೆಂದು ಕರೆಯಲ್ಪಡುವುವು. ಇದಲ್ಲದೆ ಪೂರ್ಣಾವತಾರವೆಂದೂ, ಅಂಶಾವತಾರವೆಂದೂ ಬೇರೆ ಎರಡು ಬಗೆಯುಂಟು. ಪೂರ್ಣಾವತಾರವೆಂದರೆ ಭಗವಂತನು ಷಾಡ್ಗುಣ್ಯಪರಿಪೂರ್ಣನಾಗಿ ತಾನೇ ತನ್ನ ಸ್ವರೂಪದಿಂದದತರಿಸುವುದು. ಅಂಶಾವತಾರವೆಂದರೆ, ತತ್ತಜ್ಜೀವಾಂತರಾತ್ಮನಾವ ಭಗವಂತನು, ಆಯಾ ಜೀವಾತ್ಮಮೂಲಕವಾಗಿ ನಿಜವೀರ್ಯಾದಿಗುಣಲೇಶವನ್ನು ಹೊರಪಡಿಸುವುದು. ಇವೆಗಡರಲ್ಲಿ ವರಾಹ, ನಾರಾಯಣ, ಮತ್ಸ್ಯ, ಕೂರ್ಮ, ಮೊಹಿನೀ, ನೃಸಿಂಹ, ವಾಮನ, ರಾಮ ಕೃಷ್ಣಾವತಾರಗಳು ಪೂರ್ಣಾವತಾರಗಳೆಂದು ಆಯಾಪುರಾಣಗಳಿಂದ ತಿಳಿದು ಬರುವುದು. ಉಳಿದುವೆಲ್ಲವೂ ಅಂಶಾವತಾರಗಳು.

* ನಿವೃತ್ತಿಧರ್ಮವೆಂದರೆ ಅವರವರು ನಡೆಸತಕ್ಕ ಕರ್ಮಗಳನ್ನು ಫಲಾಭಿಲಾಷೆಯಿಲ್ಲದೆ ಕೇವಲಭಗವತ್ಪ್ರೀತ್ಯರ್ಥವಾಗಿ ನಡೆಸುವುದು. ಇದೇ ಮೋಕ್ಷಸಾಧಕವು. ಪ್ರವೃತ್ತಿಧರ್ಮವೆಂದರೆ ಇತರಫಲೋದ್ದೇಶದಿಂದ ನಡೆಸುವುದು.

ಯೂ, ಪ್ರಕೃತಿಮಹದಾದಿ ತತ್ತ್ವಗಳ ನಿಜವನ್ನು ನಿರ್ಣಯಿಸತಕ್ಕದಾಗಿಯೂ ಇರುವ ಸಾಂಖ್ಯಶಾಸ್ತ್ರವನ್ನು ಆಸುರಿಯೆಂಬ ಸಿದ್ಧಶ್ರೇಷ್ಠನಿಗೆ ಉಪದೇತಿಸಿದನು. ಇದೇ ಆ ಭಗವಂತನ ಐದನೆಯ ಅವತಾರವು. ಅದರಿಂದಾಚೆಗೆ ಅತ್ರಿ ಮಹಾಮುನಿಗೆ ಅನಸೂಯಾದೇವಿಯಲ್ಲಿ ದತ್ತಾತ್ರೇಯನೆಂಬ ಹೆಸರಿನಿಂದ ಹುಟ್ಟಿ, ಅಲರ್ಕನಿಗೂ, ಪ್ರಹ್ಲಾದನೇ ಮೊದಲಾದವರಿಗೂ ಅಧ್ಯಾತ್ಮವಿದ್ಯೆಯನ್ನು ಉಪದೇತಿಸಿದನು. ಇದು ಆರನೆಯ ಅವತಾರವು. ಆಮೇಲೆ ಏಳನೆಯ ಅವತಾರದಲ್ಲಿ, ರುಚಿಯೆಂಬ ಮಹರ್ಷಿಗೆ ಆಕೂತಿಯೆಂಬ ಭಾರ್ಯೆಯಲ್ಲಿ ಯಜ್ಞನೆಂಬ ಹೆಸರಿನಿಂದ ಹುಟ್ಟಿ, ಯಾಮಾದಿದೇವತೆಗಳೊಡಗೂಡಿ ಸ್ವಾಯಂಭುವಮನ್ವಂತರವೆಂಬ ಕಾಲವೆಲ್ಲಾ ಆಳುತ್ತಿದ್ದನು. ಆಮೇಲೆ ಅಘ್ನೀಧ್ರನ ಪುತ್ರನಾದ ನಾಭಿಯೆಂಬವನಿಗೆ ಮೇರುದೇವಿಯಲ್ಲಿ ಋಷಭನೆಂಬ ಹೆಸರಿನಿಂದ ಹುಟ್ಟಿ, ಯೋಗಿಗಳಿಗೆ ಅನುಷ್ಠೇಯವಾಗಿಯೂ, ಸಕಲಾಶ್ರಮದಲ್ಲಿರುವವರಿಂದಲೂ ಪೂಜಿತವಾಗಿಯೂ ಇರುವ ಧರ್ಮಮಾರ್ಗವನ್ನು ತೋರಿಸುತಿದ್ದನು. ಇದೇ ಆ ಮಹಾತ್ಮನ ಎಂಟನೆಯ ಅವತಾರವು. ಅದರಿಂದಾಚೆಗೆ ಆ ಭಗವಂತನು, ತಮ್ಮ ಹುಂಕಾರದಿಂದಲೇ ವೇನನೆಂಬವನನ್ನು ಕೊಂದ ಮಹರ್ಷಿಗಳಿಂದ, ಲೋಕರಕ್ಷಣಾರ್ಥವಾಗಿ ಪ್ರಾರ್ಥಿಸಲ್ಪಟ್ಟು, ಪೃಥುಚಕ್ರವರ್ತಿಯೆಂಬ ಹೆಸರಿನಿಂದ ಹುಟ್ಟಿ, ಗೋರೂಪಧಾರಿಣಿಯಾದ ಈ ಭೂದೇವಿಯಿಂದ ಹಾಲನ್ನು ಕರೆಯುವಂತೆ ಓಷಧಿಗಳೆಲ್ಲವನ್ನೂ ಕರೆದು, ಸರ್ವಲೋಕಪ್ರಿಯನೆನಿಸಿಕೊಂಡನು. ಇದೇ ಆತನ ಒಂಭತ್ತನೆಯ ಅವತಾರವು. ಅದರಿಂದಾಚೆಗೆ ಚಾಕ್ಷುಷಮನ್ವಂತರಕಾಲದಲ್ಲಿ ಪ್ರಳಯವುಂಟಾದಾಗ, ಮತ್ಸ್ಯರೂಪವನ್ನು ವಹಿಸಿ, ಮುಂದೆ ವೈವಸ್ವತ ಮನುವಾಗಿ ಹುಟ್ಟಬೇಕಾಗಿದ್ದ ಸತ್ಯವ್ರತನೆಂಬವನನ್ನು ಪೃಥ್ವೀರೂಪವಾದ ಹಡಗಿನಮೇಲೇರಿಸಿ ತಂದು ಆತನನ್ನು ರಕ್ಷಿಸಿದನು. ಇದೇ ಆತನ ಹತ್ತನೆಯ ಅವತಾರವು. ಆಮೇಲೆ ದೇವಾಸುರರಿಬ್ಬರೂ ಅಮೃತಕ್ಕಾಗಿ ಸಮುದ್ರವನ್ನು ಮಂದರಪರ್ವತದಿಂದ ಮಥಿಸುವಾಗ, ಆ ಪರ್ವತವು ಮುಳುಗಿ ಹೋಗುತ್ತಿರುವುದನ್ನು ನೋಡಿ, ಕೂರ್ಮರೂಪವನ್ನು ತಳೆದು, ಅದನ್ನು ತನ್ನ ಬೆನ್ನಮೇಲೆ ಧರಿಸಿದನು. ಇದೇ ಹನ್ನೊಂದನೆಯ ಅವತಾರವು. ಹನ್ನೆರಡನೆಯ ಅವತಾರದಲ್ಲಿ ಧನ್ವಂತರಿಯ ರೂಪದಿಂದ ಹುಟ್ಟಿದನು. ಹದಿಮೂರನೆಯ ಅವತಾರದಲ್ಲಿ

ಮೋಹಿನೀರೂಪದಿಂದ ರಾಕ್ಷಸರನ್ನು ಮೋಹಗೊಳಿಸಿ, ದೇವತೆಗಳಿಗೆ ಅಮೃತವನ್ನು ಕುಡಿಸಿದನು. ಹದಿನಾಲ್ಕನೆಯ ಅವತಾರದಲ್ಲಿ ನರಸಿಂಹರೂಪವನ್ನು ಧರಿಸಿ,ಚಾಪೆನೇಯುವವನು ಹೊಡಕೆಗಳನ್ನು ಸೀಳುವಂತೆ,ತನ್ನ ಉಗುರುಗಳಿಂದಲೇ ಹಿರಣ್ಯಕಶಿಪುವೆಂಬ ಬಲಿಷ್ಠನಾದ ರಾಕ್ಷಸನ ಎದೆಯನ್ನು ಸೀಳಿದನು.ಹದಿನೈದನೆಯ ಅವತಾರದಲ್ಲಿ ಅದಿತಿಕಶ್ಯಪರ ಗರ್ಭದಲ್ಲಿ ವಾಮನಮೂರ್ತಿಯಾಗಿ ಜನಿಸಿ,ಬಲಿಚಕ್ರವರ್ತಿಯ ಯಾಗಶಾಲೆಗೆಹೋಗಿ,ಮೂರಡಿಯನೆಲವನ್ನು ಯಾಚಿಸುವ ನೆವದಿಂದ, ಆರಾಕ್ಷಸನಿಂದಪಹೃತವಾದ ತ್ರೈಲೋಕ್ಯವನ್ನೂ ಹಿಂತಿರುಗಿ ದೇವೇಂದ್ರನಿಗೆ ಕೊಡಿಸಿದನು. ಆದರಿಂದಾಚೆಗ ಹದಿನಾರನೆಯ ಅವತಾರದಲ್ಲಿ ಪರಶುರಾಮರೂಪದಿಂದ ಬ್ರಹ್ಮದ್ವೇಷಿಗಳಾದ ಕ್ಷತ್ರಿಯರನ್ನು ಇಪ್ಪತ್ತೊಂದಾವರ್ತಿ ಸಂಹರಿಸಿ, ಭೂಮಿಯಲ್ಲಿ ಕ್ಷತ್ರಿಯಬೀಜವೇ ಇಲ್ಲದಂತೆ ಮಾಡಿದನು. ಆದರಿಂದಾಚೆಗೆ ಹದಿನೇಳನೆಯ ಅವತಾರದಲ್ಲಿ ಸತ್ಯವತೀದೇವಿಯಲ್ಲಿ ವೇದವ್ಯಾಸನಾಗಿ ಹುಟ್ಟಿ, ವೇದಾರ್ಥಗಳ ತತ್ವವನ್ನು ತಿಳಿಯದೆ ಮಂಢಮತಿಗಳಾದ ಜನರನ್ನುದ್ಧರಿಸುವುದಕ್ಕಾಗಿ, ವೇದವೆಂಬ ವೃಕ್ಷವನ್ನು ಋಕ್ಕು, ಯಜುಸ್ಸು, ಸಾಮ, ಅಥರ್ವಣಗಳೆಂಬ ಶಾಖೆಗಳಾಗಿ ವಿಭಾಗಿಸಿದನು. ಆದರಿಂದಾಚೆಗೆ ಹದಿನೆಂಟನೆಯ ಅವತಾರದಲ್ಲಿ ದೇವತೆಗಳ ಕಾರ್ಯಾರ್ಥವಾಗಿ ರಾಮನೆಂಬ ಹೆಸರಿನಿಂದ ದಶರಥಪುತ್ರನಾಗಿ ಹುಟ್ಟಿ, ಸಮುದ್ರಸೇತುಬಂಧನವೇ ಮೊದಲಾದ ಅಸಾಧ್ಯಕಾರ್ಯಗಳನ್ನು ನಡೆಸಿದನು. ಆದರಿಂದಾಚೆಗೆ ಯದುವಂಶದಲ್ಲಿ ಬಲರಾಮಕೃಷ್ಣರೆಂಬ ಹೆಸರಿನಿಂದ ಎರಡವತಾರಗಳನ್ನೆತ್ತಿ ಭೂಭಾರವನ್ನು ಪರಿಹರಿಸಿದನು. ಹೀಗೆ ಆ ಭಗವಂತನು ಇಪ್ಪತ್ತವತಾರಗಳನ್ನೆತ್ತಿದನು. ಇನ್ನು ಮುಂದೆಯೂ ಆತನು ಈ ಕಲಿಯುಗದಲ್ಲಿ ಕ್ರಮಕ್ರಮವಾಗಿ ಹೆಚ್ಚಿ ಬರುತ್ತಿರುವ ದುರ್ಮಾರ್ಗರನ್ನು ಮೋಹಗೊಳಿಸುವುದಕ್ಕಾಗಿ,ಕೀಕಟದೇಶದಲ್ಲಿ (ಮಧ್ಯಗಯಾ ಪ್ರದೇಶದಲ್ಲಿ) ಬುದ್ಧನೆಂಬ ಹೆಸರಿನಿಂದ ಜಿನಪುತ್ರನಾಗಿ ಹುಟ್ಟುವನು. ಇದೇ ಆತನ ಇಪ್ಪತ್ತೊಂದನೆಯ ಅವತಾರವು. ಆದರಿಂದಾಚೆಗೆ ಜಗತ್ಪತಿಯಾದ ಆ ಭಗವಂತನು,ಕಲಿಕಾಲವುಮುಗಿದು ಕೃತಯುಗವು ಆರಂಭಿಸುವುದಕ್ಕೆಮೊದಲು ಈ ಎರಡುಯುಗಗಳ ಸಂಧಿಕಾಲಗಳಲ್ಲಿ, ಕ್ಷತ್ರಿಯರೆಲ್ಲರೂ ಜೋರ

ಪ್ರಾಯರಾಗಿ ಸಮಸ್ತಲೋಕವೂ ಅಧರ್ಮಪ್ರಚುರವಾಗಿರುವುದನ್ನು ನೋಡಿ ಆ ದುಷ್ಟರನ್ನು ಸಂಹರಿಸುವುದಕ್ಕಾಗಿ ವಿಷ್ಣುಯಶಸ್ಸೆಂಬ ಬ್ರಾಹ್ಮಣನಿಗೆ ಕಲ್ಕಿಸ್ವರೂಪದಿಂದ ಹುಟ್ಟುವನು. ಎಲೈ ಶೌನಕಾದಿ ಮಹರ್ಷಿಗಳೇ! ಅಶೋಷ್ಯವಾದ ಸರಸ್ಸಿನಿಂದ ಸಾವಿರಾರು ಕೋಡಿಗಳು ಹರಿಯುವಂತೆ, ಶುದ್ಧಸತ್ವಮೂರ್ತಿಯಾದ ಆ ಭಗವಂತನ ಅನಿರುದ್ಧಸ್ವರೂಪದಿಂದ ಹುಟ್ಟಿದ ಅವತಾರಗಳು ಇನ್ನೂ ಅಸಂಖ್ಯಾತಗಳಾಗಿರುವುವು. ಇವುಗಳಲ್ಲಿ ಎಲ್ಲಿಯೋ ಕೆಲವನ್ನು ಮಾತ್ರಹೇಳಿರುವೆನು ಮಂತ್ರಜ್ಞರಾದ ವಸಿಷ್ಠಾದಿಮಹರ್ಷಿಗಳೂ ಆತ್ಮತತ್ವವನ್ನು ತಿಳಿದ ಶುಕಾದಿಮುನಿಶ್ರೇಷ್ಠರೂ, ಇಂದ್ರಾದಿದೇವತೆಗಳೂ, ಪ್ರಿಯವ್ರತನೇ ಮೊದಲಾದ ಮುನಿಪುತ್ರರೂ, ಮಹಾಮಹಿಮೆಯುಳ್ಳ ದಕ್ಷಪ್ರಜಾಪತಿ ಮೊದಲಾದವರೂ, ಇವರೆಲ್ಲರೂ ಆ ಭಗವಂತನ ಅಂಶಮಾತ್ರದಿಂದಲೇ ಹುಟ್ಟಿದವರು. ಆ ಅನಿರುದ್ಧದೇವನಿಗೆ ಅಂಶಾಂಶಸಂಭೂತರಾದ ಈ ಮಹಾತ್ಮರೂ ಆ ಭಗವಂತನ ಪೂರ್ಣಾವತಾರರೂಪನಾದ ಶ್ರೀಕೃಷ್ಣನೂ ರಾಕ್ಷಸರಿಂದ ಭಾಧಿತವಾದ ಈ ಲೋಕವನ್ನು ರಕ್ಷಿಸುವುದಕ್ಕಾಗಿ, ಒಂದೊಂದುಯುಗದಲ್ಲಿಯೂ ಅವತರಿಸಿ, ಇದಕ್ಕೆ ಕ್ಷೇಮವನ್ನುಂಟುಮಾಡುವರು. ಎಲೈ ಮಹರ್ಷಿಗಳೇ! ಯಾವನು ಈ ಭಗವದವತಾರರಹಸ್ಯವನ್ನು ಭಕ್ತಿಯಿಂದಲೂ ಶ್ರದ್ಧೆಯಿಂದಲೂ, ಪ್ರಾತಸ್ಸಾಯಂಕಾಲಗಳಲ್ಲಿ ಕೀರ್ತಿಸುವನೋ, ಅಂತವನು ಸಮಸ್ತಪಾಪಗಳಿಂದಲೂ ಬಿಡಲ್ಪಟ್ಟು ಮುಕ್ತಿಹೊಂದುವನು. ಆ ಅವತಾರಗಳುಮಾತ್ರವೇ ಭಗವದ್ರೂಪಗಳೆಂದು ತಿಳಿಯಬೇಡಿರಿ ! *

---

* ಇಲ್ಲಿಂದ ಮುಂದಿನ ಮೂರು ಶ್ಲೋಕಗಳಿಗೆ ದ್ವೈತಾದ್ವೈತ ಪರಗಳಾದ ಅರ್ಥಭೇದಗಳುಂಟು. ಅವುಗಳಲ್ಲಿ ಅದ್ವೈತಪರವಾದ ಅರ್ಥವೇನೆಂದರೆ:—ಚೇತನರ ಈ ಸ್ಥೂಲರೂಪವು ಎಂದರೆ ಸ್ಥೂಲಶರೀರವು, ಭಗವಂತನ ಅವಿದ್ಯಾಗುಣಗಳಾದ ಮಹದಾದಿಗಳಿಂದ ತನ್ನಲ್ಲಿಯೇ ಆರೋಪಿತವಾಗಿರುವುದು. ಮೇಘದಲ್ಲಿ ಆಕಾಶವೆಂದೂ, ಧೂಳಿನಲ್ಲಿ ವಾಯುವೆಂದೂ ಭ್ರಾಂತರಾಗುವಂತೆ ವಿವೇಕಶೂನ್ಯರು, ಆತ್ಮನಲ್ಲಿ ಶರೀರತ್ವವನ್ನಾರೋಪಿಸುವರು. ಆತ್ಮನಿಗೆ ಸ್ಥೂಲಶರೀರಕ್ಕಿಂತಲೂ ಬೇರೆಯಾದ ಸೂಕ್ಷ್ಮ (ಲಿಂಗ) ಶರೀರವೊಂದುಂಟು. ಅದಕ್ಕೆ ಆಕೃತಿವಿಶೇಷಗಳೊಂದೂ ಇಲ್ಲದುದರಿಂದ,ಅದು ಕಣ್ಣಿಗೆ ಕಾಣತಕ್ಕುದಲ್ಲ. ಆ ಲಿಂಗಶರೀರವೇ ಪುನರ್ಜನ್ಮಾದಿಗಳಿಗೆ ಅವಶ್ಯವಾದುದು. ಈ ಶರೀ

ಜ್ಞಾನಾತ್ಮಕನಾಗಿಯೂ, ಅವ್ಯಕ್ತಸ್ವರೂಪನಾಗಿಯೂ ಇರುವ ಆ ಭಗವಂತನ ಮಾಯಾಗುಣಪರಿಣಾಮಗಳಾದ ಮಹದಾದಿಗಳಿಂದ ರಚಿತವಾಗಿ ಕಾಣುವ ಈ ಜಗತ್ತೆಲ್ಲವೂ ಆತನ ರೂಪವಲ್ಲದೆ ಬೇರೆಯಲ್ಲ. ಈ ಸಮಸ್ತಪ್ರಪಂಚಕ್ಕೂ ಆತನೇ ಆತ್ಮರೂಪದಿಂದ ಆಧಾರನಾಗಿರುವನು. ಆ ಆತ್ಮನಿಗೆಇದೇ ಶರೀರದಂತಿರುವುದು! ಹೀಗೆ ಈ ಪ್ರಪಂಚದಲ್ಲಿರುವ ದೇವಮನುಷ್ಯಾದಿಶರೀರಗಳೆಲ್ಲವೂ ಭಗವಂತನ ರೂಪವೆಂಬುದನ್ನು ತಿಳಿಯದ ಕೆಲವು ಮೂಢಾತ್ಮರು ಹೊರಗೆ ಕಾಣುವ ತಮ್ಮ ದೇಹವನ್ನು ನೋಡಿಕೊಂಡು ''ನಾನು ದೇವನು'' ''ನಾನು ಮನುಷ್ಯನು''ಎಂದು ಅಹಂಕಾರ ಮಮಕಾರಗಳಿಂದ ಭ್ರಮಿಸುವರು. ಸಿಜಸ್ಥಿತಿಯನ್ನು ತಿಳಿಯದವರು ಮೇಘಗಳನ್ನು ನೋಡಿ ಅದನ್ನೇ ಆಕಾಶವೆಂದೂ,ಮೇಲಕ್ಕೇಳುವ ನೆಲದ ಧೂಳನ್ನು ನೋಡಿ ಅದನ್ನೇ ಗಾಳಿಯೆಂದೂ ಭ್ರಮಿಸುವಂತೆ, ಆತ್ಮತತ್ವವನ್ನು ತಿಳಿಯದವರು,ಜೀವಾತ್ಮನಲ್ಲಿ ದೃಶ್ಯವಾದ ಶರೀರಗುಣವನ್ನಾರೋಪಿಸಿ ಭ್ರಮಿಸರು. ''ಹಾಗಿದ್ದರೆ ಜೀವಸ್ವರೂಪವೆಂತದು?" ಎಂದು ಕೇಳುವಿರಾ? ಆ ಜೀವವೆಂಬುದು ಅಚಿದಾತ್ಮಕವಾದ ಈದೃಶ್ಯ

ರವೂಕೂಡ ಅವಿದ್ಯೆಯಿಂದಲೇ ಆರೋಪಿತವಾಗಿರುವುದು.ಯಾವಾಗ ಮನುಷ್ಯನು ಈ ಸ್ಥೂಲಸೂಕ್ಷ್ಮಶರೀರಗಳೆರಡೂ ಅವಿದ್ಯೆಯಿಂದ ಆತ್ಮನಲ್ಲಿ ಕಲ್ಪಿತವೆಂದು ತಿಳಿದುಕೊಳ್ಳುವನೋ, ಆಗಲೇ ಜ್ಞಾನರೂಪವಾದ ಪರಮಾತ್ಮದರ್ಶನವುಂಟಾಗುವುದು. ಕಟ್ಟಿಗೆಯಿಲ್ಲದಿದ್ದಾಗ ಅಗ್ನಿಯು ತನಗೆತಾನೇ ನಂದಿಹೋಗುವಂತೆ ಅವಿದ್ಯೆಯ ಸಂಬಂಧವು ಬಿಟ್ಟು ಹೋದೊಡನೆ ಜೀವನು ಬ್ರಹ್ಮದಲ್ಲಿ ಲಯಿಸುವನು. (ಶ್ರೀಧರೀಯವ್ರ.)

ದೈವತಾರ್ಥವೇನೆಂದರೆ:—ಈ ಕಾಣುವ ಜಡಪ್ರಪಂಚವೆಲ್ಲವೂ ಜ್ಞಾನಸ್ವರೂಪನಾದ ಆ ಪರಮಾತ್ಮನಿಗೆ ಪ್ರತಿಮಾಸ್ಥಾನವಾದುದು. ಇದನ್ನು ಭಗವಂತನ ಸಾಕ್ಷಾದ್ರೂಪವೆಂದು ಕಲ್ಪಿಸುವುದು, ಮೇಘದಲ್ಲಿ ಆಕಾಶಬುದ್ಧಿಯಂತೆ ಕೇವಲಭ್ರಮವು. ವಿವೇಕವಿಲ್ಲದವರು ಹೀಗೆ ಆರೋಪಿಸುವರು. ಭಗವಂತನ ಪರಸ್ವರೂಪಕ್ಕಿಂತಲೂ, ಪ್ರತಿಮಾಸ್ವರೂಪವಾದ ಈ ಜಡಪ್ರಪಂಚಕ್ಕಿಂತಲೂ ಬೇರೆಯಾದ ಮತ್ತೊಂದು ವಸ್ತುವುಂಟು. ಅದೇ ಜೀವನು ಈ ಜೀವನು ತನಗೆ ಸ್ವಾಮಿಯಾದ ಆ ಪರಮಾತ್ಮನ ಸ್ವರೂಪವನ್ನು ಸಾಕ್ಷಾತ್ಕರಿಸಲಾರದಿರುವವರೆಗೂ ಪುನಃಪುನಃ ಜನನಮರಣಗಳಿಗೆ ಈಡಾಗುತ್ತಿರುವನು (ವಿಜಯಧ್ವಜವಾಖ್ಯಾನವು.)

ಪ್ರಪಂಚಕ್ಕಿಂತಲೂ ವಿಲಕ್ಷಣವೆನಿಸುವುದು. ಅದನ್ನು ಬಾಹ್ಯೇಂದ್ರಿಯಗಳಿಂದ ನೋಡುವುದೂ ಸಾಧ್ಯವಲ್ಲ.ಅದು ಪ್ರಕೃತಿಯಂತೆ ಕಾರ್ಯದಶೆಯಲ್ಲಿಗುಣವಿಭಾಗಗಳಿಂದ ಸ್ಥೂಲತ್ವವನ್ನು ಹೊಂದಿ ಕಣ್ಣಿಗೆಗೋಚರಿಸತಕ್ಕುದಲ್ಲ,ಅಥವಾ ಕಾರಣಾವಸ್ಥೆಯಲ್ಲೆರುವ ಪ್ರಕೃತಿಸ್ವರೂಪದಂತೆ ಶಾಸ್ತ್ರಗಳಿಂದ ಶ್ರುತವಾಗತಕ್ಕುದೂ ಅಲ್ಲ. ಹೀಗೆ ಕಂಡುಕೇಳಿ ತಿಳಿಯುವುದಕ್ಕೆ ಸಾಧ್ಯವಲ್ಲದುದರಿಂದ ಅದೊಂದು ವಿಲಕ್ಷಣವಾದ ತತ್ವವೆನಿಸುವುದು.ಇದೇ ಜೀವವು. ಆ ಜೀವನಿಗೆ ಪ್ರಕೃತಿಸಂಬಂಧದಿಂದ ಜನನಮರಣಗಳು ನಡೆಯುತ್ತಲೇ ಇರುವುವು.''ಹಾಗಿದ್ದರೆ ಆ ಜೀವನಿಗೆ ಪುನರ್ಜನ್ಮವನ್ನುಂಟುಮಾಡತಕ್ಕ ಮಾಯಾಸಂಬಂಧವು ತೀರುವುದೆಂದಿಗೆ?ಈ ವಿಧವಾದ ಪುನರ್ಜನ್ಮಾದಿಗಳಿಂತ ಮುಕ್ತನಾದಜೀವನ ಸ್ವರೂಪವೆಂತದು?"ಎಂದು ನೀವು ಕೇಳಬಹುದು ಅಚಿತ್ತಿಗೆ ಸಂಬಧಪಟ್ಟ ಈ ಉತ್ಪತ್ತಿವಿನಾಶಗಳೆಲ್ಲವೂ ಆತ್ಮನಲ್ಲಿ ಅಜ್ಞಾನದಿಂದಲೇ ಆರೋಪಿಸಲ್ಪಡುವುವು. ಆ ಜೀವನಿಗೆ ತನ್ನನ್ನು ಶರೀರವಾಗಿ ಧರಿಸಿರುವ ಪರಮಾತ್ಮನನ್ನು ಕುರಿತು ನಿಜವಾದ ಜ್ಞಾನವು ಯಾವಾಗ ಹುಟ್ಟುವುದೋ, ಆಲ್ಲಿಂದಾಚೆಗೆ ಉತ್ಪತ್ತಿವಿನಾಶಗಳೂ ನಿವರ್ತಿಸುವುವು. ಆಲ್ಲಿಂದಾಚೆಗೆ ಪುನರ್ಜನ್ಮವೂನಿವೃತವಾಗುವುದು ಇಂತಹಜ್ಞಾನದಿಂದ ಉತ್ಪತ್ತಿವಿನಾಶಗಳನ್ನು ನೀಗಿ ಪ್ರಕೃತಿಸಂಬಂಧವನ್ನೂ ತ್ಯಜಿಸಿದ ಕೇವಲಶುದ್ಧಾತ್ಮಸ್ವರೂಪಜ್ಞಾನವೇ ಮುಕ್ತಜೀವಸ್ವರೂಪವೆನಿಸುವುದು. ಮತ್ತು ಮಹದಾದಿಕಾರ್ಯಗಳಿಂದ ವಿಸ್ತರಿಸಿದ ಮಾಯೆಯೂ, ಆ ಮಾಯಾಮೂಲಕವಾಗಿ ದೇಹಾತ್ಮಾಭಿಮಾನರೂಪವಾದ ಬುದ್ಧಿಯೂ ನೀಗಿದಕ್ಷಣವೇ,"ಜೀವನು ಸತ್ಯಸಂಕಲ್ಪಾದಿಗುಣಗಳುಳ್ಳವನಾಗಿ, ಬ್ರಹ್ಮಾನಂದಸುಖವನ್ನನುಭವಿಸುತ್ತ, ಪರಮಪದವಾಸಿಗಳಿಂದ ಗೌರವಿಸಲ್ಪಡುವನು.ಎಲೈಮಹರ್ಷಿಗಳೇ!ಜೀವಸ್ವರೂಪವನ್ನು ಕೇಳಿದುದಾಯಿತಷ್ಟೆ?ಇನ್ನು ನಿಮಗೆ ಆ ಭಗವದವತಾರಗಳಿಗೂ, ಈ ಜೀವಾತ್ಮನು ಅವಲಂಬಿಸುತ್ತಿರುವ ಜನ್ಮಗಳಿಗೂ ಭೇದವನ್ನು ತಿಳಿಸುವೆನು ಕೇಳಿರಿ? ಜೀವನು ಕರ್ಮಾಧೀನನಾಗಿ ಜನ್ಮಗಳನ್ನೆತ್ತುವನು. ಪುಣ್ಯಪಾಪಕಾರ್ಯಗಳನ್ನು ನಡೆಸುತ್ತಿರುವನು. ಭಗವಂತನಾದರೋ ಹಾಗಿಲ್ಲವು. ಅತನು ತನ್ನ ಸಂಕಲ್ಪಮಾತ್ರದಿಂದಲೇ ಲೀಲಾರ್ಥವಾಗಿ ಜನ್ಮಗಳನ್ನೆತ್ತುವನು. ಅತನಿಗೆ ಜೀವನಂತೆ

ಪುಣ್ಯಪಾಪಾದಿಕರ್ಮಗಳೊಂದೂ ಇಲ್ಲದುದರಿಂದ ಕರ್ಮಾಧೀನನಲ್ಲವು. ಆತನು ಸರ್ವಹೃದಯಾಂತರ್ಯಾಮಿಯಾಗಿರುವನು. * ವಾಸ್ತವಕ್ಕೆ ಜನ್ಮಕರ್ಮಗಳೊಂದೂ ಇಲ್ಲದ ಆ ಭಗವಂತನಲ್ಲಿ ಜನ್ಮಗಳೂ, ಕರ್ಮಗಳೂ, ಈ ವಿಧವಾದುವುಗಳೆಂದು, ಜ್ಞಾನಿಗಳಾದವರು ಅವುಗಳನ್ನು ವೇದಗಳ ರಹಸ್ಯಾರ್ಥಗಳಿಂದ ತಿಳಿದು ಆ ರಹಸ್ಯಗಳನ್ನೇ ಪ್ರಕಾಶಪಡಿಸುವರು ಭಗವಂತನು ಆ ಮೋಘವಾದ ಲೀಲೆಯಿಳ್ಳವನು. ಈ ಚಿದಚಿದಾತ್ಮಕವಾದ ಪ್ರಪಂಚವನ್ನು ತಾನೇ ಸೃಷ್ಟಿಸುವನು. ತಾನೇ ಪಾಲಿಸುವನು. ತಾನೇ ನಾಶಹೊಂದಿಸುವನು. ಜೀವನು ಹಾಗಲ್ಲ. ಅಲ್ಪವಾದ ಕರ್ಮಗಳನ್ನು ಮಾಡುತ್ತ, ನಡುನಡುವೆ ಅನೇಕವಿಘ್ನಗಳಿಂದ ಪ್ರತಿಹತನಾಗಿ, ಹಿಡಿದ ಕರ್ಮಗಳನ್ನೂ ಸರಿಯಾಗಿ ಕೊನೆಮುಟ್ಟಿಸಲಾರನು. ಮತ್ತು ಆ ಭಗವಂತನು ಚಿದೆಚಿದಾತ್ಮಕವಾದ ಸಮಸ್ತ ಭೂತಗಳಲ್ಲೆಯೂ ಅಡಗಿದ್ದರೂ,ಯಾರಿಗೂ ತಿಳಿಯಲಾರನು. ದೇಹದಲ್ಲಿರುವ ಜೀವಾತ್ಮನನ್ನಾದರೋ ಅನುಮಾನಲಕ್ಷಣಗಳಿಂದ ತಿಳಿಯಬಹುದು. ಭಗವಂತನು ಸರ್ವಸ್ವತಂತ್ರನೇಹೊರತು ಜೀವನಂತೆ ಕಾಲಕ್ರಮಾದಿಗಳಿಗೆ ಪರತಂತ್ರನಲ್ಲ. ಮತ್ತು ಆ ಭಗವಂತನು ಜ್ಞಾನ, ಶಕ್ತಿ, ಬಲ, ಐಶ್ವರ್ಯ, ವೀರ್ಯ ತೇಜಸ್ಸುಗಳೆಂಬ ಷಡ್ಗುಣಗಳಿಗೆ ಅಧಿಪತಿಯಾಗಿರುವನು. ಜೀವನಲ್ಲಿ ಈ ಗುಣಗಳೆಲ್ಲವೂ ವಿರುದ್ಧವಾಗಿರುವುವು. ಮತ್ತು ಭಗವಂತನು ಜೀವನಂತೆ ಸುಖದುಃಖಮೋಹಾದಿಗಳಿಗೆ ಈಡಾಗದೆ, ಷಡಿಂದ್ರಿಯವೇದ್ಯಗಳಾದ ಶಬ್ದಾದಿಗಳ ಮೂಲಕವಾಗಿ ಲೀಲಾರಸವನ್ನನುಭವಿಸುವನು. ಮತ್ತು ಆ ಪರಮಾತ್ಮನು ತನ್ನ ಸಂಕಲ್ಪದಿಂದಲೇ ದೇವಾದಿರೂಪಗಳನ್ನೂ, ವೇದಮಯಗಳಾದ ತನ್ನ ವಾಕ್ಯಗಳಿಂದ ದೇವಮನುಷ್ಯಾದಿನಾನುಗಳನ್ನೂ ನಟಚರ್ಯೆಯಂತೆ ನಡೆಸುತ್ತಿರುವನು. ಹೀಗೆ ನಡೆಸುತ್ತಿರುವ ಆ ಈಶ್ವರನ ನೀತಿಗಳನ್ನು ಕುತ್ಸಿತಬುದ್ಧಿಯುಳ್ಳವರೂ, ಮಂದಬುದ್ಧಿಯುಳ್ಳವರೂ, ಎಷ್ಟೇ ಸೈಪುಣ್ಯದಿಂದಲಾದರೂ ತಿಳಿದುಕೊಳ್ಳಲಾರರು. ಶಬ್ದಾದಿವಿಷಯಗಳಲ್ಲಿ ವಿರಕ್ತರಾಗಿಯೂ, ಜೀವಾತ್ಮ

* ಇಲ್ಲಿ "ಅಜಾಯಮಾನೋ ಬಹುಧಾ ವಿಜಾಯತೇ" ಎಂಬುದು ವೇದವಾಕ್ಯವು. ಇದರಲ್ಲಿರುವ ರಹಸ್ಯಾರ್ಥವೇನೆಂದರೆ:—ಭಗವಂತನಿಗೆ ಕರ್ಮಾಧೀನವಾದ ಜನ್ಮಗಳಿಲ್ಲದಿದ್ದರೂ, ತನ್ನ ಸಂಕಲ್ಪಮೂಲಕವಾಗಿ ತಾನೇ ಅನತಿರಿಸತಕ್ಕವನೆಂದು ಭಾವವು.

ಪರಮಾತ್ಮತತ್ವಗಳನ್ನು ತಿಳಿಯಬಲ್ಲವರಾಗಿಯೂ ಇರತಕ್ಕ ಬುದ್ಧಿಶಾಲಿಗಳು ಮಾತ್ರವೇ ಆತನ ನಿಜಸ್ಥಿತಿಯನ್ನು ತಿಳಿಯಬಲ್ಲರು. ಮತ್ತು ನಾಟಕದಲ್ಲಿ ನಟನು ವಿಚಿತ್ರಗಳಾದ ವೇಷಗಳನ್ನು ಧರಿಸಿ, ಆಯಾಪಾತ್ರಗಳಿಗೆ ತಕ್ಕ ಚೇಷ್ಟೆಗಳನ್ನು ನಟಿಸುವಂತೆ, ಭಗವಂತನೂಕೂಡ ಮತ್ಸ್ಯಕೂರ್ಮಾದ್ಯವತಾರಗಳನ್ನೆತ್ತಿದಾಗ, ತನ್ನ ನಿಜಸ್ವಭಾವವನ್ನು ಬಿಡದೆ, ತಾನು ಲೀಲಾರ್ಥವಾಗಿ ಅವಲಂಬಿಸಿದ ರೂಪಕ್ಕೆ ತಕ್ಕಕಾರ್ಯಗಳನ್ನೇ ನಡೆಸುವನು. ಆದುದರಿಂದ ಯಾವನು ಮಾಯಾಗುಣಗಳಾದ ಕಾಮಾದಿಗಳನ್ನು ಬಿಟ್ಟು, ಭಗವಂತನ ಪಾದಪದ್ಮಗಳನ್ನು ಸೇವಿಸುವನೋ, ಯಾವನು ಆ ಪರಮಪುರಷನಾದ ಚಕ್ರಪಾಣಿಯನ್ನು ಭಕ್ತಿಯಿಂದ ಭಜಿಸುವನೋ ಅವನೇ ಪರಮಾತ್ಮನ ಲೀಲೆಗಳನ್ನು ವ್ಯಕ್ತವಾಗಿ ತಿಳಿಯಬಲ್ಲನು. ಎಲೈಮಹರ್ಷಿಗಳೆ ! ಪೂಜ್ಯರಾದ ನೀವೆಲ್ಲರೂ ಸರ್ವಲೋಕನಾಥನಾದ ಆ ಶ್ರೀಹರಿಯಲ್ಲಿ, ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದಲೂ ಭಕ್ತಿಯೋಗವನ್ನವಲಂಬಿಸಿ, ಆತನನ್ನು ಸೇವಿಸುತ್ತಿರುವುದರಿಂದ ನೀವೇ ಪರಮಧನ್ಯರು! ಭಕ್ತಿಯೋಗವೆಂಬುದು ಸಾಮಾನ್ಯವಲ್ಲ. ಆ ಭಕ್ತಿಯು ಹುಟ್ಟಿದೊಡನೆ, ಗರ್ಭ, ಜನ್ಮ, ಜರಾ, ಮರಣಾದಿ ದುಃಖಗಳುಳ್ಳ ಭಯಂಕರವಾದ ಸಂಸಾರಪಾಶವು ಬಿಟ್ಟುಹೋಗುವುದು. ಭಾಗವತವೆಂಬ ಈ ಪುರಾಣರತ್ನವು ಪುಣ್ಯಶ್ಲೋಕನಾದ ಆ ಭಗವಂತನ ಚರಿತ್ರೆಗಳನ್ನು ಪ್ರತಿಪಾದಿಸುವುದರಿಂದ. ವೇದಸಮಾನವೆನಿಸುವುದು. ಸಕಲವೇದಗಳ ಸಾರವನ್ನೂ ತಿಳಿದ ವ್ಯಾಸನೇ ಇದನ್ನು ರಚಿಸಿರುವನು. ಇದನ್ನೋದುವುದರಿಂದ ಜನರು ಉತ್ತಮಜ್ಞಾನವನ್ನು ಹೊಂದಿ ಕೃತಾರ್ಥರಾಗುವರು. ಅತ್ಯಂತಮಂಗಳಕರವಾದ ಈ ಸದ್ಗ್ರಂಥವನ್ನು ಪಠಿಸಿ ಜೀತನರೆಲ್ಲರೂ ಉಜ್ಜೀವಿಸಬೇಕೆಂಬುದಕ್ಕಾಗಿಯೇ, ವ್ಯಾಸಮುನಿಯು ಇದನ್ನು ರಚಿಸಿ, ಆತ್ಮಜ್ಞಾನಿಸಿಗಳಲ್ಲಿ ಮೇಲೆನಿಸಿಕೊಂಡ ತನ್ನ ಪುತ್ರನಾದ ಶುಕನಿಂದ ಅಧ್ಯಯನಮಾಡಿಸಿದನು. ವೇದಗಳಲ್ಲಿಯೂ, ಪುರಾಣಗಳಲ್ಲಿಯೂ ಇರುವ ಸಮಸ್ತಸಾರಗಳನ್ನೂ ಗ್ರಹಿಸಿ ಈ ಪುರಾಣವು ರಚಿಸಲ್ಪಟ್ಟಿರುವುದು. ಶುಕನು ಇದನ್ನು ತನ್ನ ತಂದೆಯಾದ ವ್ಯಾಸಮಹರ್ಷಿಯಿಂದ ಅಧ್ಯಯನಮಾಡಿದಮೇಲೆ, ಗಂಗಾತೀರದಲ್ಲಿ ಅನೇಕಮಹರ್ಷಿಗಳಿಂದ ಪರಿವೃತನಾಗಿ ಪ್ರಾಯೋಪವೇಶದಲ್ಲಿದ್ದ ಪರೀಕ್ಷಿನ್ರಾಜನನ್ನು ನೋಡಿ, ಅವನಲ್ಲಿ ಕರು

ಣೆಯಿಂದ ಇದನ್ನು ಆ ರಾಜನಿಗೆ ಉಪದೇಶಿಸುತಿದ್ದನು. ಎಲೈ ಬ್ರಾಹ್ಮಣೋತ್ತಮರೆ! ಹೀಗೆ ಶುಕಮುನಿಯು ಪರೀಕ್ಷಿದ್ರಾಜನಿಗೆ ಇದನ್ನು ಪದೇಶಿಸುತ್ತಿರುವ ಸಮಯದಲ್ಲಿ, ನಾನೂ ಆಕಸ್ಮಾತ್ತಾಗಿ ಅಲ್ಲಿಗೆ ಹೋಗಿ, ಆ ಮಹರ್ಷಿಯ ಅನುಗ್ರಹದಿಂದ ಆ ಸಚ್ಚರಿತ್ರವನ್ನು ಕೇಳಿದೆನು. ನಾನು ಅಲ್ಲಿ ಕೇಳಿದ ರೀತಿಯಲ್ಲಿ ನನಗೆ ತಿಳಿದಮಟ್ಟಿಗೆ ನಿಮಗೂ ಅದನ್ನು ತಿಳಿಸುವೆನು. ಭಗವಂತನಾದ ಕೃಷ್ಣನು ಧರ್ಮಜ್ಞಾನಾದಿಗಳೊಡನೆಸೇರಿ ನಿಜಲೋಕವನ್ನು ಕುರಿತು ಹೊರಟೊಡನೆಯೇ, ಇಲ್ಲಿ ಕಲಿಯು ಪ್ರಬಲವಾಗುತ್ತ ಬಂದುದರಿಂದ, ಕತ್ತಲೆಯಲ್ಲಿ ಕಣ್ಣು ಕಾಣದಂತೆ ಮನುಷ್ಯರಿಗೆ ಪ್ರಜ್ಞೆಯು ಕೆಟ್ಟುಹೋಗುತ್ತ ಬಂದಿತು! ಸೂರ್ಯೋದಯವಾದಮೇಲೆ ತಿರುಗಿ ದೃಷ್ಟಿಶಕ್ತಿಯುಂಟಾಗುವಂತೆ ಆ ಜನರಿಗೆ ತಿರುಗಿ ಪ್ರಜ್ಞೆಯನ್ನು ಹುಟ್ಟಿಸುವುದಕ್ಕಾಗಿಯೇ ಈ ಪುರಾಣವು ಹುಟ್ಟಿರುವುದೆಂದು ತಿಳಿಯಿರಿ!ಇದು ಮೂರನೆಯ ಅಧ್ಯಾಯವು.

ವ್ಯಾಸಮಹರ್ಷಿಯು ಚಿಂತಾಕುಲನಾಗಿ ದುಃಖಿಸು ತಿದ್ದಾಗ, ನಾರದನು ಆತನ ಬಳಿಗೆ ಬಂದುದು.

ಸೂತನು ಹೀಗೆ ತತ್ತ್ವಗಳನ್ನು ತಿಳಿಸುತ್ತಿರಲು, ಯಜ್ಞದೀಕ್ಷಿತರಾಗಿ ಅಲ್ಲಿ ಸೇರಿದ್ದ ಋಷಿಗಳಲ್ಲಿ ವೃದ್ಧನಾಗಿಯೂ,ಮಹಾಜ್ಞಾನಿಯಾಗಿಯೂ ಋಗ್ವೇದಿಯಾಗಿಯೂ ಇದ್ದ ಶೌನಕನು, ಪರಮಸಂತೋಷದಿಂದ ಆತನನ್ನು ಬಹಳವಾಗಿ ಸ್ತುತಿಸುತ್ತ ‘‘ಓ ಮಹಾತ್ಮ!ಸೂತಾ!ನೀನು ಸಮಸ್ತತತ್ವಗಳನ್ನೂ ತಿಳಿದ ಮಹಾಭಾಗ್ಯವಂತನು. ಇಂತಹ ಸಚ್ಚರಿತ್ರೆಗಳನ್ನು ಇತರರಿಗೆ ಬೋಧಿಸುವುದರಲ್ಲಿ ನಿನ್ನನ್ನು ಮೀರಿದವನೊಬ್ಬನೂ ಇಲ್ಲವು!ಆದುದರಿಂದ ಶುಕಪ್ರೋಕ್ತವಾದ ಆ ಭಾಗವತವೆಂಬ ಪುಣ್ಯಚರಿತ್ರೆಯನ್ನೇ ನಮಗೂ ತಿಳಿಸಬೇಕು. ಈ ಪುರಾಣವು ಯಾವ ಯುಗದಲ್ಲಿ,ಯಾವ ಸ್ಥಳದಲ್ಲಿ,ಯಾವ ಕಾರಣಕ್ಕಾಗಿ ಪ್ರವರ್ತಿಸಿತು ? ಕೃಷ್ಣದ್ವೈಪಾಯನಮಹರ್ಷಿಯು ಯಾರ ಪ್ರೇರಣೆಯಿಂದ ಈ ಭಾಗವತಸಂಹಿತೆಯನ್ನು ರಚಿಸಿದನು? ಆತನ ಪುತ್ರನಾದ ಶುಕಮುನಿಯಾದರೋ ಸಾಮಾನ್ಯನಲ್ಲ! ಯೋಗಿಶ್ರೇಷ್ಠನು! ಸಮದೃಷ್ಟಿಯುಳ್ಳವನು! ಯಾವ

ವಿಧವಾದ ವಿಕಲ್ಪವೂ ಇಲ್ಲದ ಪರಮಾರ್ಥಜ್ಞಾನವುಳ್ಳವನು. ಪರಮಾತ್ಮನಲ್ಲಿ ನಿಶ್ಚಲವಾದ ಭಕ್ತಿಯುಳ್ಳವನು. ಆತ್ಮಜ್ಞಾನದಲ್ಲಿ ಯಾವಾಗಲೂ ಎಚ್ಚರವುಳ್ಳವನು. ತನ್ನ ಮಹಿಮೆಯನ್ನು ಹೊರಗೆ ಕಾಣಿಸುವ ಸ್ವಭಾವವಿಲ್ಲದೆ, ನೋಡುವವರಿಗೆ ಏನೂತಿಳಿಯದವನಂತೆ ಕಾಣುತ್ತ ಗೂಢವಾಗಿರತಕ್ಕವನು. ಒಮ್ಮೆ ಆ ಶುಕಮುನಿಯು ಒಂದು ನದೀತೀರದಲ್ಲಿ ಹೋಗುತ್ತಿರುವಾಗ, ಅಲ್ಲಿ ಮೈಮೇಲೆ ಬಟ್ಟೆಯಿಲ್ಲದೆ ಕೆಲವು ದೇವತಾಸ್ತ್ರೀಯರು ಜಲಕ್ರೀಡೆಯನ್ನಾಡುತಿದ್ದು, ವಸ್ತ್ರಧಾರಿಯಾದ ಈತನನ್ನು ನೋಡಿಯೂಕೂಡ ಲಜ್ಜೆಯಿಲ್ಲದೆ ನಿರ್ವಾಣದಲ್ಲಿಯೇ ನಿಂತಿದ್ದರು. ಈ ಶುಕನನ್ನು ಹಿಂಬಾಲಿಸಿ ಬರುತಿದ್ದ ಈತನ ತಂದೆಯಾದವ್ಯಾಸನು, ಆ ಸ್ತ್ರೀಯರ ನಡತೆಯನ್ನು ನೋಡಿ ಆಶ್ಚರ್ಯಪಟ್ಟವನಾಗಿ, ಅವರು ನಾಚಿಕೆಯಿಲ್ಲದೆ ನಿಂತಿರುವುದಕ್ಕೆ ಕಾರಣವೇನೆಂದು ಅವರನ್ನೇ ಪ್ರಶ್ನೆಮಾಡಿದನು. ಆದಕ್ಕಾದೇವಸ್ತ್ರೀಯರು ವ್ಯಾಸಮುನಿಯನ್ನು ಕುರಿತು:-"ಎಲ್ಲೆ! ನಿನಗೆ ಇನ್ನೂ ಸ್ತ್ರೀಯರೆಂದೂ, ಪುರುಷರೆಂದೂ ಭೇದಬುದ್ಧಿಯಿರುವಂತಿದೆ! ನಿನ್ನ ಪುತ್ರನಾದ ಈ ಶುಕಮುನಿಯಾದರೋ ನಿನಗಿಂತಲೂ ಪರಿಪಕ್ವವಾದ ಜ್ಞಾನವುಳ್ಳವನು. ಆತನಿಗೆ ಪ್ರಕೃತಿಪುರುಷವಿಲಕ್ಷಣನಾದ ಪರಮಾತ್ಮನೊಬ್ಬನಲ್ಲಿ ದೃಷ್ಟಿಯೇಹೊರತು, ಅದನ್ನು ಬಿಟ್ಟು ಬೇರೊಂದು ವಿಧವಾದ ಭೇದವೂ ತಿಳಿಯದು. ಆದುದರಿಂದಲೇ ನಮಗೆ ಅವನನ್ನು ನೋಡಿಯೂ ಲಜ್ಜೆಹುಟ್ಟಲಿಲ್ಲವು" ಎಂದರು. ಇಂತಹ ಮಹಾಜ್ಞಾನಿಯಾದ ಶುಕನು ಏನೂ ತಿಳಿಯದ ಮೂಢನಂತೆಯೂ, ಹುಚ್ಚನಂತೆಯೂ, ಜಡನಂತೆಯೂ, ಕುರುಜಾಂಗಲಪ್ರದೇಶಗಳಲ್ಲಿ ನಿಂತಲ್ಲಿ ನಿಲ್ಲದೆ ಸುತ್ತುತಿದ್ದನಲ್ಲವೆ ? ಇಂತವನಿಗೆ ಹಸ್ತಿನಾಪುರದಲ್ಲಿ ಹೇಗೆ ಪ್ರವೇಶವುಂಟಾಯಿತು ? ಅಲ್ಲಿನ ನಿವಾಸಿಗಳಿಗೆ ಇವನ ಮಹಿಮೆಯು ಹೇಗೆ ತಿಳಿಯಿತು? ಎಲೈ ಭದ್ರನೆ! ಪಾಂಡವಕುಲಕ್ಕೆ ಅಲಂಕಾರನೆನಿಸಿಕೊಂಡ ರಾಜಋಷಿಯಾದ ಪರೀಕ್ಷಿತ್ತಿಗೂ, ಈ ಶುಕಮುನಿಗೂ ಪರಸ್ಪರ ಸಂವಾದವು ಹುಟ್ಟಿದುದು ಹೇಗೆ ? ಆ ಸಂವಾದದಲ್ಲಿ ಈ ಭಾಗವತಸಂಹಿತೆಯ ಪ್ರಸಂಗವು ಬರುವುದಕ್ಕೆ ಕಾರಣವೇನು? ಮತ್ತು ಮಹಾತ್ಮನಾದ ಆ ಶುಕಮಹಾಮುನಿಯು ಅಲ್ಲಲ್ಲಿ ಸುತುವಾಗ, ಗೃಹಸ್ಥರ ಮನೆಯನ್ನು ಪವಿತ್ರವನ್ನಾಗಿ ಮಾಡುವುದಕ್ಕಾಗಿ ಎಂದಾದರೂ ಒಮ್ಮೆ ಆಲ್ಲಿಗೆ ಪ್ರವೇ

ತಿಸಿದರೂಕೂಡ, ಆ ಸ್ಥಳಗಳಲ್ಲಿ ಹಸುಗಳನ್ನು ಹಾಲುಕರೆಯುವಷ್ಟು ಕಾಲದವರೆಗೆ ನಿಲ್ಲುತಿದ್ದನೇಹೊರತು,ಅದಕ್ಕೆ ಮೇಲೆ ನಿಲ್ಲತಕ್ಕವನಲ್ಲ.ಇಂತಹ ಶುಕನು ಈ ಭಾಗವತಸಂಹಿತೆಯೆಲ್ಲವನ್ನೂ ಪರೀಕ್ಷಿತ್ತಿಗೆ ಉಪದೇತಿಸಿ ಮುಗಿಸುವವರೆಗೆ ಅಲ್ಲಿ ನಿಲ್ಲುವುದಕ್ಕೆ ಹೇಗೆ ಸಮ್ಮತಿಸಿದನು? ಎಲೈಸೂತನೆ!ಅಭಿಮನ್ಯುಪುತ್ರನಾದ ಆ ಪರಿಕ್ಷಿದ್ರಾಜನನ್ನು ಭಾಗವತೋತ್ತಮನೆಂದು ಹೇಳುವರು. ಆತನ ಉತ್ಪತ್ತಿಯೂ,ಆತನ ಕಾರ್ಯಗಳೂ ಮಹಾದ್ಭುತಗಳೆಂದೂಕೇಳಿರುವೆವು. ಆದುದರಿಂದ ಅವೆಲ್ಲವನ್ನೂ ನೀನು ನಮಗೆ ವಿವರವಾಗಿ ತಿಳಿಸಬೇಕು. ಪಾಂಡುವಂಶಕ್ಕೆ ಗೌರವವನ್ನು ತರತಕ್ಕವನಾಗಿ, ಚಕ್ರವರ್ತಿಪದವಿಯಲ್ಲಿದ್ದ ಆರಾಜನು,ತನ್ನ ರಾಜ್ಯಸಂಪತ್ತನ್ನೂ ಬಿಟ್ಟು,ಗಂಗಾತೀರದಲ್ಲಿಪ್ರಾಯೋಪವೇಶದಿಂದ ಪ್ರಾಣತ್ಯಾಗಮಾಡಲು ಪ್ರಯತ್ನಿಸಿದುದಕ್ಕೆ ಕಾರಣವೇನು?ಇದಲ್ಲದೆ ಶತ್ರುರಾಜರೆಲ್ಲರೂ ತಮ್ಮಕ್ಷೇಮಕ್ಕಾಗಿ ತಾವಾಗಿಯೇ ಬಂದು ಅಪರಿಮಿತವಾದ ಧನವನ್ನು ತಂದು ಅವನ ಪಾದಗಳಲ್ಲಿರಿಸಿ ನಮಸ್ಕರಿಸುತಿದ್ದರಲ್ಲವೆ?ಅಂತಹ ಸ್ಥಿರಸಾಮ್ರಾಜ್ಯವುಳ್ಳ ಆ ಪರೀಕ್ಷಿತ್ತಿಗೆ ಅಷ್ಟೊಂದು ವಿರಕ್ತಿಯು ಹುಟ್ಟಿದುದೇಕೆ? ಆಹಾ! ಇನ್ನೂ ಸಣ್ಣವಯಸ್ಸುಳ್ಳ ಆ ರಾಜನು, ತನ್ನ ರಾಜ್ಯಲಕ್ಷ್ಮಿಯೊಡನೆ ಪ್ರಾಣಗಳನ್ನೂ ಬಿಡುವುದಕ್ಕೆ ನಿಶ್ಚಯಿಸಿದನಲ್ಲವೆ? ಭಗವದ್ಭಕ್ತರು ಲೋಕವ್ಯಾಪಾರಗಳಲ್ಲಿ ಕೇವಲ ವಿರಕ್ತರಾಗಿ, ಪುಣ್ಯಶ್ಲೋಕನಾದ ಆ ಪರಮಾತ್ಮನೊಬ್ಬನನ್ನೇ ನಂಬಿದ್ದರೂ,ಸ್ವಪ್ರಯೋಜನಕ್ಕಾಗಿಯೇ ತಾವು ಬದುಕಿರತಕ್ಕವರಲ್ಲ! ಸಮಸ್ತಲೋಕಕ್ಕೂ ಶ್ರೇಯಸ್ಸನ್ನೂ,ಶುಭವನ್ನೂ,ಸಂಪತ್ತನ್ನೂ, ಆ ಸಂಪತ್ತಿಗೆ ಮೇಲೆಮೇಲೆ ಅಭ್ಯುದಯವನ್ನೂ ಕೂಡಿಸುವುದಕ್ಕಾಗಿಯೇ ಜೀವಿಸಿರುವುದುಂಟು. ಹೀಗಿರುವಾಗ ಈ ಪರೀಕ್ಷಿದ್ರಾಜನುಮಾತ್ರ ತನ್ನಿಂದ ನಡೆಯಬೇಕಾದ ಲೋಕೋಪಕಾರವನ್ನೂ ಲಕ್ಷಿಸದೆ, ದೇಹವನ್ನು ಬಿಡುವುದಕ್ಕೆ ಯತ್ನಿಸಿದುದೇಕೆ? ಎಲೈಮಹಾತ್ಮನೆ! ಈ ವಿಷಯಗಳೆಲ್ಲವನ್ನೂ ನಮಗೆ ಚೆನ್ನಾಗಿ ವಿವರಿಸಬೇಕು. ಇನ್ನೂ ನಮ್ಮ ಅಜ್ಞತೆಯಿಂದ ನಾವು ಕೆಲಕೆಲವು ವಿಷಯಗಳನ್ನು ಪ್ರಶ್ನೆಮಾಡದೆ ಬಿಟ್ಟಿದ್ದರೂ,ಅವುಗಳನ್ನು ನೀನಾಗಿಯೇ ವಿವರಿಸಿ ಹೇಳಬೇಕು. ವೇದವಾಕ್ಯಗಳುಹೊರತು ಇತರಪುರಾಣೇತಿಹಾಸಗಳೆಲ್ಲವೂ ನಿನಗೆ ಮುಖಸ್ಥವಾಗಿರುವುವು. ನೀನೇ ನಮಗೆ ಅವುಗಳನ್ನು ತಿಳಿಸಬಿಡಿ

ಮೇಲೆ ಅವುಗಳನ್ನು ನಮಗೆ ತಿಳಿಸತಕ್ಕ ಬೇರೆ ಮಹಾತ್ಮರು ಯಾರುಂಟು?" ಎಂದನು. ಇದನ್ನು ಕೇಳಿ ಸೂತನು ಅಂತ್ಯಂತಸಂತುಷ್ಟನಾಗಿ,"ಶೌನಕಾ!ಹೇಳುವೆನುಕೇಳು!ಮೂರನೆಯ ಯುಗವಾದದ್ವಾಪರದ ಕೊನೆಯಲ್ಲಿ,ಸತ್ಯವತೀದೇವಿಯಲ್ಲಿ ಭಗವದಂಶದಿಂದ ವ್ಯಾಸಮಹಾಮುನಿಯು ಜನಿಸಿದನು.ಆ ಮಹರ್ಷಿಯು ಒಂದಾನೊಂದು ದಿನದ ಪ್ರಾತಃಕಾಲದಲ್ಲಿ, ಸರಸ್ವತೀನದಿಯಲ್ಲಿ ಸ್ನಾನ ಮಾಡಿ,ಸೂರ್ಯನಿಗೆ ಅರ್ಘ್ಯವನ್ನು ಕೊಟ್ಟು, ನಿರ್ಜನವಾದ ಪ್ರದೇಶದಲ್ಲಿ ಏಕಾಕಿಯಾಗಿ ಕುಳಿತಿದ್ದನು.ಆಗಲೇಸೂರ್ಯೋದಯವಾಗುತಿತ್ತು. ಸಕಲವೇದಗಳ ಸಾರವನ್ನೂ ತಿಳಿದವನಾಗಿಯೂ, ಪ್ರಕೃತಿಪುರುಷಾದಿಪರಾಪರತತ್ವಸ್ವರೂಪವನ್ನು ಬಲ್ಲವನಾಗಿಯೂ ಇದ್ದ.ಆ ವ್ಯಾಸಮುನಿಯು,ಆ ನದೀತೀರದಲ್ಲಿ ಹೀಗೆ ಏಕಾಕಿಯಾಗಿ ಕುಳಿತು, ಧ್ಯಾನದೃಷ್ಟಿಯಿಂದ ಯೋಚಿಸತೊಡಗಿದನು.ಯಾರಿಗೂ ತಿಳಿಯದಂತೆ ವೇಗದಿಂದೋಡುತ್ತಿರುವ ಕಾಲಗತಿಯಿಂದ ಭೂಲೋಕದಲ್ಲಿ ಯುಗಧರ್ಮಗಳು ಭೇದಿಸುತ್ತಿರುವುದನ್ನೂ, ಈ ಧರ್ಮಗಳಹಾನಿವೃದ್ಧಿರೂಪವಾದ ವ್ಯತ್ಯಾಸದಿಂದ, ಪಂಚಭೂತ ಪರಿಣಾಮರೂಪಗಳಾದ ದೇವಾದಿಶರೀರಗಳಲ್ಲಿಯೂ, ತತ್ಸಂಬಂಧವುಳ್ಳ ಜೀವಗಳಲ್ಲಿಯೂ ಕ್ರಮಕ್ರಮವಾಗಿ ಶಕ್ತಿಯು ಕುಂದುತ್ತ ಬರುವುದನ್ನೂ ಚಿಂತಿಸಿದನು. ಕಾಲದೋಷದಿಂದ ಜನರಿಗೆ ತಮ್ಮ ತಮ್ಮ ವರ್ಣಾಶ್ರಮಧರ್ಮಗಳಲ್ಲಿ ಶ್ರದ್ಧೆ ಹುಟ್ಟುವುದೇಕಡಿಮೆ! ಒಂದುವೇಳೆ ಶ್ರದ್ಧೆಯು ಹುಟ್ಟಿದರೂ ಆಯಾಕರ್ಮಗಳನ್ನು ಕ್ರಮವಾಗಿನಡೆಸುವುದಕ್ಕೆ ತಕ್ಕಷ್ಟು ದೇಹಬಲವಿಲ್ಲದೆ ದರ್ಬಲರಾಗಿರುವರು. ಬಲವಿದ್ದವರು ಬುದ್ಧಿಹೀನರಾಗಿರುವರು. ಒಂದುವೇಳೆ ಈ ಸೌಕರ್ಯಗಳೆಲ್ಲವೂ ಸಂಪೂರ್ಣವಾಗಿದ್ದರೂ, ಅಂತವರು ಅಲ್ಪಾಯುಸ್ಸಿನಲ್ಲಿಯೇ ಸಾಯುವರು.ಹೀಗೆ ಕಾಲಗತಿಯಿಂದ ಜನರೆಲ್ಲರೂ ಭಾಗ್ಯಹೀನರಾಗಿರುವುದನ್ನು ಕಂಡು ವ್ಯಾಸಮಹಾಮುನಿಯು, ಅಂತವರಿಗೆ ಯಾವವಿಧದಿಂದ ಕ್ಷೇಮವನ್ನುಂಟುಮಾಡಬಹುದೆಂದು ಯೋಗಪರಿಶುದ್ಧವಾದ ತನ್ನ ಧ್ಯಾನದೃಷ್ಟಿಯಿಂದಲೇ ಚೆನ್ನಾಗಿ ಆಲೋಚಿಸಿದನು. ಹೀಗೆ ಯೋಚಿಸಿ, ಲೋಕದಲ್ಲಿ ಬ್ರಾಹ್ಮಣ, ಕ್ಷತ್ರಿಯ,ವೈಶ್ಯರೆಂಬ ಮೂರು ವರ್ಣದವರಿಗೂ ಶ್ರೇಯಸ್ಸನ್ನುಂಟುಮಾಡಬೇಕಾದರೆ, ವೇದಗಳ ಪೂರ್ವಭಾಗದಲ್ಲಿರುವ ಚಾತುರ್ಹೋತ್ರಮಂತ್ರಗಳಿಂದ ಪ್ರಕಾಶಿತವಾದ

ಯಾಗಾದಿಕರ್ಮಗಳಲ್ಲದೆ ಬೇರೆಯಲ್ಲವೆಂದು ನಿಶ್ಚಯಿಸಿಕೊಂಡನು. ಆ ವೇದಗಳೆಲ್ಲವೂ ಒಂದೇರೂಪವಾಗಿರುವುದನ್ನು ನೋಡಿ,ಅದನ್ನು ಬೇರ್ಪಡಿಸಿ ತಿಳಿಸುವುದಕ್ಕಾಗಿ,ಋಕ್ಕು,ಯಜುಸ್ಸು,ಸಾಮ,ಅಥರ್ವಣಗಳೆಂಬ ನಾಲ್ಕು ವಿಭಾಗಗಳಾಗಿ ಅದನ್ನು ವಿಭಾಗಿಸಿಟ್ಟನು. ಇತಿಹಾಸಪುರಾಣಗಳನ್ನೂ ಬೇರೆಯಾಗಿ ವಿಭಾಗಿಸಿದನು. ಇದು ಐದನೆಯ ವೇದವೆನಿಸಿಕೊಂಡಿತು. ಹೀಗೆ ವಿಭಾಗಿಸಿಟ್ಟ ಮೇಲೆ ಅವೆಲ್ಲವನ್ನೂ ತನ್ನ ಶಿಷ್ಯರಿಗೆ ಉಪದೇಶಿಸಿದನು.ಆ ಶಿಷ್ಯರಲ್ಲಿ ಪೈಲನೆಂಬ ಮಹರ್ಷಿಯು ಋಗ್ವೇದವನ್ನೂ,ಜೈಮಿನಿಯು ಸಾಮವೇದವನ್ನೂ ಗ್ರಹಿಸಿದನು. ವೈಶಂಪಾಯನನು ಯಜುರ್ವೇದದಲ್ಲಿ ಪಾರಂಗತನಾದನು. ವರುಣಪುತ್ರನಾದ ಸುಮಂತುವೆಂಬವನು ಅಥರ್ವಣವೇದವನ್ನು ಗ್ರಹಿಸಿದನು.ನನ್ನ ತಂದೆಯಾದ ರೋಮಹರ್ಷಣನು'ಇತಿಹಾಸಪುರಾಣಗಳಲ್ಲಿ ಪಾರಂಗತನಾದನು. ಈ ಶಿಷ್ಯರೆಲ್ಲರೂ ಆಯಾ ವೇದಶಾಖೆಗಳೆಲ್ಲವನ್ನೂ ಶ್ರದ್ಧೆಯಿಂದಪಠಿಸಿದರು. ಅವರಿಂದ ಅವರ ಶಿಷ್ಯಪ್ರಶಿಷ್ಯರುಗಳಿಗೂವ್ಯಾಪಿಸಿ,ಈಗಲೂ ಅನೇಕಶಾಖೆಗಳಾಗಿ ಹರಡಿರುವುವು. ಹೀಗೆ ಚಿರನವತ್ಸಲನಾದ ವ್ಯಾಸಮಹಾಮುನಿಯು ಸಾಮಾನ್ಯವಾಗಿ ಮಂದಬುದ್ಧಿಗಳಿಗೂಕೂಡ ಸುಲಭಗ್ರಾಹ್ಯವಾಗುವಂತೆ ವೇದಗಳನ್ನು ವಿಭಾಗಿಸಿಟ್ಟುದರಿಂದಲೇ ವ್ಯಾಸನೆಂಬ ಪ್ರಸಿದ್ಧಿಯನ್ನು ಹೊಂದಿದನು. ಅಮೇಲೆ ಈ ವ್ಯಾಸಮಹಾಮುನಿಯು ಸ್ತ್ರೀಯರಿಗೂ, ಶೂದ್ರರಿಗೂ, ಬ್ರಹ್ಮಚರ್ಯಾದಿಪಾಪಗಳನ್ನು ನಡೆಸಿದವರಿಗೂ ಈ ವೇದಗಳಲ್ಲಿ ಅಧಿಕಾರವಿಲ್ಲದುದನ್ನೂ, ಈ ವೈದಿಕಕರ್ಮಗಳಿಂದ ಸಿದ್ಧಿಸತಕ್ಕ ಶ್ರೇಯಸ್ಸಿಗೆ ಅವರು ಪಾತ್ರರಾಗದಿರುವುದನ್ನೂ ನೋಡಿ, ಅವರಿಗಾಗಿಯೇ ಭಾರತವೆಂಬ ಉಪಾಖ್ಯಾನವನ್ನು ರಚಿಸಿದನು. ಎಲೈ ಮಹರ್ಷಿಗಳೆ!ಹೀಗೆ ವೇದವ್ಯಾಸಮಹರ್ಷಿಯು ಸಮಸ್ತಜನರ ಶ್ರೇಯಸ್ಸಿಗಾಗಿ ಅನೇಕಕಾರ್ಯಗಳನ್ನು ನಡೆಸಿಟ್ಟರೂ, ಆತನ ಮನಸ್ಸಿಗೆ ಇನ್ನೂ ಸಮಾಧಾನವು ಹುಟ್ಟದೆಹೋಯಿತು. ತನ್ನ ಮನಸ್ಸಿಗೆ ಪೂರ್ಣವಾದ ಸಮಾಧಾನವುಂಟಾಗದಿದ್ದುದರಿಂದ, ಆ ಸರಸ್ವತೀನದೀತೀರದಲ್ಲಿ ರಹಸ್ಯವಾಗಿ ಕುಳಿತು,ತನ್ನಲ್ಲಿತಾನು ಚಿಂತಿಸುವನು.''ಆಹಾ! ನಾನು ದೃಢವಾದ ವ್ರತವನ್ನು ಹಿಡಿದು,ನಿಷ್ಕಪಟವಾದ ಮನಸ್ಸಿನಿಂದ, ಗುರುಗಳನ್ನೂ, ಅಗ್ನಿಹೋತ್ರವನ್ನೂ ಪೂಜಿಸಿದೆನು. ವೇದಗಳನ್ನು ವಿಭಾಗಿಸಿಟ್ಟೆ

ನು, ಭಾರತವೆಂಬ ಬೇರೆ ಹೆಸರಿನಿಂದ ವೇದಾರ್ಥಗಳನ್ನೂ ವಿಶದೀಕರಿಸಿದೆನು. ಇದರಿಂದ,ಸ್ತ್ರೀಶೂದ್ರಾದಿಗಳೂಕೂಡ ತಮತಮಗನುರೂಪವಾದ ಧರ್ಮಗಳನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವನ್ನುಂಟುಮಾಡಿದೆನು. ಅಯ್ಯೋ ! ಇಷ್ಟಾದರೂ ನನ್ನ ದೇಹದಲ್ಲಿರುವ ಆತ್ಮವು, ಸಮಾಧಾನವಿಲ್ಲದೆ ತನಗೆತಾನೇ ಕಳವಳಿಸುತ್ತಿರುವುದು! ಬ್ರಹ್ಮವರ್ಚಸ್ಸಿನಿಂದ ಶುದ್ಧವಾಗಿದ್ದರೂ ಏನೋ ಒಂದುವಿಧವಾದ ನ್ಯೂನತೆಯಿದ್ದಂತೆ ಕುದಿಯುತ್ತಿರುವುದಲ್ಲಾ ! ಇದಕ್ಕೆ ಕಾರಣವೇನು? ಆಹಾ ! ಇದೇ ಕಾರಣವಿರಬಹುದು. ಅಂತರಾತ್ಮನಾದ ಭಗವಂತನನ್ನು ತೃಪ್ತಿಪಡಿಸಿದ ಮೇಲಲ್ಲವೇ ತದಧೀನವಾದ ಮನಸ್ಸಿಗೆ ಆನಂದವು ಪ್ರಾಪ್ತವಾಗುವುದು ! ಆ ಭಗವಂತನೂಕೂಡ ತನ್ನ ಭಕ್ತರು ಸಂತುಷ್ಟರಾಗಿದ್ದಪಕ್ಷದಲ್ಲಿಯೇ ಸಂತೋಷವನ್ನು ಹೊಂದುವನು. ಭಗವದ್ಭಕ್ತರಿಗೆ ಸಂತೋಷಕರವಾದ ಭಾಗವತಧರ್ಮಗಳನ್ನು ವಿವರಿಸಿದಪಕ್ಷದಲ್ಲಿ ಅವರು ಸಂತುಷ್ಟರಾಗುವರು. ಅದರಿಂದ ಭಗವಂತನೂ ಸಂತುಷ್ಟನಾಗುವನು. ಆ ಧರ್ಮಗಳನ್ನು ಇದುವರೆಗೆ ನಾನು ಸಂಪೂರ್ಣವಾಗಿ ವಿವರಿಸದೆ ಹೋದುದರಿಂದಲೇ ನನ್ನ ಮನಸ್ಸಿಗೆ "ಶಾಂತಿಯಿಲ್ಲದಿರುವುದು.ಇದೇ ಧರ್ಮಗಳನ್ನು ನಾನು ಭಾರತದಲ್ಲಿ ಸೂಕ್ಷ್ಮವಾಗಿ ವಿವರಿಸಿದ್ದರೂ,ವಿಶೇಷವಾಗಿ ವಿಸ್ತರಿಸದೆ ಹೋದೆನು.ಆ ಕಾರ್ಯವನ್ನು ಪೂರ್ತಿಗೊಳಿಸದಹೊರತು ನನ್ನ ಮನಸ್ಸಿಗೆ ಶಾಂತಿಯುಂಟಾಗದು. ಇದಕ್ಕೇನುಮಾಡಲಿ"ಎಂದು ಚಿಂತಿಸುತ್ತಕುಳಿತಿದ್ದನು. ಹೀಗೆ ಆ ವ್ಯಾಸಮಹಾಮುನಿಯು ತನ್ನನ್ನು ಕೃತಕೃತ್ಯನಲ್ಲದಂತೆ ಭಾವಿಸಿ ದುಃಖಿಸುತ್ತಿರುವ ಸಮಯದಲ್ಲಿಯೇ ನಾರದಮಹರ್ಷಿಯು ಆ ಪುಣ್ಯಾಶ್ರಮಸ್ಥಳಕ್ಕೆ ಬಂದನು. ಸಮಸ್ತದೇವತೆಗಳಿಂದಲೂ ಪೂಜಿತನಾದ ನಾರದನು ಬಂದುದನ್ನು ನೋಡಿ, ವ್ಯಾಸಮುನಿಯು ಸಂಭ್ರಮದಿಂದೆದ್ದು ಬಂದು, ವಿಧ್ಯುಕ್ತವಾಗಿ ಅವನನ್ನು ಸತ್ಕರಿಸಿದನು. ಇದು ನಾಲ್ಕನೆಯ ಅಧ್ಯಾಯವು.

ವ್ಯಾಸ ನಾರದ ಸಂವಾದವು.

ಹೀಗೆ ನಾರದನು ವ್ಯಾಸನಿಂದ ಯಥಾವಿಧಿಯಾಗಿ ಪೂಜಿಸಲ್ಪಟ್ಟ ಮೇಲೆ, ಅವರಿಬ್ಬರೂ ಸುಖಾಸೀನರಾಗಿದ್ದರು. ಆಗ ಮಹಾಕೀರ್ತಿವಂತನಾದ ನಾರದನು, ತನ್ನಿದಿರಾಗಿ ಸುಖಾಸೀನನಾಗಿ ಕುಳಿತಿದ್ದ ವ್ಯಾಸಮಹರ್ಷಿಯನ್ನು ನೋಡಿ ಮಂದಹಾಸಪೂರ್ವಕವಾಗಿ ''ಎಲ್ಲೆ ಋಷಿಶ್ರೇಷ್ಠನೆ ! ಓ ಮಹಾತ್ಮನೆ ! ನಿನ್ನ ಮನಸ್ಸು ನಿಶ್ಚಿಂತವಾಗಿರುವುದಷ್ಟೆ ? ತಿಳಿಯಬೇಕಾದ ಧರ್ಮಗಳೆಲ್ಲವನ್ನೂ ತಿಳಿದಿರುವೆ ! ಲೋಕೋಪಕಾರಾರ್ಥವಾಗಿ ಸರ್ವಾರ್ಥಗಳನ್ನೂ ವಿವರಿಸತಕ್ಕ ಮಹಾದ್ಭುತವಾದ ಭಾರತವೆಂಬ ಗ್ರಂಥವನ್ನು ರಚಿಸಿದೆ ! ಇದರಿಂದಲೇ ನಿನ್ನ ಜ್ಞಾನವಿಶೇಷವು ಹೊರಪಡುವುದು. ಆದ್ಯಂತ ಶೂನ್ಯವಾಗಿರುವ ವೇದಗಳೆಲ್ಲವನ್ನೂ ಓದಿ, ಆ. ವೇದಾರ್ಥಗಳೆಲ್ಲವನ್ನೂ ವಿಚಾರಿಸಿರುವೆ ? ಹೀಗಿದ್ದರೂ ನೀನು ಕೃತಕೃತ್ಯನಲ್ಲದವನಂತೆ ಹೀಗೇಕೆ ಚಿಂತಿಸುತ್ತಿರುವೆ?" ಎಂದನು. ಅದಕ್ಕಾವ್ಯಾಸನು ''ಎಲ್ಲೆ ಮುನೀಂದ್ರನೆ ! ನೀನು ಹೇಳಿದುದೆಲ್ಲವೂ ನಿಜವು. ಹಾಗಿದ್ದರೂ ನನ್ನ ಆತ್ಮವು ತೃಪ್ತಿಯಿಲ್ಲದೆ ಕಳವಳಿಸುತ್ತಿರುವುದು. ಇದಕ್ಕೆ ಕಾರಣವೇನೆಂದು ನನಗೇ ತೋರಲಿಲ್ಲ. ನೀನೋ ದಿವ್ಯಜ್ಞಾನವುಳ್ಳವನು. ಸಮಸ್ತಲೋಕಗಳಿಗೂ ಸೃಷ್ಟಿಕರ್ತನಾದ ಚತುರ್ಮುಖಬ್ರಹ್ಮನ ಶರೀರದಲ್ಲಿ ಸಾಕ್ಷಾತ್ತಾಗಿ ಹುಟ್ಟಿದವನು. ಸರ್ವಜ್ಞನು ಆದುದರಿಂದ ನಿನ್ನಿಂದಲೇ ನಾನು ಅದರ ಕಾರಣವನ್ನು ತಿಳಿಯಬೇಕಾಗಿರುವುದು. ನನ್ನ ಮನಸ್ಸಿಗೆ ತೃಪ್ತಿಯಿಲ್ಲದಿರುವುದಕ್ಕೆ ಕಾರಣವೇನೆಂಬುದನ್ನು ನೀನೇ ಯೋಚಿಸಿ ಹೇಳಬೇಕು. ಉತ್ತಮೋತ್ತಮನಾಗಿ, ಸರ್ವನಿಯಾಮಕನಾದ ಭಗವಂತನು, ಸತ್ತ್ವಾದಿಗುಣಗಳ ಸಂಬಂಧವಿಲ್ಲದೆ ತನ್ನ ಸಂಕಲ್ಪಮಾತ್ರದಿಂದಲೇ ಸಮಸ್ತಲೋಕಗಳನ್ನೂ ಸೃಷ್ಟಿಸುವನು.ಅವುಗಳನ್ನು ತಾನೇರಕ್ಷಿಸುತ್ತಿರುವನು.ಕೊನೆಗೆ ತಾನೇ ಅವುಗಳನ್ನು ಸಂಹರಿಸುವನು. ಸರ್ವಾಂತರ್ಯಾಮಿಯಾದ ಆತನಿಗೆ ತಿಳಿಯದೆ ನಡೆಯತಕ್ಕ ವಿಷಯಗಳೊಂದೂ ಇಲ್ಲವು. ಅಂತಹ ಪರಮಪುರುಷನನ್ನೇ ನೀನು ಉಪಾಸನಮಾಡಿ ವಶಪಡಿಸಿಕೊಂಡವನಾದುದರಿಂದ, ಪ್ರಾಣಿಗಳಲ್ಲಿ ಅಂತರ್ಗತವಾದ ಸಮಸ್ತರಹಸ್ಯವನ್ನೂ ನೀನು ತಿಳಿಯಬಲ್ಲೆ ! ಇದಲ್ಲದೆ ನೀನು ಸೂರ್ಯನಂತೆ ತ್ರಿಲೋಕಸಂಚಾರಿಯಾದುದರಿಂದ ಹೊರಗಿನ

ವಿಷಯಗಳೆಲ್ಲವನ್ನೂ ನೀನು ಕಾಣಬಲ್ಲೆ.ವಾಯುವಿನಂತೆ ಜ್ಞಾನವ್ಯಾಪ್ತಿಯಿಂದ ಸಮಸ್ತಪ್ರಾಣಿಗಳಲ್ಲಿ ಸಂಚರಿಸುತ್ತ, ಅವರ ಮನೋಗತಗಳೆಲ್ಲವನ್ನೂ ಕಂಡುಕೊಳ್ಳುತ್ತಿರುವೆ? ಇದರಿಂದ ಲೋಕದಲ್ಲಿ ನೀನು ಕಾಣದೊಂದೂ ಇಲ್ಲವು! ಪರಮಾತ್ಮನ ವಿಷಯವಾಗಿ ನಿವೃತ್ತಿಧರ್ಮಗಳನ್ನೂ, ವೇದಗಳವಿಷಯವಾಗಿ ಸಮಸ್ತವ್ರತಗಳನ್ನೂ ಮುಗಿಸಿದ್ದರೂ, ನನ್ನ ಮನಸ್ಸಿಗೆ ಸಂತೋಷವಿಲ್ಲದಿರುವುದು. ಆದುದರಿಂದ ಇನ್ನೂ ನನ್ನಲ್ಲಿ ಯಾವವಿಧವಾದ ಲೋಪವುಂಟೆಂಬುದನ್ನು ನೀನೇ ನಿನ್ನ ದಿವ್ಯಜ್ಞಾನದಿಂದ ತಿಳಿದು ಹೇಳಬೇಕು"ಎಂದನು. ಅದಕ್ಕಾನಾರದನು ''ಎಲೈ ಮುನೀಶ್ವರನೆ! ಹೇಳುವೆನು ಕೇಳು. ಶ್ರವಣಪಠನಾದಿಗಳಿಂದ ಸರ್ವಪಾಪಹರವಾದ ಭಗವಂತನ ಕೀರ್ತಿಯನ್ನು ನೀನು ಅಲ್ಲಲ್ಲಿ ಸೂಕ್ಷ್ಮವಾಗಿ ಹೇಳಿರುವೆಯೇಹೊರತು, ಅದನ್ನು ಪೂರ್ಣವಾಗಿ ಹೇಳಿ ಮುಗಿಸಲಿಲ್ಲವು. ಆತನ ಸ್ವರೂಪಗುಣಾದಿಗಳನ್ನು ಯಥಾಸ್ಥಿತವಾಗಿ ತಿಳಿಸದೆ ಹೋದುದೇ ನಿನ್ನಲ್ಲಿರುವ ನ್ಯೂನತೆಯು. ನಿನ್ನ ಆತ್ಮವು ಸಂತೋಷವಿಲ್ಲದೆ ಕಳವಳಿಸುವುದಕ್ಕೆ ಇದೇ ಕಾರಣವು. ಎಲೈಮಹರ್ಷಿಯೇ! ನೀನು ಭಾರತದಲ್ಲಿ ಧರ್ಮಾರ್ಥಕಾಮಪುರುಷಾರ್ಥಗಳನ್ನು ಎಷ್ಟುಮಟ್ಟಿಗೆ ವಿವರಿಸಿಹೇಳಿರುವೆಯೋ, ಅಷ್ಟುಮಟ್ಟಿಗೆ ಭಗವಂತನ ಮಹಿಮೆಯನ್ನು ವರ್ಣಿಸಲಿಲ್ಲವು. ಒಂದು ಕಾವ್ಯವು ಪ್ರಾಸಾದ್ಯಲಂಕಾರಗಳಿಂದ ಬಹಳವಿಚಿತ್ರವಾಗಿದ್ದರೂ ಕೂಡ, ಅದರಲ್ಲಿ ಲೋಕಪವಿತ್ರಗಳಾದ ಭಗವಂತನ ಗುಣಾನುವರ್ಣನೆಗಳಿಲ್ಲದಿದ್ದರೆ, ಅದು ಕಾವ್ಯವೆನಿಸಿಕೊಳ್ಳುವುದೇಇಲ್ಲವು. ಅಂತಹ ಕಾವ್ಯವನ್ನು, ಕಾಗೆಗಳ ಗುಂಪಿಗೆ ನಿತ್ಯ ನಿವಾಸವಾಗಿ, ಹಂಸಗಳ ಪ್ರವೇಶಕ್ಕೇ ಯೋಗ್ಯವಲ್ಲದವಾಯಸತೀರ್ಥಕ್ಕೆ ಸಮಾನವೆಂದು ಹೇಳುವರು. ಅಂತಹ ತೀರ್ಥದಂತೆ ಭಗವದ್ಗುಣಾನುವರ್ಣನವಿಲ್ಲದ ಕಾವ್ಯವೂಕೂಡ ಅಪವಿತ್ರವಾಗಿ, ಕಾಮುಕರಿಗೆ ಮಾತ್ರವೇ ಪ್ರೀತಿದಾಯಕವಾಗಿರುವುದೇಹೊರತು, ಬಹ್ಮಾನಂದಾನುಭವವುಳ್ಳವರಾಗಿಯೂ, ಶುದ್ಧಮನಸ್ಕರಾಗಿಯೂ ಇರುವ ಪರಮಹಂಸರಿಗೆ ತೃಪ್ತಿಕರವಾಗಿರದು. ಕಾವ್ಯದಲ್ಲಿರುವ ಪ್ರತಿವಾಕ್ಯವೂ ಅಪಶಬ್ದಗಳಿಂದ ಕೂಡಿದ್ದರೂ ಅದರಲ್ಲಿ ಭಗವನ್ನಾಮಗಳು ವಿಶ್ರವಾಗಿದ್ದಪಕ್ಷದಲ್ಲಿ ಪಾಪನಿವಾರಕವೆನಿಸುವುದು. ಅಂತಹ ಕಾವ್ಯಗಳನ್ನು ಸಾಧುಗಳಾದ ಭಗವದ್ಭಕ್ತರು ಯಾ

ವಾಗಲೂ ಕಿವಿಯಲ್ಲಿ ಕೇಳುತ್ತಿರುವರು. ಇತರರಿಗೂ ಹೇಳುತ್ತಿರುವರು. ಬೇರೆ ಯಾರೂ ಇಲ್ಲದಿದ್ದಾಗ ತಮಗೆ ತಾವೇ ಆದನ್ನು ಗಾನಮಾಡಿ ಆನಂದವನ ನು ನುಭವಿಸುವರು. ರಾಗದ್ವೇಷಾದಿವಿಕಾರಗಳಿಲ್ಲದೆ ಕರ್ಮಬಂಧವಿಲ್ಲದಿರುವ ಕೇ ವಲಜ್ಞಾನಯೋಗವಾದರೂ, ಭಗವದ್ಭಾವಶೂನ್ಯವಾಗಿದ್ದಪಕ್ಷದಲ್ಲಿ ಆ ಜ್ಞಾನವು ಎಷ್ಟುಮಾತ್ರವೂ ಪ್ರಕಾಶಿಸಲಾರದು, ನಿಷ್ಕಾಮರಾಗಿಯೇ ಕ ರ್ಮಗಳನ್ನು ನಡೆಸಿದರೂಕೂಡ, ಭಗವದರ್ಪಿತವೆಂಬ ಭಾವವಿಲ್ಲದಿದ್ದರೆ ಆ ಕರ್ಮಯೋಗವೂ ಪ್ರಕಾಶಿಸಲಾರದು. ಇನ್ನು ಕಾಮಾದಿಫಲೋದ್ದೇಶ ಪೂರ್ವಕವಾಗಿಯೇ ನಡೆಸತಕ್ಕ ಕಾಮ್ಯಕರ್ಮಗಳೆಲ್ಲವೂ, ಆವುಗಳನ್ನು ನಡೆಸು ವಾಗಲೂ ಅವುಗಳ ಫಲವನ್ನನುಭವಿಸುವಾಗಲೂ ಕೇವಲದುಃಖಪ್ರದವಾಗು ವದಲ್ಲದೆ ಶೋಭಿಸಲಾರವೆಂಬುದನ್ನು ಹೇಳತಕ್ಕುದೇನು? ಎಲೈಮುನಿವರ್ಯನೆ! ನಿ ನ್ನ ಮಹಿಮೆಯಾದರೋ ಸಾಮಾನ್ಯವಲ್ಲ! ನೀನುಲೋಕೋಪಕಾರನಿರತನಾದ ವನು! ಇಂತಹ ವಿಷಯದಲ್ಲಿ ಬಹಳ ದೂರದೃಷ್ಟಿಯುಳ್ಳವನು. ಲೋಕೋಪ ಕಾರವಿಷಯದಲ್ಲಿ ದೃಢವಾದ ದೀಕ್ಷೆಯನ್ನೂ ಹಿಡಿದವನು. ಪವಿತ್ರವಾದ ಕೀ ರ್ತಿಯುಳ್ಳವನು. ಹೀಗಿರುವಾಗಲೂ ನೀನುನಿರರ್ಥಕಗಳಾದ ಧರ್ಮಾರ್ಥಕಾಮಗ ಳನ್ನೂ, ಆದಕ್ಕೆ ಬೇಕಾದ ಸಾಧನಗಳನ್ನೂ, ವರ್ಣಿಸುವುದರಲ್ಲಿಯೇ ನಿನ್ನ ಶ್ರ ಮವನ್ನು ವ್ಯರ್ಥಮಾಡದುದು ಅಷ್ಟಾಗಿ ಯುಕ್ತವಲ್ಲ! ನಿಜವಾಗಿ ನೀನು ಮನುಷ್ಯರ ಸಮಸ್ತವಿಧಬಂಧನಗಳನ್ನೂ ಬಿಡಿಸಿ, ಅವರಿಗೆಶ್ರೇಯಸ್ಸನ್ನುಂಟು ಮಾಡುವ ಉದ್ದೇಶವುಳ್ಳವನಾಗಿದ್ದಪಕ್ಷದಲ್ಲಿ, ಈಗಲೂ ತ್ರಿವಿಕ್ರಮಮೂರ್ತಿ ಯಾದ ಆಪರಮಾತ್ಮನಲೀಲೆಗಳೆಲ್ಲವನೂ ಚೆನ್ನಾಗಿ ಪರ್ಯಾಲೋಚಿಸಿಪ್ರಬಂ ಧರೂಪವಾಗಿರಚಿಸು! ಆ ಕಾರ್ಯವನ್ನು ನಡೆಸಿದಹೊರತು ನಿನ್ನ ಮನಸ್ಸು ನಿಶ್ಚಿಂ ತವಾಗಿರದು! ಭಗವಂತನಿಗೆ ಸಂಬಂಧಪಡದ ಬೇರೆವಿಷಯಗಳನ್ನು ವರ್ಣಿ ಸುತ್ತಿರುವವರೆಗೂ ನಿನ್ನ ಬುದ್ಧಿಯು, ಬಿರುಗಾಳಿಯ ಬಡಿತಕ್ಕೆ ಸಿಕ್ಕಿದ ದೋ ಣಿಯಂತೆ ಕ್ಷಣಮಾತ್ರವೂ ನೆಮ್ಮದಿಯಿಲ್ಲದೆ ಅಲೆಯುತ್ತಿರುವುದು. ಲೋಕದ ಲ್ಲಿ ಭಗವದಾತ್ಮಕವಲ್ಲದ ವಸ್ತುವೊಂದಾದರೂ ಇಲ್ಲವೆಂಬುದನ್ನು ನೀನು ತಿಳಿ ಯದವನಲ್ಲ! ಹೀಗಿರುವಾಗ ನೀನು ಹೇಳಬೇಕಾದವಿಷಯಗಳೆಲ್ಲವನ್ನೂ ಅಭಗವ ದ್ವಿಭೂತಿಯನ್ನಾಗಿಯೇ ಹೇಳಬೇಕಲ್ಲವೆ? ಇದನ್ನು ಬಿಟ್ಟು ಬೇರೆಮಾರ್ಗವನ್ನು

ಹಿಡಿದರೆ ನಿನ್ನ ಬುದ್ಧಿಗೇ ಅದೊಂದುನ್ಮಾನತೆಯನ್ನು ತೋರಿಸುವುದು.ಮುಖ್ಯವಾಗಿ ನೀನು ಸಮಸ್ತಭೂತಗಳಿಗೂಹಿತವನ್ನು ಮಾಡಬೇಕೆಂದು ಪ್ರಯತ್ನಿಸಿ ಅವರಿಗೆ ಅಹಿತವನ್ನೇ ಮಾಡಿದಂತಾಯಿತು. ಹೇಗೆಂದು ಕೇಳುವೆಯಾ? ಜನರಿಗೆ ಸಹಜವಾಗಿಯೇ ಅರ್ಥಕಾಮಗಳಲ್ಲಿ ಪ್ರೀತಿಯು ಹೆಚ್ಚು !ಈ ಪ್ರಯತ್ನದಲ್ಲಿಯೇ ಅವರು ತಾಪತ್ರಯಗಳಿಗೆ ಸಿಕ್ಕಿ ನರಳುತ್ತಿರುವರು. ಇಂತವರನ್ನು ಆ ದಾರಿಯಿಂದ ತಪ್ಪಿಸುವುದು ನಿನ್ನ ಮುಖ್ಯಕಾರ್ಯವಾಗಿದ್ದರೂ, ನೀನು ಅವರಿಗೆ ಆ ವಿಧಗಳಾದ ಅರ್ಥಕಾಮಗಳಲ್ಲಿಯೇ ಇನ್ನೂ ಅಭಿರುಚಿಯನ್ನು ಹೆಚ್ಚಿಸುವಂತೆ, ಅವುಗಳಿಗೆ ಸಾಧಕಗಳಾದ ಧರ್ಮಗಳನ್ನು ಬೋಧಿಸುವುದಕ್ಕಾಗಿ ಭಾರತವನ್ನು ರಚಿಸಿದಂದಾಯಿತು. ಇದೇ ನಿನ್ನಿಂದ ನಡೆದ ದೊಡ್ಡತಪ್ಪು ! ''ನಾನು ಹೇಳಿದ ಮಾತ್ರಕ್ಕೇನು ? ಜನರು ತಮ್ಮತಮ್ಮ ಅಭಿರುಚಿಯಿದ್ದಂತೆ ಪರಮಪುರುಷಾರ್ಥದಲ್ಲಿಯೇ ಪ್ರವರ್ತಿಸಬಾರದೆ? ನಾನೂ ಭಾರತದಲ್ಲಿ ಒಂದೊಂದು ಕಡೆಯಲ್ಲಿ ಅರ್ಥಕಾಮಗಳ ಹೇಯತ್ವವನ್ನು ತಿಳಿಸಿಯೇಇರುವೆನು ! ಇನ್ನು ನನ್ನಲ್ಲಿ ದೋಷವೇನು?' ಎಂದು ನೀನು ಸಮಾಧಾನವನ್ನು ಹೇಳಬಹುದು! ಎಲೈ ಮುನಿವರ್ಯನೆ!ಅದುಹಾಗಲ್ಲ! ನೀನಾದರೋ ಲೋಕದಲ್ಲಿ ಸರ್ವಜ್ಞನೆಂದು ಹೆಸರುಗೊಂಡವನು. ಎಲ್ಲರೂ ನಿನ್ನಂತೆಯೇ ಸೂಕ್ಷ್ಮಜ್ಞಾನವುಳ್ಳವರಲ್ಲ! ಆದುದರಿಂದ ನೀನು ಭಾರತದಲ್ಲಿ ಧರ್ಮಾರ್ಥಕಾಮಗಳನ್ನೇ ವಿಶೇಷವಾಗಿ.ವಿಸ್ತರಿಸಿ ಪ್ರತಿಪಾದಿಸಿರುವುದನ್ನು ನೋಡಿದರೆ, ಅಲ್ಪಜ್ಞರಾದ ಇತರಜನರು, ಅರ್ಥಕಾಮಗಳೇ ಉತ್ತಮಪುರುಷಾರ್ಥಗಳೆಂದೂ, ಅದನ್ನು ಕೈಗೂಡಿಸುವುದಕ್ಕಾಗಿ ನಡೆಸತಕ್ಕ ಧರ್ಮಗಳೇ ಉತ್ತಮಧರ್ಮಗಳೆಂದೂ ನಂಬುವರೇಹೊರತು ನೀನು ಎಲ್ಲಿಯೋ ಒಂದೆರಡು ಕಡೆಗಳಲ್ಲಿ ಅವುಗಳನ್ನು ಖಂಡಿಸಿದ್ದಮಾತ್ರಕ್ಕೆ, ಇದೇ ನಿನ್ನಮುಖ್ಯಾಭಿಪ್ರಾಯವೆಂಬುದನ್ನು ತಿಳಿದುಕೊಳ್ಳಲಾರರು.ಲೋಕದಲ್ಲಿ ಎಲ್ಲಿಯೋ ಕೆಲವು ನಿಪುಣಬುದ್ಧಿಯುಳ್ಳವರು ಮಾತ್ರ ನಿವೃತ್ತಿಧರ್ಮನಿಷ್ಠೆಯಿಂದ ಆ ಭಗವಂತನ ಅಪಾರಮಹಿಮೆಗಳನ್ನು ಸುಖವಾಗಿ ತಿಳಿದುಕೊಳ್ಳಬಲ್ಲರು. ಅಂತವರು ಬಹಳವಿರಳರು ರಜಸ್ಸ್ವಭಾವದಲಾದ ಗುಣಗಳಿಂದ ಹುಟ್ಟಿದ ರಾಗಾದಿಗಳಲ್ಲಿ ಪ್ರವರ್ತಿಸಿ, ಆತ್ಮಸ್ವರೂಪಜ್ಞಾನವಿಲ್ಲದವರಿಗೆ ಆ ಪರಮಾತ್ಮನ ಮಹಿಮೆಗಳು ಸುಲಭವಾಗಿ ತಿಳಿಯಲಾ

ರವು. ಈ ಅಜ್ಞತೆಯಿಂದ ಕೆಟ್ಟುಹೋಗತಕ್ಕವರೇ ಲೋಕದಲ್ಲಿ ಬಹಳ ಮಂದಿಯಿರುವುದರಿಂದ ಅಂತವರೆಲ್ಲರಿಗೂ ಸುಲಭವಾಗಿ ತಿಳಿಯುವಂತೆ ಅರ್ಥಕಾಮಗಳಲ್ಲಿರುವ ನ್ಯೂನತೆಯನ್ನೂ, ಭಗವದ್ಭಕ್ತಾನುಭವವೇ ಮನುಷ್ಯರಿಗೆ ನಿರತಿಶಯಪುರುಷಾರ್ಥವೆಂಬುದನ್ನೂ, ನೀನು ಒಂದು ದೊಡ್ಡಪ್ರಬಂಧದಮೂಲಕವಾಗಿ ತಿಳಿಸಬೇಕು. ಇದಲ್ಲದೆ ಲೋಕದಲ್ಲಿ ಮನುಷ್ಯನು ತಾನು ಫಲಾಪೇಕ್ಷೆಯಿಂದ ನಡೆಸಬೇಕಾದಧರ್ಮವನ್ನು ಬಿಟ್ಟುನೀಲೆ,ಶ್ರೀಹರಿಯ ಪಾದಾರವಿಂದವನ್ನು ಸ್ಮರಿಸುವುದಕ್ಕ ಮೊದಲೇ ಮೃತಿಹೊಂದಿದರೂ ಅವನಿಗೆ ಅದರಿಂದಕೆಡುಕುಗಳೇನೂ ಉಂಟಾಗಲಾರದು. ಹರಿಚರಣಸ್ಮರಣೆಯೇ ಇಲ್ಲದೆ ತನ್ನಧರ್ಮಗಳನ್ನೇ ಚೆನ್ನಾಗಿ ನಡೆಸುತ್ತಿದ್ದವನಿಗೂಕೂಡ,ಯಾವ ವಿಧವಾದ ಶ್ರೇಯಸ್ಸೂ ಕೈಗೂಡದು.ಮೇಲಿನ ಬ್ರಹ್ಮಲೋಕಾದಿಗಳಲ್ಲಿಯೂ ಕೆಳಗೆಪಾತಾಳಲೋಕಾದಿಗಳಲ್ಲಿಯೂ ತೊಳಲುತ್ತಿರುವ ಜೀವಗಳಿಗೆ, ಪರಬ್ರಹ್ಮಾನಂದರೂಪವಾದ ಮೋಕ್ಷಸುಖವು ಭಗವದ್ಭಕ್ತಿಯಿಂದಹೊರತು ಬೇರೆ ಯಾವಉಪಾಯದಿಂದಲೂ ಲಭಿಸಲಾರದು. ಆದುದರಿಂದ ನಿಪುಣಬುದ್ಧಿಯುಳ್ಳವರು ಅಂತವರಿಗೆ ಆ ಶಾಶ್ವತಸುಖವನ್ನು ಪಡೆಯವುದಕ್ಕೆ ಬೇಕಾದ ಉಪಾಯವನ್ನು (ಭಕ್ತಿಯನ್ನು) ತಿಳಿಸುವುದಕ್ಕಾಗಿಯೇ ಪ್ರಯತ್ನಿಸಬೇಕು. ಇದೇ ಲೋಕೋಪಕಾರವಲ್ಲದೆ ಬೇರೆಯಲ್ಲವು. ವಿಷಯಸುಖಗಳನ್ನು ಯಾವ ಉಪಾಯಾಂತರದಿಂದಲಾದರೂ ಸಾಧಿಸಬಹುದು. ದುಃಖವೆಂಬುದನ್ನು ನಾವು ಕೋರದಿದ್ದರೂ ಅದು ಪೂರ್ವಕರ್ಮಗಳಿಂದ ತನಗೆ ತಾನೇಬಂದು ಸೇರುವುದು. ಹಾಗೆಯೇ ವಿಷಯಸುಖವೂಕೂಡ ಕರ್ಮಾಧೀನವಾಗಿ ಬಂದು ಸೇರುವುದು. ದುರ್ಲಕ್ಷ್ಯವಾದ ವೇಗವುಳ್ಳ ಕಾಲಗತಿಯಿಂದಲೂ,ಪ್ರಾಚೀನ ಕರ್ಮಗಳಿಂದಲೂ ಬದ್ಧರಾಗಿ ತೊಳಲುತ್ತಿರುವವರಿಗೆ, ಪ್ರಯತ್ನವಿಲ್ಲದೆಯೇ ಈ ವಿಷಯಸುಖಗಳು ಆವರಿಸಿಕೊಳ್ಳುವುವು. ಇವೆಲ್ಲವೂ ಕೇವಲದುಃಖಮಿಶ್ರವೇಹೊರತು ಬೇರೆಯಲ್ಲ. ಎಲೆ ಮುನೀಂದ್ರ ! ಶ್ರೀಹರಿಯಲ್ಲಿ ಪರಿಪಕ್ವವಾದ ಭಕ್ತಿಯುಳ್ಳವನು, ಯಾವಾಗಲೂ ಯಾವವಿಧದಿಂದಲೂ ಸಂಸಾರವೆಂಬ ಕಟ್ಟಿನಲ್ಲಿ ಸಿಕ್ಕಿಬೀಳಲಾರನು. ಎಂದಿದ್ದರೂ ಅದನ್ನು ತಪ್ಪದೆ ಬಿಡಿಸಿಕೊಳ್ಳಬಲ್ಲನು. ಏಕೆಂದರೆ, ಏಂದಾವರ್ತಿ ಶ್ರೀಹರಿಯ ಪಾದಾರವಿಂದಗಳನ್ನು ಸ್ಮರಿಸಿದ

ವನಿಗೆ,ಅದರ ರುಚಿಯು ಚೆನ್ನಾಗಿ ತಿಳಿದಿರುವುದರಿಂದ ಬೇರೊಂದೂಅವನಮನಸ್ಸಿಗೆ ರುಚಿಸದು.''ಹಾಗಿದ್ದರೆ ಈಗ ವರ್ಣಿಸಬೇಕಾದ ಭಗವಂತನ ಗುಣಗಳಾವುವು?"ಎಂದುಕೇಳುವೆಯಾ?ಕೊನೆಮೊದಲಿಲ್ಲದ ಅವೆಲ್ಲವನ್ನೂ ಹೇಳಿತಿಳಿಸಬೇಕೆಂದರೆ ನನ್ನಿಂದ ಸಾಧ್ಯವಿಲ್ಲ!ಒಂದೇಮಾತಿನಿಂದ ಹೇಳುವೆನುಕೇಳು!ಯಾವನಿಂದ ಜಗತ್ತಿನ ಸೃಷ್ಟಿಸ್ಥಿತಿಸಂಹಾರಗಳು ನಡೆಯುವುವೋ ಆ ಭಗವಂತನು ತಾನೇ ಈ ಜಗತ್ತಾಗಿರುವನು. ಹಾಗಿದ್ದರೂ ಅವನು ಈ ಪ್ರಪಂಚಗಳಿಗಿಂತ ವಿಲಕ್ಷಣನಾಗಿರುವನು. ಈ ತತ್ವವನ್ನು ನೀನೂ ಚೆನ್ನಾಗಿ ತಿಳಿದೇ ಇರುವೆ. ಹಾಗಿದ್ದರೂ ನನ್ನನ್ನು ನೀನು ಪ್ರಶ್ನೆಮಾಡಿದುದರಿಂದ ಅದರಲ್ಲಿ ಸ್ವಲ್ಪ ಮಾತ್ರವನ್ನು ತಿಳಿಸಿರುವೆನು. ಎಲೆ ಮಹಾತ್ಮ ! ನೀನಾದರೋ ಸಮಸ್ತ ವಸ್ತುಗಳ ತತ್ವವನ್ನೂ ಯಥಾಸ್ಥಿತವಾಗಿ ತಿಳಿದಿರತಕ್ಕವನು. ಆದುದರಿಂದ ಪರಮಪುರುಷನಾದ ಆ ಪರಮಾತ್ಮನ ಅಂಶವನ್ನು ನಿನ್ನಲ್ಲಿಯೇ ನೀನು ತಿಳಿದುಕೊಳ್ಳಬಹುದು.ಆ ಪರಮಾತ್ಮನಿಗೆ ಕರ್ಮಾಧೀನವಾದಉತ್ಪತ್ತಿಯಿಲ್ಲದಿದ್ದರೂ ಲೋಕಕ್ಷೇಮಾರ್ಥವಾಗಿ ಸ್ವೇಚ್ಛೆಯಿಂದಲೇ ಹುಟ್ಟುತ್ತಿರುವನು. ಆ ಮಹಾತ್ಮನ ಜನ್ಮಗಳನ್ನೂ, ಕರ್ಮಗಳನ್ನೂ, ಗುಣಗಳನ್ನೂ, ನೀನು ಪ್ರಬಂಧರೂಪವಾಗಿ ತಿಳಿಸು. ಈ ಕಾರ್ಯವನ್ನು ಮಾಡಿದಮೇಲೆಯೇ ಕೃತಕೃತ್ಯನೆನಿಸಿಕೊಳ್ಳುವೆ. ಆಗಲೇ ನಿನ್ನ ಮನಸ್ಸಿನಲ್ಲಿರುವ ಕೊರತೆಯು ಪೂರ್ಣವಾಗಿ ನೀಗುವುದು. ಲೋಕದಲ್ಲಿ ಮನುಷ್ಯನು ತನ್ನನ್ನು ಕೃತಾರ್ಥನನ್ನಾಗಿಮಾಡಿಕೊಳ್ಳಬೇಕೆಂದು ನಡೆಸತಕ್ಕ ಉಪವಾಸಾದಿವ್ರತಗಳೂ,ವೇದಾಧ್ಯಯನವೂ, ಯಜ್ಞಯಾಗಾದಿಗಳೂ, ಕೆರೆ, ಬಾವಿ, ಮುಂತಾದ ಧರ್ಮಕಾರ್ಯಗಳೂ, ಜ್ಞಾನ, ದಾನ, ಇವೇ ಮೊದಲಾದ ಸತ್ಕಾರ್ಯಗಳೆಲ್ಲಕ್ಕೂ ನಿರಪಾಯವಾದ ಫಲವು ಕೈಗೂಡಬೇಕಾದರೆ ಆ ಭಗವಂತನ ಗುಣಾನುವರ್ಣನವೇ ಮುಖ್ಯಸಹಕಾರಿಯೆಂದು ತತ್ವಜ್ಞಾನಿಗಳಾದ ಹಿರಿಯರು,ನಿರ್ಣಯಿಸಿರುವರು. ಇದರಲ್ಲಿ ರುಚಿಯನ್ನು ಹುಟ್ಟಿಸದ ಯಾವ ಸತ್ಕರ್ಮಗಳೂ ಉತ್ತಮಫಲವನ್ನು ಕೈಗೂಡಿಸಲಾರವು. ಇದಕ್ಕೆ ನಿದರ್ಶನವಾಗಿ ನನ್ನ ಪೂರ್ವವೃತ್ತಾಂತವನ್ನು ಹೇಳುವೆನು ಕೇಳು.

ನಾರದನು ತನ್ನಪೂರ್ವಜನ್ಮಚರಿತ್ರವನ್ನು ತಿಳಿಸಿದುದು.

ಎಲೈ ವ್ಯಾಸಮುನೀಂದ್ರಾ ! ನಾನು ನನ್ನಪೂರ್ವಜನ್ಮದಲ್ಲಿ ವೇದಾಧ್ಯಯನತೀಲರಾದ ಬ್ರಾಹ್ಮಣರ ಮನೆಯಲ್ಲಿ ಕೆಲಸಮಾಡುತಿದ್ದ ಒಬ್ಬ ದಾಸಿಯ ಪುತ್ರನಾಗಿ ಹುಟ್ಟಿದೆನು. ನಾನು ಅಲ್ಲಿಯೇ ಬೆಳೆಯುತ್ತಿರುವಾಗ ಒಮ್ಮೆ ಮಳೆಗಾಲವು ಸಮೀಪಿಸಿತು. ಕೆಲವುಸನ್ಯಾಸಿಗಳು ಚಾತುರ್ಮಾಸ್ಯದೀಕ್ಷೆಯನ್ನು ವಹಿಸಿ ಅಲ್ಲಿಂದಾಚೆಗೆ ನಾಲ್ಕುತಿಂಗಳವರೆಗೆ ಆ ವೇದವಾದಿಗಳ ಮನೆಯಲ್ಲಿಯೇ ಇರಬೇಕೆಂದೆಣಿಸಿ ಅಲ್ಲಿಗ ಬಂದು ಸೇರಿದರು. ಆಗ ನಾನು ಇನ್ನೂ ಬಹಳಬಾಲನಾಗಿದ್ದೆನು. ವೇದವಾದಿಗಳು ನನ್ನನ್ನು ಆ ಸನ್ಯಾಸಿಗಳಿಗೆ ಶುಶ್ರೂಷೆಯನ್ನು ಮಾಡವುದಕ್ಕಾಗಿ ನೇಮಿಸಿದರು. ಅಥಿತಿಗಳಾಗಿ ಬಂದ ಆ ಸನ್ಯಾಸಿಗಳಾದರೋ ಎಲ್ಲರನ್ನೂ ಸಮದೃಷ್ಟಿಯಿಂದ ನೋಡತಕ್ಕ ಸ್ವಭಾವವುಳ್ಳವರು. ಆದುದರಿಂದ ಅವರು ನನ್ನ ನಡತೆಯನ್ನು ನೋಡಿ ನನ್ನಲ್ಲಿಪ್ರೀತಿಯನ್ನು ತೋರಿಸುತಿದ್ದರು. ನಾನು ಇನ್ನೂ ಬಾಲ್ಯವಯಸ್ಸಿನವನಾದರೂ ಮನಶ್ಶಾಪಲ್ಯಗಳೆಲ್ಲವನ್ನೂ ಬಿಟ್ಟು, ಜಿತೇಂದ್ರಿಯನಾಗಿ, ಆಟಪಾಟಗಳಲ್ಲಿಯೂ ಆಕ್ಕರೆಯಿಲ್ಲದೆ, ಹೆಚ್ಚು ಮಾತುಗಳಿಗೆ ಹೋಗದೆ, ಅವರು ಹೇಳಿದ ಕಾರ್ಯಗಳನ್ನು ನಡೆಸುತ್ತ ಬಂದೆನು. ಅವರಿಗೆ ನನ್ನಲ್ಲಿಪೂರ್ಣಾನುಗ್ರಹವುಂಟಾಯಿತು. ನನ್ನನ್ನು ಬಹಳಪ್ರೀತಿಯಿಂದ ಕಾಣುತಿದ್ದರು. ಅವರೆಲ್ಲರೂ ಭೋಜನಮಾಡಿದಮೇಲೆ ಮಿಕ್ಕುದನ್ನು ನನಗೆ ಕೊಡುತಿದ್ದರು. ಅದನ್ನೇ ನಾನು ಎಷ್ಟೋ ಪ್ರೀತಿಯಿಂದ ಸ್ವೀಕರಿಸಿ, ಒಂದೇಅವರ್ತಿಭೋಜನವನ್ನು ಮಾಡುತ್ತ ಅವರ ಶುಶ್ರೂಷೆಯನ್ನು ಮಾಡುತಿದ್ದೆನು. ಆಮಹಾತ್ಮರು ತಿಂದುಳಿಸಿದ ಉಚ್ಛಿಷ್ಟಭೋಜನದಿಂದಲೇ ನನ್ನ ಪಾಪಗಳೆಲ್ಲವೂ ನೀಗಿದುವು. ನನ್ನ ಮನಸ್ಸು ಶುದ್ಧವಾಗುತ್ತ ಬಂದಿತು. ಭಗವದ್ಭಕ್ತಿಯೊಂದರಲ್ಲಿಯೇ ನನ್ನ ಮನಸ್ಸಿಗೆ ಅಭಿರುಚಿ ಹೆಚ್ಚುತ್ತ ಬಂದಿತು. ಇದಲ್ಲದೆ ಆ ಯೋಗಿಗಳು ಪ್ರತಿದಿನವೂ ಭಗವಂತನಾದ ಶ್ರೀಕೃಷ್ಣನ ಕಥೆಗಳನ್ನು ಗಾನಮಾಡುವಾಗ ನಾನೂ ಶ್ರದ್ಧೆಯಿಂದ ಕೇಳುತಿದ್ದೆನು. ಆ ಕಥೆಗಳೆಲ್ಲವೂ ನನಗೆ ಆ ಮಹಾತ್ಮರ ಅನುಗ್ರಹಬಲದಿಂದಲೇ ಕರ್ಣರಸಾಯನರೂಪಗಳಾಗಿ ಭಗವಂತನಲ್ಲಿ ಅನುರಾಗವನ್ನು ಹೆಚ್ಚಿಸುತ್ತಬಂದಿತು. ಈ ಅಭಿರುಚಿ ಹೆಚ್ಚಿದ

ಮೇಲೆ ನನ್ನ ಬುದ್ಧಿಯು ಆ ಪರಮಾತ್ಮನೊಬ್ಬನಲ್ಲಿಯೇ ಸ್ಥಿರವಾಗಿ ನೆಲೆಸಿತು. ಇದರಮೇಲೆ ಜೀವಸ್ವರೂಪವೇನೆಂಬುದು ವ್ಯಕ್ತವಾಯಿತು. ಚಕ್ರದಬಳೆಗೆ ಅರವೊ, ಅದಕ್ಕೆನಾಭಿಯೂ ಆಧಾರವಾದಂತೆ, ಕಾರ್ಯಕಾರಣಾತ್ಮಕವಾದಜಗತ್ತಿಗೆ ಈ ಜೀವಾತ್ಮನೂ ಆ ಜೀವಾತ್ಮನಿಗೆ ಪರಬ್ರಹ್ಮನೂ ಆಧಾರವಾಗಿರುವುದೆಂಬ ಜ್ಞಾನವು ಹುಟ್ಟಿತು. ಹೀಗೆ ಕಾರ್ಯಕಾರಣಾತ್ಮಕವಾದ ಜಗತ್ತನ್ನು ನಾನು ಧರಿಸಿರುವುದೂ ನನ್ನನ್ನು ಸಂಬಂಧಿಸಿದ ಪ್ರಕೃತಿಯಿಂದುಂಟಾದುದೇಹೊರತು ಸ್ವತಸ್ಸಿದ್ಧವಲ್ಲವೆಂಬುದನ್ನೂ ಕಂಡುಕೊಂಡೆನು. ಹೀಗೆ ವರ್ಷಾಕಾಲ ಶರತ್ಕಾಲಗಳೆಂಬ ನಾಲ್ಕುತಿಂಗಳು ಕಳೆಯುವವರೆಗೂನಾನು ಪ್ರತಿದಿನವೂ ಹರಿಕೀರ್ತನೆಯನ್ನು ಕೇಳುತ್ತಿರಲು,ಆಗ ನನ್ನಲ್ಲಿ ರಜಸ್ತಮೋಗುಣಗಳನ್ನು ನೀಗಿಸತಕ್ಕ ಭಕ್ತಿಯು ಸ್ಥಿರವಾಗಿ ನೆಲೆಗೊಂಡಿತು ನಾನು ಕೇವಲಬಾಲನಾಗಿದ್ದರೂ,ಈಭಕ್ತಿಯು ಹಟ್ಟಿದಮೇಲೆ ಬಹಳವಿನೀತನಾಗಿಯೂ,ಶ್ರದ್ಧೆಯುಳ್ಳವನಾಗಿಯೂ,ಜೀತೇಂದ್ರಿಯನಾಗಿಯೂ, ಆ ಸನ್ಯಾಸಿಗಳನ್ನನುವರ್ತಿಸುತಿಸ್ದೆನು.ನನ್ನ ಪಾಪಗಳೆಲ್ಲವೂನೀಗಿದುವು.ಆಯೋಗಿಗಳು ದಯಾಸ್ವಭಾವವುಳ್ಳವರಾದುದರಿಂದ,ಚಾತುರ್ಮಾಸ್ಯವನ್ನು ಮುಗಿಸಿಕೊಂಡು ಆಸ್ಥಳವನ್ನು ಬಿಟ್ಟುಹೋಗುವಾಗ,ಅನುಗ್ರಹಪೂರ್ವಕವಾಗಿ ನನ್ನನ್ನು ಕರೆದು, ಭಗವಂತನು ತಾನಾಗಿಯೇ ಉಪದೇಶಿಸಿದಅತಿರಹಸ್ಯವಾದ ಜ್ಞಾನವನ್ನು ನನಗೂಉಪದೇಶಿಸಿದರು.*ಆಜ್ಞಾನದಿಂದ ನಾನು ಸೃಷ್ಟಿಕರ್ತನಾದ ಭಗವಂತನತ್ರಿಗುಣಾತ್ಮಕವಾದ ಪ್ರಕೃತಿಮಹಿಮೆಯನ್ನು ತಿಳಿದುಕೊಂಡೆನು ಎಲ್ಲೈ ಮಹರ್ಷಿಯೆ! ಈ ವಿಧವಾದ ಜ್ಞಾನದಿಂದಲೇ ಜ್ಞಾನಿಗಳು ಭಗವತ್ಸಾನ್ನಿಧ್ಯವನ್ನು ಹೊಂದುವರು. ನನಗೆ ಆ ವಿಧವಾದ ಭಕ್ತಿಯು ಹುಟ್ಟುವುದಕ್ಕೆ ಹರಿಕೀರ್ತನಶ್ರವಣವೂ,ಆ ಮಹಾತ್ಮರ ಸೇವೆಯೂ ಕಾರಣಗಳಾದುವು. ಭಗವಂತನ ಗುಣಗಳನ್ನು ಕೇಳುವುದರಿಂದ ಭಕ್ತಿಯು ಹುಟ್ಟುವುದರಲ್ಲಿ ಯಾವ ಸಂದೇಹವೂ ಇಲ್ಲ.

* ಇಲ್ಲಿ ಅರ್ಥಪಂಚಕಜ್ಞಾನವೇ ಅವರಿಂದುಪದಿಷ್ಟವಾದ ಜ್ಞಾನವೆಂದು ಗ್ರಾಹ್ಯವು. ಮುಮುಕ್ಷುಗಳು ತಿಳಿಯಬೇಕಾದ ಸ್ವಸ್ವರೂಪ, ಪರಸ್ವರೂಪ, ಉಪಾಯಸ್ವರೂಪ, ವಿರೋಧಿಸ್ವರೂಪ, ಫಲಸ್ವರೂಪವೆಂಬಿವುಗಳ ಜ್ಞಾನವೇ ಅರ್ಥಪಂಚಕಜ್ಞಾನವು.

ಮುನೀಂದ್ರಾ! ನಿನಗೆ ಭಗವದ್ಭಕ್ತಿಯಿಂದುಂಟಾಗತಕ್ಕ ಲಾಭವು ತಿಳಿಯಿತಲ್ಲವೆ? ಈಶ್ವರಾರ್ಪಿತವಾಗಿ ಮಾಡಿದ ಕರ್ಮಗಳು ಭಕ್ತಿಯೋಗವನ್ನು ಹುಟ್ಟಿಸಿ, ಆ ಮೂಲಕವಾಗಿ ತಾಪತ್ರಯವಿನಿವೃತ್ತಿಗೆ ಕಾರಣವಾಗುವುದು. ಧರ್ಮಾರ್ಥ ಕಾಮಗಳನ್ನು ದ್ವೇಷಿಸಿ ಮಾಡಿದ ಕರ್ಮಗಳು ತಾಪತ್ರಯಹೇತುವಾದ ಸಂಸಾರವಲ್ಲದೆಯೇ ಸಿಕ್ಕುವು ನೆಂಬುದನ್ನು ತಿಳಿಸುವುದು. ಈ ಸಂಗತಿಯು ನಿನಗೆ ಮೊದಲೇ ತಿಳಿದಿರುವುದಲ್ಲವೆ? ಶ್ರುತಿ ಸ್ಮೃತಿ ಮೊದಲಾದುವೂಕೂಡ ಈ ಅರ್ಥವನ್ನೇ ಸೂಚಿಸುವುವು. ರೋಗಕಾರಣಗಳಾದ ವಸ್ತುಗಳನ್ನೇ ಔಷಧವೆಂದು ಕುಡಿಸಿದಮಾತ್ರಕ್ಕೆ ರೋಗಗಳು ಬಿಟ್ಟುಹೋಗುವುವೆ? ಎಂದಿಗೂ ಹೋಗಲಾರವು! ಅಪಥ್ಯವಸ್ತುಗಳು ರೋಗಕಾರಣಗಳಾಗುವಂತೆಯೇ, ಮನುಷ್ಯರ ಕರ್ಮಯೋಗಗಳು ಫಲೋದ್ದೇಶದಿಂದ ಕೂಡಿದುವಾಗಿದ್ದರೆ, ಅವು ಸಂಸಾರ ಹೇತುವಾಗದೆ ಬಿಡವು. ಮತ್ತು ಅವು ಭಗವದರ್ಪಿತಗಳಲ್ಲದಪಕ್ಷದಲ್ಲಿ ಆತ್ಮನಾಶಕ್ಕೂ ಕಾರಣಗಳಾಗುವುವು. ರೋಗಕಾರಣಗಳಾದ ದ್ರವ್ಯಗಳೇ ಬೇರೆ ಕೆಲವು ವಸ್ತುಗಳ ಸಂಬಂಧದಿಂದ ಔಷಧಸಮಾನಗಳಾಗಿ ರೋಗವನ್ನು ಶಮನ ಮಾಡುವುದಕ್ಕೆ ಸಮರ್ಥಗಳಾಗುವಂತೆ, ಈ ಧರ್ಮಾರ್ಥಕಾಮಸಾಧಕಗಳಾದ ಕರ್ಮಗಳೇ ಭಗವದರ್ಪಿತಗಳಾದಪಕ್ಷದಲ್ಲಿ ಸಂಸಾರವನ್ನು ನೀಗಿಸುವುವು. "ಹಾಗಿದ್ದರೆ ಭಗವದರ್ಪಿತಗಳಾದ ಕರ್ಮಗಳೆಲ್ಲವೂ ಸ್ವತಂತ್ರವಾಗಿಯೇ ಮೋಕ್ಷಪ್ರದವಾಗಬಾರದೆ? ಅವು ಭಕ್ತಿಯನ್ನು ಹುಟ್ಟಿಸಿ, ಆ ಮೂಲಕವಾಗಿಯೇ ಮೋಕ್ಷಪ್ರದವೆಂಬುದೇಕೆ?" ಎಂದರೆ, ಅದಕ್ಕೂ ಸಮಾಧಾನವನ್ನು ಹೇಳುವೆನು ಕೇಳು. ಮನುಷ್ಯನು ಮೃತಿಹೊಂದುವವರೆಗೂ ನಾವು ಭಗವಂತನಿಗೆ ಸಂತೋಷಕರವಾದ ಕರ್ಮಗಳನ್ನು ನಡೆಸುತ್ತಿರಬೇಕು. ಆಗ ಭಗವಂತನಿಗುಂಟಾದ ಆಸಂತೋಷವು, ಭಕ್ತಿಯೋಗಕ್ಕಿರತಕ್ಕ ಪ್ರತಿಬಂಧಕಗಳನ್ನು ನೀಗಿಸುವುದಕ್ಕೆ ಸಮರ್ಥಗಳಾಗುವುವು. ಆ ಪ್ರತಿಬಂಧಕಗಳು ನೀಗಿದಮೇಲೆ ಭಕ್ತಿಯು ಹುಟ್ಟುವುದು. ಕರ್ಮಗಳಿಗೂ, ಭಕ್ತಿಗೂ ಇರುವ ಸಂಬಂಧವು ಈ ರೀತಿಯಾದುದು. ಭಕ್ತಿಯೋಗವು ಸಹಕಾರಿಯಾಗದಿದ್ದಪಕ್ಷದಲ್ಲಿ ಮೋಕ್ಷವು ಲಭಿಸಲಾರದು. ಭಕ್ತಿಗೆ* ಭಗವದ್ವಚನಾನುಸಾರವಾಗಿ ಮಾಡುವ ವರ್ಣಾಶ್ರ

* ಇಲ್ಲಿ "ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಂ" ಎಂಬುದೇ ಭಗವದ್ವಚನವು.

ಮಾನುಗುಣ ಕರ್ಮಗಳುಮಾತ್ರವೇ ಸಾಧನವಲ್ಲ. ಅತನ ಗುಣಾನುಸ್ಮರಣ ಗಳೂ, ಅತನ ನಾಮಕೀರ್ತನವೂ ಸಹಕಾರಿಗಳಾಗುವುವು. ಇದಕ್ಕಾಗಿ ಜ್ಞಾ ನಿಗಳು ಈ ಕಾರ್ಯಗಳನ್ನು ಅನವರತವೂ ಶ್ರದ್ಧೆಯಿಂದ ನಡೆಸುತ್ತಿರುವರು. ಲೋಕದಲ್ಲಿ ಯಾವನು ಆ ಪರಮಾತ್ಮನನ್ನು ಧ್ಯೇತಿಸಿ ''ಓಂಕಾರಸ್ವರೂಪ ನಾದ ನಿನಗೆ ನಮಸ್ಕಾರವು ! ಷಡ್ಗುಣೈಶ್ವರ್ಯಸಂಪನ್ನನಾದ ನಿನಗೆ ನಮ ಸ್ಕಾರವು! ವಾಸುದೇವನಿಗೆ ನಮಸ್ಕಾರವು ! ಪ್ರದ್ಯುಮ್ನನಿಗೆ ನಮಸ್ಕಾರವು ! ಅನಿರುದ್ಧನಿಗೆ ನಮಸ್ಕಾರವು! ಸಂಕರ್ಷಣನಿಗೆ ನಮಸ್ಕಾರವು" ಎಂದು ಮಂ ತ್ರಶರೀರಕನಾಗಿಯೂ, ಯಾಗಾರಾಧ್ಯನಾಗಿಯೂ ಇರುವ ಪರಮಪುರುಷ ನನ್ನು ಧ್ಯಾನಿಸುತ್ತ, ಅತನ ದಿವ್ಯನಾಮಗಳನ್ನು ಬಾಯಿಂದ ನುಡಿದು, ಅತ ನನ್ನು ಭಕ್ತಿಯಿಂದ ಪೂಜಿಸುವನೋ, ಅತನೇ ಉತ್ತಮಜ್ಞಾನಿಯೆನಿಸುವನು. ಇದರಿಂದ ತೀರ್ಥಪ್ರದಲ್ಲಿಯೇ ಭಕ್ತಿಯೂ ಲಭ್ಯವಾಗುವುದು. ವ್ಯಾಸಮುನೀಂ ದ್ರಾ! ನಾನೂ ಇದೇರೀತಿಯಲ್ಲಿ ಆ ಭಗವಜ್ಜ್ಞಾನವನ್ನು ತಪ್ಪದೆ ಅನುಷ್ಠಿಸಿ ದನ್ನು ನೋಡಿ, ಶ್ರೀವಾಸುದೇವನು ಪ್ರಸನ್ನನಾಗಿ, ನನಗೆ ಆ ಪಥವಾದ ಭಕ್ತಿಯೋಗವನ್ನೂ,ಜ್ಞಾನವನ್ನೂ, ದೇವಋಷಿಯೆನಿಸಿಕೊಳ್ಳುವುದಕ್ಕೆ ತಕ್ಕ ಸಾಮರ್ಥ್ಯವನ್ನೂ ಅನುಗ್ರಹಿಸಿದನು. ಎಲ್ಲೆ ಕೀರ್ತಿಮಂತನೆ! ಈಗಲೂ ನೀನು ಆ ಭಗವಂತನ ಪುಣ್ಯಚರಿತ್ರವನ್ನೇ ಪ್ರಬಂಧರೂಪವಾಗಿ ರಚಿಸಿ, ಅವರಲ್ಲಿ ಜನರಿಗೆ ಪರಮಾತ್ಮವಿಷಯವಾಗಿ ತಿಳಿಸಬೇಕಾದ ವಿಷಯಗಳಲ್ಲಿ ಯಾವುದ ನ್ನೂ ಬಿಡದೆ ಸಂಪೂರ್ಣವಾಗಿ ತಿಳಿಸು. ತಾಪತ್ರಯದಲ್ಲಿ ಸಿಕ್ಕಿ ನರಳುವವರಿಗೆ ಆ ಕಷ್ಟಗಳನ್ನು ನೀಗಿಸಿ ಸಂತೋಷವು ಹುಟ್ಟುವಂತೆ ಮಾಡು. ಬೇರೆ ಯಾವ ಉಪಾಯದಿಂದಲೂ ಇದು ಸಾಧ್ಯವಲ್ಲ. ನೀನು ರಚಿಸತಕ್ಕ ಗ್ರಂಥವು ಎಲ್ಲ ರಿಗೂ ಆದರವನ್ನು ಹುಟ್ಟಿಸುವಂತಿರಬೇಕು. ಅಂತಹ ಪ್ರಬಂಧವನ್ನು ರಚಿ ಸು!" ಎಂದನು. ಇಲ್ಲಿಗೆ ಐದನೆಯ ಅಧ್ಯಾಯವು.

ನಾರದನು ತಾನು ವನಪ್ರವೇಶಮಾಡಿದುದನ್ನೂ,
ತನಗೆ ಶ್ರೀಮನ್ನಾರಾಯಣನು ಪ್ರತ್ಯಕ್ಷನಾದುದನ್ನೂ
ವ್ಯಾಸನಿಗೆ ತಿಳಿಸಿ, ಅವನ ಅನುಮತಿಯನ್ನು ಪಡೆದು
ಹಿಂತಿರುಗಿ ಹೋದುದುದು.

ನಾರದನು ತನ್ನ ಪೂರ್ವಜನ್ಮದ ವೃತಾಂತವನ್ನು ಹೇಳಿದಮೇಲೆ, ತಿರುಗಿ ವ್ಯಾಸನು, ಅವನನ್ನು ಕುರಿತು, "ಓ ಮುನೀಂದ್ರಾ! ನಿನಗೆ ಜ್ಞಾನೋಪದೇಶವನ್ನು ಮಾಡಿದ ಸನ್ಯಾಸಿಗಳು ನಿನ್ನನ್ನು ಬಿಟ್ಟುಹೋಗುವಾಗ, ನೀನು ಇನ್ನೂ ಬಹಳ ಸಣ್ಣವನಿನವನಾಗಿದ್ದೆಯಲ್ಲವೆ? ಆಮೇಲೆ ನೀನೇನುಮಾಡಿದೆ? ಅವರು ಹೊರಟು ಹೋದಮಂಲಾಗೆಗೆ, ನೀನು ಹೇಗೆ ಕಾಲವನ್ನು ಕಳೆಯುತಿದ್ದೆ? ಅವನ್ನು ಕಾಲದಲ್ಲಿ ಆ ಪೂರ್ವಶರೀರವನ್ನು ಯಾವರೀತಿಯಲ್ಲಿ ತ್ಯಜಿಸಿದೆ?

ಪೂರ್ವಜನ್ಮದ ವೃತಾಂತವನ್ನು ಇನ್ನೂ ನೀನು ಮರೆಯದಿರುವುದು ಹೇಗೆ? ಕಾಲದಲ್ಲಿ ಇವೆಲ್ಲವೂ ನಾಶವಾಗುತ್ತಿರಬೇಕಲ್ಲವೆ? ಅಂತಹ ಕಾಲವೂ ಕೂಡ ನಿನ್ನ ಪೂರ್ವಜನ್ಮದ ಜ್ಞಾನಶಕ್ತಿಯನ್ನು ಕೆಡಿಸದಿರುವುದು ಹೇಗೆ?" ಎಂದನು. ಅದಕ್ಕಾಗಿ ನಾರದನು "ವ್ಯಾಸಮುನೀಂದ್ರಾ! ಅದರಂತಾಗಿಲ್ಲ. ನಾನು ನಡೆಸಿದ ಕಾರ್ಯವನ್ನು ಹೇಳುವೆನು ಕೇಳು. ನನ್ನ ತಾಯಿಗೆ ನಾನೊಬ್ಬನೇ ಮಗನು. ಆಕೆಯು ಸ್ತ್ರೀಸ್ವಭಾವಕ್ಕೆ ತಕ್ಕಂತೆ ಏನೂ ತಿಳಿಯದವಳಲ್ಲ. ಮತ್ತೊಬ್ಬರ ಮನೆಯಲ್ಲಿ ಕೆಲಸಕ್ಕೆ ಸೇರಿ ಪರಾಧೀನಳಾಗಿದ್ದರೂ, ಬೇರೆ ಯಾರೂ ಏಕ್ಕಿಲ್ಲದ ನನ್ನನ್ನು ಬಹಳ ಪ್ರೇಮದಿಂದ ಕಾಣುತಿದ್ದಳು. ಹೀಗಿರಲಾಗಿ ಆಕೆಯು ನನ್ನ ಯೋಗಕ್ಷೇಮವನ್ನು ನೋಡಿಕೊಳ್ಳುವುದರಲ್ಲಿ ಅತ್ಯಾತುರಳಾಗಿದ್ದುದರಿಂದ, ತಾನು ಕೇವಲಪರಾಧೀನೆಯಾಗಿ, ಸ್ವಲ್ಪವೂ ಸ್ವಾತಂತ್ರ್ಯವಿಲ್ಲದೆ ಮನೆಯ ಬೊಂಬೆಯಂತೆ ಯಜಮಾನನು ಆಡಿಸಿದಹಾಗೆ ಆಡಬೇಕಾಗಿದ್ದುದರಿಂದ, ನನ್ನ ಪೋಷಣೆಯನ್ನು ಸರಿಯಾಗಿ ನಡೆಸುವುದಕ್ಕೂ ಅವಳಿಗೆ ಅವಕಾಶವಿರಲಿಲ್ಲ. ಆಗ ನಾನು ಐದುವಯಸ್ಸಿನ ಬಾಲನಾಗಿದ್ದೆನು. ಅಷ್ಟುಸಣ್ಣವಯಸ್ಸಿನವನಾದುದರಿಂದ ಕಾಲದೇಶಸ್ವಭಾವಗಳನ್ನು ತಿಳಿದುಕೊಳ್ಳುವಷ್ಟು ಜ್ಞಾನವೂ ನನಗೆಹುಟ್ಟಿರಲಿಲ್ಲ. ಈ ಕಾರಣದಿಂದಲೂ, ಸಾಕಿದ ತಾಯಿಯನ್ನು ಬಿಟ್ಟುಹೋಗುವುದು ಯುಕ್ತವಲ್ಲವೆಂದು ನನಗೆ ತೋರಿದುದರಿಂದಲೂ, ನಾನು ಬೇರೊಂದು

ಸ್ಥಳಕ್ಕೂ ಹೋಗದೆ, ಆ ನನ್ನ ತಾಯಿಯ ದೇಹಾವಸಾನವನ್ನು ನಿರೀಕ್ಷಿಸುತ್ತ, ಆ ಬ್ರಾಹ್ಮಣರ ಮನೆಯಲ್ಲಿಯೇ ವಾಸಮಾಡುತಿದ್ದೆನು. ಹೀಗಿರುವಲ್ಲಿ ಒಂದಾನೊಂದುರಾತ್ರಿ ನನ್ನ ತಾಯಿಯು ಆ ಬ್ರಾಹ್ಮಣನ ಮನೆಯ ಗೋವುಗಳನ್ನು ಹಾಲುಕರೆಯುವುದಕ್ಕಾಗಿ ಹೊರಬಂದಾಗ, ಅಕಸ್ಮಾತ್ತಾಗಿ ಒಂದು ಸರ್ಪವನ್ನು ತುಳಿದುಬಿಟ್ಟಳು. ಕಾಲಚೋದಿತವಾಗಿ ಬಂದ ಆ ಸರ್ಪವು ಅವಳ ಕಾಲನ್ನು ಕಚ್ಚಿಬಿಟ್ಟಿತು. ಒಡನೆಯೇ ವಿಷವೇರಿ ನನ್ನ ತಾಯಿಯು ಪ್ರಾಣವನ್ನು ಬಿಟ್ಟಳು. ಇದನ್ನು ನೋಡಿಯೂ ನನಗೆ ಸ್ವಲ್ಪವೂ ವ್ಯಸನವು ಹುಟ್ಟಲಿಲ್ಲ. ಮಾತೃಮರಣವನ್ನೇ ಭಗವದನುಗ್ರಹವೆಂದೆಣಿಸಿ, ಆ ಕ್ಷಣವೇ ಆ ಸ್ಥಳವನ್ನು ಬಿಟ್ಟು ಉತ್ತರದಿಕ್ಕಿನ ಕಡೆಗೆ ಹೊರಟೆನು. ದಾರಿಯಲ್ಲಿ ಸಸ್ಯಸಮೃದ್ಧಗಳಾದ ಅನೇಕ ದೇಶಗಳನ್ನೂ, ಅಂದವಾದ ಪಟ್ಟಣಗಳನ್ನೂ, ಗ್ರಾಮಗಳನ್ನೂ, ಹಳ್ಳಿಗಳನ್ನೂ, ರತ್ನಪೂರ್ಣಗಳಾದ ಗಣಿಗಳನ್ನೂ, ಪೈರಿಡತಕ್ಕವರಿಗೆ ವಾಸಸ್ಥಾನಗಳಾದ ಪ್ರದೇಶಗಳನ್ನೂ, ಬೇಡರ ಗುಡಿಸಲುಗಳನ್ನೂ, ಹೂತೋಟಗಳನ್ನೂ, ಅಂದವಾದ ಅರಣ್ಯಗಳನ್ನೂ ನೋಡುತ್ತ ಬಂದೆನು. ಗೈರಿಕಾದಿ ಧಾತುಗಳಿಂದಲೂ, ಕಾಡಾನೆಗಳು ಮುರಿದು ಕೆಡಹಿದ ವೃಕ್ಷಗಳಿಂದಲೂ ಒಪ್ಪುವ ಪರ್ವತಗಳನ್ನೂ, ತಿಳಿನೀರಿನಿಂದಲೂ, ತಾವರೆ ಮೊದಲಾದ ನೀರು ಹೂಗಳಿಂದಲೂ ಶೋಭಿತವಾಗಿ, ದೇವತೆಗಳಿಗೆ ಕ್ರೀಡಾಸ್ಥಾನವೆನಿಸಿಕೊಂಡು, ವಿಚಿತ್ರಧ್ವನಿಗಳುಳ್ಳ ಪಕ್ಷಿಗಳಿಂದಲೂ, ಮೇಲೆ ಸುತ್ತುತ್ತಿರುವ ಭ್ರಮರಸಮೂಹಗಳಿಂದಲೂ, ಮನೋಹರಗಳಾದ ಸರೋವರಗಳನ್ನೂ ನೋಡಿದೆನು. ನಾನು ಹೀಗೆ ಏಕಾಕಿಯಾಗಿ ಬರುತ್ತಿರುವಾಗ, ಪೊದೆಗಳಿಂದಲೂ, ಬಿದಿರುಮೆಳೆಗಳಿಂದಲೂ, ದರ್ಭೆ ಮೊದಲಾದ ತೃಣವಿಶೇಷಗಳಿಂದಲೂ, ಕೀಚಕಗಳೆಂಬ ಬಿದಿರುಗಳಿಂದಲೂ ದಟ್ಟವಾಗಿ ತುಂಬಿದ ಒಂದು ಮಹಾರಣ್ಯವನ್ನು ಕಂಡೆನು. ನೋಡುವಾಗಲೇ ಭಯವನ್ನು ಹುಟ್ಟಿಸುವಂತೆ ಆ ಅಡವಿಯು ಅತ್ಯಂತದುರ್ಗಮವಾಗಿದ್ದಿತು. ಕ್ರೂರಸರ್ಪಗಳೂ, ಗೂಬೆ, ನರಿಗಳೂ, ನಾನಾಮುಖವಾಗಿ ಸುತ್ತುತಿದ್ದುವು. ಹೀಗೆ ಅತ್ಯಂತಭಯಂಕರವಾದ ಆ ಕಾಡನ್ನು ಪ್ರವೇತಿಸಿ, ಅಲ್ಲಿ ಸ್ವಲ್ಪದೂರದವರೆಗೆ ಹೋಗುವುದರೊಳಗಾಗಿ, ಮಾರ್ಗಾಯಾಸದಿಂದ ಬಹಳವಾಗಿ ಬಳಲಿಹೋದೆನು.

ನನ್ನ ಇಂದ್ರಿಯಗಳೇ ನನಗೆ ಸ್ವಾಧೀನತಪ್ಪಿದುವು. ಹಸಿವುಬಾಯಾರಿಕೆಗಳು ಮೇಲೆಮೇಲೆ ಹೆಚ್ಚಿದುವು. ಮುಂದೆ ದಾರಿನಡೆಯುವುದಕ್ಕೂ ಸಾಧ್ಯವಿಲ್ಲದೆ ಹೋಯಿತು. ಸಮೀಪದಲ್ಲಿದ್ದ ಒಂದು ನದಿಯಲ್ಲಿಳಿದು ಸ್ನಾನಮಾಡಿ ಸ್ವಲ್ಪ ಹೊತ್ತಿನವರೆಗೆ ವಿಶ್ರಾಂತಿಯನ್ನು ತೆಗೆದುಕೊಂಡೆನು. ದಾಹವಾರುವವರೆಗೆ ನೀರನ್ನು ಕುಡಿದು ಬಾಯಾರಿಕೆಯನ್ನೂ ತೀರಿಸಿಕೊಂಡೆನು. ಆ ಜಲಪಾನದಿಂದ ನನ್ನ ಹಸಿವೂ ಸಲ್ಪಮಟ್ಟಿಗೆ ಅಡಗಿತು. ಅಲ್ಲಿಂದೆದ್ದು ಮುಂದೆ ಹೋಗುವಷ್ಟರಲ್ಲಿ, ನಿರ್ಮಾನುಷ್ಯವಾದ ಈ ಮಹಾರಣ್ಯದನಡುವೆ, ಒಂದು ಅಶ್ವತ್ಥವೃಕ್ಷದ ಕೆಳಗೆ ಬಂದು ಸೇರಿ, ಸನ್ಯಾಸಿಗಳ ಉಪದೇಶಕ್ರಮವನ್ನನುಸರಿಸಿ ಜೀವಾತ್ಮನಲ್ಲಿ ಅಂತರಾತ್ಮನಾದ ಪರಮಾತ್ಮನನ್ನು ಮನಸ್ಸಿನಿಂದಲೇ ಧ್ಯಾನಿಸಲಾರಂಭಿಸಿದೆನು. ಹೀಗೆ ನಾನು ಅಭ್ಯಾಸಬಲದಿಂದ ಸ್ವಾಧೀನಪಡಿಸಿಕೊಂಡ ನನ್ನ ಮನಸ್ಸಿನಿಂದ ಭಗವಂತನ ಚರಣಾರವಿಂದಗಳನ್ನು ಧ್ಯಾನಿಸುತ್ತಿರುವಾಗ, ಭಕ್ತಿಪಾರವಶ್ಯದಿಂದ ನನ್ನ ಕಣ್ಣುಗಳಲ್ಲಿ ಆನಂದಬಾಷ್ಪಗಳು ತುಳುಕಿದುವು. ಮೈಯೆಲ್ಲವೆಲ್ಲಗೆ ರೋಮಾಂಚನವಾಯಿತು. ಆ ಭಗವಂತನಲ್ಲಿರುವ ಪ್ರೇಮಾತಿಶಯದಿಂದ ನನ್ನ ದೇಹವು ಪುಳಕಿತವಾಯಿತು. ಆನಂದರಸಪ್ರವಾಹದಲ್ಲಿ ಮುಳುಗಿ ತೇಲಾಡುತ್ತಿರಲು ಮುನೀಂದ್ರನೆ! ಆ ಸಮಯದಲ್ಲಿ ನನ್ನ ದೇಹವನ್ನೂ, ಅನ್ಯವಸ್ತುಪ್ರಪಂಚವನ್ನೇ ಮರೆತುಬಿಟ್ಟೆನು. ಇಷ್ಟರಲ್ಲಿಯೇ ನನಗೆ ಮೊದಲು ಗೋಚರವಾಗದ ಆ ಭಗವಂತನ ದಿವ್ಯರೂಪವು ಅದೃಶ್ಯವಾಯಿತು. ಅತಿಮನೋಹರವಾಗಿರುವ ಸಮಸ್ತಾವಯವಗಳನ್ನೂ ನೇಗಿಲತಕ್ಕುಪಾಗಿಯೂ ಇದ್ದ ಆ ದಿವ್ಯರೂಪವನ್ನು ತಿರುಗಿ ನೋಡಬೇಕೆಂದು ಎಷ್ಟೋಪಿಥದಿಂದ ಪ್ರಯತ್ನಿಸಿದರೂ, ನನಗೆ ಸಾಧ್ಯವಿಲ್ಲದೆಹೋಯಿತು. ಮನಸ್ಸು ದುಃಖದಿಂದ ತತ್ತಳಿಸಿತು. ಆ ದುಃಖದಿಂದ ಮೈಮರೆತು ಧಟ್ಟನೆ ಮೇಲೆದ್ದು ನಿಂತೆನು. ಹೇಗಾದರೂ ಆ ದಿವ್ಯರೂಪವನ್ನು ಮತ್ತೊಮ್ಮೆನೋಡಬೇಕೆಂಬ ಕುತೂಹಲದಿಂದ ತತ್ತಳಿಸುತ್ತ, ಮನಸ್ಸನ್ನು ಹೃದಯಕಮಲದಲ್ಲಿ ಸ್ಥಿರವಾಗಿ ನೆಲೆಗೊಳಿಸಿ ಧ್ಯಾನಿಸಿದೆನು. ಆದರೂ ಆ ರೂಪವು ತಿರುಗಿ ನನಗೆ ಗೋಚರಿಸಲಿಲ್ಲ. ವಿಷಯಾತುರನಾದ ಮನುಷ್ಯನಂತೆ ಮನಸ್ಸಿಗೆ ನೆಮ್ಮದಿಯಿಲ್ಲದೆ ಕುದಿಯುತಿದ್ದೆನು. ಹೀಗೆ ನಿರ್ಮಾನುಷವಾದ ಆ ಅಡವಿಯಲ್ಲಿ

ಭಗವಂತನನ್ನು ಸಾಕ್ಷಾತ್ಕರಿಸುವುದಕ್ಕಾಗಿ ನಾನು ಬಾರಿಬಾರಿಗೂ ಅನೇಕಪ್ರಯತ್ನಗಳನ್ನು ಮಾಡುತ್ತಿರುವಾಗಲೇ, ವೇದವಾಕ್ಯುಗಳಿಗೂ ಅಗೋಚರನಾದ ಭಗವಂತನು, ಆಕಾಶಮಾರ್ಗದಿಂದ ಗಂಭೀರವಾಗಿಯೂ, ಇಂಪಾಗಿಯೂ ಇರುವ ಮಾತಿನಿಂದ ನನ್ನ ದುಃಖವೆಲ್ಲವನ್ನೂ ನೀಗಿಸುವಂತೆ ಹೀಗೆಂದುಹೇಳಿದನು, ‘‘ನಾರದಾ ! ನೀನು ಎಷ್ಟೆಷ್ಟುಪ್ರಯತ್ನಗಳನ್ನು ಮಾಡಿದರೂ, ಈ ಜನ್ಮದಲ್ಲಿ ನನ್ನನ್ನು ನೋಡುವುದಕ್ಕೆ ಶಕ್ತನಾಗಲಾರ! ನನ್ನ ದರ್ಶನಕ್ಕೆ ಪ್ರತಿಬಂಧಕಗಳಾದ ಪುಣ್ಯಪಾಪಕರ್ಮಗಳೆಂಬ ಕಟ್ಟಿನಲ್ಲಿ ಸಿಕ್ಕಿಬಿದ್ದವರಿಗೆ, ನಾನು ಗೋಚರಿಸಲಾರೆನು ಅಂತಹ ಕುತ್ಸಿತಯೋಗಿಗಳಲ್ಲಿ ನೀನೂ ಒಬ್ಬನಾಗಿರುವೆ. ನಾರದಾ! ಹಾಗಿದ್ದರೂ ಆರಂಭದಲ್ಲಿ ನಿನಗೆ ನಾನು ಒಂದಾವರ್ತಿ ಕಾಣಿಸಿಕೊಂಡುದಕ್ಕೆ ಕಾರಣವನ್ನು ಹೇಳುವೆನು ಕೇಳು? ಒಂದಾವರ್ತಿ ನನ್ನನ್ನು ಸಾಕ್ಷಾತ್ಕರಿಸಿದ ಮನುಷ್ಯನು, ನನ್ನ ರೂಪವನ್ನು ಎಂದಿಗೂ ಮರೆಯಲಾರನು ಯಾವಾಗಲೂ ನನ್ನನ್ನು ನೋಡುತ್ತಿರಬೇಕೆಂದೇ ಅಪೇಕ್ಷಿಸುವನು. ನನ್ನ ದರ್ಶನವನ್ನಪೇಕ್ಷಿಸುವವನು, ಸತ್ಪ್ರವರ್ತನವುಳ್ಳವನಾಗಿ, ಮೆಲ್ಲಮೆಲ್ಲಗೆ ತನ್ನ ಹೃದಯದಲ್ಲಿರುವ ರಾಗದ್ವೇಷಾದಿಗಳೆಲ್ಲವನ್ನೂ ನೀಗಿಸಿಕೊಳ್ಳಬಲ್ಲನು. ನೀನು ಹಿಂದೆ ಸ್ವಲ್ಪಕಾಲದವರೆಗೆ ಆ ಮಹಾತ್ಮರ ಸೇವೆಯಿಂದಲ್ಲದೆ ಬೇರೆಯಿಂದಲೇ ನಿನಗೆ ನನ್ನಲ್ಲಿಸ್ಥಿರವಾದ ಬುದ್ಧಿಯು ಹುಟ್ಟಿತು? ಆಗಲೂ ನೀನು ನೀಚವಾದ ಈ ಶೂದ್ರದೇಹವನ್ನು ತ್ಯಜಿಸಿದಮೇಲೆ, ಕಲ್ಪಾಂತರದಲ್ಲಿ ನನ್ನ ಭಕ್ತನಾಗುವೆ ನನ್ನ ಅನುಗ್ರಹಬಲದಿಂದಲೇ ನಿನಗೆ ನನ್ನಲ್ಲಿ ಸ್ಥಿರವಾಗಿರುವ ಈ ಬುದ್ಧಿಯು ಎಂದೆಂದಿಗೂ ಕದಲದು. ಪ್ರಳಯದಲ್ಲಿಯಾದರೂ ನಿನಗೆ ನನ್ನ ಸ್ಮರಣೆಯು ಬಿಟ್ಟುಹೋಗದು” ಎಂದನು. ಕರ್ಮಕೃತವಾದ ದೇಹವಿಲ್ಲದವನಾಗಿಯೂ, *ಆಕಾಶಶರೀರಿಯಾಗಿಯೂ, ಸರ್ವನಿಯಾಮಕನಾಗಿಯೂ, ಸರ್ವಾಂತರ್ಯಾಮಿಯಾಗಿಯೂ, ಸರ್ವೇಶ್ವರನಾಗಿಯೂ, ಸರ್ವಸ್ವತಂತ್ರನಾಗಿಯೂ ಇರುವ ಆಪರಮಾತ್ಮನು, ಈ ಮಾತುಗಳನ್ನು ಹೇಳಿಸುಮ್ಮನಾದಮೇಲೆ, ಆತನ ಕೃಪಾಪಾತ್ರನಾದನಾನು, ಹಾಗೆಯೇ ತಲೆಬಗ್ಗಿನಮಸ್ಕರಿಸಿ, ಅಲ್ಲಿಂದ ಹಿಂತಿರುಗಿದೆನು. ಹೋದಕಡೆಗಳ

* ಇಲ್ಲಿ “ಆಕಾಶಶರೀರಂ ಬ್ರಹ್ಮ” ಎಂದು ಶ್ರುತಿಯು. ಭಗವಂತನು ಆಕಾಶದಂತೆ ಸರ್ವವ್ಯಾಪಿಯಾಗಿ ಅಗೋಚರನಾಗಿರುವನೆಂದರ್ಥವು.

ಲ್ಲೆಲ್ಲಾನಿರ್ಲಜ್ಜನಾಗಿ ಅಭಗವಂತನ ನಾಮಗಳನ್ನು ಕೀರ್ತಿಸುತ್ತ, ಸಮಸ್ತಜ
ಗತ್ತಿಗೂ ಮಂಗಳಕರವಾಗಿಯೂ, ವೇದರಹಸ್ಯವಾಗಿಯೂ ಇರುವ ಭಗವದವ
ತಾರಗಳನ್ನೂ; ಆತನ ವ್ಯಾಪಾರಗಳನ್ನೂ ಎಡೆಬಿಡದೆ ಸ್ಮರಿಸುತ್ತ, ಭೂಮಿ
ಯೆಲ್ಲವನ್ನೂ ಸುತ್ತುತಿದ್ದನು. ಇದರಿಂದ ನಾನು ನಿತ್ಯಸಂತೋಷಿಯಾಗಿ,
ವಿಷಯಾಭಿಲಾಷೆಯನ್ನು ಬಿಟ್ಟು, ಮದಮಾತ್ಸರ್ಯಗಳನ್ನೂ ಅಡಗಿಸಿ, ದೇಹಾ
ವಸಾನವನ್ನೇ ನಿರೀಕ್ಷಿಸುತ್ತ ಕಲ್ಪಾಂತರದವರೆಗೆ ಕಾಯುತ್ತಿದ್ದೆನು. ಓ ಮುನೀಂ
ದ್ರಾ! ಹೀಗೆ ಶ್ರೀಕೃಷ್ಣಪರಮಾತ್ಮನೊಬ್ಬನಲ್ಲಿಯೇ ಬುದ್ಧಿಯನ್ನು ನಿಲ್ಲಿಸಿ
ವಿಷಯಾಭಿಲಾಷೆಯನ್ನು ಬಿಟ್ಟು, ನಿಷ್ಕಳಂಕವಾದ ಮನಸ್ಸುಳ್ಳವನಾದ ನನಗೆ,
ಸ್ವಾರಬ್ಧಕರ್ಮವು ಮುಗಿಯುವ ಕಾಲವು ಸಮೀಪಿಸಿತು. ಮಿಂಚಿನಂತೆ ಮ
ರಣಕಾಲವು ತಲೆದೋರಿತು. ಸಮಸ್ತಜೀವಜಾತಿಗಳಲಯಕ್ಕೆ ಸ್ಥಾನವಾಗಿಯೂ
ಅವ್ಯಾಕೃತವಾಗಿಯೂ ಇರುವ ಅನಿರುದ್ಧರೂಪಿಯಾದ ಭಗವಂತನ ಶರೀ
ರದಲ್ಲಿ ಲಯಹೊಂದುವುದಕ್ಕೆ ನಾನು ಪ್ರಯತ್ನಿಸುತಿದ್ದಾಗ, ನನ್ನ ಪ್ರಾರಬ್ಧ
ವನ್ನು ಕೊನೆಗಾಣಿಸತಕ್ಕಮೃತ್ಯುವು ಬಂದೊದಗಿತು. ಪಂಚಭೂತಾತ್ಮ
ಕವಾದ ಆ ನನ್ನ ದೇಹವು ನಾಶಹೊಂದಿತು. ಭಗವಂತನು ಆ ಕಲ್ಪದ
ಕೊನೆಗೆ ಜಗತ್ತೆಲ್ಲವನ್ನೂ ತನ್ನಲ್ಲಿ ಲೀನವಾಗಿ ಮಾಡಿಕೊಂಡು, ಸಮುದ್ರಜಲ
ದಲ್ಲಿ ಶಯನಿಸಿದನು. ಆ ಸಮಯದಲ್ಲಿ ಚತುರ್ಮುಖಬ್ರಹ್ಮನು ಆ ಭಗವಂತನ
ನಾಭಿಕಮಲದಲ್ಲಿ ಮಲಗಬೇಕೆಂದೆಣಿಸಿದ್ದಾಗ, ನಾನೂ ಆತನ ಪ್ರಾಣಗಳಲ್ಲಿ
ಸೇರಿಕೊಂಡಪ್ಪೆನು: ಹೀಗೆಯೇ ಸಹಸ್ರಯುಗಗಳು ಕಳೆದುಹೋದುವು. ಆಮೇ
ಲೆ ಬ್ರಹ್ಮನು, ನಾಭಿಕಮಲದಿಂದೆದ್ದು, ಸೃಷ್ಟ್ಯಾತ್ಮಕವಾದ ಈ ಪ್ರಪಂಚವ
ನ್ನು ಸೃಷ್ಟಿಸುವುದಕ್ಕೆ ಉದ್ಯೋಗಿಸುತಿದ್ದನು. ಆ ಸಮಯದಲ್ಲಿಯೇ ಚತುರ್ಮು
ಖಬ್ರಹ್ಮನ ಪಾದದಿಂದ ನಾನೂ, ಮರೀಚಿವಸಿಷ್ಠಾದಿಮಹರ್ಷಿಗಳೂ ಹು
ಟ್ಟಿದೆವು. ವ್ಯಾಸಮುನೀಂದ್ರಾ! ಅದರಿಂದೀಚೆಗೆ ಆ ಭಗವದನುಗ್ರಹದಿಂದಲೇ
ನಾನು ಸಮಸ್ತಲೋಕಗಳಲ್ಲಿಯೂ ನಿರಂಕುಶವಾದ ಗಮನವುಳ್ಳವನಾಗಿ, ಅ
ಖಂಡಬ್ರಹ್ಮಚರ್ಯವ್ರತವನ್ನು ಸಲಿಸುತ್ತ, ಮೂರುಲೋಕಗಳ ಅಂತರ್ಬಹಿಃ
ಪ್ರದೇಶಗಳೆಲ್ಲವನ್ನೂ ಸುತ್ತುತ್ತಿರುವೆನು. ಪೂರ್ವದಲ್ಲಿ ಬ್ರಹ್ಮನು ನನಗೆ ಇ
ದೊಂದು ವೀಣೆಯನ್ನು ಕೊಟ್ಟನು. ಈ ನನ್ನ ವೀಣೆಯು ನಿಷಾದವೇ ಮೊದಲಾ

ದ ಸಪ್ತಸ್ವರಗಳೆಂಬ ಶಬ್ದಬ್ರಹ್ಮದಿಂದಲಂಕೃತವಾಗಿರುವುದು. ಈವೀಣೆಯನ್ನು ನಾನು ಯಾವಾಗಲೂ ಹೀಗೆಯೇ ಕೈಯಲ್ಲಿ ಹಿಡಿದು ನುಡಿಸುತ್ತ,ಸದಾ ಹರಿಕೀರ್ತನಗಳನ್ನು ಗಾನಮಾಡುತ್ತ ಸಂಚರಿಸುತ್ತಿರುವೆನು. ಪುಣ್ಯಶ್ಲೋಕನಾಗಿಯೂ, ಪವಿತ್ರವಾದ ಪಾದಪದ್ಮಗಳುಳ್ಳವನಾಗಿಯೂ ಇರುವ ಆ ಭಗವಂತನು, ನಾನು ಈ ವೀಣಾಧ್ವನಿಗಳೊಡನೆ ಕೀರ್ತನೆಗಳನ್ನಾರಂಭಿಸಿದ ಕೂಡಲೆ, ಕೂಗಿ ಕರೆಯಲ್ಪಟ್ಟವನಂತೆ,ನನ್ನ ಮನಸ್ಸಿನಲ್ಲಿ ಬಂದು ನೆಲಸಿ ನನಗೆ ದರ್ಶನವನ್ನು ಕೊಡುವನು. ಎಲ್ಲೆ ಮುನಿಶ್ರೇಷ್ಠನೆ!ವಿಷಯಾಭಿಲಾಷೆಯಲ್ಲೆ ಆತುರಗೊಂಡಿರತಕ್ಕ ಮನುಷ್ಯರನ್ನು ಸಂಸಾರವೆಂಬ ಸಮುದ್ರದಿಂದದಾಟಿಸುವುದಕ್ಕೆ ಆ ಭಗವಂತನ ಚರಿತ್ರವರ್ಣನವೊಂದೇ ದೋಣಿಯಂತಿರುವುದು. ಕಾಮಲೋಭಾದಿಗಳಿಂದ ಕೆಟ್ಟುಹೋದ ಮನಸ್ಸು, ಆ ಭಗವಂತನ ಸೇವೆಯಿಂದ ಒಡನೆಯೇ ಆ ದುರ್ಗುಣಗಳನ್ನು ನೀಗುವುದು. ಹಠಸೇವೆಯಿಂದ ಆ ದುರ್ಗುಣಗಳು ನೀಗಿ ಹೋಗುವಂತೆ,ಯಮನಿಯಮಾದಿಯೋಗಮಾರ್ಗಗಳಿಂದಲೂ ನೀಗಲಾರವು.ಎಲ್ಲೆಮಹರ್ಷಿಯೆ!ನಿನ್ನ ಕೈಂಕರ್ಯಯಂತೆನನ್ನ ಜನ್ಮಕರ್ಮಗಳ ರಹಸ್ಯಗಳೆಲ್ಲವನ್ನೂ ನಿನ್ನ ಮನಸ್ಸಿಗೆ ತೃಪ್ತಿಯುಂಟಾಗುವಂತೆ ತಿಳಿಸಿದೆನು. ಇನ್ನು ನಾನು ಹೋಗಿಬರುವೆನು" ಎಂದನು. ಹೀಗೆಂದು ಹೇಳಿ ನಾರದನು ವೇದವ್ಯಾಸನಅನುಮತಿಯನ್ನು ಪಡೆದು, ತನ್ನ ವೀಣೆಯನ್ನು ನುಡಿಸುತ್ತ, ಯಾವಾಗಲೂ ತಾನು ಆನಂದರಸದಲ್ಲಿ ಮಗ್ನನಾಗಿರುವುದಲ್ಲದೆ,ಸಂಸಾರತಾಪತ್ರಯದಲ್ಲಿ ಸಿಕ್ಕಿ ನರಳುತ್ತಿರುವ ಈ ಸಮಸ್ತಜಗತ್ತನ್ನೂ ಕೂಡ ತನ್ನವೀಣಾಧ್ವನಿಯಿಂದುಂಟಾದ ಆನಂದರಸದಲ್ಲಿ ಮುಳುಗಿಸುತ್ತಿರುವನು! ಅಬ್ಬಾ! ಆ ಮಹಾತ್ಮನೊಬ್ಬನಲ್ಲವೇ ಲೋಕದಲ್ಲಿ ಧನ್ಯನು! ಇದು ಆರನೆಯ ಅಧ್ಯಾಯವು.

ವ್ಯಾಸಮುನಿಯು ಭಾಗವತವನ್ನು ರಚಿಸಿ ಶುಕಮುನಿಗೆ ಉಪದೇಶಿಸಿದುದು.

ನಾರದನ ಚರಿತ್ರವನ್ನು ಕೇಳಿದಮೇಲೆ ತಿರುಗಿ ಶೌನಕನು ಸೂತಪೌ ರಾಣಿಕನನ್ನು ನೋಡಿ, "ಓ! ಸೂತಾ! ನಾರದನು ಹೊರಟುಹೋದಮೇಲೆ ಭಗವಂತನಾದ ವ್ಯಾಸಮುನಿಯು ಮಾಡಿದುದೇನು?" ಎಂದು ಕೇಳಿದನು. ಅದಕ್ಕಾಸೂತನು, "ಶೌನಕಾ! ಕೇಳು! ಆತ್ಮಲಾಭಿ ನಾರದನು ಹೊರಟು ಹೋದಮೇಲೆ, ವ್ಯಾಸನು ಸರಸ್ವತೀನದಿಗೆ ಪಶ್ಚಿಮತೀರದಲ್ಲಿ ಶಮ್ಯಾಪ್ರಾಸವೆಂದು ಪ್ರಸಿದ್ಧಿಹೊಂದಿದ ತನ್ನಾಶ್ರಮಕ್ಕೆ ಹೋದನು. ಆ ಪ್ರದೇಶವು ವಿಶೇಷವಾಗಿ ಬದರೀವೃಕ್ಷಗಳಿಂದ ತುಂಬಿ ಅತಿಮನೋಹರವಾಗಿದ್ದಿತು. ಋಷಿಗಳೆಲ್ಲರೂ ಸತ್ರಯಾಗವನ್ನು ನಡೆಸಬೇಕಾದ ಸ್ಥಾನವೇ ಅದು! ವ್ಯಾಸನು ಈ ಪುಣ್ಯಾಶ್ರಮಕ್ಕೆ ಬಂದು, ಆಚಮನವನ್ನು ಮಾಡಿ, ಶುದ್ಧನಾಗಿ ಕುಳಿತು, ತನ್ನ ಮನಸ್ಸನ್ನು ವಿಷಯಾಂತರಗಳಿಂದ ಹಿಂತಿರುಗಿಸಿ ಆತ್ಮಸ್ಥವಾಗಿ ನಿಲ್ಲಿಸಿಕೊಂಡನು. ಹಾಗೆಯೇ ಧ್ಯಾನಿಸುತ್ತಿರುವಾಗ, ಭಕ್ತಿಯೋಗಬಲದಿಂದ ಮನಸ್ಸು ನಿರ್ಮಲವಾಯಿತು. ಸಾವಧಾನದಿಂದ ನೋಡಲು ಅವನಿಗೆ ಮೊದಲು ಪರಮಪುರುಷನ ದರ್ಶನವಾಯಿತು. ಹಾಗೆಯೇ ನೋಡುತ್ತ ಪರಮಪುರುಷನಿಗೆ ಶರೀರಭೂತವಾದ ಮಾಯೆಯನ್ನು ಕಂಡುಕೊಂಡನು. ಆ ಮಹಾತ್ಮನು ಇನ್ನೂ ಮುಂದೆ ಜ್ಞಾನದೃಷ್ಟಿಯಿಂದ ನೋಡುತ್ತಿರಲು, ಮಾಯೆಗಿಂತಲೂ ಜೀವಾತ್ಮನು ವಿಲಕ್ಷಣನಾಗಿದ್ದು, ಮಾಯೆಯಿಂದಲೇ ತಾನು ಮೋಹಿತನಾಗಿ, ತನ್ನನ್ನೇ ಗುಣತ್ರಯಪರಿಣಾಮರೂಪವಾದ ಶರೀರವನ್ನಾಗಿ ತಿಳಿದು ಈ ಭ್ರಮೆಯಿಂದುಂಟಾದ ತಾಪತ್ರಯದಲ್ಲಿ ಸಿಕ್ಕಿ ನರಳುವನೆಂದೂ, ಈ ತಾಪತ್ರಯವನ್ನು ನಿವಾರಿಸುವ ಉಪಾಯವನ್ನು ತಿಳಿಯದ ಜನಗಳಿಗೆ, ಭಗವದ್ಭಕ್ತಿಯೆಲ್ಲದೆ ಬೇರೆ ಉಪಾಯಾಂತರವಿಲ್ಲವೆಂದೂ ನಿಶ್ಚಯಿಸಿದನು. ಈ ನಿಶ್ಚಯವು ಹುಟ್ಟಿದಮೇಲೆ ಲೋಕಹಿತಾರ್ಥವಾಗಿ ಭಾಗವತವೆಂಬ ಸಂಹಿತೆಯನ್ನು ರಚಿಸಿದನು. ಎಲೈ ಮಹರ್ಷಿಗಳೇ! ಈ ಸಂಹಿತೆಯನ್ನು ಕೇಳಿದಮಾತ್ರದಿಂದಲೇ ಮನಷ್ಯರಿಗೆ ಮನಸ್ಸಿನಲ್ಲಿರುವ ಶೋಕಮೋಹಾದಿಗಳೆಲ್ಲವನ್ನೂ ನೀಗಿಸತಕ್ಕ ಭಗವದ್ಭಕ್ತಿಯು ಹುಟ್ಟುವುದು. ವ್ಯಾಸನು ತಾನು ಹೇಳಬೇಕಾದ ವಿಷಯ

ಗಳೆಲ್ಲವನ್ನೂ ಆ ಗ್ರಂಥದಲ್ಲಿ ಕ್ರಮವಾಗಿ ವಿವರಿಸಿ, ಮೊದಲು ತನ್ನ ಕು ಮಾರನಾದ ಶುಕಮುನಿಗೆ ಉಪದೇಶಿಸಿದನು. ಆ ಶುಕಮುನಿಯಾದರೋ ಸಾಂಸಾರಿಕಧರ್ಮವನ್ನು ನಿಶ್ಶೇಷವಾಗಿ ಬಿಟ್ಟವನು. ಸ್ಥಿರಮನಸ್ಸುಳ್ಳವನು. ಯಾವಾಗರೂ ಬ್ರಹ್ಮಧ್ಯಾನದಲ್ಲಿಯೇ ನಿರತನಾದವನು" ಎಂದನು. ಇದನ್ನು ಕೇಳಿ ತಿರುಗಿ ಶೌನಕನು "ಎಲೈ ಮಹಾತ್ಮನಾದ ಸೂತನೆ! ಆ ಶುಕಮುನಿಯು ಯಾವಾಗಲೂ ನಿವೃತ್ತಿಮಾರ್ಗದಲ್ಲಿ ನೆಲೆಗೊಂಡವನು. ಶ್ರವಣಾಧ್ಯಯನಗಳೊಂದರಲ್ಲಿಯೂ ಆದರವಿಲ್ಲದವನು. ಯಾವಾಗಲೂ ಪರಬ್ರಹ್ಮವೊಂದರಲ್ಲಿಯೇ ನಿಟ್ಟಮನಸ್ಸುಳ್ಳವನು. ಇಂತಹ ಮಹಾತ್ಮನಿಗೆ ಭಗವದಾರ್ಥ್ಯನಕ್ಕೆ ಪ್ರತಿಬಂಧಕವಾದ ಈ ಭಾಗವತಸಂಹಿತೆಯನ್ನು ಅಭ್ಯಸಿಸಬೇಕೆಂಬ ಉದ್ದೇಶವು ಹೇಗೆ ಹುಟ್ಟಿತು?" ಎಂದನು. ಅದಕ್ಕಾಸೂತನು "ಶೌನಕ! ಈ ಭಾಗವತವೆಂಬುದೂಕೂಡ ಭಗವಂತನ ಗುಣವರ್ಣನವೇ ಆದುದರಿಂದ ಭಗವದಾರ್ಥ್ಯನಕ್ಕೆ ನಿರೋಧಕವಾದುದಲ್ಲ! ನೀನು ಹೇಳಿದಂತೆ ಪರಮಾತ್ಮನಿಷ್ಠರಾದ ಯೋಗಿಗಳು, ಲೌಕಿಕಾರ್ಥವುಳ್ಳ ಪ್ರಬಂಧದಲ್ಲಿ ಅಪೇಕ್ಷೆಯಿಲ್ಲದಿರುವುದೇನೋ ನಿಜವು! ಹಾಗಿದ್ದರೂ ಅವರು ಭಗವದ್ಗುಣಗಳಲ್ಲಿ ಅನನ್ಯಪ್ರಯೋಜನವಾದ ಭಕ್ತಿಯುಳ್ಳವರಾಗಿರುವರು! ಆ ಭಕ್ತಿಗೆ ವಿಷಯನಾದವನು ಕಲ್ಯಾಣಗುಣಪರಿಪೂರ್ಣನಾದ ಆ ಶ್ರೀಹರಿಯಲ್ಲವೆ? ಆದುದರಿಂದ ಅವನ ಗುಣವರ್ಣನಗಳನ್ನೊಳಕೊಂಡ ಗ್ರಂಥಗಳನ್ನು ಕೇಳುವುದರಲ್ಲಿ ಅವರಿಗೆ ಆಸಕ್ತಿಯಿದ್ದೇ ಇರಬೇಕು! ಅದಕ್ಕಾಗಿಯೇ ಶುಕನು ಪರಮಾತ್ಮಧ್ಯಾನವೊಂದರಲ್ಲಿಯೇ ನೆಲಸಿದವನಾಗಿದ್ದರೂ, ಆ ಹರಿಯ ಗುಣಗಳಲ್ಲಿ ಪರವಶನಾದ ಬುದ್ಧಿಯುಳ್ಳವನಾದುದರಿಂದಲೂ, ವಿಷ್ಣುಭಕ್ತರಲ್ಲಿ ವಿಶೇಷಪ್ರೇಮವುಳ್ಳವನಾದುದರಿಂದಲೂ, ಭಗವದ್ಗುಣಾನುವರ್ಣನರೂಪವಾದ ಭಾಗವತವನ್ನು ಪಠಿಸಿದನು. ತಾನೇ ಅದನ್ನು ಭಾಗವತೋತ್ತಮನಾದ ಪರೀಕ್ಷಿದ್ರಾಜನಿಗೂ ಉಪದೇಶಿಸಿದನು. ಎಲೈ ಮಹರ್ಷಿಗಳೇ! ಇನ್ನು ಆ ಪರೀಕ್ಷಿದ್ರಾಜನ ಜನ್ಮಕರ್ಮಾದಿಗಳನ್ನು ಹೇಳುವೆನು ಕೇಳಿರಿ! ಆ ರಾಜನ ಚರಿತ್ರಕ್ಕೆ ಉಪೋದ್ಘಾತವಾಗಿ ಮೊದಲು ಪಾಂಡವರ ಚರಿತ್ರವನ್ನು ತಿಳಿಸಬೇಕಾಗಿರುವುದು. ಆ ಪಾಂಡವರ ಚರಿತ್ರವೂಕೂಡ ಶ್ರೀಕೃಷ್ಣಚರಿತ್ರದೊಡಗೂಡಿರುವುದರಿಂದ,

ಆ ಪುಣ್ಯಚರಿತ್ರವನ್ನು ನೀವು ಸಾವಧಾನವಾಗಿ ಕೇಳಬೇಕು.ಹಿಂದೆ ಪಾಂಡವರಿಗೂ, ಕೌರವರಿಗೂ ನಡೆದ ಯುದ್ಧದಲ್ಲಿ, ಉಭಯಪಕ್ಷದಲ್ಲಿಯೂ ಬಹಳಮಂದಿ ವೀರರು ಹತರಾಗಿ ವೀರಸ್ವರ್ಗವನ್ನು ಹೊಂದಿದರು. ಪ್ರಾಯಕವಾಗಿ ಉಭಯ ಸೈನ್ಯಗಳೂ ನಿಶ್ಶೇಷವಾಗಿ ಹತವಾದುವು. ಕೊನೆಗೆ ಭೀಮನ ಗದಾಪ್ರಹಾರದಿಂದ ದುರ್ಯೋಧನನೂಕೂಡ ತೊಡೆಮುರಿದು ಕೆಳಗೆ ಬಿದ್ದಿದ್ದನು.ಆಗ ಕೌರವರ ಕಡೆಯಲ್ಲಿ ದ್ರೋಣಪುತ್ರನಾದ ಅಶ್ವತ್ಥಾಮನು, ತನ್ನ ಪ್ರಭುವಾದ ಧೃತರಾಷ್ಟ್ರನಿಗೆ ಪ್ರಿಯವನ್ನುಂಟುಮಾಡಬೇಕೆಂದು, ಒಂದು ದುರಾಲೋಚನೆಯನ್ನು ನಡೆಸಿದನು. ವಾಸ್ತವದಲ್ಲಿ ಈ ಕಾರ್ಯವೇನೋ ಧೃತರಾಷ್ಟ್ರನಿಗೆ ಸಮ್ಮತವಲ್ಲದಿದ್ದರೂ, ಅಶ್ವತ್ಥಾಮನು ಇದರಿಂದ ಆತನನ್ನು ಸಂತೋಷಪಡಿಸಬೇಕೆಂದೆಣಿಸಿ, ಬ್ರಾಹ್ಮಣನಾದ ತನಗೆ ಆ ಕಾರ್ಯವು ಅನುಚಿತವೆಂಬುದನ್ನೂ ಯೋಚಿಸದೆ, ರಾತ್ರಿಯಲ್ಲಿ ನಿದ್ರಿಸುತಿದ್ದ ಉಪಪಾಂಡವರ ತಲೆಗಳನ್ನು ಕತ್ತರಿಸಿ ತೆಗೆದುಕೊಂಡುಹೋದನು. ಅಶ್ವತ್ಥಾಮನ ಈ ಘೋರ ಕೃತ್ಯವನ್ನು ಈಗಲೂ ಜನರು ನಿಂದಿಸುತ್ತಿರುವರು! ಇತ್ತಲಾಗಿ ದ್ರೌಪದಿಯು ತನ್ನ ಪುತ್ರರ ಮರಣವನ್ನು ನೋಡಿ ದುಃಖಿವನ್ನು ತಡೆಯಲಾರದೆ, ಧಾರೆಧಾರೆಯಾಗಿ ಕಣ್ಣೀರನ್ನು ಬಿಡತೊಡಗಿ ಪಲಪಿಸುತಿದ್ದಳು. ಅರ್ಜುನನು ಆಕೆಯ ದುಃಖಿವನ್ನು ಕಂಡು, ಅವಳನ್ನು ಅನೇಕವಿಧದಲ್ಲಿ ಸಮಾಧಾನಪಡಿಸುತ್ತ, "ಪ್ರಿಯೆ! ಆದುದಾಯಿತು! ಇನ್ನು ದುಃಖಿಸಿ ಫಲವೇನು? ಬ್ರಾಹ್ಮಣಾಧಮನಾಗಿಯೂ, ಪಾಪಕಾರ್ಯಕ್ಕೆ ಹೆದರದ*(ಆತತಾಯಿ)ನಾಗಿಯೂ ಇರುವ ಆ ಅಶ್ವತ್ಥಾಮನ ತಿರಸ್ಸನ್ನು ಇನ್ನು ಕ್ಷಣಕಾಲದೊಳಗಾಗಿಯೇ, ಈ ನನ್ನ ಗಾಂಡೀವಪ್ರಯುಕ್ತಗಳಾದ ಬಾಣಗಳಿಂದ ಕಡಿದು ತರುವೆನು. ಎಲೆದೇವಿ! ಆ ಪಾಪಿಯ ತಲೆಯನ್ನು ಮೊದಲು ನೀನು ನಿನ್ನ ಕಾಲಿನಿಂದ ತುಳಿದು, ಆಮೇಲೆ ಸ್ನಾನವನ್ನು

* ಆತತಾಯಿಯೆಂದರೆ: "ಅಗ್ನಿದೋ ಗರದಶ್ಚೈವ ಶಸ್ತ್ರಪಾಣಿರ್ಧನಾಪಹಃ । ಕ್ಷೇತ್ರದಾರಾಪಹರ್ತಾಚ ಷಡೇತೇಹ್ಯಾತತಾಯಿನಃ" ಮನೆಗೆ ಬೆಂಕಿಯಿಡುವುದು ವಿಷವನ್ನು ಹಾಕಿ ಕೊಲ್ಲುವುದು, ಶಸ್ತ್ರಧಾರಿಯಾಗಿ ಜೀವಹಿಂಸೆಮಾಡುವುದು, ಹಣ, ಭೂಮಿ, ಹೆಂಗಸು, ಇವುಗಳನ್ನೆಪಹರಿಸುವುದು; ಈ ಕ್ರೂರಕೃತ್ಯಗಳನ್ನು ನಡೆಸುವವನು ಆತತಾಯಿಯೆನಿಸುವನು.

ಮಾಡಬಹುದು! ಈ ಪ್ರತೀಕಾರದಿಂದ, ನಿನ್ನ ಪುತ್ರದುಃಖವನ್ನು ನೀಗಿಸುವೆನು. ಇನ್ನು ದುಃಖಿಸಬೇಡ" ಎಂದನು. ಒಡನೆಯೇ ಅರ್ಜುನನು ಕೃಷ್ಣನನ್ನು ಸಾರಥಿಯಾಗಿ ಮಾಡಿಕೊಂಡು, ಭಯಂಕರವಾದ ತನ್ನ ಗಾಂಡೀವಧನುಸ್ಸನ್ನು ಕೈಗೆತ್ತಿಕೊಂಡು, ಕವಚವನ್ನು ಧರಿಸಿ, ಕಪಿಧ್ವಜವುಳ್ಳ ತನ್ನ ರಥವನ್ನೇರಿ, ಅಶ್ವತ್ಥಾಮನಿದ್ದ ಸ್ಥಳಕ್ಕೆ ಬಂದನು. ಹೀಗೆ ಅರ್ಜುನನು ಅತಿಕೋಪಾವಿಷ್ಟನಾಗಿ ಬರುವುದನ್ನು ಅಶ್ವತ್ಥಾಮನು ದೂರದಿಂದಲೇ ಕಂಡು, ತನಗೆ ಪುತ್ರಘಾತಿಯಾದ ತನ್ನನ್ನು ಕೊಲ್ಲುವುದಕ್ಕಾಗಿಯೇ ಬರುವನೆಂದು ನಿಶ್ಚಯಿಸಿದನು. ಅವನ ಮನಸ್ಸು ಭಯಗ್ರಸ್ತವಾಯಿತು. ಆಗ ಅವನು, ತನ್ನ ಪ್ರಾಣವು ಳಿದರೆ ಸಾಕೆಂಬ ಆತುರದಿಂದ, ರುದ್ರನಿಗೆ ಭಯಪಟ್ಟೋಡುವ ಕ್ಷಪ್ರಜಾಪತಿಯಂತೆ ರಥವನ್ನೇರಿ, ತನ್ನಿಂದ ಸಾಧ್ಯವಾದಷ್ಟು ದೂರದವರೆಗೆ ಓಡುತ್ತ ಹೋದನು. ಕೊನೆಕೊನೆಗೆ ಕುದುರೆಗಳು ಬಹಳವಾಗಿ ಬಳಲಿ ಮುಂದೆ ಹಜ್ಜೆಯಿಡಲಾರದೆ ಹೋದುವು. ಎಷ್ಟೆಷ್ಟು ಪ್ರಯತ್ನವಾಡಿಸಿದರೂ ಕುದುರೆಗಳು ಮುಂದೆ ಹೋಗದಿರುವುದನ್ನೂ, ಹಿಂದೆ ಅರ್ಜುನನು ಮತ್ತಷ್ಟು ಹತ್ತಿರದಿಂದ ಬೆನ್ನಟ್ಟಿ ಬರುವುದನ್ನೂ ನೋಡಿ ಅಶ್ವತ್ಥಾಮನಿಗೆ ತನ್ನ ಪ್ರಾಣಗಳನ್ನು ರಕ್ಷಿಸಿಕೊಳ್ಳುವುದಕ್ಕೆ ಬೇರೆ ಯಾವ ಉಪಾಯವೂ ತೋಚದಂತಹೋಯಿತು. ಬ್ರಹ್ಮಶಿರಸ್ಸೆಂಬ ಕ್ರೂರಾಸ್ತ್ರವನ್ನು ಪ್ರಯೋಗಿಸಿ ಅರ್ಜುನನನ್ನು ಕೊಲ್ಲುವುದು ಹೊರತು, ತನ್ನ ಪ್ರಾಣರಕ್ಷಣೆಗೆ ಬೇರೆ ಉಪಾಯವಿಲ್ಲವೆಂದು ನಿಶ್ಚಯಿಸಿಬಿಟ್ಟನು. ಒಡನೆಯೇ ಶುದ್ಧಮನವನ್ನು ಮಾಡಿ, ನಿಶ್ಚಲಮನಸ್ಸುಳ್ಳವನಾಗಿ, ಆ ಅಸ್ತ್ರಮಂತ್ರವನ್ನು ಧ್ಯಾನಿಸಿದನು. ಆ ಅಸ್ತ್ರದ ಉಪಸಂಹಾರಮಂತ್ರವು ತನಗೆ ತಿಳಿಯದಿದ್ದರೂ ಕೂಡ, ಪ್ರಾಣಾಪತ್ತಿನಸಮಯವಾದುದರಿಂದ ಹಿಂದುಮುಂದಾಲೋಚನೆಯಿಲ್ಲದೆ ಅದನ್ನು ಅರ್ಜುನನಮೇಲೆ ಪ್ರಯೋಗಿಸಿಬಿಟ್ಟನು. ಆ ಅಸ್ತ್ರವಾದರೋ, ಸಮಸ್ತದಿಕ್ಕುಗಳನ್ನೂ ದಹಿಸುವಂತೆ ಹೊರಟುಬಂದಿತು. ಇದನ್ನು ನೋಡಿ ಅರ್ಜುನನು, ಆ ಅಸ್ತ್ರದಿಂದ ತನಗೆ ತಪ್ಪದೆ ಪ್ರಾಣಾಪಾಯವುಂಟಾಗುವುದೆಂದೆಣಿಸಿ, ಸಾರಥಿಯಾಗಿದ್ದ ಕೃಷ್ಣನನ್ನು ಅತ್ಯಾತುರದಿಂದ ಕೂಗುತ್ತ, "ಓ! *ಕೃಷ್ಣಾ! ಕೃಷ್ಣಾ! ಹೇ! ಮಹಾಬಾಹೂ! ನೀನು ಭಕ್ತರಿಗೆ ಅಭ

---

* ಇಲ್ಲಿ ಕೃಷ್ಣಶಬ್ದ ಸ್ವಾರಸ್ಯವೇನಿದೆಯೆಂದರೆ: — "ಕೃಷಿರ್ಭೂವಾಚಕಶ್ಶಬ್ದೋ ಣಶ್ಚ ನಿರ್ವೃತಿವಾಚಕಃ" "ಎಂಬ ವ್ಯುತ್ಪತ್ತಿಯಿಂದ ಸರ್ವಲೋಕಸುಖಪ್ರದನೆಂದು ಭಾವವು.

ರಾದವರು ಮದ್ಯಪಾನಮಾಡಿ ಮದಿಸಿದವರನ್ನೂ, ಎಚ್ಚರತಪ್ಪಿದವರನ್ನೂ, ಪಿತ್ತವಿಕಾರಾದಿಗಳಿಂದ ಮೈಮರೆತವರನ್ನೂ, ನಿದ್ರಿಸುವವರನ್ನೂ, ಸ್ತ್ರೀ ಬಾಲವೃದ್ಧರನ್ನೂ, ಜಡಸ್ವಭಾವವುಳ್ಳವರನ್ನೂ, ಶರಣಾಗತರಾದವರನ್ನೂ, ಯುದ್ಧದಲ್ಲಿ ವಿರಥರಾದವರನ್ನೂ, ಭಯಪಟ್ಟವರನ್ನೂ ಕೊಲ್ಲಲಾರರು. ಈ ಧರ್ಮವನ್ನಾಲೋಚಿಸದೆ ಈ ದುರಾತ್ಮನು ನಿದ್ರಿಸುತಿದ್ದ ಬಾಲಕರನ್ನು ಕೊಂದಿರುವನು. ದಯಾಗುಣವಿಲ್ಲದ ಯಾವ ದುರಾತ್ಮನು ಇತರರ ಪ್ರಾಣಗಳನ್ನು ತೆಗೆದು ತನ್ನ ಪ್ರಾಣಗಳನ್ನು ಕಾಪಾಡಿಕೊಳ್ಳಬೇಕೆಂಬ ಪ್ರಯತ್ನವನ್ನು ನಡೆಸುವನೋ, ಅಂತವನನ್ನು ಸಂಹರಿಸುವುದೇ ಕ್ಷತ್ರಿಯಧರ್ಮವು! ಈ ಕಾರ್ಯವು ರಾಜರಿಗೆ ಶ್ರೇಯಸ್ಕರವಾದುದೇಹೊರತು ದೋಷಾಸ್ಪದವಲ್ಲ! ಆ ದುಷ್ಕಾರ್ಯವನ್ನು ನಡೆಸಿದ ಮನುಷ್ಯನೂಕೂಡ* ಈ ಪಿಥವಾದ ರಾಜದಂಡನವನ್ನು ಹೊಂದದಿದ್ದಪಕ್ಷದಲ್ಲಿ,ಆ ಪಾಪಕ್ಕೆ ಬೇರೆ ಪ್ರಾಯಶ್ಚಿತ್ತವಿಲ್ಲದೆ ನರಕಕೂಪದಲ್ಲಿ ಬೀಳುವನು. ಅರ್ಜುನಾ! ಈಗ ನೀನು ಈ ಅಶ್ವತ್ಥಾಮನನ್ನು ಕೊಲ್ಲುವುದರಿಂದ,ನಿಮ್ಮಿಬ್ಬರಿಗೂ ಶ್ರೇಯಸ್ಸುಂಟು!ಆದುದರಿಂದ ಒಡನೆಯೇ ಈತನ ತಲೆಯನ್ನು ಕತ್ತರಿಸಿಬಿಡು! ಈ ಧರ್ಮಸೂಕ್ಷ್ಮವಿಚಾರವೂ ಹಾಗಿರಲಿ! ನಿನು ಹಿಂದೆ ದ್ರೌಪದಿಯನ್ನು ಸಮಾಧಾನಪಡಿಸುವಾಗ,ಅವಳ ಮುಂದೆ ಪ್ರತಿಜ್ಞೆಮಾಡಿ ಬಂದುದನ್ನು ಮರೆತೆಯಾ? ‘‘ಪುತ್ರಪ್ರಯೋತುಕನಾದ ಈ ಪಾಪಿಯ ತಲೆಯನ್ನು ಕಡಿದುತರುವುದಾಗಿ ನಿನ್ನ ದುರಾಗಿಯೇ ಪ್ರತಿಜ್ಞೆಮಾಡಿಬಂದೆಯಲ್ಲವೆ! ಆ ಪ್ರತಿಜ್ಞೆಗೆ ಭಂಗವುಂಟಾಗದಹಾಗೆ ನೋಡು ! ಈ ಪಾಪಾತ್ಮನಾದರೋ ನಿನ್ನ ಮಕ್ಕಳೆಲ್ಲರನ್ನೂ ಕೊಂದಿರುವನು. ನಿದ್ರೆಯಿಂದ ಮೈಮರೆತವರನ್ನೂ ಕೊಂದುದರಿಂದ ಆತತಾಯಿಯೆನಿಸಿಸುವನು. ಧೃತರಾಷ್ಟ್ರನಿಗೆ ಸಮ್ಮತವಲ್ಲದಿದ್ದರೂ, ಅವನನ್ನು ಸಂತೋಷಪಡಿಸುವುದಕ್ಕಾಗಿ, ಈ ದುಷ್ಕಾರ್ಯವನ್ನು ನಡೆಸಿರುವನು. ಈ ಕಾರಣಗಳಿಂದ ವಧ್ಯನಾದ ಈತನನ್ನು ಕೊಲ್ಲದೆ ಬಿಡುವುದು ಸರ್ವಥಾ ಯುಕ್ತವಲ್ಲ!” ಎಂದನು. ಹೀಗೆ ಕೃಷ್ಣನು ಅರ್ಜುನನ ಮನಸ್ಸನ್ನು ಪ

* ‘‘ರಾಜಭಿರ್ಧೃತದಂಡಾಸ್ತು ಕೃತ್ವಾ ಪಾಪಾನಿ ಮಾನವಾಃ । ವಿಧೂತಕಲ್ಮಷಾಯಾಂತಿ ಸ್ವರ್ಗಂ ಸುಕೃತಿನೋ ಯಥಾ”ಎಂಬಂತೆ ರಾಜದಂಡನವನ್ನು ಹೊಂದಿದವರಿಗೆ ನರಕಶಿಕ್ಷೆಯಿಲ್ಲವೆಂದು ಸ್ಮೃತಿಯು.

ರೀಕ್ಷಿಸಬೇಕೆಂಬುದಕ್ಕಾಗಿ,ಎಷ್ಟೆಷ್ಟುವಿಧದಿಂದ ಬೋಧಿಸಿದರೂ, ಅರ್ಜುನನು ದ್ರೋಣಾಚಾರ್ಯರಿಂದ ತನಗುಂಟಾದ ಮಹೋಪಕಾರವನ್ನು ಸ್ಮರಿಸಿಕೊಂಡು, ಪುತ್ರಫೌತುಕನಾಗಿದ್ದರೂ ಆ ಗುರುಪುತ್ರನನ್ನು ಕೊಲ್ಲುವುದಕ್ಕೆ ಸಮ್ಮತಿಸಲಿಲ್ಲ. ಕೊನೆಗೆ ಅಶ್ವತ್ಥಾಮನನ್ನು ಕಂಬಕ್ಕೆ ಕಟ್ಟಿದಹಾಗೆಯೇ,ತನ್ನ ತಿಬಿರಕ್ಕೆ ತಂದು, ಪುತ್ರಶೋಕದಿಂದ ವಿಲಪಿಸುತ್ತಿದ್ದ ದ್ರೌಪದಿಯ ಮುಂದೆ ನಿಲ್ಲಿಸಿದನು. ಆಗ ದ್ರೌಪದಿಯು ಮೆಲ್ಲಗೆ ಮುಂದೆಬಂದು, ಪಶುವಿನಂತೆ ಹಗ್ಗಗಳಿಂದ ಬಿಗಿಯಲ್ಪಟ್ಟು ಲಜ್ಜೆಯಿಂದ ತಲೆಯೆತ್ತದೆ ನಿಂತಿರುವ ಅತನ ಸ್ಥಿತಿಯನ್ನು ನೋಡಿದಳು ಆಕೆಯು ಅತ್ಯಂತಸುಶೀಲೆಯಾದುದರಿಂದ, ಅಶ್ವತ್ಥಾಮನು ಮಹಾಪರಾಧಿಯಾಗಿದ್ದರೂ, ಅವನನ್ನು ನಿಂದಿಸದೆ, ಅವನಲ್ಲಿ ಕೋಪವನ್ನೂ ತೋರಿಸದೆ, ವಿನಯದಿಂದ ನಮಸ್ಕರಿಸಿದಳು. ಹೀಗೆ ಗುರುಪುತ್ರನನ್ನು ನಮಸ್ಕರಿಸಿದಮೇಲೆ, ಅರ್ಜುನನಕಡೆಗೆ ತಿರುಗಿ ''ನಾಥಾ! ಈ ನಮ್ಮ ಗುರುಪುತ್ರನನ್ನು ಹೀಗೆ ನೀನು ಕಂಬಕ್ಕೆ ಕಟ್ಟಿತಂದಿರುವೆಯೆಲ್ಲಾ!ಇವನ ಕಷ್ಟವನ್ನು ನೋಡಿ ನಾನುಸಹಿಸಲಾರೆನು ಈತನಾದರೋ!ಜಾತಿಮಾತ್ರದಿಂದಲೇನಮಗೆ ಪೂಜ್ಯನು. ಇದರಮೇಲೆ ಗುರುಪುತ್ರನಾದುದರಿಂದ ಗುರುವಿಗೆ ಸಮಾನನು ಆದುದರಿಂದ ಈಕ್ಷಣವೇ ನೀನು ಇವನ ಸೆರೆಯನ್ನು ಬಿಡಿಸಬೇಕು! ನೀನು ಪ್ರಯೋಗೋಪಸಂಹಾರಮಂತ್ರಗಳೊಡನೆ, ಅನೇಕಾಸ್ತ್ರಸಮೂಹಗಳನ್ನೂ, ಧನುರ್ವೇದರಹಸ್ಯವನ್ನೂ, ಆ ದ್ರೋಣಾಚಾರ್ಯನಿಂದಲೇ ಕಲಿತವನಲ್ಲವೆ?ಈ ಅಶ್ವತ್ಥಾಮನೂಕೂಡ ಪುತ್ರರೂಪದಿಂದಿರುವ ಆ ದ್ರೋಣಾಚಾರ್ಯನೆಂದೇ ತಿಳಿಯಬೇಕು. ಇದಲ್ಲದೆ ನಿನ್ನ ಗುರುವಾದ ದ್ರೋಣನಿಗೆ ಅರ್ಧಶರೀರಭೂತೆಯಾಗಿಯೂ,ವೀರಪುತ್ರವತಿಯಾಗಿಯೂ ಇರುವ ಕೃಪಿಯು, ತನ್ನ ಪತಿಯೊಡನೆ ಸಹಗಮನಮಾಡದೆ ಇನ್ನೂ ಇವನಿಗಾಗಿಯೇಜೀವಿಸಿರುವಳು ಈ ಸ್ಥಿತಿಯಲ್ಲಿ ನೀನು ಈತನಿಗೆ ಅಪಕಾರವನ್ನು ಮಾಡಿದಪಕ್ಷದಲ್ಲಿ, ನಿನ್ನ ಗುರುವಿಗೂ,ಗುರುಪತ್ನಿಗೂ ದ್ರೋಹಮಾಡಿದಂತಾಗುವುದು. ಎಲೈಧರ್ಮಜ್ಞನೆ ! ನಮಗೆ ಪರಮಪೂಜ್ಯವಾಗಿಯೂ, ವಂದನೀಯವಾಗಿಯೂ ಇರುವ ಗುರುಕುಲಕ್ಕೆ ದುಃಖವನ್ನು ತರುವುದು ಎಂದೆಂದಿಗೂ ಯುಕ್ತವಲ್ಲ.ಈಗ ನಾನು ಪುತ್ರದುಃಖದಿಂದ ಕಣ್ಣೀರು ಬಿಟ್ಟು ದುಃಖಿಸುವಂತೆಯೇ, ಪತಿವ್ರತೆಯಾಗಿಯೂ, ಗುರುಪತ್ನಿಯಾಗಿಯೂ

ಇರುವ ಆ ಬ್ರಾಹ್ಮಣಮಾತೆಯೂ, ಪುತ್ರದುಃಖದಿಂದ ಕೊರಗುವಂತಾಗುವು ದಲ್ಲವೆ? ಇದಕ್ಕೆ ನೀನು ಅವಕಾಶವನ್ನು ಕೊಡಬಾರದು. ಇದರಮೇಲೆ ಯಾವ ರಾಜನು ಬ್ರಾಹ್ಮಣಕುಲಕ್ಕೆ ಅಪಕಾರವನ್ನು ಮಾಡುವನೋ, ಆ ರಾಜನು ತನ್ನ ಬಂಧುಮಿತ್ರಪರಿವಾರಗಳೊಡನೆ ದುಃಖಾಗ್ನಿಯಿಂದ ಬೇ ಯುವುದಲ್ಲದೆ, ಅವನ ವಂಶವೂ ನಿರ್ಮೂಲವಾಗುವುದು" ಎಂದಳು. ಹೀಗೆ ಧರ್ಮಯುಕ್ತವಾಗಿಯೂ, ನ್ಯಾಯಸಮ್ಮತವಾಗಿಯೂ, ದಯಾಸೂಚಕವಾ ಗಿಯೂ, ಅಸತ್ಯವೂ ಅಪ್ರಿಯವೂ ಅಲ್ಲದೆ ಕಾಮಾನುಗುಣವಾಗಿಯೂ,ಗಂಭೀ ರವಾಗಿಯೂ ಇರುವ ಆ ದ್ರೌಪದಿಯ ಮಾತುಗಳನ್ನು ಕೇಳಿ,ಸಮೀಪದಲ್ಲಿದ್ದ ಧರ್ಮರಾಜನು ಅಕೆಯನ್ನು ಕುರಿತು,"ದೇವಿ!ನಿನ್ನ ಮಾತಿಗಾಗಿ ನಾನು ಬಹಳ ಸಂತೋಷಪಟ್ಟೆನು. ಈ ನಿನ್ನ ವಾಕ್ಯವು ಧರ್ಮಯುಕ್ತವಾಗಿಯೂ, ನ್ಯಾಯ ಸಮ್ಮತವಾಗಿಯೂ ಇರುವುದು. ದಯಾವಿಶಿಷ್ಟವಾದ ಈ ನಿನ್ನ ಮಾತು ಸರ್ವಾಭಿನಂದ್ಯವಾದುದು" ಎಂದು ಅವಳನ್ನು ಬಹಳವಾಗಿ ಕೊಂಡಾಡುತಿದ್ದ ನು. ನಕುಲಸಹದೇವರೂ, ಸಾತ್ಯಕಿಯೂ, ಶ್ರೀಕೃಷ್ಣನೂ, ಇನ್ನೂ ಅಲ್ಲಿದ್ದ ಇತರಜನರೆಲ್ಲರೂ ದ್ರೌಪದಿಯನ್ನು ಬಹಳವಾಗಿ ಸ್ತೋತ್ರ ಮಾಡುತಿದ್ದರು ! ಈ ಮಾತುಗಳೆಲ್ಲವನ್ನೂ ಕೇಳುತಿದ್ದಹಾಗೆಲ್ಲಾ ಭೀಮನಿಗೆ ಮೇಲೆಮೇಲೆ ಕೋಪವು ಉಕ್ಕಿಬರುತಿತ್ತು. ಕೋಪದಿಂದ ಜ್ವಲಿಸುವಂತೆ ಕಣ್ಣುಗಳಿಂದ ಕಿಡಿಗಳನ್ನು ಕೆದರುತ್ತ, "ಹೋ!ಸಾಕು!ಸುಮ್ಮನಿರಿ! ಈದ್ರೌ ಪದಿಯು ಹೇಳಿದ ಮಾತು ಸರ್ವಥಾ ಯುಕ್ತವಲ್ಲ! ಈದುರ್ಮಾರ್ಗವನ್ನು, ತನಗಾಗಲಿ, ತನ್ನ ಪ್ರಭುವಾದ ಧೃತರಾಷ್ಟ್ರನಿಗಾಗಲಿ, ಹಿತವಲ್ಲ ವೆಂ ತಿಳಿದೂಕೂಡ, ನಿಮ್ಮಿಂದ ಮೈಮರೆತಿದ್ದ ಮಕ್ಕಳನ್ನು ನಿಷ್ಪ್ರಯೋಜನವಾಗಿ ಕೊಂದಿರುವನು.ಇವನನ್ನು ಕೊಲ್ಲುವುದೇ ಯುಕ್ತ ವೇಹೊರತು,ಇವನನ್ನು ಮನ್ನಿಸುವುದು ಸರ್ವಥಾಯುಕ್ತವಲ್ಲ" ಎಂದನು. ಆಗ ಸಮೀಪದಲ್ಲಿ ನಿಂತಿದ್ದ ಶ್ರೀಕೃಷ್ಣನು, ಕೋಪಯುಕ್ತವಾದ ಭೀಮನವಾ ಕ್ಯವನ್ನೂ,ದಯಾರ್ದ್ರವಾದ ದ್ರೌಪದಿಯ ಮಾತನ್ನೂ ಕೇಳಿ, ತನ್ನಲ್ಲಿತಾನು ಮುಗುಳ್ನಗೆಯಿಂದ ನಗುತ್ತ, ತನ್ನ ಮಿತ್ರನಾದ ಅರ್ಜುನನ ಮುಖವನ್ನು ನೋ ಡಿ,"ಅರ್ಜುನಾ!ಇದುವರೆಗೆ ನಡೆದ ಸಂಭಾಷಣೆಗಳೆಲ್ಲವನ್ನೂ ಕೇಳಿದೆಯಷ್ಟೆ?

ಇವನು ಜಾತಿಯಲ್ಲಿ ಬ್ರಾಹ್ಮಣನಾಗಿಯೂ, ಇವರಮೇಲೆ ಗುರುಪುತ್ರನಾಗಿಯೂ ಇರುವುದರಿಂದ, ಇವನನ್ನು ಕೊಲ್ಲಬಾರದು! ಕೊಲೆಗೆ ಯೋಗ್ಯವಾದ ಕಾರ್ಯವನ್ನು ನಡೆಸಿರುವುದರಿಂದ, ಇವನನ್ನು ಕೊಲ್ಲದೆಯೂ ಬಿಡಬಾರದು. ಹೀಗೆ ಈ ಧರ್ಮಸಂಕಟವು ಬಂದೊದಗಿರುವಹಜ್ಜೆ? ಇವೆರಡನ್ನೂ ನಾನು ಮೊದಲೇ ನಿನಗೆ ತಿಳಿಸಿರುವೆನಲ್ಲವೆ? ಇವೆರಡುಪಕ್ಷಕ್ಕೂ ವಿರೋಧವಿಲ್ಲದ ರೀತಿಯಲ್ಲಿ ಕಾರ್ಯವನ್ನು ಹೇಗೆ ನಡೆಸಬೇಕೋ ಅದನ್ನು ನೀನೇ ಯೋಚಿಸಿನೋಡು! ಪರಸ್ಪರವಿರುದ್ಧವಾದ ಈ ಧರ್ಮಸೂಕ್ಷ್ಮಗಳೆರಡಕ್ಕೂ ಹಾನಿಯುಂಟಾಗಬಾರದು! ನಿನ್ನ ಪ್ರತಿಜ್ಞೆಯೂ ನೆರವೇರಬೇಕು! ದ್ರೌಪದಿಯ ಮತ್ತು ಭೀಮಸೇನನ ಮಾತುಗಳಿಗೂ ವಿರೋಧವುಂಟಾಗಬಾರದು. ಆ ರೀತಿಯಾಗಿ ನಡೆಸುವುದಕ್ಕೆ ಉಪಾಯವನ್ನು ಯೋಚಿಸು. ಅರ್ಜುನಾ*! ಮುಖ್ಯವಾಗಿ ನನಗೂ, ನಿನಗೂ ಈ ದ್ರೌಪದಿಗೂ, ಈ ಭೀಮನಿಗೂ, ಈ ನಾಲ್ವರಿಗೂ ಸಮ್ಮತವಾದ ರೀತಿಯಲ್ಲಿ ಕಾರ್ಯವನ್ನು ನಡೆಸು!" ಎಂದನು. ಈ ಮಾತನ್ನು ಹೇಳುವಾಗಲೇ ಅರ್ಜುನನು ಶ್ರೀಕೃಷ್ಣನ ಮನೋಭಿಪ್ರಾಯವನ್ನು ತಿಳಿದು, ಖಡ್ಗವನ್ನು ಕೈಗೆತ್ತಿಕೊಂಡು, ಅಶ್ವತ್ಥಾಮನ ತಲೆಯಲ್ಲಿದ್ದ ಮಾಣಿಕ್ಯವನ್ನು ಅವನ ತಲೆಕೂದಲಿನೊಡನೆ ಕಿತ್ತುಕೊಂಡು, ಅವನ ಕಟ್ಟುಗಳನ್ನು ಬಿಡಿಸಿಕಳುಹಿಸಿಬಿಟ್ಟನು. ಮೊದಲೇ ತಿರುಹತ್ಯಾಪಾತಕದಿಂದ ಕಳೆಗೆಟ್ಟಿದ್ದ ಅಶ್ವತ್ಥಾಮನಿಗೆ ತಲೆಯಲ್ಲಿ ಸಹಜವಾಗಿ ಹುಟ್ಟಿದ್ದ ಮಾಣಿಕ್ಯವೂ ಹೋದಮೇಲೆ, ಅವನ ತೇಜ

---

* ಇಲ್ಲಿ ಅರ್ಜುನನು ಅಶ್ವತ್ಥಾಮನ ಶಿರೋರತ್ನವನ್ನು, ಅವನ ತಲೆಕೂದಲೊಡನೆ ಕತ್ತರಿಸಿಕೊಂಡು ಕಳುಹಿಸುವುದರಿಂದ, ಶ್ರೀ ಕೃಷ್ಣಾಜ್ಞೆಯಂತೆ ಎಲ್ಲರ ಅಭಿಮತವನ್ನೂ ನೆರವೇರಿಸಿದಂತಾಗುವುದು. ಹೇಗೆಂದರೆ---ಅಶ್ವತ್ಥಾಮನ ತಲೆಯೊಡನೆ ಅವನಿಗೆ ಸಹಜವಾದ ಶಿರೋರತ್ನವನ್ನು ಕೆತ್ತುಕೊಳ್ಳುವುದರಿಂದ ಅವನ ತಲೆಯನ್ನು ಕಡಿದು ತಂದಂತೆಯೇ ಆಗುವುದು. ಇದರಿಂದ ಅರ್ಜುನನ ಪ್ರತಿಜ್ಞೆಯು ನೆರವೇರಿದಂತಾಗುವುದು. ಪ್ರಾಣಹಾನಿಯಿಲ್ಲದೆ ಬಿಡುವುದರಿಂದ ದ್ರೌಪದಿಯ ಇಷ್ಟವೂ ನೆರವೇರುವುದು. ಅಶ್ವತ್ಥಾಮನಿಗೆ ಆ ವಿಧವಾದ ಮಾನಭಂಗವು ಮರಣಪ್ರಾಯವೇ ಆದುದರಿಂದ ಭೀಮನ ಕೋರಿಕೆಯನ್ನೂ, ಕೃಷ್ಣನ ಆಜ್ಞೆಯನ್ನೂ ನಡೆಸಿದಂತಾಗುವುದು. ಇವೆಲ್ಲಕ್ಕೂ ಅನುಗುಣವಾಗಿಯೇ ಅರ್ಜುನನು ಅಶ್ವತ್ಥಾಮನ ಶಿರೋಮಣಿಯನ್ನು ಕೆತ್ತುಕೊಂಡು ಕಳುಹಿಸಿದುದಾಗಿ ಗ್ರಾಹ್ಯವು.

ಸ್ಸು ಇನೂ ಕುಂದಿಹೋಯಿತು. ಒಡನೆಯೇ ಅವನು ಪಾಂಡವತಿಬಿರದಿಂದ ಹೊರಕ್ಕೆ ಹೊರಡಿಸಲ್ಪಟ್ಟನು. ಎಲೈ ಶೌನಕಾದಿಗಳೇ! ದುರ್ಮಾರ್ಗನಾದ ಅಶ್ವತ್ಥಾಮನಿಗೆ ಅರ್ಜುನನು ಮಾಡಿದ ಶಿಕ್ಷೆಯನ್ನು ನೋಡಿದಿರಷ್ಟೆ! ತಲೆಗೆ ಮುಂಡನವಾಯಿತು! ತಲೆಯಲ್ಲಿದ್ದ ಅಸಾಧಾರಣವಾದ ಮಾಣಿಕ್ಯವೂ ಹೋಯಿತು! ಪಾಂಡವರ ತಿಬಿರದಿಂದ ಅವಮಾನಪೂರ್ವಕವಾಗಿ ನಿಷ್ಕ್ರಮಣವೂ ಆಯಿತು. ಲೋಕದಲ್ಲಿ ಬ್ರಹ್ಮಬಂಧುಗಳಿಗೆ ಈ ದೇಹದಲ್ಲಿ ಇದಕ್ಕಿಂತಲೂ ಅಧಿಕಶಿಕ್ಷೆಯೇನಿರುವುದು! ಅಶ್ವತ್ಥಾಮನು ಹೀಗೆ ಅವಮಾನಪಟ್ಟು ಹೊರಗೆ ಹೋದಕೂಡಲೆ, ಇತ್ತಲಾಗಿ ಪುತ್ರಶೋಕದಿಂದ ಪೀಡಿತರಾದ ಪಾಂಡವರೆಲ್ಲರೂ ದ್ರೌಪದೀಸಮೇತರಾಗಿ ಹೊರಟು, ಯುದ್ಧದಲ್ಲಿ ಮೃತರಾದ ತಮ್ಮ ಜ್ಞಾತಿಗಳೆಲ್ಲರಿಗೂ ನಡೆಸಬೇಕಾದ ದಹನಾದಿಕೃತ್ಯಗಳನ್ನು ನಡೆಸಿದರು. ಇದು ಏಳನೆಯ ಅಧ್ಯಾಯವು.

ಪಾಂಡವರು ಗಂಗಾತೀರಕ್ಕೆ ಬಂದುದು. ಕುಂತಿಯ ಪ್ರಾರ್ಥನೆಯಮೇಲೆ ಕೃಷ್ಣನು ಹಸ್ತಿನಾಪುರದಲ್ಲಿ ನಿಂತುದು.

ಹೀಗೆ ಪಾಂಡವರು ಅಲ್ಲಿಂದ ಹೊರಟು, ಪ್ರೇತರೂಪದಿಂದಿರುವ ತಮ್ಮ ಜ್ಞಾತಿಗಳಿಗೆ ಪಿಂಡೋದಕಗಳನ್ನು ಕೊಡುವುದಕ್ಕಾಗಿ ದ್ರೌಪದಿ ಮೊದಲಾದ ಪತ್ನಿಯರೊಡನೆಯೂ, ಶ್ರೀಕೃಷ್ಣಸೊಡನೆಯೂ ಕೂಡಿ, ಗಂಗಾನದಿಗೆ ಬಂದರು. ಅಲ್ಲಿ ಸಮ್ಯಕ್ತಾವಾಗಿ ತಮ್ಮ ಬಂಧುಗಳೆಲ್ಲರಿಗೂ ಪಿಂಡೋದಕವನ್ನು ಕೊಟ್ಟು, ಬಂಧುಮರಣಕ್ಕಾಗಿ ದುಃಖಿಸಿ ವಿಲಪಿಸುತ್ತ, ಕೊನೆಗೆ ಶ್ರೀಕೃಷ್ಣನ ಪಾದರೇಣುವಿನ ಸಂಬಂಧದಿಂದ ಪವಿತ್ರವಾದ ಗಂಗಾನದಿಯಲ್ಲಿ ಸ್ನಾನವನ್ನು ಮಾಡಿ ಸೂತಕವನ್ನೂ ಕಳೆದರು ಆಮೇಲೆ ಶ್ರೀಕೃಷ್ಣನು ಗಂಗಾತೀರದಲ್ಲಿ ಧರ್ಮರಾಜಾದಿಗಳನಡುವೆ ಕುಳಿತು, ಅಲ್ಲಿ ಬಂಧುಮರಣಕ್ಕಾಗಿ ಬಹಳದುಃಖದಿಂದ ಸಂಕಟಪಡುತಿದ್ದ ಧೃತರಾಷ್ಟ್ರನನ್ನೂ, ಪುತ್ರಶೋಕಪೀಡಿತೆಯರಾಗಿದ್ದ ದ್ರೌಪದೀಗಾಂಧಾರಿಯರನ್ನೂ, ಕುಂತೀದೇವಿಯನ್ನೂ ತಾನೇ ಸಮಾಧಾನಪಡಿಸುವುದಕ್ಕೆ ತೊಡಗಿದನು. ಲೋಕ

ದಲ್ಲಿ ಸಮಸ್ತಪ್ರಾಣಿಗಳಿಗೂ ಜನನಮರಣಾದಿಗಳನ್ನುಂಟುಮಾಡುತ್ತಿರುವ ಕಾಲಗತಿಯು ಯಾರಿಗೂ ತಪ್ಪಿದುದಲ್ಲವೆಂಬ ತತ್ವವನ್ನು ತಿಳಿಸಿ, ಅವರೆಲ್ಲರಿಗೂ ಸಮಾಧಾನವನ್ನು ಹೇಳಿದನು. ಆಲ್ಲಿದ್ದ ಋಷಿಗಳೆಲ್ಲರೂ ಹಾಗೆಯೇ ತತ್ತ್ವೋಪದೇಶವನ್ನು ಮಾಡಿ ಸಮಾಧಾನವನ್ನು ಹೇಳುತಿದ್ದರು. ಎಲೈ ಶೌನಕಾದಿಗಳೇ! ದುರ್ಯೋಧನಾಧಿಗಳು ಹಿಂದೆ ದ್ರೌಪದಿಯ ಮಾನಭಂಗವನ್ನು ಮಾಡಿದಾಗಲೇ ಅವರ ಆಯುಸ್ಸು ತೀರಿತು! ಹೀಗೆ ಮೊದಲೇ ಮೃತಪ್ರಾಯರಾಗಿದ್ದ ಆ ಕೌರವರನ್ನು ಶ್ರೀಕೃಷ್ಣನು ಅರ್ಜುನಾದಿಗಳ ಕೈಯಿಂದ ತಿರುಗಿ ಕೊಲ್ಲಿಸಿದಂತಾಯಿತೇಹೊರತು ಬೇರೆಯಲ್ಲ. ಆ ದುರಾತ್ಮರು ಜೂಜಿನ ನೆವದಿಂದ ಸಾಧಿಸಿದ ರಾಜ್ಯವೂ ತಿರುಗಿ ಧರ್ಮರಾಜನ ವಶವಾಯಿತು. ಆಮೇಲೆ ಶ್ರೀಕೃಷ್ಣನು ಧರ್ಮರಾಜನಿಂದ ವಿಧ್ಯುಕ್ತವಾಗಿ ಅಶ್ವಮೇಧ ಯಾಗಗಳನ್ನು ಮಾಡಿಸಿದನು. ದೇವೇಂದ್ರನ ಕೀರ್ತಿಯಂತೆ ಆ ಧರ್ಮರಾಜನ ಕೀರ್ತಿಯು ತ್ರೈಲೋಕ್ಯವನ್ನೂ ವ್ಯಾಪಿಸಿತು. ಶ್ರೀಕೃಷ್ಣನ ಕೃಪೆಯಿಂದಲೇ ಧರ್ಮರಾಜನಿಗೆ ಈ ಅಭ್ಯುದಯಗಳೆಲ್ಲವೂ ಕೈಗೂಡಿದುವು. ಆಮೇಲೆ ಕೃಷ್ಣನು ಪಾಂಡವರಿಂದ ಅನುಮತಿಯನ್ನು ಪಡೆದು. ಸಾತ್ಯಕಿಯನ್ನೂ, ಉದ್ಧವನನ್ನೂ ಸಂಗಡ ಕರೆದುಕೊಂಡು, ದ್ವಾರಕೆಗೆ ಹೊರಡಲುದ್ಯುಕ್ತನಾದನು. ವ್ಯಾಸಾದಿಮಹರ್ಷಿಗಳೆಲ್ಲರೂ ಅವನನ್ನು ಸ್ವಲ್ಪದೂರವರೆಗೆ ಹಿಂಬಾಲಿಸಿ ಬಂದರು. ಶ್ರೀಕೃಷ್ಣನು ಅವರೆಲ್ಲರನ್ನೂ ಯಥೋಚಿತವಾಗಿ ಪೂಜಿಸಿ, ಆವರಸತ್ಕಾರಗಳನ್ನು ಪ್ರೀತಿಯಿಂದ ಕೈಕೊಂಡು.ರಥವನ್ನೇರಿ ಮುಂದಕ್ಕೆಹೊರಡುವಷ್ಟರಲ್ಲಿ,ಉತ್ತರೆಯುಇದ್ದಕ್ಕಿದ್ದಹಾಗೆಭಯಾತುರೆಯಾಗಿ,ಶ್ರೀಕೃಷ್ಣನ ರಥವನ್ನು ಬಿಡದೆ ಹಿಂಬಾಲಿಸಿಹೊರಟಳು. ಹೀಗೆ ಭಯದಿಂದ ಹಿಂಬಾಲಿಸಿ ಬರುತ್ತಿರುವ ಉತ್ತರೆಯನ್ನು ಕಂಡೊಡನೆ ಕೃಷ್ಣನು,ರಥವನ್ನು ನಿಲ್ಲಿಸಿದನು.ಆಗ ಉತ್ತರೆಯುಕೃಷ್ಣನನ್ನು ನೋಡಿ ವಿಜ್ಞಾಪಿಸುವಳು.''ಕೃಷ್ಣಾ!ರಕ್ಷಿಸು! ರಕ್ಷಿಸು! ನೀನು ಬ್ರಹ್ಮಾದಿದೇವತೆಗಳಿಗೂ ದೇವತೆಯನಿಸಿಕೊಂಡವನು! ಸಮಸ್ತಪ್ರಪಂಚಗಳನ್ನೂ ರಕ್ಷಿಸತಕ್ಕವನು. ಸಮಸ್ತಸೂಕ್ಷ್ಮಾರ್ಥಗಳನ್ನೂ ತಿಳಿದವನು. ನಿನ್ನೊಬ್ಬನನ್ನು ಹೊರತು ಲೋಕದಲ್ಲಿಜರಾಮರಣಾದಿಭಯಗಳು ಬೇರೆಯಾರನ್ನೂ ಬಿಟ್ಟುದಲ್ಲ. ಆ ಮೃತ್ಯುಭಯವನ್ನು ತಪ್ಪಿಸುವುದಕ್ಕೆ ಬೇರೆ

ಯಾರಿಗೂ ಸಾಧ್ಯವಲ್ಲ.ಈ ಕಾರ್ಯಕ್ಕೆ ನೀನೊಬ್ಬನೇ ಸಮರ್ಥನು!ಆದುದರಿಂದ ಎಲೈ ಲೋಕನಾಥನೆ! ನನ್ನನ್ನು ರಕ್ಷಿಸು ರಕ್ಷಿಸು! ಇದೋ ಅಗ್ನಿಜ್ವಾಲೆಯಿಂ ದುರಿಯುತ್ತಿರುವ ಉಕ್ಕಿನ ಬಾಣವೊಂದು, ನನಗಿದಿರಾಗಿ ಬರುತ್ತಿರುವುದು. ಕೃಷ್ಣಾ ! ಈ ಬಾಣದಿಂದ ನಾನು ಸಾಯುವೆನೆಂಬ ಭಯವು ನನಗಿಲ್ಲ.ಈಬಾಣವು ನನ್ನನ್ನು ಕೊಂದರೂ ಚಿಂತೆಯಿಲ್ಲ! ನನ್ನಗರ್ಭದಲ್ಲಿರುವ ಶಿಶುವಿಗೆ ಆ ಪಾಯವಿಲ್ಲದಂತೆ ರಕ್ಷಿಸುವ ಭಾರವು ನಿನ್ನದು !" ಎಂದು ಕಣ್ಣೀರು ಬಿಟ್ಟು ಮೊರೆಯಿಡುತಿದ್ದಳು!ಇದನ್ನು ಕೇಳಿ ಭಕ್ತವತ್ಸಲನಾದ ಶ್ರೀಕೃಷ್ಣನು ತನ್ನಲ್ಲಿ ತಾನು,"ಅಹಾ ! ಆ ಅಶ್ವತ್ಥಾಮನು ಪಾಂಡವಕುಲವನ್ನು ನಿರ್ಮೂಲಮಾಡಬೇಕೆಂದು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿರುವನು." ಎಂದು ನಿಶ್ಚಯಿಸಿಕೊಂಡನು. ಇಷ್ಟರಲ್ಲಿ ಇತ್ತಲಾಗಿ ಪಾಂಡವರು ತಮಗಿದಿರಾಗಿ ಐದುಬಾಣಗಳು ಜಾಜ್ವಲ್ಯಮಾನವಾಗಿ ಬರುತ್ತಿರುವುದನ್ನು ನೋಡಿ, ಅವುಗಳನ್ನಡಗಿಸುವುದಕ್ಕಾಗಿ ಪ್ರತ್ಯಸ್ತ್ರಗಳನ್ನು ಪ್ರಯೋಗಿಸುತ್ತಬಂದರು. ಇವರ ಪ್ರಯತ್ನವೊಂದೂ ಸಾಗದೆ ಹೋಯಿತು. ಆಗ ಶ್ರೀಕೃಷ್ಣನು ಬೇರೆ ರಕ್ಷಕರಿಲ್ಲದೆ ತನ್ನನ್ನೇ ನಂಬಿರುವ ಪಾಂಡವರ ದುಃಖವನ್ನುನೋಡಿ, ತನ್ನ ಚಕ್ರಾಯುಧದಿಂದ ಆ ಅಸ್ತ್ರಗಳನ್ನು ತಡೆದು ಪಾಂಡವರನ್ನು ರಕ್ಷಿಸಿದನು. ಅದರಿಂದಾಚೆಗೆ ಆ ಅಸ್ತ್ರಜ್ವಾಲೆಯು ಉತ್ತರೆಯ ಗರ್ಭವನ್ನು ವ್ಯಾಪಿಸಿತು. ಸರ್ವಾಂತರ್ಯಾಮಿಯಾಗಿಯೂ, ಸಮಸ್ತಜಗತ್ತಿಗೂ ಧಾರಕನಾಗಿಯೂ, ಸೂಕ್ಷ್ಮದರ್ಶಿಯಾಗಿಯೂ ಇರುವ ಶ್ರೀಕೃಷ್ಣನು ಈ ಸಂಗತಿಯನ್ನು ತಿಳಿದು, ಕುರುವಂಶಾಭಿವೃದ್ಧಿಗೆ ಭಂಗವು ಬಾರದಂತೆ ರಕ್ಷಿಸುವುದಕ್ಕಾಗಿ, ಉತ್ತರೆಯ ಗರ್ಭದಲ್ಲಿರುವ ಶಿಶುವು ಬ್ರಹ್ಮಾಸ್ತ್ರದಿಂದ ಅಪಾಯಕ್ಕೆ ಸಿಕ್ಕದಂತೆ, ತನ್ನಮಾಯೆಯಿಂದ ಅದನ್ನಾವರಿಸಿಕೊಂಡನು. ತನ್ನ ಸುದರ್ಶನಚಕ್ರದಿಂದ ಆ ಬ್ರಹ್ಮಾಸ್ತ್ರದ ಶಕ್ತಿಯನ್ನಡಗಿಸುತ್ತ ಬಂದನು ಎಲೈ ಶೌನಕಾದಿಗಳೇ ! ವಾಸ್ತವವನ್ನು ವಿಚಾರಿಸಿದರೆ,ಬ್ರಹ್ಮತೇರೋನಾಮಕವಾದ ಆ ಮಹಾಸ್ತ್ರಕ್ಕೆ ಯಾವ ವಿಧದಿಂದಲೂ ಪ್ರತೀಕಾರವಿಲ್ಲ. ಬೇರೆ ಯಾವ ಉಪಾಯದಿಂದಲೂ ಅದರ ಶಕ್ತಿಯನ್ನಡಗಿಸುವುದು ಸಾಧ್ಯವಲ್ಲ. ಹಾಗಿದ್ದರೂ ವಿಷ್ಣುತೇಜೋರೂಪವಾದ ಚಕ್ರಾಯುಧದಮುಂದೆಮಾತ್ರ,ಅದರ ಶಕ್ತಿಯು ಸಾಗದೆ

ಹೋಯಿತು. ಅಪ್ರತಿಹತವಾದ ಅ.ಬ್ರಹ್ಮಾಸ್ತ್ರದ ಶಕ್ತಿಯನ್ನೆಡಗಿಸುವುದಕ್ಕೆ ವಿಷ್ಣುಚಕ್ರವುಮಾತ್ರ ಹೇಗೆ ಸಮರ್ಥವಾಯಿತೆಂದು ನೀವು ಆಶ್ಚರ್ಯಪಡಬೇಕಾದುದಿಲ್ಲ! ವಿಷ್ಣುವಿನ ಮಹಿಮೆಯು ಸಾಮಾನ್ಯವಾದುದಲ್ಲ. ಆತನು ಪರಾಶ್ಚರ್ಯಮಯನು! ಆ ಭಗವಂತನು ಕರ್ಮಾಧೀನವಾದ ಶರೀರವಿಲ್ಲದವನಾಗಿ, ತನ್ನ ಆಶ್ಚರ್ಯಶಕ್ತಿಯಿಂದಲೇ ಚಿದಚಿದಾತ್ಮಕವಾದ ಈ ಪ್ರಪಂಚವೆಲ್ಲವನ್ನೂ ಸೃಷ್ಟಿಸುವನು. ತಾನೇ ಅದನ್ನು ರಕ್ಷಿಸುವನು! ತಾನೇ ಅದನ್ನು ನಾಶಹೊಂದಿಸುವನು. ಈ ಮೂರುಕಾರ್ಯಗಳನ್ನೂ ಆತನು ತನಗಧೀನವಾಗಿಯೇ ಇಟ್ಟುಕೊಂಡಿರುವುದರಿಂದ, ಅವನಿಗೆ ಇದೊಂದು ಘನವಾದ ಕಾರ್ಯವಲ್ಲ. ಈ ವಿಚಾರವು ಹಾಗಿರಲಿ! ಇತ್ತಲಾಗಿ ಕುಂತೀದೇವಿಯು ಬ್ರಹ್ಮಾಸ್ತ್ರಬಾಧೆಯಿಂದ ತಪ್ಪಿಸಿಕೊಂಡ ತನ್ನ ಪುತ್ರರೂಢನೆಯೂ, ದ್ರೌಪದಿಯೊಡನೆಯೂ ಸೇರಿಬಂದು,ಪ್ರಯಾಣಾಭಿಮುಖನಾದ ಶ್ರೀಕೃಷ್ಣನನ್ನುನೋಡಿ ವಿಜ್ಞಾಪಿಸುವಳು. ''ಎಲ್ಲೆ ದೇವದೇವನೆ! ನೀನು ಸಕಲಜಗತ್ಕಾರಣನು!ಪ್ರಕೃತಿಗಿಂತಲೂ ಬೇರೆಯಾದವನು! ಸರ್ವಲೋಕೇಶ್ವರನು! ಸಮಸ್ತಭೂತಗಳ ಹೊರಗೂ, ಒಳಗೂ ವರ್ತಿಸತಕ್ಕವನಾದರೂ, ಪ್ರಕೃತಿಯಂತೆ ದೃಷ್ಟಿಗೋಚರನಾಗುವವನಲ್ಲ. ದೇವಾ! ನೀನು ಮಾಯೆಯಂಬ ತೆರೆಯಲ್ಲಿ ಮರೆಸಿಕೊಂಡವನಾದುದರಿಂದ, ಉಪಾಸಕರಲ್ಲದವರ ಇಂದ್ರಿಯಗಳಿಗೆ ಕಾಣುವವನಲ್ಲ. ವೇಷಧಾರಿಯಾದ ನಟನ ನಿಜರೂಪವನ್ನು ತಿಳಿಯುವುದು ಮಂದಬುದ್ಧಿಯುಳ್ಳವರಿಗೆ ಹೇಗೆ ಸಾಧ್ಯವಲ್ಲವೋ,ಹಾಗೆ ಯೋಗಸಿದ್ಧಿಯಿಲ್ಲದವರ ಕಣ್ಣಿಗೆ ನೀನು ಕಾಣಿಸಲಾರೆ. ಕೃಷ್ಣಾ ! ಅಂತಹ ಪರಾತ್ಪರನಾದ ನಿನ್ನ ಪಾದಗಳಿಗೆ ನಮಸ್ಕಾರವು. ಎಲ್ಲೆ ದೇವದೇವನೆ! ಯಾವಾಗಲೂ ನಿನ್ನ ಸ್ವರೂಪವನ್ನು ಮನನಮಾಡುತ್ತ, ಶುದ್ಧಾತ್ಮರಾಗಿ,ಪರಮಹಂಸರೆನಿಸಿಕೊಂಡ ಮಹರ್ಷಿಗಳ ಭಕ್ತಿಯೋಗಕ್ಕೆಮಾತ್ರವೇ ವಿಷಯನಾಗತಕ್ಕ ನಿನ್ನನ್ನು, ಮೂಢಸ್ತ್ರೀಯರಾದ ನಾವು ಹೇಗೆತಾನೇ ತಿಳಿಯಬಲ್ಲೆವು?ನಟನು ಪಾತ್ರಗಳಿಗೆ ತಕ್ಕವೇಷಭಾಷೆಗಳನ್ನು ತೋರಿಸುವಾಗ, ಆಯಾ ನಾಮರೂಪಗಳಿಂದಲೇ ಹೊರಕ್ಕೆ ಕಾಣುವಂತೆ, ನೀನೂ ಅವತಾರಗಳನ್ನೆತ್ತಿದಾಗ, ನಿನಗಿರುವ ಕೃಷ್ಣವಾಸುದೇವಾದಿನಾಮಗಳನ್ನು ಮಾತ್ರ ನಾವು ತಿಳಿಯಬಲ್ಲೆವು. ಆದುದರಿಂದ ಆ ಹೆಸರು

ಗಳಿಂದಲೇ ನಿನ್ನನ್ನು ಸ್ತುತಿಸುವೆವು. ಹೇ ಕೃಷ್ಣಾ ! ಹೇ ವಾಸುದೇವಾ! ಹೇ ದೇವಕೀನಂದನಾ!ಹೇ ನಂದಕುಮಾರಾ!ಗೋವಿಂದಾ! ನಿನಗೆ ಬಾರಿಬಾರಿಗೂ ನಮಸ್ಕಾರವು! ಓ ಪದ್ಮನಾಭಾ ! ನಿನಗೆ ನಮಸ್ಕಾರವು ! ಪುಂಡರೀಕಾಕ್ಷಾ ! ನಿನಗೆ ನಮಸ್ಕಾರವು ! ಪದ್ಮಮಾಲಾಶೋಭಿತನಾದ ಓ ಕೃಷ್ಣಾ ! ನಿನಗೆ ನಮಸ್ಕಾರವು. ಕಮಲದಂತೆ ಪಾದವುಳ್ಳ ಹೇ ವಾಸುದೇವಾ! ನಿನಗೆ ನಮಸ್ಕಾರವು. ಓ ಹೃಷೀಕೇಶಾ ! ದುರಾತ್ಮನಾದ ಕಂಸನ ಸೆರೆಯಲ್ಲಿ ಸಿಕ್ಕಿ ದುಃಖಿತೆಯಾದ ದೇವಕೀದೇವಿಯನ್ನು ದುಃಖದಿಂದ ಬಿಡಿಸಿದಂತೆ, ನನ್ನನ್ನೂ ಈ ನನ್ನ ಪುತ್ರರೊಡನೆ ವಿಪತ್ತುಗಳಿಂದ ತಪ್ಪಿಸಿ ಕಾಪಾಡಿದ ಪ್ರಭುವೇ ನೀನಲ್ಲವೆ ? ಆತ್ರಿತವತ್ಸಲಾ ! ಹಿಂದೆ ಭೀಮನು ವಿಷಾನ್ನವನ್ನು ತಿಂದೂಕೂಡ ಸಾಯದಂತೆ ರಕ್ಷಿಸಿದೆ ! ಅರಗಿನ ಮನೆಯಲ್ಲಿ ಸಿಕ್ಕಿ ಬೇಯುತಿದ್ದ ನಮ್ಮನ್ನು ಆ ಮಹಾಗ್ನಿಯಿಂದ ತಪ್ಪಿಸಿದೆ!ಆಗಾಗ ಅರಣ್ಯದಲ್ಲಿ ರಾಕ್ಷಸದರ್ಶನದಿಂದುಂಟಾದ ಭಯವಿಂದಕಾಪಾಡಿ, ವನವಾಸದುಃಖಗಳಿಂದಲೂ ಸಂರಕ್ಷಿಸಿದೆ! ದುರ್ಯೋಧನನಾದಿಗಳ ಸಭೆಯಲ್ಲಿ ದ್ರೌಪದಿಯ ಮಾನವನ್ನು ಕಾಪಾಡಿದೆ! ಒಂದೊಂದು ಯುದ್ಧದಲ್ಲಿಯೂ, ಎಷ್ಟೋಮಹಾವೀರರ ಶಸ್ತ್ರಾಸ್ತ್ರಗಳಿಂದ ರಕ್ಷಿಸಿದೆ! ಕೊನೆಗೆ ಈದ್ರೋಣಪುತ್ರನಾದ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದಲೂ ತಪ್ಪಿಸಿದೆ! ಓ ಜಗನ್ನಾಥಾ! ಕೃಷ್ಣಾ ! ತಿರುಗಿ ಸಂಸಾರಪ್ರವೇಶವಿಲ್ಲದಂತೆ ಮಾಡುವ ಈ ನನ್ನ ದರ್ಶನವು ಹೀಗೆಯೇ ಲಭಿಸುತಿದ್ದ ಪಕ್ಷದಲ್ಲಿ, ನಮಗೆ ಇಂತಹ ವಿಪತ್ತುಗಳು ಎಷ್ಟೆಷ್ಟೇ ಬಂದರೂಚಿಂತೆಯಿಲ್ಲ! ಇಂತಹ ವಿಪತ್ತುಗಳಿಗೆ ಸಿಕ್ಕಿದಹೊರತು ಮನುಷ್ಯರು ನಿನ್ನ ಕೃಪೆಗೆಪಾತ್ರರಾಗಲಾರರು. ಕುಲದಲ್ಲಿಯೂ, ಐಶ್ವರ್ಯದಲ್ಲಿಯೂ, ವಿದ್ಯೆಯಲ್ಲಿಯೂ, ಧನದಲ್ಲಿಯೂ, ಮೇಲೆಮೇಲೆ ವೃದ್ಧಿಯನ್ನು ಹೊಂದಿ, ಗರ್ವಿತರಾದ ಮನುಷ್ಯರು ದೀನವತ್ಸಲನಾದ ನಿನ್ನ ಹೆಸರನ್ನು ಹೇಳುವುದಕ್ಕಾದರೂ ಅರ್ಹರಾಗಲಾರರು. ದೇವಾ ! ನೀನು ನಿಷ್ಕಾಮರಾದ ಯೋಗಿಗಳಿಗೆ ಮಾತ್ರವೇ ಲಭ್ಯನು. ಮತ್ತು *ಸತ್ವರಜಸ್ತಮೋಗುಣಕಾರ್ಯಗಳಾದ ಕಾಮಕ್ರೋಧಾದಿ

---

* ಈ ಮೂರು ವಿಶೇಷಣಗಳಿಂದ, ಭಗವಂತನ ಅಸಾಧಾರಣಗುಣಗಳು ವ್ಯಕ್ತವಾಗುವುವು. ಗುಣಜನಿತಕಾರ್ಯಗಳಿಲ್ಲದವನೆಂಬುದರಿಂದ ಅಚಿತ್ತಿಗೆ ವ್ಯಾವೃತ್ತಿಯು

ಗಳಿಲ್ಲದವನು! ಹಸಿವು, ಬಾಯಾರಿಕೆ, ಶೋಕ ಮೋಹ, ಜರಾಮರಣಗಳೆಂಬ ಆರುಬಗೆಯ ಬಾಧೆಗಳಿಲ್ಲದವನು! ಆತ್ಮಾರಾಮನು! ಮೋಕ್ಷಪ್ರದನು. ನಿನಗೆ ನಮಸ್ಕರಿಸುವೆನು.ದೇವದೇವಾ!ಕಾಲವೆಂಬುದಕ್ಕೆಕೊನೆಮೊದಲಿಲ್ಲ!ಅದು ಸರ್ವ ಸಮವಾಗಿ ವರ್ತಿಸತಕ್ಕುದು. ಆ ಕಾಲದಿಂದಲೇ ಭೂತಗಳಿಗೆ ಅನ್ಯೋನ್ಯಕಲಹವು ಸಂಭವಿಸುತ್ತಿರುವುದು!ಬ್ರಹ್ಮಾದಿದೇವತೆಗಳನ್ನಾದರೂ ಅದು ವಶೀಕರಿಸದೆ ಬಿಡುವುದಲ್ಲ.ಆ ಕಾಲವೇ ನಿನಗೆ ಶರೀರರೂಪವಾಗಿರುವುದೆಂದು ತಿಳಿಯುವೆನು.ಎಲೈ ಮಹಾತ್ಮನೆ!ನೀನು ಮನುಷ್ಯರನ್ನು ಹೋಲುತ್ತಿರುವಾಗಲೂನಿನ್ನ ವ್ಯಾಪಾರಗಳನ್ನು ಯಾವನೂ ಕಂಡುಕೊಳ್ಳಲಾರನು. ನಿನಗೆ ಒಬ್ಬನು ಪ್ರಿಯನೆಂದೂ, ಮತ್ತೊಬ್ಬನು ದ್ವೇಷಿಯೆಂದೂ ಭೇದಬುದ್ಧಿಯಿಲ್ಲ. ನೀನು ತೋರಿಸತಕ್ಕ ನಿಗ್ರಹವೂಕೂಡ ಕೊನೆಗೆ ಪರಮಾನುಗ್ರಹರೂಪವಾಗಿ ಮುಕ್ತಿಯನ್ನೇಕೈಗೂಡಿಸುವುದು. ಯಮುಳಾರ್ಜುನಾದಿಗಳು ನಿನ್ನಿಂದ ನಿಗ್ರಹಿಸಲ್ಪಟ್ಟು ಮುಕ್ತಿಯನ್ನು ಹೊಂದಿದುದೇ ಇದಕ್ಕೆ ನಿದರ್ಶನವು.ಆದುದರಿಂದನಿನಗೆ ಯಾರಲ್ಲಿಯೂ, ಯಾವ ವಿಧವಾದ ವೈಷಮ್ಯವೂ ಇರದು! ಹೀಗೆ ಸರ್ವಸಮನಾಗಿರುವ ನಿನ್ನಲ್ಲಿ ವೈಷಮ್ಯವನ್ನಾರೋಪಿಸಬೇಕಾದರೆ ಅವರ ಬುದ್ಧಿಯೇ ವಿಷಮವಾಗಿರಬೇಕಲ್ಲದೆ ಬೇರೆಯಲ್ಲ ! ಓ ವಿಶ್ವಾತ್ಮಾ ! ನೀನು ಕರ್ಮಸಂಬಂಧವಿಲ್ಲದವನು. ಕರ್ಮಾಧೀನವಾದ ಜನ್ಮವಿಲ್ಲದವನು. ನೀನು ತಿರ್ಯಕ್ಕುಗಳಲ್ಲಿಯೂ, ಋಷಿಗಳಲ್ಲಿಯೂ, ಮನುಷ್ಯರಲ್ಲಿಯೂ ಬೇರೆಬೇರೆ ಅವತಾರಗಳನ್ನೆತ್ತಿ ನಡೆಸಿದ ಕಾರ್ಯಗಳೆಲ್ಲವೂ ಕೇವಲನಟನಗಳಲ್ಲದೆ ಬೇರೆಯಲ್ಲ. ಚಿಕ್ಕಂಚಿನಲ್ಲಿ ನೀನು ಯಾವುದೋ ಒಂದು ತಪ್ಪನ್ನು ಮಾಡಿದುದಕ್ಕಾಗಿ,ಯಶೋದೆಯುನಿನ್ನನ್ನು ಹಗ್ಗದಿಂದ ಕಟ್ಟುವಸಂದರ್ಭದಲ್ಲಿ ನಿನ್ನ ಕೈಯನ್ನು ಹಿಡಿದಾಗ,ಕಾಲಮೃತ್ಯುವಿಗೂ ನೀನು ಭಯವನ್ನುಂಟುಮಾಡಬಲ್ಲವನಾಗಿದ್ದರೂ, ಅಬಲೆಯಾದ ಆಕೆಯೊಬ್ಬಳಿಗೆ ಎಷ್ಟೋಭಯಪಟ್ಟವನಂತೆ ನಟಿಸುತ್ತ, ಕಾಡಿಗೆಯೆಲ್ಲವೂ ಕೆದರುವಂತೆ ಕಣ್ಣೀರುಬಿಟ್ಟು, ಬೆದರಿದ ದೃಷ್ಟಿಗಳಿಂದ ನೋಡುತ್ತ ನಿಂತೆಯಲ್ಲವೆ? ಆಗ ಮುಖದಲ್ಲಿ ಭಯವನ್ನು ನಟಿಸಿದ ನಿನ್ನ ಸ್ಥಿತಿಯು ನನ್ನನ್ನು

ಸೂಚಿತವಾಗುವುದು. ಜರಾಮರಣಾದಿಗಳಿಲ್ಲವೆಂಬುದರಿಂದ ಬದ್ಧಜೀವನಿಗೂ, ಆತ್ಮಾರಾಮತ್ವದೋಕ್ಷಪ್ರದತ್ವಗಳಿಂದ ನಿತ್ಯಮುಕ್ತಜೀವರಿಗೂ ವ್ಯಾವೃತ್ತಿಯು ಹೇಳಲ್ಪಡುವುದು.

ಮೋಹಸಮುದ್ರದಲ್ಲಿ ಮುಳುಗಿಸುತ್ತಿರುವುದು. ಕೃಷ್ಣಾ ! ಆ ನಿನ್ನ ಭಯವು ಕೇವಲನಟನವಲ್ಲದೆ ನಿಜವೆಂದು ಹೇಳುವುದಕ್ಕಾದೀತೇ ? ನೀನು ಜನ್ಮಾದಿಗಳಿಲ್ಲದವನಾದರೂಕೂಡ, ಕೆಲವರು ನಿನ್ನನ್ನು, ಪುಣ್ಯಶ್ಲೋಕನಾಗಿಯೂ, ನಿನಗೆ ಪರಮಭಕ್ತನಾಗಿಯೂ ಇರುವ ಯದುವಿನ ಕೀರ್ತಿಯನ್ನು ಹರಡಿಸುವುದಕ್ಕಾಗಿ ಮಲಯಪರ್ವತದಲ್ಲಿ ಚಂದನವೃಕ್ಷದಂತೆ ಅತನ ವಂಶದಲ್ಲಿ ಹುಟ್ಟಿದುದಾಗಿ ಹೇಳುವರು. ಬೇರೆಕೆಲವರು ಪರಮಪುರುಷನಾದ ನೀನು ದುಷ್ಟರಾಕ್ಷಸರ ವಧಾರ್ಥವಾಗಿಯೂ,ಲೋಕಕ್ಷೇಮಕ್ಕಾಗಿಯೂ, ದೇವಕೀವಸುದೇವರ ಪ್ರಾರ್ಥನೆಯಮೇಲೆ ಅವರಿಗೆ ಕುಮಾರನಾಗಿ ಜನಿಸಿದೆಯೆಂದು ಹೇಳುವರು. ಇನ್ನುಕೆಲವರು, ನೀನು ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿತನಾಗಿ, ಸಮುದ್ರದಲ್ಲಿ ಭಾರದಿಂದ ಮುಳುಗಿ ಹೋಗುತ್ತಿರುವ ಹಡಗಿನಿಂದ, ಆದರ ಭಾರವನ್ನಿಳಿಸುವಂತೆ, ಭೂಭಾರವನ್ನು ತಪಿಸುವುದಕ್ಕಾಗಿಯೇ ಹುಟ್ಟಿದೆಯೆಂದು ಹೇಳುವರು. ತತ್ವಜ್ಞಾನಿಗಳಾದ ಮತ್ತೆಕೆಲವರು, ಈ ಲೋಕದಲ್ಲಿ ಅಜ್ಞಾನದಿಂದಲೂ, ವಿಷಯಾಭಿಲಾಷೆಯಿಂದಲೂ, ಅದಕ್ಕನುಕೂಲಗಳಾದ ಕಾರ್ಯಗಳಿಂದಲೂ ಬದ್ಧರಾಗಿ, ಸಂಸಾರಸಮುದ್ರದಲ್ಲಿ ಸಿಕ್ಕಿನರಳುತ್ತಿರುವ ಮನುಷ್ಯರಿಗೆ, ನಿನ್ನ ಚರಿತ್ರಗಳನ್ನು ಕೇಳುವುದಕ್ಕೂ, ನಿನ್ನ ರೂಪವನ್ನು ಧ್ಯಾನಿಸುವುದಕ್ಕೂ ಆಶೆಹುಟ್ಟಿಸುವಂತೆ, ಈ ಅವತಾರಗಳನ್ನೆತ್ತಿರುವೆಯೆಂದು ಹೇಳುವರು. ದೇವಾ! ನಿನ್ನ ಚರಿತ್ರಗಳನ್ನು ಯಾರು ಕೇಳುವರೋ, ಯಾರು ಹೇಳುವರೋ, ಯಾರು ಗಾನಮಾಡುವರೋ, ಯಾರು ಆಗಾಗ ಸ್ಮರಿಸುವರೋ, ಯಾರು ನಿನ್ನ ಗುಣವರ್ಣನದಿಂದಾನಂದಿಸುವರೋ, ಅಂತವರುಮಾತ್ರವೇ ತೀಕ್ಷ್ಣಕಾಲದಲ್ಲಿ ಸಂಸಾರತಾರಕವಾದ ನಿನ್ನ ಪಾದಪದ್ಮಗಳನ್ನು ನೋಡಬಲ್ಲರು. ಎಲೈ ಮಹಾತ್ಮನೆ! ನಿನ್ನ ಪಾದಾಶ್ರಯದಿಂದ ದುಃಸಮಸ್ತದುಃಖಗಳನ್ನೂ ಜಯಿಸಿದ ನಮಗೆ, ಈ ನಿನ್ನ ಪಾದಪದ್ಮಗಳು ಹೊರತು ಬೇರೆ ದಿಕ್ಕಿಲ್ಲ. ಹೀಗೆ ಸರ್ವವಿಧದಲ್ಲಿಯೂ ನಿನ್ನನ್ನೇ ನಂಬಿ, ನಿನ್ನಲ್ಲಿ ಸ್ನೇಹವನ್ನು ಬೆಳಸಿ, ನಿನಗೆ ಅನುಜೀವಿಗಳಾಗಿರುವ ನಮ್ಮನ್ನು ಈಗ ಬಿಟ್ಟು ಹೋಗಬೇಕೆಂದೆಣಿಸುವೆಯಾ? ಜೀವನಿಲ್ಲದಮೇಲೆ ಇಂದ್ರಿಯಗಳ ವ್ಯಾಪಾರವು ಹೇಗೆ ನಿಂತುಹೋಗುವುವೋ, ಹಾಗೆ ನಿನ್ನ ಸಾನ್ನಿಧ್ಯವಿಲ್ಲದಮೇಲೆ, ನಾ

ವಾಗಲಿ, ಯಾದವರಾಗಲಿ, ಯಾವ ಕಾರ್ಯಕ್ಕೂ ಬೇಡದೆ ಹೋಗುವೆವು. ನಾವು ಕೇವಲನಾಮರೂಪಗಳನ್ನು ಹೊತ್ತಿದ್ದಮಾತ್ರಕ್ಕೆ ನಮ್ಮಿಂದೇನಾಗುವುದು? ಸರೋತ್ತಮಗಳಾದ ಶುಭಲಕ್ಷಣಗಳಿಂದ ಶೋಭಿತವಾದ ಈ ನಿನ್ನ ಪಾದದ ಗುರುತುಗಳು ಈ ನೆಲದಲ್ಲಿ ಕಾಣುತ್ತಿರುವವರೆಗೆಮಾತ್ರವೇ ಈ ದೇಶವು ಶೋಭಿಸುತ್ತಿರುವುದೇಹೊರತು, ಅದಿಲ್ಲದಾಗ ಇದರ ಕಳೆಯೇ ಕೆಟ್ಟುಹೋಗುವುದು. ಕೃಷ್ಣಾ ! ನಿನ್ನ ಕಟಾಕ್ಷಮಾತ್ರದಿಂದಲ್ಲವೇ ಈ ಪ್ರದೇಶಗಳೆಲ್ಲವೂ ಸಸ್ಯಸಮೃದ್ಧಿಯಿಂದಲೂ, ಪುಷ್ಪಫಲಗಳಿಂದಲೂ ಅಲಂಕೃತವಾಗಿರುವುವು. ಅನುಗ್ರಹಪೂರ್ವಕವಾದ ನಿನ್ನ ಈ ನೋಟದಿಂದಲ್ಲವೇ ಇಲ್ಲಿನ ಉದ್ಯಾನವನಗಳೂ, ನದಿಗಳೂ, ಪರ್ವತಗಳೂ ವೃದ್ಧಿಹೊಂದುತ್ತಿರುವುವು ! ಎಲೈ ವಿಶ್ವಾತ್ಮನೆ! ಎಲೈ ವಿಶ್ವಶರೀರನೆ! ಸಮಸ್ತಪ್ರಾಣಿಗಳ ಅಂತಃಕರಣಗಳನ್ನೂ ನಿಯಮಿಸತಕ್ಕವನು ನೀನೇ ಅಲ್ಲವೆ? ಇದೇನು? ನೀನು ನಿನ್ನವರಾದ ಈ ಪಾಂಡವರಲ್ಲಿಯೂ, ನನ್ನಲ್ಲಿಯೂ, ಯಾದವರಲ್ಲಿಯೂ ಇರತಕ್ಕ ದೃಢವಾದ ಸ್ನೇಹಪಾಶವನ್ನು ಛೇದಿಸುವುದಕ್ಕೆ ಪ್ರಯತ್ನಿಸುವೆಯಾ ? ಮುಂದೆ ನಮ್ಮ ಗತಿಯೇನು ? ನಿನಗಿಂತಲೂ ಬೇರೆ ಗತಿಯಿಲ್ಲವೆಂದು ನಂಬಿರುವ ಈ ನಮ್ಮ ಬದ್ಧಿಯು, ಗಂಗಾಪ್ರವಾಹವು ಅವಿಚ್ಛಿನ್ನವಾಗಿ ಸಮುದ್ರವನ್ನು ಸೇರುವಂತೆ, ಬಾರಿಬಾರಿಗೂ ನಿನ್ನಲ್ಲಿಯೇ ಲಯಹೊಂದಿ, ಅಮಿತಾನಂದವನ್ನು ಹೊಂದುತ್ತಿರುವುದು. ಸಮುದ್ರವನ್ನು ಬಿಟ್ಟರೆ ಗಂಗಾಪ್ರವಾಹಕ್ಕೆ ಬೇರೆ ಆಶ್ರಯವೇ ಇಲ್ಲದಂತೆ, ನಿನ್ನನ್ನು ಬಿಟ್ಟರೆ ನಮಗೆ ಬೇರೆ ಆಶ್ರಯವಿಲ್ಲವು. ಹೇ ಕೃಷ್ಣಾ ! ನನ್ನ ಪುತ್ರನಾದ ಅರ್ಜುನನಿಗೆ ನೀನು ಪರಮಮಿತ್ರನಲ್ಲವೆ ? ಭೂಮಿಗೆ ಭಾರಭೂತರಾದ ದುಷ್ಟಕ್ಷತ್ರಿಯರ ವಂಶವನ್ನು ದಹಿಸುವುದರಲ್ಲಿ ನಿನ್ನ ವೀರ್ಯವು ಅಗ್ನಿಪ್ರಾಯವಾದುದು. ನೀನು ಯಾದವಕುಲಕ್ಕೆ ತಿಲಕದಂತಿರುವವನು. ಎಣೆಯಿಲ್ಲದ ವೀರ್ಯವುಳ್ಳವನು. ಗೋಬ್ರಾಹ್ಮಣರ ಮತ್ತು ದೇವತೆಗಳ ಹಿತಕ್ಕಾಗಿಯೇ ಈ ಅವತಾರವನ್ನೆತ್ತಿದವನು. ಯೋಗೀಶ್ವರರೆಲ್ಲರಿಗೂ ನೀನೇ ಗುರುವೆನಿಸಿಕೊಂಡವನು. ಲೋಕದಲ್ಲಿ ನಿನ್ನನ್ನು ಯಾರುತಾನೇ ಸ್ತುತಿಸಬಲ್ಲರು?· ಗೋವಿಂದಾ! ನಿನಗೆ ಅನೇಕವಂದನೆಗಳನ್ನು ಸಮರ್ಪಿಸುವೆನು. ನನ್ನ ಪ್ರಣಾಮಗಳನ್ನು ಸ್ವೀಕರಿಸು!" ಎಂದು ಕೈಮುಗಿದು ನಿಂತಿದ್ದಳು. ಹೀಗೆ

ಕುಂತಿಯು ಮೃದುಮಧುರವಚನಗಳಿಂದ ಸ್ತುತಿಸುವುದನ್ನು ನೋಡಿ ಕೃಷ್ಣನು ತನ್ನ ಮಾಯೆಯಿಂದ ಅವಳನ್ನು ಮೋಹಗೊಳಿಸುವಂತೆ ಮುಕುಳ್ನಗೆಯಿಂದನ ಗುತ್ತ ''ಅಮ್ಮಾ! ನಿನ್ನಿಷ್ಟದಂತೆಯೇ ನಡೆಸುವೆನು'' ಎಂದು ಹೇಳಿ ಧರ್ಮರಾಜನ ಪ್ರಾರ್ಥನೆಯನ್ನೂ ನಿರಾಕರಿಸಲಾರದೆ, ತನ್ನ ಪ್ರಯಾಣಸನ್ನಾಹವನ್ನು ನಿಲ್ಲಿಸಿ ಹಿಂತಿರುಗಿದನು. ಹಾಗೆಯೇ ಕುಂತೀದೇವಿಯನ್ನೂ, ಸುಭದ್ರೆ ಮೊದಲಾದ ಇತರಸ್ತ್ರೀಯರನ್ನೂ ಸಮಾಧಾನಪಡಿಸುತ್ತ, ತಿರುಗಿ ಹಸ್ತಿನಾಪುರಕ್ಕೆ ಪ್ರವೇತಿಸಿದನು. ಇಷ್ಟರಲ್ಲಿ ಧರ್ಮರಾಜನು ತಾನು ಹಿಂದಿನ ಯುದ್ಧದಲ್ಲಿ ನಡೆಸಿದ ಬಂಧುವಧೆಗಾಗಿ ಬಹಳಚಿಂತಾಕುಲನಾಗಿರುವುದನ್ನು ನೋಡಿ, ವ್ಯಾಸಾದಿಮಹರ್ಷಿಗಳೂ, ಅದ್ಭುತಪ್ರಭಾವವುಳ್ಳ ಶ್ರೀಕೃಷ್ಣನೂ, ಎಷ್ಟೋ ಇತಿಹಾಸಗಳನ್ನು ಹೇಳಿ ತಿಳಿಸಿ, ಆಗಾಗ ಅವನನ್ನು ಸಮಾಧಾನಪಡಿಸುತಿದ್ದರು. ಇಷ್ಟಾದರೂ ಧರ್ಮರಾಜನ ಮನಸ್ಸಿಗೆ ಪೂರ್ಣಶಾಂತಿಯುಂಟಾಗಲಿಲ್ಲ. ಆಗಾಗ ತನ್ನ ಬಂಧುಮರಣವನ್ನು ನೆನೆಸಿಕೊಂಡು ಘೋರಪಾಶದಿಂದ ಪರವಶನಾಗಿ, ಅಜಿಜ್ಞಾಸೆಯಿಂದ ಕವಿದ ಮನಸ್ಸುಳ್ಳವನಾಗಿ ''ಅಯ್ಯೋ! ಕೇವಲದುರಾತ್ಮನಾದ ನನ್ನ ಆಜ್ಞೆತೆಯನ್ನೇನೆಂದು ಹೇಳಲಿ! ನಾಯಿನರಿಗಳಿಗೆ ಆಹಾರಯೋಗ್ಯವಾಗಿ, ಕೇವಲತುಚ್ಛವಾದ ಈ ಶರೀರಕ್ಕೆ ಸೌಖ್ಯವನ್ನುಂಟುಮಾಡಬೇಕೆಂಬ ದುರಾಶೆಯಿಂದ, ಎಷ್ಟೋ ಪ್ರಾಣಿಗಳನ್ನು ಕೊಲ್ಲಿಸಿದೆನು. ಲೋಕದಲ್ಲಿ ಇಂತಹ ಪಾಪಿಯೇಕಿಯೂ ಬೇರೊಬ್ಬನುಂಟೆ? ಮಕ್ಕಳೆಂದೂ, ಮುದುಕರೆಂದೂ, ಬ್ರಾಹ್ಮಣರೆಂದೂ, ಗುರುಗಳೆಂದೂ, ಮಿತ್ರರೆಂದೂ, ಅಣ್ಣತಮ್ಮಂದಿರೆಂದೂ ನೋಡದೆ, ನಿರ್ದಯನಾಗಿ ಅಂತಹ ಮಹಾಪೀರರೆಲ್ಲರನ್ನೂ ಕೊಲ್ಲಿಸಿದ ನಾನು, ಇನ್ನು ಹತ್ತೆಂಟುಜನ್ಮಗಳನ್ನೆತ್ತಿದರೂ ಆ ಮಹಾಪಾತಕದಿಂದ ತಪ್ಪಿಸಿಕೊಳ್ಳಲಾರೆನು. ಧರ್ಮಯುದ್ಧದಲ್ಲಿ ಶತ್ರುಗಳನ್ನು ಕೊಲ್ಲುವುದರಿಂದಪಾಪವಿಲ್ಲವೆಂದು ಹೇಳುವುದುಂಟು! ಇದಕ್ಕೆ ನಾನುಮಾತ್ರಸಮ್ಮತಿಸಲಾರೆನು. ದೇಶದ ಪ್ರಜೆಗಳಿಗೆ ಕಷ್ಟವನ್ನುಂಟುಮಾಡಿ, ಅವರನ್ನು ಬಾಧಿಸತಕ್ಕ ಶತ್ರುರಾಜರನ್ನು ಕೊಂದರೂ ಕೊಲ್ಲಬಹುದು. ಅದರಿಂದ ಪಾಪವುಂಟಾಗದು. ನಾನು ನಡೆಸಿದ ಕೃತ್ಯವಾದರೋ ಅಂತದಲ್ಲ. ನನ್ನ ತಮ್ಮನಾದ ದುರ್ಯೋಧನನು ಎಷ್ಟೋ ಸುಖದಿಂದ ರಾಜ್ಯವನ್ನು ಪರಿಪಾಲಿಸುತಿದ್ದ

ವನು.ಆಂತಹ ಸ್ಥಿತಿಯಲ್ಲಿಯೂ ನಾನು ರಾಜ್ಯಲೋಭದಿಂದಲ್ಲವೇ ಅವನನ್ನೂ, ಅವನ ಪರಿವಾರವೆಲ್ಲವನ್ನೂ ಕೊಲ್ಲಿಸಿದಂತಾಯಿತು.ಈಪಾಪವು ನನ್ನನ್ನಂಟದಿರುವುದೆ?ಒಂದುವೇಳೆ ಯುದ್ಧದಲ್ಲಿ ನಿಂತಶತ್ರುರಾಜರನ್ನು ಕೊಲ್ಲುವುದುಧರ್ಮವೆಂದೇ ಎಣಿಸಿಕೊಂಡರೂ, ಪತಿಗಳನ್ನೂ, ಪುತ್ರರನ್ನೂ, ಬಂಧುಗಳನ್ನೂ, ಕಳೆದುಕೊಂಡು ದುಃಖಿಸುತ್ತಿರುವ ಸ್ತ್ರೀಯರ ವಿಷಯದಲ್ಲಿ ನಾನು ಮಾಡಿದ ದ್ರೋಹವನ್ನು ಅಷ್ಟಿಷ್ಟೆಂದು ಹೇಳುವುದಕ್ಕಿಲ್ಲ. ಕ್ಷತ್ರಿಯನಾಗಿಯೂ, ಗೃಹಸ್ಥನಾಗಿಯೂ ಇರತಕ್ಕವನು ನಡೆಸತಕ್ಕ ಧರ್ಮಗಳೆಲ್ಲವನ್ನೂ,ನಾನುನನ್ನ ಜೀವಾವಧಿಯಾಗಿ ತಪ್ಪದೆ ನಡೆಸುತ್ತ ಬಂದರೂ, ಈ ಪಾಪವು ನನ್ನನ್ನು ಬಿಟ್ಟು ಹೋಗತಕ್ಕುದಲ್ಲ. '' ಯಜ್ಞಾದಿಕರ್ಮಗಳಿಂದ ಈ ಪಾಪವನ್ನು ನೀಗಿಸಿಕೊಳ್ಳಬಾರದೆ?" ಎಂದರೆ, ಕರ್ಮದಿಂದಲೇ ಕರ್ಮವನ್ನು ನೀಗಿಸಿಕೊಳ್ಳುವುದು ಹೇಗೆತಾನೇ ಸಾಧ್ಯವು ! ಕೊಳೆಯ ನೀರಿನಿಂದಲೇ ಕೊಳೆಯನ್ನು ನೀಗಿಸುವುದಕ್ಕಾದೀತೇ? ಮದ್ಯಪಾತ್ರವನ್ನು ಮದ್ಯದಿಂದಲೇ ತೊಳೆದು ಶುದ್ಧಮಾಡುವುದು ಸಾಧ್ಯವೆ ? ಹಾಗೆಯೇ ಬಂಧುಮಿತ್ರರನ್ನು ಕೊಲ್ಲಿಸಿದುದರಿಂದುಂಟಾದ ಈ ನನ್ನ ಮಹಾಪಾತಕವನ್ನು ಯಾಗವೆಂಬ ನೆವದಿಂದ ಮತ್ತೊಂದು ಪಶುವಧವನ್ನು ನೂಡಿ ಹೋಗಲಾಡಿಸಿಕೊಳ್ಳುವುದೆಂದರೇನು? ಆದುದರಿಂದ ಈ ನನ್ನ ಮಹಾಪಾಪವು ಯಜ್ಞಯಾಗಾದಿಗಳಿಂದಲೂ ನೀಗತಕ್ಕುದಲ್ಲವೆಂದೆಣಿಸುವೆನು" ಎಂದನು. ಇದು ಎಂಟನೆಯ ಅಧ್ಯಾಯವು.

ಧರ್ಮರಾಜನು ತನ್ನ ತಮ್ಮಂದಿರೊಡನೆಯೂ, ಶ್ರೀಕೃಷ್ಣನೊಡನೆಯೂ ಭೀಷ್ಮಾಚಾರ್ಯನ ಬಳಿಗೆ ಬಂದು ಅವನಿಂದ ಧರ್ಮೋಪದೇಶವನ್ನು ಹೊಂದಿದುದು. ಭೀಷ್ಮನು ಶ್ರೀಕೃಷ್ಣನನ್ನು ಸ್ತುತಿಸುತ್ತ ದೇಹತ್ಯಾಗವನ್ನು ಮಾಡಿದುದು.

ಹೀಗೆ ಧರ್ಮರಾಜನು ತಾನು ನಡೆಸಿದ ದ್ರೋಹಕಾರ್ಯಕ್ಕಾಗಿ ಮನಸ್ಸಿನಲ್ಲಿ ಭಯಪಡುತ್ತ, ಪಾಪನಿವೃತ್ತಿಪೂರ್ವಕವಾಗಿ ಪುಣ್ಯಲೋಕಪ್ರಾಪ್ತಿಗೆ ಬೇಕಾದ ಧರ್ಮಗಳನ್ನು ಕೇಳಿ ತಿಳಿಯಬೇಕೆಂಬ ಅಪೇಕ್ಷೆಯಿಂದ, ಕುರುಕ್ಷೇ

125. ಧರ್ಮರಾಜನು ತಮ್ಮಂದಿರೊಡನೆ ಭೀಷ್ಮನಬಳಿಗೆ ಬಂದು, ಅಲ್ಲಿ ಶ್ರೀಕೃಷ್ಣನ ಸಮಕ್ಷದಲ್ಲಿ ಧರ್ಮೋಪದೇಶವನ್ನು ಪಡೆದುದು.

ತ್ರದಲ್ಲಿ ಮರಣೋನ್ಮುಖನಾಗಿ ಮಲಗಿದ್ದ ಭೀಷ್ಮಾಚಾರ್ಯರನ್ನು ನೋಡುವು ದಕ್ಕಾಗಿ ಹೊರಟನು. ಇವನಹಿಂದೆ ಭೀಮಾರ್ಜುನರೇ ಮೊದಲಾದ ಇವನ ತಮ್ಮಂದಿರೆಲ್ಲರೂ, ಉತ್ತಮಾಶ್ವಗಳಿಂದಲೂ, ಸುವರ್ಣಭೂಷಣಗಳಿಂದ ಲೂ ಅಲಂಕೃತವಾದ ರಥವನ್ನೇರಿ ಹೊರಟರು. ಹಾಗೆಯೇ ವ್ಯಾಸಧೌ ಮ್ಯರೇ ಮೊದಲಾದ ಬ್ರಾಹ್ಮಣೋತ್ತಮರೂ ಅವನನ್ನು ಹಿಂಬಾಲಿಸಿದರು. ಭಗವಂತನಾದ ಶ್ರೀಕೃಷ್ಣನೂಕೂಡ ಅರ್ಜುನಸಹಿತನಾಗಿ ರಥವನ್ನೇರಿ ಹೊರಟನು. ಹೀಗೆ ಧರ್ಮರಾಜನು,ಯಕ್ಷರಿಂದ ಪರಿವೃತನಾದ ಕುಬೇರನಂ ತೆ, ಸಮಸ್ತಪರಿವಾರಗಳೊಡಗೂಡಿ ಪ್ರಯಾಣಮಾಡಿ ಬಂದನು. ಇತ್ತ ಲಾಗಿ ಕುರುಕ್ಷೇತ್ರದಲ್ಲಿ ಆಕಾಶದಿಂದ ಕೆಳಗಿಳಿದ ದೇವತೆಯಂತೆ ಪ್ರಕಾಶಿಸು ತಿದ್ದ ಭೀಷ್ಮಾಚಾರ್ಯರನ್ನು ನೋಡಿ, ಪಾಂಡವರೆಲ್ಲರೂ ಶ್ರೀಕೃಷ್ಣನೊಡನೆ ನಮಸ್ಕರಿಸಿದರು. ಈ ಸಮಯಕ್ಕೆ ಸರಿಯಾಗಿ ಆಕಾಶದಿಂದ ದೇವರ್ಷಿಗ ಳೂ, ಬ್ರಹ್ಮರ್ಷಿಗಳೂ, ಅನೇಕರಾಜರ್ಷಿಗಳೂ, ಕುರುಪಿತಾಮಹನಾದ ಭೀಷ್ಮನನ್ನು ನೋಡುವುದಕ್ಕಾಗಿ ಬಂದು ನೆರೆದಿದ್ದರು. ಅನೇಕಮಹಾತ್ಮರು ಸಭೆಗೂಡಿದರು. ಪರ್ವತನಾರದರೆಂಬ ಮಹರ್ಷಿಗಳೂ, ಪೂಜ್ಯನಾದ ವ್ಯಾ ಸನೂ, ಧೌಮ್ಯ, ಬೃಹದಶ್ವ, ಭಾರದ್ವಾಜರೂ, ತಿಷ್ಯರಿಂದ ಪರಿ ವೃತನಾದ ಪರುಶುರಾಮನೂ, ಶುಕ, ವಸಿಷ್ಠ, ಇಂದ್ರಪ್ರಮದ, ತ್ರಿತ, ಗೃತ್ಸಮದ, ಅಸಿತ ಕಕ್ಷೀವಂತ, ಗೌತಮ, ಅತ್ರಿಮುನಿ, ವಿಶ್ವಾಮಿತ್ರ, ಸುದರ್ಶನ, ತಿಷ್ಯವರ್ಗದಿಂದ ಪರಿವೃತರಾದ ಕಶ್ಯಪಾಂ ಗಿರಸರೇ ಮೊದಲಾ ಮಹರ್ಷಿಗಳು, ಬ್ರಹ್ಮರಾತನು, ಇವರೆಲ್ಲರೂ ಬಂದು ಸೇರಿದ್ದರು. ಹೀಗೆ ತನ್ನನ್ನು ನೋಡುವುದಕ್ಕಾಗಿ ಬಂದ ಈ ಮಹರ್ಷಿಗಳೆಲ್ಲರ ನ್ನೂ, ಧರ್ಮಜ್ಞನಾಗಿಯೂ, ಕಾಲದೇಶವಿಭಾಗಗಳನ್ನು ಚೆನ್ನಾಗಿ ತಿಳಿದ ವನಾಗಿಯೂ ಇರುವ ಭೀಷ್ಮನು, ಯಥಾವಿಧಿಯಾಗಿ ಪೂಜಿಸಿದನು.ಮತ್ತು ಮುಂದೆ ನಿಂತಿದ್ದ, ಶ್ರೀಕೃಷ್ಣನನ್ನು ನೋಡಿ, ಲೀಲಾಮಾನುಷವಿಗ್ರಹವನ್ನು ಧರಿಸಿದ ಆತನ ನಿಜಸ್ವರೂಪವನ್ನು ತನ್ನ ಹೃದಯದಲ್ಲಿಟ್ಟುಕೊಂಡು, ಮಾ ನಸಪೂಜೆಯಿಂದ ಆತನನ್ನು ಧ್ಯಾನಿಸಿದನು. ಆಮೇಲೆ ಸವಿೂಪದಲ್ಲಿ ವಿನೀ ತರಾಗಿ ನಿಂತಿದ್ದ ಧರ್ಮರಾಜಾದಿಗಳನ್ನು ನೋಡಿ,ಪ್ರೀತಿಪೂರ್ವಕವಾದಆನಂದ

ಬಾಷ್ಪವನ್ನು ಸುರಿಸುತ್ತ, ಅವರ ಕ್ಷೇಮಲಾಭಗಳನ್ನು ವಿಚಾರಿಸಿ, ಗೌರವಪೂರ್ವಕವಾಗಿ "ಎಲ್ಲೆ ವತ್ಸರೆ! ವೇದೊಕ್ತಧರ್ಮಗಳಿಗೂ, ಬ್ರಾಹ್ಮಣರಿಗೂ, ಭಗವಂತನಾದ ಶ್ರೀಕೃಷ್ಣನಿಗೂ, ವಿಧೇಯರಾಗಿ ನಡೆದುಕೊಳ್ಳುತ್ತಿರುವ ನಿಮಗೂಕೂಡ, ಹೀಗೆ ಕಷ್ಟಜೀವನವುಂಟಾಯಿತೆಂಬುದು ಬಹಳ ದುಃಖಿಕರವಾದ ವಿಷಯವು. ಆಹಾ! ಇದೇನನ್ಯಾಯವು! ನಿಮ್ಮ ತಾಯಿಯಾದ ಕುಂತೀದೇವಿಯು ನಿಮ್ಮಂತಹ ಪುತ್ರರನ್ನು ಪಡೆದೂಕೂಡ ತನ್ನ ಪತಿಯಾದ ಪಾಂಡುರಾಜನು ಮೃತನಾದಂದಿನಿಂದಲೂ ದುಃಖದಲ್ಲಿಯೇ ಕಾಲವನ್ನು ಕಳೆಯುತ್ತಿರುವಳು. ನೀವು ಇನ್ನೂ ಎಳವಯಸ್ಸಿನವರಾದುದರಿಂದ ನಿಮಗಾಗಿಯೇ ಅವಳು ಎಷ್ಟೋ ದುಃಖವನ್ನನುಭವಿಸಬೇಕಾಯಿತು. ಆದರೇನು? ಆ ವಿಷಯವನ್ನು ಕುರಿತು ನೀವು ಸ್ವಲ್ಪವೂ ಚಿಂತ್ರವ್ಯಾದುಃಖಿಸಬಾರದು! ವಾಯುವಿಗಧೀನವಾಗಿ ಮೇಘಗಳು ಸಂಚರಿಸುವಂತೆ ಸಮಸ್ತ ಪ್ರಾಣಿಗಳೂ ಕಾಲಾಧೀನರಾಗಿಯೇ ನಡೆಯಬೇಕು. ಆದುದರಿಂದ ಇದುವರೆಗೆ ನಿಮಗೆ ಬಂದಕಷ್ಟಗಳೆಲ್ಲವೂ ಕಾಲವಶದಿಂದ ಬಂದುದಲ್ಲದೆ ಬೇರೆಯಲ್ಲ. ಆಹಾ! ಕಾಲವೆಂಬುದು ದುರ್ಘಟವಾದ ವಸ್ತುವನ್ನಾದರೂ ಘಟಿಸುವಂತೆ ಮಾಡುವುದಲ್ಲವೆ? ಇದಕ್ಕೆ ನಿಮಗಿಂತಲೂ ಬೇರೆ ನಿದರ್ಶನವೇಕೆ? ಸಾಕ್ಷಾತ್ ಧರ್ಮದೇವತೆಯ ಪುತ್ರನಾದ ಯುಧಿಷ್ಠಿರನೇ ಇಲ್ಲಿನ ರಾಜನು! ಯಾವ ಯುದ್ಧದಲ್ಲಿಯೂ ಅಪ್ರತಿಹತವಾದ ಗದೆಯಿಂಡವನ್ನು ಧರಿಸಿದ ಭೀಮನೂ, ಗಾಂಡೀವವೆಂಬ ಮಹಾಧನುಸ್ಸನ್ನು ಹಿಡಿದ ಅರ್ಜುನನೂ, ಆತನಿಗೆ ಬೆಂಬಲವಾಗಿ ಒಡಹುಟ್ಟಿದ ತಮ್ಮಂದಿರು! ಲೋಕನಾಥನಾದ ಶ್ರೀಕೃಷ್ಣನೇ ಪರಮಮಿತ್ರನು! ಹೀಗೆ ದೇಹಬಲದಲ್ಲಿಯೂ, ಶಸ್ತ್ರಸೈಪುಣ್ಯದಲ್ಲಿಯೂ, ಪೈವಾನುಕೂಲ್ಯದಲ್ಲಿಯೂ, ಬೇರೆ ಯಾವ ಭಾಗದಲ್ಲಿಯೂ ನ್ಯೂನತೆಯಿಲ್ಲದ ಈ ಸ್ಥಳದಲ್ಲಿಯೂಕೂಡ, ಇಂತಹ ವಿಪತ್ತು ಬಂದೊದಗಿತೆಂದರೆ ಕಾಲಗತಿಯನ್ನು ಮೀರುವುದಕ್ಕೆ ಬೇರೆಯಾರಿಂದ ತಾನೇ ಸಾಧ್ಯವು? ಎಲ್ಲೆ ಕುಮಾರರೇ! "ಸಮಸ್ತಲೋಕಗಳನ್ನೂ ತನ್ನ ಸ್ವಾಧೀನವಾಗಿ ಮಾಡಿಕೊಂಡಿರುವ ಶ್ರೀ ಕೃಷ್ಣನ ದಯೆಗೆ ನಾವು ಪಾತ್ರರಾಗಿರುವಾಗ, ಆ ಕಾಲಗತಿಯನ್ನು ಅತನು ತಪ್ಪಿಸಲಾರನೆ?"

ಎಂದು ನೀವು ಶಂಕಿಸಬಾರದು. ಈ ಶ್ರೀಕೃಷ್ಣನು ನಡೆಸತಕ್ಕ ವಿಚಿತ್ರ ವ್ಯಾಪಾರಗಳನ್ನು ತಿಳಿಯಬೇಕೆಂದಪೇಕ್ಷಿಸಿ, ಬ್ರಹ್ಮಾದಿಗಳೂ ಮೋಹವನ್ನು ಹೊಂದುವರು. ಹೀಗಿರುವಾಗ ಅದನ್ನು ಬೇರೆ ಯಾವ ಮನುಷ್ಯನು ತಾನೇ ತಿಳಿಯಬಲ್ಲನು. ಎಲೈ ಧರ್ಮರಾಜನೆ! ಸಮಸ್ತ ಪ್ರಾಣಿಗಳ ಸುಖದುಃಖಗಳೂ ಕಾಲಾಧೀನಗಳು. ಆ ಸುಖದುಃಖಕ್ಕೆ ಕಾರಣಗಳಾದ ಕರ್ಮಗಳಿಲ್ಲವೂ ಈ ಕೃಷ್ಣನಿಗಧೀನವಾದುವು ಕೃಷ್ಣನೂಕೂಡ ಕಾಲಾದಿಗಳನ್ನೇ ಅನುವರ್ತಿಸುತ್ತಿರುವನು. ಅದುದರಿಂದ ಸುಖದುಃಖಾದಿಗಳೆಲ್ಲವೂ ದೈವಾಯತ್ತವೆಂದೂ, ಆ ಕಾಲಕರ್ಮಾದಿಗಳಿಗೆ ಪ್ರೇರಕನಾಗಿಯೂ ಅದನ್ನನುವರ್ತಿಸತಕ್ಕವನಾಗಿಯೂ ಇರುವ ಈ ಶ್ರೀ ಕೃಷ್ಣನೇ ಸರ್ವಸ್ಥಿತಪ್ರಲ್ಲಿಯೂ, ನಿಮಗೆ ಪ್ರೇರಕನೆಂದೂ ತಿಳಿದುಆತನ ಪ್ರವರ್ತನೆಗೊಳಪಟ್ಟಿರುವುದೇನಿಮಗೆ ಕೃತ್ಯವು ಆದುದರಿಂದ ನೊಡಲೇ ಶ್ರೀಕೃಷ್ಣನು ನಿನಗೆ ನಿಯಮಿಸಿರುವಂತೆ, ಒಕ್ಕುಲ್ಲದ ನಿಮ್ಮ ಪ್ರಜೆಗಳೆಲ್ಲರನ್ನೂ ಪ್ರೇಮದಿಂದ ರಕ್ಷಿಸುತ್ತಿರಿ! ರಾಜಾ! ಇಲ್ಲಿ ಮನುಷ್ಯರೂಪದಿಂದ ನಿನ್ನ ಕಣ್ಣಿದಿರಿಗೆ ನಿಂತಿರುವ ಪಾತ್ರಕ್ಕೆ ಈತನನ್ನು ನೀನು ಸಾಮಾನ್ಯವಾದ ಪ್ರಾಕೃತಮನುಷ್ಯನೆಂದೆಣಿಸಬೇಡ! ಈತನೇ ಸಾಕ್ಷಾದ್ಭಗವಂತನು! ಈತನೇ ಆದಿಪುರುಷನಾದ ಆ ನಾರಾಯಣಮೂರ್ತಿಯು! ಇವನು ತನ್ನ ಮಾಯೆಯಿಂದ ಲೋಕವನ್ನು ಮರುಳುಗೊಳಿಸುವುದಕ್ಕಾಗಿ ರಹಸ್ಯವಾಗಿ ಬಂದು, ಯಾದವರಲ್ಲಿ ತಾನೂ ಒಬ್ಬನಂತೆ ನಟಿಸುತ್ತಿರುವನು. ದುರ್ಜ್ಞೇಯವಾದ ಈತನ ಮಹಿಮೆಯನ್ನು ಪೂಜ್ಯನಾದ ಆ ಪರಮತಿವನೋಬ್ಬನು ಬಲ್ಲನು! ದೇವರ್ಷಿಯಾದ ನಾರದನೋಬ್ಬನುಬಲ್ಲನು! ಮಹಾತ್ಮನಾದ ಆ ಕಪಿಲಮುನಿಯೊಬ್ಬನು ಬಲ್ಲನು! ಈ ಮೂವರು ಹೊರತು ಬೇರೆಯಾರೂ ಇವನ ನಿಜವನ್ನು ಕಂಡುಕೊಳ್ಳಲಾರರು! ಧರ್ಮರಾಜಾ! ಇನ್ನು ಹೆಚ್ಚು ಮಾತಿನಿಂದೇನು? ಯಾವನನ್ನು ನೀನು ನಿನ್ನ ಮಾವನ ಮಗನೆಂದು ಕರೆಯುವೆಯೋ,ಯಾವನಲ್ಲಿ ನಿನಗಿರುವ ವಿಶೇಷವಾದ ಸಲಿಗೆಯಿಂದ,ಒಮ್ಮೆ ಮಂತ್ರಿಯನ್ನಾಗಿಯೂ,ಒಮ್ಮೆ ದೂತನನ್ನಾಗಿಯೂ,ಒಮ್ಮೆ ಬಂಡಿಯಾಳನ್ನಾಗಿಯೂ ಮಾಡಿಕೊಂಡು,ಅವನಿಂದ ಕೆಲಸವನ್ನು ತೆಗೆಯುತ್ತಿರುವೆಯೋ, ಆ ಈ ಕೃಷ್ಣನು, ಸಾಕ್ಷಾತ್ಪರಮಪುರುಷನಲ್ಲದೆ ಬೇರೆಯಲ್ಲ! ಆ

ದರೆ ಅಂತಹ ಪರಮಪುರುಷನಾದವನು ನಿನಗಧೀನನಾಗಿ ಕೆಲಸಮಾಡುವು
ದೇಕೆಂದು ನೀನು ಕೇಳಬಹುದು!ಧರ್ಮರಾಜಾ!ಆತನು ಸರ್ವಾತ್ಮಕನು! ಸಮ
ಸ್ತಪ್ರಪಂಚವನ್ನೂ ಸಮವಾಗಿ ನೋಡತಕ್ಕವನು.ಎಣೆಯಿಲ್ಲದವನು.ಸೇವಕರ
ಲ್ಲಿರುವ ನಿಕೃಷ್ಟತ್ವಾದಿ ದೋಷಗಳೊಂದೂ ಇವನಲ್ಲಿ ಸೇರವು. ಅವನಲ್ಲಿ ನೀ
ನು ಸಾಮಾನ್ಯಭಾವನೆಯನ್ನಿಟ್ಟು, ಈ ಅಲ್ಪಕಾರ್ಯಗಳನ್ನು ಮಾಡಿಸಿದಮಾತ್ರ
ಕ್ಕೆ ಅವನ ಮನಸ್ಸು ನಿನ್ನಲ್ಲಿ ಕಲಗಲಾರದು ಎಲ್ಲರನ್ನೂ ಒಂಪೇ ವಿಧವಾದ
ಸೌಲಭ್ಯದಿಂದ ನೋಡುವವನು.ಆತನು ಹೀಗೆ ಸರ್ವಸಮಾನನೆನಿಸಿಕೊಂಡಿದ್ದ
ರೂ,ತನ್ನ ಏಕಾಂತಭಕ್ತರಲ್ಲಿ ಮಾತ್ರ,ಅಸಾಧಾರಣವಾದ ದಯೆಯನ್ನು ತೋ
ರಿಸದೆಬಿಡನು. ಧರ್ಮಪುತ್ರಾ!ಇದಕ್ಕೆ ಬೇರನಿದರ್ಶನವೇಕೆ?ಇಗೋ ನೋಡು!
ನಾನು ಪ್ರಾಣವನ್ನು ಬಿಡುವುದಕ್ಕೆ ಸಿದ್ಧನಾಗಿರುವಕಾಲದಲ್ಲಿ, ತಾನೇ ಪ್ರ
ತ್ಯಕ್ಷವಾಗಿ ಬಂದು ನನಗೆ ದರ್ಶನವನ್ನು ಕೊಡುತ್ತಿರುವನಲ್ಲವೆ? ಈತನ ದರ್ಶನ
ದಿಂದುಂಟಾಗುವ ಫಲವು ಸಾಮಾನ್ಯವಲ್ಲ ! ಯೋಗೀಶ್ವರರೆಲ್ಲರೂ ಯಾವನ
ಲ್ಲಿ ಭಕ್ತಿಯುಕ್ತವಾದ ಮನಸ್ಸನ್ನು ಸೇರಿಸಿ, ಯಾವನ ಪುಣ್ಯಕೀರ್ತನೆಗಳನ್ನು
ಬಾಯಿಂದ ಹೇಳುತ್ತ, ತಮ್ಮ ದೇಹವನ್ನು ತ್ಯಜಿಸಿ, ಕಾನುದಿಂದಲೂ,ಕರ್ಮ
ಗಳಿಂದಲೂ ಮುಕ್ತರಾಗುವರೋ,ಆಪರಮಾತ್ಮನೇ ಈ ಕೃಷ್ಣನು! ಹೀಗೆ ತ
ನ್ನನಾಮಕೀರ್ತನದಿಂದಲೇ ಮೋಕ್ಷಸುಖವನ್ನು ಕೊಡತಕ್ಕ ಈ ಮಹಾತ್ಮನ
ಪ್ರತ್ಯಕ್ಷದರ್ಶನದಿಂದುಂಟಾಗತಕ್ಕ ಫಲವನ್ನು ಹೇಳತಕ್ಕುದೇನು ? ಆದುದ
ರಿಂದ ದೇವದೇವನಾಗಿಯೂ, ಚತುರ್ಭುಜನಾಗಿಯೂ ಇರುವ ಆ ಭಗವಂತ
ನು, ಈಗ ಇಲ್ಲಿ ಕಾಣುವಂತೆಯೇ, ಪ್ರಸನ್ನವಾದ ಮಂದಹಾಸದಿಂದಲೂ,
ರಕ್ತಾಂತನೇತ್ರಗಳಿಂದಲೂ ಶೋಭಿತವಾದ ಮುಖಕಮಲವುಳ್ಳವನಾಗಿ,
ನಾನು ಈ ದೇಹವನ್ನು ತ್ಯಜಿಸುವವರೆಗೆ ನನ್ನ ಧ್ಯಾನವಿಷಯವಾಗಿ ಇಲ್ಲಲ್ಲೇ
ಪ್ರತೀಕ್ಷಿಸುತ್ತಿರಲಿ! ಎಂದು ಪ್ರಾರ್ಥಿಸುತಿದ್ದನು. ಹೀಗೆ ಶರಪಂಜರದಲ್ಲಿ
ಮಲಗಿ ಶ್ರೀ ಕೃಷ್ಣಸ್ಮರಣೆಯಲ್ಲಿರುವ ಭೀಷ್ಮಾಚಾರ್ಯನನ್ನು ನೋಡಿ ಧರ್ಮ
ರಾಜನು, ಅಲ್ಲಿದ್ದ ಮಹರ್ಷಿಗಳೆಲ್ಲರೂ ಕೇಳುತ್ತಿರುವಹಾಗೆಯೇ ನಾನಾವಿಧ
ಧರ್ಮಸೂಕ್ಷ್ಮಗಳೆಲ್ಲವನ್ನೂ ಕ್ರಮವಾಗಿ ಪ್ರಶ್ನೆಮಾಡಿ,ಅವನಿಂದ ಕೇಳಿ ತಿಳಿದು
ಕೊಂಡನು. ಮನುಷ್ಯರ ಶಕ್ತಿಸ್ವಭಾವಗಳಿಗೂ, ಅವರವರ ವರ್ಣಾಶ್ರಮಗಳಿ

ಗೂ ಅನುಸಾರವಾಗಿ, ಆವರವರು ನಡೆಸಬೇಕಾದ ಕರ್ಮಗಳಲ್ಲಿ, ಕೇವಲವಿರಕ್ತಿಯಿಂದ ನಡೆಸತಕ್ಕವುಗಳೆಂದೂ, ಫಲಾಪೇಕ್ಷೆಯಿಂದ ನಡೆಸತಕ್ಕವುಗಳೆಂದೂ, ಎರಡುವಿಧವಾಗಿರುವ ಪ್ರವೃತ್ತಿನಿವೃತ್ತಿಧರ್ಮಗಳ ಭೇದವನ್ನು ತಿಳಿದುಕೊಂಡನು. ಹಾಗೆಯೇ ದಾನಧರ್ಮಗಳನ್ನೂ, ರಾಜನೀತಿಗಳನ್ನೂ ಪಾಂಚರಾತ್ರೋಕ್ತಗಳಾದ ಮೋಕ್ಷಧರ್ಮವಿಭಾಗಗಳನ್ನೂ, ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನೂ, ಅವುಗಳ ಸಾಧನಗಳನ್ನೂ, ಸ್ತ್ರೀಧರ್ಮಗಳನ್ನೂ, ಹರಿಕಥಾಶ್ರವಣಕೀರ್ತನಾದಿರೂಪಗಳಾದ ಭಗವದ್ಭಕ್ತಿಧರ್ಮಗಳನ್ನೂ, ಸಂಕ್ಷೇಪವಾಗಿಯೂ, ವಿಸ್ತರವಾಗಿಯೂ ಕ್ರಮವಾಗಿ ಪ್ರಶ್ನೆಮಾಡಿ ಕೇಳಿ ತಿಳಿಯುತ್ತಿದ್ದನು. ತತ್ತ್ವಜ್ಞನಾದ ಭೀಷ್ಮಾಚಾರ್ಯನು, ಆಯಾ ಧರ್ಮಗಳಿಗೆ ನಿದರ್ಶಕಗಳಾದ ಬೇರೆಬೇರೆ ಉಪಾಖ್ಯಾನಗಳನ್ನೂ ಇತಿಹಾಸಗಳನ್ನೂ ಹೇಳಿ, ಅವೆಲ್ಲವನ್ನೂ ವಿವರಿಸಿ ತಿಳಿಸಿದನು. ಸ್ವೇಚ್ಛಾಮರಣಿಯಾದ ಆ ಭೀಷ್ಮನು, ಹೀಗೆ ಧರ್ಮರಾಜನಿಗೆ ಧರ್ಮೋಪದೇಶವನ್ನು ಮಾಡಿ ಮುಗಿಸುವಷ್ಟರಲ್ಲಿ, ಅವನು ತನ್ನ ಮರಣಕ್ಕಾಗಿ ನಿರೀಕ್ಷಿಸುತಿದ್ದ ಉತ್ತರಾಯಣವು ಸಮೀಪಿಸಿತು. ಸಹಸ್ರಸಂಖ್ಯಾತರಾದ ಕೌರವಪಾಂಡವರೆಲ್ಲರಿಗೂ ನಿಯಾಮಕನಾದ ಆ ಭೀಷ್ಮನು, ತಾನು ನಿರೀಕ್ಷಿಸುತಿದ್ದ ಕಾಲವು ಬಂದೊದಗಿದುದನ್ನು ತಿಳಿದು, ಅದುವರೆಗೆ ತಾನಾಡುತಿದ್ದ ಮಾತನ್ನು ಅಷ್ಟರಲ್ಲಿಯೇ ನಿಲ್ಲಿಸಿ, ದೇಹಾದಿಸಂಬಂಧವನ್ನು ಮರೆತು, ಕೇವಲವೈರಾಗ್ಯವನ್ನು ವಹಿಸಿ, ತನ್ನ ಮುಂದೆ ಪೀತಾಂಬರಧಾರಿಯಾಗಿ ನಿಂತಿದ್ದ ಪರಮಪುರುಷನಾದ ಶ್ರೀ ಕೃಷ್ಣನನ್ನು ಎವೆಮುಚ್ಚದೆ ನೋಡುತ್ತ, ಆ ಪರಮಾತ್ಮನ ರೂಪವನ್ನು ಮನಸ್ಸಿನಲ್ಲಿ ಧ್ಯಾನಿಸತೊಡಗಿದನು. ಹೀಗೆ ಭೀಷ್ಮಾಚಾರ್ಯನು ಶ್ರೀಕೃಷ್ಣನನ್ನು ಶುದ್ಧವಾದ ಮನಸ್ಸಿನಿಂದ ಧ್ಯಾನಿಸುವುದಕ್ಕೆ ತೊಡಗಿದೊಡನೆ, ಅವನ ಮನಸ್ಸಿನಲ್ಲಿ ಭಗವತ್ಪ್ರಾಪ್ತಿಗೆ ಪ್ರತಿಬಂಧಕಗಳಾಗಿದ್ದ ಕಲ್ಮಷಗಳೆಲ್ಲವೂ ನೀಗಿದುವು. ಆ ಶ್ರೀಕೃಷ್ಣನ ದಿವ್ಯರೂಪವನ್ನು ಕಣ್ಣಿಂದ ನೋಡಿದಾಗಲೇ ಅವನಿಗಿದ್ದ ಶಸ್ತ್ರಬಾಧೆಗಳೆಲ್ಲವೂ ನಿವೃತ್ತವಾದುವು. ವಿಷಯಾಂತರಗಳಲ್ಲಿದ್ದ ಇಂದ್ರಿಯವ್ಯಾಪಾರಗಳೆಲ್ಲವೂ ಅಡಗಿದುವು. ಅವನ ಮನಸ್ಸಿನಲ್ಲಿದ್ದ ದೇಹಾತ್ಮಭ್ರಮವೂ ನಿವರ್ತಿಸಿತು. ಹೀಗೆ ನಿಷ್ಕಲ್ಮಷನಾದ ಭೀಷ್ಮನು, ತನ್ನ ದೇ

ಹವನ್ನು ಬಿಟ್ಟು ಹೊರಡುವುದಕ್ಕೆ ಸಿದ್ಧನಾಗಿ, ಭಗವಂತನನ್ನು ಸುತ್ತಿ ಸುವನು.

{ಭೀಷ್ಮನು ದೇಹಾವಸಾನಕಾಲದಲ್ಲಿ ಶ್ರೀಕೃಷ್ಣನನ್ನು ಸ್ತುತಿಸಿದುದು.}

ಶ್ಲೋ॥ ಇತಿ ಮತಿರುಪಕಲ್ಪಿತಾ ವಿತೃಷ್ಣಾ ಭಗವತಿ ಸಾತ್ವತಪುಂಗವೇ ವಿಭೂಮ್ನಿ ।
ಸ್ವಸುಖಮುಪಗತೇ ಕ್ವಚಿದ್ವಿಹರ್ತುಂ ಪ್ರಕೃತಿಮುಪೇಯುಷಿ ಯದ್ಭವಪ್ರವಾಹಃ॥

ಯದುಕುಲೋತ್ತಮನಾಗಿಯೂ, (ಭಕ್ತಪಾಲಕನಾಗಿಯೂ) ವಿಲಕ್ಷಣಮಹಿಮೆಯುಳ್ಳವನಾಗಿಯೂ, ಸಹಜವಾಗಿ ನಿತ್ಯಾನಂದಪರಿಪೂರ್ಣನಾಗಿದ್ದರೂ ಲೀಲಾರ್ಥನಾಗಿ ಒಂದೊಂದುಕಡೆಯಲ್ಲಿ ಪ್ರಾಕೃತದೇಹವನ್ನು ಹೊಂದಿ ಅವತರಿಸುವವನಾಗಿಯೂ, ತನ್ನ ಸಂಕಲ್ಪದಿಂದಲೇ ಜೀತನರಿಗೆ ಸಂಸಾರಪ್ರವೃತ್ತಿಯನ್ನುಂಟುಮಾಡತಕ್ಕವನಾಗಿಯೂ ಇರುವ ಭಗವಂತನಾದ ಈ ಶ್ರೀಕೃಷ್ಣನಲ್ಲಿ, ನನ್ನ ಬುದ್ಧಿಯು ಎಂದೆಂದಿಗೂ ತೃಪ್ತಿ ಹೊಂದದೆ ಸ್ಥಿರವಾಗಿ ನೆಲೆಗೊಂಡಿರಲಿ !

ಶ್ಲೋ॥ ತ್ರಿಭುವನಕಮನೈಂ ತಮಾಲವರ್ಣಂ ರವಿಕರಗೌರವರಾಂಬರಂ ದಧಾನೇ ।
ವಪುರಲಕಕುಲಾವೃತಾನನಾಬ್ಜೇ ವಿಜಯಸಖೇ ರತಿರಸ್ತು ಮೇನವದ್ಯಾ॥೨॥

ತಮಾಲಶ್ಯಾಮಲವಾದ ಮೈಮೇಲೆ, ಸೂರ್ಯಕಾಂತಿಗೆ ಸಮಾನವಾದ ಪೀತಾಂಬರದಿಂದಲೂ, ಮುಂಗುರುಳುಗಳಿಂದ ಮರೆಸಲ್ಪಟ್ಟ ಮುಖಕಮಲದಿಂದಲೂ, ತ್ರೈಲೋಕ್ಯಮೋಹಕವಾದ ದಿವ್ಯರೂಪವುಳ್ಳ ಅರ್ಜುನ ಮಿತ್ರನಾದ ಈ ಶ್ರೀಕೃಷ್ಣನಲ್ಲಿ ನನ್ನ ಭಕ್ತಿಯು ಅನನ್ಯಪ್ರಯೋಜನವಾಗಿ ನೆಲೆಗೊಳ್ಳಲಿ !

ಶ್ಲೋ॥ ಯುಧಿ ತುರಗರಜೋವಿಧೂಮ್ರವಿಷ್ವತ್ಕಚಲುಲಿತಶ್ರಮವಾರ್ಯಲಂಕೃತಾಸ್ಯೇ ।
ಮಮ ನಿಶಿತಶರೈರ್ವಿಭಿದ್ಯಮಾನತ್ವಚಿ ವಿಲಸತ್ಕವಚೇಸ್ತು ಕೃಷ್ಣ ಆತ್ಮಾ ॥೩॥

ಕುದುರೆಯ ಕಾಲಿನ ಧೂಳಿನಿಂದ ಕೊಳೆಮುಚ್ಚಿದ ತಲೆ! ಕದಲಿದ ಕೂದಲು! ಮುಖದಲ್ಲಿ ಸುರಿಯುತ್ತಿರುವ ಬೆವರು! ನನ್ನ ತೀಕ್ಷ್ಣಬಾಣಗಳಿಂದ ಮೈಮೇಲಿನ ಚರ್ಮವು ಕಿತ್ತು, ಕವಚದಮೇಲೆ ಅಲ್ಲಲ್ಲಿ ಶೋಭಿಸುತ್ತಿರುವ ರಕ್ತ

ಬಿಂದುಗಳು ! ಇವುಗಳಿಂದಲಂಕೃತನಾಗಿ ರಣಾಗ್ರದಲ್ಲಿ ನಿಂತಿದ್ದ ಆ ಶ್ರೀ ಕೃಷ್ಣನಲ್ಲಿ ನನ್ನ ಮನಸ್ಸು ರಮಿಸಲಿ !

ಶ್ಲೋ॥ಸಖಿವಚೋ ನಿಶಮ್ಯ ಮಧ್ಯೇ ನಿಜಪರಯೋರ್ಬಲಯೋ ರಥಂ ನಿವೇಶ್ಯ ।
ಸ್ಥಿತವತಿ ಪರಸೈನಿಕಾಯುರಕ್ಷ್ಣಾ ಹೃತವತಿ ಪಾರ್ಥಸಖೇ ರತಿರ್ಮಮಾಸ್ತು ॥೪॥

ಯುದ್ಧಾರಂಭದಲ್ಲಿ ಮಿತ್ರನಾದ ಅರ್ಜುನನ ಪ್ರಾರ್ಥನೆಯನ್ನು ಕೇಳಿ, ಎರಡುಸೈನ್ಯಗಳ ನಡುವೆ ರಥವನ್ನು ತಂದು ನಿಲ್ಲಿಸಿ, ತನ್ನ ನೋಟದಿಂದಲೇ ಶತ್ರುಸೈನ್ಯಗಳ ಆಯುಸ್ಸನ್ನು ಅಪಹರಿಸಿದ ಪಾರ್ಥಸಖನಾದ ಶ್ರೀ ಕೃಷ್ಣನಲ್ಲಿ ನನ್ನ ಬುದ್ಧಿಯು ಸ್ಥಿರವಾಗಿ ನೆಲೆಗೊಳ್ಳಲಿ !

ಶ್ಲೋ॥ವ್ಯವಹಿತಪೃತನಾಮುಖಂ ನಿರೀಕ್ಷ್ಯ ಸ್ವಜನವಧಾದ್ವಿಮುಖಸ್ಯ ದೋಷಬುದ್ಧ್ಯಾ ।
ಕುಮತಿಮನುಪರಾತ್ಮವಿದ್ಯಯಾ ಯಶ್ಚರಣರತಿಃ ಪರಮಸ್ಯ ತಸ್ಯ ಮೇಸ್ತು ॥ ೫॥

ಅರ್ಜುನನು ರಣಾಗ್ರಕ್ಕೆ ಬಂದಮೇಲೆ, ಮುಂದಿದ್ದ ಶತ್ರುಸೈನ್ಯವನ್ನು ನೋಡಿ ಸ್ವಜನವನ್ನು ಕೊಲ್ಲುವುದಕ್ಕೆ ಹಿಂಜರಿಯಾಗ, ಅವನ ಆಜ್ಞಾನವನ್ನು ನೀಗಿಸುವುದಕ್ಕಾಗಿ ಯಾವನು ಗೀತೆಯನ್ನು ಉಪದೇಶಿಸಿದನೋ, ಆ ಪರಮ ಪುರುಷನಾದ ಕೃಷ್ಣನ ಪಾದಗಳಲ್ಲಿ ನನ್ನ ಭಕ್ತಿಯು ನಿಶ್ಚಲವಾಗಿ ನೆಲೆಗೊಳ್ಳಲಿ !

ಶ್ಲೋ॥ಸ್ವನಿಗಮಮಪಹಾಯ ಮತ್ಪ್ರತಿಜ್ಞಾಮೃತಮಧಿಕರ್ತುಮವಪ್ಲುತೋ ರಥಸ್ಥಃ
ಧೃತರಥಚರಣೋಭ್ಯಯಾಚ್ಚಲದ್ಗುರ್ಹರಿರಿವಹನ್ತುಮಿಭಂಗತೋತ್ತರೀಯಃ ।
ಶಿತವಿಶಿಖಹತೋ ವಿಶೀರ್ಣದಂಶಃ ಕ್ಷತಜಪರಿಪ್ಲುತ ಆತತಾಯಿನೋ ಮೇ ।
ಪ್ರಸಭಮಭಿಸಸಾರಮದ್ವಧಾರ್ಥಂ ಸಭವತು ಮೇಭಗವಾ೯ಗತಿರ್ಮುಕುಂದಃ॥

ಭಾರತಯುದ್ಧದಲ್ಲಿ ತಾನು ಶಸ್ತ್ರವನ್ನು ಹಿಡಿಯುವುದಿಲ್ಲವೆಂದು ಪ್ರತಿಜ್ಞೆಮಾಡಿದ್ದರೂ, ಅದಕ್ಕೆ ವಿರುದ್ಧವಾಗಿ ನಾನು ಪ್ರತಿಜ್ಞೆಮಾಡಿರುವುದನ್ನು ತಿಳಿದು, ತಾನು ಮಾತಿಗೆ ತಪ್ಪಿದರೂ ತನಗೆ ಭಕ್ತನಾದ ನನ್ನ ಪ್ರತಿಜ್ಞೆಯನ್ನು ಕೆಡಿಸಬಾರದೆಂಬ ವಾತ್ಸಲ್ಯದಿಂದ, ತನ್ನ ಚಕ್ರಾಯುಧವನ್ನು ಕೈಗೆತ್ತಿಕೊಂಡು ರಥದಿಂದಿಳಿದು, ಮೈಮೇಲಿನ ಬಟ್ಟೆಯು ಜಾರಿದುದನ್ನೂ ತಿಳಿಯದೆ,ಹರಿದ ಕವಚದಿಂದಲೂ,ರಕ್ತದಿಂದ ತೊಯ್ದ ಮೈಯಿಂದಲೂ ಕೂಡಿದವನಾಗಿ, ಆನೆಯಮೇಲೆ ಬಿಳುವ ಸಿಂಹದಂತೆ ನನ್ನನ್ನು ಕೊಲ್ಲಬೇಕೆಂಬ ಆತುರದಿಂದ ಯಾವನು ಮುಂದೆ ಬಂದನೋ, ಆಕೃಷ್ಣನು ನನಗೆ ಗತಿಯಾಗಲಿ!

ಶ್ಲೋ॥ವಿಜಯರಥಕುಟುಂಬಆತ್ತತೋತ್ರೇ ಧೃತಹಯರಶ್ಮಿನಿ ತಚ್ಛ್ರಿಯೇಕ್ಷಣೀಯೇ।
ಭಗವತಿ ರತಿಸ್ತುಮೇಮುಮೂಷೋರ್ಯಮಿಹ ನಿರೀಕ್ಷ್ಯ ಹತಾಗತಾಸ್ತ್ವರೂಪಮ್॥

ಅರ್ಜುನನ ರಥಕ್ಕೆ ಕಾವಲಾಗಿ, ಒಂದು ಕೈಯಿಂದ ಚಾಟಿಯನ್ನೂ, ಮತ್ತೊಂದು ಕೈಯಿಂದ ಕುದುರೆಯ ಹಗ್ಗವನ್ನೂ ಹಿಡಿದು, ಲೋಕಮೋಹಕವಾದ ವಿಲಕ್ಷಣರೂಪದಿಂದ ಶೋಭಿಸುತ್ತ, ಯುದ್ಧದಲ್ಲಿ ಹತರಾದ ವೀರರೆಲ್ಲರಿಗೂ ತನ್ನ ದರ್ಶನದಿಂದಲೇ ಮೋಕ್ಷವನ್ನು ಕೊಡುವವನಾಗಿ, ರಣಾಗ್ರದಲ್ಲಿ ಸಂಚರಿಸುತ್ತಿದ್ದ ಆ ಭಗವಂತನಲ್ಲಿ, ಮರಣೋನ್ಮುಖನಾದ ಈ ನನಗೆ ಭಕ್ತಿಯು ನಿಶ್ಚಲವಾಗಿ ನೆಲೆಗೊಳ್ಳಲಿ!

ಶ್ಲೋ॥ ಲಲಿತಗತಿವಿಲಾಸವಲ್ಗು ಹಾಸಪ್ರಣಯ ನಿರೀಕ್ಷಣಕಲ್ಪಿತೋರುಮಾನಾಃ ।
ಕೃತಮನುಕೃತವತ್ಯ ಉನ್ಮದಾಂಧಾಃ ಪ್ರಕೃತಿಮಗನ್ಕಿಲಯಸ್ಯ ಗೋಪವಧ್ವಃ॥

ಯಾವನ ಅಂದವಾದ ನಡೆ! ಮನೋಹರಗಳಾದ ವಿಲಾಸಗಳು! ಅನುರಾಗವಿಶಿಷ್ಟವಾದ ಕಣ್ಣಿನ ನೋಟಗಳು! ಮುಗುಳ್ನಗೆ! ಇವುಗಳಿಂದಲೇ ಗೋಪಸ್ತ್ರೀಯರು, ತಾವು ಸರ್ವವಿಧದಿಂದಲೂ ಸತ್ಕೃತರಾದಂತೆಣಿಸಿ, ಮಿತಿಮೀರಿದ ಮೋಹಾಂಧತೆಯಿಂದ ಮುಂಗಾಣದೆ, ಅವನನ್ನು ತಮಗೆ ಸಮಾನನೆಂದು ತಿಳಿದು, ಆತನು ನಡೆಸಿದ ಅತಿಮಾನುಷಕೃತ್ಯಗಳನ್ನು ತಾವೂ ಅನುಕರಿಸುತಿದ್ದು, ಕೊನೆಗೆ ಈ ನೆವದಿಂದಲೇ ಕೃಷ್ಣನೊಡನೆ ಸಾಧರ್ಮ್ಯವನ್ನು ಹೊಂದಿದರೋ ಅಂತಹ ಶ್ರೀಕಷ್ಣನಲ್ಲಿ ನನ್ನ ಮನಸ್ಸು ನೆಲೆಗೊಳ್ಳಲಿ!

ಶ್ಲೋ॥ಮುನಿಗಣನೃಪವರ್ಯಸಂಕುಲೇಂತಸ್ಸದಸಿ ಯುಧಿಷ್ಠಿರರಾಜಸೂಯಏಷಾಂ।
ಅರ್ಹಣಮುಪಪೇದ ಈಕ್ಷಣೀಯೋ ಮಮ ದೃಶಿ ಗೋಚರ ಏಷ ಆವಿರಾತ್ಮಾ ॥

ರಾಜಸೂಯಯಾಗದಲ್ಲಿ ಅನೇಕಮಹರ್ಷಿಗಳೂ, ರಾಜರ್ಷಿಗಳೂ ಸೇರಿರುವಾಗ, ಧರ್ಮರಾಜನು ಸಭಾಮಧ್ಯದಲ್ಲಿ ಮಾಡಿದ ಅಗ್ರಪೂಜೆಯನ್ನು ಗ್ರಹಿಸಿದಕಾಲದಲ್ಲಿ, ಆ ಶ್ರೀಕೃಷ್ಣನಿಗಿದ್ದ ಲೋಕಮನೋಹರವಾದ ಸ್ವರೂಪವು ನನ್ನ ಕಣ್ಣಿಗೆ ಯಾವಾಗಲೂ ಗೋಚರಿಸುತ್ತಿರಲಿ!

ಶ್ಲೋ॥ಕ್ಷಿತಿಭರಮವರೋಪಿತುಂ ಕುರೂಣಾಂ ಶ್ವಸನಇವಾಸೃಜದಕ್ಷವಂಶವಹ್ನಿಂ ।
ತಮಿಮಮಹಮನುವ್ರತಾರ್ಭಿಹಾಂಘ್ರಿಂ ಹೃದಿ ಪರಿರಭ್ಯ ಜಹಾಮಿ ಮರ್ತ್ಯನೀಡಂ॥

ಗಾಳಿಯು ಬಿದಿರುಮೆಳೆಯಲ್ಲಿ ಒಂದಕ್ಕೊಂದಕ್ಕೆ ಘರ್ಷಣವನ್ನುಂಟುಮಾಡಿ, ಬೆಂಕಿಯನ್ನು ಹುಟ್ಟಿಸಿ ಕಾಡನ್ನು ಸುಡುವಂತೆ, ಯಾವನು ಪಗಡೆಯಾಟವೆಂಬ ನೆವದಿಂದ ಕೌರವರಲ್ಲಿಯೇ ಅಂತಃಕಲಹವನ್ನು ಹುಟ್ಟಿಸಿ, ಕುರುವಂಶವೆಲ್ಲವನ್ನೂ ನಾಶಮಾಡಿ, ಭೂಭಾರವನ್ನ ಪಹರಿಸಿದನೋ, ಆ ಶ್ರೀ ಕೃಷ್ಣನ ಆಶ್ರಿತದುಃಖನಿವಾರಕಗಳಾದ ಪಾದಾರವಿಂದಗಳನ್ನು ಹೃದಯದಿಂದಪ್ಪಿಕೊಂಡು, ಈಗ ನಾನು ಈ ನನ್ನ ಶರೀರವೆಂಬ ಹೊದ್ದಿಕೆಯನ್ನು ಬಿಟ್ಟುಬಿಡುವೆನು.

ಶ್ಲೋ॥ತಮಿಮಮಹಮಜಂ ಶರೀರಭಾಜಾಂ ಹೃದಿಹೃದಿ ಧಿಷ್ಠಿತಮಾತ್ಮಕಲ್ಪಿತಾನಾಂ ।
ಪ್ರತಿದೃಶಮಿವ ನೈಕಧಾರ್ಕಮೇಕಂಸಮಧಿಗತೋಸ್ಮಿ ವಿಧೂತಭೇದಮೋಹಃ ॥

ಸೂರ್ಯನು ಆಕಾಶದಲ್ಲಿ ತಾನೊಬ್ಬನೇ ಪ್ರಕಾಶಿಸುತಿದ್ದರೂ, ಭೂಮಿಯಲ್ಲಿರುವ ಸಮಸ್ತ ಜಲಾಶ್ರಯಗಳಲ್ಲಿಯೂ ಪ್ರತಿಬಿಂಬಿಸಿ, ಆ ಜಲಗತವಾದ ಚೇಷ್ಟೆಗಳಿಗೆ ತಾನುಮಾತ್ರ ಈಡಾಗದಿರುವಂತೆ, ಯಾವ ಭಗವಂತನು ತಾನೊಬ್ಬನಾಗಿದ್ದರೂ, ಜೀವಿಗಳ ಪ್ರತಿಹೃದಯದಲ್ಲಿಯೂ ಅಂತರಾತ್ಮನಾಗಿ, ನಾನಾತ್ವವನ್ನು ಹೊಂದಿ, ಆ ಜೀವಾದಿಗತವಾದ ದೋಷಕ್ಕೆ ಮಾತ್ರ ತಾನು ಭಾಗಿಯಾಗದಿರುವನೋ, ಅಂತಹ ಈ ಶ್ರೀಕೃಷ್ಣನನ್ನು ನಾನು, ಮನಸ್ಸಿನ ಮೋಹಾದಿಗಳನ್ನು ಬಿಟ್ಟು ಶರಣುಹೊಂದುವೆನು.

ಹೀಗೆಂದು ಭೀಷ್ಮನು ಶ್ರೀಕೃಷ್ಣಪರಮಾತ್ಮನನ್ನು ಸ್ತುತಿಸುತ್ತ, ಆ ಭಗವಂತನಲ್ಲಿಯೇ ಮನಸ್ಸು, ವಾಕ್ಕು, ದೃಷ್ಟಿ, ಇವೇ ಮೊದಲಾದ ಸರ್ವೇಂದ್ರಿಯಗಳನ್ನೂ ನೆಲೆಗೊಳಿಸಿ, ಆ ಅಂತರಾತ್ಮನನ್ನು ತನ್ನ ಹೃದಯದಲ್ಲಿ ಸೇರಿಸಿಕೊಂಡು, ತನ್ನ ಶ್ವಾಸವಾಯುವನ್ನು ತನ್ನೊಳಗೆ ತಾನೇ ಅಡಗಿಸಿಕೊಂಡು ಮೌನವನ್ನು ವಹಿಸಿದನು. ಹೀಗೆ ಭೀಷ್ಮಾಜಾರ್ಯನು ನಿರ್ದೋಷವಾದ ಪರಬ್ರಹ್ಮದಲ್ಲಿ ಸೇರುತ್ತಿರುವಾಗ, ಅಲ್ಲಿದ್ದವರೆಲ್ಲರೂ ರಾತ್ರಿಯಲ್ಲಿ ಪಕ್ಷಿಗಳು ಹೇಗೋ ಹಾಗೆ ಮೌನದಿಂದ ನಿಶ್ಶಬ್ದರಾಗಿ ನೋಡುತಿದ್ದರು. ಈ ಭೀಷ್ಮನಿರ್ಯಾಣಕಾಲದಲ್ಲಿ ಆಕಾಶದಲ್ಲಿ ದೇವತೆಗಳಿಂದಲೂ, ಭೂಮಿಯಲ್ಲಿ ಮನುಷ್ಯರಿಂದಲೂ,ನುಡಿಸಲ್ಪಡುತಿದ್ದ ದುಂದುಭಿವಾದ್ಯಗಳು ಮಹಾಧ್ವನಿಯಿಂದ ಮೊಳಗುತಿದ್ದುವು. ಅಲ್ಲಲ್ಲಿ ಸಾಧುಗಳೆಲ್ಲರೂ ಭೀಷ್ಮನ ಗುಣಗಳನ್ನು ಕೊಂಡಾಡುತಿದ್ದ

ರು. ಆಕಾಶದಿಂದ ಪುಷ್ಪವೃಷ್ಟಿಯು ಸುರಿಯಿತು. ಆಮೇಲೆ ಧರ್ಮರಾಜನು, ವ್ಯಾಸಾದಿಗಳ ಅನುಮತಿಯಿಂದ ಭೀಷ್ಮನಿಗೆ ಅಪರಸಂಸ್ಕಾರಗಳನ್ನು ನಡೆಸಿ, ಕುಲಪಿತಾಮಹನಾದ ಆತನ ಮರಣಕ್ಕಾಗಿ ಸ್ವಲ್ಪಹೊತ್ತಿನವರೆಗೆ ದುಃಖಿತನಾಗಿದ್ದನು. ಅಲ್ಲಿ ಸೇರಿದ್ದ ಋಷಿಗಳೆಲ್ಲರೂ ಶ್ರೀಕೃಷ್ಣಪರಮಾತ್ಮನನ್ನು ವೇದೋಕ್ತನಾಮಗಳಿಂದ ಸಂತೋಷಪೂರ್ವಕವಾಗಿ ಸ್ತುತಿಸುತ್ತ, ಆ ಕೃಷ್ಣನನ್ನು ತಮ್ಮ ಹೃದಯದಲ್ಲಿ ಧೃಢವಾಗಿಟ್ಟುಕೊಂಡು, ಆತನಾಜ್ಞೆಯನ್ನು ಪಡೆದು, ತಮ್ಮತಮ್ಮ ಆಶ್ರಮಗಳಿಗೆ ಬಂದು ಸೇರಿದರು. ಆಮೇಲೆ ಧರ್ಮರಾಜನು ತನ್ನ ತಮ್ಮಂದಿರಾದ ಭೀಮಾದಿಗಳೊಡನೆಯೂ, ಶ್ರೀಕೃಷ್ಣನೊಡನೆಯೂ ಸೇರಿ ಹಸ್ತಿನಾಪುರಕ್ಕೆ ಬಂದು, ಇತ್ತಲಾಗಿ ಪುತ್ರಶೋಕದಿಂದ ದುಃಖಿಸುತಿದ್ದ ತನ್ನ ತಾಯಿತಂದೆಗಳಾದ ಗಾಂಧಾರೀಧೃತರಾಷ್ಟ್ರರನ್ನು ತಾನೇ ಸಮಾಧಾನಪಡಿಸಿದನು. ಆಮೇಲೆ ತನ್ನ ತಂದೆಯಾದ ಧೃತರಾಷ್ಟ್ರನ, ಮತ್ತು ಶ್ರೀಕೃಷ್ಣನ ಆಜ್ಞಾನುಸಾರವಾಗಿ, ತನ್ನ ಕುಲಕ್ರಮಾಗತವಾದ ರಾಜ್ಯದಲ್ಲಿ ಪಟ್ಟಾಭಿಷಿಕ್ತನಾಗಿ, ಧರ್ಮದಿಂದ ರಾಜ್ಯವನ್ನು ಪರಿಪಾಲಿಸುತ್ತ ಸಂತೋಷದಿಂದಿದ್ದನು. ಇಲ್ಲಿಗೆ ಒಂಬತ್ತನೆಯ ಅಧ್ಯಾಯವು.

{ ಶ್ರೀ ಕೃಷ್ಣನು ಧರ್ಮರಾಜನನ್ನು ರಾಜ್ಯಭಾರಕ್ಕಾಗಿ ನಿಯಮಿಸಿ, ತಾನು ದ್ವಾರಕೆಗೆ ಹೊರಟುದು. }

ಆಮೇಲೆ ಶೌನಕನು ಸೂತನನ್ನು ಕುರಿತು ''ಎಲ್ಲೈ ಸೂತನೆ ! ಧರ್ಮರಾಜನು, ತನ್ನ ರಾಜ್ಯಭಾಗವನ್ನಪಹರಿಸಿ ತನ್ನನ್ನು ಕೆಡಿಸಬೇಕೆಂದುದ್ದೇತಿಸಿದ ನೀಚನಾದ ದುರ್ಯೋಧನನನ್ನೂ, ಅವನ ತಮ್ಮಂದಿರವನ್ನೂ ಕೊಂದು ರಾಜ್ಯವನ್ನು ಕೈಕೊಂಡಮೇಲೆ, ಅವನು ತನ್ನ ತಮ್ಮಂದಿರೊಡಗೂಡಿ ರಾಜ್ಯರಕ್ಷಣೆಯನ್ನು ಮಾಡಿದ ಕ್ರಮವೇನು ? ಅವನು ತನ್ನ ರಾಜ್ಯಭಾರದಲ್ಲಿ ಮಾಡಿದ ಬೇರೆ ಕಾರ್ಯಗಳೇನು ? " ಎಂದನು. ಅದಕ್ಕಾ ಸೂತನು ಶೌನಕಾ ! ಕೇಳು! ಬಿದಿರುಮೆಳೆಗಳ ಸಂಘರ್ಷಣದಿಂದ ಹುಟ್ಟಿದ ಬೆಂಕಿಯೇ ಕಾಡನ್ನು ಸುಡುವಂತೆ, ಕುಲದಲ್ಲಿ ಹುಟ್ಟಿದ ಕಲಹದಿಂದ ಕುರುವಂಶವು ನಿರ್ಮೂಲವಾಗುತಿದ್ದಾಗ, ಶ್ರೀಕೃಷ್ಣನು ಪರೀಕ್ಷಿದ್ರಾಜನನ್ನು ರಕ್ಷಿಸಿ, ಕುರುವಂಶಕ್ಕೆ ಆ

ಭ್ಯುದಯವನ್ನನುಗ್ರಹಿಸಿದಮೇಲೆ, ಆ ಪರೀಕ್ಷಿತ್ತು ರಾಜ್ಯಸಮರ್ಥನಾಗುವ ವರೆಗೂ ಧರ್ಮರಾಜನನ್ನೇ ರಾಜ್ಯವಾಳುವಂತೆ ನಿಯಮಿಸಿ, ಈ ಕಾರ್ಯದಿಂದ ತಾನು ಕೃತಕೃತ್ಯನಾದಂತೆಣಿಸಿ ಸಂತೋಷದಿಂದಿದ್ದನು. ಧರ್ಮರಾಜನೂ ಕೂಡ ಶ್ರೀಕೃಷ್ಣಾಜ್ಞೆಯಿಂದ ರಾಜ್ಯವನ್ನು ಸ್ವೀಕರಿಸಿದಮೇಲೆ, ಭೀಷ್ಮಾಚಾರ್ಯನೂ, ಕೃಷ್ಣನೂ, ತನಗುಪದೇಶಿಸಿದ್ದ ಧರ್ಮಮಾರ್ಗವನ್ನನುಸರಿಸಿ ರಾಜ್ಯವನ್ನು ನಡೆಸತೊಡಗಿದನು. ಆ ಧರ್ಮಪುತ್ರನು ಅಪಾರವಾದ ಜ್ಞಾನವುಳ್ಳವನಾದುದರಿಂದ, ಮನಸ್ಸಿನ ಅಜ್ಞಾನವನ್ನು ನಿಶ್ಶೇಷವಾಗಿ ನೀಗಿ, ಶ್ರೀಮನ್ನಾರಾಯಣನ ಕೃಪಾಬಲದಿಂದ ಸ್ವರ್ಗವನ್ನು ಪಾಲಿಸುವ ದೇವೇಂದ್ರನಂತೆ, ಶ್ರೀಕೃಷ್ಣನನ್ನೇ ತನಗೆ ಮುಖ್ಯಗತಿಯೆನ್ನಾಗಿ ನಂಬಿ, ತಮ್ಮಂದಿರೊಡಗೂಡಿ,ಸಮುದ್ರಾಂತವಾದಸಮಸ್ತಭೂಮಂಡಲವನ್ನೂ ಧರ್ಮದಿಂದ ಪಾಲಿಸುತಿದ್ದನು. ಶೌನಕಾ! ಈ ಧರ್ಮರಾಜನ ರಾಜ್ಯದಲ್ಲಿ ಕಾಲಕಾಲಕ್ಕೆ ಸರಿಯಾಗಿ ಮೇಘಗಳು ಸುವೃಷ್ಟಿಯನ್ನು ಸುರಿಸುತಿದ್ದುವು. ಭೂಮಿಯು ಸಮೃದ್ಧವಾದ ಬೆಳೆಯನ್ನು ಕೊಡುತಿತ್ತು.ಗೋವುಗಳೆಲ್ಲವೂ ಉಬ್ಬಿದ ಕೆಚ್ಚಲುಗಳಿಂದ ಕೂಡಿ ಬೇಕಾದಷ್ಟು ಹಾಲನ್ನು ಕರೆಯುತಿದ್ದುವು. ಎಲ್ಲಾ ಋತುಗಳಲ್ಲಿಯೂ ತದನುಗುಣಗಳಾದ ಓಷಧಿಗಳು ಬೆಳೆಯುತಿದ್ದುವು. ನದಿಗಳು ಯಾವಾಗಲೂ ನಿರ್ಮಲಜಲದಿಂದ ತುಂಬಿ ತುಳುಕುತಿದ್ದುವು. ಸಮುದ್ರವು ನಾನಾವಿಧರತ್ನಸಮೂಹಗಳಿಂದ ಶೋಭಿಸುತಿತ್ತು. ಪರ್ವತಪ್ರಾಂತಗಳೆಲ್ಲವೂ ಸಪ್ತವಿಧಧಾತುಗಳಿಂದ ಬೆಳಗುತಿದ್ದುವು. ವನಗಳೆಲ್ಲವೂ ಪ್ರಶಸ್ತವಾದ ಫಲಪುಷ್ಪಸಮೃದ್ಧಿಯಿಂದ ಶೋಭಿಸುತಿದ್ದುವು. ಧರ್ಮರಾಜನ ರಾಜ್ಯದಲ್ಲಿ ಪ್ರಜೆಗಳಿಗೆ ಯಾವವಿಧದ ಮನೋವ್ಯಥೆಯಾಗಲಿ, ರೋಗಗಳಾಗಲಿ, ಆಧ್ಯಾತ್ಮಿಕಾದಿತಾಪತ್ರಯಗಳಾಗಲಿ ಸಂಭವಿಸುತ್ತಿರಲಿಲ್ಲ. ಹೀಗೆ ಧರ್ಮರಾಜನು ಸುಖದಿಂದ ರಾಜ್ಯವನ್ನು ಪರಿಪಾಲಿಸತೊಡಗಿದಮೇಲೆ, ಶ್ರೀಕೃಷ್ಣನು ಸಂತುಷ್ಟನಾಗಿ, ದ್ವಾರಕೆಗೆ ಹೊರಡಲುದ್ಯುಕ್ತನಾದನು. ಆ ಶ್ರೀಕೃಷ್ಣನು ತನ್ನ ತಂಗಿಯಾದ ಸುಭದ್ರೆಯ ಕೋರಿಕೆಯನ್ನು ತೀರಿಸುವುದಕ್ಕಾಗಿಯೂ, ಧರ್ಮರಾಜನ ದುಃಖಸಮಾಧಾನಕ್ಕಾಗಿಯೂ ಹೀಗೆ ಹಸ್ತಿನಾಪುರದಲ್ಲಿ ಕೆಲವು ತಿಂಗಳಿದ್ದು, ಆಮೇಲೆ ಧರ್ಮರಾಜನ ಅನುಮತಿಯನ್ನು ಪಡೆದು, ಭೀ

ಮಾಯಿಗಳನ್ನಾಲಿಂಗಿಸಿಕೊಂಡು, ಆಲ್ಲಿದ್ದ ಸಮಸ್ತಜನಗಳಿಂದಲೂ ನಮಸ್ಕರಿಲ್ಪಟ್ಟವನಾಗಿ ಪ್ರಯಾಣಕ್ಕಾಗಿ ರಥವನ್ನೇರಿ ಕುಳಿತನು. ಹೀಗೆ ಕೃಷ್ಣನು ರಥಾರೂಢನಾಗಿ ಪಟ್ಟಣಕ್ಕೆ ಹೊರಡುವಸಮಯದಲ್ಲಿ, ಆತನ ವಿಯೋಗದುಃಖವನ್ನು ಸಹಿಸಲಾರದೆ, ಕುಂತಿ, ಸುಭದ್ರೆ,ಉತ್ತರೆ, ಗಾಂಧಾರಿ. ಮೊದಲಾದ ಸ್ತ್ರೀಯೆರೂ, ಧರ್ಮರಾಜ, ಭೀಮ, ನಕುಲ ಸಹದೇವರೂ, ಧೃತರಾಷ್ಟ್ರಾದಿಗಳೂ, ಧೌಮ್ಯರೇ ಮೊದಲಾದ ಮಹರ್ಷಿಗಳೂ, ಆತನ ರಥವನ್ನು ಹಿಂಬಾಲಿಸಿ ಹೊರಟರು. ಶೌನಕಾ! ಲೋಕದಲ್ಲಿ ಮನುಷ್ಯರು ಸತ್ಪುರುಷರ ಸಹವಾಸದಿಂದ ದುಸ್ಸಂಗವನ್ನು ಬಿಟ್ಟು, ಸಜ್ಜನರಿಗೆ ಸೇವ್ಯವಾದ ಶ್ರೀಕೃಷ್ಣನ ಕೀರ್ತಿಯನ್ನೊಂದಾವರ್ತಿ ಕೇಳಿದಮಾತ್ರದಿಂದಲೇ, ಅದನ್ನು ಎಂದೆಂದಿಗೂ ಬಿಟ್ಟಿರಲಾರರು. ಹೀಗಿರುವಾಗ ಸರ್ವಕಾಲದಲ್ಲಿಯೂ, ಶ್ರೀಕೃಷ್ಣನೊಡನೆಯೇ ಸಿದ್ಧಾಹಾರಗಳನ್ನು ನಡೆಸುತ್ತ, ಅವನ ಸಂಗಡಲೇ ಕುಳಿತು ಸಂಭಾಷಣಗಳನ್ನು ನಡೆಸುತಿದ್ದ ಪಾಂಡವರು, ಹೇಗೆತಾನೇ ಆ ಮಹಾತ್ಮನ ವಿರಹವನ್ನು ಸಹಿಸಬಲ್ಲರು? ಹೀಗೆ ಧರ್ಮರಾಜಾದಿಗಳೂ, ಕುಂತಿ ಮೊದಲಾದ ಸ್ತ್ರೀಯೆರೂ ಕೃಷ್ಣನಲ್ಲಿರುವ ಸ್ನೇಹದಿಂದ, ಆತನನ್ನಗಲಿರಲಾರದೆ, ಮನಸ್ಸನ್ನು ಅವನಲ್ಲಿಯೇ ನೆಲೆಗೊಳಿಸಿ, ಎವೆಮುಚ್ಚದೆ ಆತನನ್ನೇ ನೋಡುತ್ತ,ಬಹಳ ಚಿಂತಾಪರರಾಗಿ ಅಲ್ಲಲ್ಲೆ ತಿರುಗುತಿದ್ದರು. ಸ್ತ್ರೀಜನವೆಲ್ಲವೂ ಕೃಷ್ಣನ ಪ್ರಯಾಣಕಾಲದಲ್ಲಿ ಕಣ್ಣೀರನ್ನು ಬಿಡುವುದು ಅಮಂಗಳಸೂಚಕವೆಂದೆಣಿಸಿ, ಅವನ ವಿರಹದುಃಖದಿಂದ ತುಂಬಿಕುಳುಕುತ್ತಿರುವ ಬಾಷ್ಪಜಲವನ್ನು ಎಷ್ಟೋ ಪ್ರಯತ್ನದಿಂದ ತಡೆದಿಟ್ಟುಕೊಳ್ಳುತಿದ್ದರು. ಶಂಖ" ಭೇರಿ, ಮೃದಂಗ, ವೀಣೆ, ಪಣವ, ಗೋಮುಖ, ದುಂಧುಭಿ,ಘಂಟೆ,ಕರತಾಳ,ಮೊದಲಾದ ಶುಭವಾದ್ಯಗಳೆಲ್ಲವೂ ಗಂಭೀರವಾಗಿ ನುಡಿಸಲ್ಪಡುತಿದ್ದುವು. ಹಸ್ತಿನಾಪುರದಲ್ಲಿದ್ದ ಸ್ತ್ರೀಯರೆಲ್ಲರೂ ಆ ಕೃಷ್ಣನ ಪ್ರಯಾಣೋತ್ಸವವನ್ನು ನೋಡಬೇಕೆಂಬ ಆಸೆಯಿಂದ ಉಪ್ಪರಿಗೆಗಳನ್ನೇರಿ, ಪ್ರೀತಿಯನ್ನೂ, ಲಜ್ಜೆಯನ್ನೂ, ಮಂದಹಾಸವನ್ನೂ ಸೂಚಿಸತಕ್ಕ ನೋಟಗಳಿಂದ ಆತನನ್ನೇ ನೋಡುತ್ತ, ಶ್ರೀಕೃಷ್ಣನ ಮೇಲೆ ಪುಷ್ಪವರ್ಷವನ್ನು ಸುರಿಸುತಿದ್ದರು. ಶ್ರೀಕೃಷ್ಣನಿಗೆ ಪರಮಪ್ರಿಯನಾದ ಅರ್ಜುನನು, ಆತನ ಪ್ರಯಾಣ

ಕಾಲದಲ್ಲಿ ಮುತ್ತಿನ ಕುಚ್ಚುಗಳಿಂದಲೂ, ರತ್ನಖಚಿತವಾದ ದಂಡದಿಂದಲೂ ಶೋಭಿತವಾದ ಶ್ವೇತಚ್ಛತ್ರವನ್ನು ತನ್ನ ಕೈಯಿಂದಲೇ ಹಿಡಿಯುತ್ತ ಬಂದನು. ಉದ್ಧವಸಾತ್ಯಕಿಗಳಿಬ್ಬರೂ, ಶ್ರೀಕೃಷ್ಣನ ಉಭಯಪಾರ್ಶ್ವದಲ್ಲಿ ನಿಂತು ಮಹಾದ್ಭುತಗಳಾದ ಚಾಮರಗಳನ್ನು ಬೀಸುತ್ತ ಬಂದರು. ದಾರಿಯುದ್ದಕ್ಕೂ ಸ್ತ್ರೀಯರು ಪುಷ್ಪವೃಷ್ಟಿಯನ್ನು ಕರೆಯುತಿದ್ದರು. ಅಲ್ಲಲ್ಲಿ ಬ್ರಾಹ್ಮಣರು ಮುಂದೆ ಬಂದು, ಪ್ರಕೃತಿಜನ್ಯವಾದ ಹೇಯಗುಣವಿಲ್ಲದವನಾಗಿಯೂ, ಜ್ಞಾನಶಕ್ತ್ಯಾದಿ ಗುಣಪರಿಪೂರ್ಣನಾಗಿಯೂ ಇರುವ ಆ ಶ್ರೀಕೃಷ್ಣಪರಮಾತ್ಮನಿಗೆ ತಮತಮಗೆ ತೋರಿದಂತೆ ಮಂಗಳಾತೀರ್ವಚನಗಳನ್ನು ಮಾಡುತಿದ್ದರು. ಪೂರ್ಣಕಾಮನಾದ ಆ ಶ್ರೀಕೃಷ್ಣನ ವಿಷಯದಲ್ಲಿ ಈ ಬ್ರಾಹ್ಮಣರು ಮಾಡತಕ್ಕ ಆತೀರ್ವಚನಗಳು ನಿರರ್ಥಕಗಳಾಗಿದ್ದರೂ, ಇವರ ವಾಕ್ಯಗಳು, ಅವರಿಗೆ ಆತನಲ್ಲಿರುವ ಭಕ್ತಿಗೂ, ಸ್ನೇಹಕ್ಕೂ ಅನುರೂಪಗಳಾಗಿ ನಾನಾಕಡೆಯಿಂದ ಹೊರಡುತಿದ್ದುವು. ಶ್ರೀಕೃಷ್ಣನ ಪ್ರಯಾಣಕಾಲದಲ್ಲಿ ಆತನಲ್ಲಿ ವಿಶೇಷಭಕ್ತಿಯುಳ್ಳವರಾಗಿದ್ದ ಪುರಸ್ತ್ರೀಯರು, ಒಬ್ಬರನ್ನೊಬ್ಬರು ನೋಡಿ ಶ್ರೀಕೃಷ್ಣನ ಗುಣಗಳನ್ನು ಹೀಗೆಂದು ಕೊಂಡಾಡುವರು.“ಆಹಾ! ಪ್ರಲಯಕಾಲದಲ್ಲಿ ಸತ್ತ್ವಾದಿಗುಣಗಳು ಹುಟ್ಟುವುದಕ್ಕೆ ಮೊದಲು, ಕರ್ಮರೂಪಗಳಾದ ಶಕ್ತಿಗಳೆಲ್ಲವೂ ಅಡಗಿರುವಾಗ, ಯಾವನು ತಾನೊಬ್ಬನೇ ಸೂಕ್ಷ್ಮಚಿದಚಿದ್ರೂಪನಾದ ಜಗತ್ತನ್ನು ಶರೀರವನ್ನಾಗಿ ಹೊಂದಿ, ಸರ್ವನಿಯಾಮಕನಾಗಿ, ಬೇರೊಂದನ್ನೂ ಕಾಣಿಸದೆ ಪ್ರಕಾಶಿಸುತಿದ್ದನೋ, ಆ ಪರಮಪುರುಷನೇ ಈ ಕೃಷ್ಣನಲ್ಲದೆ ಬೇರೆಯಲ್ಲ! ಮೊದಲು ಕಾರಣದಶೆಯಲ್ಲಿ, ಯಾವ ಭಗವಂತನು ತಾನೊಬ್ಬನಾಗಿಯೇ ಇದ್ದು, ತನಗೆ ಶರೀರಭೂತಗಳಾದ ಜೀವಗಳಿಗೆ ಹೊದ್ದಿಕೆಯಾಗಿಯೂ, ತನ್ನ ಸಂಕಲ್ಪದಿಂದ ಪ್ರೇರಿತವಾಗಿಯೂ, ಪ್ರಪಂಚಸೃಷ್ಟಿಗೆ ಉನ್ಮುಖವಾಗಿಯೂ ಇರುವ ಪ್ರಕೃತಿಯನ್ನವಲಂಬಿಸಿ, ತಾನೂ ಅಂತರಾತ್ಮನಾಗಿ ಪ್ರವೇಶಿಸಿ, ನಾಮರೂಪಗಳಿಲ್ಲದ ಜೀವಾತ್ಮನಲ್ಲಿ ನಾಮರೂಪಗಳನ್ನುಂಟುಮಾಡಬೇಕೆಂದುದ್ದೇಶಿಸಿ, ವೇದಗಳಿಗೆ ಪ್ರವರ್ತಕನಾದನೋ ಆ ಮಹನೀಯನೇ ಈ ಕೃಷ್ಣನೆಂಬುದರಲ್ಲಿ ಸಂದೇಹವಿಲ್ಲ ಇದಲ್ಲದೆ ಲೋಕದಲ್ಲಿ ಮಹಾಜ್ಞಾನಿಗಳೆಲ್ಲರೂ ತಮ್ಮ ಪ್ರಾಣವಾಯುಗಳನ್ನು

ತಡೆದು, ಇಂದ್ರಿಯಗಳನ್ನು ನಿಗ್ರಹಿಸಿ, ಶುದ್ಧವಾದ ಮನಸ್ಸಿನಿಂದಲೂ, ಭಕ್ತಿಯಿಂದಲೂ ಕೂಡಿದವರಾಗಿ, ಯಾವಪರಮಾತ್ಮನ ಸ್ವರೂಪವನ್ನು ನೋಡುತ್ತಿರುವರೋ ಅವನೇ ಈ ಕೃಷ್ಣನು! ಎಲೆ ಸಖಿ! ವೇದವಿತ್ತ್ತಗಳು ಯಾವನ ಸತ್ಕಥೆಗಳನ್ನು ಅತಿರಹಸ್ಯಾರ್ಥವುಳ್ಳ ವೇದಾಂತಗಳಿಂದ ಗಾನಮಾಡುತ್ತಿರುವರೋ, ಯಾವನು ತಾನೊಬ್ಬನೇ ಆಗಿದ್ದರೂ, ಜಗತ್ತಿನಸೃಷ್ಟಿಸ್ಥಿತಿಸಂಹಾರಗಳಲ್ಲಿ ಲೀಲಾರ್ಥವಾಗಿ ಪ್ರವರ್ತಿಸುತ್ತಿರುವನೋ, ಯಾವ ಮಹಾನುಭಾವನು ಈ ಜಗತ್ತಿನಲ್ಲಿ ಅಂತರ್ಯಾಮಿಯಾಗಿದ್ದರೂ, ಅದರಿಂದುಂಟಾದ ದೋಷಸಂಬಂಧವಿಲ್ಲದಿರುವನೋ,ಆ ಈಶ್ವರನೇ ಈ ಕೃಷ್ಣನು! ಇದಲ್ಲದೆ ಲೋಕದಲ್ಲಿ ಕುಬುದ್ಧಿಯುಳ್ಳರಾಜರು,ದುಷ್ಪ್ರವರ್ತನವುಳ್ಳವರಾಗಿ, ಅಧರ್ಮದಲ್ಲಿ ಪ್ರವರ್ತಿಸಿದಾಗಲೆಲ್ಲಾ, ಲೋಕವನ್ನು ರಕ್ಷಿಸುವುದಕ್ಕಾಗಿ ಮತ್ಸ್ಯಾದ್ಯವತಾರಗಳನ್ನು ಧರಿಸಿ, ಧರ್ಮವನ್ನೂ, ಜ್ಞಾನಾದಿಸದ್ಗುಣಗಳನ್ನೂ, ಸತ್ಯ,ದಯೆ, ಕೀರ್ತಿ, ಮೊದಲಾದುವುಗಳನ್ನೂ ನೆಲೆಗೊಳಿಸತಕ್ಕವನೂ ಈತನಲ್ಲದೆ ಬೇರೆಯಲ್ಲ. ಇನ್ನು ಹೆಚ್ಚಾಗಿ ಹೇಳಿದುದರಿಂದೇನು. ಈ ಕೃಷ್ಣನು ಹುಟ್ಟಿದುದರಿಂದಲೇ ಯದುಕುಲವು ಪವಿತ್ರವಾಯಿತು!ಈ ಶ್ರೀಕೃಷ್ಣಮೂರ್ತಿಯ ಪಾದವಿನ್ಯಾಸದಿಂದಲೇ ಮಥುರಾಪುರವು ಪವಿತ್ರವೆನಿಸಿರುವುದು. ಆಹಾ ! ದ್ವಾರಕಾಪುರದ ಭಾಗ್ಯವೇ ಭಾಗ್ಯವಲ್ಲವೆ ? ಯಾವ ಪಟ್ಟಣದಲ್ಲಿರುವ ಪ್ರಜೆಗಳು ಸದಾ ಶ್ರೀಕೃಷ್ಣನ ದರ್ಶನದಿಂದ ಮಹಾನಂದವನ್ನನುಭವಿಸುತ್ತಿರುವರೋ,ಯಾವ ಪಟ್ಟಣದ ಭೂಭಾಗವು ಈತನ ಪಾದಸ್ಪರ್ಶದಿಂದ ಅತಿಪವಿತ್ರವೆನಿಸಿಕೊಂಡಿರುವುದೋ,ಯಾವ ಪಟ್ಟಣವು ಈತನ ನಿತ್ಯನಿವಾಸದಿಂದ ಸ್ವರ್ಗಕ್ಕಿಂತಲೂ ಅತಿಶಯವಾದ ಪ್ರಭಾವವನ್ನು ಹೊಂದಿರುವುದೋ, ಆ ದ್ವಾರಕಾಪುರಿಯೊಂದೇ ಈ ಸಮಸ್ತಭೂಮಿಗೂ ಪುಣ್ಯವನ್ನೂ, ಯಶಸ್ಸನ್ನೂ ಕೈಗೂಡಿಸುತ್ತಿರುವುದು.ಎಲೈ ಸಖಿಯರೇ!ಯಾವಗೋಪಸ್ತ್ರೀಯರು ಈತನಕೈಯನ್ನು ಹಿಡಿದು,ಈತನಲ್ಲಿಯೇ ನಟ್ಟಮನಸ್ಸುಳ್ಳವರಾಗಿಮೋಹಪಾರವಶ್ಯದಿಂದ ಇವನ ಅಧರಾಮೃತವನ್ನು ಪಾನಮಾಡುತ್ತಿರುವರೋ, ಅವರೆಲ್ಲರೂ ಪೂರ್ವಜನ್ಮದಲ್ಲಿ ಭಗವಂತನನ್ನು ಎಷ್ಟೋವಿಧದಿಂದ ಆರಾಧಿಸಿರಬೇಕು! ಅವರು ಜನ್ಮಾಂತರದಲ್ಲಿ ಎಷ್ಟೋವ್ರತಗಳನ್ನೂ, ಎಷ್ಟೋದಾ

ನಗಳನ್ನೂ ಎಷ್ಟೋಹೋಮಗಳನ್ನೂ ನಡೆಸಿರಬೇಕು ! ಹಾಗಿಲ್ಲದಿದ್ದರೆ ಆ ವರಿಗೆ ಈ ಭಾಗ್ಯವೆಲ್ಲಿಯದು? ಮತ್ತು ಹಿಂದೆ ಗರ್ವದಿಂದ ಕೊಬ್ಬಿದ ಶಿಶುಪಾಲಾದಿಗಳನ್ನು ನಿಗ್ರಹಿಸಿ, ಸ್ವಯಂವರದಲ್ಲಿ ವೀರ್ಯಶುಲ್ಕವಾಗಿಸಾಧಿಸಿತಂದ ರುಕ್ಮಿಣಿ, ಜಾಂಬವತಿ, ಮೊದಲಾದ ನಾರೀಮಣಿಯರೂ, ನರಕಾಸುರನನ್ನು ನಿಗ್ರಹಿಸಿ ತಂದ ಹದಿನಾರು ಸಾವಿರಮಂದಿ ಸ್ತ್ರೀಯರೂ, ಈ ಶ್ರೀ ಕೃಷ್ಣನನ್ನು ತಮ್ಮ ಮನೆಯಲ್ಲಿ ನಿತ್ಯವಾಗಿ ನಿಲ್ಲಿಸಿಕೊಳ್ಳುವುದರಿಂದ, ಅಶುಚಿಯಾಗಿಯೂ, ಕ್ರೂರವಾಗಿಯೂ ಇರುವ ಸ್ತ್ರೀಜಾತಿಗೇ ಒಂದು ವಿಧವಾದ ಮೇಲ್ಮೆಯನ್ನುಂಟುಮಾಡಿದರಲ್ಲವೆ ? ಈ ಮಹಾನುಭಾವನು ಆಗಾಗ ಹೆಸರು ಹಿಡಿದು ಕರೆಯುವುದರಿಂದ ಯಾವ ಸ್ತ್ರೀಯರ ಮನಸ್ಸನ್ನು ಮೋಹಗೊಳಿಸಿತ್ತಿರುವನೋ, ಆಹಾ! ಅವರಭಾಗ್ಯವೇ ಭಾಗ್ಯವು" ಹೀಗೆಂದು ಸಂಭಾಷಿಸುತ್ತಿರುವ ಆ ಪುರಸ್ತ್ರೀಯರ ವಾಕ್ಯವನ್ನು ಕೇಳಿ,ಶ್ರೀಕೃಷ್ಣನು, ಮಂದಹಾಸವಿಶಿಷ್ಟವಾದ ನೋಟದಿಂದ ಅವರನ್ನು ಮತ್ತಷ್ಟು ಆನಂದಪಡಿಸುತ್ತ, ಹಸ್ತಿನಾಪುರದ ಬೀದಿಗಳನ್ನು ದಾಟಿಬರುತಿದ್ದನು. ಆಗ ಧರ್ಮರಾಜನು ಕೃಷ್ಣನಲ್ಲಿ ತನಗಿದ್ದ ಮಿತಿಮೀರಿದ ಪ್ರೇಮದಿಂದ, ಆತನಿಗೆ ಶತ್ರುಗಳಿಂದೇನಾದರೂ ಅಪಾಯವುಂಟಾಗುವುದೋ ಎಂದು ಹೆದರಿ, ಆ ಕೃಷ್ಣನ ಬೆಂಗಾವಲಿಗಾಗಿ ಒಂದು ದೊಡ್ಡ ಚತುರಂಗಸೈನ್ಯವನ್ನು ಕಳುಹಿಸಿಕೊಟ್ಟನು.ತನ್ನ ತಮ್ಮಂದಿರೊಡನೆ ತಾನೂ ಬಹಳದೂರದವರೆಗೆ ಹಿಂಬಾಲಿಸಿದನು. ಹೀಗೆ ಪಾಂಡವರು ತನ್ನನ್ನು ಬಿಟ್ಟಿರಲಾರದೆ ಬಹುದೂರದವರೆಗೆ ಹಿಂಬಾಲಿಸಿಬಂದುದನ್ನು ನೋಡಿ,ಕೃಷ್ಣನು,ಇಂಪಾದಮೃದುವಾಕ್ಯಗಳಿಂದ ಅವರನ್ನು ಹಿಂತಿರುಗಿಸಿ,ತನ್ನ ಪ್ರಿಯಜನದೊಡನೆ ದ್ವಾರಕಾಭಿಮುಖನಾಗಿ ಹೊರಟನು. ದಾರಿಯಲ್ಲಿ ಕ್ರಮವಾಗಿ,ಕುರಜಾಂಗಲ, ಪಾಂಚಾಲ,ಶೂರಸೇನಾದಿದೇಶಗಳನ್ನೂ,ಯಮುನಾತೀರಪ್ರಾಂತಗಳನ್ನೂ,ಬ್ರಹ್ಮಾವರ್ತ,ಕುರುಕ್ಷೇತ್ರಗಳನ್ನೂ ಮತ್ಸ್ಯದೇಶವನ್ನೂ, ಸರಸ್ವತೀನದಿಯ ತೀರದೇಶಗಳನ್ನೂ, ಇನ್ನೂ ಅಲ್ಲಲ್ಲಿ ತೃಣಜಲರಹಿತಗಳಾದ ಬಯಲುಗಳನ್ನೂದಾಟಿ ಬಂದನು. ಆದರಿಂದಾಚೆಗೆ ಸೌವೀರಾಧಿದೇಶಗಳಮೇಲೆ ಹೊರಟು, ದ್ವಾರಕೆಗೆ ಸೇರಿದಂತಿದ್ದ ಆನರ್ತದೇಶವನ್ನು ಸಮೀಪಿಸುವಷ್ಟರಲ್ಲಿ,ಆತನ ರಥದ ಕುದುರೆಗಳು ಸ್ವಲ್ಪವಾಗಿ

ಬಳಲಿದಂತೆ ತೋರಿದುವು. ಹಾಗಿದ್ದರೂ ಪ್ರಯಾಣವನ್ನು ನಿಲ್ಲಿಸದೆ ಮುಂದೆ ಹೋಗುತ್ತ, ದಾರಿಯಲ್ಲಿ ಆಯಾದೇಶದ ಜನರು ಭಕ್ತಿಯಿಂದ ತಂದು ಸಮರ್ಪಿಸಿದ ಕಾಣಿಕೆಗಳನ್ನು ಪ್ರೀತಿಯಿಂದ ಸ್ವೀಕರಿಸುತ್ತ, ಸೂರ್ಯನು ಪಶ್ಚಿಮತೀರದಿಂದ ಹಾರಿ ಅಪರಸಮುದ್ರದಲ್ಲಿ ಥುಮುಕುವಷ್ಟರೊಳಗಾಗಿ ದ್ವಾರಕಾಪುರಪ್ರಾಂತದಲ್ಲಿರುವ ಆನರ್ತದೇಶವನ್ನು ಪ್ರವೇಶಿಸಿದನು. ಇಲ್ಲಿಗೆ ಹತ್ತನೆಯ ಅಧ್ಯಾಯವು.

ಶ್ರೀಕೃಷ್ಣನು ದ್ವಾರಕೆಯನ್ನು ಪ್ರವೇಶಿಸಿದುದು

ಹೀಗೆ ಕೃಷ್ಣನು ಸಕಲಸಂಪತ್ಸಮೃದ್ಧವಾಗಿಯೂ, ತನ್ನಿಂದ ಪರಿಪಾಲಿತವಾಗಿಯೂ ಇರುವ ಆನರ್ತದೇಶವನ್ನು ಪ್ರವೇಶಿಸಿದೊಡನೆ, ಆಲ್ಲಿ ಬಹುಕಾಲದಿಂದ ತನ್ನನ್ನಗಲಿದುದಕ್ಕಾಗಿ ದುಃಖಿತರಾಗಿದ್ದ ಆಪುರಜನವೆಲ್ಲಕ್ಕೂ ದುಃಖನಿವೃತ್ತಿಯಾಗುವಂತೆ, ತನ್ನ ಪಾಂಚಜನ್ಯವೆಂಬ ಮಹಾಶಂಖವನ್ನು ಪೂರಯಿಸಿ ಧ್ವನಿಮಾಡಿದನು. ಹೀಗೆ ಕೃಷ್ಣನು ಶಂಖವನ್ನು ಕೈಯಿಂದೆತ್ತಿ ಬಾಯಲ್ಲಿಟ್ಟುಪೂರೈಸುವಾಗ, ಆತನ ಅಧರಕಾಂತಿಯಿಂದ ಕೆಂಪಾದ ಆ ಪಾಂಚಜನ್ಯವು, ಆ ಕೃಷ್ಣನ ಕರಕಮಲಸಂಬಂಧದಿಂದ, ಕಮಲವನಮಧ್ಯದಲ್ಲಿ ಧ್ವನಿಮಾಡುತ್ತಿರುವ ಕಲಹಂಸದಂತೆ ಶೋಭಿಸುತಿತ್ತು. ಲೋಕಕಂಟಕರಾದವರಿಗೆ ಭಯವನ್ನುಂಟುಮಾಡತಕ್ಕ ಆ ಶಂಖಧ್ವನಿಯನ್ನು ಕೇಳಿದೊಡನೆ, ಆದೇಶವಾಸಿಗಳೆಲ್ಲರೂ ತಮ್ಮ ಪ್ರಭುವಾದ ಕೃಷ್ಣನು ಬರುವುದನ್ನು ತಿಳಿದು, ಅತನದರ್ಶನಕ್ಕಾಗಿ ಕುತೂಹಲಗೊಂಡು, ಅವನನ್ನಿದಿರುಗೊಳ್ಳುವುದಕ್ಕಾಗಿ ಹೊರಟು ಬಂದರು. ಮತ್ತು ಇವರೆಲ್ಲರೂ ಸೂರ್ಯನಿಗೆ ಬೆಳಕನ್ನು ತೋರಿಸುವಂತೆ ನೈಜಾನಂದಲಾಭದಿಂದ ಪೂರ್ಣಕಾಮನಾಗಿಯೂ, ಆತ್ಮಾರಾಮನಾಗಿಯೂ, ನಿರಪೇಕ್ಷನಾಗಿಯೂ ಇರುವ ಆ ಶ್ರೀಕೃಷ್ಣನಿಗೆ ತಮ್ಮತಮ್ಮ ಶಕ್ತ್ಯನುಸಾರವಾಗಿ ಕೈಕಾಣಿಕೆಗಳನ್ನೂ ತಂದೊಪ್ಪಿಸಿದರು. ಇವರೆಲ್ಲರೂ ಕಾಣಿಕೆಗಳನ್ನೊಪ್ಪಿಸಿ, ಪ್ರೀತಿಯಿಂದರಳಿದ ಮುಖವುಳ್ಳವರಾಗಿ ಮುಂದೆ ಬಂದು, ಕೃಷ್ಣನನ್ನು ನೋಡಿ, ಎಳಮಕ್ಕಳು, ತಮಗೆ ರಕ್ಷಕನಾಗಿಯೂ ತಮ್ಮೆಲ್ಲರಲ್ಲಿ ಸ

ಮಾನಪ್ರೇಮವುಳ್ಳವನಾಗಿಯೂ ಇರುವ ತಂದೆಯಲ್ಲಿ ತಮ್ಮತಮ್ಮ ಮನ
ಸ್ಸಂತೋಷವನ್ನು ತಿಳಿಸಿಕೊಳ್ಳುವಂತೆ ಸಂತೋಷದಿಂದ ಕುಗ್ಗಿದ ಕಂಠ
ವುಳ್ಳವರಾಗಿ ಹೀಗೆಂದು ವಿಜ್ಞಾಪಿಸುವರು. "ದೇವಾ! ಬ್ರಹ್ಮಾದಿದೇವತೆಗ
ಳಿಂದಲೂ, ಸನಕಸನಂದನಾದಿಮಹರ್ಷಿಸಮೂಹಗಳಿಂದಲೂ ವಂದನೀಯ
ವಾದ ನಿನ್ನ ಪಾದಾರವಿಂದಕ್ಕೆ ವಂದಿಸುವೆವು. ಈ ನಿನ್ನ ಪಾದಕಮಲವೇ
ಲೋಕದಲ್ಲಿ ಶ್ರೇಯಃಕಾಂಕ್ಷಿಗಳಿಗೆ ಪರಮಪ್ರಾಪ್ಯವು! ಬಹ್ಮಾದಿದೇವತೆ
ಗಳನ್ನಾದರೂ ವತೀಕರಿಸತಕ್ಕ ಕಾಲವೂಕೂಡ ನಿನ್ನ ವಿಷಯದಲ್ಲಿ ಮಾತ್ರ
ತನ್ನ ಶಕ್ತಿಯನ್ನು ತೋರಿಸಲಾರದು. ಅಂತಹ ನಿನ್ನ ಪಾದಸೇವೆಯಿಂದ
ನಾವು ಧನ್ಯರಾದೆವು. ಎಲ್ಲೆ ಲೋಕಕಾರಣನೇ! ನೀನೇ ನಮಗೆ ಮಿತ್ರನು.
ನೀನೇ ತಂದೆಯು! ನೀನೇ ಅಧಿಪತಿ! ನೀನೇ ನಮಗೆ ಜ್ಞಾನೋಪದೇಶಕ
ನಾದ ಪರಮಗುರು! ನೀನೇ ಪರದೈವವು! ನಿನಗಿಂತಲೂ ನಮಗೆ ಬೇರೆ
ದೈವವಿಲ್ಲ! ನಾವು ಯಾವಾಗಲೂ ನಿನ್ನನ್ನೇ ನಂಬಿ ನಿನ್ನ ಸೇವೆಯಿಂ
ದಲೇ ಕೃತಕೃತ್ಯರಾಗುತ್ತಿರುವೆವು. ದೇವಾ! ನಮಗೆ ಸರ್ವವಿಧದಲ್ಲಿಯೂ,
ಆಶ್ರಯನಾದ ನೀನು ನಮಗೆ ಉತ್ತರೋತ್ತರಾಭ್ಯುದಯವನ್ನು ಅನುಗ್ರಹಿಸ
ಬೇಕು. ಎಲ್ಲೆ ನಾಥನೆ! ಮೂರುಲೋಕದವರಿಗೂ ದುರ್ಲಭವಾಗಿ, ಪ್ರೀತಿ
ವಿಶಿಷ್ಟವಾದ ಮಂದಹಾಸದಿಂದಲೂ, ಸ್ನೇಹಪೂರ್ವಕವಾದ ನೋಟದಿಂದ
ಲೂ ಕೂಡಿದ ಮುಖಾರವಿಂದವುಳ್ಳದಾಗಿ, ಸರ್ವಾತಿಶಯ ಸೌಂದರ್ಯ
ದಿಂದೊಪ್ಪುತ್ತಿರುವ ಈ ನಿನ್ನ ಸ್ವರೂಪವನ್ನು ಪ್ರತ್ಯಕ್ಷವಾಗಿ ನೋಡುವ
ಭಾಗ್ಯವೇ ನಮಗೆ ಲಭಿಸಿದಮೇಲೆ, ಇನ್ನು ನಮ್ಮ ಪುಣ್ಯಕ್ಕೆಣೆಯೇನಿರುವುದು?
ಆಹಾ! ಲೋಕದಲ್ಲಿ ಸನಾಥರೆಂದರೆ ನಮಗೆಮಾತ್ರವೇ ಸಲ್ಲುವುದು! ಓ!
ಪುಂಡರೀಕಾಕ್ಷಾ! ಇದಕ್ಕೆಮೊದಲು ನೀನು ನಿನ್ನ ಮಿತ್ರರನ್ನು ನೋಡುವುದ
ಕ್ಕಾಗಿ, ಹಸ್ತಿನಾವತಿಗೋ, ಮಥುವನಕ್ಕೋ ಹೋಗಿದ್ದಕಾಲದಲ್ಲಿ, ಕಣ್ಣುಗ
ಳಿಗೆ ಸೂರ್ಯನಬೆಳಕಿಲ್ಲದಿದ್ದರೆ ಹೇಗೋಹಾಗೆ, ನಿನ್ನ ವಿಯೋಗದಿಂದ ನನಗೆ
ಒಂದೊಂದುಕ್ಷಣವೂ ಕೋಟಿಸಂವತ್ಸರಗಳಂತೆ ಕಾಣುತಿದ್ದುವು" ಎಂ
ದರು. ಹೀಗೆ ಪ್ರಜೆಗಳು ಪ್ರೇಮಪೂರ್ವಕವಾಗಿ ನುಡಿಯುತ್ತಿರುವ ಮೃದು
ಮಧುರವಾಕ್ಯಗಳನ್ನು ಕೇಳುತ್ತ, ಭಕ್ತವತ್ಸಲನಾದ ಶ್ರೀ ಕೃಷ್ಣನು, ತನ್ನ

ದಯಾದೃಷ್ಟಿಯಿಂದಲೇ ಅವರನ್ನನುಗ್ರಹಿಸಿ, ಪುರಪ್ರವೇಶವನ್ನು ಮಾಡಿದನು. ಸರ್ಪಗಳಿಂದ ರಕ್ಷಿತವಾದ ಭೋಗವತೀಪುರದಂತೆ, ತನಗೆ ಸಮಾನಬಲವುಳ್ಳ ಯಾದವರು, ಭೋಜರು, ದಾಶಾರ್ಹರು, ನಂದಕರು ಮೊದಲಾದ ವೀರರಿಂದ ಸುರಕ್ಷಿತವಾಗಿದ್ದ ಆ ಪುರವು, ಎಲ್ಲಾ ಋತುಗಳಲ್ಲಿ ಹುಟ್ಟುವ ಸರ್ವವಿಧಫಲಪುಷ್ಪಸಮೃದ್ಧಿಗಳಿಂದಲೂ ಪೂರ್ಣವಾಗಿದ್ದಿತು. ಅಲ್ಲಿ ಮಂದಾರ ಪಾರಿಜಾತಾದಿ ವೃಕ್ಷಶ್ರೇಷ್ಠಗಳಿಂದಲೂ, ಅಂದವಾದ ಬಳ್ಳಿವನಿಗಳಿಂದಲೂ, ಪುಣ್ಯಾಶ್ರಮಗಳಿಂದಲೂ, ಹೂತೋಟಗಳಿಂದಲೂ, ಉಪವನಗಳಿಂದಲೂ, ವಿಹಾರವನಗಳಿಂದಲೂ ಸುತ್ತಲೂ ಆವೃತಗಳಾದ ಎಷ್ಟೋ ತಾವರೆಕೊಳಗಳು ನೇತ್ರಾನಂದಕರವಾಗಿದ್ದುವು. ಪುರದ್ವಾರಗಳಲ್ಲಿಯೂ ಮನೆಬಾಗಿಲುಗಳಲ್ಲಿಯೂ ಉತ್ಸವಸೂಚಕಗಳಾದ ಮಂಗಳತೋರಣಗಳು ಕಂಗೊಳಿಸುತಿದ್ದುವು. ಚಿತ್ರವಿಚಿತ್ರಗಳಾದ ಧ್ವಜಗಳೂ, ಪತಾಕೆಗಳೂ, ಬಿಸಿಲಿನ ಪ್ರವೇಶಕ್ಕೇ ಅವಕಾಶವಿಲ್ಲದಂತೆ ದಾರಿಯುದ್ದಕ್ಕೂ ದಟ್ಟವಾಗಿ ತುಂಬಿ ಶೋಭಿಸುತಿದ್ದುವು. ರಾಜಮಾರ್ಗಗಳೂ, ರಥಮಾರ್ಗಗಳೂ, ಅಂಗಡಿಬೀದಿಗಳೂ, ಬೀದಿಯ ಚೌಕಗಳೂ ಸಂಮಾರ್ಜನಾದಿಗಳಿಂದ ಸಂಸ್ಕರಿಸಲ್ಪಟ್ಟಿದ್ದುವು. ಅಲ್ಲಿನ ಸಮಸ್ತ ಬೀದಿಗಳೂ ಸುಗಂಧಜಲದಿಂದ ಘಮಘಮಿಸುತಿದ್ದುವು. ಬೀದಿಗಳೆಲ್ಲವೂ ಪುಷ್ಪಫಲಗಳಿಂದಲೂ, ಅಕ್ಷತೆಗಳಿಂದಲೂ, ಚಿಗುರುಗಳಿಂದಲೂ ಅಲಂಕೃತವಾಗಿದ್ದುವು. ಅಲ್ಲಿನ ನಿವಾಸಿಗಳಲ್ಲಿ ಒಬ್ಬೊಬ್ಬರೂ, ತಮ್ಮತಮ್ಮ ಮನೆಯ ಬಾಗಿಲುಗಳಲ್ಲಿ, ಮೊಸರು, ಅಕ್ಷತೆ, ಹಣ್ಣುಗಳು, ಕಬ್ಬು, ಪೂರ್ಣಕುಂಭಗಳು, ಧೂಪದೀಪಾದಿಪೂಜಾದ್ರವ್ಯಗಳು ಇವೇ ಮೊದಲಾದ ಮಂಗಳದ್ರವ್ಯಗಳನ್ನಿಟ್ಟು ಅಲಂಕರಿಸಿದ್ದರು. ಹೀಗೆ ನೇತ್ರಾನಂದಕರವಾದ ದ್ವಾರಕೆಯನ್ನು ಕೃಷ್ಣನು ಪ್ರವೇಶಿಸುವುದರೊಳಗಾಗಿ, ಇತ್ತಲಿಂದ ಅಕ್ರೂರನೂ, ಉಗ್ರಸೇನನೂ, ಅದ್ಭುತಪರಾಕ್ರಮವುಳ್ಳ ಬಲರಾಮನೂ, ಪ್ರದ್ಯುಮ್ನನೂ, ಚಾರುಧೇಷ್ಣನೂ, ಜಾಂಬವತೀಪುತ್ರನಾದ ಸಾಂಬನೂ ಆ ಕೃಷ್ಣನನ್ನು ನೋಡಬೇಕೆಂಬ ಕುತೂಹಲದಿಂದ ಆತುರಪಡುತ್ತ, ಆ ಸಂತೋಷದಲ್ಲಿ ತಮ್ಮತಮ್ಮ ಭೋಜನಗಳಲ್ಲಿಯೂ, ಶಯನಗಳಲ್ಲಿಯೂ, ಆಸನಗಳಲ್ಲಿಯೂ ದೃಷ್ಟಿಯಿಡದೆ, ಒಂದು ಮದದಾನೆಯನ್ನು ಮುಂದಿಟ್ಟುಕೊಂಡು ಕೃಷ್ಣ

ನನ್ನಿ ದಿರುಗೊಳ್ಳುವುದಕ್ಕಾಗಿ ಹೊರಟರು. ಅನೇಕಬ್ರಾಹ್ಮಣರು ಮಂಗಳ ದ್ರವ್ಯಗಳನ್ನು ಕೈಯಲ್ಲಿ ಹಿಡಿದು ಸ್ವಸ್ತಿವಾಚನಗಳನ್ನು ಹೇಳುತ್ತ ಬಂದರು. ವೇದಘೋಷಗಳೂ, ಶಂಖತೂರ್ಯಾದಿಮಂಗಳವಾದ್ಯಧ್ವನಿಗಳೂ ಕಿವಿ ಗಿಂಪಾಗಿ ಕೇಳಿಸುತಿದ್ದುವು. ಇವರೆಲ್ಲರೂ ರಥದಲ್ಲಿ ಕುಳಿತು, ಸಂತೋಷ ದಿಂದಲೂ ಭಯಭಕ್ತಿಗಳಿಂದಲೂ ಕೂಡಿದವರಾಗಿ, ಪರಮಸಂತೋಷ ದಿಂದ ಕೃಷ್ಣನಿಗಿದಿರಾಗಿ ಬಂದರು. ನೂರಾರುಮಂದಿ ಗಣಿಕಾಸ್ತ್ರೀಯರು, ಕೆನ್ನೆಗಳಲ್ಲಿಯೂ, ಮುಖಗಳಲ್ಲಿಯೂ ಶೋಭಿಸುತ್ತಿರುವ ಕುಂಡಲಕಾಂತಿ ಯುಳ್ಳವರಾಗಿ, ಶ್ರೀಕೃಷ್ಣದರ್ಶನಾಸಕ್ತಿಯಿಂದ ವಾಹನಗಳನ್ನೇರಿ ಹೊರಟರು. ಇದಲ್ಲದೆ ನಟನರ್ತಕರೂ, ಗಾಯಕರೂ, ಹೊಗಳುಭಟರೂ, ವಂಶಾವಳಿಯನ್ನು ಕೀರ್ತಿಸತಕ್ಕ ಮಾಗಧರೂ, ಪುಣ್ಯಶ್ಲೋಕನಾದ ಶ್ರೀ ಕೃಷ್ಣನ ದಿವ್ಯಚರಿತ್ರೆಗಳನ್ನು ಗಾನಮಾಡುತ್ತ ಬಂದರು. ಆಗ ಶ್ರೀಕೃಷ್ಣನು, ಪರಮಸಂತೋಷದಿಂದ ಬರುತ್ತಿರುವ ಈ ಬಂಧು ವರ್ಗಗಳನ್ನೂ, ಪುರವಾಸಿಗಳನ್ನೂ ನೋಡಿದೊಡನೆ, ಅವರೆಲ್ಲರನ್ನೂ ಯಥೋಚಿತವಾಗಿ ಮನ್ನಿಸಿದನು. ವೃದ್ಧರಾದ ಕೆಲವರನ್ನು ನಮಸ್ಕಾರಗಳಿಂ ದ ಗೌರವಿಸಿದನು. ಕೆಲವರನ್ನು ಪ್ರೇಮದಿಂದಾಲಂಗಿಸಿಕೊಂಡನು. ಕೆಲವರ ನ್ನು ಮಂದಹಾಸದಿಂದ ಮನ್ನಿಸಿದನು! ಹಾಗೆಯೇ ಕೆಲವರನ್ನು ಕರಸ್ಪರ್ಶದಿಂ ದಲೂ, ಕೆಲವರನ್ನು ತನ್ನ ಕಟಾಕ್ಷವೀಕ್ಷಣಗಳಿಂದಲೂ ಮನ್ನಿಸಿ, ಎಲ್ಲರನ್ನೂ ಕುಶಲಪ್ರಶ್ನೆಮಾಡಿದನು. ವಸುದೇವಾದಿಗಳು ಮೊದಲುಗೊಂಡು ಚಂ ಡಾಲಪರ್ಯಂತವಾಗಿ ಅಲ್ಲಿಗೆ ಬಂದವರೆಲ್ಲರನ್ನೂ ಕೃಷ್ಣನು ಹೀಗೆ ಕುಶಲಪ್ರ ಶ್ನಾದಿಗಳಿಂದ ಗೌರವಿಸಿದಮೇಲೆ, ತಾನೂಕೂಡ, ಗುರುಗಳಿಂದಲೂ, ಬ್ರಾಹ್ಮ ಣರಿಂದಲೂ, ವಯೋವೃದ್ಧರಿಂದಲೂ, ವಂದಿಜನಗಳಿಂದಲೂ ಆಶೀರ್ವದಿಸಲ್ಪ ಟ್ಟವನಾಗಿ, ರಾಜಮಾರ್ಗದಿಂದಲೇ ಹೊರಟು, ಅಂತಃಪುರದಕಡೆಗೆ ಬರುತಿ ದ್ದನು. ಈ ಕೃಷ್ಣಾಗಮನವೃತ್ತಾಂತವನ್ನು ಕೇಳಿದೊಡನೆ, ಆ ದ್ವಾರಕೆಯಲ್ಲಿ ದ್ದ ಸ್ತ್ರೀಯರೆಲ್ಲರೂ ತಮ್ಮ ತಮ್ಮ ಉಪ್ಪರಿಗೆಗಳನ್ನೇರಿ ನೋಡುತಿದ್ದರು. ಶೌನಕಾ! ಲಕ್ಷ್ಮೀನಿವಾಸನಾದ ಆ ಶ್ರೀಕೃಷ್ಣನನ್ನು ಪ್ರತಿದಿನವೂ ನೋಡು ತಿದ್ದರೂ, ದ್ವಾರಕಾವಾಸಿಗಳ ಕಣ್ಣುಗಳಿಗೆ ತೃಪ್ತಿಯೆಂಬುದೇ ಇಲ್ಲ

ವು. ಅವರಿಗೆ ತೃಪ್ತಿಯುಂಟಾಗದಿರುವುದೇನೂ ಆಶ್ಚರ್ಯವಲ್ಲ. ಆ ಶ್ರೀಕೃಷ್ಣನ ವಕ್ಷಸ್ಥಲವು ಶ್ರೀದೇವಿಗೂ, ಆತನ ಮುಖವು ಜನರ ಕಣ್ಣುಗಳಿಗೂಲಾವಣ್ಯ ರಸವನ್ನು ಕುಡಿಯತಕ್ಕ ಪಾನಪಾತ್ರೆಯಂತಿರುವುದು.ಹಾಗೆಯೇ ಆ ಮಹಾತ್ಮನ ಅಂದವಾದ ಬಾಹುಗಳು ದಿಕ್ಪಾಲಕರಿಗೂ, ಆತನ ಪಾದಪದ್ಮವು ಮಹಾಯೋಗಿಗಳಿಗೂ ಪಾನಪಾತ್ರವಂತಿರುವುದು.ಹೀಗಿರತಕ್ಕ ಆಭಗವಂತನ ದಿವ್ಯಲಾವಣ್ಯವು ಸಾಮಾನ್ಯಜನರಿಗೆ ಮೇಲೆಮೇಲೆ ಆಸೆಯನ್ನು ಹುಟ್ಟಿಸುವುದೇನಾಶ್ಚರ್ಯವು?ಹೀಗೆ ಶ್ರೀಕೃಷ್ಣನು ಸಮಸ್ತಜನರ ನೇತ್ರಗಳಿಗೆ ಆನಂದವನ್ನುಂಟುಮಾಡುತ್ತ ರಾಜಮಾರ್ಗದಲ್ಲಿ ಬರುತ್ತಿರುವಾಗ, ಪುರವಾಸಿಗಳಲ್ಲಿ ಕೆಲವರು ಛತ್ರಗಳನ್ನು ತಂದುಹಿಡಿದರು. ಕೆಲವರು ಚಾಮರಗಳನ್ನು ತಂದು ಬೀಸಿದರು!ದಾರಿಯೆದ್ದಕ್ಕೂ ಪುಷ್ಪವೃಷ್ಟಿಗಳನ್ನು ಚೆಲ್ಲುತಿದ್ದರು ಹೀಗೆ ನಾನಾವಿಧಗಳಾದ ಉಪಚಾರಗಳಿಂದ ಶ್ರೀಕೃಷ್ಣನು ಅಂತ:ಪುರಮಾರ್ಗವಾಗಿ ಬರುತಿದ್ದಾಗ, ಸೂರ್ಯಬಿಂಬಕ್ಕೆ ಸಮಾನವಾದ ಕಿರೀಟದಿಂದಲೂ, ಚಂದ್ರಬಿಂಬದಂತಿರುವ ಶ್ವೇತಚ್ಛತ್ರದಿಂದಲೂ, ಮಿಂಚಿನಂತಿದ್ದ ಪೀತಾಂಬರದಿಂದಲೂ, ಇಂದ್ರಧನುಸ್ಸಿಗೆ ಸಮಾನವಾದ ವನಮಾಲಿಕೆಯಿಂದಲೂ ಶೋಭಿತನಾಗಿ, ಕಾಲಮೇಘದಂತೆ ತೋರುತಿದ್ದನು.ಹೀಗೆ ಕೃಷ್ಣನು ಸಮಸ್ತವೈಭವಗಳೊಡನೆ ಹೊರಟು, ಮೊದಲು ತನ್ನ ತಂದೆಯ ಮನೆಯನ್ನು ಪ್ರವೇತಿಸಿದನು. ಅಲ್ಲಿ ದೇವಕಿ, ರೋಹಿಣಿ ಮೊದಲಾದ ಮಾತೆಯರೆಲ್ಲರೂ, ಪ್ರೀತಿಯಿಂದಾಲಿಂಗಿಸಲು, ಆ ಏಳುಮಂದಿ ಮಾತೆಯರಿಗೂ ತಲೆಬಗ್ಗಿ ನಮಸ್ಕರಿಸಿದನು. ಆ ಮಾತೆಯರಲ್ಲಿ ಒಬ್ಬೊಬ್ಬರೂ, ಕೃಷ್ಣನನ್ನು ಕರೆದು ತೊಡೆಯಲ್ಲಿ ಕುಳ್ಳಿರಿಸಿಕೊಂಡು,ಪುತ್ರಪ್ರೇಮದಿಂದ ಸೊರೆಯಿಕ್ಕುವ ಸ್ತನವುಳ್ಳವರಾಗಿ, ಆನಂದಬಾಷ್ಪಬಿಂದುಗಳಿಂದ ಅವನ ಮೈಯನ್ನು ತೊಯಿಸುತ್ತ,ಸಂತೋಷಪರವಶರಾಗಿದ್ದರು.ಹೀಗೆ ಕೃಷ್ಣನು ಸ್ವಲ್ಪಕಾಲದವರೆಗೆ ತಂದೆಯ ಅಂತಃಪುರದಲ್ಲಿದ್ದು, ಅಲ್ಲಿಂದ ಹೊರಟು, ಬೇಕುಬೇಕಾದ ಭೋಗ್ಯವಸ್ತುಗಳಿಂದ ತುಂಬಿದುದಾಗಿಯೂ,ಸರ್ವೋತ್ತಮವಾಗಿಯೂ,ತನ್ನ ಹದಿನಾರುಸಾವಿರಮಂದಿಪ್ರಿಯಭಾರ್ಯೆಯರಿಗೆಬೇರೆಬೇರೆ ನಿವಾಸಸ್ಥಾನಗಳಾದ ಉಪ್ಪರಿಗೆಗಳಿಂದ ಶೋಭಿತವಾಗಿಯೂ ಇರುವ ತನ್ನ ರಾಜಮಂದಿರವನ್ನು

ಪ್ರವೇಶಿಸಿದನು ಆ ಸ್ತ್ರೀಯರೆಲ್ಲರೂ ಬಹುಕಾಲಕ್ಕೆ ತಮ್ಮನ್ನಗಲಿ ಹಿಂತಿರುಗಿ ಬಂದ ಕೃಷ್ಣನನ್ನು ನೋಡಿದೊಡನೆ ಪರಮಾನಂದಭರಿತರಾಗಿ, ಲಜ್ಜೆಯಿಂದ ಕುಗ್ಗಿದ ಮುಖವುಳ್ಳವರಾಗಿ,ತಮ್ಮ ತಮ್ಮ ಶಯನಾಸನಗಳನ್ನು ಬಿಟ್ಟು ಹಟ್ಟನೆಸೋಲೆದ್ದು ನಿಂತರು ಮತ್ತು ಇದಕ್ಕೆಮೊದಲು ಈ ಕೃಷ್ಣಾಗಮನಕ್ಕಾಗಿ ತಾವು ತೊಡಗಿದ್ದವ್ರತಗಳನ್ನೂ ಬೇಗನೆ ಮುಗಿಸಿಕೊಂಡು,ಹಡನೆಯೇ ತಮ್ಮ ಮನಸ್ಸಿನಿಂದಲೂ, ತಮ್ಮ ದೃಷ್ಟಿಗಳಿಂದಲೂ, ಶ್ರೀಕೃಷ್ಣನನ್ನಾಲಿಂಗಿಸಿದುದಲ್ಲದೆ,ಪ್ರದ್ಯುಮ್ನನೇ ಮೊದಲಾದ ತಮ್ಮ ತಮ್ಮ ಮಕ್ಕಳುಗಳಮೂಲಕವಾಗಿಯೂ,ಆಕೃಷ್ಣನ ದೇಹಾಲಿಂಗನರೂಪವಾದ ಆನಂದವನ್ನನುಭವಿಸಿದರು ಆವರಲ್ಲಿ ಕೆಲವರು ಬಹಳ ಗಂಭೀರಸ್ವಭಾವವುಳ್ಳವರಾಗಿದ್ದರೂ, ಕೃಷ್ಣದರ್ಶನಕಾಲದಲ್ಲಿ ತಮಗುಂಟಾದ ಆನಂದಬಾಷ್ಪವನ್ನು ತಡೆದಿಟ್ಟುಕೊಳ್ಳಲಾರದೆ ಹೋದರು.ಕೃಷ್ಣನು ಆ ಸ್ತ್ರೀಯರಿಗೆ ಯಾವಾಗಲೂ ಪಕ್ಕದಲ್ಲಿಯೇ ಇದ್ದು, ಅಂತರಂಗದಲ್ಲಿಯೂ ಅವರೊಡನೆಯೇ ಕಲೆತಿರುವನಾದರೂ, ಅವರಿಗೆ ಆ ಮಹಾತ್ಮನ ಪಾದಯುಗ್ಮವು, ನೋಡಿದಾಗಲೆಲ್ಲಾ ಹೊಸವಸ್ತುವನ್ನು ಕಂಡಂತೆ ಆಸೆಯನ್ನು ಹುಟ್ಟಿಸುತ್ತಿರುವುದು. ಶೌನಕಾ ! ಕೇವಲಜಂಜಲಸ್ವಭಾವೆಯೆನಿಸಿಕೊಂಡ ಲಕ್ಷ್ಮೀದೇವಿಯೇ,ಅತನ ಪಾದಕಮಲವನ್ನು ಎಡೆಬಿಡದೆ ಆಶ್ರಯಿಸಿರುವಾಗ, ಇತರರು ಅವನ ವಿಯೋಗವನ್ನು ಹೇಗೆತಾನೇ ಸಹಿಸಬಲ್ಲರು? ಭೂಮಿಗೆ ಭಾರಭೂತರಾಗಿ,ಅಕ್ಷೌಹಿಣೀಸಂಖ್ಯೆಯಿಂದ ಸೈನ್ಯಗಳನ್ನು ಹೆಚ್ಚಿಸಿಕೊಂಡು, ವೀರ್ಯೋದ್ರಿಕ್ತರಾಗಿದ್ದ ಕ್ಷತ್ರಿಯರನ್ನಡಗಿಸುವುದಕ್ಕಾಗಿಯೇ ಕೃಷ್ಣನು, ಗಾಳಿಯು ಬಿದಿರುಮೆಳೆಯಲ್ಲಿ ಬೆಂಕಿಯನ್ನು ಹುಟ್ಟಿಸಿ,ಕಾಡನ್ನು ಸುಡುವಂತೆ,ಕೌರವ ಪಾಂಡವರಲ್ಲೆಯೇ ವೈರವನ್ನು ಹುಟ್ಟಿಸಿ, ತಾನು ಆಯುಧವನ್ನೇಹಿಡಿಯದೆ, ಅವರಲ್ಲಿಯೇ ಒಬ್ಬರಿಂದೊಬ್ಬರನ್ನು ಕೊಲ್ಲಿಸಿ, ದುಷ್ಟಕ್ಷತ್ರಿಯರನ್ನು ನಿರ್ಮೂಲಮಾಡಿದನು. ಶೌನಕಾ ! ಆ ಪರಮಾತ್ಮನೇ ತನ್ನ ಸಂಕಲ್ಪದಿಂದ ಈ ಲೋಕದಲ್ಲಿ ಕೃಷ್ಣರೂಪಿಂದವತರಿಸಿ ಸಾಮಾನ್ಯಪುರುಷನಂತೆ ಸಂಚರಿಸುವನು. ಸ್ತ್ರೀಯರಿಗೆ ತಾನು ವಶ್ಯನಾಗಿದ್ದು ಪಾಮರನಂತೆ ನಟಿಸುವನು.ಈ ನೆಪದಿಂದ ತಾನೂ ಸಂಸಾರಸುಖವನ್ನನುಭವಿಸುವಹಾಗೆ ತೋರಿಸುವನು. ಮುನೀಂದ್ರಾ!

ಗಂಭೀರವಾದ ಅಭಿಪ್ರಾಯಗಳನ್ನು. ಸೂಚಿಸತಕ್ಕ ಮಂದಹಾಸಗಳಿಂದ ಲೂ, ಲಜ್ಜೆಯಿಂದಲೂ ಕೂಡಿದ ನೋಟಗಳಿಂದ ಶೋಭಿತೆಯರಾದ ಆ ಶ್ರೀಕೃಷ್ಣನ ಭಾರ್ಯೆಯರನ್ನು ನೋಡಿದೊಡನೆ ಮನ್ಮಥನೂಕೂಡ ಮರುಳಾಗಿ, ತನ್ನ ಕೈಯಲ್ಲಿರುವ ಥನುಸ್ಸನ್ನು ಬಿಸುಡುವನು. ಹೀಗೆ ಮನ್ಮಥನನ್ನೂ ಮರುಳುಮಾಡತಕ್ಕ ಶಕ್ತಿಯುಳ್ಳವರಾಗಿದ್ದರೂ ಆ ಸ್ತ್ರೀಯರು, ತಮ್ಮ ವಿಲಾಸದಿಂದಾಗಲಿ, ತಮ್ಮ ವಂಚನೆಗಳಿಂದಾಗಲಿ, ಕೃಷ್ಣನನ್ನು ಪೋಹಗೊಳಿಸುವುದಕ್ಕೆ ಸಮರ್ಥರಲ್ಲ. ಹೀಗೆ ನಿಸ್ಸಂಗನಾದ ಶ್ರೀಕೃಷ್ಣನು ತನ್ನ ನಿಜಸ್ವರೂಪವನ್ನು ಮರೆಸಿಕೊಂಡು, ಮನುಷ್ಯನಂತೆ ನಡೆಯುತ್ತಿರುವುದನ್ನು ನೋಡಿ, ಮೂಢರಾದಕೆಲವರು, ಆತನನ್ನು ಸಂಸಾರಸಂಬಂಧವುಳ್ಳವನೆಂದೆಣಿಸಿ, ತಮ್ಮೊಡನೆ ಹೋಲಿಸಿಕೊಳ್ಳುವರು. ಅಂತವರು ಅಜ್ಞರೆಂಬುದಕ್ಕೆ ಏನೇನೂ ಸಂದೇಹವಿಲ್ಲ. ಸತ್ವಾದಿ ಗುಣಗಳಾಗಲಿ, ಜೀವನಿಗೆ ಸಹಜವಾದ ಅವಿದ್ಯೆ, ರಾಗ, ದ್ವೇಷ ಮೊದಲಾದುವುಗಳಾಗಲಿ, ಪರಮಾತ್ಮನನ್ನಾಶ್ರಯಿಸಿದ ಜ್ಞಾನವನ್ನು ಹೇಗೆ ಮುಟ್ಟಲಾರವೋ, ಹಾಗೆಯೇ ಭಗವಂತನೂ ಮೂಲಪ್ರಕೃತಿಯಲ್ಲಿ ವ್ಯಾಪಕನಾಗಿದ್ದರೂ ಅದರದೋಷಗಳು ಅವನನ್ನು ಮುಟ್ಟಲಾರವು. ಯಾವಾಗಲೂ ಅದರ ಸಂಬಂಧವುಳ್ಳವನಾಗಿದ್ದರೂ ಅದರ ದೋಷವನ್ನು ತಾನು ಅಂಟಿಸಿಕೊಳ್ಳದಿರುವುದೇ ಆ ಭಗವಂತನಲ್ಲಿರುವ ಅಸಾಧಾರಣಮಹಿಮೆಯೆಂದು ತಿಳಿ! ಲೋಕದಲ್ಲಿ ಸಂಸಾರಿಗಳ ಬುದ್ಧಿಯು, ಈಶ್ವರನ ನಿಜಸ್ಥಿತಿಯನ್ನು ತಿಳಿಯಲಾರದೆ ಹೇಗೆ ಬೇರೆವಿಧವಾಗಿ ಭ್ರಮಿಸುವುದೋ, ಹಾಗೆಯೇ, ಮೂಢೆಯರಾದ ಈ ಸ್ತ್ರೀಯರೂಕೂಡ ಆತನ ನಿಜಸ್ಥಿತಿಯನ್ನು ತಿಳಿಯಲಾರದೆ ಆ ಕೃಷ್ಣನು ತಮಗೆ ವಶವೆಂದು ತಿಳಿದಿರುವರು. ಇಲ್ಲಿಗೆ ಹನ್ನೊಂದನೆಯ ಅಧ್ಯಾಯವು.

ಪರೀಕ್ಷಿನ್ಮಹಾರಾಜನ ಜನನವು.

ಇದನ್ನು ಕೇಳಿ ಶೌನಕನು ತಿರುಗಿ ಸೂತನನ್ನು ಕುರಿತು ಪ್ರಶ್ನೆಮಾಡುವನು "ಎಲೈ ಸೂತನೆ! ಉತ್ತರೆಯ ಗರ್ಭವು ಸಹಿಸಲಸಾಧ್ಯವಾದ ತೇಜಸ್ಸುಳ್ಳ ಬ್ರಹ್ಮಶಿರೋನಾಮಕವಾದ ಅಶ್ವತ್ಥಾಮನ ಮಹಾಸ್ತ್ರದಿಂದ ದಗ್ಧ

ವಾಗುವಕಾಲದಲ್ಲಿ,ಕೃಷ್ಣನು ಅದನ್ನು ರಕ್ಷಿಸಿದುದಾಗಿ ಹೇಳಿದೆಯಲ್ಲವೆ? ಆಗ ಭೋರ್ಗರ್ತ್ಸತ್ತಿವೃತ್ತಾಂತವನ್ನು ವಿವರವಾಗಿ ತಿಳಿಸು ! ಆ ಪರಿಕ್ಷಿದ್ರಾಜನು ಹುಟ್ಟಿದುದು ಹೇಗೆ? ಮಹಾತ್ಮನಾದ ಆತನು ನಡೆಸಿದ ಕಾರ್ಯವೇನು ? ಶುಕ ಮುನಿಯು ಆತನಿಗುಪದೆತಿಸಿದ ತತ್ವಜ್ಞಾನದ ಕ್ರಮವೇನು? ಕೊನೆಗೆ ಪರೀಕ್ಷಿದ್ರಾಜನು ಹೇಗೆ ತನ್ನದೇಹವನ್ನು ಸೀಗಿದನು ? ಅವನಿಗೆ ಯಾವ ಸದ್ಗತಿಯುಂಟಾಯಿತು? ಈ ವೃತ್ತಾಂತಗಳೆಲ್ಲವನ್ನೂ ನಾವು ಶ್ರದ್ಧೆಯಿಂದ ಕೇಳಬೇಕೆಂದಿರುವಿವು. ಈ ವಿಷಯಗಳೆಲ್ಲವನ್ನೂ ನಮಗೆ ಹೇಳಬಹುದಾಗಿದ್ದರೆ,ವಿವರಿಸಿ ತಿಳಿಸು" ಎಂದನು. ಆದಕ್ಕಾಸೂತನು "ಶೌನಕಾ ! ಕೇಳು ? ಧರ್ಮರಾಜನು ಪಟ್ಟಾಭಿಷಿಕ್ತನಾದಮೇಲೆ, ಶ್ರೀಕೃಷ್ಣನ ಪಾದಪದ್ಮವೊಂದನ್ನೇ ನಂಬಿದವನಾಗಿ, ಸಮಸ್ತಕಾಮಗಳಲ್ಲಿಯೂ ಆಸೆಯನ್ನು ತೊರೆದು, ತನ್ನ ತಂದೆಯಂತೆ ಪ್ರಜೆಗಳನ್ನು ರಕ್ಷಿಸುತ್ತ ರಾಜ್ಯವನ್ನು ನಡೆಸುತಿದ್ದನು. ಧರ್ಮರಾಜನು ಅಷ್ಟೈಂಪು ಮಹಾವೈಭವದಲ್ಲಿದ್ದರೂ, ಶ್ರೀಕೃಷ್ಣನ ಪಾದಸೇವೆಯೊಂದಲ್ಲದೆ ಬೇರೊಂದೂ ಅವನಿಗೆ ರುಚಿಯನ್ನು ಹುಟ್ಟಿಸಲಿಲ್ಲ ! ಆಗ ಧರ್ಮಪುತ್ರನಿಗೆ ಕೈಗೂಡಿದ್ದ ಸಕಲಸಂಪತ್ತುಗಳೂ, ಪರಲೋಕಸಾಧಕಗಳಾದ ರಾಜಸೂಯಾದಿಯಾಗಗಳೂ, ಪ್ರಜಾಸಮೃದ್ಧಿಯೂ, ಸುಂದರಿಯರಾದ ಪತ್ನಿಯರೂ, ದಿಗ್ವಿಜಯಸಮರ್ಥರಾದ ಭೀಮಾರ್ಜುನಾದಿಸಹೋದರರೂ, ನಿಷ್ಕಂಟಕವಾದ ರಾಜ್ಯವೂ, ಜಂಬೂದ್ವೀಪಾಧಿಪತ್ಯವೂ, ಸ್ವರ್ಗಲೋಕವ್ಯಾಪಿಯಾದ ಅವನ ಕೀರ್ತಿಯೂ, ದೇವತೆಗಳಿಗಾದರೂ ಆಸೆಯನ್ನು ಹುಟ್ಟಿಸದೆ ಬಿಡುತ್ತಿರಲಿಲ್ಲ ! ಹೀಗಿದ್ದರೂಕೂಡ, ಹಸಿದು ಬಂದವರಿಗೆ ಅನ್ನದಲ್ಲಿಹೊರತು ಸ್ವಕ್ಷಂದನಾದಿಗಳೊಂದರಲ್ಲಿಯೂ ತೃಪ್ತಿಯುಂಟಾಗದಂತೆ ಕೃಷ್ಣಧ್ಯಾನಾಸಕ್ತನಾದ ಆ ಧರ್ಮರಾಜನಿಗೆ, ಆ ಧ್ಯಾನವೊಂದು ಹೊರತು ಬೇರೊಂದೂ ಸಂತೋಷವನ್ನುಂಟುಮಾಡಲಾರದೆ ಹೋದುವು. ಶೌನಕಾ ! ಹೀಗೆ ಕೆಲವು ಕಾಲವು ಕಳೆಯುವಷ್ಟರಲ್ಲಿ, ಉತ್ತರೆಯ ಗರ್ಭದಲ್ಲಿ ಬೆಳೆಯುತಿದ್ದ ಶಿಶುವು, ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ದಗ್ಧವಾಗುತ್ತಿರುವಾಗ, ಅದಕ್ಕೆ ಹೆಬ್ಬೆರಳಿನ ಪ್ರಮಾಣವುಳ್ಳ ಒಂದು ದಿವ್ಯಪುರುಷಾಕೃತಿಯು ಕಣ್ಣಿಗೆ ಗೋಚರಿಸಿತು ! ಬಹಳ ಶುದ್ಧವಾದ ಆ ಸ್ವರೂಪವು. ತಲೆ

ಯಲ್ಲಿ ರತ್ನಖಚಿತವಾದ ಸುವರ್ಣಕಿರೀಟದಿಂದಲೂ, ಶ್ಯಾಮಲವಾದ ಮೈ ಬಣ್ಣದಿಂದಲೂ, ಮಿಂಚಿನಂತೆ ಹೊಳೆಯುವ ಪೀತಾಂಬರದಿಂದಲೂ ಶೋಭಿತವಾಗಿ, ನೋಡುವವರಿಗೆ ಆತ್ಯಾಶೆಯನ್ನು ಹುಟ್ಟಿಸುವಂತಿದ್ದನು. ಮತ್ತು ಆ ವ್ಯಕ್ತಿಯು ಎಣೆಯಿಲ್ಲದ ತೇಜಸ್ಸಿನಿಂದಲೂ, ಕಾಂತಿಯುಕ್ತಗಳಾದ ನಾಲ್ಕುತೋಳುಗಳಿಂದಲೂ, ಕಿವಿಯಲ್ಲಿ ಸುವರ್ಣಕುಂಡಲಗಳಿಂದಲೂ, ರಕ್ತದಂತೆ ಕೆಂಪಾದ ಕಣ್ಣುಗಳಿಂದಲೂ, ಕೈಯಲ್ಲಿ ಹಿಡಿದ ಗದಾದಂಡದಿಂದಲೂ ಶೋಭಿತವಾಗಿದ್ದನು. ಆ ಪುರುಷಸ್ವರೂಪವು ಅಗ್ನಿಸಮಾನವಾದ ಆ ಗದೆಯನ್ನು ಗರ್ಭತಿಶುವಿನ ಸುತ್ತಲೂ ನಾನಾಕಡೆಗಳಿಗೆ ತಿರುಗಿಸುತ್ತ, ಸೂರ್ಯನು ಮಂಜನ್ನಡಗಿಸುವಂತೆ ಅಶ್ವತ್ಥಾಮನ ಬ್ರಹ್ಮಾಸ್ತ್ರದ ವೇಗವನ್ನಡಗಿಸುತ್ತ ಅದರ ಸಮೀಪದಲ್ಲಿಯೇ ನಿಂತಿದ್ದನು. ಈ ಪುರುಷಾಕೃತಿಯನ್ನು ನೋಡಿ ಹತ್ತು ತಿಂಗಳು ಬೆಳೆದಿದ್ದ ಆ ಗರ್ಭತಿಶುವು, ಆ ಪುರುಷನಾರಂಬುದನ್ನು ಪರೀಕ್ಷಿಸುವಷ್ಟರಲ್ಲಿ, ಅಪ್ರಮೇಯಸ್ವರೂಪವುಳ್ಳ ಅವ್ಯಕ್ತಿಯು ಆ ತಿಶುವು ನೋಡುತಿದ್ದಹಾಗೆಯೇ ಅಸ್ತ್ರವ ಶಕ್ತಿಯನ್ನಡಗಿಸಿ ಅಲ್ಲಿಯೇ ಕಣ್ಮರೆಯಾಯಿತು. ಆಮೇಲೆ ಇತ್ತಲಾಗಿ ಗ್ರಹಗಳೆಲ್ಲವೂ ಉಚ್ಚಸ್ಥಿತಿಯಲ್ಲಿರುವಾಗ ಸಮಸ್ತಶುಭಲಕ್ಷಣಗಳಿಂದ ಕೂಡಿದ ಒಂದು ಶುಭಲಗ್ನದಲ್ಲಿ, ಪಾಂಡುರಾಜನಿಗೆ ಸಮಾನನಾಗಿಯೂ, ಪಾಂಡವ ವಂಶೋದ್ಧಾರ್ಥಕನಾಗಿಯೂ ಇರುವ ಪುತ್ರನು ಹುಟ್ಟಿದನು. ಇದನ್ನು ಕೇಳಿ ಧರ್ಮರಾಜನು ಬಹಳ ಸಂತೋಷಗೊಂಡು ಧೌಮ್ಯರು, ಕೃಪಾಚಾರ್ಯರು, ಮೊದಲಾದ ಬ್ರಾಹ್ಮಣೋತ್ತಮರಿಂದ ಸ್ವಸ್ತಿವಾಚನಗಳನ್ನು ಮಾಡಿಸಿ, ಜಾತಕರ್ಮವನ್ನು ನಡೆಸಿದನು ಈವು ತ್ರೋತ್ಸವನಿಮಿತ್ತವಾಗಿ ಅನೇಕ ಬ್ರಾಹ್ಮಣರನ್ನು ಕರೆಯಿಸಿ, ಯಥೇಷ್ಟವಾಗಿ ಸುವರ್ಣವನ್ನೂ, ಗೋವುಗಳನ್ನೂ, ಭೂಮಿಯನ್ನೂ, ಗ್ರಾಮಗಳನ್ನೂ, ಸರ್ವೋತ್ತಮಗಳಾದ ಅನೇಕಾದುರೆಗಳನ್ನೂ ಬೇರೆಬೇರೆಯಾಗಿ ಪಾತ್ರವರಿತು ದಾನಮಾಡಿದನು. ಅನೇಕಬ್ರಾಹ್ಮಣರನ್ನು ಅನ್ನದಾನದಿಂದತೃಪ್ತಿಪಡಿಸಿದನು. ಇದರಿಂದ ತೃಪ್ತರಾದ ಬ್ರಾಹ್ಮಣರೆಲ್ಲರೂ, ವಿನಯದಿಂದ ನಿಂತಿರುವ ಧರ್ಮರಾಜನನ್ನು ನೋಡಿ, "ಎಲೈ ಧರ್ಮಪುತ್ರನೆ! ಪೂರುವಂಶಜರಾದ! ನಿಮಗೆ ಸಂತಾನಾಭಿವೃದ್ಧಿಗಾಗಿ ಹುಟ್ಟಿದ ಈ ಗರ್ಭಪಿಂಡವು, ಅಶ್ವತ್ಥಾಮನ ಕ್ರೂರಾ

ಸ್ತ್ರೀಯಿಂದ ನಷ್ಟವಾಗುತಿದ್ದ ಸಂದರ್ಭದಲ್ಲಿ, ಸರ್ವಸಮರ್ಥನಾದ ಶ್ರೀಮಹಾವಿಷ್ಣುವು ಉತ್ತರೆಯ ಗರ್ಭದಲ್ಲಿ ಪ್ರವೇಶಿಸಿ, ವಾತ್ಸಲ್ಯದಿಂದ ಅದನ್ನು ರಕ್ಷಿಸಿರುವನು. ಗರ್ಭದಲ್ಲಿಯೇ ಈತನು ಆ ಮಹಾವಿಷ್ಣುವಿನ ಕೃಪಾಬಲದಿಂದ ರಕ್ಷಿತನಾದುದರಿಂದ ಈತನಿಗೆ ಲೋಕದಲ್ಲಿ ವಿಷ್ಣುರಾತನೆಂಬ ಹೆಸರೇ ಪ್ರಸಿದ್ಧವಾಗಲಿ! ಧರ್ಮರಾಜಾ! ಇದನ್ನು ಸಾಮಾನ್ಯಶಿಶುವೆಂದೆಣಿಸಬೇಡ! ಈ ಬಾಲನು ಮುಂದೆ ಪರಮಭಾಗವತೋತ್ತಮನೆಂದೆನಿಸಿ ಪುಣ್ಯಕೀರ್ತಿಯನ್ನು ಹೊಂದುವನು" ಎಂದರು. ಆಗ ಧರ್ಮರಾಜನು ಬ್ರಾಹ್ಮಣರನ್ನು ಕುರಿತು "ಎಲ್ಲ ವಿಪ್ರೋತ್ತಮರೇ! ಇದುವರೆಗೆ ನಮ್ಮ ವಂಶದಲ್ಲಿ ಹುಟ್ಟಿದವರೆಲ್ಲರೂ ಬಹಳ ಯಶಸ್ವಿಗಳಾಗಿ, ದಯಾಸಿಂಧುಗಳಾಗಿ, ರಾಜರ್ಷಿಗಳೆಂದು ಪ್ರಸಿದ್ಧಿಯನ್ನು ಪಡೆದರು. ಅದರಂತೆಯೇ ಈ ಬಾಲನೂಕೂಡ ಮುಂದೆ ಖ್ಯಾತಿವಂತನಾಗಿ, ವಿಷ್ಣುಭಕ್ತನಾಗಿ, ಚಿರಜೀವಿಯಾಗಿ, ತನ್ನ ಹಿರಿಯರ ಕೀರ್ತಿಯನ್ನು ಮುಂದಕ್ಕೆ ತರುವನೇ, ಇಲ್ಲವೇ, ಎಂಬುದನ್ನು ನೀವು ಚೆನ್ನಾಗಿ ಯೋಚಿಸಿ ತಿಳಿಸಬೇಕು." ಎಂದನು. ಆಗ ಬ್ರಾಹ್ಮಣರು "ಎಲ್ಲೆ ರಾಜೇಂದ್ರನೆ! ಅದಕ್ಕೆ ಸಂದೇಹವೇನು? ಈ ಬಾಲನು ವೈವಸ್ವತಪುತ್ರನಾದ ಇಕ್ಷ್ವಾಕುವಂತೆ ಧರ್ಮದಿಂದ ಪ್ರಜೆಗಳನ್ನು ರಕ್ಷಿಸುವನು. ದಶರಥಪುತ್ರನಾದ ಶ್ರೀರಾಮನಂತೆ ಬ್ರಾಹ್ಮಣ ಭಕ್ತಿಯುಳ್ಳವನಾಗಿಯೂ, ಸತ್ಯಸಂಧನಾಗಿಯೂ ಇರುವನು. ತಿಬಿಚಕ್ರವರ್ತಿಯಂತೆ ಆಶ್ರಿತರಕ್ಷಣೆಯಲ್ಲಿಯೂ, ಔದಾರ್ಯದಲ್ಲಿಯೂ ಖ್ಯಾತಿಹೊಂದುವನು. ದುಷ್ಯಂತಪುತ್ರನಾದ ಭರತನಂತೆ ಯಾಗಶೀಲರ ಯಶಸ್ಸನ್ನು ಪ್ರಕಾಶಗೊಳಿಸುವನು. ಧನುರ್ವಿದ್ಯೆಯಲ್ಲಿ ಅರ್ಜುನನನ್ನೂ, ಕಾರ್ತವೀರ್ಯಾರ್ಜುನನನ್ನೂ ಹೋಲುವನು. ಅಗ್ನಿಯಂತೆ ಶತ್ರುಗಳಿಂದ ಸಹಿಸಲಸಾಧ್ಯವಾದ ಪ್ರತಾಪವುಳ್ಳವನಾಗುವನು. ಅಪಾರಪಾರಾವಾರದಂತೆ ಗಂಭೀರ ಸ್ವಭಾವವುಳ್ಳವನಾಗಿಯೂ, ಧುರಂಧರನಾಗಿಯೂ ಇರುವನು. ಸಿಂಹದಂತೆ ಪರಾಕ್ರಮಶಾಲಿಯಾಗಿ ಹಿಮವಂತನಂತೆ ಸಕಲಾಶ್ರಯನಾಗಿಯೂ ಬೆಳಗುವನು. ತಾಳ್ಮೆಯಲ್ಲಿ ಭೂದೇವಿಗೆ ಸಮಾನನೆನಿಸುವನು. ಇತರರ ತಪ್ಪನ್ನು ಮನ್ನಿಸುವುದರಲ್ಲಿ ಹೆತ್ತ ತಂದೆತಾಯಿಗಳಂತೆ ಸಹನಗುಣಗಳನ್ನು ತೋರಿಸುವನು. ಬ್ರಹ್ಮನಂತೆ ಸರ್ವಭೂತಸಮನಾಗಿಯೂ, ರುದ್ರನಂತೆ ಆಶ್ರಿತರಕ್ಷಕ

ನಾಗಿಯೂ, ವಿಷ್ಣುವಿನಂತೆ ಸರ್ವಭೂತಾಶ್ರಯನಾಗಿಯೂ, ಶ್ರೀ ಕೃಷ್ಣನಂತೆ ಸಮಸ್ತ ಸದ್ಗುಣಾಶ್ರಯನಾಗಿಯೂ ಇರುವನು. ಮತ್ತು ಈ ಬಾಲನು ಔದಾರ್ಯದಲ್ಲಿ ರಂತಿದೇವನಿಗೂ, ಧರ್ಮಗುಣದಲ್ಲಿ ಯಯಾತಿಗೂ, ಧೈರ್ಯದಲ್ಲಿ ಬಲಿಚಕ್ರವರ್ತಿಗೂ, ಹರಿಭಕ್ತಿಯಲ್ಲಿ ಪ್ರಹ್ಲಾದನಿಗೂ ಸಾಟಿಯೆನಿಸುವನು. ಮತ್ತು ಈ ಕುಮಾರನು ಮುಂದೆ ಅನೇಕಾಶ್ವಮೇಧಗಳನ್ನು ನಡೆಸುವನು. ವೃದ್ಧರನ್ನು ಸೇವಿಸುವನು. ತನಗೆ ಸಮಾನರಾದ ಸತ್ಪುತ್ರನನ್ನೇ ಪಡೆಯುವನು. ಉನ್ಮಾರ್ಗದಲ್ಲಿ ಪ್ರವರ್ತಿಸುವವರನ್ನು ತಿಕ್ಷಿಸುವನು. ತಾನು ಸನ್ಮಾರ್ಗವನ್ನು ಬಿಟ್ಟು ಹೋಗತಕ್ಕವನಲ್ಲ. ಭೂಮಿಯಲ್ಲಿ ಧರ್ಮವನ್ನು ಸ್ಥಾಪಿಸುವುದಕ್ಕಾಗಿ ಕಲಿಯನ್ನು ಜಯಿಸುವನು. ಕೊನೆಗೆ ಈತನು ದೈವಯೋಗದಿಂದ ಬ್ರಾಹ್ಮಣಶಾಪಕ್ಕೆ ಪಾತ್ರನಾಗಿ, ತನಗೆ ತಕ್ಷಕನಿಂದ ಮೃತ್ಯುವುಂಟಾಗುವುದನ್ನು ತಿಳಿದು, ಸರ್ವಸಂಗಪರಿತ್ಯಾಗಮಾಡಿ, ವಿಷ್ಣುಭಕ್ತಿಪರಾಯಣನಾಗಿ, ಗಂಗಾತೀರದಲ್ಲಿ ಪ್ರಾಯೋಪವೇಶವನ್ನು ಮಾಡುವನು. ಈ ಸಮಯದಲ್ಲಿ ಶುಕಮಹರ್ಷಿಯು ಈತನಿಗೆ ತತ್ವಜ್ಞಾನವನ್ನುಪದೇತಿಸುವನು. ತತ್ವಜ್ಞಾನವು ಹುಟ್ಟಿದೊಡನೆ ಈತನು ದೇಹವನ್ನು ತೊರೆದು ವಿಷ್ಣುಸ್ಥಾನವನ್ನು ಹೊಂದುವನು" ಎಂದರು. ಹೀಗೆ ಬ್ರಾಹ್ಮಣರೆಲ್ಲರೂ ಪರೀಕ್ಷಿದ್ರಾಜನ ಜಾತಕವನ್ನು ನೋಡಿ ಈ ಭವಿಷ್ಯದ್ವೃತ್ತಾಂತಗಳನ್ನು ತಿಳಿಸಿದೊಡನೆ, ಧರ್ಮರಾಜನು ಅವರೆಲ್ಲರನ್ನೂ ಬಹುಮಾನಗಳಿಂದ ಗೌರವಿಸಿದನು. ಆ ಬ್ರಾಹ್ಮಣರೆಲ್ಲರೂ ಧರ್ಮಪುತ್ರನ ಅನುಮತಿಯನ್ನು ಪಡೆದು, ತಮ್ಮತಮ್ಮ ಸ್ಥಾನಗಳಿಗೆ ಹೋದರು. ಅದರಿಂದಾಚೆಗೆ ಇತ್ತಲಾಗಿ ಉತ್ತರೆಯ ಗರ್ಭದಲ್ಲಿ ಹುಟ್ಟಿದ ಈ ಕುಮಾರನು, ತನಗೆ ತಾಯಿಯ ಗರ್ಭದಲ್ಲಿ ಗೋಚರಿಸಿದ ಪುರುಷನಾರೆಂದು ತನ್ನಲ್ಲಿ ತಾನೇ ಧ್ಯಾನಿಸುತ್ತ, ಆಗ ಕಾಣಿಸಿದ ದಿವ್ಯಪುರುಷನು ಇನ್ನೂ ಈ ಲೋಕದಲ್ಲಿರುವನೇ, ಇಲ್ಲವೇ, ಎಂಬುದನ್ನು ಪರೀಕ್ಷಿಸುವ ಕಾರ್ಯದಲ್ಲಿಯೇ ದೃಢಪ್ರಯತ್ನವನ್ನು ಮಾಡುತಿದ್ದುದರಿಂದ, ಆತನಿಗೆ ಪರೀಕ್ಷಿತ್ತೆಂದೇ ಪ್ರಸಿದ್ಧಿಯುಂಟಾಯಿತು. ಈ ರಾಜಕುಮಾರನು ತನ್ನ ಪಿತೃಜನಗಳಿಂದ ಸುಖವಾಗಿ ಪೋಷಿಸಲ್ಪಡುತ್ತ, ಶುಕ್ಲಪಕ್ಷದಲ್ಲಿ ಮೇಲೆಮೇಲೆ ಕಲೆಗಳಿಂದ ತುಂಬುತ್ತಿರುವ ಚಂದ್ರನಂತೆ, ದಿನದಿನಕ್ಕೆ ವೃದ್ಧಿಹೊಂದುತ್ತ ಬಂದನು

ಇಷ್ಟರಲ್ಲಿ ಧರ್ಮರಾಜನಿಗೆ, ತನ್ನ ಜ್ಞಾತಿಗಳನ್ನು ಕೊಂದ ಪಾಪಕ್ಕೆ ಪ್ರಾಯ
ಶ್ಚಿತ್ತರೂಪವಾಗಿ ಅಶ್ವಮೇಧಯಾಗವನ್ನು ಮಾಡಬೇಕೆಂಬ ಬುದ್ಧಿ ಹುಟ್ಟಿ
ತು. ಈ ಯಜ್ಞವನ್ನು ನಡೆಸುವುದಕ್ಕಾಗಿ ಬಹಳ ಧನವು ಬೇಕಾಯಿತು. ಪ್ರಜೆಗ
ಳಲ್ಲಿ ತೆರಿಗೆಗಳನ್ನೂ, ದಂಡನೆಗಳನ್ನೂ ಹೆಚ್ಚಿಸಿದಹೊರತು, ಬೇರೆ ಪಥದಿಂದ ಅ
ಷ್ಟೊಂದು ಧನವನ್ನು ಸಂಗ್ರಹಿಸಲು ಸಾಧ್ಯವಿಲ್ಲದುದರಿಂದ ಮನಸ್ಸಿನಲ್ಲಿ ಬ
ಹಳವಾಗಿ ಚಿಂತಿಸುತಿದ್ದನು. ಆಗ ಕೃಷ್ಣನಿಂದ ಪ್ರೇರಿತರಾದ ಭೀಮಾರ್ಜು
ನಾದಿಗಳೆಲ್ಲರೂ ದಿಗ್ವಿಜಯಾರ್ಥವಾಗಿ ಉತ್ತರದಿಕ್ಕಿಗೆ ಹೊರಟು, ಅನೇಕರಾ
ಜರನ್ನು ಜಯಿಸಿ, ಬೇಕಾದಷ್ಟು ದ್ರವ್ಯವನ್ನು ತಂದು ಧರ್ಮರಾಜನ ಪಾದ
ಗಳಿಗೊಪ್ಪಿಸಿದರು. ಆಗ ಧರ್ಮರಾಜನು ಬಹಳಸಂತೋಷಗೊಂಡವನಾಗಿ
ಯಜ್ಞಸಂಭಾರಗಳೆಲ್ಲವನ್ನೂ ಸಿದ್ಧಪಡಿಸಿ, ಮಂತ್ರತಂತ್ರಾದಿಗಳಿಗೆ ಲೋಪ
ವಿಲ್ಲದಂತೆ ಬಹಳ ಭಯಭಕ್ತಿಗಳಿಂದ ಯಜ್ಞಕಾರ್ಯವನ್ನಾರಂಭಿಸಿ, ಮೂರಾ
ವರ್ತಿ ಅಶ್ವಮೇಧವನ್ನು ನಡೆಸಿ ಶ್ರೀಕೃಷ್ಣನನ್ನಾರಾಧಿಸಿದನು. ಈಯಜ್ಞ
ಕ್ಕಾಗಿ ಬಂಧುಬಿದ್ದ ಕೃಷ್ಣನು ಅತಸಿಂದ ಯಜ್ಞಕಾರ್ಯಗಳನ್ನು ಮುಗಿಸಿದಮೇಲೆ
ಯೂ, ಪಾಂಡವರ ಸಂತೋಷಾರ್ಥವಾಗಿ ಕೆಲವುತಿಂಗಳವರೆಗೆ ಅಲ್ಲಿಯೇ
ಇರುತಿದ್ದು, ಆಮೇಲೆ ಧರ್ಮರಾಜಾದಿಗಳ ಅನುಮತಿಯನ್ನು ಪಡೆದು, ಅರ್ಜು
ನನ್ನೂ ಕರೆದುಕೊಂಡು ತನ್ನ ಬಂಧುಮಿತ್ರಪರಿವಾರಗಳೊಡಗೂಡಿ, ಹಿಂತಿ
ರುಗಿ ದ್ವಾರಕೆಗೆ ಬಂದು ಸೇರಿದನು. ಇಲ್ಲಿಗೆ ಹನ್ನೆರಡನೆಯ ಅಧ್ಯಾಯವು.

ವಿದುರನು ಹಸ್ತಿನಾಪುರಕ್ಕೆ ಬಂದು ಧೃತರಾಷ್ಟ್ರನಿಗೆ ಹಿತವನ್ನು ಹೇಳಿದುದು. ಧೃತರಾಷ್ಟ್ರನಿರ್ಗಮನವು ನಾರದಾಗಮನವು.

"ಓ ಶೌನಕಾ! ಇನ್ನು ಹಸ್ತಿನಾಪುರವೃತ್ತಾಂತವನ್ನು ಹೇಳುವೆನು
ಕೇಳು. ಬಹುದಿನಗಳ ಹಿಂದೆ ತೀರ್ಥಯಾತ್ರೆಗಾಗಿ ಹೋಗಿದ್ದ ವಿದುರನು,
ಸಮಸ್ತತೀರ್ಥಗಳನ್ನೂ ಸೇವಿಸಿ ಬರುವಾಗ, ಮಾರ್ಗವಶದಿಂದ ಒಂದಾ
ನೊಂದು ಕಡೆಯಲ್ಲಿ ತಪಸ್ಸುಮಾಡುತಿದ್ದ ಮೈತ್ರೇಯಮಹರ್ಷಿಯನ್ನು ಕಂ
ಡನು. ಅವನಿಂದ ತತ್ವಜ್ಞಾನವನ್ನು ಹೊಂದಿ ಕೃತಕೃತ್ಯನಾಗಿ ಹಿಂತಿರುಗಿ ಹ
ಸ್ತಿನಾಪುರಕ್ಕೆ ಬಂದು ಸೇರಿದನು. ವಿದುರನು ಕೇಳಿದ ಪ್ರಶ್ನೆಗಳಲ್ಲಿ ಕೆಲವಕ್ಕೆ

ಮಾತ್ರ ಮೈತ್ರೇಯನು ಪ್ರತ್ಯುತ್ತರವನ್ನು ಕೊಡುವಷ್ಟರಲ್ಲಿಯೇ ವಿದುರನಿಗೆ ಭಗವಂತನಲ್ಲಿ ಅನನ್ಯಪ್ರಯೋಜನನಾದ ಭಕ್ತಿಯು ಹುಟ್ಟಿತು. ಉಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೇಳಬೇಕಾದ ಆವಶ್ಯವೇ ಇಲ್ಲವೆಂದು ವಿದುರನು ಅಷ್ಟರಲ್ಲಿಯೇ ಸುಮ್ಮನಾದನು ಆತ್ಮಜ್ಞಾನದಿಂದ ಕೃತಕೃತ್ಯನಾದ ವಿದುರನು ಬರುವ ಸಂಗತಿಯನ್ನು ತಿಳಿದು, ಧರ್ಮರಾಜನು ತನ್ನ ತಮ್ಮಂದಿರೊಡನೆ ಅವನನ್ನು ಎದುರುಗೊಂಡು ಹೋದನು. ಹಾಗೆಯೇ ಧೃತರಾಷ್ಟ್ರನೂ, ಯುಯುತ್ಸುವೂ, ಸಂಜಯನೂ, ಕೃಷ್ಣನೂ, ಕುಂತಿ, ಗಾಂಧಾರಿ, ದ್ರೌಪದಿ, ಸುಭದ್ರೆ, ಉತ್ತರೆ,ಕೃಪಿ,ಮೊದಲಾದ ಸ್ತ್ರೀಯರೂ, ಇನ್ನೂ ಪಾಂಡುರಾಜನ ಇತರಬಂಧುಗಳೂಕೂಡ ಪರಮಸಂತೋಷಭರಿತರಾಗಿ, ಹೋದ ಪ್ರಾಣವು ಹಿರುಗಿ ಬಂತೆಂದು ಭಾವಿಸಿ, ಅವನನ್ನು ಎದುರುಗೊಂಡು ಹೋದರು. ಇವರೆಲ್ಲರೂ ತಮ್ಮತಮ್ಮ ಪ್ರೀತಿಗೌರವಗಳಿಗೆ ತಕ್ಕಂತೆ ಆಲಿಂಗನಗಳಿಂದಲೂ, ನಮಸ್ಕಾರಗಳಿಂದಲೂ, ಅವನನ್ನು ಯಥೋಚಿತವಾಗಿ ಮನ್ನಿಸಿ, ಆನಂದಬಾಷ್ಪಗಳಿಂದ ತಮ್ಮ ಪ್ರೇಮಾತಿಶಯವನ್ನು ಹೊರಪಡಿಸಿದರು. ಆಮೇಲೆ ಧರ್ಮರಾಜನು ವಿದುರನನ್ನು ತನ್ನ ಆರಮನೆಗೆ ಕರೆದುಕೊಂಡು ಹೋಗಿ, ಆತನನ್ನು ಯಥಾವಿಧಿಯಾಗಿ ಸತ್ಕರಿಸಿ, ಉಚಿತಾಸನವನ್ನು ಕೊಟ್ಟು, ಷಡ್ರಸೋಪೇತಗಳಾದ ಭೋಜನಗಳಿಂದ ತೃಪ್ತಿಪಡಿಸಿದನು. ವಿದುರನು ವಿಶ್ರಾಂತಿಯನ್ನುತೆಗೆದುಕೊಂಡು ಸುಖಾಸೀನನಾಗಿ ಕುಳಿತಮೇಲೆ, ಧರ್ಮರಾಜನು ಅವನನ್ನು ಕುರಿತು ಪ್ರಶ್ನೆಮಾಡುವನು. ''ಎಲೈ ಪುರುಷಶ್ರೇಷ್ಠನೆ!ನೀನು ನಮ್ಮನ್ನೂ, ನಮ್ಮತಾಯಿಯಾದ ಕುಂತಿಯನ್ನೂ, ಶತ್ರುಗಳಿಂದ ಪ್ರಯೋಗಿಸಲ್ಪಟ್ಟ ವಿಷಾಗ್ನಿ ಮೊದಲಾದ ವಿಪತ್ತುಗಳಿಂದ ತಪ್ಪಿಸಿ, ನಿನ್ನ ಮನೆಯಲ್ಲಿಟ್ಟು ಇದುವರೆಗೆ ಪೋಷಿಸಿದೆ. ನಿನ್ನಿಂದ ರಕ್ಷಿತರಾದ ನಮ್ಮನ್ನು ಚಿರಕಾಲಕ್ಕೆ ಒಂದಾವರ್ತಿಯಾದರೂ ಸ್ಮರಿಸುತ್ತಿರುವೆಯಲ್ಲವೆ? ಎಲೈಮಹಾತ್ಮನೆ!ತೀರ್ಥಯಾತ್ರೆಗಾಗಿ ನೀನು ಭೂಮಿಯನ್ನು ಸಂಚರಿಸುತ್ತಿರುವಾಗ,ಯಾವಯಾವ ಕ್ರಮದಿಂದನೀನು ಆ ಯಾತ್ರೆಯನ್ನು ನಡೆಸುತಿದ್ದೆ?ಈ ಭೂತಲದಲ್ಲಿರುವ ಭಗವತ್ಕ್ಷೇತ್ರಗಳಲ್ಲಿ ಮುಖ್ಯವಾದುವಾವುವು? ಇದುವರೆಗೆ ನೀನು ಸೇವಿಸಿಬಂದ ತೀರ್ಥಗಳೆಷ್ಟು? ಎಲೈ ಪ್ರಭುಶ್ರೇಷ್ಠನೆ! ನಿನ್ನಂತಹ ಭಗವದ್ಭಕ್ತರು ಸಹಜವಾಗಿಯೇ

ಶುದ್ಧರಾದುದರಿಂದ, ನಿಮ್ಮಂತವರು ಈತೀರ್ಥಯಾತ್ರೆಗಳಿಂದಪವಿತ್ರತೆಯನ್ನು ಸಂಪಾದಿಸಬೇಕಾದ,ಆವಶ್ಯಕತೆಯಿಲ್ಲ.ಆದರೆ ಗಂಗಾದಿನದಿಗಳು ಸಹಜವಾಗಿಯೇ ಪವಿತ್ರವೆನಿಸಿಕೊಂಡಿದ್ದರೂ, ಪಾಪಾತ್ಮರು ಬಂದು ಆದರಲ್ಲಿ ತಮ್ಮ ಪಾಪಗಳನ್ನು ಪರಿಹರಿಸಿಕೊಂಡು ಹೋಗುವುದುಂದ, ಆ ಪುಣ್ಯತೀರ್ಥಗಳೆಲ್ಲಿ;ಅವರ ಸಂಬಂಧದಿಂದುಂಟಾದ ಪಾಪಗಳನ್ನು ಪರಿಹರಿಸಿ,ಆ ತೀರ್ಥಗಳನ್ನು ಪವಿತ್ರೀಕರಿಸುವುದಕ್ಕಾಗಿಯೇ ನಿಮ್ಮಂತವರು ಆ ಪುಣ್ಯತೀರ್ಥಗಳಿಗೆ ಹೋಗಬೇಕಲ್ಲದೆ ಬೇರೆಯಲ್ಲ.ಪಾಪನಿವಾರಕನಾದ ಶ್ರೀಹರಿಯು ನಿಮ್ಮಂತವರ ಹೃದಯದಲ್ಲಿ ಯಾವಾಗಲೂ ನೆಲೆಸಿರುವುದರಿಂದ,ನಿಮ್ಮ ಸಂಬಂಧವು ಪುಣ್ಯತೀರ್ಥಗಳಿಗೂ ಪವಿತ್ರತೆಯನ್ನುಂಟುಮಾಡುವುದು ತಾತಾ ! ಶ್ರೀಕೃಷ್ಣನನ್ನೇ ಪರದೈವತೆಯೆಂದು ಭಾವಿಸಿ ಅವನನ್ನೇ ನಂಬಿರುವ ನಮ್ಮ ಬಂಧುಗಳಾದ ಯಾದವರನ್ನು ನೀನು ನೋಡಿ ಬಂದೆಯಷ್ಟೆ ? ದ್ವಾರಕೆಯಲ್ಲಿ ಅವರೆಲ್ಲರೂ ಕ್ಷೇಮದಿಂದಿರುವರೆ?" ಎಂದುಪ್ರಶ್ನೆಮಾಡಿದನು ಧರ್ಮರಾಜನ ವಾಕ್ಯವನ್ನು ಕೇಳಿ ವಿದುರನು, ಪರಮಸಂತೋಷಭರಿತನಾಗಿ, ತಾನು ಅಲ್ಲಲ್ಲಿ ನೋಡಿಬಂದ ಪುಣ್ಯಸ್ಥಳಗಳ ಮಾಹಾತ್ಮ್ಯವನ್ನೂ,ಅಲ್ಲಲ್ಲಿ ತಾನು ಕೇಳಿದ ವಿಶೇಷವೃತ್ತಾಂತಗಳನ್ನೂ ಯಥಾಕ್ರಮವಾಗಿ ವಿವರಿಸುತ್ತ ಬಂದನು. ಆದರೆ ಯದುಕುಲವು ನಾಶಹೊಂದಿದ ವೃತ್ತಾಂತವೊಂದನ್ನು ಮಾತ್ರ ಧರ್ಮರಾಜನಿಗೆ ತಿಳಿಸದೆ ಮರೆಸಿಬಿಟ್ಟನು. ಈ ಯದುವಂಶಕ್ಷಯವನ್ನು ಕೇಳಿದರೆ ಕ್ಷಣದಲ್ಲಿ ಧರ್ಮರಾಜನಿಗೆ ವಿಶೇಷನಾದ ದುಃಖವುಂಟಾಗಬಹುದೆಂದೆಣಿಸಿ ಅದನ್ನು ಮಾತ್ರ ತನ್ನಲ್ಲಿಯೇ ಅಡಗಿಸಿಬಿಟ್ಟನು. ಶಾನಕಾ! ಮಹಾತ್ಮರ ಸುಸ್ವಭಾವವನ್ನು ನೋಡಿದೆಯಾ? ಸತ್ಪುರುಷರು ಇತರರ ದುಃಖವನ್ನು ನೋಡಿ ಸ್ವಲ್ಪಮಾತ್ರವೂ ಸಹಿಸಲಾರರು ಪಾಂಡವರ ವ್ಯಸನವನ್ನು ನೋಡಿ ಸಹಿಸಲಾರದುದಕ್ಕಾಗಿಯೇ, ವಿದುರನು ಈ ವೃತ್ತಾಂತವನ್ನೆತ್ತದೆ ಬಿಟ್ಟುಬಿಟ್ಟನು. ವಿದುರನು ಹೀಗೆ ಧರ್ಮರಾಜಾದಿಗಳಿಗೆ ಪುಣ್ಯತೀರ್ಥಮಹಿಮೆಗಳನ್ನು ತಿಳಿಸಿ, ಅವರಿಂದ ಪೂಜಿತನಾಗಿ,ಅಲ್ಲಿನ ಪುರವಾಸಿಗಳೆಲ್ಲರಿಗೂ ಸಂತೋಷವುಂಟಾಗುವಂತೆ, ಹಸ್ತಿನಾಪುರದಲ್ಲಿಯೇ ಕೆಲವುದಿನಗಳವರೆಗೆ ಸುಖದಿಂದಿರುತಿದ್ದನು. ಈ ಕಾಲದಲ್ಲಿ ತನ್ನಣ್ಣನಾದ ಧೃತರಾಷ್ಟ್ರನಿಗೆ ಅನೇಕತತ್ತ್ವಗಳನ್ನೂ ತಿಳಿಸಿದನು. ಅವನಿಗೆ ಮರಣಕಾ

ಲವು ಸಮೀಪಿಸಿರುವುದನ್ನು ಸೂಚಿಸಿ, ಮುಂದೆ ಅವನು ಹಿಡಿಯಬೇಕಾದ ಮೋಕ್ಷೋಪಾಯವನ್ನೂ ತಿಳಿಸುತಿದ್ದನು. ಶೌನಕಾ ! ಶೂದ್ರಯೋನಿಯಲ್ಲಿ ಹುಟ್ಟಿದ ವಿದುರನಿಗೆ ಧೃತರಾಷ್ಟ್ರನ ಮರಣಕಾಲವನ್ನು ತಿಳಿಯುವ ಶಕ್ತಿಯು ಹೇಗೆಂದು ನೀನು ಶಂಕಿಸಬಹುದು. ಮುನೀಂದ್ರಾ.! ವಿದುರನ ವಿಷಯದಲ್ಲಿಮಾತ್ರ ಈ ವಿಧವಾದ ಶಂಕೆಗೆ ಅವಕಾಶವಿಲ್ಲ. ಆ ವಿದುರನನ್ನು ಯಾರೆಂದು ತಿಳಿದಿರುವೆ! ಸಮಸ್ತಪ್ರಾಣಿಗಳ ಮೃತ್ಯುಕಾಲವನ್ನೂ ತಿಳಿದಿರುವ ಸಾಕ್ಷಾತ್ ಯಮಧರ್ಮರಾಜನೇ ಅತನೆಂದು ತಿಳಿ! ಈತನು ಪೂರ್ವದಲ್ಲಿ ಮಾಂಡವ್ಯನ ಶಾಪದಿಂದ ನೂರುವರ್ಷಗಳವರೆಗೆ ಶೂದ್ರಜನ್ಮದಲ್ಲಿರಬೇಕಾಗಿ ಬಂದಿತು. ಆಗ ತನ್ನ ಅಧಿಕಾರವನ್ನು ಸೂರ್ಯನಿಗೆಕೊಟ್ಟು,ಹೀಗೆ ವಿದುರನಾಗಿ ಹುಟ್ಟಿದನು. ಆದುದರಿಂದ ಈತನಿಗೆ ಧೃತರಾಷ್ಟ್ರನ ಮರಣಕಾಲವುತಿಳಿದುದೇನೂ ಆಶ್ಚರ್ಯವಲ್ಲ.ಅದು ಹಾಗಿರಲಿ!ಇತ್ತಲಾಗಿ ಧರ್ಮರಾಜನುರಾಜ್ಯವನ್ನು ನಡೆಸುತ್ತ, ವಂಶೋದ್ಧಾರಕನಾದ ಮುಮ್ಮಗನನ್ನು ಪಡೆದಮೇಲೆ ರಾಜ್ಯವನ್ನು ವಿಶೇಷವಾಗಿ ವಿಸ್ತರಿಸಿ, ಲೋಕಪಾಲರಿಗೆ ಸಮಾನವಾದ ತಮ್ಮಂದಿರೊಡಗೂಡಿ ಸಾಮ್ರಾಜ್ಯಲಕ್ಷ್ಮೀವಿಲಾಸನಾಗಿ ಸಂತೋಷದಿಂದ ರಾಜ್ಯವನ್ನಾಳುತಿದ್ದನು. ಶೌನಕಾ! ಲೋಕದಲ್ಲಿ ಸಂಸಾರಸುಖವನ್ನಪೇಕ್ಷಿಸಿ, ಅದರಿಂದ ಮೈತಿಳಿಯದೆ ಮತ್ತರಾದವರಿಗೆ, ಕಾಲವೆಂಬುದು ತಿಳಿಯದಹಾಗೆಯೇ ಮೇಲೆ ಬಂದು ಬೀಳುವುದು. ಆಹಾ! ಆ ಕಾಲವನ್ನು ಪೊರುವುದು ಯಾರಿಗೆತಾನೇ ಸಾಧ್ಯವು? ದುರ್ಲಂಘ್ಯವಾದ ಈ ಕಾಲವು ಧೃತರಾಷ್ಟ್ರನನ್ನು ಸಮೀಪಿಸಿದಾಗ, ವಿದುರನೊಬ್ಬನಿಗೆಹೊರತು ಬೇರೆ ಯಾರಿಗೆತಾನೇ ಅದರ ನಿಜಸ್ಥಿತಿಯನ್ನು ಕಂಡುಕೊಳ್ಳಲು ಸಾಧ್ಯವಾಯಿತು ? ವಿದುರನು ಕಾಲಜ್ಞನಾದುದರಿಂದ, ಈಸಂಗತಿಯನ್ನು ಮೊದಲೇ ತಿಳಿದು, ಧೃತರಾಷ್ಟ್ರನನ್ನು ಕುರಿತು ಹೇಳುವನು.''ರಾಜಾ!ಇನ್ನು ತಡಮಾಡಬೇಡ,ಈಗಲೇ ನೀನು ಈ ಪಟ್ಟಣವನ್ನು ಬಿಟ್ಟು,ಅಡವಿಗೆ ಹೋಗಿ ತಪಸ್ಸಿನಲ್ಲಿರುವುದುಚಿತವು. ಇದೋ ! ಈಗ ನಮ್ಮಮೇಲೆ ಕವಿದುಬರುತ್ತಿರುವ ಮಹಾಭಯವನ್ನು ನೋಡು! '' ಇಷ್ಟೆಂದು ಸಾಮ್ರಾಜ್ಯಭೋಗಗಳೆಲ್ಲವನ್ನೂ ಒಮ್ಮೆಯೇ ತೊರೆದು ಹೋಗುವುದು ಹೇಗೆ"ಎಂದು ನೀನು ಶಂಕಿಸಬಹುದು!ಕೌರವೇಂದ್ರಾ! ಹಾಗೆಣಿಸಬೇಡ! ಎಲ್ಲೆ

ಯೂ ಯಾವವಿಧದಿಂದಲೂ ಪ್ರತೀಕಾರವಿಲ್ಲದ ಪೂಜ್ಯವಾದ ಕಾಲವು, ಇ
ದೋ! ನಮ್ಮೆಲ್ಲರನ್ನೂ ಮೇಲೆ ಬಿದ್ದುಹಿಡಿಯುವುದಕ್ಕೆ ಕಾದಿರುವುದು! ಇಂ
ತಹ ಮೃತ್ಯುಕಾಲವು ಸಮೀಪಿಸಿದಾಗ, ನಮಗೆ ಪರಮಪ್ರೇಮಪಾತ್ರರ
ಳಾಗಿ, ನಮ್ಮೊಡನೆ ಸೇರಿರುವ ಪ್ರಾಣಗಳನ್ನೇ ನಾವು ಅದಕ್ಕೊಪ್ಪಿಸಬೇಕಾ
ಗಿರುವಾಗ, ನಡುವೆ ಆಗಂತುಕವಾಗಿ ಬಂದ ರಾಜ್ಯಧನಾದಿಗಳನ್ನು ಬಿಟ್ಟು
ಕೊಡಬೇಕಾದುದೊಂದು ಹೆಚ್ಚೆ ? ಓ ಪ್ರಭೂ! ಇನ್ನು ಮೇಲೆ ಇವುಗಳಿಂದ
ನನಗೇನಾಗಬೇಕಾಗಿದೆ ? ನಿನ್ನ ಪುತ್ರಪೌತ್ರಬಂಧುಪರಿವಾರಾದಿಗಳೆಲ್ಲರೂ
ಸತ್ತರು ! ನಿನ್ನ ಯೌವನಕಾಲವೂ ಕಳೆದುಹೋಯಿತು! ನಿನ್ನ ದೇಹವೆಲ್ಲವೂ
ಜರೆಯಿಂದ ಜೀರ್ಣವಾಯಿತು! ಈ ಸ್ಥಿತಿಯಲ್ಲಿಯೂ ನಿನಗೆ, ನಿನ್ನ ದಾಯಾ
ದರ ಕೈಕೆಳಗಾದರೂ ಬದುಕಿರಬೇಕೆಂಬ ಆಸೆಯೆ?ಆಹಾ!ಲೋಕದಲ್ಲಿ ಪ್ರಾ
ಣಿಗಳಿಗೆ; ಜೀವವಾಸೆಯೆಂಬುದುಮಾತ್ರ ಎಂದೆಂದಿಗೂ ಬಿಡತಕ್ಕುದಲ್ಲ.
ಆ ಜೀವವಾಸೆಯಿಂದಲ್ಲವೇ ಈಗಲೂ ನೀನು, ಪಾಂಡವರ ಮನೆಯಲ್ಲಿ ಸೇರಿ
ಕೊಂಡು, ಭೀಮನು ತಂದಿಕ್ಕಿದ ಕೈಕೂಳನ್ನು ತಿಂದು, ನಾಯಿಯಹಾಗೆ
ಜನ್ಮವನ್ನು ಹೊರೆಯುತ್ತಿರುವೆ?ರಾಜೇಂದ್ರಾ!ಪೂರ್ವವೃತ್ತಾಂತವನ್ನು ಯೋ
ಚಿಸಿನೋಡು! ಪಾಂಡವರಿಗೆ ನಿನ್ನಲ್ಲಿ ಸ್ವಲ್ಪಮಾತ್ರವಾದರೂ ಅನುರಾಗವಿ
ರುವುದೆಂದೆಣಿಸಬೇಡ! ಅವರು ನಿನಗೆ ಅನ್ನವಸ್ತ್ರಿಕ್ಕುವಾಗ ಮನಸ್ಸಿನಿಂದಾ
ದರೂ ನಿನ್ನನ್ನು ಮೂಡಲಿಸದೆ ಬಿಡಲಾರರು! ಹಿಂದೆ ನಿನ್ನ ಮಕ್ಕಳು ಅವರು
ಮಲಗಿದ್ದ ಮನೆಗೆ ಬೆಂಕಿಯಿಟ್ಟರು! ವಿಷಾನ್ನವನ್ನು ತಿನ್ನಿಸಿದರು!ಅವರ ಕೈ
ಹಿಡಿದ ಹೆಂಡತಿಯಾದ ದ್ರೌಪದಿಗೆ ಮಹಾಸಭೆಯಲ್ಲಿ ಮಾನಭಂಗವನ್ನು
ಮಾಡಿದರು! ಅವರ ಧನವನ್ನೂ,ರಾಜ್ಯವನ್ನೂ ಕಿತ್ತುಕೊಂಡು ಅರಣ್ಯಕ್ಕಟ್ಟಿ
ದರು! ನಿನ್ನ ಮಕ್ಕಳು ಇಷ್ಟೊಂದು ಮಹಾಪರಾಧವನ್ನು ಮಾಡಿದಾಗಲೂ,
ನೀನು ಅವರನ್ನು ತಡೆಯದೆ ಸುಮ್ಮನಿದ್ದೆಯಲ್ಲವೆ? ಇದರಿಂದ ನೀನೂ ಅವರ
ವಿಷಯಹಲ್ಲಿ ವೈರಬುದ್ಧಿಯನ್ನೇ ತೋರಿಸದಂತಾಯಿತಲ್ಲವೆ? ಅವರಿಗೆ ನಿನ್ನ
ವಿಷಯದಲ್ಲಿ ಈದುರಭಿಪ್ರಾಯವಿರುವುದರಲ್ಲಿ ಸಂದೇಹವೇನು?ಈಸ್ಥಿತಿಯಲ್ಲಿ
ನೀನು ಅವರ ಕೈಕೂಳನ್ನು ತಿಂದಾದರೂ ಬದುಕಿ ಮಾಡಬೇಕಾದುದೇನು?
ಅಣ್ಣಾ! ಅದೂ ಹಾಗಿರಲಿ! ಒಂದುವೇಳೆ ನಿನಗೆ ಇನ್ನೂ ಈ ನೀಚಜೀವನದ

ಲ್ಲಿಯೇ ಬದುಕಿರಬೇಕೆಂಬ ಆಸೆಯಿದ್ದರೂ ಇರಬಹುದು! ಈ ದೇಹತ್ಯಾಗವನ್ನು ಮಾಡುವುದಕ್ಕೆನಿನಗಾಗಿ ಇಷ್ಟವಿಲ್ಲದಿದ್ದರೂ,ಜರೆಯಿಂದಾವೃತವಾದ ಈ ನಿನ್ನ ದೇಹವು, ಜೀರ್ಣವಸ್ತ್ರದಂತೆ ಕ್ರಮಕ್ರಮವಾಗಿ ನತಿಸುತ್ತ ಬರುವುದರಲ್ಲಿ ಸಂದೇಹವಿಲ್ಲ. ಮುಖ್ಯವಾಗಿ ಲೋಕದಲ್ಲಿ ಯಾವ ಮನುಷ್ಯನು, ಈ ದೇಹಾದಿಗಳೆಲ್ಲವೂ ಅನಿತ್ಯವೆಂಬುದನ್ನು ತಿಳಿದು, ಸಂಸಾರಸಂಬಂಧವನ್ನು ತೊರೆದು, ವಿರಕ್ತನಾಗಿ, ತಾಪಸವೃತ್ತಿಯನ್ನವಲಂಬಿಸಿ, ಅಡವಿಗೆ ಹೋಗಿ, ಬೇರೊಬ್ಬರಿಗೆ ತನ್ನ ಸ್ಥಿತಿಗತಿಯೇ ತಿಳಿಯದಹಾಗೆ ದೇಹತ್ಯಾಗವನ್ನು ಮಾಡುವನೋ, ಅಂತವನೇ ಧೀರನು'ಅವನೇ ಯೋಗಿಯು! ಮತ್ತು ಯಾವನು ತನ್ನಷ್ಟಕ್ಕೆತಾನೇ ಆಗಲಿ, ಪರೋಪದೇಶದಿಂದಾಗಲಿ, ತತ್ತ್ವಜ್ಞಾನವನ್ನವಲಂಬಿಸಿ,ವಿರಕ್ತನಾಗಿ,ಶ್ರೀಕೃಷ್ಣನನ್ನು ಹೃದಯದಲ್ಲಿ ನಿಲ್ಲಿಸಿ, ಮನೆಯನ್ನು ಬಿಟ್ಟು ಅಡವಿಗೆ ಹೋಗುವನೋ ಅವನೇ ನರೋತ್ತಮನು ! ಆದುದರಿಂದ ಅಣ್ಣಾ! ಇನ್ನು ನೀನು ಮನಸ್ಸಿನಲ್ಲಿ ಧೈರ್ಯವನ್ನವಲಂಬಿಸು ! ಮೋಹಪಾಶವನ್ನು ತೊರೆದುಬಿಡು! ವಿರಕ್ತಿಮಾರ್ಗವನ್ನಂಗೀಕರಿಸು! ಮುಂದೆಮುಂದೆ ಕಾಲವೆಂಬುದು ಪ್ರಾಣಿಗಳ ಧೈರ್ಯಾದಿಗುಣಗಳನ್ನು ಬಹಳವಾಗಿ ಕೆಡಿಸುವುದು! ಆದುದರಿಂದ ಈಗಲೇ ನೀನು ನಿನ್ನ ಜ್ಞಾತಿಗಳಾದ ಧಾರ್ತ್ತರಾಷ್ಟ್ರಾದಿಗಳಿಗೂ ತಿಳಿಯದಂತೆ ಇಲ್ಲಿಂದ ಉತ್ತರದಿಕ್ಕಿಗೆ ಹೊರಡು! ಇನ್ನು ಮೇಲೆ ನೀನು ಇದುವರೆಗಿನಂತೆ ನಡೆಯಬಾರದು'" ಎಂದನು. ಆಗ ಧೃತರಾಷ್ಟ್ರನು ತನ್ನ ತಮ್ಮನಾದ ವಿದುರನು ಹೇಳಿದ ಈ ಹಿತೋಪದೇಶವನ್ನು ಕೇಳಿ ಪರಮಸಂತುಷ್ಟನಾಗಿ, ಜ್ಞಾನದೃಷ್ಟಿಯನ್ನವಲಂಬಿಸಿ,ಪಾಂಡವರಲ್ಲಿ ತನ್ನವರೆಂಬ ಸ್ನೇಹಪಾಶವನ್ನು ತೊರೆದು, ಧೃಢಮನಸ್ಸುಳ್ಳವನಾಗಿ, ವಿದುರನು ತೋರಿಸಿದ ದಾರಿಯನ್ನೇ ಹಿಡಿದು ತಾಪಸವೃತ್ತಿಯಿಂದ ಪ್ರಯಾಣೋದ್ಯುಕ್ತನಾದನು.ಇದನ್ನು ನೋಡಿ ಮಹಾಪತಿವ್ರತೆಯಾದ ಗಾಂಧಾರಿಯೂಕೂಡ, ತನ್ನ ಪತಿಯಾದ ಧೃತರಾಷ್ಟ್ರನನ್ನೇ ಹಿಂಬಾಲಿಸಿ ಹೊರಟಳು. ಸರ್ವಭೂತಸುಹೃತ್ತುಗಳೆನಿಸಿದ ಯೋಗಿಗಳಿಗೂ ಸಂತೋಷಕರವಾದ ಹಿಮವತ್ಪರ್ವತದಕಡೆಗೆ ಧೃತರಾಷ್ಟ್ರನು ಹೋಗುತಿದ್ದಾಗ, ಪತಿವ್ರತಾಮಣಿಯಾದ ಗಾಂಧಾರಿಯೂಕೂಡ, ಅರಣ್ಯಸಂಚಾರಶ್ರಮವನ್ನು ಸ್ವಲ್ಪಮಾತ್ರವೂ ಲ

ಕ್ಷೀಕರಿಸದೆ, ಪತಿಶುಶ್ರೂಷಾಪರಾಯಣೆಯಾಗಿ, ಅವನೊಡನೆಯೇ ಒರುತಿದ್ದಳು. ಶೌನಕಾ! ಹೀಗೆ ಗಾಂಧಾರೀಧೃತರಾಷ್ಟ್ರರಿಬ್ಬರೂ ವಿರಕ್ತರಾಗಿ ವನಕ್ಕೆ ಹೊರಟುದು, ವಿವೇಕಿಗಳಾದ ಇತರಮನುಷ್ಯರೆಲ್ಲರಿಗೂ ವಿರಕ್ತಿಯನ್ನುಪದೇಶಿಸುವಂತಾಯಿತು. ಈ ದಂಪತಿಗಳಬ್ಬರೂ ವಿದುರನೊಡಗೂಡಿ, ವನಕ್ಕೆ ಹೊರಟ ಮರುದಿನವೇ, ಇತ್ತಲಾಗಿ ಧರ್ಮರಾಜನು, ಎಂದಿನಂತೆ ಪ್ರಾತಃಕಾಲದಲ್ಲೆ ಹಾಸಿಗೆಯಿಂದೆದ್ದು, ಸಂಧ್ಯಾವಂದನಾದಿಗಳನ್ನು ನಡೆಸಿ,ನಿತ್ಯಹೋಮಕಾರ್ಯವನ್ನೂ ತೀರಿಸಿಕೊಂಡು, ಬ್ರಾಹ್ಮಣರನ್ನು ಕರೆಸಿ,ಗೋದಾನ ಭೂದಾನಗಳೇ ಮೊದಲಾದ ನಿತ್ಯದಾನಗಳಿಂದ ಅವರನ್ನು ತೃಪ್ತಿಪಡಿಸಿ, ಅವರ ಆಶೀರ್ವಾದಗಳನ್ನೂ ಹೊಂದಿ,ದಿನಕ್ರಮದಂತೆ ತಂದೆತಾಯಿಗಳನ್ನು ನಮಸ್ಕರಿಸುವುದಕ್ಕಾಗಿ ಗಾಂಧಾರೀಧೃತರಾಷ್ಟ್ರರ ಮನೆಗೆ ಒಂದನು. ಅಲ್ಲಿ ಧೃತರಾಷ್ಟ್ರನಾಗಲಿ,ಗಾಂಧಾರಿಯಾಗಲಿ,ಪೃಥೆಯಾಗಲಿ ಯಾರೂ ಕಾಣಿಸಲಿಲ್ಲ, ಆಗ ಧರ್ಮರಾಜನ ಮನಸ್ಸಿನಲ್ಲಿ ಬಹಳವಾಗಿ ಚಿಂತೆಯೂ,ಭಯವೂಹುಟ್ಟಿತು. ಹೀಗೆ ಚಿಂತಾಗ್ರಸ್ತನಾದ ಧರ್ಮರಾಜನು, ಅಲ್ಲಿ ಏಕಾಕಿಯಾಗಿ ಕುಳಿತಿದ್ದ ಸಂಜಯನನ್ನು ನೋಡಿ "ಸಂಜಯಾ!ಇದೇನು? ನಮ್ಮ ತಂದೆಯಾದ ಧೃತರಾಷ್ಟ್ರನೋ ಕೇವಲವೃದ್ಧನು! ಇದರಮೇಲೆ ಕಣ್ಣಿಲ್ಲದವನು!ಇದುವರೆಗೆ ಮನೆಯನ್ನು ಬಿಟ್ಟು ಕ್ಷಣಮಾತ್ರವೂ ಕದಲಿದವನಲ್ಲ!ಈಗ ಈ ಸ್ಥಳವನ್ನು ಬಿಟ್ಟು ಹೋಗಲು ಕಾರಣವೇನು? ಎಲ್ಲಿಗೆ ಹೋಗಿರುವನು? ಪುತ್ರಶೋಕಪೀಡಿತೆಯಾಗಿ ಇಲ್ಲಿಯೇ ಕುಳಿತಿರ್ಪ ಗಾಂಧಾರಿಯೂ ಕಾಣಿಸುವುದಿಲ್ಲ ! ನಮ್ಮಲ್ಲಿ ಪರಮಪ್ರೇಮವುಳ್ಳವನಾಗಿ, ನಮ್ಮ ಚಿಕ್ಕತಂದೆಯಾಗಿಯೂ ಇರುವ ವಿದುರನಾದರೂ ಇಲ್ಲಿ ಕಾಣಿಸುವುದಿಲ್ಲ.ಇವರೆಲ್ಲರೂ ಎಲ್ಲಿಗೆ ಹೋಗಿರುವರು? ಒಂದುವೇಳೆ ನಾನು ಅವರ ಬಂಧುಗಳೆಲ್ಲರನ್ನೂ ಕೊಲ್ಲಿಸಿದೆನೆಂಬ ದುಃಖದಿಂದ, ವಿವೇಕಶೂನ್ಯನಾದ ನನ್ನ ಸಹವಾಸವನ್ನೇ ಮಾಡಲಾರದೆ,ನನ್ನ ತಂದೆಯಾದ ಧೃತರಾಷ್ಟ್ರನು ತನ್ನ ಭಾರ್ಯೆಯೊಡನೆ ಗಂಗಾನದಿಯಲ್ಲಿ ಬಿದ್ದು ಪ್ರಾಣವನ್ನು ಬಿಟ್ಟಿರಬಹುದೆ? ಹಾಗೇನೂ ನಡೆದಿಲ್ಲವಷ್ಟೆ?ಅಯ್ಯೋ! ನಮ್ಮ ಬಾಲ್ಯದಲ್ಲಿ ಹೆತ್ತ ತಂದೆಯಾದ ಪಾಂಡುರಾಜನು ಮೃತಿಹೊಂದಿದಮೇಲೆ, ಅನಾಥರಾದ ನಮ್ಮನ್ನು ಈ ಧೃತರಾಷ್ಟ್ರವಿದುರರಿಬ್ಬರೂ ಎಷ್ಟೋ ಪ್ರೇ

ಮದಿಂದ ಪೋಷಿಸುತ್ತಬಂದರು. ಆವರಿಬ್ಬರೂ ಈಗ,ಇದ್ದಕ್ಕಿದ್ದ ಹಾಗೆ ನ ಮ್ಮನ್ನು ಬಿಟ್ಟುಹೋಗಲು ಕಾರಣವೇನೋ ತಿಳಿಯಲಿಲ್ಲನಲ್ಲಾ! ಸಂಜಯಾ! ಅವರು ಈಸ್ಥಳವನ್ನು ಬಿಟ್ಟು ಬೇರೆಲ್ಲಿಗೆ ಹೋಗಿರಬಹುದು?"ಎಂದುದೈನ್ಯದಿಂ ದ ಕೇಳಿದನು. ಇದನ್ನು ಕೇಳಿ ಸಂಜಯನು, ತನಗೆ ಧೃತರಾಷ್ಟ್ರನಲ್ಲಿರುವ ಮರುಕದಿಂದಲೂ,ಸ್ನೇಹದಿಂದಲೂ,ಆತನ ವಿರಹದುಃಖವನ್ನು ಸಹಿಸಲಾರದೆ, ಬಹಳವಾಗಿ ಕೊರಗುತ್ತ, ತನಗೂ ಆ ಧೃತರಾಷ್ಟ್ರಾದಿಗಳ ಸ್ಥಿತಿಗತಿಗಳೊಂ ದೂ ತಿಳಿಯದುದರಿಂದ, ಯಾವ ಪ್ರತ್ಯುತ್ತರವನ್ನೂ ಹೇಳಲಾರದೆ, ಸ್ವಲ್ಪ ಕಾಲದವರೆಗೆ ಮೌನವನ್ನು ವಹಿಸಿ ಕಣ್ಣೀರುಬಿಡುತಿದ್ದನು. ಕೊನೆಗೆ ಮನ ಸ್ಸಿನಲ್ಲಿದ್ದ ದುಃಖವನ್ನು ಧೈರ್ಯದಿಂದ ತಡೆದುಕೊಂಡು, ತನ್ನ ಕೈಗಳಿಂದಲೇ, ಕಣ್ಣೀರನ್ನೊರೆಸಿಕೊಳ್ಳುತ್ತ,ಪ್ರಭುವಾದಧೃತರಾಷ್ಟ್ರನಪಾದಗಳನ್ನು ಮ ನಸ್ಸಿನಲ್ಲಿ ಧ್ಯಾನಿಸಿ, ಧರ್ಮರಾಜನಿಗೆ ಪ್ರತ್ಯುತ್ತರವನ್ನು ಹೇಳುವನು ,"ಧರ್ಮಪ್ರ ಭಾ! ನಿನ್ನ ತಾತಂದಿರಾದ ವಿದುರಧೃತರಾಷ್ಟ್ರರ ಉದ್ದೇಶವೇನೆಂಬು ದನ್ನು ನಾನೂ ಕಾಣೆನು! ಗಾಂಧಾರಿಯೆಲ್ಲಿರುವಳೆಂಬುದೂ ನನಗೆ ತಿಳಿಯ ದು! ಮಹಾತ್ಮರಾದ ಆ ಮೂವರೂ ನನ್ನನ್ನೂ ವಂಚಿಸಿ ಹೊರಟುಹೋಗಿ ರುವರು! ಇನ್ನು ನಾನು ಅವರ ವೃತ್ತಾಂತವನ್ನು ನಿನಗೆ ಹೇಗೆಂದು ತಿಳಿಸ ಲಿ! " ಎಂದು ದುಃಖಿಸುತಿದ್ದನು. ಈ ಸಮಯಕ್ಕೆಸರಿಯಾಗಿ ತುಂಬುರು ನಾರದರಿಬ್ಬರೂ ಆ ಸ್ಥಲಕ್ಕೆ ಬಂದು ಸೇರಿದರು ಆಗ ಧರ್ಮರಾಜನು ತನ್ನ ತಮ್ಮಂದಿರೊಡಗೂಡಿ,ಆ ಮಹಾತ್ಮರಿಬ್ಬರಿಗೂ ಸಾಷ್ಟಾಂಗಪ್ರಣಾಮವನ್ನು ಮಾಡಿ, ಅವರನ್ನು ಯಥೋಕ್ತವಾಗಿ ಪೂಜಿಸಿ, ನಾರದನನ್ನು ನೋಡಿ "ಎ ಲೈ ಮಹಾತ್ಮನೆ! ನಮ್ಮ ಚಿಕ್ಕಪ್ಪಂದಿರಾದ ವಿದುರಧೃತರಾಷ್ಟ್ರರಿಬ್ಬರೂ ಇದ್ದಕ್ಕಿದ್ದ ಹಾಗೆ ಈ ಸ್ಥಳವನ್ನು ಬಿಟ್ಟು ಹೊರಟುಹೋಗಿರುವರು. ಅವರೆ ಲ್ಲಿಗೆ ಹೋಗಿರುವರೋ ತಿಳಿಯಲಿಲ್ಲ! ಪುತ್ರಮರಣದಿಂದುಂಟಾದ ವ್ಯಸನದಿಂ ದ ಅನವರತವೂ ಕೊರಗುತ್ತ, ಬಹಳ ಶೋಚನೀಯಾವಸ್ಥೆಯಲ್ಲಿದ್ದ ನಮ್ಮ ಮಾತೆಯಾದ ಗಾಂಧಾರಿಯಾದರೂ ಎಲ್ಲಿ ಹೋಗಿರುವಳೋ ತಿಳಿಯಲಿಲ್ಲ ! ಅವರ ಸ್ಥಿತಿಗತಿಗಳೇನೆಂದು ತಿಳಿಯದೆ,ನಾವು ಅಪಾರವಾದ ದುಃಖಸಮುದ್ರ ದಲ್ಲಿ ಮುಳುಗಿಹೋಗುತ್ತಿರುವಸಮಯಕ್ಕೆ ಸರಿಯಾಗಿ, ಆ ದುಃಖಸಮುದ್ರವ

ನ್ನು ಬಾಟಿಸತಕ್ಕ ನಾವಿಕನಂತೆ ದೈವಾನುಗ್ರಹದಿಂದ ನೀನು ನಮಗೆ ಗೋಚರಿಸಿದೆ! ಅವರ ನಿಜಸ್ಥಿತಿಯನ್ನು ನೀನೇ ನಮಗೆ ತಿಳಿಸಬೇಕು" ಎಂದನು. ಆಗ ಪೂಜ್ಯನಾದ ನಾರದಮಹರ್ಷಿಯು ಧರ್ಮರಾಜನನ್ನು ಕುರಿತು "ಧರ್ಮಪುತ್ರಾ! ಆವರಿಗಾಗಿ ನೀನೇಕೆ ಚಿಂತಿಸುವೆ? ಮನುಷ್ಯನು ಲೋಕದಲ್ಲಿ ಯಾವುದಕ್ಕೂ ಚಿಂತಿಸಬೇಕಾದ ಕಾರಣವಿಲ್ಲ, ಪ್ರಪಂಚವ್ಯಾಪಾರವೆಲ್ಲವೂ ಈಶ್ವರನೊಬ್ಬನಿಗೆನುಮಾತ್ರವೇ ಅಧೀನವಾಗಿ ನಡೆಯುವುದು. ಲೋಕಪಾಲಕರು ಮೊದಲಾಗಿ ಸಮಸ್ತಪ್ರಪಂಚವೂ ಅತನಿಗೆ ಕಿಂಕರಭೂತವಾಗಿ ಅವನ ಸೇವೆಯಲ್ಲಿ ವರ್ತಿಸುತ್ತಿರುವುದು. ಆ ಈಶ್ವರನೇ ಒಮ್ಮೊಮ್ಮೆ ಪಂಚಭೂತಗಳನ್ನು ಸೇರಿಸಿಡುವನು. ಅವನೇ ಮತ್ತೊಮ್ಮೆ ಅವುಗಳನ್ನಗಲಿಸುವನು. ಹಸುಗಳಿಗೆ ಮೂಗುದಾರವನ್ನು ಬೀರಿ,ಹಗ್ಗದಿಂದೆಳೆದು,ಕಂಬದಲ್ಲಿ ಬಿಗಿದಿಡುವಂತೆ ಭಗವಂತನು ವರ್ಣಾಶ್ರಮಸಂಬಂಧಸೂಚಕಗಳಾದ ನಾಮರೂಪಗಳೆಂಬ ದಾರಗಳಿಂದ ಮನುಷ್ಯಾದಿಯನ್ನು ಬಿಗಿದು,ವೇದವಾಕ್ಯಗಳೆಂಬ ಹೊರಜಿಗೆ ತಗುಲಿಸಿಕಟ್ಟಿರುವನು. ಮಕ್ಕಳು ತಮ್ಮ ಇಷ್ಟಾನುಸಾರವಾಗಿ ಆಟವಾಡುವಾಗ ಆಆಟದ ವಸ್ತುಗಳನ್ನು ಸಮಯೋಚಿತವಾಗಿಸೇರಿಸಿ,ಆಮೇಲೆ ಇಷ್ಟಬಂದಾಗ ಅವುಗಳನ್ನು ಕದಲಿಸಿಬಿಡುವಂತೆ,ಈಶ್ವರನೂಕೂಡ ತನ್ನ ಸ್ವೇಚ್ಛೆಯಿಂದ ಮನುಷ್ಯರಿಗೆ ಪರಸ್ಪರಸಂಯೋಗವಿಯೋಗಗಳನ್ನುಂಟುಮಾಡುವನು. ಅಷ್ಟೇಕೆ? ಧರ್ಮಪುತ್ರಾ! ನೀನು ಈ ಲೋಕವನ್ನು ಸತ್ಯವೆಂದೆಣಿಸುವೆಯಾ? ಅಲ್ಲವೇ ಅಸತ್ಯವೆಂದೆಣಿಸುವೆಯಾ?ಅಥವಾ ಇದಕ್ಕೆ ಸತ್ಯತ್ವಾಸತ್ಯತ್ವಗಳೆರಡನ್ನೂ ಕಲ್ಪಿಸುವೆಯಾ? ಹೇಗೆಣಿಸಿದರೂ ನೀನು ದುಃಖಿಸಬೇಕಾದ ಕಾರಣವಿಲ್ಲ! ಸತ್ಯವೆಂದೆಣಿಸುವ ಪಕ್ಷದಲ್ಲಿ ನೀನು ಯಾವನ ವಿಯೋಗದಿಂದ, ಈಗ ದುಃಖಿಸುತ್ತಿರುವೆಯೋ, ಅವನಿಗೆ ಎಂದೆಂದಿಗೂ ನಾಶವಿಲ್ಲದುದರಿಂದ ನೀನು ದುಃಖಿಸಬೇಕಾದ ಕಾರಣವೇ ಇಲ್ಲ. ಅಸ್ಥಿರವೆಂದೆಣಿಸುವ ಪಕ್ಷದಲ್ಲಿ, ಎಂದಿದ್ದರೂ ನಾಶಹೊಂದತಕ್ಕ ದೇಹಾದಿಗಳನ್ನು ಕುರಿತು ದುಃಖಿಸಿ ಫಲವಿಲ್ಲ. ಸ್ಥಿರತ್ವಾಸ್ಥಿರತ್ವಗಳೆರಡನ್ನೂ ಹೇಳುವುದಾದರೆ ಲೋಕದಲ್ಲಿ ಪರಸ್ಪರವಿರುದ್ಧಗಳಾದ ಈ ಎರಡು ಗುಣಗಳೂ ಒಂದರಲ್ಲಿರುವುದಕ್ಕೆ ಸಂಭವವಿಲ್ಲ. ಆದುದರಿಂದ ಈ ನಿನ್ನ ದುಃಖಕ್ಕೆ ನಿನ್ನಲ್ಲಿರುವ ಮೋಹವಲ್ಲದೆ ಬೇರೆ ಕಾರಣವಿಲ್ಲ!

ಅಜ್ಞಾನಸಂಬಂಧದಿಂದ ದೇಹದಲ್ಲಿ ಆತ್ಮಬುದ್ಧಿಯನ್ನಾರೋಪಿಸಿದಾಗಮಾತ್ರವೇ ಆ ದೇಹಾದಿಗಳಲ್ಲಿ ಅನುರಾಗವು ಹೆಚ್ಚುತ್ತಿರುವುದು. ಆ ಅನುರಾಗವು ಹೆಚ್ಚುವುದರಿಂದ ವಿಯೋಗಕಾಲದಲ್ಲಿ ದುಃಖವನ್ನೂ ಹೆಚ್ಚಿಸುವುದು. ಈ ದುಃಖವೆಂಬುದು ದೇಹಾತ್ಮಭ್ರಮರೂಪವಾದುದಲ್ಲದೆ ಬೇರೆಯಲ್ಲ ಆದುದರಿಂದ ಎಲೈ ರಾಜೇಂದ್ರನೆ! ಅಜ್ಞಾನಜನ್ಯವಾದ ಈ ದುಃಖವನ್ನು ಬಿಟ್ಟುಬಿಡು! ನನ್ನನ್ನು ಬಿಟ್ಟುಹೋದಮೇಲೆ ಧೃತರಾಷ್ಟ್ರಪುತ್ರರಿಗಳಿಗೆ ಬೇರೆ ಯಾರು? ಅವರು ಅನಾಥರಾಗಿ ಹೇಗೆ ಜೀವಿಸಬಲ್ಲರು?" ಎಂದು ನೀನು ಶಂಕಿಸಬಹುದು! ಅವರಿಗೆ ನೀನೇ ರಕ್ಷಕನೆಂಬ ಭ್ರಾಂತಿಯನ್ನೂ ಬಿಟ್ಟುಬಿಡು! ಈ ದೇಹವೆಂಬುದು ಕಾಲಕ್ಕೂ, ಪಾಪಪುಣ್ಯಕರ್ಮಗಳಿಗೂ, ಸತ್ತ್ವಾದಿಗುಣಗಳಿಗೂ ಅಧೀನವಾಗಿ ಪಂಚಭೂತಾತ್ಮಕವಾಗಿರುವುದು. ಲೋಕದಲ್ಲಿರುವ ಪ್ರತಿಯೊಂದು ಪ್ರಾಣಿಗೂ ಈ ದೇಹಬಂಧವು ಬಿಟ್ಟುದಲ್ಲ! ಹಾವಿನ ಬಾಯಲ್ಲಿ ಸಿಕ್ಕಿಬಿದ್ದು ತನ್ನನ್ನೇ ತಾನು ಕಾಪಾಡಿಕೊಳ್ಳಲಾರದ ದುಸ್ಥಿತಿಯಲ್ಲಿರುವವನು ಮತ್ತೊಬ್ಬರನ್ನು ಕಾಪಾಡಬಲ್ಲನೆ? ಅದರಂತೆಯೇ ನಿನ್ನ ದೇಹವನ್ನೇ ನೀನು ರಕ್ಷಿಸಿಕೊಳ್ಳುವುದಕ್ಕೆ ಶಕ್ತನಲ್ಲದಿರುವಾಗ, ಬೇರೆಯವರಿಗೆ ನೀನು ರಕ್ಷಕನೆಂಬ ಭಾವವನ್ನಿಟ್ಟುಕೊಳ್ಳಬಹುದೆ? ಆದುದರಿಂದ ಲೋಕದಲ್ಲಿ ಒಬ್ಬೊಬ್ಬರೂ ಕರ್ಮಾಧೀನವಾದ ದೇಹದಲ್ಲಿ ಸಿಕ್ಕಿಬಿದ್ದಿರುವಾಗ ಒಬ್ಬರು ಮತ್ತೊಬ್ಬರನ್ನು ರಕ್ಷಿಸುವರೆಂಬ ಮಾತುಸುಳ್ಳು! ಒಬ್ಬರನ್ನೊಬ್ಬರು ರಕ್ಷಿಸುವರೆಂಬ ಈ ಭ್ರಾಂತಿಯೂ ಹಾಗಿರಲಿ! ಒಬ್ಬರನ್ನೊಬ್ಬರು ಭಕ್ಷಿಸದೆ ಬಿಟ್ಟರೆ ಸಾಕಲ್ಲವೆ? ಲೋಕದಲ್ಲಿ ನೋಡು! ಕೈ ಮೊದಲಾದ ಅನುಕೂಲಸಾಧನಗಳುಳ್ಳ ಮನುಷ್ಯರು ಕೈಯಿಲ್ಲದ ಮೃಗಾದಿಗಳನ್ನು ಹೊಡೆದು ಭಕ್ಷಿಸುವರು. ಕಾಲಿರತಕ್ಕ ಜಂತುಗಳಿಗೆ ಕಾಲಿಲ್ಲದ ಕೆಲವು ಜಂತುಗಳು ಆಹಾರವಾಗುವುವು, ಕಾಲಿಲ್ಲದಿರುವ ಅಜಗರಾದಿಗಳಾದ ದೊಡ್ಡಪ್ರಾಣಿಗಳಿಗೂ ಕ್ಷುದ್ರಜಂತುಗಳು ಆಹಾರವಾಗುವುವು ಮುಖ್ಯವಾಗಿ ಒಂದುಜೀವವು ಮತ್ತೊಂದುಜೀವವನ್ನು ತಿಂದೇ ಬದುಕಬೇಕಲ್ಲದೆ ಬೇರೆಯಲ್ಲ! ಎಲೈ ಧರ್ಮಪುತ್ರನೆ! ಕಾಡಿನಲ್ಲಿದ್ದರೂ, ಮನೆಯಲ್ಲಿದ್ದರೂ, ಸರ್ವಾತ್ಮಕನಾದ ಆ ಭಗವಂತನೇ ರಕ್ಷಿಸಬೇಕಲ್ಲದೆ, ಮನುಷ್ಯನನ್ನು ಮನುಷ್ಯನು ಬದುಕಿಸುವನೆಂಬ ಮಾತು ಸುಳ್ಳು! ಈಗ ನಮಗೆ ಕಾಣುತ್ತಿರುವ ಚಿದಚಿದಾ

ತ್ಮಕವಾದ ಈ ಸಮಸ್ತಪ್ರಪಂಚವೂ ಆ ಭಗವಂತನೊಬ್ಬನ ರೂಪವಲ್ಲದೆ ಬೇರೆಯಲ್ಲ ! ಅತನು ಸತ್ವಾದಿಗುಣಗಳ ಮೂಲಕವಾಗಿ, ದೇವಮನುಷ್ಯಾದಿ ಭೇದಗಳನ್ನು ಕಲ್ಪಿಸಿ, ಆಯಾಭೂತಗಳಲ್ಲಿ ತಾನೂ ಅಂತರಾತ್ಮನಾಗಿ ಪ್ರವೇಶಿಸಿ, ಅವುಗಳಿಗೆ ತಾನೇ ನಿಯಾಮಕನಾಗಿಯೂ, ಧಾರಕನಾಗಿಯೂ ಇರುವನು. ಅವನು ಸ್ವಾತ್ಮಯಾಥಾತ್ಮ್ಯವನ್ನು ತಿಳಿದವನು ಆದುದರಿಂದ ಅವನಿಗೆ ತಾನು ಸೇರಿದ ವಸ್ತುಗಳಲ್ಲಿರುವ ದೋಷವು ಸಂಬಂಧಿಸಲಾರದು. ಅತನು ಸಮಸ್ತಪ್ರಪಂಚದ ಒಳಗೂ ಹೊರಗೂ ವರ್ತಿಸುತ್ತಿರುವನು. ಒಬ್ಬನಾಗಿರುವ ಭಗವಂತನಿಗೆ ಈ ವಿಧವಾದ ನಾನಾತ್ವವು ಹೇಗೆ ಬಂದಿತೆಂದು ನೀನು ಶಂಕಿಸಬಹುದು ! ದೇವಮನುಷ್ಯಾದಿಭೇದ ವೊಂದು ಹುಟ್ಟಿಸಿರುವ ಪ್ರಕೃತಿಯಿಂದಲೇ ಭಗವಂತನು ನಾನಾತ್ವವನ್ನು ಹೊಂದಿದಂತೆ ಕಾಣುವನು ಇಷ್ಟೇಹೊರತು ಲೋಕದಲ್ಲಿ ಆ ಭಗವಂತನನ್ನು ಬಿಟ್ಟು ಬೇರೆ ವಸ್ತುವಿಲ್ಲ. ಹೀಗೆ ಸಕಲಜಗದಂತರ್ಯಾಮಿಯಾಗಿ, ಸಮಸ್ತ ಲೋಕವನ್ನೂ ನಿರೀಕ್ಷಿಸಿಕೊಂಡು, ಕಾಲಸ್ವರೂಪವಿಂಯಿರುವ ಆ ಸರ್ವೇಶ್ವರನೇ ಈಗ ಧರ್ಮಸಂರಕ್ಷಣಾರ್ಥವಾಗಿ ದ್ವಾರಕೆಯಲ್ಲಿ ಕೃಷ್ಣನಾಗಿ ಅವತರಿಸಿರುವನು.ಅವನು ಇದುವರೆಗೆ ದೇವತೆಗಳ ಕಾರ್ಯವನ್ನು ಬಹಳಮಟ್ಟಿಗೆ ನೆರವೇರಿಸಿ ಬಿಟ್ಟನು.ಮುಂದೆ ನಡೆಸಬೇಕಾದ ಕಾರ್ಯವು ಸ್ವಲ್ಪಮಾತ್ರವೇ ಉಳಿದಿರುವುದು.(ಯಾದವಕುಲವಿನಾಶರೂಪವಾದ)ಒಂದುಕಾರ್ಯವನ್ನು ನಡೆಸುವುದಕ್ಕಾಗಿ ಕಾದಿರುವನು. ಆ ಕಾರ್ಯವು ತೀರಿಹೋಡನೆ ಈ ಲೋಕವನ್ನು ಬಿಟ್ಟು ಹೊರಡುವನು. ಧರ್ಮರಾಜಾ ! ಭಗವಂತನಾದ ಆ ಶ್ರೀಕೃಷ್ಣನು ಈ ಲೋಕದಲ್ಲಿರುವವರೆಗೆ ಮಾತ್ರ, ನೀವೂ ಇಲ್ಲಿ ನಿರೀಕ್ಷಿಸುತ್ತಿದ್ದು, ಆಮೇಲೆ ನಿಮ್ಮ ತಂದೆಯ ದಾರಿಯನ್ನೇ ನೀವೂ ಹಿಡಿಯಬೇಕು. ರಾಜೇಂದ್ರಾ !ಈಗ ಧೃತರಾಷ್ಟ್ರಾದಿಗಳೆಲ್ಲರೂ ಎಲ್ಲಿರುವರೆಂದು ಕೇಳಿದೆಯಲ್ಲವೆ ! ಹೇಳುವೆನು ಕೇಳು ! ಈಗ ಧೃತರಾಷ್ಟ್ರನು ವಿದುರಗಾಂಧಾರಿಯರೊಡನೆ ಹಿಮಾಲಯದ ದಕ್ಷಿಣದಲ್ಲಿ,ಸಪ್ತಸ್ರೋತಸ್ಸೆಂದು ಪ್ರಸಿದ್ಧವಾದ ಒಂದು ಪುಣ್ಯಾಶ್ರಮದಲ್ಲಿರುವನು. ಆ ಸ್ಥಳವು ಬಹಳಪವಿತ್ರವಾದುದು. ತ್ರೈಲೋಕ್ಯಪಾವನೆಯಾದ ಗಂಗಾನದಿಯು ಅಲ್ಲಿ ಸಪ್ತರ್ಷಿಗಳ ಪ್ರೀತಿಗಾಗಿ ಏಳು ಭಾಗವಾಗಿ ಪ್ರವ

ಹಿಸಿರುವಳು. ಇದಕ್ಕಾಗಿಯೇ ಅದಕ್ಕೆ ಸಪ್ತಸ್ರೋತವೆಂಬ ಪ್ರಸಿದ್ಧಿಯುಂ
ಟಾಯಿತು. ಅಂತಹ ಸಿದ್ಧಾಶ್ರಮದಲ್ಲಿ ಸೇರಿದ ಧೃತರಾಷ್ಟ್ರನು, ಆ ಮಹಾ
ನದಿಯಲ್ಲಿ ಸ್ನಾನಮಾಡುತ್ತ, ತ್ರಿಸಂಧ್ಯಾಕಾಲಗಳಲ್ಲಿಯೂ ಅಗ್ನಿಹೋತ್ರಾದಿ
ಕಾರ್ಯಗಳನ್ನು ನಡೆಸಿ, ಆ ನದೀಜಲವೊಂದನ್ನೇ ಆಹಾರವಾಗಿ ತೆಗೆದುಕೊಂಡು
ಮನಸ್ಸಿನಲ್ಲಿದ್ದ ಕಾಮಾದಿದುರ್ಗುಣಗಳನ್ನು ನಿಶ್ಶೇಷವಾಗಿ ನೀಗಿ ದಾರೇಷ
ಣ, ಧನೇಷಣ, ಪುತ್ರೇಷಣಗಳೆಂಬ ಈಷಣತ್ರಯಗಳನ್ನೂ ತ್ಯಜಿಸಿ ಶುದ್ಧಮ
ನಸ್ಕನಾಗಿರುವನು. ಮತ್ತು ಆತನು ಎಷ್ಟುಕಾಲವಾದರೂ ನಿಶ್ಚಲವಾಗಿ ಕುಳಿ
ತಿರತಕ್ಕ ಆಸನಶಕ್ತಿಯನ್ನೂ, ಶ್ವಾಸಧಾರಣಶಕ್ತಿಯನ್ನೂ ಸ್ವಾಧೀನಪಡಿಸಿ
ಕೊಂಡು, ಷಡಿಂದ್ರಿಯಗಳನ್ನೂ ನಿಗ್ರಹಿಸಿರುವನು, ಶ್ರೀಹರಿಧ್ಯಾನವೊಂದರಲ್ಲಿ
ಯೇ ಮನಸ್ಸಿಟ್ಟು, ಆದರಬಲದಿಂದ ಸತ್ವಾದಿಗುಣಕಾರ್ಯಗಳಾದ ಕಾಮಾದಿಗ
ಳನ್ನೂ, ಮುಕ್ತಿಗೆ ಪ್ರತಿಬಂಧಕಗಳಾದ ಕರ್ಮಫಲಾಪಗಳನ್ನೂ ನೀಗಿರುವನು.
ಮತ್ತು ಈಗ ಧೃತರಾಷ್ಟ್ರನು, ಇಂದ್ರಿಯಗಳು ಮನಸ್ಸನ್ನಾಕರ್ಷಿಸದಂತೆ
ಅವುಗಳನ್ನು ವಿಜ್ಞಾನಸ್ವರೂಪನಾದ ಕ್ಷೇತ್ರಜ್ಞನಲ್ಲಿಸೇರಿಸಿ, ಘಟವುನಷ್ಟ
ವಾದಮೇಲೆ ತದಂತರ್ಗತವಾದ ಆಕಾಶವು ಮಹಾಕಾಶದೊಡನೆ ಸಾಮ್ಯವ
ನ್ನು ಹೊಂದುವಂತೆ, ಆ ಕ್ಷೇತ್ರಜ್ಞನಿಗೆ ಉಪಾಧಿಭೂತವಾದ ದೇಹಸಂಬಂ
ಧವನ್ನು ಬಿಡಿಸಿದನಮೇಲೆ ಆದಕ್ಕಾಧಾರಭೂತವಾದಪರಬ್ರಹ್ಮನೊಡನೆಸಮಾ
ನಾಕಾರತ್ವವುಂಟಾಗುವುದೆಂಬ ತತ್ತ್ವಜ್ಞಾನವನ್ನು ಹೊಂದಿ, ನಿರಾಹಾರನಾ
ಗಿ, ರಜಸ್ಸು ಮೊದಲಾದ ಮಾಯಾಗುಣಗಳಿಂದ ಹುಟ್ಟತಕ್ಕ ರಾಗದ್ವೇಷಾದಿ
ಗಳೊಂದಕ್ಕೂ ಅವಕಾಶಕೊಡದೆ, ಇಂದ್ರಿಯಚಾಪಲ್ಯಗಳಿಲ್ಲವನ್ನೂ ತಡೆದು,
ಮರದ ತುಂಡಿನಂತೆ ನಿಶ್ಚೇಷ್ಟನಾಗಿರುವನು. ಹೀಗೆ ಕರ್ಮಸಂಬಂಧವನ್ನೇ
ತ್ಯಜಿಸಿ, ದೃಢನಿಶ್ಚಯದಿಂದಿರುವ ಆತನ ಸಮಾಧಿಗೆಮಾತ್ರ ನೀನು ಎಷ್ಟು
ಮಾತ್ರವೂ ವಿಘ್ನವನ್ನುಂಟುಮಾಡಬಾರದು! ರಾಜೇಂದ್ರಾ! ಇಲ್ಲಿಂದ
ಐದನೆಯದಿನಕ್ಕೆ ಆತನು ತನ್ನ ದೇಹವನ್ನು ತನ್ನ ಯೋಗಾಗ್ನಿಯಿಂದಲೇ
ಭಸ್ಮಮಾಡುವನು. ಹೀಗೆ ಧೃತರಾಷ್ಟ್ರನ ದೇಹವು ಅವನ ಯೋಗಾಗ್ನಿ
ಯಿಂದ ಪರ್ಣಶಾಲಾಸಮೇತವಾಗಿ ದಗ್ಧವಾಗುತ್ತಿರುವುದನ್ನು ನೋಡಿಗಾಂ
ಧಾರಿಯೂ ಅದೇ ಅಗ್ನಿಯಲ್ಲಿ ಪ್ರವೇಶಿಸಿ ದೇಹತ್ಯಾಗವನ್ನು ಮಾಡುವಳು.

ಈ ಆಶ್ಚರ್ಯವನ್ನು ನೋಡಿ ವಿದುರನೂ ಕೂಡ, ದುಃಖಹರ್ಷಗಳಿಂದ ಕದಲಿ ದಮನಸ್ಸುಳ್ಳವನಾಗಿ, ಒಡನೆಯೇ ಆ ಸ್ಥಳವನ್ನು ಬಿಟ್ಟು,ತೀರ್ಥಯಾತ್ರಾರ್ಥ ವಾಗಿ ಹೊರಟುಬಿಡುವನು." ಎಂದು ನಾರದನು, ಧರ್ಮರಾಜನಿಗೆ ಮುಂದಿನ ವೃತ್ತಾಂತವನ್ನು ತಿಳಿಸಿ, ತುಂಬುರುಸಹಿತನಾಗಿ ಆಗಲೇ ಆಂತರಿಕ್ಷಕ್ಕೆ ಹಾರಿ ದನು. ಇತ್ತಲಾಗಿ ಧರ್ಮರಾಜನೂಕೂಡ ನಾರದನು ಹೇಳಿದ ವೃತ್ತಾಂತ ವನ್ನು ಕೇಳಿ,ಅದನ್ನೇ ಮನಸ್ಸಿನಲ್ಲಿ ದೃಢವಾಗಿಟ್ಟುಕೊಂಡು, ತನಗಿದ್ದ ಮ ನೋವ್ಯಥೆಯನ್ನು ನೀಗಿ ನಿಶ್ಚಿಂತನಾಗಿದ್ದನು. ಇಲ್ಲಿಗೆ ಹದಿಮೂರನೆಯ ಅಧ್ಯಾಯವು,

---

ಧರ್ಮರಾಜನು ದುಶ್ಶಕುನಗಳನ್ನು ಕಂಡು ಚಿಂತಾಕು ಲನಾಗಿದ್ದುದು. ಅರ್ಜುನಾಗಮನವು.

ಹಿಂದೆ ಅರ್ಜುನನು ದ್ವಾರಕೆಯಲ್ಲಿ ತನ್ನ ಬಂಧುಗಳನ್ನು ನೋಡಬೇ ಕೆಂದೂ, ಶ್ರೀಕೃಷ್ಣನ ಅದ್ಭುತಚಾರಿತ್ರಗಳನ್ನು ತಿಳಿಯಬೇಕೆಂದೂ, ಶ್ರೀಕೃಷ್ಣನೊಡನೆ ಅಲ್ಲಿಗೆ ಹೋದಮೇಲೆ, ಅಲ್ಲೆಯೇ ಕೆಲವು ತಿಂಗಳವರೆಗೆ ನಿಂತು ಬಿಟ್ಟನು. ಇಷ್ಟರಲ್ಲಿ ಇತ್ತಲಾಗಿ ಧರ್ಮರಾಜನಿಗೆ ಕೆಲವು ದುಶ್ಶಕುನಗಳು ಕಂಡು ಬಂದುವು. ಅರ್ಜುನನು ಬಹುಕಾಲದವರೆಗೆಹಿಂತಿರುಗಿ ಬಾರದಿದ್ದುದ ನ್ನೂ, ಇತ್ತಲಾಗಿ ದುರ್ನಿಮಿತ್ತಗಳು ತಲೆದೋರುತ್ತಿರುವುದನ್ನೂ ನೋಡಿ ಧರ್ಮರಾಜನಿಗೆ ಮನಸ್ಸಿನಲ್ಲಿ ಚಿಂತೆಯು ಹುಟ್ಟಿತು. ಕಾಲಸ್ಥಿತಿಯೂ ಕ್ರೂರವಾಗಿ ಪರಿಣಮಿಸುತ್ತ ಬಂದಿತು. ಋತುಧರ್ಮಗಳೆಲ್ಲವೂ ವ್ಯತ್ಯಸ್ತವಾಗಿ ಕಂಡುಬಂದುವು. ಮನುಷ್ಯರೆಲ್ಲರೂ ಕ್ರೌರ್ಯಲೋಭಾದಿದುರ್ಗುಣಗಳಲ್ಲಿಯೇ ವಿಶೇಷಾಸಕ್ತಿಯುಳ್ಳವರಾಗಿ, ದುಷ್ಕಾರ್ಯಗಳಲ್ಲಿ ಪ್ರವರ್ತಿಸುತ್ತಿದ್ದರು. ವ್ಯವ ಹಾರಗಳೆಲ್ಲವೂ ಮೋಸದಿಂದಲೇ ನಡೆಯುತಿದ್ದುವು. ಮಿತ್ರವರ್ಗದಲ್ಲಿಯೂ ಕೂಡ ಪರಸ್ಪರವಂಚನೆಗಳು! ಹೆಚ್ಚಿ ಹೋದುವು. ತಂದೆತಾಯಿಗಳಿಗೆ ಮಕ್ಕ ಳಲ್ಲಿ ವಾತ್ಸಲ್ಯವು ತಪ್ಪಿತು. ಮಿತ್ರರಲ್ಲಿಯೂ, ಸಹೋದರರಲ್ಲಿಯೂ,ದಂಪತಿ ಗಳಲ್ಲಿಯೂ ಪರಸ್ಪರಕಲಹವು ಹೆಚ್ಚಿತು. ತಂದೆತಾಯಿಗಳು ಕನ್ಯಾವಿಕ್ರ ಯದಲ್ಲಿ ಪ್ರವರ್ತಿಸುತಿದ್ದರು. ಮಕ್ಕಳು 'ವೃದ್ಧರಾದ ತಂದೆತಾಯಿಗಳನ್ನು

ಪೋಷಿಸದೆ ನಿರಾಕರಿಸುತಿದ್ದರು. ಬ್ರಾಹ್ಮಣರು ವೇದಾಧ್ಯಯನಗಳನ್ನು ಬಿಟ್ಟುಬಿಟ್ಟರು. ಶೂದ್ರರು ವೇದಪಠನಕ್ಕೆ ತೊಡಗಿದರು. ಇವೆಲ್ಲವನ್ನೂ ನೋಡಿ ಧರ್ಮರಾಜನಿಗೆ ಮನಸ್ಸಿನಲ್ಲಿ ಬಹಳವಾದ ಚಿಂತೆಯು ಹುಟ್ಟಿತು. ಆ ಧರ್ಮಪ್ರಚುರಗಳಾದ ಈ ದುರ್ನಿಮಿತ್ತಗಳೆಲ್ಲವೂ ಕಾಲವೈಪರೀತ್ಯದಿಂದಲೇ ತಲೆದೋರುತ್ತಿರುವುವೆಂದು ತಿಳಿದು, ಧರ್ಮರಾಜನು ತನ್ನ ತಮ್ಮನಾದ ಭೀಮನನ್ನು ಕರೆದು, "ವತ್ಸ ಭೀಮಾ! ಅರ್ಜುನನು ಬಂಧುಗಳನ್ನು ನೋಡಿ ಬರುವುದಕ್ಕಾಗಿಯೊ, ಶ್ರೀಕೃಷ್ಣನ ಅದ್ಭುತಚರಿತ್ರಗಳನ್ನು ತಿಳಿಯುವುದಕ್ಕಾಗಿಯೂ ದ್ವಾರಕೆಗೆ ಹೋಗಿ ಇದುವರೆಗೆ ಪೂರ್ಣವಾಗಿ ಏಳುತಿಂಗಳುಗಳು ಕಳೆದುಹೋದುವು. ಇಷ್ಟುದಿನಗಳಾದರೂ ಅವನು ಹಿಂತಿರುಗಿ ಬಾರದಿರುವುದಕ್ಕೆ ಕಾರಣವೇನೆಂದು ತಿಳಿಯಲಿಲ್ಲ. ಯೋಚಿಸಿ ನೋಡಿದರೆ ದೇವರ್ಷಿಯಾದ ನಾರದನು ನಮಗೆ ಸೂಚಿಸಿಹೋದ ಕಾಲವು ಈಗಲೇತಲೆದೋರಿರುವಂತೆ ಕಾಣುವುದು. ಹಾಗಿದ್ದರೆ ಪೂಜ್ಯನಾದ ಶ್ರೀಕೃಷ್ಣನು ಲೀಲಾರ್ಥವಾಗಿ ಗ್ರಹಿಸಿದ ತನ್ನ ದೇಹವನ್ನು! ಬಿಟ್ಟು ಹೋಗುವಪ್ರಯತ್ನದಲ್ಲಿರಬೇಕಲ್ಲವೆ? ಭೀಮಾ! ನಮಗೆ ಈ ರಾಜಸಂಪತ್ತೂ, ಈ ರಾಜ್ಯವೂ, ಈ ಪತ್ನಿಯೆರೂ, ಈ ನಮ್ಮ ಪ್ರಾಣಗಳೂ, ಕುಲವೂ, ಪ್ರಜೆಗಳೂ, ಇದುವರೆಗೆ ನಮಗುಂಟಾದ ಶತ್ರುಜಯವೂ, ನಮಗೆ ಮುಂದೆ ಉತ್ತಮಲೋಕಪ್ರಾಪ್ತಿಗೆ ಬೇಕಾದ ಯಜ್ಞಯಾಗಾದಿಗಳನ್ನು ನಡೆಸತಕ್ಕ ಸಾಮರ್ಥ್ಯವೂ, ಆ ಶ್ರೀಕೃಷ್ಣನ ಪರಮಾನುಗ್ರಹಬಲದಿಂದ ಬಂದುದಲ್ಲದೆ ಬೇರೆಯಲ್ಲ. ಆ ಶ್ರೀಕೃಷ್ಣನಿಗೆ ಅಪಾಯವೇನಾದರೂ ಉಂಟಾಗಿರಬಹುದೋ ಎಂದು ನನ್ನ ಮನಸ್ಸು ಬಹಳವಾಗಿ ತತ್ತಳಿಸುತ್ತಿರುವುದು. ವತ್ಸ ಭೀಮಾ! ಇದೋ! ಆಕಾಶದಲ್ಲಿಯೂ, ಭೂಮಿಯಲ್ಲಿಯೂ, ಆಗಾಗ ನನ್ನ ದೇಹದಲ್ಲಿಯೂ, ತಲೆದೋರುತ್ತಿರುವ ಭಯಂಕರಗಳಾದ ದುರ್ನಿಮಿತ್ತಗಳನ್ನು ನೋಡಿದೆಯಾ? ಇವೆಲ್ಲವೂ ನನ್ನ ಬುದ್ಧಿಯನ್ನು ಬಹಳವಾಗಿ ಕಳವಳಗೊಂಡಿಸುತ್ತಿರುವುವು. ಇದೋನೋಡು! ಈ ನನ್ನ ಎಡಗಣ್ಣು, ಎಡತೋಳು, ಎಡದತೊಡೆ, ಇವೆಲ್ಲವೂ ಕ್ಷಣಕ್ಷಣಕ್ಕೂ ಅದಿರುತ್ತಿರುವುವು. ಇದಕ್ಕಿದ್ದ ಹಾಗೆ ನನ್ನ ಹೃದಯವು ನಡುಗುತ್ತಿರುವುದು. ಇವೆಲ್ಲವನ್ನೂ ನೋಡಿದರೆ ಶೀಘ್ರದಲ್ಲಿಯೇ ನಮಗೆ ಏನೋ ಒಂದು

ಮಹಾವಿಪತ್ತು ಸಂಭವಿಸಬಹುದೆಂದೆಣಿಸಬೇಕಾಗಿದೆ. ಅದೋ! ಅತ್ತಲಾಗಿ ನೋಡು!ಒಂದು ನರಿಯು ಸೂರ್ಯನಿಗಿಬಿರಾಗಿ ನಿಂತು ಬಾಯಿಂದ ಬೆಂಕಿಯು ರಿಯನ್ನು ಕಕ್ಕುತ್ತ, ಅತಿಭಯಂಕರಧ್ವನಿಯಿಂದ ಅರಚುತ್ತಿರುವುದು ! ಇತ್ತ ಲಾಗಿ ಒಂದುನಾಯಿಯು ನಿರ್ಭಯವಾಗಿ ಬಂದು ನನ್ನ ಮುಂದೆ ನಿಂತು ಗೋಳಿಡುವುದನ್ನು ನೋಡಿದೆಯಾ? ಗೋವು ಮೊದಲಾದ ಪ್ರಶಸ್ತಮೃಗಗ ಳೆಲ್ಲವೂ ನನ್ನನ್ನು ಅಪ್ರದಕ್ಷಿಣವಾಗಿ ಸುತ್ತುತ್ತಿರುವುವು ! ಆನೆ ಕುದುರೆ ಮೊದಲಾದ ನಮ್ಮ ವಾಹನಗಳೆಲ್ಲವೂ ಏನೋ ದುಃಖದಿಂದ ಗೋಳಿಡು ವಂತೆ ಕಣ್ಣುಗಳಲ್ಲಿ ನೀರನ್ನು ತುಳುಕಿಸುತ್ತಿರುವುವು. ಇತ್ತಲಾಗಿ ಒಂದು ಪಾರಿವಾಳವು ಯಮದೂತನಂತೆ ಮುಂದೆ ಬಂದು,ಅರ್ತಧ್ವನಿಯಿಂದಕೂಗು ತ್ತ,ನನ್ನ ಮನಸ್ಸನ್ನು ನಡುಗಿಸುತ್ತಿರುವುದು.ಇದೋ!ಇಲ್ಲಿ ಎರಡುಗೂಬೆಗಳು ಹಗಲಲ್ಲೆಯೂ ನಿಬ್ರೆಮಾಡದೆ, ಇಬರಿದಿರಾಗಿ ಕೂಳಿತು, ಒಂಬಾದಮೇಲೆ ಮು ತ್ತೊಂದು ಕ್ರೂರಧ್ವನಿಯಿಂದ ಊಳಿಡುತ್ತಿರುವುನ್ನು ನೋಡಿದೆಯಾ? ಇವೆರ ಡೂ ಸೇರಿ ಈ ನಮ್ಮ ದೇಶವನ್ನು ಹಾಳುಮಾಡುವುದಕ್ಕಾಗಿ ಒಂದಕ್ಕೊಂದು ಮಾತಾಡಿಕೊಳ್ಳುವಂತೆ ತೋರುವುದು. ದಿಕ್ಕುಗಳೆಲ್ಲವೂ ಕೆಂದೂಳಿಯಿಂದ ಕವಿದಿರುವುವು ನೋಡು! ಸಮಸ್ತಕುಲಪರ್ವತಗಳೊಡನೆ ಭೂಮಿಯು ನಡು ಗುತ್ತಿರುವುದು! ಅಕಾಲಮೇಘಸಮೂಹಗಳೊಡನೆ ಕ್ರೂರವಾದ ಸಿಡಿಲು ಬಿಳುತ್ತಿರುವುದು ನೋಡು!ಸೂರ್ಯನ ಸುತ್ತಲೂ ಪರಿವೇಷವು ಕಾಣುವುದನ್ನು ನೋಡು! ಗಾಳಿಯು ಅತಿಕ್ರೂರವಾಗಿ ಬೀಸುತ್ತ,ನೆಲದ ದೂಳನ್ನೆಬ್ಬಿಸಿ, ಅಂ ತರಿಕ್ಷವೆಲ್ಲವನ್ನೂ ಕತ್ತಲೆಕವಿದಂತೆ ಮಾಡುತ್ತಿರುವುದು ನೋಡು! ಮೇಘಗ ಳು ಸುತ್ತಲೂ ಭಯಂಕರವಾದ ರಕ್ತಧಾರೆಯನ್ನು ವರ್ಷಿಸುತ್ತಿರುವುವು. ಸೂರ್ಯನು ಕಾಂತಿಗುಂದುತ್ತಿರುವನು.ಆಕಾಶದಲ್ಲಿ ಗ್ರಹಗಳು ಒಂದಕ್ಕೊಂದು ಹೋರಾಡುತ್ತಿರುವುವು. ಭೂಮ್ಯಾಕಾಶಗಳೆರಡೂ ಅಲ್ಲಲ್ಲಿ ಗುಂಪುಗಟ್ಟಿದ ಪಿ ಶಾಚಗಣಗಳಿಂದ ದಹಿಸಲ್ಪಡುವಂತೆ ಕಾಣುವುವು ನೋಡು! ನದೀನದಿಗಳೂ ಸರೋವರಗಳೂ, ಪ್ರಾಣಿಗಳ ಮನಸ್ಸೂ ಬಹಳವಾಗಿ ಕಲಗಿರುವುವು. ಅಗ್ನಿ ಕಾರ್ಯಗಳಲ್ಲಿ ಆಜ್ಯದಿಂದ ಹೋಮಮಾಡಿದಾಗಲೂ ಅಗ್ನಿಯು ಜ್ವಲಿಸುವುದಿ ಲ್ಲ.ಆಹಾ! ಕಾಲಗತಿಯು ಹೇಗಿರುವುದೋ ತಿಳಿಯಲಿಲ್ಲವಲ್ಲಾ! ಎಳಗರುಗಳು

ತಾಯಿಯ ಮೊಲೆಯನ್ನು ಕುಡಿಯಲೊಲ್ಲವು! ಹಸುಗಳು ತಮ್ಮ ಕರುಗಳಿಗೆ ಹಾಲನ್ನು ಸೊರೆಬಿಡದೆ ಒದೆದು ನೂಕುವುವು!ಗೋವುಗಳು ಕಣ್ಣೀರುಬಿಟ್ಟು ಅಳುತ್ತಿರುವುವು.ವೃಷಭಗಳು ಮಂದೆಯಲ್ಲಿಯೂ ಸಂತೋಷವಿಲ್ಲದೆ ಕೊರಗುವಂತೆ ಕಾಣುವುವು. ದೇವಾಲಯಗಳಲ್ಲಿರುವ ದೇವತಾಪ್ರತಿಮೆಗಳೂ ಕೂಡ ಕಣ್ಣೀರುಬಿಡುವಂತೆಯೂ,ಮೈಯಲ್ಲಿ ಬೆವರನ್ನು ಸುರಿಸುವಂತೆಯೂ,ಇದ್ದಕ್ಕಿದ್ದಹಾಗೆ ಮೇಲೆ ಹಾರುವಂತೆಯೂ ಕಾಣುತ್ತಿರುವುವು ಇದೋ! ಈ ನಮ್ಮ ಜನಪದಗಳೂ, ಗ್ರಾಮಗಳೂ, ಪಟ್ಟಣಗಳೂ,ಉದ್ಯಾನವನಗಳೂ, ಸರೋವರಗಳೂ, ಋಷ್ಯಾಶ್ರಮಗಳೂ, ಗಣಿಗಳೂ, ಎಂದಿನಂತೆ ಉಲ್ಲಾಸವಿತಿಷ್ಟವಾಗಿಲ್ಲದೆ ಕೇವಲಕಾಂತಿಹೀನವಾಗಿರುವುವು. ನಮಗೆ ಯಾವ ಅನರ್ಥಕ್ಕಾಗಿ ಈ ದುರ್ನಿಮಿತ್ತಗಳೆಲ್ಲವೂ ಕಾಣುವುವೋ ತಿಳಿಯಲಿಲ್ಲ! ಇಷ್ಟೊಂದು ಭಯಂಕರದುರ್ನಿಮಿತ್ತಗಳನ್ನು ನೋಡಿದರೆ, ಅಸಾಧಾರಣಶುಭಲಕ್ಷಣಗಳುಳ್ಳ ಆ ಶ್ರೀಕೃಷ್ಣನ ಪಾದಪದ್ಮಗಳಿಂದ ತುಳಿಯಲ್ಪಡುವ ಭಾಗ್ಯವು ಇನ್ನು ಮೇಲೆ ಈ ಭೂಮಿದೇವಿಗೆ ಲಭಿಸಲಾರದೆಂದೇ ಎಣಿಸಬೇಕಾಗಿದೆ" ಎಂದನು. ಹೀಗೆ ಧರ್ಮಪುತ್ರನು ಮಹೋತ್ಪಾತಗಳನ್ನು ನೋಡಿದ ಭಯದಿಂದ ತತ್ತಳಿಸುತ್ತಿರುವ ಸಮಯಕ್ಕೆ ಸರಿಯಾಗಿ, ದ್ವಾರಕೆಯಿಂದ ಅರ್ಜುನನು ಹಿಂತಿರುಗಿ ಬಂದು,ಧರ್ಮರಾಜನ ಪಾದಗಳನ್ನು ಹಿಡಿದು ನಮಸ್ಕರಿಸಿದನು.ಆದರೆ ಆಗ ಅರ್ಜುನನ ಸ್ಥಿತಿಯು ಎಂದಿನಂತೆ ಹರ್ಷೋತ್ಸಾಹವಾಗಿರಲಿಲ್ಲ ಏನೋಬಹಳ ದುಃಖಾತುರನಾದಂತೆ ಧರ್ಮರಾಜನ ಮುಂದೆ ತಲೆಯನ್ನು ತಗ್ಗಿಸಿ, ಪಳಪಳನೆ ಕಣ್ಣೀರುಬಿಡುತ್ತ ನಿಂತಿದ್ದನು. ಹೀಗೆ ತನ್ನ ಪ್ರಿಯಸಹೋದರನಾದ ಅರ್ಜುನನು,ಕಳೆಗುಂದಿದ ಮುಖದಿಂದ ದುಃಖಾಕುಲನಾಗಿ ನಿಂತಿರುವುದನ್ನು ನೋಡಿದೊಡನೆ, ಧರ್ಮರಾಜನಿಗೆ, ಹಿಂದೆ ನಾರದನು ಹೇಳಿ ಹೋದ ಮಾತು ನೆನಪಿಗೆ ಬಂದಿತು. ಅತನ ಮನಸ್ಸಿಗೂ ಕಳವಳವು ಹುಟ್ಟಿತು.ಹೀಗೆ ಚಿಂತಾಕುಲನಾದ ಧರ್ಮಪುತ್ರನು,ತನ್ನ ಮಿತ್ರಮಂಡಲಿಯೆಲ್ಲವೂ ಕೇಳುತ್ತಿರುವ ಹಾಗೆ ಅರ್ಜುನನನ್ನು ಕುರಿತು ಪ್ರಶ್ನಮಾಡುವನು. ‘‘ವತ್ಸ ಅರ್ಜುನಾ! ಇದೇನಿದು! ನೀನು ಇಷ್ಟುದುಃಖಾಕುಲನಾಗಿರುವುದಕ್ಕೆ ಕಾರಣವೇನು ? ದ್ವಾರಕೆಯಲ್ಲಿ ನಮ್ಮ ಬಂಧುಗಳೆಲ್ಲರೂ ಕ್ಷೇಮದಿಂದಿರುವರಷ್ಟೆ? ಮಧುಗಳು, ಭೋ

ಜರು, ದಶಾರ್ಹರು, ಸಾತ್ವತರು, ಅಂಧಕರು, ವೃಷ್ಣಿಗಳು, ಇವರೆಲ್ಲರೂ ಸು
ಖದಿಂದಿರುವರಷ್ಟೆ? ನಮ್ಮ ಮಾತಾಮಹನಾದ ಶೂರನಿಗೆ ಕ್ಷೇಮವಷ್ಟೆ? ನ
ಮ್ಮ ಸೋದರಮಾವನಾದ ವಸುದೇವನು, ದೇವಭಾಗನೇ ಮೊದಲಾದ ತ
ನ್ನ ಒಂಭತ್ತುಮಂದಿ ಸಹೋದರರೊಡನೆ ಕ್ಷೇಮದಿಂದಿರುವನಷ್ಟೆ? ಉಗ್ರಸೇ
ನನ ತಂಗಿಯರಾಗಿಯೂ, ನಮಗೆ ಸೋದರದತ್ತೆಯಾಗಿಯೂ ಇರುವ ದೇವಕಿ
ಮೊದಲಾದ ವಸುದೇವನ ಏಳುಮಂದಿ ಪತ್ನಿಯರೂ ತಮ್ಮ ಮಕ್ಕಳೊಡನೆ
ಯೂ, ಸೊಸೆಯರೊಡನೆಯೂ ಕ್ಷೇಮದಿಂದಿರುವರಷ್ಟೆ? ದುರಾತ್ಮನಾದ ಕಂ
ಸನನ್ನು ಪುತ್ರನನ್ನಾಗಿ ಪಡೆದು ದುಃಖಕ್ಕೀಡಾದ ಉಗ್ರಸೇನನೂ, ಅವನ ತ
ಮ್ಮನಾದದೇವಕನೂ ಜೀವಿಸಿರುವರಷ್ಟೆ? ಹೃದೀಕಪುತ್ರನಾದ ಅಕ್ರೂರನೂ
ಜಯಂತಾದಿಗಳೂ, ವಸುದೇವಕುಮಾರರಾದ ಶತ್ರುಜಿತ್ತು ಮೊದಲಾದವರೆಲ್ಲ
ರೂ ಸುಖವಾಗಿರುವರಷ್ಟೆ? ಅರ್ಜುನಾ! ಯಾದವಪ್ರಭುವಾದ ಬಲರಾಮ
ನಿಗೂ, ಯಾದವವೀರರಲ್ಲಿ ಮಹಾರಥನೆನಿಸಿದ ಪ್ರದ್ಯುಮ್ನನಿಗೂ, ಅನಿರುದ್ಧನಿ
ಗೂ ಕ್ಷೇಮವಷ್ಟೆ? ಜಾಂಬವತೀಪುತ್ರನಾದ ಸಾಂಬನೂ, ಸುಷೇಣನೂ, ಚಾರು
ಧೇಷ್ಣನೂ ಕುಶಲಿಗಳಷ್ಟೆ? ಕೃಷ್ಣಪುತ್ರರಲ್ಲಿ ಮುಖ್ಯರಾದ ಋಷಭಾದಿಗಳೆಲ್ಲ
ರೂ ತಮ್ಮ ತಮ್ಮ ಮಕ್ಕಳೊಡನೆ ಸುಖದಿಂದಿರುವರಷ್ಟೆ? ಭಗವಂತನಾದ ಕೃ
ಷ್ಣನಿಗೆ ಅನುಚರರಾಗಿ ವರ್ತಿಸುತ್ತಿರುವ ಉದ್ಧವಶ್ರುತದೇವರೂ, ಯಾದವೋ
ತ್ತಮರಾದ ಸುನಂದನನಂದಾದಿಗಳೂ ಕುಶಲಿಗಳಷ್ಟೆ? ಶ್ರೀಕೃಷ್ಣ ಬಲರಾಮ
ರ ಬಾಹುಬಲಾಶ್ರಯದಿಂದ ಹೆಮ್ಮೆಗೊಂಡ ಯಾದವರೆಲ್ಲರೂ ಸುಖದಲ್ಲಿರು
ವರಷ್ಟೆ? ವತ್ಸನೆ! ಅವರೆಲ್ಲರೂ ನಮ್ಮಲ್ಲಿ ಒಂದೇವಿಧವಾದ ಪ್ರೇಮವನ್ನಿಟ್ಟು,
ಆಗಾಗ ನಮ್ಮ ಕ್ಷೇಮವನ್ನು ವಿಚಾರಿಸುತ್ತಿರುವರೆ? ವತ್ಸ ಕಿರೀಟೀ! ಮುಖ್ಯವಾಗಿ
ಈ ವೃತ್ತಾಂತವನ್ನು ಮೊದಲುತಿಳಿಸು! ಜ್ರಾಹ್ಮಣಕುಲಕ್ಕೆ ಹಿತನಾಗಿಯೂ,
ಭಕ್ತವತ್ಸಲನಾಗಿಯೂ ಇರುವ ಭಗವಂತನಾದ ಶ್ರೀಕೃಷ್ಣನು, ಸುಧರ್ಮ್ಮಯ
ಲ್ಲಿ ತನ್ನ ಮಿತ್ರವರ್ಗದೊಡನೆ ಸಂತೋಷದಿಂದಿರುವನಷ್ಟೆ? ಸಮಸ್ತಲೋಕ
ಕ್ಕೂ, ಕ್ಷೇಮವನ್ನೂ, ಸುಖವನ್ನೂ, ಅಭ್ಯುದಯವನ್ನೂ ಕೈಗೂಡಿಸುವುದಕ್ಕಾ
ಗಿಯೇ ಆದಿಪುರುಷನಾದ ಆ ಮಹಾತ್ಮನು ಬಲರಾಮಸಹಿತನಾಗಿ ಯದುಕ
ಲಾಂಭೋಧಿಯಲ್ಲಿ ಅವತರಿಸಿರುವನು. ಯಾವನ ಭುಜದಂಡದಿಂದ ರಕ್ಷಿತವಾ

ದ ದ್ವಾರಕೆಯಲ್ಲಿರುವುದರಿಂದಲೇ,ಯಾದವರೆಲ್ಲರೂ ಲೋಕಪೂಜ್ಯರೆನಿಸಿ,ಯ
ಕ್ಷರಂತೆ ಪರಮಾನಂದವಿಶಿಷ್ಟರಾಗಿ ಮೆರೆಯುತ್ತಿರುವರೋ, ಯಾವ ಮ
ಹಾತ್ಮನ ಪಾದಸೇವೆಯೊಂದೇ ತಮಗೆ ಮುಖ್ಯಕರ್ಮವೆಂದು ನಂಬಿದುದರಿಂ
ದ, ಸತ್ಯಭಾಮೆ ಮೊದಲಾದ ಅಷ್ಟಮಹಿಷಿಯರೂ,ಹದಿನಾರುಸಾವಿರಮಂ
ದಿ ಗೋಪಿಯರೂ, ಆ ಭಗವಂತನು ಯುದ್ಧಭೂಮಿಯಲ್ಲಿ ದೇವತೆಗಳನ್ನು ಜಯಿಸಿ
ತಂದ ಪಾರಿಜಾತಾದಿಗಳಿಂದ, ವಜ್ರಧಾರಿಯಾದ ಮಹೇಂದ್ರನ ಪತ್ನಿಯರಿಗೆ
ಯೋಗ್ಯಗಳಾದ ಅಭೀಷ್ಟವಸ್ತುಗಳೆಲ್ಲವನ್ನೂ ಪಡೆಯುತ್ತಿರುವರೋ,ಯಾವ
ಪುರುಷೋತ್ತಮನ ಭುಜಬಲಾಶ್ರಯದಿಂದ ಯಾದವರು ದೇವತೆಗಳನ್ನು ಜ
ಯಿಸಿ ಬಲಾತ್ಕಾರದಿಂದಸಾಗಿಸಿತಂದ ದೇವಯೋಗ್ಯವಾದ ಸುಧರ್ಮಾಸಭೆಯ
ನ್ನು ಆಗಾಗ ತಮ್ಮ ಪಾದಗಳಿಂದ ನಿರ್ಭಯವಾಗಿ ತುಳಿದು ನಿಲ್ಲುವರೋ,
ಅಂತಹ ಶ್ರೀಕೃಷ್ಣಮೂರ್ತಿಯೂ ಕ್ಷೇಮದಿಂದಿರುವನಷ್ಟೆ?ವತ್ಸ!ದ್ವಾರಕೆ
ಯಲ್ಲಿ ನೀನೂ ಇದುವರೆಗೆ ಕ್ಷೇಮದಿಂದಿದ್ದೆಯಷ್ಟೆ?ನಿನ್ನ ಮುಖವು ಹೇಗೋ
ಕಳೆಗುಂದಿದಂತೆ ತೋರುವುದು. ಈಗ ನಿನ್ನ ಮುಖದಲ್ಲಿ ಮೊದಲಿದ್ದ ತೇಜಸ್ಸೇ
ಕಾಣುವುದಿಲ್ಲ! ಅಲ್ಲಿದ್ದಾಗ ನಿನ್ನ ದೇಹಕ್ಕೆ ಆಲಸ್ಯವೇನೂ ಉಂಟಾಗಲಿಲ್ಲವ
ಷ್ಟೆ? ಅರ್ಜುನಾ! ನೀನು ಇಷ್ಟುದೀರ್ಘಕಾಲದವರೆಗೆ ಅಲ್ಲಿ ನಿಂತುದೇ ಸರಿ
ಯಲ್ಲ ! ಈ ಚಿರಪರಿಚಯದಿಂದ ಅಲ್ಲಿ ನಿನಗೆ ಯಾರಾದರೂ ತಕ್ಕ ಗೌರವವ
ನ್ನು ಕೊಡದೆ ಅವಮಾನಪಡಿಸಿರುವರೇನು ? ಅದೇನೂ ಇಲ್ಲವಷ್ಟೆ ? ನಿನ್ನ
ಮುಖವೇನೋ ಬಹಳವಾಗಿ ಕಳೆಗೆಟ್ಟಿರುವುದು! ನಮ್ಮ ಯೋಗ್ಯತೆಗೆ ಉಚಿತಗ
ಳಲ್ಲದ ಶಬ್ದಾದಿವಿಷಯಗಳಲ್ಲಿ ನೀನು ಸಿಕ್ಕಿಬಿದ್ದವನಲ್ಲವಷ್ಟೆ ? ಯಾರಿಗಾದರೂ
ಯಾಚಕರಿಗೆ ನೀನು,ಮೊದಲು ಅಸೆಯನ್ನು ತೋರಿಸಿ, ಆಮೇಲೆ ತಪ್ಪಿನಡೆಯ
ಲಿಲ್ಲವಷ್ಟೆ? ಆಶ್ರಿತರಕ್ಷಣೆಯಲ್ಲಿ ಪ್ರಸಿದ್ಧಿಗೊಂಡ ನೀನು ನಿನ್ನಲ್ಲಿಗೆ ಶರಣಾರ್ಥಿಗ
ಳಾಗಿ ಬಂದ, ಬಾಲಕರನ್ನಾಗಲಿ, ಗೋಬ್ರಾಹ್ಮಣರನ್ನಾಗಲಿ, ರೋಗಿಗಳ
ನ್ನಾಗಲಿ, ಸ್ತ್ರೀಯರನ್ನಾಗಲಿ ರಕ್ಷಿಸದೆ,ನಿರಾಕರಿಸಲಿಲ್ಲವಷ್ಟೆ? ಅಪರಿಗ್ರಾಹ್ಯ
ಳಾದ ಸ್ತ್ರೀಯನ್ನು ಪರಿಗ್ರಹಿಸುವುದಕ್ಕಾಗಲಿ,ಪರಿಗ್ರಾಹ್ಯಳಾದ ಹೆಂಗಸನ್ನು
ನಿರಾಕರಿಸುವುದಕ್ಕಾಗಲಿ ನೀನು ಪ್ರಯತ್ನಿಸಲಿಲ್ಲವಷ್ಟೆ? ನೀನು ದ್ವಾರಕೆಯಿಂದ
ಹೊರಟುಬರುವಾಗ ದಾರಿಯಲ್ಲಿ, ನಿನಗಿಂತಲೂ ಮೇಲೆನಿಸಿದವರಿಂದಾಗಲಿ,

ಹೀನಜನದಿಂದಾಗಲಿ ಪರಾಜಿತನಾಗಿ ಅವಮಾನಪಟ್ಟು ಬಂದೆಯೇನು ? ಅರ್ಜುನಾ! ಒಂದುವೇಳೆ ನೀನು ನಿನ್ನೊಡನೆ ಸಹಭೋಜನಕ್ಕೆ ಯೋಗ್ಯರಾದ ಬಾಲರನ್ನಾಗಲಿ, ವೃದ್ಧರನ್ನಾಗಲಿ ಅನಾದರಿಸಿ ಏಕಾಕಿಯಾಗಿ ಭುಜಿಸಿದೆಯೇನು? ಅಥವಾ ನಮ್ಮ ಕುಲಕ್ಕೆ ಯೋಗ್ಯವಲ್ಲದ ಹೀನಕಾರ್ಯವನ್ನೇನಾದರೂ ನಡೆಸಿಬಿಟ್ಟೆಯೇನು ? ಅಥವಾ ಇಂದೊಂದೂ ಇಲ್ಲದೆ ಪರಮಾಪ್ತನಾದ ಆ ಶ್ರೀ ಕೃಷ್ಣನನ್ನಗಲಿ ಬಂದುದಕ್ಕಾಗಿಯೇ ಹೀಗೆ ದುಃಖಿಸುತ್ತಿರುವೆಯಾ ? ಹಾಗಿಲ್ಲದಪಕ್ಷದಲ್ಲಿ ನಿನು ಹೀಗೆ ಕಳೆಗುಂದಿರುವುದಕ್ಕೆ ಕಾರಣವಿಲ್ಲ! ವತ್ಸಾ ! ಇದರ ಕಾರಣವೇನೆಂಬುದನ್ನು ಯಥಾಸ್ಥಿತವಾಗಿ ತಿಳಿಸು!" ಎಂದನು. ಇದು ಹದಿನಾಲ್ಕನೆಯ ಅಧ್ಯಾಯವು.

ಅರ್ಜುನನು ದ್ವಾರಕಾಪುರವೃತ್ತಾಂತವನ್ನು ಧರ್ಮರಾಜನಿಗೆ ತಿಳಿಸಿದುದು. ಪಾಂಡವನಿರ್ಗಮನವು

ಹೀಗೆ ತನ್ನಣ್ಣನಾದ ಧರ್ಮರಾಜನು ನಾನಾವಿಧ ವಿಕಲ್ಪಾಸ್ಪದವಾದ ತನ್ನ ರೂಪವನ್ನು ನೋಡಿ ಆತುರದಿಂದ ಪ್ರಶ್ನೆ ಮಾಡಲು, ಕೃಷ್ಣಸಖನಾದ ಅರ್ಜುನನು ಆ ಕೃಷ್ಣನನ್ನಗಲಿದ ದುಃಖದಿಂದ ಕೃಶನಾಗಿ ಪ್ರತ್ಯುತ್ತರವನ್ನು ಹೇಳಲಾರದೆ ಸುಮ್ಮನಿದ್ದನು. ದುಃಖಾತಿಶಯದಿಂದ ಬಾಯಾರಿ, ಎದೆಯೊಣಗಿ, ಕಾಂತಿಗುಂದಿದ್ದ ಅರ್ಜುನನು ತನ್ನ ಪ್ರಭುವಾದ ಕೃಷ್ಣನನ್ನೇ ಧ್ಯಾನಿಸುತ್ತ ಸಂಕಟದಿಂದ ಕೊರಗುತಿದ್ದು, ಕೊನೆಗೆ ತನ್ನ ದುಃಖವನ್ನು ಪ್ರಯತ್ನ ಪೂರ್ವಕವಾಗಿ ತಡೆದಿಟ್ಟುಕೊಂಡು, ಕೈಯಿಂದ ಕಣ್ಣೀರನ್ನೊರಸಿಕೊಳ್ಳುತ್ತ, ಪರೋಕ್ಷದಲ್ಲಿರುವಾಗಲೂ, ಆ ಕೃಷ್ಣನಲ್ಲಿ ತನಗಿರುವ ಉತ್ಕಟವಾದ ಸ್ನೇಹದಿಂದಲೂ, ಆತನ ವಿರಹವನ್ನು ಸಹಿಸಲಾರದ ಕಷ್ಟದಿಂದಲೂ ತತ್ತಳಿಸುತ್ತಿದ್ದನು. ಆ ಶ್ರೀಕೃಷ್ಣನು ಹಿಂದೆ ತನಗೆ ಸಾರಥ್ಯಾದಿಕಾರ್ಯಗಳನ್ನು ನಡೆಸಿದಾಗ, ಆತನು ತನ್ನಲ್ಲಿ ತೋರಿಸುತಿದ್ದ ಸಲಿಗೆಯನ್ನೂ, ಪ್ರೇಮವನ್ನೂ, ಹಿತೈಷಿತ್ವವನ್ನೂ ಬಾರಿಬಾರಿಗೂ ಸ್ಮರಿಸಿಕೊಂಡು ಶೋಕಿಸುತಿದ್ದನು. ಕೊನೆಗೆ ದುಃಖ ಬಾಷ್ಪವು ಬಂದೊತ್ತುವುದರಿಂದ ಗದ್ಗದಸ್ವರವುಳ್ಳವನಾಗಿ, ಅಣ್ಣನಾದ ಧರ್ಮರಾಜನನ್ನು ನೋಡಿ ಹೀಗೆಂದು ಪ್ರತ್ಯುತ್ತರವನ್ನು ಹೇಳತೊಡಗಿದನು

"ಅಣ್ಣಾ ! ನಾನೇನು ಹೇಳಲಿ ! ನಮಗೆ ಬಂಧುರೂಪದಿಂದಿದ್ದ ಕೃಷ್ಣನು ನಮ್ಮನ್ನು ವಂಚಿಸಿಹೊರಟು ಹೋದನು. ಬಹ್ಮಾದಿಗಳಿಗೂ ಆಶ್ಚರ್ಯವನ್ನುಂಟು ಮಾಡುತಿದ್ದ ನನ್ನ ತೇಜಸ್ಸನ್ನೂ ಅಪಹರಿಸಿಕೊಂಡು ಹೋದನು. ಪ್ರಾಣವಿಲ್ಲದ ದೇಹವು ಶವವೆನಿಸುವಂತೆ ಆ ಮಹಾತ್ಮನ ಕ್ಷಣವಿಯೋಗಮಾತ್ರದಿಂದಲೇ ಮನುಷ್ಯನು ಅಪ್ರಿಯದರ್ಶನವುಳ್ಳವನಾಗುವನು. ಅಣ್ಣಾ ! ಈಗ ನಾನು ಜೀವಚ್ಛವದಂತೆ ಕಾಣುವುದಕ್ಕೆ ಆ ಕೃಷ್ಣಮೂರ್ತಿಯೆ ವಿಯೋಗವೇ ಕಾರಣವು! ಯಾವ ಮಹಾನುಭಾವನ ಆಶ್ರಯಬಲದಿಂದ ಹಿಂದೆ ನಾನು ದ್ರುಪದನಗರಿಯಲ್ಲಿ ದ್ರೌಪದಿಗೆ ಸ್ವಯಂವರವು ನಡೆದಾಗ ಕಾಮಾತುರದಿಂದ ಕೊಬ್ಬಿ ಕಲಹಕ್ಕೆ ನಿಂತ ಅನೇಕದುಷ್ಟರಾಜರ ವೀರ್ಯವನ್ನಡಗಿಸಿ,ನಾರೇರಿಸಿದ ಧನುಸ್ಸಿನಿಂದ ಮತ್ಸ್ಯಯಂತ್ರವನ್ನು ಭೇದಿಸಿ, ದ್ರೌಪದಿಯನ್ನು ಸಾಧಿಸಿತಂದ ನೋ ಅಂತಹ ಮಹಾತ್ಮನು ಈಗ ನಮ್ಮನ್ನು ಬಿಟ್ಟುಹೊದನು. ಯಾವ ಮಹಾತ್ಮನ ಆಶ್ರಯಬಲದಿಂದಲೇ ನಾನು, ಅನೇಕ ದೇವಗಣಸಹಿತನಾದ ಇಂದ್ರನನ್ನು ಜಯಿಸಿ,ಖಾಂಡವವನವನ್ನು ಅಗ್ನಿದೇವನಿಗೊಪ್ಪಿಸಿದೆನೋ,ಯಾವ ಪುರುಷೋತ್ತಮನ ಕೃಪಾಬಲದಿಂದಲೇ ನಮಗೆ ಅತ್ಯಾಶ್ಚರ್ಯಕರವಾದ ಶಿಲ್ಪಚಾತುರ್ಯವುಳ್ಳ ಮಯಸಿರ್ಮಿತವಾದ ಸಭೆಯು ಲಭಿಸಿತೋ, ಯಾವನ ಕೃಪಾಬಲದಿಂದಲೇ ನಿನ್ನ ರಾಜಸೂಯಯಾಗದಲ್ಲಿ ದಿಕ್ಕುದಿಕ್ಕಿನಿಂದಲೂ ಅನೇಕರಾಜರು ನಿನಗೆ ಕಾಣಿಕೆಗಳನ್ನು ತಂದೊಪ್ಪಿಸಿದರೋ, ಆಕೃಷ್ಣನು ಈಗ ನಮ್ಮನ್ನು ಬಿಟ್ಟು ಹೊರಟುಹೋದನು. ಯಾವನ ತೇಜೋಬಲದಿಂದ ಹತ್ತು ಸಾವಿರಾನೆಯ ಬಲವುಳ್ಳ ಆರ್ಯನಾದ ಭೀಮನು, ಯಜ್ಞಕ್ಕೆ ಮೊದಲು ದಿಗ್ವಿಜಯಕ್ಕೆ ಹೊರಟಾಗ, ಜರಾಸಂಧನ ತಲೆಕಾಲುಗಳನ್ನು ಕತ್ತರಿಸಿ, ಆತನು ಭೈರವಬಲಿಗಾಗಿ ತಂದು ಸೆರೆಯಲ್ಲಿಟ್ಟಿದ್ದ ಅನೇಕರಾಜರನ್ನು ಬಿಡಿಸಿ, ಆದಕ್ಕಾಗಿ ಅವನು ಸಂಗ್ರಹಿಸಿದ್ದ ಅನೇಕದ್ರವ್ಯರಾಶಿಗಳನ್ನೂ ನಿನ್ನ ಯಜ್ಞಕ್ಕೆ ಕಾಣಿಕೆಯಾಗಿ ತಂದೊಪ್ಪಿಸುವಂತೆ ಮಾಡಿದನೋ, ಆ ಕೃಷ್ಣನು ಈಗ ನಮ್ಮನ್ನಗಲಿ ಹೋದನು. ಹಿಂದೆ ದುರಾತ್ಮರಾದ ದಶ್ಯಾಸನಾದಿಗಳು, ಯಾಗದಲ್ಲಿ ಮಂತ್ರಪೂತವಾದ ಜಲಾಭಿಷೇಕದಿಂದ ಪವಿತ್ರವಾಗಿಯೂ, ಸುಂದರವಾಗಿಯೂ ಇದ್ದ ನಿನ್ನ ಪತ್ನಿಯ ತಲೆತುರುಬನ್ನು ಹಿಡಿದು ಸಭೆಗೆಳೆದು ತಂದು

ಅವಳು ದೈನ್ಯದಿಂದ ಕಣ್ಣೀರುಬಿಟ್ಟು ಕಾಲಿಗೆಬಿದ್ದು ಪ್ರಾರ್ಥಿಸಿದರೂ ಬಿಡದೆ, ಅವಳಿಗೆ ಮಾನಭಂಗಮಾಡಿದುದನ್ನು ನೋಡಿ ಸಹಿಸಲಾರದೆ, ಯಾ[illegible]ತ್ಮನು ತನ್ನ ವೀರ್ಯಬಲದಿಂದಲೇ ಅವರನ್ನು ಕೊಲ್ಲಿಸಿ, ಅವರ ಪತ್ನಿಯ[illegible] ತಲೆಕೂದಲನ್ನು ಬಿಚ್ಚಿಸಿದನೋ, ಆ ಪುರುಷೋತ್ತಮನು ಈಗ ನಮ್ಮನ್ನಗಲಿ ಹೋದನು. ಹಿಂದೆ ನಮ್ಮ ಶತ್ರುವಾದ ದುರ್ಯೋಧನನ ಪ್ರೇರಣೆಯಮೇರೆಗೆ, ಸುಲಭಕೋಪಿಯಾದ ದುರ್ವಾಸನು ನಮ್ಮಲ್ಲಿಗೆ ಬಂದು, ನಾವಿದ್ದ ನಿರ್ಜನವಾದ ಅಡವಿಯಲ್ಲಿ ದಶಸಹಸ್ರಬ್ರಾಹ್ಮಣರಿಗೆ ಭೋಜನವನ್ನೊದಗಿಸಬೇಕೆಂದು ನಿರ್ಬಂಧಿಸಿದಾಗ, ಯಾವ ಮಹಾತ್ಮನು ನಾವು ತಿಂದುಳಿಸಿದ ಶಾಕಾನ್ನದಗುಳನ್ನು ತಿಂದು, ಆ ದುರ್ವಾಸನನ್ನು ಮಾತ್ರವಲ್ಲದೆ ಮೂರು ಲೋಕವನ್ನೂ ತೃಪ್ತಿಪಡಿಸಿ, ಆ ಮಹರ್ಷಿಯ ಶಾಪದಿಂದ ನಮಗುಂಟಾಗುತಿದ್ದ ಮಹಾವಿಪತ್ತನ್ನು ತಪ್ಪಿಸಿದನೋ, ಆ ಕೃಷ್ಣನು ಈಗ ನಮ್ಮನ್ನಗಲಿ ಹೋದನು. ಅಣ್ಣಾ! ಹಿಂದೆ ನಾನು ಯುದ್ಧದಲ್ಲಿ ರುದ್ರನಿಗೂ ಆಶ್ಚರ್ಯವನ್ನುಂಟುಮಾಡತಕ್ಕ ಮಹಾವೀರ್ಯವನ್ನು ತೋರಿಸಿ ಅವನಿಂದ ಪಾಶುಪತಾಸ್ತ್ರವನ್ನು ಪಡೆದು ಬಂದುದೂ, ದೇವಾದಿದೇವತೆಗಳಿಗೂ ಆಶ್ಚರ್ಯವುಂಟಾಗುವಂತೆ ಇದೋ! ಈಗ ಕಾಣುವ ಈ ದೇಹದಿಂದಲೇ ಹಿಂದೆ ನಾನು ಆ ದೇವೇಂದ್ರನ ಅರ್ಧಾಸನವನ್ನೇರಿ ಕುಳಿತಿದ್ದುದೂ, ಆ ತ್ರೈಕೃಷ್ಣನು ನಿಜತೇಜಸ್ಸನ್ನು ನನ್ನಲ್ಲಿರಿಸಿದುದರಿಂದಲೇಹೊರತು ಬೇರೆಯಲ್ಲ! ಹಿಂದೆ ನಾನು ದೇವಲೋಕದಲ್ಲಿ ವಿಹರಿಸುತಿದ್ದಾಗ, ದೇವತೆಗಳೆಲ್ಲರೂ ಕಾಲಕೇಯವಧಕ್ಕಾಗಿ, ಗಾಂಡೀವಯುಕ್ತವಾದ ನನ್ನ ಈ ಬಾಹುಯುಗ್ಮವನ್ನಾಶ್ರಯಿಸಿದುದೂಕೂಡ ಆ ತ್ರೈಕೃಷ್ಣನು ನನ್ನ ತೋಳುಗಳಲ್ಲಿ ತನ್ನ ವೀರ್ಯಲೇಶವನ್ನಿರಿಸಿದ್ದುದರಿಂದಲ್ಲದೆ ಬೇರೆಯಲ್ಲ! ಅಂತಹ ಕೃಷ್ಣನು ಈಗ ನಮ್ಮನ್ನಗಲಿ ನಿಜಲೋಕವನ್ನು ಸೇರಿಬಿಟ್ಟನು. ಎಲೈ ಆರ್ಯನೆ! ಮುಖ್ಯವಾಗಿ ಹಿಂದಿನಿಂದಲೂ ನಾನು ನಡೆಸಿದ ಒಂದೊಂದುಕಾರ್ಯವೂ ಆ ಕೃಷ್ಣಸಹಾಯದಿಂದಲ್ಲದೆ ಬೇರೆಯಲ್ಲ. ಹಿಂದಿನಯುದ್ಧದಲ್ಲಿ ಅತಿದುಸ್ತರವಾಗಿದ್ದ ಕೌರವಸೈನ್ಯವೆಂಬ ಮಹಾಸಮುದ್ರವನ್ನು ದಾಟಿದುದು, ಶತ್ರುರಾಜ್ಯಗಳಿಂದ ಬಹುದ್ರವ್ಯವನ್ನು ಸಂಗ್ರಹಿಸಿತಂದುದು, ವೈರಿರಾಜರ ಅಮೂಲ್ಯತೆರೋರತ್ನಗಳನ್ನು ಕಿತ್ತುತಂದುದು,

ಇವೆಲ್ಲಕ್ಕೂ ಆ ಶ್ರೀಕೃಷ್ಣನ ಸಹಾಯಬಲವೇ ಕಾರಣವು. ಅಂತಹ ಕೃಷ್ಣನು ಈಗ ನನ್ನ ಹೃದಯವನ್ನೆಳೆದುಕೊಂಡು ನನ್ನನ್ನಗಲಿ ಹೋದನು.ಹಿಂದಿನ ಯುದ್ಧದಲ್ಲಿ ಮಹಾರಥರಾದ ಅನೇಕವೀರಕ್ಷತ್ರಿಯರ ರಥಗಳಿಂದಲಂಕೃತವಾಗಿದ್ದ, ಭೀಷ್ಮ, ದ್ರೋಣ, ಕರ್ಣ, ಶಲ್ಯಾದಿ ಮಹಾವೀರರ ಸೈನ್ಯಗಳಲ್ಲಿ ಯಾವ ಮಹಾತ್ಮನು ನನಗೆ ಮುಂದಾಗಿ ನಿಂತು, ನಾನು ಬಾಣಪ್ರಯೋಗವನ್ನು ಮಾಡುವುದಕ್ಕೆವೊದಲು ತನ್ನ ದೃಷ್ಟಿಯಿಂದಲೇ ಆ ಶತ್ರುವೀರರ ಮನಸ್ಸನ್ನೂ, ತೇಜಸ್ಸನ್ನೂ, ಅವರ ಆಯುಸ್ಸನ್ನೂ ಅಪಹರಿಸಿ, ಮೃತಪ್ರಾಯರನ್ನಾಗಿ ಮಾಡುತಿದ್ದನೋ, ಆ ಕೃಷ್ಣನು ಈಗ ನನ್ನ ಹೃದಯವನ್ನಪಹರಿಸಿಕೊಂಡುಹೋದನು. ಹಿಂದಿನ ಯುದ್ಧದಲ್ಲಿ ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ, ಶಲ್ಯ, ಸೈಂಧವ, ತ್ರಿಗರ್ತ, ಬಾಹ್ಲೀಕಾದಿ ಕುರುವೀರರು, ನನ್ನ ಮೇಲೆ ಪ್ರಯೋಗಿಸಿದ ಮಹಾಪ್ರಭಾವವುಳ್ಳ ಬಾಣಗಳೆಲ್ಲವೂ, ಹಿರಣ್ಯಕಶಿಪುವಿನ ಶಸ್ತ್ರಘಾತಗಳು ನೃಸಿಂಹಭಕ್ತನಾದ ಪ್ರಹ್ಲಾದನನ್ನು ಮುಟ್ಟದಂತೆ, ಯಾವ ಮಹಾತ್ಮನ ಭುಜಾಶ್ರಯದಿಂದಲೇ ನನ್ನನ್ನು ಸ್ಪರ್ಶಿಸಲಾರದೆ ಹೋದುವೋ,ಆ ಕೃಷ್ಣನು ಈಗ ನನ್ನ ಹೃದಯವನ್ನೂ ಎಳೆದುಕೊಂಡು ನನ್ನನ್ನು ಬಿಟ್ಟುಹೋದನು. ಸಾಧುಗಳು ಮೋಕ್ಷಾಪೇಕ್ಷೆಯಿಂದ ಯಾವನ ಪಾದಕಮಲಗಳನ್ನು ಭಜಿಸುತ್ತಿರುವರೋ, ಯಾವನು ಆಶ್ರಿತರಿಗಾಗಿ ತನ್ನನ್ನೇ ಒಪ್ಪಿಬಿಡುವಷ್ಟು ಮಹೋದಾರಸ್ವಭಾವವುಳ್ಳವನೋ, ಅಂತಹ ಮಹಾತ್ಮನನ್ನು ಕುತ್ಸಿತಬುದ್ಧಿಯಾದ ನಾನು ನನಗೆ ಬಂಡಿಯಾಳನ್ನಾಗಿ ನಿಯಮಿಸಿದೆನು ಈ ನನ್ನ ಮಹಾಪರಾಧವನ್ನೂ ಮನಸ್ಸಿಗೆ ತಂದುಕೊಳ್ಳದೆ, ಯಾವಪುರುಷೋತ್ತಮನು, ಹಿಂದಿನ ಯುದ್ಧಕಾಲದಲ್ಲಿ ನನ್ನ ರಥಾಶ್ವಗಳು ಬಳಲಿ ನಾನು ನೆಲದಮೇಲೆ ನಿಂತಾಗ, ಶತ್ರುವೀರರು ನನ್ನನ್ನು ಹೊಡೆಯದ ಹಾಗೆ ಅವರ ಮನಸ್ಸಿಗೆ ಮೋಹವನ್ನು ಕವಿಸಿ, ನನ್ನನ್ನು ರಕ್ಷಿಸಿದನೋ, ಅಶ್ರೀಕೃಷ್ಣನು ಈಗ ನನ್ನ ಹೃದಯವನ್ನಪಹರಿಸಿದನು. ಅಣ್ಣಾ ! ಪುಣ್ಯಶ್ಲೋಕನಾದ ಆ ಶ್ರೀಕೃಷ್ಣನು, ಆಗಾಗ ಮಂದಹಾಸವಿತೀಷ್ಟಗಳಾದ ಪರಿಹಾಸವಾಕ್ಯಗಳನ್ನಾಡುತ್ತ, "ಓ ಪಾರ್ಥಾ ! ಓ ಅರ್ಜುನಾ ! ಓ ಪ್ರಿಯಸಖಾ ! ಓ ಕುರುನಂದನಾ!" ಎಂದು ಬಾಯಿತುಂಬ ನನ್ನನ್ನು ಕೂಗಿ ಕರೆಯುತಿದ್ದಾಗ,

ಆತನ ಬಾಯಿಂದ ಹೊರಟ ಮಧುರಾಕ್ಷರಗಳು ಈಗಲೂ ನನ್ನ ಮನಸ್ಸಿನಲ್ಲಿ ದೃಢವಾಗಿ ನಾಟಿರುವುವು. ಈಗ ಅವುಗಳನ್ನು ನೆನಸಿಕೊಂಡ ಮಾತ್ರಕ್ಕೆ ನನ್ನ ಹೃದಯವು ಹೊರಳುತ್ತಿರುವುದು. ಹಿಂದೆ ನಿದ್ರಾಹಾರವಿಹಾರಸಂಚಾರಗಳೇ ಮೊದಲಾದ ಒಂದೊಂದು ಕಾರ್ಯದಲ್ಲಿಯೂ ನಾನು ಆ ಮಹಾತ್ಮನೊಡನೆ ಸಮಭಾವದಿಂದ ವರ್ತಿಸುತಿದ್ದಾಗ,ಅಜ್ಞತೆಯಿಂದ ನಾನು ಎಷ್ಟೆಷ್ಟೋ ತಪ್ಪುಗಳನ್ನು ನಡೆಸಿ ಅವನನ್ನು ತಿರಸ್ಕರಿಸಿದ್ದರೂ ಕೂಡ, ಸುರಲೋಕನಾಥನಾದ ಆ ಪುರುಷೋತ್ತಮನು ಮಹಾಮಹಿಮೆಯುಳ್ಳವನಾದುದರಿಂದ, ಮಿತ್ರರ ತಪ್ಪನ್ನು ಮಿತ್ರನೂ, ಮಕ್ಕಳ ತಪ್ಪನ್ನು ತಂದೆಯೂ ಮನ್ನಿಸುವಂತೆ ನನ್ನ ಮಹಾಪರಾಧಗಳೆಲ್ಲವನ್ನೂ ಮನ್ನಿಸುತಿದ್ದನು. ಅಂತಹ ಕೃಷ್ಣನು ಈಗ ನನ್ನ ಹೃದಯವನ್ನಪಹರಿಸಿಕೊಂಡು ಹೋದನು. ಅಣ್ಣಾ ! ಇನ್ನು ಹೆಚ್ಚು ಮಾತಿನಿಂದೇನು? ಮುಖ್ಯವಾಗಿ ನಮಗೆ ಸರ್ವವಿಧದಲ್ಲಿಯೂ ಹಿತೈಷಿಯಾಗಿ, ಪಿತ್ರನಾಗಿ, ಪರಮಪ್ರಿಯನಾಗಿ, ಸರ್ವಚಾ ನನ್ನ ಹೃದಯದಲ್ಲಿ ನೆರಿದ್ದ ಪುರುಷೋತ್ತಮನಾದ ಶ್ರೀಕೃಷ್ಣನು,ಈಗ ನನ್ನನ್ನಗಲಿ ಹೋದನು ಅಮಹಾತ್ಮನು ನನ್ನನ್ನು ಬಿಟ್ಟು ನಿಜಲೋಕಕ್ಕೆ ಹೋದನೋಲೆ, ನಾನು ಅಕೃಷ್ಣನ ಭಾರ್ಯಾಜನನನ್ನು ರಕ್ಷಿಸುತ್ತ, ದ್ವಾರಕೆಯಿಂದ ಹೊರಟು ಈ ಕಡೆಗೆ ಬರುತ್ತಿರುವಾಗ, ಎಂಬಯಲ್ಲಿ ದುರ್ಜನರಾದ ಕೆಲವು ಗೋಪಾಲಕರು ನನ್ನನ್ನು ತಡೆದು ನಂತರು ಅಬಲೆಯಾದ ಹೆಂಗಸಿನಂತೆ ನಾನು ಅವರಿಂದ ನಿಮಿಷಮಾತ್ರದಲ್ಲಿ ಜಯಿಸಲ್ಪಟ್ಟೆನು ಅಣ್ಣಾ!ಆ ಮಹಾತ್ಮನ ಪ್ರಾಯೆಯನ್ನು ನೋಡಿದೆಯಾ?" ಇದೋ!ಹಿಂಪಿಡ್ಡ ಗಾಂಡೀವಧನುಸ್ಸೀ ಈಗಲೂ ನನ್ನ ಕೈಯಲ್ಲಿರುವುದು! ಈಗಲೂ ಅದೇ ಬಾಣಗಳನ್ನು ಹಿಡಿದಿರುವೆನು! ರಥವೂ ರಥಾಶ್ವಗಳೂ ಅವೇ!ಹಿಂದೆ ಅನೇಕರಾಜಮಂಡಲಿಯಿಂದ ಮಹಾರಥನೆಂದು ಗೌರವಿಸಲ್ಪಡುತಿದ್ದ ಆಗಿನ ಅರ್ಜುನನೇ ನಾನಲ್ಲದೆ ಹೊಸಬನಲ್ಲ! ಏನಿದ್ದರೇನು? ಆಗಿದ್ದ ಶ್ರೀಕೃಷ್ಣಸಾನ್ನಿಧ್ಯವೊಂದು ತಪ್ಪಿದುದರಿಂದ, ಇತರಸಹಾಯಸಂಪತ್ತಿಗಳೆಲ್ಲವೂ, ಊಷರಕ್ಷೇತ್ರದಲ್ಲಿ ಬಿತ್ತಿದ ಬೀಜದಂತೆಯೂ, ಬೂದಿಯಲ್ಲಿ ಮಾಡಿದ ಹೋಮದಂತೆಯೂ, ಅಸತ್ಪಾತ್ರದಲ್ಲಿ ಕೊಟ್ಟ ದಾನದಂತೆಯೂ ಕ್ಷಣಮಾತ್ರದಲ್ಲಿ ನಿರರ್ಥಕಗಳಾದುವು. ಅಣ್ಣಾ ! ದ್ವಾರಕೆಯಲ್ಲಿ ನಮ್ಮ ಯಾದವ

ಬಂಧುಗಳ ಕ್ಷೇಮವನ್ನು ಕೇಳಿದೆಯಲ್ಲವೆ? ಆ ವೃತ್ತಾಂತವನ್ನೂ ತಿಳಿಸಿಬಿಡು ವೆನು ಕೇಳು! ಈನಡುವೆ ಒಂದಾನೊಂದುದಿನದಲ್ಲಿ,! ಯಾದವವೀರರೆಲ್ಲರೂ ಮೈತಿಳಿಯದೆ, ಕಂಠಪೂರ್ತಿಯಾಗಿ ಮದ್ಯವನ್ನು ಕುಡಿದು, ಪ್ರಜ್ಞೆ ತಪ್ಪಿ, ತಮ್ಮಲ್ಲಿಯೇ ತಾವು ಒಬ್ಬರನ್ನೊಬ್ಬರು ಮುಷ್ಟಿಗಳಿಂದ ಹೊಡೆದಾಡಿ ಸತ್ತರು. ಹೀಗೆ ಯಾದವರು ಮೈತಿಳಿಯಿದೆ ಹೊಡೆದಾಡಿ ಸಾಯುವುದಕ್ಕೆ ಹಿಂದೆ ಅವರಿಗೆ ತಗುಲಿದ ಬ್ರಾಹ್ಮಣಶಾಪವೇ ಕಾರ ಣವು. ಈಗ ಯಾದವರಲ್ಲಿ ನಾಲ್ಕೈದುಮಂದಿಮಾತ್ರವೇ ಉಳಿದಿರುವರು. ಅಣ್ಣಾ ! ಇವೆಲ್ಲವೂ ಆ ಸರ್ವೇಶ್ವರನ ವ್ಯಾಪಾರಗಳಲ್ಲದೆ ಬೇರೆಯಲ್ಲ! ಯಾ ವನ ಸಂಕಲ್ಪದಿಂದ ಸಮಸ್ತಭೂತಗಳೂ ವೃದ್ಧಿಹೊಂದುವುವೋ, ಆ ಭಗ ವಂತನ ಸಂಕಲ್ಪದಿಂದಲೇ ಇವೆಲ್ಲವೂ ನಶಿಸುವುವು. ಯಾದವಕುಲನಾಶಕ್ಕೂ ಆತನ ಸಂಕಲ್ಪವೇ ಮೂಲವು. ಎಲೈ ರಾಜೇಂದ್ರನೆ ! ಆಹೆಳ್ಳೇಕೆ ? ದೊಡ್ಡ ಮೀನು ಸಣ್ಣಮೀನುಗಳನ್ನು ಹೇಗೆ ನುಂಗುವುವೋ, ಪ್ರಬಲಜಂತುಗಳುದುರ್ಬ ಲಜಂತುಗಳನ್ನು ಹೇಗೆ ಕೊಂದು ತಿನ್ನುವುವೋ, ಪ್ರಬಲಜಂತುಗಳೇ ಆಗಾಗ ಒಂದಕ್ಕೊಂದುಹೋರಾಡಿ ಹೇಗೆ ಸಾಯುವುವೋ, ಹಾಗೆಯೇ ಶ್ರೀಕೃಷ್ಣನು, ಮೊದಲು ಬಲಿಷ್ಠರಾದ ಯಾದವರಿಂದ ದುರ್ಬಲರಾದ ಇತರರನ್ನು ಕೊಲ್ಲಿ ಸಿ, ಆಮೇಲೆ ಆ ಯಾದವರ ಕೈಯಿಂದಲೇ ಯಾದವರನ್ನು ಕೊಲ್ಲಿಸಿ, ಭೂ ಭಾರವನ್ನ ಪಹರಿಸಿಬಿಟ್ಟನು. ಆ ಭಗವಂತನ ಉದ್ದೇಶವನ್ನು ಹೀಗೆಂದು ನಿರ್ಣಯಿಸುವುದು ಯಾರಿಗೂ ಸಾಧ್ಯವಲ್ಲ! ಅಣ್ಣಾ! ಏನಾದರೇನು? ಹಿಂದೆ ಶ್ರೀಕೃಷ್ಣನು ನನ್ನೊಡನೆ ಕಲೆತಿದ್ದಾಗ, ಕಾಲದೇಶಕ್ಕ ತಕ್ಕ ಪ್ರಯೋ ಜನಗಳನ್ನು ತೋರಿಸುವಂತೆಯೂ, ಎಂತಹ ಹೃದಯದುಃಖವನ್ನಾದರೂ ಅಡಗಿಸಿ ಆನಂದವನ್ನುಂಟುಮಾಡುವಂತೆಯೂ ಅವನು ನನಗೆ ಉಪ ದೇಶಿಸುತಿದ್ದ ವಾಕ್ಯಗಳು, ಈಗಲೂ ನನ್ನ ನೆನಪಿಗೆ ಬಂದಹಾಗೆಲ್ಲಾ ನನ್ನ ಮನಸ್ಸನ್ನು ಸೆಳೆಯುತ್ತಿರುವುವು." ಎಂದನು. ಅರ್ಜುನನು ತನ್ನಣ್ಣನಾದ ಧರ್ಮರಾಜನಿಗೆ ಹೀಗೆಂದು ಹೇಳಿ, ಆ ಕೃಷ್ಣನಲ್ಲಿ ತನಗಿದ್ದ ದೃಢವಾದ ಸ್ನೇಹದಿಂದ ಆತನ ಪಾದಕಮಲಗಳನ್ನು ಬಿಡದೆ ಧ್ಯಾನಿಸುತ್ತ, ಸ್ವಲ್ಪ ಕಾಲದವರೆಗೆ ಮೌನದಿಂದಿದ್ದನು. ಈ ಕೃಷ್ಣಧ್ಯಾನದಿಂದಲೇ ಅವನ ಮನ

ಸ್ಸಿನ ರಾಗಾದಿಕಲ್ಮಷಗಳೆಲ್ಲವೂ ನೀಗಿ, ಅವನ ಬುದ್ಧಿಯಲ್ಲಿ ತಿಳಿವುಂ ಟಾಯಿತು. ವಾಸುದೇವನ ಪಾದಪದ್ಮಗಳನ್ನು ಎಡೆಬಿಡದೆ ಧ್ಯಾನಿಸುತಿ ದ್ದುದರಿಂದ ಭಕ್ತ್ಯಾವೇಶವೂ ಹೆಚ್ಚಿತು, ಕಾಮಕ್ರೋಧಾದಿದುರ್ಗುಣಗ ಳೊಂದೂ ತಲೆಯೆತ್ತದಂತಾಯಿತು. ಹೀಗೆ ನಿಷ್ಕಲ್ಮಷವಾದ ಬುದ್ಧಿಯುಳ್ಳ ಅರ್ಜುನನು, ಹಿಂದೆ ರಣಾಗ್ರದಲ್ಲಿ ಭಗವಂತನು ತನಗುಪದೇಶಿಸಿದ ಗೀತಾರ್ಥ ವನ್ನು ತನ್ನಲ್ಲಿ ತಾನೇ ಮನನಮಾಡಿಕೊಂಡನು. ತಾನು ಆ ಗೀತಾರ್ಥವನ್ನು ಕೇಳಿ ಬಹಳ ದಿನಗಳು ಕಳೆದುಹೋದುದರಿಂದಲೂ, ಅದರಿಂದೀಚೆಗೆ ತಾನು ಬೇರೆ ಬೇರೆ ಕಾರ್ಯಾಂತರಗಳಲ್ಲಿದ್ದುದರಿಂದಲೂ, ತಮೋಗುಣಪ್ರಾಬಲ್ಯದಿಂದ ಲೂ, ಹಿಂದೆ ತನಗೆ ಪ್ರಾಪ್ತವಾಗಿದ್ದ ಜ್ಞಾನವು ಕ್ರಮಕ್ರಮವಾಗಿ ಕುಂದು ತ್ತ ಬಂದು ಸ್ಮರಣೆ,ಗ್ರಹಣಧಾರಣಗಳಲ್ಲಿ ಸಮರ್ಥನಾದ ಅರ್ಜುನನು, ಅವೆಲ್ಲವ ನ್ನೂ ತಿರುಗಿ ತನ್ನ ಭಾವನೆಗೆ ತಂದುಕೊಂಡನು. ಹೀಗೆ ತನಗುಂಟಾದ ಬ್ರಹ್ಮ ಜ್ಞಾನದಿಂದ ಅರ್ಜುನನು, ಜೀವಾತ್ಮನಿಗೆ ಬೇರೆಬೇರೆ ದೇಹಗಳಸಂಬಂಧದಿಂದ ತೋರುವ ಭೇದಭ್ರಾಂತಿಯನ್ನು ತೊಲಗಿಸಿಕೊಂಡು, ತನಗಿರುವ ಸ್ಥೂಲದೇಹ ದ, ಮತ್ತು ಸೂಕ್ಷ್ಮಪ್ರಕೃತಿಯ ಸಂಬಧವೆರಡೂ ನೀಗಿದಮೇಲೆ, ಸತ್ವಾದಿಗು ಣತ್ರಯಸಂಪರ್ಕವಿಲ್ಲದಂತಾಗುವ ನಿಜಸ್ಥಿತಿಯನ್ನೂ ತನ್ನಲ್ಲಿ ತಾನು ಅನುಸಂ ಧಾನಮಾಡಿಕೊಂಡನು. ಇದರಿಂದ ಅವನಿಗೆ ಪುನರ್ಜನ್ಮಸಂಬಂಧವು ನೀಗಿ ತು. ಅಪಹತಪಾಪ್ಮತ್ವವೇ ಮೊದಲಾಗಿ ಮುಕ್ತರಲ್ಲಿರುವ ಎಂಟುಗು ಣಗಳೂ ಅವನಲ್ಲಿ ನೆಲೆಗೊಂಡುವು. ಇತ್ತಲಾಗಿ ಧರ್ಮರಾಜನೂಕೂಡ ಅರ್ಜುನನಿಂದ ಯದುಕುಲನಾಶವನ್ನೂ ಮತ್ತು ಕೃಷ್ಣನಿರ್ಯಾಣವನ್ನೂ ಕೇಳಿದೊಡನೆ, ಹಿಂದೆ ನಾರದನು ಸೂಚಿಸಿ ಹೋಗಿದ್ದ ಸಂಗತಿಯನ್ನು ಸ್ಮರಿಸಿ, ತನ್ನ ಮನಸ್ಸನ್ನು ದೃಢಪಡಿಸಿಕೊಂಡು, ಮುಂದೆ ತನ್ನ ಸದ್ಗತಿಗಾಗಿ ತಾನು ಪ್ರಯತ್ನಿಸುತಿದ್ದನು. ಇಷ್ಟರಲ್ಲಿ ಕುಂತಿದೇವಿಯೂ ಕೂಡ, ಅರ್ಜುನನಿಂದ ಶ್ರೀಕೃಷ್ಣನ ವೃತ್ತಾಂತವನ್ನೂ, ಯದುಕುಲನಾಶ ನವನ್ನೂ ಕೇಳಿದಮೇಲೆ, ಅನನ್ಯಪ್ರಯೋಜನವಾದ ಭಕ್ತಿಯಿಂದ ಶ್ರೀಕೃ ಷ್ಣನ ಪಾದಕಮಲದಲ್ಲಿ ತನ್ನ ಮನಸ್ಸನ್ನು ನಿಲ್ಲಿಸಿ, ಆಗಲೇ ಸಂಸಾರದಲ್ಲಿ ಮೋಹವನ್ನು ತ್ಯಜಿಸಿ ವೈರಾಗ್ಯವನ್ನು ವಹಿಸಿದಳು. ಓ ಶೌನಕಾ! ಕಾಲಿಗೆ

ಹೊಕ್ಕ ಮುಳ್ಳನ್ನು ಬೇರೆಮುಳ್ಳಿನಿಂದಲೇ ತೆಗೆದು, ಆವೆರಡನ್ನೂ ಹೊರಗೆ ಬಿಸಾಡುವಂತೆ, ಭಗವಂತನು ಯದುವಂಶದಲ್ಲಿ ಕೃಷ್ಣರೂಪದಿಂದವತರಿಸಿ, ಲೋಕಕಂಟಕರಾದ ದುರ್ಮಾರ್ಗರೆಲ್ಲರನ್ನೂ ಕೊಲ್ಲಿಸಿ, ಭೂಭಾರವನ್ನು ತಗ್ಗಿಸಿದಮೇಲೆ, ಅದಕ್ಕಾಗಿ ತಾನು ಗ್ರಹಿಸಿ ಬಂದಿದ್ದ ಲೀಲಾಮಾನುಷವಿಗ್ರಹವನ್ನೂ ಇಲ್ಲಿಯೇ ಬಿಟ್ಟು,ತನ್ನ ನಿಜಸ್ವರೂಪದಿಂದ ನಿಜಲೋಕಕ್ಕೆ ಸೇರಿಬಿಟ್ಟನು. ಭಗವಂತನಿಗೆ ಈ ತನ್ನ ಶರೀರವನ್ನು ಬಿಡುವುದೂ, ಇತರರ ಶರೀರವನ್ನು ಬಿಡಿಸುವುದೂ ಸಮಾನವಲ್ಲದೆ ಇವುಗಳಲ್ಲಿ ತಾರತಮ್ಯವೇನೂ ಇಲ್ಲ! ಸಹಜ ಸ್ವರೂಪವನ್ನು ಬಿಡದೆ ಆಗಾಗ ಮೇಲಿನ ವೇಷವನ್ನು ಮಾತ್ರ ಬದಲಾಯಿಸುತ್ತಿರುವ ನಟನಂತೆ ಭಗವಂತನೂಕೂಡ, ತನಗೆ ಅವಶ್ಯಕತೆಯು ತೋರಿದಾಗ ಮತ್ಸ್ಯಾದ್ಯಾಕಾರಗಳನ್ನು ಧರಿಸಿ ಬಂದು, ತಾನು ನಡೆಸಬೇಕಾದ ಕಾರ್ಯಗಳನ್ನು ನಡೆಸಿದಮೇಲೆ ಆ ಶರೀರವನ್ನು ನೀಗಿಬಿಡುವನು. ಆದುದರಿಂದ ಈಗಲೂ ಕೃಷ್ಣನು ಭೂಭಾರಪರಿಹರಣರೂಪವಾದ ತನ್ನ ಕಾರ್ಯವನ್ನು ಮುಗಿಸಿದಮೇಲೆ ಆ ಶರೀರವನ್ನು ನೀಗಿರುವನು. ಶೌನಕಾ! ಪುಣ್ಯಕೀರ್ತನವುಳ್ಳ ಶ್ರೀಕೃಷ್ಣನು ಯಾವ ದಿನದಲ್ಲಿ, ತನ್ನ ಅಸಾಧಾರಣದಿವ್ಯಮಂಗಳವಿಗ್ರಹದೊಡನೆ ಈ ಭೂಮಿಯನ್ನು ಬಿಟ್ಟು ವೈಕುಂಠಕ್ಕೆ ತೆರಳಿದನೋ, ಆದಿನವೇ ಇತ್ತಲಿಂದ !ಅಧರ್ಮಹೇತುವಾದ ಕಲಿಯು ಈ ಭೂಮಿಗೆ ಕಾಲಿಟ್ಟಿತು. ಆಮೇಲೆ ಧರ್ಮರಾಜನು ಈ ಕಲಿಪ್ರವೇಶದಿಂದ ತನ್ನ ದೇಶದಲ್ಲಿ ಪ್ರತಿಗೃಹದಲ್ಲಿಯೂ, ಪ್ರತಿಮನುಷ್ಯರಲ್ಲಿಯೂ, ಲೋಭೆ, ಹಿಂಸೆ, ಸುಳ್ಳು,ಸೋಸ, ಮೊದಲಾದ ದುರ್ಗುಣಗಳು ಹೆಚ್ಚಿ ಬರುತಿದ್ದುದನ್ನು ನೋಡಿ, ಇನ್ನು ಈ ಲೋಕದಲ್ಲಿರುವುದಕ್ಕೆ ಇಷ್ಟವಿಲ್ಲದೆ ಸ್ವರ್ಗಾರೋಹಣಕ್ಕಾಗಿ ನಿಶ್ಚಯಿಸಿಕೊಂಡನು. ಈ ನಿಶ್ಚಯವು ಹುಟ್ಟಿದೊಡನೆ ಧರ್ಮರಾಜನು, ಅತಿವಿನೀತನಾಗಿಯೂ, ಗುಣಗಳಲ್ಲಿ ತನಗೆ ಸಮಾನನಾಗಿಯೂ ಇದ್ದ ತನ್ನ ಮುಮ್ಮಗನಾದ ಪರೀಕ್ಷಿದ್ರಾಜನನ್ನು ಕರೆತರಿಸಿ, ತನ್ನ ರಾಜ್ಯವನ್ನಾತನ ವಶಕ್ಕೊಪ್ಪಿಸಿ, ಹಸ್ತಿನಾವತಿಯಲ್ಲಿ ಪಟ್ಟಾಭಿಷೇಕವನ್ನೂ ನಡೆಸಿಬಿಟ್ಟನು. ಅನಿರುದ್ಧಕುಮಾರನಾದ ವಜ್ರನೆಂಬವನನ್ನು ಕರೆದು, ಅವನಿಗೆ ಶೂರಸೇನದೇಶಾಧಿಪತ್ಯವನ್ನು ಕೊಟ್ಟು ಮಥುರಾಪುರಿಯಲ್ಲಿ ಅವನಿಗೂ ಪಟ್ಟಾಭಿಷೇಕವನ್ನು ನಡೆಸಿದನು. ಆಮೇಲೆ



177. ಪರೀಕ್ಷಿದ್ರಾಜನಿಗೆ ಧರ್ಮರಾಜನು ಪಟ್ಟವನ್ನು ಕಟ್ಟಿದುದು.

ಪ್ರಾಜಾಪತ್ಯವೆಂಬ ಒಂದು ಇಷ್ಟಿಯನ್ನು ಮಾಡಿ, ಆಹವನೀಯಾದ್ಯಗ್ನಿಗಳನ್ನು ಆತ್ಮಾರೋಪಣಮಾಡಿಕೊಂಡನು. ತಾನು ಧರಿಸಿದ್ದ ಉಡಿಗೆತೊಡಿಗೆಗಳೆಲ್ಲವನ್ನೂ ತಾನಿದ್ದಮನೆಯೆಲ್ಲಿಯೇ ತೆಗೆದು ಬಿಸುಟನು. ಅಹಂಕಾರ ಮಮಕಾರಗಳನ್ನು ನಿಶ್ಶೇಷವಾಗಿ ನೀಗಿದನು. ಸಮಸ್ತವಿಧಗಳಾದವಾ ಪ್ರೇ ಮಾನುಬಂಧಗಳೆಲ್ಲವನ್ನೂ ತ್ಯಜಿಸಿದನು. ಜ್ಞಾನೇಂದ್ರಿಯ ಕರ್ಮೇಂದ್ರಿಯಗ ಳೆರಡನ್ನೂ ಅಯಾವಿಷಯಗಳಿಂದ ತಪ್ಪಿಸಿ, ಅದರ ವ್ಯಾಪಾರಗಳೆಲ್ಲವೂ ಮ ನೋಧೀನವೆಂದೂ, ಆ ಮನಸ್ಸು ಪ್ರಾಣಾಧೀನವೆಂದೂ ಭಾವಿಸಿ ಅದರಂತೆ ಯೇ ಅವುಗಳನ್ನು ತತ್ತದಧೀನವಾಗಿ ಮಾಡಿ ನಿಲ್ಲಿಸಿದನು. ಹಾಗೆಯೇ ಆ ಪ್ರಾಣವನ್ನು ಅಪಾನದಲ್ಲೆಯೂ, ಅಪಾನವನ್ನು ವ್ಯಾನದಲ್ಲಿಯೂ, ವ್ಯಾನ ವನ್ನು ಉದಾನದಲ್ಲಿಯೂ, ಆ ಉದಾನವನ್ನು ಮೃತ್ಯುಸಂಜ್ಞಿಕವಾದ ಸಮಾ ನದಲ್ಲಿಯೂ, ಆ ಸಮಾನವನ್ನು ಪ್ರಾಣಾದಿಪಂಚಕಕ್ಕೆ ಕಾರಣವಾದ ವಾ ಯುವಿನಲ್ಲಿಯೂ ಲಯಹೊಂದಿಸಿದನು. ಹೀಗೆ ಇಂದ್ರಿಯವರ್ಗಗಳನ್ನೂ, ಪ್ರಾಣಗಳನ್ನೂ, ಅವುಗಳ ವ್ಯಾಪಾರವನ್ನೂ ನಿರೋಧಿಸಿ, ವಾಯುವಿನಲ್ಲಿ ಲಯಹೊಂದಿಸಿದಮೇಲೆ, ಆ ವಾಯುಸಹಿತಗಳಾದ ಪಂಚಭೂತಗಳೂ, ಅ ಹಂಕಾರಕಾರ್ಯವೆಂಬುದಕ್ಕಾಗಿ, ಇವೆರಡನ್ನೂ ಸಾತ್ವಿಕ ರಾಜಸ ತಾಮಸಗ ಳೆಂಬ ತ್ರಿವಿಧವಾದ ಅಹಂಕಾರದಲ್ಲಿ ಲೀನಮಾಡಿದನು. ಈ ತ್ರಿವಿಧಾಹಂಕಾ ರವನ್ನೂ ಮಹತ್ತತ್ತ್ವದ ಮೂಲಕವಾಗಿ ಪ್ರಕೃತಿಯೊಂದರಲ್ಲಿ ಲಯಹೊಂದಿ ದನು. ಅಚೇತನವಾದ ಈ ಪ್ರಕೃತಿಯೂಕೂಡ ಚೇತನಾಧೀನವೆಂಬುದನ್ನು ತಿಳಿದು, ವಾಕ್ಕು ಮೊದಲಾಗಿ ಪ್ರಕೃತಿಪರ್ಯಂತವಾದ ಇವೆಲ್ಲವನ್ನೂ ಜೀ ವಾತ್ಮನಲ್ಲಿ ಲೀನಮಾಡಿದನು. ಆ ಜೀವಾತ್ಮನು ಪರಮಾತ್ಮನಿಗಧೀನವಾದ ವ್ಯಾಪಾರವುಳ್ಳವನಾದುದರಿಂದ, ಆ ಜೀವನನ್ನು ಅಕ್ಷಯವಾದ ಆ ಪರ ಬ್ರಹ್ಮನಲ್ಲಿ ಐಕ್ಯಹೊಂದಿಸಿಬಿಟ್ಟನು. ಹೀಗೆ ಧರ್ಮರಾಜನು ತತ್ವಜ್ಞಾನಾನು ಸಂಧಾನಕ್ಕಾಗಿ ನಾರುಬಟ್ಟೆಗಳನ್ನುಟ್ಟು, ಆಹಾರವನ್ನು ಬಿಟ್ಟು, ಮೌನ ವನ್ನು ವಹಿಸಿ, ಜಟಾಧಾರಿಯಾಗಿ ತಲೆಯನ್ನು ಕೆದರಿ, ಮಂಕನಂತೆಯೂ, ಹು ಚ್ಚನಂತೆಯೂ, ಪಿಶಾಚಗ್ರಸ್ತನಂತೆಯೂ ಕಾಣುತ್ತ, ತನ್ನ ಸಹೋದರ ರನ್ನೂ ನಿರೀಕ್ಷಿಸದೆ, ಕಿವುಡನಂತೆ ಬೇರೆಯವರು ಕರೆದರೂ ಕಿವಿಗೆ ಹಾಕಿ

ಕೊಳ್ಳದೆ ತನ್ನ ಮನೆಯನ್ನು ಬಿಟ್ಟು ಹೊರಟನು. ಹಿಂದೆ ತನ್ನ ತಂದೆಯಾದ ಧೃತರಾಷ್ಟ್ರನು ಹೋದ ದಾರಿಯನ್ನೇ ಹಿಡಿದು ಉತ್ತರದಿಕ್ಕನ್ನು ಹಿಡಿದು ಹೋದನು. ಹೀಗೆ ಧರ್ಮರಾಜನು ತನ್ನ ಹೃದಯದಲ್ಲಿ ಆ ಪರಬ್ರಹ್ಮಸ್ವರೂಪವೊಂದನ್ನೇ ಅನುಸಂಧಾನಮಾಡುತ್ತ, ಕೂಗಿದರೂ ಪ್ರತ್ಯುತ್ತರವನ್ನು ಕೊಡದೆ, ಉತ್ತರದಿಕ್ಕಿಗಭಿಮುಖವಾಗಿ ಹೋಗುತ್ತಿರುವುದನ್ನು, ಆತನ ಸಹೋದರರೆಲ್ಲರೂ ನೋಡಿದರು. ಇತ್ತಲಾಗಿ ಕಲಿಪ್ರವೇಶದಿಂದ ಪ್ರಜೆಗಳೆಲ್ಲರೂ ಪಾಪಕರ್ಮಿಗಳಾಗಿರುವುದನ್ನೂ ನೋಡಿದರು. ಇದರಿಂದ ಅವರ ಮನಸ್ಸಿಗೂ ವಿರಕ್ತಿಯು ಹುಟ್ಟಿತು. ಅವರಿಗೆ ಲೋಕದಲ್ಲಿರುವ ಸಮಸ್ತಪದಾರ್ಥಗಳೂ ಕೇವಲಹೀನವೆಂಬ ನಿಶ್ಚಯವುಂಟಾಯಿತು. ತಮ್ಮ ದೇಹಾವಸಾನಕ್ಕೂ ಸಮಯವು ಸಮೀಪಿಸಿತೆಂದು ತಿಳಿದುಕೊಂಡರು. ಈ ನಿಶ್ಚಯವು ಹುಟ್ಟಿದೊಡನೆ, ಅವರೆಲ್ಲರೂ ಶ್ರೀಮನ್ನಾರಾಯಣನ ಪಾದಾರವಿಂದಗಳನ್ನು ತಮ್ಮಹೃದಯದಲ್ಲಿ ಧೃಡವಾಗಿಟ್ಟು ಧ್ಯಾನಿಸುತ್ತ, ತಮ್ಮಣ್ಣನಾದ ಧರ್ಮರಾಜನನ್ನೇ ಹಿಂಬಾಲಿಸಿ ಹೊರಟುಬಿಟ್ಟರು. ಈ ವಿಧವಾಗಿ, ಭಗವದಾರ್ಧ್ಯನದಿಂದ ಪರಿಪಕ್ವವಾದ ಭಕ್ತಿವಿಶೇಷದಿಂದ ನಿಷ್ಕಲ್ಮಷವಾದ ಬುದ್ಧಿಯುಳ್ಳವರಾಗಿ, ಈ ಭಕ್ತಿವಿಶೇಷದಿಂದಲೇ ಭಗವತ್ಪ್ರಾಪ್ತಿಗೆ ಪ್ರತಿಬಂಧಕಗಳಾಗಿದ್ದ ಪುಣ್ಯಪಾಪಕರ್ಮಗಳ ಸಂಬಧವನ್ನೂ ನಿಶ್ಶೇಷವಾಗಿ ನೀಗಿ, ಪರಮಪುರುಷನೊಬ್ಬನಲ್ಲಿಯೇ ಬುದ್ಧಿಯನ್ನು ದೃಢವಾಗಿ ನೆಲೆಗೊಳಿಸಿದರು. ಇದರಿಂದ ರಜಸ್ತಮೋಗುಣರಹಿತವಾದ ಶುದ್ಧಸ್ವರೂಪವನ್ನು ಪಡೆದು, ಕೇವಲ ಭಗವದ್ಭಕ್ತರಿಗಲ್ಲದೆ ವಿಷಯಾಭಿಲಾಷೆಯಲ್ಲಿ ಸಿಕ್ಕಿದವರಿಗೆ ದುರ್ಲಭವಾದ ಉತ್ತಮಗತಿಯನ್ನು ಹೊಂದಿದರು. ಆಮೇಲೆ ವಿದುರನು ಇತ್ತಲಾಗಿ ಪ್ರಭಾಸತೀರ್ಥದಲ್ಲಿ ಕೆಲವು ಕಾಲದವರೆಗೆ ವಾಸಿಸುತಿದ್ದು, ತನ್ನ ಮನಸ್ಸನ್ನು ಶ್ರೀಮನ್ನಾರಾಯಣನಲ್ಲಿ ನೆಲೆಗೊಳಿಸಿ, ಅಲ್ಲಿಯೇ ದೇಹತ್ಯಾಗವನ್ನು ಮಾಡಿದನು. ಪಿತೃಪತಿಯಾದ ಆತನಿಗೆ ಋಷಿಶಾಪದಿಂದ ಪ್ರಾಪ್ತವಾಗಿದ್ದ ಆ ನೀಚದೇಹದ ಸಂಬಂಧವು ಬಿಟ್ಟೊಡನೆ, ಅವನು ತನ್ನ ಪೂರ್ವಸ್ವರೂಪವನ್ನು ಹೊಂದಿ, ಪಿತೃದೇವತೆಗಳಿಂದ ಪರಿವೃತನಾಗಿ ತನ್ನ ಲೋಕವನ್ನು ಸೇರಿದನು. ಆಮೇಲೆ ದ್ರೌಪದಿಯೂ ಕೂಡ, ತನ್ನ ಪತಿಗಳು ಈ ಲೋಕವ್ಯಾಪಾರದಲ್ಲಿ ವಿರಕ್ತರಾಗಿ ಹೋದು:

ದನ್ನು ತಿಳಿದು, ಶ್ರೀಹರಿಯಲ್ಲಿ ತನ್ನ ಮನಸ್ಸನ್ನು ದೃಢವಾಗಿ ನೆಲೆಗೊಳಿಸಿ ಪರಮಪದವನ್ನು ಹೊಂದಿದಳು. ಓ ಶೌನಕಾ! ಶ್ರೀಕೃಷ್ಣನಿರ್ಯಾಣ, ಪಾಂಡವಪ್ರಯಾಣವೆಂಬ ಈ ಸತ್ಕಥೆಯನ್ನು ಯಾವನು ಶ್ರದ್ಧೆಯಿಂದ ಪಠಿಸುವನೋ, ಅಥವಾ ಭಕ್ತಿಯಿಂದ ಕೇಳುವನೋ, ಅವನು ಸಮಸ್ತಶುಭಗಳಿಗೂ ಭಾಗಿಯಾಗಿ, ಕೊನೆಗೆ ವಿಷ್ಣುಭಕ್ತವಿಶಿಷ್ಟನಾಗಿ, ಸಂಸಾರಬಂಧವನ್ನು ತೊಲಗಿಸಿ, ಮುಕ್ತಿಯನ್ನು ಹೊಂದುವನು. ಇದು ಹದಿನೈದನೆಯ ಅಧ್ಯಾಯವು.

ಪರೀಕ್ಷಿದ್ರಾಜನ ವೃತ್ತಾಂತವು.

ಧರ್ಮರಾಜಾದಿಗಳು ತನಗೆ ಪಟ್ಟವನ್ನು ಕಟ್ಟಿ ರಾಜ್ಯವನ್ನು ಬಿಟ್ಟು ಹೋದಮೇಲೆ, ಇತ್ತಲಾಗಿ ಪರೀಕ್ಷಿದ್ರಾಜನು, ಹಿಂದೆ ತನ್ನ ಜನನಕಾಲದಲ್ಲಿ ಜ್ಯೋತಿಶ್ಶಾಸ್ತ್ರನಿಪುಣರು ಹೇಳಿದ್ದ ರೀತಿಯಲ್ಲಿಯೇ ಬ್ರಾಹ್ಮಣೋತ್ತಮರ ಉಪದೇಶದಿಂದ ಪರಮಭಾಗವತನೆನಿಸಿ, ಬಹಳಸದ್ಗುಣಶೀಲನೆಂಬ ಪ್ರಸಿದ್ಧಿಯನ್ನು ಪಡೆದು, ಧರ್ಮದಿಂದ ರಾಜ್ಯವನ್ನಾಳುತಿದ್ದನು. ಈತನು ರಾಜ್ಯಕ್ಕೆ ಬಂದಮೇಲೆ, ಉತ್ತರನ ಮಗಳಾದ ಇರಾವತಿಯೆಂಬ ಕನ್ಯೆಯನ್ನು ಮದುವೆಯಾಗಿ, ಅವಳಲ್ಲಿ ಜನಮೇಜಯನೇ ಮೊದಲಾದ ನಾಲ್ಕುಮಂದಿ ಪುತ್ರರನ್ನು ಪಡೆದನು. ಈತನು ತನ್ನ ರಾಜ್ಯಭಾರಕಾಲದಲ್ಲಿ ಕೃಪಾಚಾರ್ಯರನ್ನು ಗುರುವಾಗಿಟ್ಟುಕೊಂಡು, ಗಂಗಾತೀರದಲ್ಲಿ ಭೂರಿದಕ್ಷಿಣೆಯುಳ್ಳ ಮೂರು ಅಶ್ವಮೇಧಯಾಗಗಳನ್ನು ಮಾಡಿದನು. ಈ ಯಾಗಗಳಲ್ಲಿ ದೇವತೆಗಳು ಸ್ವಸ್ವರೂಪದಿಂದ ಪ್ರತ್ಯಕ್ಷವಾಗಿಯೇ ಬಂದು ಹವಿರ್ಭಾಗಗಳನ್ನು ಸ್ವೀಕರಿಸುತಿದ್ದರು. ಒಮ್ಮೆ ಈತನು ದಿಗ್ವಿಜಯಕ್ಕಾಗಿ ಹೊರಟು, ಸಮಸ್ತದಿಕ್ಕುಗಳನ್ನೂ ಕ್ರಮವಾಗಿ ಜಯಿಸುತ್ತ ಬರುವಾಗ, ದಾರಿಯಲ್ಲಿ ಒಂದಾನೊಂದುಕಡೆಯಲ್ಲಿ, ಶೂದ್ರನೊಬ್ಬನು, ರಾಜಲಕ್ಷಣಗಳಿಂದ ಕೂಡಿದವನಾಗಿ ಗೋವಿಥುನವನ್ನು ಕಾಲಿನಿಂದೊದೆಯುತಿದ್ದುದನ್ನು ಕಂಡನು. ಅವನೇ ಕಲಿಪುರುಷನೆಂಬುದನ್ನು ತಿಳಿದು, ಪರೀಕ್ಷಿದ್ರಾಜನು ಆಕ್ಷಣವೇ ಅತನನ್ನು ನಿಗ್ರಹಿಸಿ ಬಂದನು." ಎಂದು ಸೂತಪೌರಾಣಿಕನು ಹೇಳಿದುದನ್ನು ಕೇಳಿ, ಶೌನಕನು ತಿರುಗಿ

"ಸೂತಾ ! ಪರೀಕ್ಷಿದ್ರಾಜನು ದಿಗ್ವಿಜಯಕಾಲದಲ್ಲಿ ಕಲಿಯನ್ನು ನಿಗ್ರಹಿಸಲು ಕಾರಣವೇನು? ರಾಜಲಕ್ಷಣವನ್ನು ಧರಿಸಿ ಗೋವನ್ನು ಕಾಲಿಂದೊದೆದ ಆ ಶೂದ್ರನಾವನು ? ಆ ವೃತ್ತಾಂತವು ಭಗವಂತನ ಪುಣ್ಯಕಥೆಯಿಂದ ವಿಶ್ರವಾಗಿದ್ದರೆ, ಅಥವಾ ಆ ಭಗವಂತನ ಪಾದಕಮಲಸಂಬಂಧವಾದ ಮಕರಂದವನ್ನಾ ಸ್ವಾದಿಸತಕ್ಕ ಭಕ್ತರ ಸಚ್ಚರಿತ್ರದಿಂದ ಕೂಡಿದುದಾಗಿದ್ದರೆ, ಅದನ್ನು ನೀನು ಅವಶ್ಯವಾಗಿ ನಮಗೆ ತಿಳಿಸಬೇಕು ! ಹೀಗಿಲ್ಲದೆ ಅಲ್ಪಾಯುಸ್ಸುಳ್ಳವರಾಗಿಯೂ, ಕರ್ಮಫಲಾಭಿಲಾಷೆಯಲ್ಲಿ ತೊಳಲುವವರಾಗಿಯೂ, ಮರಣಶೀಲರಾಗಿಯೂ ಇರುವ ದುರ್ಜನರ ಸಂಬಂಧವಾದ ಅಸತ್ಕಥೆಗಳನ್ನು ಕೇಳುವುದರಿಂದ ಅಮೂಲ್ಯವಾದ ಆಯುಃಕಾಲವನ್ನು ವ್ಯರ್ಥವಾಗಿ ಕಳೆದಂತಾಗುವುದೇಹೊರತು ಬೇರೆಯಲ್ಲ! (ಓ ಮಹಾತ್ಮ! ಈ ನಮ್ಮ ದೇಹವಾದರೂ ನಿತ್ಯವಲ್ಲ ! ಅಲ್ಪಾಯುಸ್ಸುಳ್ಳವರಾಗಿ ಹುಟ್ಟಿ ಮೋಕ್ಷಾಪೇಕ್ಷೆಯಲ್ಲಿರುವ ನಮಗೆ, ಅತ್ಯಲ್ಪವಾದ ಆ ನಮ್ಮ ಆಯುಃಕಾಲವನ್ನೂ ವ್ಯರ್ಥವಾಗಿ ಮಾಡತಕ್ಕ ಬೇರೆ ವಿಧಗಳಾದ (ಅಸತ್ಕಥೆಗಳಿಂದ ಫಲವೇನು?) ಆದರೆ ಅಲ್ಪಾಯುಷ್ಯವುಳ್ಳ ನಮ್ಮ ಜೀವವು ಈಗ ನಿನ್ನಿಂದ ಈ ಕಥೆಗಳೆಲ್ಲವನ್ನೂ ಕೇಳಿ ಮುಗಿಸುವವರೆಗೆ ನಿಲ್ಲುವುದೆಂಬ ನಿಶ್ಚಯವೇನೆಂದು ನೀನು ಶಂಕಿಸಬೇಡ! ಇದೋ ನೋಡು ! ಈಗ ಈ ನೈಮಿಶಕ್ಷೇತ್ರದಲ್ಲಿ ಮಹರ್ಷಿಗಳು ನಡೆಸುತ್ತಿರುವ ಹರಿಕಥಾಶ್ರವಣಮಿಶ್ರವಾದ ಈ ಸತ್ರಯಾಗದಲ್ಲಿ, ಮರಣಾಧಿದೇವತೆಯಾದ ಯಮನೂಕೂಡ ಮಹರ್ಷಿಗಳಿಂದ ಇಲ್ಲಿಗೆ ಕರೆಸಲ್ಪಟ್ಟಿರುವನು. ಆ ಮೃತ್ಯುದೇವನು ಇಲ್ಲಿರುವವರೆಗೂ ಇಲ್ಲಿ ಯಾರಿಗೂ ಮರಣವೆಂಬುದೇ ಇಲ್ಲ. ಇದಕ್ಕಾಗಿಯೇ ಮಹರ್ಷಿಗಳು ಅವನನ್ನು ಇಲ್ಲಿಗೆ ಕರೆಸಿಟ್ಟುಕೊಂಡಿರುವರು. ಈಗ ಪ್ರಾರಂಭಿಸಲ್ಪಟ್ಟಿರುವ ಯಾಗವು ಸಮಾಪ್ತಿಹೊಂದುವವರೆಗೆ,ಆ ಯಮನೂಕೂಡ, ವಿಷ್ಣುಕಥಾಶ್ರವಣಪರನಾಗಿ ಇಲ್ಲಿಯೇ ಇರುವುದರಿಂದ, ಅದುವರೆಗೆ ಇಲ್ಲಿ ಯಾರಿಗೂ ಮರಣಭಯವಿಲ್ಲ. ಅಹಾ! ಮನುಷ್ಯಲೋಕದಲ್ಲಿ ಹುಟ್ಟಿದಮೇಲೆ ಬುದ್ಧಿವಂತರಾದವರು,ಹರಿಕಥಾಮೃತವನ್ನು ಅತ್ಯವಶ್ಯವಾಗಿ ಪಾನಮಾಡಿಯೇ ತೀರಬೇಕು ! ಅಂತವರೇ ಪರಮಾರ್ಥಜ್ಞರು!ಕೇವಲ ಮಂದಬುದ್ಧಿಯುಳ್ಳ ಸೋಮಾರಿಗಳು, ತಾವು ಪಡೆದು ಬಂದಿರುವ ಈ ಅತ್ಯಲ್ಪವಾ

ದ ಆಯುಸ್ಸನ್ನೂ ಕೂಡ ವ್ಯರ್ಥವಾಗಿ ಕಳೆದುಬಿಡುವರು. ರಾತ್ರಿಯೆಲ್ಲವನ್ನೂ ನಿದ್ರೆಯಿಂದ ಕಳೆಯುವರು! ಕುಟುಂಬಭರಣಕ್ಕೆ ಬೇಕಾದ ಕೃತ್ಯಗಳಿಂದ ಹಗಲನ್ನು ಕಳೆದುಬಿಡುವರು. ಹೀಗೆ ಅವರ ಆಮುಃಕಾಲವೆಲ್ಲವೂ ವ್ಯರ್ಥವಾಗಿಯೇ ಕಳೆದು ಹೋಗುವುದಲ್ಲವೆ?" ಎಂದನು. ಅದಕ್ಕಾಸೂತನು ಶೌನಕನನ್ನು ಕುರಿತು, "ಶೌನಕಾ! ಕೇಳು! ಹಿಂದೆ ಪರೀಕ್ಷಿದ್ರಾಜನು ಕುರುಜಾಂಗಲದೇಶಗಳಲ್ಲಿದ್ದಾಗ, ತನ್ನ ಆಳ್ವಿಕೆಗೊಳಪಟ್ಟ ದೇಶದಲ್ಲಿ ಕಲಿಯು ಪ್ರವೇಶಿಸಿದನೆಂಬ ಅಪ್ರಿಯವಾರ್ತೆಯು ಅತನ ಕಿವಿಗೆ ಬಿದ್ದಿತು. ಈ ವಾರ್ತೆಯನ್ನು ಕೇಳಿದೊಡನೆ ಯುದ್ಧಕುತೂಹಲಿಯಾದ ಆರಾಜನು, ತನ್ನ ಮಹಾಥನುಸ್ಸನ್ನು ಕೈಗೆತ್ತಿಕೊಂಡು, ಕಠೀಕುದುರೆಗಳಿಂದ ಕಟ್ಟಿದ, ಸಿಂಹಧ್ವಜವುಳ್ಳ ಮತ್ತು ಸರ್ವಾಲಂಕಾರಭೂಷಿತವಾದ ರಥವನ್ನೇರಿ, ತನ್ನ ರಾಜಧಾನಿಯಿಂದ್ದ ಹೊರಟುಬಿಟ್ಟನು. ರಥಗಜತುರಗಪದಾತಿಗಳೆಂಬ ಚತುರಂಗಸೈನ್ಯವನೂ ಸೇರಿಸಿಕೊಂಡು ದಿಗ್ವಿಜಯಕ್ಕಾಗಿ ಹೊರಟುಬಂದನು. ಈ ನೆವದಿಂದಲೇ ಸಮುದ್ರಾಂತವಾದ ಸಮಸ್ತಭೂಮಿಯನ್ನೂ ಜಯಿಸಬರಬೇಕೆಂಬ ಕುತೂಹಲದಿಂದ, ಆಪರೀಕ್ಷಿದ್ರಾಜನು, ಭದ್ರಾಶ್ವ, ಕೇತುಮಾಲ, ಭಾರತ, ಕಿಂಪುರುಷವೇ ಮೊದಲಾದ ವರ್ಷ (ಭೂಭಾಗ)ಗಳೆಲ್ಲವನ್ನೂ, ಉತ್ತರಕುರುದೇಶಗಳನ್ನೂ ಜಯಿಸಿ, ಅಲ್ಲಲ್ಲಿ ಶತ್ರುರಾಜರಿಂದ ಅಮೂಲ್ಯಗಳಾದ ಕಪ್ಪುಗಳನ್ನು ಸಂಗ್ರಹಿಸುತ್ತ ಬಂದನು. ದೇಶದೇಶದ ಜನರಿಂದ ತನ್ನ ಪಿತಾಮಹರಾದ ಪಾಂಡವರ ಚರಿತ್ರೆಯು ಕೀರ್ತಿಸಲ್ಪಡುತ್ತಿರಲು, ಶ್ರೀಕೃಷ್ಣನ ಮಹಾನುಭಾವತೆಯನ್ನೊಳಕೊಂಡ ಆ ಕಥೆಗಳೆಲ್ಲವನ್ನೂ ಆದರಿಸಿ ಕೇಳುತ್ತ ಬಂದನು. ತಾನು ತಾಯಿಯ ಗರ್ಭದಲ್ಲಿರುವಾಗ ಅಶ್ವತ್ಥಾಮನ ಬ್ರಹ್ಮಾಸ್ತ್ರ ತೇಜಸ್ಸಿನಿಂದ ಕೃಷ್ಣನು ತನ್ನನ್ನು ರಕ್ಷಿಸಿದ ಕ್ರಮವನ್ನೂ, ಪಾಂಡವರಿಗೂ ಯಾದವರಿಗೂ ಹೇಗೆ ಸ್ನೇಹವುಂಟಾಯಿತೆಂಬುದನ್ನೂ, ಅವರಿಗೆ ಕೃಷ್ಣನಲ್ಲಿರುವ ಭಕ್ತಿಯನ್ನೂ ಕೇಳಿ ಪರಮಸಂತೋಷಗೊಂಡು, ಆಯಾಕಥೆಗಳನ್ನು ಹೇಳುತ್ತಿದ್ದ ಮಹನೀಯರೆಲ್ಲರನ್ನೂ ಪ್ರೀತಿವಿಕಸಿತವಾದ ನೇತ್ರದಿಂದ ನೋಡಿ ಮನ್ನಿಸುತ್ತ, ತನ್ನ ಔದಾರ್ಯಕ್ಕೆ ತಕ್ಕಂತೆ ಅವರಿಗೆ ಬೇಕಾದಷ್ಟು ಧನವನ್ನೂ, ವಸ್ತ್ರಗಳನ್ನೂ, ಹಾರಾದ್ಯಾಭರಣಗಳನ್ನೂ ವಿಶೇಷವಾಗಿ ಬಹು

ಮಾನಿಸುತ್ತ ಬಂದನು. ಮತ್ತು ಭಕ್ತವತ್ಸಲನಾದ ಶ್ರೀಕೃಷ್ಣನು ಪಾಂಡವರಲ್ಲಿರುವ ಪ್ರೇಮಾತಿಶಯದಿಂದ, ಕಾಲೋಚಿತವಾಗಿ ಅವರಿಗೆ ಸಾರಥಿಯಾಗಿಯೂ, ಮಂತ್ರಿಯಾಗಿಯೂ, ಸಭಾಧ್ಯಕ್ಷನಾಗಿಯೂ, ದೂತನಾಗಿಯೂ, ಅನುಚರನಾಗಿಯೂ ಇದ್ದು, ಆಯಾ ಸಂದರ್ಭಕ್ಕೆ ತಕ್ಕಂತೆ ರಾಜಾನುವರ್ತವದಿಂದಲೂ, ಸ್ತೋತ್ರದಿಂದಲೂ, ನಮಸ್ಕಾರಗಳಿಂದಲೂ ಅವರನ್ನು ವಶೀಕರಿಸಿ, ಸನ್ಮಾರ್ಗಕ್ಕೆಳೆಯುತಿದ್ದುದನ್ನು ನೆನೆಸಿಕೊಂಡು, ತಾನೂ ಪಾಂಡವರಂತೆಯೇ ಶ್ರೀಕೃಷ್ಣಾನುಗ್ರಹಕ್ಕೆ ಪಾತ್ರನಾಗಬೇಕೆಂಬ ಉದ್ದೇಶದಿಂದ, ಆ ಶ್ರೀಕೃಷ್ಣನ ಪಾದಾರವಿಂದಗಳನ್ನು ಅನವರತವೂ ತನ್ನ ಹೃದಯದಲ್ಲಿಟ್ಟು ಧ್ಯಾನಿಸುತಿದ್ದನು. ಹೀಗೆ ಪರೀಕ್ಷಿದ್ರಾಜನು ತನ್ನ ತಾತಂದಿರಾದ ಧರ್ಮರಾಜಾದಿಗಳ ಮಾರ್ಗವನ್ನೇ ಹಿಡಿದು, ಅದರಂತೆ ಪ್ರವರ್ತಿಸುತಿದ್ದಕಾಲದಲ್ಲಿ, ಆತನ ಕಣ್ಣೆದಿರಿಗೆ ಒಂದಾಶ್ಚರ್ಯವೃತ್ತಾಂತವು ನಡೆಯಿತು. ಅದನ್ನೂ ಹೇಳುವೆನು ಕೇಳು ! ಧರ್ಮಪುರುಷನು ವೃಷಭರೂಪವನ್ನು ಧರಿಸಿ ಒಂದೇಕಾಲಿನಿಂದ ನಡೆಯುತ್ತ ಬರುವಾಗ, ಸಮೀಪದಲ್ಲಿ ತನ್ನಂತೆಯೇ ಗೋರೂಪವನ್ನು ಧರಿಸಿದ ಭೂಮಿಯು, ಕರುವನ್ನು ಕಳೆದುಕೊಂಡ ಹಸುವಿನಂತೆ ಕಾಂತಿಗುಂದಿ ಕಣ್ಣೀರುಬಿಡುತಿದ್ದುದನ್ನು ಕಂಡನು. ಹೀಗೆ ದುಃಖಿತೆಯಾದ ಭೂದೇವಿಯನ್ನುಕಂಡು ಧರ್ಮಪುರುಷನು ಪ್ರಶ್ನೆಮಾಡುವನು. "ಅಮ್ಮಾ ! ಏನಿದು? ನಿನ್ನ ದೇಹವು ಆರೋಗ್ಯದಲ್ಲಿರುವುದಷ್ಟೆ? ನಿನ್ನ ಮುಖವು ಬಹಳವಾಗಿ ಬಾಡಿ ಹೀಗೆ ಕಾಂತಿಗೆಟ್ಟಿರುವುದೇಕೆ? ನಿನ್ನ ಕಣ್ಣುಗಳಲ್ಲಿ ಹೀಗೆ ದುಃಖಬಾಷ್ಪವು ತುಳುಕುತ್ತಿರುವುದಕ್ಕೆ ಕಾರಣವೇನು? ನಿನ್ನ ಮನಸ್ಸಿನಲ್ಲಿ ಏನೋ ಒಂದು ಮಹಾವ್ಯಸನವು ಬಾಧಿಸುತ್ತಿರುವಂತೆ ತೋರುವುದು! ಯಾರಾದರೂ ಪ್ರಿಯಬಂಧುಗಳನ್ನಗಲಿದುದಕ್ಕಾಗಿ ಹೀಗೆ ದುಃಖಿಸುತ್ತಿರುವೆಯಾ ? ನಾನು ಒಂದೇಕಾಲಿನಿಂದ ಹೀಗೆ ನಡೆಯುತ್ತಿರುವುದನ್ನು ನೋಡಿ ಈ ನನ್ನ ದುಸ್ಥಿತಿಗಾಗಿ ನೀನು ದುಃಖಿಸುತ್ತಿರುವೆಯಾ ? ಅಥವಾ ಇನ್ನು ಮುಂದೆ ನೀನು ಶೂದ್ರಸ್ವಾಯರಾದ ಸಂಕರಜಾತಿಯವರ ಆಳ್ವಿಕೆಗೊಳಪಟ್ಟಿರಬೇಕಾಗುವುದೆಂದು ನಿನ್ನ ದುರವಸ್ಥೆಗಾಗಿಯೇ ನೀನು ಚಿಂತಿಸುತ್ತಿರುವೆಯಾ ? ಇಲ್ಲವೇ ಇನ್ನು ಮುಂದೆ ಕಲಿದೋಷದಿಂದ, ದೇವತೆಗಳಿಗೆ

ಸಲ್ಲಬೇಕಾದ ಹವಿರ್ಭಾಗಗಳೆಲ್ಲವೂ ರಾಕ್ಷಸರ ಪಾಲಾಗುವುವೆಂದು ವಿಲಪಿಸುತ್ತಿರುವೆಯಾ? ಅಥವಾ ಇನ್ನು ಮುಂದೆ ಕಾಲಕಾಲಕ್ಕೆ ಮಳೆಯು ಸುರಿಯದೆ ಹೋಗುವುದರಿಂದ, ನಿನ್ನನ್ನಾಶ್ರಯಿಸಿರುವ ಪ್ರಜೆಗಳೆಲ್ಲರೂ ಅನ್ನವಿಲ್ಲದೆ ದುರ್ಭಿಕ್ಷದ ಬಾಧೆಯಿಂದ ಸಾಯಬೇಕಾಗಿ ಬರುವುದೆಂದು ನೀನು ದುಃಖಿಸುತ್ತಿರುವೆಯಾ?! ಎಲೆ ದೇವಿ! ಇನ್ನು ಮುಂದೆ ಪ್ರಜೆಗಳಿಗೆ ತಕ್ಕ ರಕ್ಷಣೆಯಿಲ್ಲದೆ, ಅಬಲೆಯರಾದ ಸ್ತ್ರೀಯರೂ, ಬಾಲಕರೂ,ಅನಾಥರಾಗಿ, ರಾಕ್ಷಸಪ್ರಾಯರಾದ ದುಷ್ಟಜನರಿಂದ ಬಾಧಿಸಲ್ಪಡುವರೆಂದು ವ್ಯಸನಪಡುತ್ತಿರುವೆಯೇನು ? ಅಥವಾ ಬ್ರಾಹ್ಮಣರೆಲ್ಲರೂ ಮುಂದೆಮುಂದೆ ಕುತ್ಸಿತಕರ್ಮಗಳಲ್ಲಿ ಪ್ರವರ್ತಿಸುತ್ತ ಬರುವುದರಿಂದ, ವೇದಗಳಿಗೆ ದಿಕ್ಕಿಲ್ಲದೆ ಹೋಗುವುದೆಂದು ಚಿಂತಿಸುವೆಯಾ? ಇಲ್ಲವೇ ಮುಂದೆಮುಂದೆ ರಾಜರು ದುರ್ಬುದ್ಧಿಯುಳ್ಳವರಾಗಿ ಬ್ರಾಹ್ಮಣಜಾತಿಯ ರಕ್ಷಣೆಯಲ್ಲಿ ಅಕ್ಕರೆಯಿಲ್ಲದೆ ಹೋಗುವುದರಿಂದ ಬ್ರಾಹ್ಮಣರು ಅನಾಥರಾಗುವರೆಂದು ದುಃಖಿಸುವೆಯಾ ? ಕಲಿದೋಷದಿಂದ ಕೆಟ್ಟು ಹೋಗಿರುವ ಆ ಕ್ಷತ್ರಿಯಕುಲವನ್ನೇ ಕುರಿತು ಶೋಕಿಸುವೆಯಾ?ಇಲ್ಲವೇ ದುರಾತ್ಮರಾದ ರಾಜರು ರಾಷ್ಟ್ರಗಳಿಗೆ ಉಪದ್ರವವನ್ನುಂಟುಮಾಡುವರೆಂಬುದಕ್ಕಾಗಿ ಕೊರಗುತ್ತಿರುವೆಯಾ? ಈ ರಾಜರ ಬಾಧೆಯಿಂದ ಪ್ರಜೆಗಳಿಗೆ ಒಂದು ಕಡೆಯಲ್ಲಿಯೂ ನೆಮ್ಮದಿಯಿಲ್ಲದೆ, ಅವರವರು ದೇಶಭ್ರಷ್ಟರಾಗಿ ಹೋಗಿ, ನಿಷಿದ್ಧದೇಶಗಳಲ್ಲಿ ಸೇರಿ,ಅನ್ನ ಪಾನಗಳನ್ನೂ , ಬಟ್ಟೆಬರೆಗಳನ್ನೂ ಸಂಗ್ರಹಿಸುವುದರಲ್ಲಿಯೇ ಆತುರವುಳ್ಳವರಾಗಿ, ವರ್ಣಾಶ್ರಮಧರ್ಮಗಳನ್ನು ಬಿಟ್ಟು, ನಿದ್ರಾಹಾರಮೈಥುನಗಳಲ್ಲಿಮಾತ್ರ ಕಾಲವನ್ನು ಕಳೆಯುವರೆಂಬುದಕ್ಕಾಗಿ ದುಃಖಿಸುವೆಯಾ ? ಅಥವಾ ನಿನಗೆ ಕಂಟಕಪ್ರಾಯರಾದ ದುರಾತ್ಮರನ್ನು ಸಂಹರಿಸಿ, ನಿನ್ನ ಭಾರವನ್ನಿಳಿಸಿ, ನಿನಗೆ ಕ್ಷೇಮವನ್ನುಂಟುಮಾಡುವುದಕ್ಕಾಗಿ ಮನುಷ್ಯರೂಪದಿಂದವತರಿಸಿದ್ದ ಶ್ರೀಕೃಷ್ಣರೂಪಿಯಾದ ಭಗವಂತನು, ಈಗ ನಿನ್ನನ್ನು ಬಿಟ್ಟುಹೋದುದರಿಂದ, ಇದುವರೆಗೆ ಆ ಮಹಾತ್ಮನು ನಡೆಸಿದ ಮೋಕ್ಷದಾಯಕಗಳಾದ ಚರಿತ್ರಗಳನ್ನು ನೆನೆಸಿಕೊಂಡು, ಅವನ ವಿಯೋಗವನ್ನು ಸಹಿಸಲಾರದೆ ದುಃಖಿಸುವೆಯಾ? ಅಮ್ಮ ಭೂದೇವಿ ! ನೀನು ಇಷ್ಟೊಂದು ದುಃಖದಿಂದ ಕೊರಗುವುದಕ್ಕೆ ಕಾರಣವೇನು ಹೇಳು! ಆಹಾ !

ಕಾಲವೆಂಬುದು ಮಹಾಬಲಾಢ್ಯರಿಗಿಂತಲೂ ಬಲಾಢ್ಯವೆನಿಸಿರುವುದು ? ಸರ್ವ ಲೋಕಸ್ಯ ಪೂಜನೀಯವಾಗಿ, ದೇವತೆಗಳಿಂದಲೂ ಗೌರವಿಸಲ್ಪಡತಕ್ಕ ನಿನ್ನ ಸೌಂದರ್ಯಕ್ಕೆ ಕಾಲವಶದಿಂದಲೇ ಈ ವಿಧವಾದ ಕೊರತೆಯುಂಟಾಯಿತೇನು? ನನ್ನಲ್ಲಿ ಕೃಪೆಯಿಟ್ಟು ನಿನ್ನ ದುಃಖಕಾರಣವನ್ನು ತಿಳಿಸಬೇಕು ! ಯಾವ ದುರಾತ್ಮನಿಂದ ನಿನಗೆ ಈ ವ್ಯಸನವುಂಟಾಯಿತು?" ಎಂದನು. ಹೀಗೆ ಬಹಳ ನಿರ್ಬಂಧಿಸಿ ಪ್ರಶ್ನೆಮಾಡುತ್ತಿರುವ ಧರ್ಮಪುರುಷನನ್ನು ಕುರಿತು ಭೂದೇವಿಯು ,, ಓ ಧರ್ಮಪುರುಷಾ ! ನಿನಗೆ ತಿಳಿಯದ ಸಂಗತಿಯೇನಿರುವುದು ? ನನ್ನನ್ನು ನೀನು ಹೊಸಪಾಗಿ ಕೇಳಬೇಕಾದುದೇನು ? ಎಲ್ಲವನ್ನೂ ನೀನೇಬಲ್ಲೆ ! ಮೊದಲು ನೀನು ಲೋಕಸುಖಾಸ್ಪದಗಳಾದ ಈ ನಿನ್ನ ನಾಲ್ಕುಪಾದಗಳನ್ನೂ ನೆಲದಲ್ಲಿಟ್ಟು ನಿರಾಯಾಸವಾಗಿ ಸಂಚರಿಸುತಿದ್ದವನಲ್ಲವೆ? ಈಗ ನೀನು, ಆಸ್ಥಿತಿಯನ್ನು ಬಿಟ್ಟು ಒಂದೇ ಕಾಲಿನಿಂದ ನಡೆಯುತ್ತಿರುವುದೇಕೆ ? ಯಾವ ಕಾರಣದಿಂದ ನಿನಗೆ ಈ ಸ್ಥಿತಿಯುಂಟಾಯಿತೋ, ಅದೇ ನನ್ನ ದುಃಖಕ್ಕೂ ಕಾರಣವಲ್ಲದೆ ಬೇರೆಯಲ್ಲ. ಇದಕ್ಕಿಂತಲೂ ನಮಗೆ ಸಂಭವಿಸಬೇಕಾದ ಹೆಚ್ಚು ಕಷ್ಟವೇನಿರುವುದು? ಯಾವ ಕೃಷ್ಣಪರಮಾತ್ಮನಲ್ಲಿ, ಸತ್ಯ,ಶುಚಿತ್ವ ದಯೆ, ತಾಳ್ಮೆ, ಪೂರ್ಣಕಾಮನಾದುದರಿಂದ ಆಶಾತ್ಯಾಗ, ನಿತ್ಯಸಂತೋಷ, ಕಪಟವಲ್ಲದ ಋಜುಸ್ವಭಾವ, ಮನಸ್ಸನ್ನೂ ಬಾಹ್ಯೇಂದ್ರಿಯಗಳನ್ನೂ ತಡೆಯತಕ್ಕ ಶಕ್ತಿ, ಪ್ರಪಂಚ ಕಾರ್ಯಾಲೋಚನೆ,ಸಹನವು ಮಾಯಾರಿಕೆ ಮೊದಲಾದ ಬಾಧೆಗಳಿಲ್ಲದೆ ಸರ್ವದಾ ಸಮಸ್ಥಿತಿಯಿಂದಿರುವುದು, ಸುಖದುಃಖಾದಿ ದ್ವಂದ್ವಗಳಿಗೆ ಈಡಾಗದಿರುವುದು,ವ್ಯರ್ಥಕಾರ್ಯಗಳಲ್ಲಿ ನೈಮುಖ್ಯ, ಶಾಸ್ತ್ರತತ್ತ್ವಜ್ಞಾನ, ವಿಷಯವೈರಾಗ್ಯ, ಆಶ್ರಿತರಕ್ಷಣೋಚಿತವಾದ ತಿಳುವಳಿಕೆ, ಸಾರ್ವಾಧಿಪತ್ಯ, ಶೌರ್ಯ, ತೇಜಸ್ಸು, ಬಲ, ಉಪಕಾರಸ್ಮರಣೆ, ಇತರಾಪೇಕ್ಷೆಯಿಲ್ಲದ ಸ್ವಾತಂತ್ರ್ಯ, ಕಾರ್ಯನೈಪುಣ್ಯ, ಮಹಾದ್ಭುತಕಾಂತಿ, ಧೈರ್ಯ,ಮೃದುಸ್ವಭಾವ, ಪ್ರಾಢಿಮೆ, ದೊಡ್ಡವರಲ್ಲಿ ವಿನಯ, ಸುತೀಲತೆ, ಕಷ್ಟಸಹಿಷ್ಣುತ್ವ ಅನ್ನಾದಿಗಳಿಂದುಂಟಾಗತಕ್ಕ ಶಕ್ತಿ,ಧಾರಣಸಾಮರ್ಥ್ಯ,ಜ್ಞಾನಾದ್ಯತಿಶಯ, ಗಾಂಭೀರ್ಯಸ್ಥೈರ್ಯಗಳು,ಶಾಸ್ತ್ರಾರ್ಥಗಳಲ್ಲಿ ನಂಬಿಕೆ, ಯಶಸ್ಸು,ಪೂಜಾರ್ಹತೆ, ಅಹಂಕಾರಮಮಕಾರಗಳಿಲ್ಲದಿರುವಿಕೆ,ಇವೇ ಮೊದಲಾಗಿ ಮಹತ್ತ್ವಕ್ಕೆ ಕಾರ

ಣಗಳಾದ ಇನ್ನೂ ಅನೇಕಮಹಾಗುಣಗಳು ಯಾವನಲ್ಲಿ ಕ್ಷಣಮಾತ್ರವೂ ಅಗ
ಲದೆ ನಿತ್ಯವಾಗಿ ನೆಲೆಗೊಂಡಿದ್ದುವೋ, ಲಕ್ಷ್ಮೀನಿವಾಸನಾದ ಆ ಶ್ರೀಕೃಷ್ಣ
ಮೂರ್ತಿಯು, ಈಗ ನನ್ನನ್ನು ಬಿಟ್ಟು ಅಗಲಿಹೋದನು. ಇದೇ ಸಮಯವನ್ನು
ನಿರೀಕ್ಷಿಸುತಿದ್ದ ಕಲಿಯೂ ಈ ಲೋಕದಲ್ಲಿ ಕಾಲಿಟ್ಟನು. ಲೋಕವೆಲ್ಲವೂ ಆ ಕ
ಲಿಯಿಂದ ಪ್ರೇರಿತವಾಗಿಕೇವಲ ಪಾಪಪ್ರಚುರವಾಗಿರುವುದು. ಧರ್ಮಪುರುಷಾ!
ಈ ಸ್ಥಿತಿಯನ್ನು ನೋಡಿ ನಾನು ಹೇಗೆ ತಾನೇ ಸಹಿಸಲಿ! ಮುಖ್ಯವಾಗಿ ಆ ಶ್ರೀ
ಕೃಷ್ಣನಿಯೋಗವೇ ನನ್ನ ದುಃಖಕ್ಕೆ ಮೂಲಕಾರಣವು. ಈ ಅನರ್ಥಗಳೆಲ್ಲಕ್ಕೂ
ಅದೇ ಮೂಲವು! ಎಲೈ ಭದ್ರನೆ! ನನ್ನೊಬ್ಬಳಿಗಾಗಿಮಾತ್ರವೇ ನಾನು ದುಃ
ಖಿಸುವೆನೆಂದೆಣಿಸಬೇಡ! ಮುಂದೆಮುಂದೆ ಕಲಿದೋಷದಿಂದ ನನಗಾಗಲಿ, ನಿನ
ಗಾಗಲಿ, ದೇವತೆಗಳಿಗಾಗಲಿ, ಪಿತೃಗಳಿಗಾಗಲಿ, ಮಹರ್ಷಿಗಳಿಗಾಗಲಿ, ಇತರ ಸಾ
ಧುಜನರಿಗಾಗಲಿ, ವರ್ಣಾಶ್ರಮಧರ್ಮನಿರತರಿಗಾಗಲಿ, ಯಾರಿಗೂ ಕಷ್ಟವು ತ
ಪ್ಪಿದುದಲ್ಲ! ಈ ನಮ್ಮೆಲ್ಲರ ಸ್ಥಿತಿಗಾಗಿಯೇ ನಾನು ಬಹಳವಾಗಿ ಕೊರಗುತ್ತಿರು
ವೆನು! ಎಲೈ ಮಹಾತ್ಮನೆ! ಇನ್ನು ಹೆಚ್ಚಾಗಿ ಹೇಳಿದುದರಿಂದೇನು? ಬ್ರಹ್ಮಾದಿದೇ
ವತೆಗಳೂಕೂಡ ಯಾವ ಮಹಾಪುರುಷನ ಕೃಪಾಕಟಾಕ್ಷಕ್ಕೆ ಪಾತ್ರರಾಗುವು
ದಕ್ಕಾಗಿ, ಪೋರ್ವತಪಸ್ಸನ್ನು ನಡೆಸಿರುವರೋ, ಶ್ರೀಮಹಾಲಕ್ಷ್ಮಿಯು ತನಗೆ ನಿ
ವಾಸಸ್ಥಳವಾದ ಕಮಲವನದಲ್ಲಿಯೂ ಆಸೆಯನ್ನು ಬಿಟ್ಟು ಯಾವಭಗವಂತನ
ಪಾದಕಮಲಗಳನ್ನು ಪರಮಾನುರಾಗದಿಂದ ಹಿಡಿದು ಸೇವಿಸುತ್ತಿರುವಳೋ,
ಅಂತಹ ಶ್ರೀಕೃಷ್ಣನು, ಧ್ವಜಕಮಲವಜ್ರಾಂಕುಶಾದಿ ಶುಭರೇಖೆಗಳಿಂದ ಕೂ
ಡಿದ ತನ್ನ ಪಾದಗಳನ್ನೊತ್ತಿ ನನ್ನನ್ನು ಲಂಕರಿಸುತಿದ್ದನು. ಇದುವರೆಗೆ ಆ ಮ
ಹಾಭಾಗ್ಯವು ನನಗಿದ್ದುದರಿಂದ ಮೂರುಲೋಕಕ್ಕೂ ನಾನೇ ಮೇಲೆಂಬ
ಹೆಮ್ಮೆಯಿಂದಿದ್ದೆನು. ಆ ಭಗವಂತನು ಈಗ ನನ್ನನ್ನಗಲಿಹೋದುದರಿಂದ
ಆ ನನ್ನ ಹೆಮ್ಮೆಯೆಲ್ಲವೂ ಅಡಗಿಹೋಯಿತು. ಎಲೆ ಮಹಾತ್ಮ! ಯಾವನು
ಯದುವಂಶದಲ್ಲಿ ಹುಟ್ಟಿ, ದುಷ್ಟಕ್ಷತ್ರಿಯರನ್ನಡಗಿಸಿ, ನನ್ನ ಭಾರವನ್ನಿಳಿಸಿದ
ನೋ, ಯಾವನು ಎರಡೇಕಾಲುಗಳಲ್ಲಿ ನಿಂತಿದ್ದ ನನ್ನನ್ನು ಇದುವರೆಗೆ ನಾಲ್ಕು
ಕಾಲುಗಳಿಂದ ನಡೆಸುತಿದ್ದನೋ, ಅಂತಹ ಮಹಾನುಭಾವನಾದ ಶ್ರೀಕೃಷ್ಣ
ನು, ಈಗ ನಮ್ಮನ್ನಗಲಿ ಹೋದುದಕ್ಕಾಗಿ ನಾನು ಬಹಳವಾಗಿ ವಿಲಪಿಸು

ತ್ತಿರುವೆನು. ಓ ಧರ್ಮಪುರುಷಾ! (ಆ ವಿಧವಾದ ಪ್ರೇಮವೂ, ಆದರಾದರವೂ ಆ ಮಂದಹಾಸವೂ, ಆ ಮನೋಹರಗಮನವೂ, ಆ ಮೃದುವಾಕ್ಯವೂ, ಶ್ರೀಕೃಷ್ಣಮೂರ್ತಿಗೊಬ್ಬನಿಗೆಹೊರತು ಬೇರೊಬ್ಬರಿಗುಂಟೆ? ಅಂತಹ ಶ್ರೀಕೃಷ್ಣನ ವಿಯೋಗವನ್ನು ಜಿತೇಂದ್ರಿಯರಾದ ಯೋಗಿಗಳೇ ಸಹಿಸಲಾರರು! ಇನ್ನು ನಮ್ಮಂತವರ ಪಾಡೇನು?) ಪುರುಷೋತ್ತಮನಾದ ಯಾವನ ಪ್ರೇಮಪೂರ್ವಕವಾದ ನೋಟವೂ, ಸುಂದರವಾದ ಮಂದಹಾಸವೂ, ಇಂಪಾದ ನುಡಿಗಳೂ, ಯಾದವಸ್ತ್ರೀಯರ ಮನೋಧೈರ್ಯವನ್ನು ಕದಲಿಸಿತೋ ಅಂತಹ ಕೃಷ್ಣನ ವಿರಹವನ್ನು ಯಾರುತಾನೇ ಸಹಿಸಬಲ್ಲರು? ಮತ್ತು ಆ ಶ್ರೀಕೃಷ್ಣನು ನನ್ನಮೇಲೆ ಕಾಲೂರಿ ನಡೆಯುತಿದ್ದವರೆಗೂ. ನಾನು ಅವನಪಾದಸ್ಪರ್ಶದಿಂದ ರೋಮಾಂಚಿತೆಯಾದಂತೆ ಸಮಸ್ತಸಸ್ಯಸಮೃದ್ಧಿಯಿಂದ ಶೋಭಿಸುತಿದ್ದೆನು. ಇನ್ನು ನನಗೆ ಆ ಭಾಗ್ಯವೆಲ್ಲಿ?" ಎಂದಳು. ಹೀಗೆ ಪ್ರಭಾಸತೀರ್ಥದಲ್ಲಿ ಭೂದೇವಿಯೂ, ಧರ್ಮಪುರುಷನೂ ಸಂಭಾಷಿಸುತಿದ್ದಕಾಲದಲ್ಲಿಯೇ ರಾಜರ್ಷಿಯಾದ ಪರೀಕ್ಷಿನ್ಮಹಾರಾಜನು ಅಲ್ಲಿಗೆ ಆಕಸ್ಮಾತ್ತಾಗಿ ಬಂದುಸೇರಿದನು. ಇದು ಹದಿನಾರನೆಯ ಅಧ್ಯಾಯವು.

ಕಲಿಪುರುಷನು ಧರ್ಮದೇವತೆಯನ್ನು ಕಾಲಿಂದೊದೆದುದು.

ಪರೀಕ್ಷಿದ್ರಾಜನು ಅಲ್ಲಿಗೆ ಬಂದು ಸೇರುವ ಸಮಯಕ್ಕೆ ಸರಿಯಾಗಿ, ಅಲ್ಲಿ ರಾಜಚಿಹ್ನವುಳ್ಳ ಶೂದ್ರನೊಬ್ಬನು ಕೈಯಲ್ಲಿ ದಂಡಧಾರಿಯಾಗಿ ನಿಂತಿರುವುದನ್ನೂ, ಎರಡು ಗೋವುಗಳು ಅವನ ಪ್ರಹಾರಕ್ಕೆ ಸಿಕ್ಕಿ, ಬಿಕ್ಕಿಲ್ಲದೆ ಗೋಳಿಡುತ್ತಿರುವುದನ್ನೂ ಕಂಡನು. ತಾವರೆಯ ದಂಟಿನಂತೆ ಶುಭ್ರವಾದ ದೇಹಕಾಂತಿಯುಳ್ಳ ವೃಷಭವು, ಆಶೂದ್ರನ ಪ್ರಹಾರದಿಂದ ಬಹಳವಾಗಿನೊಂದು, ಒಂದೇ ಕಾಲಿನಲ್ಲಿ ನಿಂತು ಮೂತ್ರಸ್ರಾವವಾಗುವಂತೆ ಭಯದಿಂದ ನಡುಗುತಿದ್ದಿತು. ಕರುವಿಲ್ಲದೆ ಏಕಾಕಿಯಾಗಿದ್ದ ಆ ಧೇನುವನ್ನೂ ಕೂಡ, ಆ ಶೂದ್ರನು ತನ್ನ ಎಡಗಾಲಿನಿಂದ ಬಾರಿಬಾರಿಗೂ ಒದೆಯುತ್ತಿರಲು, ಅದು ದೈನ್ಯದಿಂದ ಕಣ್ಣೀರುಬಿಡುತ್ತ, ಹಸಿವಿನಿಂದಲೂ ಬಹಳ ಬಳಲಿ ಕೃಶವಾಗಿ

ಕೂಗಿಡುತಿತ್ತು.ಇದನ್ನು ನೋಡಿ ಪರೀಕ್ಷಿದ್ರಾಜನು ಸುವರ್ಣಾಲಂಕೃತವಾದ ರಥದಲ್ಲಿ ಕುಳಿತಿದ್ದಹಾಗೆಯೇ ಮುಂದೆ ಬಂದು, ತನ್ನ ಧನುಸ್ಸಿಗೆ ನಾಣೇರಿಸಿ ಹಿಡಿದು, ಮೇಘದಂತೆ ಗಂಭೀರಧ್ವನಿಯಿಂದ ಹೀಗೆಂದು ಹೇಳವನು ''ಏನೆಲೋ ದುರಾತ್ಮಾ!ಕ್ರೂರಾ! ಯಾರು ನೀನು? ಈಸಮಸ್ತಲೋಕವೂ ನನ್ನ ರಕ್ಷಣೆಗೊಳಪಟ್ಟಿರುವುದನ್ನು ಕಾಣೆಯಾ ? ದೇಹಬಲವಿರುವುದೆಂಬ ಕೊಬ್ಬಿನಿಂದ ದುರ್ಬಲಪ್ರಾಣಿಗಳನ್ನು ಬಲಾತ್ಕಾರದಿಂದ ಹಿಂಸಿಸುವೆಯಾ ? ವೇಷದಲ್ಲಿಮಾತ್ರ ರಾಜನಂತೆ ಕಾಣುತ್ತಿರುವೆ? ಈ ನಿನ್ನ ಕೃತ್ಯವನ್ನು ನೋಡಿದರೆ ಶೂದ್ರಜಾತಿಯವನೆಂದೆಣಿಸಬೇಕಾಗಿದೆ. ಎಲೆಲ, ದುರಾತ್ಮಾ! ಆ ಶ್ರೀಕೃಷ್ಣನು ಅರ್ಜುನಸಮೇತನಾಗಿ ಈ ಭೂಮಿಯನ್ನು ಬಿಟ್ಟು ಹೋದುದರಿಂದ, ನೀನು ಮದೋನ್ಮತ್ತನಾಗಿ,ನಿರಪರಾಧಿಗಳಾದ ಈ ಸಾಧುಜಂತುಗಳನ್ನು ಪೀಡಿಸಲಾರಂಭಿಸಿದೆಯಾ? ನಿಷ್ಕಾರಣವಾಗಿ ಹೀಗೆ ಸಾಧುಪ್ರಾಣಿಗಳನ್ನು ಪೀಡಿಸಿದ ನಿನಗೆ, ನನ್ನ ಕೈಯಿಂದ ಮರಣದಂಡನವಲ್ಲದೆ ಬೇರೆ ಪ್ರಾಯಶ್ಚಿತ್ತವಿಲ್ಲ!" ಎಂದು ಹೇಳಿ, ಆಮೇಲೆ ಆ ವೃಷಭವನ್ನು ನೋಡಿ '' ಎಲೈ ವೃಷಭರಾಜನೆ ? ತಾವರೆದಂಟಿನಂತೆ ಶುಭ್ರದೇಹವುಳ್ಳ ನೀನು ಯಾರು ? ನಿನ್ನ ನಾಲ್ಕುಕಾಲುಗಳಲ್ಲಿ ಒಂದೇಕಾಲನ್ನು ನೆಲದ ಮೇಲೂರಿ ನಿಂತಿರುವುದಕ್ಕೆ ಕಾರಣವೇನು? ನೀನು ಈ ವೃಷಭರೂಪದಿಂದಸಂಚರಿಸುವ ಯಾವನೋ ಒಬ್ಬ ದೇವಾಂಶಪುರುಷನೆಂದೇ ನನಗೆ ತೋರುವುದು. ಈ ನಿನ್ನ ದುರ್ದಶೆಯನ್ನು ನೋಡಿ ನನಗೆ ಬಹಳ ವ್ಯಸನವುಂಟಾಗುತ್ತಿರುವುದು. ಕುರುವಂಶರಾಜರಾದ ನಮ್ಮಿಂದ ಈಭೂಮಿಯು ರಕ್ಷಿಸಲ್ಪಡುತ್ತಿರುವಾಗ,ಇದುವರೆಗೆ ಒಂದುಪ್ರಾಣಿಯಾದರೂ ಇತರರಬಾಧೆಯಿಂದ ಕಣ್ಣೀರುಬಿಟ್ಟುದಿಲ್ಲ. ಇಂತಹ ಸ್ಥಿತಿಯಲ್ಲಿಯೂ ನಿನ್ನ ಕಣ್ಣುಗಳಲ್ಲಿ ದುಃಖಬಾಷ್ಪವು ಬಿಳುವುದುಂಟೆ? ಎಲೈ ವೃಷಭವೇ! ಈಗಲೂ ಚಿಂತೆಯಿಲ್ಲ!ನೀನು ಎಷ್ಟುಮಾತ್ರವೂ ಭಯಪಡಬೇಕಾದುದಿಲ್ಲ! ಇದೋ ! ಈಗಲೇ ನಾನು ದುರಾತ್ಮನಾದ ಈ ಶೂದ್ರನನ್ನು ನನ್ನ ತೀಕ್ಷ್ಣಬಾಣಗಳಿಂದ ಭೇದಿಸಿ, ಇನ್ನುಮೇಲೆ ನಿನ್ನನ್ನು ಈ ಭೂಮಿಯಲ್ಲಿ ನಾಲ್ಕುಕಾಲುಗಳಿಂದಲೇ ನಡೆಯುವಂತೆ ಮಾಡುವೆನು ನೋಡು! ದುಷ್ಟರನ್ನಡಗಿಸುವುದಕ್ಕಾಗಿಯೇ ಕಂಕಣವನ್ನು ಕಟ್ಟಿ ನಿಂತಿರು

ವ ನಾನಿರುವಾಗ, ನೀನು ಕಣ್ಣೀರುಬಿಟ್ಟು ದುಃಖಿಸುವುದೇಕೆ? ಎಲೈ ಧೇನು ವೆ! ಇನ್ನು ಮೇಲೆ ನೀನೂ ನಿನ್ನ ದುಃಖವನ್ನು ಬಿಟ್ಟುಬಿಡು! ಯಾವ ರಾಜನು ತನ್ನ ರಾಜ್ಯದಲ್ಲಿ ಪ್ರಜೆಗಳು ದುಷ್ಟರಿಂದ ಬಾಧಿಸಲ್ಪಡುವುದನ್ನು ತಿಳಿಯದೆ ಮದೋನ್ಮತ್ತನಾಗಿ ಸುಮ್ಮಸಿರುವನೋ, ಆ ರಾಜನ ಆಯುಸ್ಸು, ಕೀರ್ತಿ ರಾಜ್ಯಲಕ್ಷ್ಮಿ, ಇವೆಲ್ಲವೂ ಕ್ಷಣಕ್ಷಣಕ್ಕೂ ಕ್ಷೀಣಿಸಿಹೋಗುವುವು. ಸಜ್ಜನರಿಗೆ ದುರ್ಜನರಿಂದುಂಟಾಗುವ ಬಾಧೆಯನ್ನು ತಪ್ಪಿಸುವುದೇ ನಮ್ಮಂತಹ ರಾಜರಿಗೆ ಮುಖ್ಯವಾದ ಧರ್ಮವು. ಆ ಕಾರ್ಯವನ್ನು ನಡೆಸದಿದ್ದಮೇಲೆ ನಮ್ಮ ಜನ್ಮವೇ ಕೆ? ಆದುದರಿಂದ ಎಲೆ ದೇವಿ! ಈ ದುರಾತ್ಮನನ್ನು ಈಗಲೇ ನಾನು ನಿಗ್ರಹಿಸಿ, ನನ್ನ ಕ್ಷತ್ರಿಯಜನ್ಮವನ್ನು ಸಾರ್ಥಕಪಡಿಸುವೆನು. ಎಲೈ ವೃಷಭೇಂದ್ರನೆ! ಯಾವ ದುರಾತ್ಮನು ಈ ನಿನ್ನ ಮೂರುಪಾದಗಳನ್ನು ಕಟ್ಟಿರುವನೋ ಅದನ್ನು ಮೊದಲು ನನಗೆ ಹೇಳು! ಆಹಾ! ವಿಷ್ಣುಭಕ್ತರಾದ ನಮ್ಮಂತಹ ರಾಜರ ಆಳ್ವಿಕೆಯಲ್ಲಿ, ನಿಮ್ಮಂತಹ ಸಾಧುಗಳು ಹೀಗೆ ದುಃಖಿಸುವುದೆಂದರೇನು? ಇನ್ನು ನಿನಗೆ ಶುಭವಾಗಲಿ! ನಿನಗೆ ಈ ಕಷ್ಟವನ್ನುಂಟುಮಾಡಿದವನು ಪಾಂಡವರ ಕೀರ್ತಿಯನ್ನೇ ಕೆಡಿಸುವುದಕ್ಕಾಗಿ ಪ್ರಯತ್ನಿಸಿರುವನೆಂದು ಹೇಳಬೇಕಲ್ಲದೆ ಬೇರೆಯೆಲ್ಲ! ಆ ದುರಾತ್ಮನಾರೆಂಬುದನ್ನು ನೀನು ತಿಳಿಸಿದರೆ, ಈಗಲೇ ನಾನು ಅವನನ್ನು ಕೊಂದು ಬರುವೆನು. ನಿರಪರಾಧಿಗಳನ್ನು ಬಾಧಿಸುವವನಿಗೆ ನನ್ನಿಂದ ಭಯವು ತಪ್ಪದು. ಅಂತವನು ದೇವೇಂದ್ರನಾಗಿದ್ದರೂ ನಾನು ಆತನ ಭುಜಗಳನ್ನು ತೊಳ್ಬಲಿಗಳೊಡನೆಯೇ ಕತ್ತರಿಸದೆ ಬಿಡುವವನಲ್ಲ! ಈ ವಿಧದಿಂದ ಧರ್ಮಸ್ಥಾಪನವನ್ನು ಮಾಡುವುದೇ ನಮ್ಮಂತಹ ರಾಜರಿಗೆ ಕುಲಧರ್ಮವು. ದುಷ್ಟರನ್ನು ನಿಗ್ರಹಿಸುವುದು, ದುಃಖಿತರನ್ನು ಕಾಪಾಡುವುದು, ಇವೆರಡೇ ನಮ್ಮಂತಹ ರಾಜರಿಗೆ ಮುಖ್ಯಕರ್ತವ್ಯಗಳು"! ಎಂದನು. ಅದಕ್ಕಾ ವೃಷಭರಾಜನು ಪರೀಕ್ಷಿತ್ತನ್ನು ನೋಡಿ "ಎಲೈ ಮಹಾರಾಜನೆ! ಪಾಂಡವಕುಲದಲ್ಲಿ ಹುಟ್ಟಿದ ನಿಮ್ಮಂತವರಿಗೆ ಹೀಗೆ ದುಃಖಿತರನ್ನು ನೋಡಿ ಅಭಯಪ್ರದಾನವನ್ನು ಮಾಡುವುದು ಸಹಜವಾಗಿಯೇ ಇರುವುದು! ಈ ಗುಣಗಳನ್ನು ನೋಡಿಯೇ ಅಲ್ಲವೇ ಭಗವಂತನಾದ ಶ್ರೀಕೃಷ್ಣನೂಕೂಡ

ಅವರಿಗೆ ದೂತನಾಗಿ ನಿಂತು ಕಾರ್ಯವನ್ನು ನಡೆಸುತಿದ್ದನು! ಎಲೈ ರಾಜೇಂ
ದ್ರನೆ ! ಈಗ ನೀನು ಈ ನನ್ನ ಕಷ್ಟಕ್ಕೆ ಕಾರಣವೇನೆಂದು ಕೇಳಿದೆಯಲ್ಲವೆ ?
ಲೋಕದಲ್ಲಿ ಪ್ರಾಣಿಗಳ ವಿಪತ್ತಿಗೆ ಒಬ್ಬೊಬ್ಬರು ಒಂದೊಂದು ವಿಧವಾದ
ಕಾರಣಗಳನ್ನು ಹೇಳುತ್ತಿರುವರು. ಈ ವಾಕ್ಯಭೇದಗಳಿಂದ ನನಗೆ ಇದೇ
ದುಃಖಕಾರಣವೆಂದು ನಿಶ್ಚಯವಾಗಿ ತಿಳಿಯುವುದು ಸಾಧ್ಯವಲ್ಲ. ಆದುದರಿಂದ
ನನಗೆ ಯಾವನಿಂದ ಈ ದುಃಖವು ಪ್ರಾಪ್ತವಾಯಿತೋ ಆ ಪುರುಷನನ್ನು
ನಾವು ಕಾಣಲಾರೆವು.ಕೆಲವರು ನಾನಾವಿಧವಿಕಲ್ಪಗಳಿಂದ ದುಃಖಕಾರಣವೇ
ನೆಂಬುದನ್ನೂಹಿಸಿ, ತನ್ನ ದುಃಖಕ್ಕೆ ಸ್ವಾತ್ಮವೇ ಕಾರಣವೆಂದು ಹೇಳುವರು.
ಬೇರೆ ಕೆಲವರು ಅದೃಷ್ಟವು ಕಾರಣವೆನ್ನುವರು. ಮತ್ತೆ ಕೆಲವರು ಪೂರ್ವ
ಕರ್ಮಗಳೇ ದುಃಖಕಾರಣವೆನ್ನುವರು. ಇನ್ನು ಕೆಲವರು ಪ್ರಕೃತಿಪರಿಣಾಮ
ರೂಪವಾದ ಸ್ವಭಾವವೇ ಕಾರಣವೆಂದು. ಹೇಳುವರು ಮತ್ತೂಕೆಲವರು.
ಈಶ್ವರನೇ ಕಾರಣವೆಂದು ಹೇಳುವರು. ಇನ್ನು ಕೆಲವರು, ಊಹಿಸುವುದ
ಕ್ಕಾಗಲಿ, ಬಾಯಿಂದ ಹೇಳುವುದಕ್ಕಾಗಿ ಸಾಧ್ಯವಲ್ಲದ ಒಂದಾನೊಂದು ಕಾರ
ಣದಿಂದ ಈ ದುಃಖಗಳುಂಟಾಗುವುವೆಂದು ಹೇಳುವರು. ಇವುಗಳಲ್ಲಿ ಯಾವು
ದು ನಿಶ್ಚಯವೆಂಬುದನ್ನು ನಾವು ನಿರ್ಧರಿಸಿ ತಿಳಿಯಲಾರೆವು. ಅವರವರ ನಂ
ಬಿಕೆಯಿದ್ದಂತೆಯೇ ನಿಶ್ಚಯಿಸಿಕೊಳ್ಳಬೇಕಾಗಿದೆ. ಆದುದರಿಂದ ಎಲೈ ರಾಜ
ನೆ! ಈಗ ನನಗೆ ಸಂಭವಿಸಿರುವ ಈ ಕಷ್ಟಕ್ಕೆ ಕಾರಣವೇನೆಂಬುದನ್ನು ನೀನೇ
ನಿನ್ನ ಬುದ್ಧಿಯಿಂದಾಲೋಚಿಸಿ ತಿಳಿದುಕೊಂಡು, ತಕ್ಕ ಪ್ರತಿಕ್ರಿಯೆಯನ್ನು
ಮಾಡು." ಎಂದನು. ಈ ಮಾತನ್ನು ಕೇಳಿ ಪರೀಕ್ಷಿದ್ರಾಜನು, ಆ ವಾಕ್ಯದ
ಅಭಿಪ್ರಾಯವೇನೆಂಬುದನ್ನು ತನ್ನಲ್ಲೆ ತಾನು ನಿಶ್ಚಲವಾದ ಬುದ್ಧಿಯಿಂದ
ಸ್ವಲ್ಪಹೊತ್ತಿನವರೆಗೆ ಆಲೋಚಿಸಿ, ಅದರ ಅಭಿಪ್ರಾಯವನ್ನು ತಿಳಿದುಕೊಂ
ಡು, ತನಗಿದ್ದ ಮನೋವ್ಯಥೆಯನ್ನು ಬಿಟ್ಟು, ಸಂತೋಷಯುಕ್ತವಾಗಿ ತಿರುಗಿ
ಆ ವೃಷಭವನ್ನುಕರಿತು ಹೇಳುವನು. ''ಎಲೆ ವೃಷಭರಾಜನೆ ! ನೀನು ಸಮ
ಸ್ತಧರ್ಮಗಳನ್ನೂ ಬಲ್ಲವನು. ಈ ನಿನ್ನ ಮಾತುಗಳನ್ನು ನೋಡಿದರೆ ವೃಷಭ
ರೂಪದಿಂದಿರುವ ಧರ್ಮಪುರುಷನೇ ನೀನೆಂದು ನಿಶ್ಚಿತವಾಗುವುದು. ನೀನು
ಧರ್ಮಪುರುಷನಾದುದರಿಂದಲೇ ಇಂತಹ ಆಪತ್ತಿನಲ್ಲಿಯೂ ನೀನು ದುಃಖಿಸಿ

ರಣರಾರೆಂಬುದನ್ನು ತಿಳಿಸದೆ ಮರೆಸಿಟ್ಟಿರುವೆ! ಓ ಮಹಾತ್ಮಾ! ನಿನ್ನ ಅಭಿ ಪ್ರಾಯವೇನೆಂಬುದು ನನಗೆ ಚೆನ್ನಾಗಿ ತಿಳಿಯಿತು. ''ನೂಡಿದವರ ಪಾಪವು ಆಡದವರ ಬಾಯಲ್ಲಿ'' ಎಂಬ ನಾಣ್ನುಡಿಯಂತೆ, ಅಧರ್ಮವನ್ನು ನಡೆಸಿದವನು ಸಮೀಪದಲ್ಲಿದ್ದರೂ, ಅವನನ್ನು ನಿರ್ದೇತಿಸಿ, ಅವನ ಪಾಪಕಾರ್ಯವನ್ನು ಬಾಯಿಂದ ನಿರೂಪಿಸಿ ಹೇಳಿದಪಕ್ಷದಲ್ಲಿ,ಧರ್ಮಶೀಲರಿದ್ದೂಕೂಡ ಆ ಪಾಪವು ಬಂದು ತಗುಲುವುದು. ಈ ಧರ್ಮಸೂಕ್ಷ್ಮವನ್ನು ನೀನು ಬಲ್ಲವನಾದುದರಿಂದಲೇ ಅದರ ಕಾರಣವನ್ನು ತಿಳಿದರೂ ಬಾಯಿಂದ ಹೇಳದೆ ಮರೆಸಿಟ್ಟಿರುವೆ. ಇದಲ್ಲದೆ ಪ್ರಾಣಿಗಳಿಗೆ ಭಗವತ್ಸಂಕಲ್ಪವು ಹೇಗೆಂಬುದನ್ನು ಮನಸ್ಸಿನಿಂದಾಗಲಿ, ಮಾತಿನಿಂದಾಗಲಿ ನಿರ್ಧರಿಸುವುದಕ್ಕೆ ಸಾಧ್ಯವಲ್ಲ! ಆದುದರಿಂದ ನಿನ್ನ ಮಾತುಗಳನ್ನು ನೋಡಿದರೆ ಮತ್ತೊಬ್ಬನನ್ನು ಕುರಿತು, ಈತನೇ ಅಧರ್ಮಕಾರಿಯೆಂದು ನಿರೂಪಿಸಿ ಹೇಳುವುದೇ ಅಧರ್ಮವೆಂದೂ ವ್ಯಕ್ತವಾಗುವುದು. ವೃಷಭರೂಪದಿಂದಿರುವ ಧರ್ಮಪುರುಷನೇ ನೀನೆಂಬುದರಲ್ಲಿ ಏನೇನೂ ಸಂದೇಹವಿಲ್ಲ. ನಿನಗೆ ತಪಸ್ಸು, ಶೌಚ, ದಯೆ, ಸತ್ಯ, ಎಂಬಿವು ನಾಲ್ಕೂ ನಾಲ್ಕುಪಾದಗಳಾಗಿರುವುವು. ಇವುಗಳಲ್ಲಿ ಮೊದಲನೆಯ ಮೂರುಪಾದಗಳೂ ಕ್ರಮವಾಗಿ ಈಗಿನ ಕಾಲದೋಷದಿಂದ ಶಕ್ತಿಗುಂದಿರುವುವು. ಹೆಮ್ಮೆಯಿಂದ ತಪಸ್ಸೂ, ದುಸ್ಸಂಗದಿಂದ ಶುಚಿತ್ವವೂ, ಮದದಿಂದ ದಯೆಯೂ ಕ್ರಮಕ್ರಮವಾಗಿ ಕುಂದುತ್ತ ಬರುವುದು ಸಹಜವು. ಅಧರ್ಮಾಂಗಗಳಾದ ಈ ಮೂರುದೋಷಗಳಿಂದ ಸತ್ಯಾದಿರೂಪಗಳಾದ ನಿನ್ನ ಮೂರುಪಾದಗಳಿಗೂ ಭಂಗವುಂಟಾಗಿರುವುದು. ಎಲೈ ಧರ್ಮಪುರುಷನೆ! ಈಗ ನೀನು ಸತ್ಯವೆಂಬ ಒಂದೇ ಕಾಲಿನಿಂದ ನಿಂತಿರುವೆ! ಅಧರ್ಮಸ್ವರೂಪನಾದ ಕಲಿಪುರುಷನು ಲೋಕದಲ್ಲಿ ಅನೃತವನ್ನು ಹೆಚ್ಚಿಸಿ, ಈ ನಿನ್ನ ಒಂದು ಪಾದವನ್ನೂ ಮುರಿದುಬಿಡಬೇಕೆಂದು ಪ್ರಯತ್ನಿಸುತ್ತಿರುವನು. ಗೋರೂಪವನ್ನು ಧರಿಸಿರುವ ಈ ಭೂದೇವಿಯೂ ಕೂಡ, ಇದುವರೆಗೆ ಭೂಭಾರೋತ್ತಾರಣಾರ್ಥವಾಗಿ ಅವತರಿಸಿದ್ದ ದಯಾಳುವಾದ ಆ ಭಗವಂತನ ಶುಭಲಕ್ಷಣವಿಶಿಷ್ಟಗಳಾದ ಪಾದಗಳ ಸಂಬಂಧದಿಂದ ಸಂತೋಷಗೊಂಡಿದ್ದಳು. ಆ ಶ್ರೀಕೃಷ್ಣನೂ ಈಗ ತನ್ನನ್ನು ಬಿಟ್ಟು ಹೋದುದರಿಂದ ಪರಮಸಾಧ್ವೀಮಣಿಯಾದ ಈಕೆಯು ಭಾಗ್ಯಹೀನಳಾಗಿ

ದಿಕ್ಕಿಲ್ಲದವಳಂತೆ ದುಃಖದಿಂದ ಕಣ್ಣೀರುಬಿಟ್ಟು ವಿಲಪಿಸುತ್ತಿರುವಳು. ಇನ್ನು ಮೇಲೆ ತಾನು, ಬ್ರಾಹ್ಮಣಕುಲಕ್ಕೆ ವಿರೋಧಿಗಳಾಗಿ,ವ್ಯಾಜಸೂತ್ರಕ್ಕೆ ರಾಜರೆನಿಸಿಕೊಂಡ ಶೂದ್ರರ ಕೈಯಲ್ಲಿ ಸಿಕ್ಕಿಬಿದ್ದು, ಅವರಿಗೆ ಭೋಗ್ಯಳಾಗಿರಬೇಕಾದ ಸಂಭವವುಂಟಾಗುವುದೆಂದು ಈಕೆಯು ಬಹಳವಾಗಿ ಕೊರಗುವಂತಿದೆ!" ಎಂದನು. ಹೀಗೆ ಪರೀಕ್ಷಿದ್ರಾಜನು ಧರ್ಮಪುರುಷನನ್ನೂ, ಭೂದೇವಿಯನ್ನೂ ಸಾಂತ್ವವಾಕ್ಯಗಳಿಂದ ಸಮಾಧಾನಪಡಿಸಿ, ಇವರ ಕಷ್ಟಕ್ಕೆ ಕಾರಣಭೂತನಾದ ಕಲಿಪುರುಷನನ್ನು ಆಕ್ಷಣವೇ ಕೊಂದುಬಿಡಬೇಕೆಂದೂ ನಿಶ್ಚಯಿಸಿ, ತನ್ನ ತೀಕ್ಷ್ಣವಾದ ಖಡ್ಗವನ್ನು ಒರೆಯಿಂದ ಕಿತ್ತು ಕೈಗೆತ್ತಿಕೊಂಡನು. ಆಗ ಕಲಿಪುರುಷನು ತನ್ನನ್ನು ಕೊಲ್ಲುವದಕ್ಕಾಗಿ ಕತ್ತಿಯನ್ನೆಳೆದು ನಿಂತಿರುವ ಪರೀಕ್ಷಿದ್ರಾಜನನ್ನು ನೋಡಿ, ಭಯದಿಂದ ನಡುಗುತ್ತ, ತಾನು ಧರಿಸಿದ್ದ ರಾಜವೇಷವನ್ನು ಆಕ್ಷಣವೇ ತೆಗೆದು ಬಿಸುಟು, ಆ ರಾಜನ ಪಾದಗಳಲ್ಲಿ ಬಿದ್ದು ನಮಸ್ಕರಿಸಿ, ಶರಣಾಗತಿಯನ್ನು ಮಾಡಿದನು. ಆಗ ದೀನವತ್ಸಲನಾದ ಪರೀಕ್ಷಿದ್ರಾಜನು, ಕಾಲಮೇಲೆ ಬಿದ್ದು ಶರಣಾಗತನಾಗಿ ರಕ್ಷಣೆಯನ್ನು ಬೇಡುತ್ತಿರುವ ಕಲಿಪುರುಷನನ್ನು ನೋಡಿ, ಅವನಲ್ಲಿ ಮರುಕಗೊಂಡು, ಅವನನ್ನು ಕೊಲ್ಲುವುದಕ್ಕಿಷ್ಟವಿಲ್ಲದೆ, ಮಂದಹಾಸಪೂರ್ವಕವಾಗಿ ಹೇಳುವನು. "ಎಲೈ! ಇನ್ನು ನೀನು ಭಯಪಡಬೇಡ! ನನ್ನ ಪಿತಾಮಹನಾದ ಅರ್ಜುನನ ಕೀರ್ತಿಯನ್ನು ಮುಂದಕ್ಕೆ ತರಬೇಕೆಂಬುದೇ ಆ ವಂಶಜರಾದ ನಮ್ಮ ಮುಖ್ಯಕೃತ್ಯವಾದುದರಿಂದ, ಕೈಜೋಡಿಸಿ ನಿಂತವರನ್ನು ನಾವು ಕೊಲ್ಲಲಾರೆವು. ಆದರೆ, ನೀನು ಕೇವಲಪಾಪಪ್ರಿಯನು. ಆದುದರಿಂದ ಇನ್ನುಮೇಲೆ ನೀನು ನನ್ನ ಆಳ್ವಿಕೆಗೊಳಪಟ್ಟ ಧೇಶಗಳಲ್ಲಿಮಾತ್ರ ಕಾಲಿಡಕೂಡದು. ಈ ಕ್ಷಣವೆ ನೀನು ಈ ಸ್ಥಳವನ್ನು ಬಿಟ್ಟು ಬೇರೆಲ್ಲಿಗಾದರೂ ಹೋಗಬೇಕು! ನಿನು ರಾಜರ ದೇಹದಲ್ಲಿ ವರ್ತಿಸುವಾಗ, ನಿನ್ನನ್ನನುಸರಿಸಿಯೇ ಅವರಲ್ಲಿ ಅಧರ್ಮಗಳೆಲ್ಲವೂ ಕಾಲೂರಿ ನಿಲ್ಲವುವು. ಅಂತವರಲ್ಲಿ ಲೋಭವೂ, ಅಸತ್ಯವೂ, ಚೌರ್ಯವೂ, ಹೆಮ್ಮೆಯೂ, ದುಸ್ಸ್ವಭಾವವೂ, ದುರಾಚಾರವೂ, ರಾಗದ್ವೇಷಾದಿಗಳಿಂದ ಹುಟ್ಟುವ ಕಲಹವೂ, ವಂಚನೆಯೂ, ಮೇಲೆಮೇಲೆ ತಲೆಯೆತ್ತುತ್ತಿರುವುವು. ಈ

ನಮ್ಮ *ಬ್ರಹ್ಮಾವರ್ತವೆಂಬ ಕ್ಷೇತ್ರವಾದರೋ ಇದುವರೆಗೆ ಸರ್ವಧರ್ಮಗಳಿಗೂ ನೆಲೆಯೆನಿಸಿಕೊಂಡಿರುವುದು. ಮತ್ತು ಈ ದೇಶದಲ್ಲಿ ಯಜ್ಞಾನುಷ್ಠಾನ ಪರರಾದ ಮಹರ್ಷಿಗಳು ಯಜ್ಞೇಶ್ವರನಾದ ಭಗವಂತನನ್ನು ಅನವರತವೂ ಯಜ್ಞಗಳಿಂದಾರಾಧಿಸುತ್ತಿರುವರು. ಇಲ್ಲಿ ಆ ಶ್ರೀ ಪರಿಯು, ಯಜ್ಞಾರಾಧ್ಯರಾದ ಇಂದ್ರಾದಿದೇವತೆಗಳ ಶರೀರದಲ್ಲಿ ತಾನೇ ಪ್ರವೇಶಿಸಿದ್ದು, ಅವರವರ ಯಜ್ಞಕಾರ್ಯಗಳಿಂದ ಪ್ರಸನ್ನನಾಗಿ ಕೋರಿಕೆಗಳನ್ನು ಕೈಗೂಡಿಸುತ್ತಿರುವನು. ಅವರೆಲ್ಲರಿಗೂ ಸರ್ವವಿಧದಲ್ಲಿಯೂ ಕ್ಷೇಮವನ್ನುಂಟುಮಾಡುತ್ತಿರುವನು. ಮುಖ್ಯವಾಗಿ ಆ ಭಗವಂತನು ಸ್ಥಾವರಜಂಗಮಾತ್ಮಕಗಳಾದ ಸಮಸ್ತಪ್ರಪಂಚದ ಒಳಗೂ, ಹೊರಗೂ ತಾನೊಬ್ಬನೇ ವಾಯುವಿನಂತೆ ವ್ಯಾಪಿಸಿ,ತಾನೇ ಅವುಗಳಿಗೆ ಆಧಾರನಾಗಿಯೂ, ನಿಯಾಮಕನಾಗಿಯೂ ಇರುವನು. ಆದುದರಿಂದ ಇಂತಹ ಪುಣ್ಯಕ್ಷೇತ್ರದಲ್ಲಿ ನೀನು 'ಕ್ಷಣಮಾತ್ರವೂ ಕಾಲಿಟ್ಟು ನಿಲ್ಲಕೂಡದು." ಎಂದನು. ಹೀಗೆ ಪರೀಕ್ಷಿದ್ರಾಜನು ನಿಯಮಿಸಿದೊಡನೆ, ಕಲಿಯು, ದಂಡಪಾಣಿಯಾದ ಯಮನಂತೆ ತನ್ನ ಮುಂದೆ ಖಡ್ಗಧಾರಿಯಾಗಿ ನಿಂತಿದ್ದ ಆ ರಾಜನನ್ನು ನೋಡಿ ಭಯದಿಂದ ನಡುಗುತ್ತ ವಿಜ್ಞಾಪಿಸುವನು.''ಎಲ್ಲೆ ರಾಜೇಂದ್ರನೆ ! ನಿನ್ನಾಜ್ಞೆಯಂತೆಯೇ ನಾನು ಬೇರೆಲ್ಲಿಗಾದರೂ ಹೋಗುವುದರಲ್ಲಿ ಸಂದೇಹವಿಲ್ಲ.ಆದರೆ ನಾನು ಬೇರೆಲ್ಲಿಗೆ ಹೋದರೂ ಧನುರ್ಬಾಣಗಳನ್ನು ಹಿಡಿದಿರತಕ್ಕ! ಈ ನಿನ್ನ ಸ್ವರೂಪವನ್ನು ನನ್ನ ಮನಸ್ಸನ್ನು ಬಿಟ್ಟು ಹೋಗಲಾರದು ! ನಿನ್ನಲ್ಲಿ ನನಗುಂಟಾಗಿರುವ ಭೀತಿಯಿಂದ ಎಲ್ಲೆದ್ದರೂ ನನಗೆ ಈ ನಿನ್ನ ರೂಪವೇ ಕಾಣಿಸುವಂತಾಗಿರುವುದು.ಆದುದರಿಂದ ನಾನು ನಿರ್ಭಯವಾಗಿನಿಲ್ಲತಕ್ಕ ಕೆಲವು ಸ್ಥಳಗಳನ್ನು ನೀನೇ ನನಗೆ ತೋರಿಸಿ ಕೊಟ್ಟರೆ, ನಿನ್ನ ಆಜ್ಞಾಧೀನನಾಗಿ ನಾನು ಆ ಸ್ಥಳಗಳಲ್ಲಿ ನಿಯತವಾಗಿ ವಾಸಮಾಡುತ್ತಿರುವೆನು." ಎಂದನು ! ಅದಕ್ಕಾ ರಾಜನು, ಕಲಿಪುರುಷನನ್ನು ಕುರಿತು ''ಎಲ್ಲೆ ! ಹಾಗಿದ್ದರೆ ನೀನು ಇನ್ನುಮೇಲೆ ಜೂಜು, ಮದ್ಯಪಾನ, ಪರಸ್ತ್ರೀಸಂಗಮ, ಪ್ರಾಣಿಹಿಂಸೆ, ಇವು ನಡೆಯತಕ್ಕ ಸ್ಥಳಗಳಲ್ಲಿ ನಿರ್ಭಯವಾಗಿ ನೆರಬಹುದು.

* ಸರಸ್ವತಿ ಮತ್ತು ದೃಷದ್ವತೀನದಿಗಳ ನಡುವೆ ಇರುವ ಪ್ರದೇಶವು ಬ್ರಹ್ಮಾವರ್ತನೆನಿಸುವುದು.

ಇವು ನಾಲ್ಕೂ ನಿನಗೆ ನಿತ್ಯನಿವಾಸಸ್ಥವಾಗಿರಲಿ!" ಎಂದನು. ಕಲಿಯು ಇನ್ನೂ ಕೆಲವು ಸ್ಥಳಗಳನ್ನು ತೋರಿಸಬೇಕೆಂದು ಪ್ರಾರ್ಥಿಸಲು, ಸುವರ್ಣವನ್ನೂ ಒಂದುಸ್ಥಳವಾಗಿ ತೋರಿಸಿಕೊಟ್ಟನು. ಅಷ್ಟಕ್ಕೂ ತೃಪ್ತಿಯಿಲ್ಲದೆ ಕಲಿಯು ಮತ್ತೆ ಕೆಲವು ಸ್ಥಳಗಳನ್ನು ಯಾಚಿಸಲು, ಸುಳ್ಳು, ಮದ, ಕಾಮ, ಕ್ರೋಧ, ವೈರಗಳೆಂಬ ಈ ಐದು ಬಗೆಯ ಅಧರ್ಮಗಳಿರತಕ್ಕ ಸ್ಥಳಗಳನ್ನು ತೋರಿಸಿ, ಈ ಸ್ಥಳಗಳುಹೊರತು, ಬೇರೆಲ್ಲಿಯೂ ಪ್ರವರ್ತಿಸಕೂಡದೆಂದು ಕಠಿನಶಾಸನವನ್ನು ಮಾಡಿದನು ಈ ರಾಜಾಜ್ಞೆಯನ್ನು ತಿರಸಾವಹಿಸಿ ಕಲಿಪುರುಷನು ಆ ಸ್ಥಳಗಳಲ್ಲಿಮಾತ್ರವೇ ನಿವಸಿಸುತ್ತಿರುವನು. ಎಲೈ ಮಹರ್ಷಿಗಳೆ! ಈ ಮೇಲೆ ಹೇಳಿದುವೆಲ್ಲವೂ ಕಲಿನಿವಾಸಸ್ಥಾನಗಳಾದುದರಿಂದ, ಆತ್ಮೋಜ್ಜೀವನವನ್ನ ಪೇಕ್ಷಿಸತಕ್ಕವರು,ಎಂದಿಗೂ ಇಂತಹವಿಷಯಗಳಲ್ಲಿ ಪ್ರವರ್ತಿಸಕೂಡದು. ಅದರಲ್ಲಿಯೂ ಮುಖ್ಯವಾಗಿ ಪ್ರಜಾಪಾಲನವನ್ನು ಮಾಡತಕ್ಕ ರಾಜರು ಈ ಸ್ಥಳಗಳನ್ನು ಕಣ್ಣೆತ್ತಿಯೂ ನೋಡಬಾರದು. ರಾಜನಾದವನು ಯಾವಾಗಲೂ ಧರ್ಮಶೀಲನಾಗಿರಬೇಕಾದುದತ್ಯವಶ್ಯವು. ರಾಜನೇ ದಾರಿತಪ್ಪಿ ನಡೆದರೆ, ಪ್ರಜೆಗಳೂ ಅದೇದಾರಿಯನ್ನು ಹಿಡಿದು ಕೆಟ್ಟುಹೋಗುವರು. ಒಬ್ಬನ ಅವಿವೇಕದಿಂದ ಮೊತ್ತಕ್ಕೆ ರಾಜ್ಯವೇ ಕೆಡುವುದು." ಎಂದನು. ಹೀಗೆ ಪರೀಕ್ಷಿದ್ರಾಜನು ಕಲಿಯನ್ನು ನಿಗ್ರಹಿಸಿ ಕಳುಹಿಸಿ, ಧರ್ಮಪುರುಷನಿಗೆ ತಪಶ್ಶೌಚದಯಾರೂಪಗಳಾದ ಮೂರು ಕಾಲುಗಳನ್ನೂ ತಿರುಗಿ ದೃಢಪಡಿಸಿಕೊಟ್ಟನು. ಭೂದೇವಿಗೂ ಮನಸ್ಸಂತೋಷವನ್ನುಂಟುಮಾಡಿ ಅತ್ಯಾದರಿಂದ ಪೋಷಿಸಿದನು. ಹೀಗೆ ಪರೀಕ್ಷಿದ್ರಾಜನು, ತನ್ನ ಪಿತಾಮಹನಾದ ಧರ್ಮಪುತ್ರನು ಅರಣ್ಯಕ್ಕೆ ಹೋಗುಕಾಲದಲ್ಲಿ ತನಗೆ ಕೊಟ್ಟುಹೋದ ಸಾಮ್ರಾಜ್ಯಸಿಂಹಾಸನವನ್ನೇರಿ, ರಾಜಲಕ್ಷ್ಮೀವಿಶಿಷ್ಟನಾಗಿ, ವಿಶಾಲವಾದ ಕೀರ್ತಿಯನ್ನು ಹರಡಿ, ಮೊನ್ನೆಯವರೆಗೂ ಹಸ್ತಿನಾಪುರದಲ್ಲಿರುತಿದ್ದನು. ಮಹಾನುಭಾವನಾದ ಆ ಪರೀಕ್ಷಿದ್ರಾಜನ ಆಜ್ಞೆಯು ಇನ್ನೂ ನಡೆಯುತ್ತಿರುವುದರಿಂದಲೇ, ನೀವೂ ಇಲ್ಲಿ ಸತ್ರಯಾಗವನ್ನಾರಂಭಿಸಿ, ನಿರ್ವಿಘ್ನವಾಗಿ ನಡೆಸುತ್ತಿರುವಿರಿ! ಇಲ್ಲದಪಕ್ಷದಲ್ಲಿ ನಿಮ್ಮ ಯಾಗಕಾರ್ಯವೂಕೂಡ ಕಲಿಬಾಧೆಯಿಂದ ಆಗಲೇ ನಷ್ಟವಾಗುತಿದ್ದಿತು." ಎಂದನು. ಇಲ್ಲಿಗೆ ಹದಿನೇಳನೆಯ ಅಧ್ಯಾಯವು.

ಪರೀಕ್ಷಿದ್ರಾಜನು ಬೇಟೆಗೆ ಹೋದುದು. ಶೃಂಗಿಶಾಪವು.

ಎಲೈ ಮಹರ್ಷಿಗಳೆ ! ಯಾವ ಮಹಾತ್ಮನು ತಾಯಿಯ ಗರ್ಭದಲ್ಲಿ ಬೆಳೆಯುವಾಗ ಅಶ್ವತ್ಥಾಮನ ಬ್ರಹ್ಮಾಸ್ತ್ರದಿಂದ ದಗ್ಧನಾಗುತಿದ್ದರೂ, ಕೃಷ್ಣಾನುಗ್ರಹದಿಂದ ಸಾಯದೆ ಬದುಕಿದನೋ, ಯಾವ ಮಹಾನುಭಾವನು ಶ್ರೀಹರಿಯಲ್ಲಿ ನಟ್ಟಮನಸ್ಸುಳ್ಳವನಾಗಿ, ಬ್ರಾಹ್ಮಣಶಾಪಪ್ರೇರಿತನಾದ ತಕ್ಷಕನೆಂಬ ಕ್ರೂರಸರ್ಪವು ತನ್ನನ್ನು ಕೊಲ್ಲುವುದಕ್ಕಾಗಿ ಬಂದಾಗಲೂ ಹೆದರದೆ ಧೈರ್ಯದಿಂದಿದ್ದನೋ, ಆ ಪರೀಕ್ಷಿದ್ರಾಜನು ತನ್ನ ದೇಹದಲ್ಲೆಯೂ, ತದನುಬಂಧಿಗಳಲ್ಲಿಯೂ ಆಸೆಯನ್ನು ಬಿಟ್ಟು, ಶುಕಮುನಿಗೆ ಶಿಷ್ಯನಾಗಿ, ಭಗವಂತನಲ್ಲಿ ದೃಢವಾದ ನಿಷ್ಠೆಯನ್ನು ಹಿಡಿದು, ಗಂಗಾತೀರದಲ್ಲಿ ತನ್ನ ದೇಹವನ್ನು ಕಳೆದುಬಿಟ್ಟನು. ಎಲೈ ಶೌನಕಾದಿಗಳೆ ! ಭಗವಂತನಲ್ಲಿ ನಿಷ್ಠೆಯುಳ್ಳವರಿಗೆ ಮೋಹವೆಂಬುದು ಎಷ್ಟುಮಾತ್ರಕ್ಕೂ ಉಂಟಾಗದು. ಶ್ರೀಹರಿಯ ಕಥಾಮೃತವನ್ನು ಪಾನಮಾಡತಕ್ಕರಿಗೂ, ಆತನನ್ನು ಸ್ಮರಿಸತಕ್ಕವರಿಗೂ, ಅವಸಾನಕಾಲದಲ್ಲೆಯಾದರೂ ಧೈರ್ಯವು ಕದಲದು. ಕಲಿಯು ಈ ಭೂಮಿಯಲ್ಲಿ ಪ್ರವೇತಿಸಿದ್ದರೂಕೂಡ, ಪರೀಕ್ಷಿತ್ತು ರಾಜ್ಯವನ್ನಾಳುತಿದ್ದವರೆಗೆ, ಮತ್ತು ಅತನಾಜ್ಞೆಯು ಲೋಕದಲ್ಲಿ ನಡೆಯುತಿದ್ದವರೆಗೆ, ಕಲಿಯ ಪ್ರಾಬಲ್ಯಕ್ಕೆ ಎಳ್ಳಷ್ಟಾದರೂ ಅವಕಾಶವಾಗಲಿಲ್ಲ ! ಶ್ರೀಕೃಷ್ಣನು ಈ ಭೂಮಿಯನ್ನು ಬಿಟ್ಟಕ್ಷಣವೇ ಅಧರ್ಮಕಾರಣನಾದ ಕಲಿಯು ಈ ಲೋಕದಲ್ಲಿ ತಲೆಯಿಕ್ಕಿದನು. ಕಲಿಯು ವಿಶೇಷಪಾಪಕಾರಣನಾಗಿದ್ದರೂ, ಪರೀಕ್ಷಿದ್ರಾಜನು ಅವನನ್ನು ಕೊಲ್ಲದೆ ಬಿಟ್ಟುದಕ್ಕೆ ಕೆಲವು ಕಾರಣಗಳುಂಟು ! ಕಲಿಯುಗದಲ್ಲಿ ಭಗವತ್ಕೀರ್ತನಗಳೇ ಮೊದಲಾಗಿ ಬಹಳ ಸುಲಭಸಾಧ್ಯಗಳಾದ ಪುಣ್ಯಕರ್ಮಗಳೂಕೂಡ, ಬಹುತೀಕ್ಷ್ಣಕಾಲದಲ್ಲಿಯೇ ಫಲವನ್ನು ಕೈಗೂಡಿಸುವುವು. ಪಾಪಕಾರ್ಯಗಳು ಬೇಗನೆ ಫಲವನ್ನು ತೋರಿಸಲಾರವು. ಪರೀಕ್ಷಿದ್ರಾಜನು ಈ ಗುಣಾಂಶವನ್ನು ಚೆನ್ನಾಗಿ ಬಲ್ಲವನಾದುದರಿಂದ, ಕಲಿಪ್ರವೇಶವಾದಮಾತ್ರಕ್ಕೆ ಅಷ್ಟಾಗಿ ನಷ್ಟವೇನೂ ಇಲ್ಲವೆಂದೆಣಿಸಿ, ಪುಷ್ಪಗಳನ್ನು ಕದಲಿಸದೆ ಅವುಗಳೊಳಗಿನ ಮಕರಂದವನ್ನು ಕುಡಿಯುವ ಭ್ರಮರದಂತೆ, ಕಲಿಪುರುಷನನ್ನು ಸಂಪೂರ್ಣವಾಗಿ ವಧಿಸದೆ,ಅತನ ಗರ್ವವನ್ನು

ಮಾತ್ರ ಮುರಿದುಬಿಟ್ಟನು. ಕಲಿಪುರುಷನೂಕೂಡ ಈಗ ಜನರಲ್ಲಿ ನಿರ್ಭಯವಾಗಿ ಪ್ರವರ್ತಿಸಲಾರನು. ಅಲ್ಲಲ್ಲಿ ಹೊಂಚುಹಾಕುತಿದ್ದು ಕುರಿಗಳಮೇಲೆ ಬಿಳುವ ತೋಳನಂತೆ, ಅಲ್ಲಲ್ಲಿ ನಿರೀಕ್ಷಿಸುತಿದ್ದು, ಎಚ್ಚರತಪ್ಪಿದ ಮನುಷ್ಯರನ್ನು ಹಿಡಿಯುವನೇಹೊರತು, ಸ್ಥಿರಮನಸ್ಸುಳ್ಳ ಪಂಡಿತರನ್ನು ಕಂಡರೆ ಹೆದರಿ ಪಲಾಯನಮಾಡುವನು. ಅದು ಹಾಗಿರಲಿ! ಎಲ್ಲೆ ಮಹರ್ಷಿಗಳೆ! ನೀವು ಪರೀಕ್ಷಿದ್ರಾಜನ ಚರಿತ್ರವನ್ನು ವಿವರಿಸಬೇಕೆಂದು ಕೇಳಿದಿರಿಲ್ಲವೆ? ನಿಮ್ಮ ಕೋರಿಕೆಯಂತೆಯೇ ಭಗವತ್ಕಥಾಮಿತ್ರಿತವಾದ ಆ ರಾಜನ ಚರಿತ್ರವನ್ನು ನಿಮಗೆ ತಿಳಿಸಿರುವೆನು. ಆತ್ಮೋಜ್ಜೀವನವನ್ನಪೇಕ್ಷಿಸುವವರೊಬ್ಬೊಬ್ಬರೂ ಹೀಗೆ ಭಗವದ್ವಿಷಯಕಗಳಾದ ಪುಣ್ಯಚರಿತ್ರಗಳನ್ನು ಕೇಳಿ ತಿಳಿಯಬೇಕಾದುದೇ ಅತ್ಯವಶ್ಯವು." ಎಂದನು. ಈ ಮಾತನ್ನು ಕೇಳಿ ತಿರುಗಿ ಶೌನಕಾದಿಮಹರ್ಷಿಗಳು ಸೂತನನ್ನು ಕುರಿತು, "ಎಲ್ಲೆ ಮಹಾತ್ಮನೆ! ನಿನ್ನಿಂದ ನಾವು ಧನ್ಯರಾದೆವು. ಅಸ್ಥಿರವಾದ ಮನುಷ್ಯಜನ್ಮವನ್ನೆತ್ತಿದ ನಮಗೆ, ನೀನು ಕರ್ಣಾಮೃತಪ್ರಾಯಗಳಾದ ಆ ಭಗವಂತನ ಪುಣ್ಯಚರಿತ್ರಗಳನ್ನು ತಿಳಿಸುವುದರಿಂದ ನಮ್ಮನ್ನು ಕೃತಾರ್ಥರನ್ನಾಗಿ ಮಾಡಿದೆ! ಇದಕ್ಕಾಗಿ ನಾವು ನಿನಗೆ ಯಾವವಿಧವಾದ ಪ್ರತ್ಯುಪಕಾರವನ್ನು ಮಾಡಬಲ್ಲೆವು? ಇದೋ! ನಿನ್ನನ್ನು ಅತೀರ್ವದಿಸುವೆವು! ಇದೇ ನಾವು ಮಾಡತಕ್ಕ ಪ್ರತ್ಯುಪಕಾರವು! ನೀನು ಹೀಗೆಯೇ ಅನೇಕಸಂವತ್ಸರಗಳವರೆಗೆ ಬದುಕಿದ್ದು ಲೋಕೋಪಕಾರವನ್ನು ಮಾಡುತ್ತಿರಬೇಕೆಂಬುದೇ ನಮ್ಮ ಕೋರಿಕೆ! ಓ ಮಹಾತ್ಮಾ! ಈಗ ನಾವು ಬಹಳ ಶ್ರಮಸಾಧ್ಯವಾದ ಸತ್ರಯಾಗವನ್ನಾರಂಭಿಸಿರುವೆವಷ್ಟೆ? ಈ ಹೋಮಕಾರ್ಯದಲ್ಲಿ ಅನವರತವೂ ಹೊಗೆಯನ್ನು ಕುಡಿದು ಕುಡಿದು ಬೇಸರಗೊಂಡಿರುವ ನಮಗೆ, ನಡುನಡುವೆ ನೀನು ಆ ಭಗವಂತನ ಪಾದಪದ್ಮಸಂಬಂಧವಾದ ಮಧುವನ್ನು ಕುಡಿಸಿ ನಮ್ಮ ಬೇಸರಿಕೆಯನ್ನಾರಿಸುತ್ತಿರುವೆ! ಓ ಸೂತಾ! ನಾವೇ ಪರಮಧನ್ಯರು! ಹೆಚ್ಚು ಮಾತಿನಿಂದೇನು? ಸ್ವರ್ಗಸುಖವಾಗಲಿ, ಕೊನೆಗೆ ಮೋಕ್ಷವಾಗಲಿ, ನಿನ್ನಂತಹ ಭಾಗವತೋತ್ತಮರ ಸಹವಾಸಕ್ಕೆ ಲೇಶಮಾತ್ರವೂ ಸಾಟಿಯಾಗಲಾರದು. ಇನ್ನು ಲೋಕದಲ್ಲಿ ಮನುಷ್ಯರಿಗೆ ದುರಾಸೆಯನ್ನು ಹೆಚ್ಚಿಸತಕ್ಕ ಅರ್ಥಕಾಮಾದಿಗಳನ್ನು ಅದಕ್ಕೆ ಸರಿಹೋಲಿ

ಸುವುದು ಬರೀಹುಚ್ಚು ತನವಲ್ಲವೆ? ಮಹಾತ್ಮರಿಗೆ ಪ್ರಾಪ್ಯಸ್ಥಾನವಾಗಿಯೂ, ಪ್ರಾಪಕನಾಗಿಯೂ, ಆಧಾರನಾಗಿಯೂ ಇರುವ ಆ ಭಗವಂತನ ಗುಣಗಳ ನ್ನು ಕೇಳುವುದರಲ್ಲಿ, ರಸಜ್ಞನಾದ ಯಾವ ಮನುಷ್ಯನಿಗೆತಾನೇ ತೃಪ್ತಿ ಯುಂಟಾಗುವುದು ? ಬ್ರಹ್ಮಾದಿದೇವತೆಗಳಾಗಲಿ, ಪರಮಯೋಗಿಗಳಾಗಲಿ, ಆ ಭಗವಂತನ ಕಲ್ಯಾಣಗುಣಗಳೆಂಬ ಮಹಾಸಮುದ್ರದ ಪಾರವನ್ನು ಕಂಡು ಹಿಡಿಯಲಾರರು. ಇನ್ನು ನಮ್ಮಂತಹ ಸಾಮಾನ್ಯಜನರು ಆ ಭಗವಚ್ಚರಿತ್ರ ಗಳ ಪಾರವನ್ನು ಕಂಡು ತೃಪ್ತರಾಗುವುದೆಂದರೇನು ? ಎಲೈ ಮಹಾತ್ಮನೆ ! ನೀನು ಆ ಭಗವದ್ಗುಣಗಳ ತತ್ವವನ್ನು ಚೆನ್ನಾಗಿ ಬಲ್ಲವನು. ಆ ಭಗವಂತನೊ ಬ್ಬನೇ ಮುಖ್ಯಾಶ್ರಯನೆಂದು ನಂಬಿದವನು. ಆದುದರಿಂದ ನೀನು, ಶ್ರದ್ಧೆ ಯಿಂದ ಕೇಳಬೇಕೆಂದಿರುವ ನಮಗೆ ಲೋಕಪಾವನಗಳಾದ ಆ ಭಗವತ್ಕಥೆಗ ಳನ್ನೇ ವಿಸ್ತರವಾಗಿ ತಿಳಿಸಬೇಕು! ಭಾಗವತೋತ್ತಮನಾಗಿಯೂ, ಧೀಮಂತ ನಾಗಿಯೂ ಇರುವ ಪರೀಕ್ಷಿದ್ರಾಜನು, ಶುಕಮುನಿಯಿಂದುಪದೇಶಿಸಲ್ಪಟ್ಟ ಪುರಾಣವನ್ನು ಕೇಳಿ, ಅದರಿಂದುಂಟಾದ ಜ್ಞಾನದಿಂದ ಶ್ರೀಮನ್ನಾರಾಯಣನ ಪಾದಮೂಲವನ್ನು ಸೇರಿದುದಾಗಿ ಹೇಳಿದೆಯಷ್ಟೆ? ಆ ಪುರಾಣವನ್ನೇ ನಮಗೆ ನೀನು ಉಪದೇಶಿಸಬೇಕು. ಆ ಪುರಾಣಶ್ರವಣದಿಂದಲೂ, ಅದನ್ನು ಪಠಿಸುವು ದರಿಂದಲೂ ನಿರತಿಶಯವಾದ ಪುಣ್ಯವು ಲಭಿಸುವುದು. ಅದಕ್ಕೆ ಸಮಾನವಾ ದ ಬೇರೆ ಪುರಾಣವಿಲ್ಲವು.ಮುಮುಕ್ಷುಗಳಿಗೆ ತಿಳಿಯಬೇಕಾದ ವಿಷಯಗಳೆಲ್ಲವೂ ಅದರಲ್ಲಿ ಸ್ಪಷ್ಟವಾಗಿ ತಿಳಿಸಲ್ಪಡುವುವು. ಅದರ ಶ್ರವಣಪಠನಗಳಿಂದ ಅತ್ಯ ದ್ಭುತವಾದ ಭಕ್ತಿಯೋಗವೂ ಪ್ರಾಪ್ತವಾಗುವುದು. ಭಗವಚ್ಚರಿತ್ರಗಳಿಂದ ಕೂಡಿ,ಭವದ್ಭಕ್ತರಿಗೆ ವಿಶೇಷಾದರಣೀಯವಾದ ಆಪುರಾಣವನ್ನೇನೀನು ನಮ್ಮ ಲ್ಲಿ ಪೂರ್ಣಾನುಗ್ರಹವನ್ನಿಟ್ಟು ತಿಳಿಸಬೇಕು"" ಎಂದು ಪ್ರಾರ್ಥಿಸಿದರು. ಹೀಗೆ ಭಗವತ್ಕಥೆಯನ್ನು ಹೇಳುವುದಕ್ಕಾಗಿ ಪ್ರೇರಿಸುತ್ತಿರುವ ಶೌನಕಾದಿಗಳ ವಾಕ್ಯ ನ್ನು ಕೇಳಿ, ಸೂತನು ಪರಮಹರ್ಷಯುಕ್ತನಾಗಿ, ಅವರನ್ನು ಕುರಿತು, ''ಎಲೈ ಮಹರ್ಷಿಗಳೆ! ಇದಲ್ಲವೇ ನನ್ನ ಪರಮಭಾಗ್ಯವು! ನಾವು ಕೇವಲಸಂಕರವರ್ಣ ದಲ್ಲಿ ಹುಟ್ಟಿದ ಹೀನಜಾತಿಯವರಾಗಿದ್ದರೂ,ಜ್ಞಾನದಿಂದಲೂ,ವಯಸ್ಸಿನಿಂದ ರೂ ವೃದ್ಧರಾದ ನೀವು ನಮ್ಮನ್ನು ಇಷ್ಟುದೂರಕ್ಕೆಗೌರವಿಸಿ, ನಮ್ಮಿಂದ

ಭಗವತ್ಕಥೆಯನ್ನು ಕೇಳುವುದಕ್ಕಾಗಿ ಅನುವರ್ತಿಸುತ್ತಿರುವುದರಿಂದ, ಈಗ ನಮ್ಮ ಜನ್ಮವೇ ಪ್ರಶಸ್ತವೆನಿಸಿತು. ಪರಮಪೂಜ್ಯರಾದ ನಿಮಗೆ ಭಗವತ್ಕಥೆಯನ್ನು ಹೇಳುವ ಭಾಗ್ಯವು ಲಭಿಸಿದುದರಿಂದ,ನಮಗೆ ದುಷ್ಕುಲದಲ್ಲಿ ಹುಟ್ಟಿದೆವೆಂಬ ಮನೋವ್ಯಾಥಿಯೂ ನಿಶ್ಶೇಷವಾಗಿ ಬಿಟ್ಟುಹೋಯಿತು. ಮಹನೀಯರಾದ ನಿಮ್ಮೊಡನೆ ಸಂಭಾಷಣವೇ ನಮಗೆ,ಹೀನಜಾತಿಯಲ್ಲಿ ಹುಟ್ಟಿದೆವೆಂಬ ಕೊರತೆಯನ್ನು ನೀಗಿಸಿ, ಗೌರವವನ್ನುಂಟುಮಾಡುತ್ತಿರುವಾಗ, ನಿಮ್ಮಂತಹ ಮಹನೀಯರಿಗೂ ಸಾಧ್ಯನಾಗಿಯೂ, ಪ್ರಾಪಕನಾಗಿಯೂ, ಆಧಾರನಾಗಿಯೂ ಇರುವ ಈ ಭಗವಂತನ ನಾಮಗಳನ್ನುಚ್ಚರಿಸುವ ಸಂಭವವುಂಟಾದ ಮೇಲೆ ನಮ್ಮ ಭಾಗ್ಯಕ್ಕೆಣೆಯುಂಟೆ?ಆ ಶ್ರೀಮನ್ನಾರಾಯಣನೋ,ಅಪಾರಶಕ್ತಿಯುಳ್ಳವನು. ಜ್ಞಾನಾದಿಷಾಡ್ಗುಣ್ಯಪರಿಪೂರ್ಣನು. ಲೋಕಜಲ್ಲಿ ಅವನಿಗಿಂತಲೂ ಉತ್ತಮರಾಗಲಿ, ಆತನಿಗೆ ಸಮಾನರಾಗಲಿ ಬೇರೊಬ್ಬರಿಲ್ಲವು. ಇನ್ನು ಹೆಚ್ಚಾಗಿ ಹೇಳಿದುದರಿಂದೇನು ? ಬ್ರಹ್ಮಾದಿದೇವತೆಗಳೆಲ್ಲರೂ ತನ್ನನ್ನು ವಿಶೇಷವಾಗಿ ಪ್ರಾರ್ಥಿಸುತಿದ್ದರೂ ಲಕ್ಷ್ಯಮಾಡದ ಲಕ್ಷ್ಮೀದೇವಿಯು,ವಿಷ್ಣುವು ತನ್ನನ್ನಪೇಕ್ಷಿಸದಿದ್ದರೂ ತಾನಾಗಿಯೇ ಬಂದು ಆತನ ಪಾದರೇಣುವನ್ನು ಸೇವಿಸುತ್ತಿರುವಳು. ಆ ಭಗವಂತನಲ್ಲಿರುವ ಎಣೆಯಿಲ್ಲದ ಗುಣಗಳನ್ನೂ, ಆತನ ಸರ್ವಾಧಿಪತ್ಯವನ್ನೂ ಸ್ಥಿರಪಡಿಸುವದಕ್ಕೆ ಇದಕ್ಕಿಂತಲೂ ಬೇರೆ ನಿದರ್ಶನವೇಕೆ? ಇದಲ್ಲದೆ ಪೂರ್ವದಲ್ಲಿ ಚತುರ್ಮುಖಬ್ರಹ್ಮನು, ವಿಷ್ಣುವಿನ ಪಾದ್ಯಕ್ಕಾಗಿ ಸಮರ್ಪಿಸಿದಪೂಜಾಜಲವು,ಅತನ ಎಡಗಾಲಿನ ಅಂಗುಷ್ಠದಿಂದಪ್ರವಹಿಸಿದಮಾತ್ರಕ್ಕೆ ಪರಮಪಾವನೆಯಾದ ಗಂಗಾನದಿಯೆನಿಸಿಕೊಂಡು ರುದ್ರಾದಿಲೋಕಪಾಲಕರಿಂದ ಕೂಡಿದ ಸಮಸ್ತಪ್ರಪಂಚವನ್ನೂ ಪವಿತ್ರವನ್ನಾಗಿ ಮಾಡುವುದು. ಇಂತಹ ಮಹಾಮಹಿಮೆಯುಳ್ಳ ಶ್ರೀವಿಷ್ಣುವನ್ನು ಬಿಟ್ಟರೆ, ಲೋಕದಲ್ಲಿ ಭಗವಚ್ಚಬ್ದಕ್ಕೆ ಭಾಗಿಯಾಗತಕ್ಕವನು ಬೇರೆ ಯಾವನುಂಟು ? ಮತ್ತು ಆ ಶ್ರೀಹರಿಯಲ್ಲಿ ಅನುರಾಗವನ್ನು ತೋರಿಸಿದಮಾತ್ರದಿಂದಲೇ ಪ್ರಾಜ್ಞರಾದವರು, ಇಂದ್ರಿಯಗಳನ್ನು ಜಯಿಸಿ, ದೇಹಾದಿಗಳಲ್ಲಿ ಬೇರೂರಿದ ಮೋಹಸಂಬಂಧವನ್ನೂ ತೊರೆದು, ಅಹಿಂಸೆ, ಶಾಂತಿ, ದಾಂತಿ,ಮೊದಲಾದ ಸದ್ಗುಣಗಳನ್ನುಂಟುಮಾಡತಕ್ಕ ಪರಮಹಂಸತ್ವವೆಂಬ

ನಾಲ್ಕನೆಯ ಆಶ್ರಮವನ್ನು ಹೊಂದುವರು. ಎಲೈ ಮುನಿಶ್ರೇಷ್ಠರೆ ! ಅಂತ ಹ ಮಹಾಮಹಿಮೆಯುಳ್ಳ ಭಗವಂತನ ಗುಣಗಳನ್ನು ವಿವರಿಸುವುದಕ್ಕೆನಾನು ಶಕ್ತನೆ? ಆದರೆ ಜ್ಞಾನಾಧಿಕರಾದ ನೀವೇ ಈ ವಿಷಯದಲ್ಲಿ ನನ್ನನ್ನು ಬಹಳ ವಾಗಿ ನಿರ್ಬಂಧಿಸುತ್ತಿರುವುದರಿಂದ, ನನ್ನ ಬುದ್ಧಿಗೆ ತೋರಿದಷ್ಟನ್ನು ಮಾತ್ರ ವಿವರಿಸಬಲ್ಲೆನು.ಪಕ್ಷಿಗಳುತಮ್ಮ ರೆಕ್ಕೆಗಳಲ್ಲಿರುವ ಬಲಕ್ಕನುಸಾರವಾಗಿ,ಆಕಾಶದಲ್ಲಿ ಹಾರಿ,ಆ ಬಲವು ತಗ್ಗಿದೊಡನೆ ಹಿಂತಿರುಗುವಂತೆ, ಪಂಡಿತರಾದವರೂ ಕೂಡ, ತಮ್ಮತಮ್ಮ ಬುದ್ಧಿಬಲಕ್ಕೆ ತಕ್ಕಂತೆ ಭಗವದ್ಗುಣಗಳನ್ನು ವರ್ಣಿಸುತ್ತ, ಆ ಬುದ್ಧಿಬಲವು ತಗ್ಗಿದೊಡನೆ ಆ ವಿಷಯದಿಂದ ಹಿಂತಿರುಗುವರು. ರೆಕ್ಕೆಗಳಲ್ಲಿ ಬಲವಿಲ್ಲದುದಕ್ಕಾಗಿ ಪಕ್ಷಿಗಳು ವಿಮುಖವಾಗಬೇಕೇಹೊರತು, ಆಕಾಶದಲ್ಲಿ ಅವಕಾಶವು ಸಾಲದೆಂದು ಹಿಂತಿರುಗುವುವಲ್ಲ. ಹಾಗೆಯೇ ಭಗವದ್ಗುಣಗಳನ್ನು ವರ್ಣಿಸುವಾಗಲೂ, ಬುದ್ಧಿಕ್ಷಯದಿಂದ ಅದರಲ್ಲಿ ವಿಮುಖರಾಗಬೇಕೇಹೊರತು, ಅತನ ಗುಣಗಳಿಗೆಮಾತ್ರ ಕೊನೆಯೆಂಬುದೇ ಇಲ್ಲ. ಈ ವಿಚಾರವು ಹಾಗಿರಲಿ ! ಇನ್ನು ಪರೀಕ್ಷಿದ್ರಾಜನ ವೃತ್ತಾಂತವನ್ನು ಕೇಳಿರಿ ! ಒಮ್ಮೆ ಪರೀಕ್ಷಿದ್ರಾಜನು ಬೇಟೆಯಾಡಬೇಕೆಂಬ ಕುತೂಹಲದಿಂದ ಧನುರ್ಬಾಣಗಳನ್ನು ಧರಿಸಿ ಕಾಡಿಗೆ ಹೋದನು. ಅಲ್ಲಲ್ಲಿ ಬೇಟೆಯಾಡುತ್ತ ಮೃಗಗಳನ್ನು ಬೆನ್ನಟ್ಟಿ ಹೋಗುವಾಗ, ಮಾರ್ಗಾಯಾಸದಿಂದಲೂ, ಹಸಿವು ಬಾಯಾರಿಕೆಗಳಿಂದಲೂ ಪೀಡಿತನಾಗಿ,ಜಲಾಶಯವನ್ನು ಹುಡುಕುತ್ತಬಂದನು ಎಲ್ಲೆಲ್ಲಿ ಸುತ್ತಿದರೂ ಸರೋವರವನ್ನು ಕಾಣದೆ,ಕೊನೆಗೆ ಶಮೀಕನೆಂಬ ಒಬ್ಬ ಮಹರ್ಷಿಯ ಪುಣ್ಯಾಶ್ರಮವನ್ನು ಪ್ರವೇಶಿಸಿದನು. ಆ ಆಶ್ರಮಮಧ್ಯದಲ್ಲಿ ಶಮೀಕಮುನಿಯು ಶಾಂತನಾಗಿ, ಕಣ್ಣುಮುಚ್ಚಿ ತಪೋನಿರತನಾಗಿ ಕುಳಿತಿದ್ದುದನ್ನು ಕಂಡನು. ಆ ಮಹರ್ಷಿಯು ತನ್ನ ಸರ್ವೇಂದ್ರಿಯಗಳನ್ನೂ, ಪ್ರಾಣವನ್ನೂ, ಮನಸ್ಸನ್ನೂ, ಬುದ್ಧಿಯನ್ನೂ ತಡೆದಿಟ್ಟುಕೊಂಡು, ಬಾಹ್ಯವ್ಯಾಪಾರಗಳೊಂದೂ ಇಲ್ಲದೆ,ಜಾಗ್ರತ್ಸ್ವಪ್ನಸುಷುಪ್ತಿಗಳೆಂಬ ಅವಸ್ಥಾತ್ರಯಗಳಿಗಿಂತಲೂ ಬೇರೆಯಾದ ಆತ್ಮಾನುಸಂಧಾನದಿಂದ ಕೇವಲಬ್ರಹ್ಮವಿಷಯಕವಾದ ಭಾವನೆಯೊಂದರಲ್ಲಿಯೇ ನಿರತನಾಗಿದ್ದನು. ಮತ್ತು ವಿಕಾರಶೂನ್ಯನಾಗಿ, ಜಟಾಭಾರದಿಂದ ಮುಚ್ಚಿದ ಮೈಯುಳ್ಳವನಾಗಿ, ಮೃಗಚರ್ಮವನ್ನು ಧರಿಸಿ

ಕೇವಲಧ್ಯಾನಪರನಾಗಿ ಕುಳಿತಿದ್ದನು. ದಾಹಪೀಡಿತನಾಗಿದ್ದ ಪರೀಕ್ಷಿದ್ರಾಜನು, ಆಸ್ಥಿತಿಯಲ್ಲಿದ್ದ ಋಷಿಯನ್ನು ಕಂಡು,ದಾಹಶಾಂತಿಗಾಗಿ ತನಗೆ ಸ್ವಲ್ಪಪಾನಜಲವನ್ನು ಕೊಡಬೇಕೆಂದು ಯಾಚಿಸಿದನು. ಹೀಗೆಯಾಚಿಸುವಾಗಲೂ ಆ ಮಹರ್ಷಿಯು ಯಾವ ಪ್ರತ್ಯುತ್ತರವನ್ನೂ ಹೇಳದೆ, ಕುಶಲಪ್ರಶ್ನವನ್ನೂ ಮಾಡದೆ, ಕೇವಲಧ್ಯಾನದಲ್ಲಿಯೇ ಇದ್ದು ಬಿಟ್ಟನು. ಆಗ ಪರೀಕ್ಷಿದ್ರಾಜನು, ತನಗೆ ಕುಳ್ಳಿರುವುದಕ್ಕೆ ಆಸನವನ್ನಾಗಲಿ ಅರ್ಘ್ಯವನ್ನಾಗಲಿ, ಕೊಡದೆ ಆ ಮಹರ್ಷಿಯು ಕೇವಲ ಉದಾಸೀನನಾಗಿರುವುದನ್ನು ನೋಡಿ, ಆತನು ತನ್ನನ್ನ ವಮಾನಪಡಿಸಿದಂತೆ ತನ್ನಲ್ಲಿ ತಾನೇ ಭಾವಿಸಿಕೊಂಡನು.ಅವನಿಗೆ ಮೇಲೆಮೇಲೆ ಕೋಪಾವೇಶವೂ ಹೆಚ್ಚಿ ಬಂಡಿತು. ಮೊದಲೇ ಈ ರಾಜನು ಹಸಿವು ಬಾಯಾರಿಕೆಗಳಿಂದ ಪೀಡಿತನಾಗಿದ್ದುದರಿಂದ,ಅವನಿಗೆ ಆ ಮಹರ್ಷಿಯ ವಿಷಯದಲ್ಲಿ ಹಿಂದೆಯಾವಾಗಲೂ ಇಲ್ಲದ ವೈರವೂ,ಕೋಪವೂ, ಹುಟ್ಟಿತು. ಈ ಕೋಪದಿಂದ ಪರೀಕ್ಷಿದ್ರಾಜನು ಸಮೀಪದಲ್ಲಿ ಸತ್ತುಬಿದ್ದಿದ್ದ ಒಂದು ಹಾವನ್ನು ತನ್ನ ಬಿಲ್ಲಿನ ತುದಿಯಿಂದೆತ್ತಿ,ಆಶಮೀಕಮುನಿಯ ಕೊರಳಿಗೆ ಮಾಲೆಹಾಕಿ ಪಟ್ಟಣಕ್ಕೆ ಹಿಂತಿರುಗಿದನು. ಎಲೈ ಶೌನಕಾದಿಕಳೆ ! ಪರೀಕ್ಷಿದ್ರಾಜನು ಆ ಋಷಿಯ ಕೊರಳಿಗೆ ಸತ್ತ ಹಾವನ್ನು ಮಾಲೆಹಾಕಿದುದಕ್ಕೆ ಕಾರಣವನ್ನು ಹೇಳುವೆನು ಕೇಳಿರಿ ! “ ಆ ಮಹರ್ಷಿಯು ನಿಜವಾದ ಸಮಾಧಿಯಿಂದಲೇ ಕಣ್ಣುಗಳನ್ನು ಮುಚ್ಚಿ ಕುಳಿತಿರುವನೆ ? ಅಥವಾ ತಮ್ಮಂತಹ ಕ್ಷತ್ರಿಯರಲ್ಲಿ ತುಚ್ಛಿಭಾವದಿಂದ ಮಾತಾಡುವುದಕ್ಕಿಷ್ಟವಿಲ್ಲದೆ ಕಪಟಸಮಾಧಿಯಿಂದ ಸುಮ್ಮನಿರುವನೆ?” ಎಂಬುದನ್ನು ಪರೀಕ್ಷಿಸಿ ತಿಳಿಯಬೇಕೆಂಬುದಕ್ಕಾಗಿಯೇ, ಆ ರಾಜನು ಈ ವಿಧವಾದ ಕಾರ್ಯವನ್ನು ಮಾಡಿ ತನ್ನ ಪಟ್ಟಣಕ್ಕೆ ಹಿಂತಿರುಗಿಬಿಟ್ಟನು. ಇಷ್ಟರಲ್ಲಿ ಆ ಮಹರ್ಷಿಯ ಪುತ್ರನಾದ ಶೃಂಗಿಯೆಂಬವನು,ತನ್ನ ಸಂಗಡಿಗರಾದ ಕೆಲವು ಋಷಿಕುಮಾರರೊಡನೆ ಅಲ್ಲಲ್ಲಿವಿಹರಿಸುತಿದ್ದು, ತಂದೆಯ ಬಳಿಗೆ ಬರುತ್ತ, ತನ್ನ ತಂದೆಯವಿಷಯದಲ್ಲಿ ರಾಜನು ಮಾಡಿ ಹೋದ ಮಹಾಪರಾಧವನ್ನು ದಾರಿಯಲ್ಲಿಯೇ ಕೇಳಿ, ಮನಸ್ಸಿನಲ್ಲಿ ಬಹಳವಾಗಿ ದುಃಖಿಸಿ, ಕೋಪಾವಿಷ್ಟನಾಗಿ “ ಆಹಾ ! ಇದೇನಿದು ! ರಾಜರಲ್ಲಿ ಇಷ್ಟೊಂದು ಅಧರ್ಮಬುದ್ಧಿಯೆ ? ಛೀ ! ಬಲಿಯೆನ್ನು ತಿಂದು

ಕೊಬ್ಬಿದ ಕಾಗೆಗಳಂತೆ, ಈ ಕ್ಷತ್ರಿಯಾಧಮರು ಹಿಂದುಮುಂದುನೋಡದೆ ಮಹಾಗರ್ವದಿಂದ ಬೀಗಿ ಬೆರೆಯುತ್ತಿರುವರು. ಕ್ಷತ್ರಿಯರು ಯಾವಾಗಲೂ ಬ್ರಾಹ್ಮಣರಿಗೆ ಕೇವಲದಾಸಭೂತರು! ತನ್ನ ಸ್ವಾಮಿಯ ಮನೆಬಾಗಿಲನ್ನು ಕಾದು ಬಿದ್ದಿರುವ ನಾಯಿಗಳಂತೆ, ಯಾವಾಗಲೂ ಬ್ರಾಹ್ಮಣರಿಗೆ ವಿಧೇಯರಾಗಿ ಅವರನ್ನು ರಕ್ಷಿಸುತ್ತಿರುವುದೇರಾಜರ ಕೃತ್ಯವು. ಹೀಗಿರುವಾಗಬಾಗಿಲುಕಾಯುವ ನಾಯಿಯು ಯಜಮಾನನ ಭೋಜನಪಾತ್ರೆಗೆಬಾಯಿಕ್ಕಿದಂತೆ, ದಾಸಭೂತನಾದಯಾವನೋಕ್ಷತ್ರಿಯನು ಈಗುರುದ್ರೋಹವನ್ನುಮಾಡಿದನೆ! ಇಂತಹ ದುರಾತ್ಮರನ್ನು ಶಿಕ್ಷಿಸುವುದಕ್ಕಾಗಿ ಅವತರಿಸಿದ್ದ ಭಗವಂತನಾದ ಕೃಷ್ಣನು ಈ ಲೋಕವನ್ನು ಬಿಟ್ಟುಹೋದುದರಿಂದಲ್ಲವೇ ಈ ನೀಚಕೃತ್ಯಗಳೆಗೆಲ್ಲವೂ ಅವಕಾಶವಾಯಿತು. ಆದರೇನು? ಇರಲಿ! ಈಗಲೂ ಚಿಂತೆಯಿಲ್ಲ. ಹಾಗೆ ಧರ್ಮವನ್ನತಿಕ್ರಮಿಸಿಹೋಗತಕ್ಕ ದುರಾತ್ಮರಿಗೆ ಇನ್ನು ಮೇಲೆ ನಾನೇ ಶಿಕ್ಷಕನಾಗಿ ನಿಲ್ಲುವೆನು ನನ್ನ ಅದ್ಭುತಸಾಮರ್ಥ್ಯವನ್ನು ಜಗತ್ತೆಲ್ಲಾ ನೋಡಲಿ." ಎಂದು ಹೇಳಿ, ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ಅತಿವೇಗದಿಂದ ಹೊರಟು, ಸಮೀಪದಲ್ಲಿದ್ದ ಕೌಶಿಕೀನದಿಯಲ್ಲಿಳಿದು, ಶುದ್ಧಾಚಮನವನ್ನು ಮಾಡಿ ಬಂದು, ವಜ್ರಾಯುಧಕ್ಕೆ ಸಮಾನವಾದ ಈ ಶಾಪವಾಕ್ಯವನ್ನು ಪ್ರಯೋಗಿಸ ತೊಡಗಿದನು. "ಯಾವ ದುರಾತ್ಮನು ಹೀಗೆ ಮರ್ಯಾದೆಯನ್ನತಿಕ್ರಮಿಸಿ, ಸತ್ಕಾರವನ್ನು ತಂದು ನನ್ನ ತಂದೆಯಕೊರಲಿಗೆ ಸಿಕ್ಕಿಸಿ ಹೋದನೋ, ಆ ನೀಚನು ಈ ಮೊದಲು ಎಳನೆಯದಿನಕ್ಕೆ ತಕ್ಷಕನಿಂದ ದಷ್ಟನಾಗಿ ಸಾಯಲಿ" ಎಂದು ಶಪಿಸಿಬಿಟ್ಟನು. ಆಮೇಲೆ ತನ್ನ ಆಶ್ರಮಕ್ಕೆ ಬಂದು, ತಂದೆಯ ಕೊರಲಿನಲ್ಲಿದ್ದ ಸರ್ಪದೇಹವನ್ನು ನೋಡಿ, ಭಯಗ್ರಸ್ತನಾಗಿ, ಗಟ್ಟಿಯಾಗಿ ಅಳುವುದಕ್ಕೆ ತೊಡಗಿದನು. ಈ ಧ್ವನಿಯನ್ನು ಕೇಳಿ ಶಮೀಕಮುನಿಯು, ತನ್ನ ಸಮಾಧಿಯನ್ನು ನಿಲ್ಲಿಸಿ ಕಣ್ಣುತೆರೆದು, ತನ್ನ ಮುಂದೆ ಅಳುತ್ತನಿಂತಿದ್ದ ಬಾಲಕನನ್ನೂ, ತನ್ನ ಕೊರಲಲ್ಲಿ ಜೋಲಾಡುತಿದ್ದ ಸರ್ಪಶರೀರವನ್ನೂ ನೋಡಿ, ಆ ಸರ್ಪದೇಹವನ್ನು ತೆಗೆದು ಬಿಸಾಡಿದನು. ಆಮೇಲೆ ಮಗನನ್ನು ಸಮೀಪಕ್ಕೆಕರೆದು, "ಎಲೈವತ್ಸನೆ! ನೀನು ಅಳುವುದಕ್ಕೆ ಕಾರಣವೇನು? ನಿನಗೆ ಅಪಕಾರವನ್ನು ಮಾಡಿದವರು

ಯಾರು? ಹೆದರಬೇಡ! ನಿನ್ನ ದುಃಖಕಾರಣವೇನು ಹೇಳು" ಎಂದನು. ಅದಕ್ಕಾಶೃಂಗಿಯು ತನ್ನ ದುಃಖವನ್ನು ತಡೆದಿಟ್ಟುಕೊಂಡು, ಯಾವನೋ ರಾಜನು ಬಂದು ಈ ಅಕೃತ್ಯವನ್ನು ಮಾಡಿ ಹೋದುದನ್ನೂ, ತಾನು ಅದಕ್ಕಾಗಿ ಶಾಪವನ್ನು ಕೊಟ್ಟುದನ್ನೂ ತಿಳಿಸಿದನು. ಇದನ್ನು ಕೇಳಿದಮೇಲೆ ಶಮೀಕಮಹರ್ಷಿಯು ತನ್ನ ಮಗನ ಕಾರ್ಯಕ್ಕಾಗಿ ತಾನು ಸ್ವಲ್ಪಮಾತ್ರವೂ ಸಂತೋಷವನ್ನು ತೋರಿಸದೆ ''ಎಲ್ಲೆ ಪುತ್ರನೆ ! ನೀನು ಮಾಡಿದುದೇ ಬಹಳ ತಪ್ಪು ! ಆ ರಾಜನು ನನ್ನ ವಿಷಯದಲ್ಲಿ ಮಾಡಿದ ಅಪರಾಧವು ಈ ಕ್ರೂರ ಶಾಪವನ್ನು ಕೊಡುವಷ್ಟು ದೊಡ್ಡದಲ್ಲ. ಅಪರಾಧದ ಬಲಾಬಲತಾರತಮ್ಯವನ್ನು ಯೋಚಿಸದೆ ಅತನಿಗೆ ಸರ್ಪದಷ್ಟನಾಗಿ ಸಾಯಲೆಂದು ಕ್ರೂರಶಾಪವನ್ನು ಕೊಟ್ಟೆಯಲ್ಲಾ ! ಇಲ್ಲಿ ಬಂದಿದ್ದ ಕ್ಷತ್ರಿಯನು ಎಷ್ಟು ಧರ್ಮಾತ್ಮನೋ ಅದನ್ನೂ ನೀನು ತಿಳಿದುಕೊಳ್ಳದೆ ಹೀಗೆ ಶಾಪವನ್ನು ಕೊಡಬಹುದೆ? ಅಯ್ಯೋ! ಇನ್ನೂ ನಿನ್ನ ಬುದ್ಧಿಯು ರಾಗದ್ವೇಷಾದಿಗಳನ್ನು ಬಿಟ್ಟಿಲ್ಲವೆ? ಒಂದುವೇಳೆ ರಾಜರು ಪ್ರಜೆಗಳಿಗೆ ಅಪಕಾರವನ್ನು ಮಾಡಿದರೂಕೂಡ, ಪ್ರಜೆಗಳುಮಾತ್ರ ರಾಜರವಿಷಯದಲ್ಲಿ ದ್ರೋಹವನ್ನೆಣಿಸಬಾರದು. ರಾಜನನ್ನು ಪ್ರತ್ಯಕ್ಷವಿಷ್ಣುವೆಂದೇ ಭಾವಿಸಬೇಕು. ಪ್ರಜೆಗಳು ರಾಜರನ್ನು ಸರ್ವವಿಧದಿಂದಲೂ ಗೌರವಿಸಬೇಕು. ಪ್ರಜೆಗಳೆಲ್ಲರೂ ಶತ್ರುದುರ್ಸಹವಾದ ಆ ರಾಜತೇಜಸ್ಸಿನಿಂದಲೇ ರಕ್ಷಿಸಲ್ಪಡುವರು. ಇವರಿಗೆ ಸಮಸ್ತ ಭಯವೂ ಆ ರಾಜರಿಂದಲೇ ನೀಗಿ, ಅವರಿಂದಲೇ ಸೌಖ್ಯವುಂಟಾಗುವುದು. ಅತನ ಪ್ರಜಾವರ್ಗದಲ್ಲಿಸೇರಿದ ನಾವೇ ಅತನಿಗೆ ಶಾಪಕೊಡುವುದೆಂದರೇನು? ಲೋಕಕ್ಷೇಮಕ್ಕಾಗಿ ಕಷ್ಟಪಡುತ್ತಿರುವ ರಾಜನನ್ನು ಮರಣದಂಡನೆಗೆ ಗುರಿಮಾಡಬಹುದೆ? ವಿಷ್ಣ್ವಂಶದಿಂದ ರಾಜ್ಯವಾಳುತ್ತಿರುವ ರಾಜನಿಲ್ಲದಮೇಲೆ ಪ್ರಜೆಗಳಿಗೆ ಕ್ಷೇಮವೆಲ್ಲಿ? ತೋಳಗಳ ಹಿಂಡಿನಲ್ಲಿ ಸಿಕ್ಕಿದ ಕುರಿಯ ಮಂದೆಯಂತೆ ಕ್ಷಣಮಾತ್ರದಲ್ಲಿಯೇ ನಾಶಹೊಂದುವರಲ್ಲವೆ? ವತ್ಸ! ರಾಜನಿಲ್ಲದ ರಾಜ್ಯದ ಸ್ಥಿತಿಯನ್ನು ಕೇಳಬೇಕೆ? ಪ್ರಜೆಗಳೆಲ್ಲರೂ ಚೋರಪ್ರಾಯರಾಗಿ,ಒಬ್ಬರ ಧನವನ್ನು ಮತ್ತೊಬ್ಬರು ಬಲಾತ್ಕಾರದಿಂದಲೂ, ವೋಸದಿಂದಲೂ ಅಪಹರಿಸುವರು.ಒಬ್ಬರಿಗೊಬ್ಬರು ಹೊಡೆದಾಡಿ ಸಾಯುವರು. ಸ್ತ್ರೀಯರನ್ನೂ, ಪಶುಗಳನ್ನೂ ಬಲಾತ್ಕಾರದಿಂದ ವಶ

ಡಿಸಿಕೊಳ್ಳುವರು. ವರ್ಣಾಶ್ರಮಾಚಾರಗಳೊಡನೆ ವೈದಿಕಕರ್ಮಗಳೆಲ್ಲವೂ ಕೆಟ್ಟುಹೋಗುವುವು. ಮನುಷ್ಯರಲ್ಲಿರುವ ಆರ್ಯಧರ್ಮಗಳೆಲ್ಲವೂ ನತಿಸುವುವು. ಹೀಗೆ ಧರ್ಮಕ್ಕೆ ದಾರಿಯಿಲ್ಲದುದರಿಂದ ಪ್ರಜೆಗಳೆಲ್ಲರೂ ಅರ್ಥಕಾಮಗಳಲ್ಲಿಯೇ ದುರಾಸೆಯುಳ್ಳವರಾಗುವರು. ಇದರಿಂದ ಮನುಷ್ಯಜಾತಿಯೆಲ್ಲವೂ ನಾಯಿಗಳಂತೆಯೂ, ಕಪಿಗಳಂತೆಯೂ ಒಂದಾಗಿ ಕಲೆತು ಜಾತಿಭೇದಗಳಿಲ್ಲದೆ ಸಂಕೀರ್ಣವಾಗುವುದು. ಇವೆಲ್ಲಕ್ಕೂ ಅವಕಾಶಕೂಡದೆ ಪ್ರಜೆಗಳನ್ನು ಸರಿಯಾದ ದಾರಿಯಲ್ಲಿಟ್ಟು ಕಾಪಾಡುವ, ಲೋಕಕ್ಷೇಮಕರನಾದ ರಾಜನನ್ನು ಕೊಲ್ಲುವುದರಿಂದ ಮಹಾಪಾಪವು ಸಂಭವಿಸದೆ ಬಿಡದು. ಈಗ ನೀನು ಶಾಪವನ್ನು ಕೊಟ್ಟುದರಿಂದ ಆ ಪಾಪವನ್ನೆಲ್ಲಾ ನೀನೇ ಕಟ್ಟಿಕೊಂಡಂತಾಯಿತಲ್ಲವೆ ? ಕುಮಾರಾ ! ಈಗ ಬಂದಿದ್ದವನು ಯಾರೆಂದು ಬಲ್ಲೆ ? ಪರಮಧರ್ಮಾತ್ಮನಾದ ಪರೀಕ್ಷಿನ್ರಾಜನಲ್ಲವೆ ? ಅವನನ್ನು ಸಾಮಾನ್ಯರಾಜನೆಂದು ಭಾವಿಸಬೇಡ. ಉತ್ತಮವಾದ ಭರತವಂಶದಲ್ಲಿ ಹುಟ್ಟಿದವನು. ಕೆಟ್ಟು ಹೋಗಿದ್ದ ವರ್ಣಾಶ್ರಮಧರ್ಮಗಳೆಲ್ಲವನ್ನೂ ತಿರುಗಿ ಸ್ಥಾಪಿಸಿದನು. ಉದಾರ ಕೀರ್ತಿಯುಳ್ಳವನು.ಸಕಲರಾಜಸಾರ್ವಭೌಮನು. ವಿಧ್ಯುಕ್ತವಾಗಿ ಅನೇಕಾಶ್ವಮೇಧಗಳನ್ನು ನಡೆಸಿದವನು. ಪರಮಭಾಗವತೋತ್ತಮನು. ಅಂತಹ ಮಹಾನುಭಾವನು ದಾಹದಿಂದ ಪೀಡಿತನಾಗಿ ನೀರಿಗೋಸ್ಕರ ನಮ್ಮಾಶ್ರಮಕ್ಕೆ ಬಂದಾಗ, ನಾವು ಆತನಿಗೆ ನೀರನ್ನು ಕೊಟ್ಟುಸತ್ಕರಿಸುವುದುಚಿತವೆ ? ಶಾಪವನ್ನು ಕೊಟ್ಟುಕೊಳ್ಳುವುದುಚಿತವೆ? ನೀನೇ ಇದನ್ನು ಯೋಚಿಸು.” ಎಂದು ಹೇಳಿ ಭಗವಂತನನ್ನು ಪ್ರಾರ್ಥಿಸುವನು. ‘‘ಎಲೈ ದೇವದೇವನೆ ! ಬಾಲನಾದ ನನ್ನ ಮಗನು, ವಿವೇಕಶೂನ್ಯನಾಗಿ, ತನ್ನ ಬುದ್ಧಿಚಾಪಲ್ಯದಿಂದ ತಕ್ಕಷ್ಟು ಅಪರಾಧವಿಲ್ಲದಿದ್ದರೂ ನಿನ್ನ ಭಕ್ತನನ್ನು ಶಪಿಸಿರುವನು. ಎಲೈ ದಯಾಸಮುದ್ರನೆ! ನನ್ನಲ್ಲಿ ಕೃಪೆಯಿಟ್ಟು ಈ ಬಾಲನನ್ನು ಮನ್ನಿಸಬೇಕು. ರಾಜದ್ರೋಹದಿಂದುಂಟಾಗುವ ಪಾಪವು ನಮಗೆ ಸಂಭವಿಸದಂತೆ ರಕ್ಷಿಸಬೇಕು. ಹೇ ಕೃಷ್ಣಾ ! ಹೇಮುಕುಂದಾ ! ನಿನಗೆ ನಮಸ್ಕಾರವು. ಲೋಕದಲ್ಲಿ ಭಾಗವತೋತ್ತಮರು, ತಮ್ಮನ್ನು ಬೇರೊಬ್ಬರು ತಿರಸ್ಕರಿಸದರೂ, ವಂಚಿಸಿದರೂ, ನಿಂದಿಸಿದರೂ, ಶಪಿಸಿದರೂ ಹೊಡೆದರೂ, ಸಹಿಸಿಕೊಳ್ಳುವರೇಹೊರತು, ಕೋಪಿಸಿ ಪ್ರತ್ಯ

ಪಕಾರವನ್ನು ಮಾಡುವುದಕ್ಕೆ ಸಮ್ಮತಿಸರು ? ಧರ್ಮವನ್ನು ಮೀರಿ ಹೋದ ನನ್ನ ಬಾಲನ ವಿಷಯದಲ್ಲಿ ಅವರಾದರೂ ದಯೆಯನ್ನು ತೋರಿಸಲಿ! ಎಂದು ದೈನ್ಯದಿಂದ ಪ್ರಾರ್ಥಿಸಿದನು. ಹೀಗೆ ಶಮೀಕಮಹರ್ಷಿಯು ತನ್ನ ಮಗನ ಕಾರ್ಯಕ್ಕಾಗಿಯೇ ತಾನು ದುಃಖಿಸುತಿದ್ದನೇ ಹೊರತು, ತನ್ನ ವಿಷಯದಲ್ಲಿ ಪರೀಕ್ಷಿದ್ರಾಜನು ಮಾಡಿದ ಅಪರಾಧಕ್ಕಾಗಿ ಸ್ವಲ್ಪವಾದರೂ ಕೋಪವನ್ನಾಗಲಿ, ಅಸಮಾಧಾನವನ್ನಾಗಲಿ ತೋರಿಸಲಿಲ್ಲ. ಎಲೈಶೌನಕಾದಿಗಳೆ ! ಇದಲ್ಲವೇ ಸಜ್ಜನರ ಸ್ವಭಾವವು!ಸತ್ಪುರುಷರ ಮನಸ್ಸು ಎಂತಹ ಸ್ಥಿತಿಯಲ್ಲಿಯೂ ರಾಗದ್ವೇಷಾದಿಗಳಿಗೆ ಅವಕಾಶವನ್ನು ಕೊಡುವುದಿಲ್ಲ. ಇದರಿಂದ ಸಾಧುಗಳು ತಮಗೆ ಸುಖವುಂಟಾದಾಗ ಸಂತೋಷವನ್ನಾಗಲಿ, ದುಃಖವುಂಟಾದಾಗ ವ್ಯಥೆಯನ್ನಾಗಲಿ ಹೊಂದುವವರಲ್ಲ. ಇದು ಹದಿನೆಂಟನೆಯ ಅಧ್ಯಾಯವು.

ಪರೀಕ್ಷಿನ್ಮಹಾರಾಜನು ಚಿಂತಾಕುಲನಾಗಿ ದುಃಖಿಸಿದುದು.

ಇತ್ತಲಾಗಿ ಪರಿಕ್ಷಿನ್ಮಹಾರಾಜನು ಪಟ್ಟಣವನ್ನು ಪ್ರವೇಶಿಸಿದಮೇಲೆ ತಾನು ಮಾಡಿಬಂದ ಕಾರ್ಯಕ್ಕಾಗಿ ಪಶ್ಚಾತ್ತಾಪಗೊಂಡು ದುಃಖಿಸುತ್ತ, ತನ್ನನ್ನು ತಾನೇ ನಿಂದಿಸಿಕೊಳ್ಳುತಿದ್ದನು. ಹೀಗೆ ಚಿಂತಾಕುಲನಾದರಾಜನು ತನ್ನಲ್ಲಿ ತಾನು ,,ಅಯ್ಯೋ ! ಕೇವಲಶಾಂತನಾಗಿ, ತನ್ನ ತೇಜಸ್ಸನ್ನು ಗೂಢವಾಗಿಟ್ಟುಕೊಂಡು ಸಮಾಧಿಯನ್ನು ಹಿಡಿದಿದ್ದ ನಿರಪರಾಧಿಯಾದ ಆ ಮಹರ್ಷಿಯಕಂಠದಲ್ಲಿ ನಿಷ್ಕಾರಣವಾಗಿ ಸತ್ತಹಾವನ್ನು ಸಿಕ್ಕಿಸಿ ಅವಮಾನಪಡಿಸಿ ಬಂದೆನಲ್ಲಾ! ಅಕಟಾ ! ನನಗೇಕೆ ಈ ದುರ್ಬುದ್ಧಿಯು ಹುಟ್ಟಿತು ! ಈ ಅಕೃತ್ಯದಿಂದ ನನಗೆ ಮಹಾಪಾತಕವು ಸಂಭವಿಸದೆ ಬಿಡದು. ಇದರಿಂದ ನಾನು ಆ ಬ್ರಾಹ್ಮಣನನ್ನು ಮಾತ್ರವೇ ಅವಮಾನಪಡಿಸಿದಂತಾಗಲಿಲ್ಲ. ಸಾಕ್ಷಾತ್ಭಗವಂತನನ್ನೇ ಅವಮಾನಪಡಿಸಿಬಂದತಾಯಿತು. ಇದರಿಂದ ನನಗೆ ತೀಕ್ಷ್ಣವಾಲ್ಲಿದಯೇ ಮಹಾವಿಪತ್ತು ಬಂದೊದಗದಿರದು. ಆದರೇನು ? ಪಾಪಿಯಾದ ನನಗೆ ಪ್ರಾಯಶ್ಚಿತ್ತರೂಪವಾಗಿ ಆ ದುಃಖವು ಬಂದೇ ತೀರಬೇಕು ! ಅದು ನನಗೆ ಹಿತವಲ್ಲದೆ ಬೇರೆಯಲ್ಲ.ಅದರಿಂದಲೇ ನನಗೆ ಪಾಪಶುದ್ಧಿಯಾಗಿ, ಇನ್ನು ಮೇಲೆಯಾದರೂ ಇಂತಹ ಪಾಪಕಾರ್ಯಗಳಿಗೆ ನನ್ನ ಬುದ್ಧಿಯು ಪ್ರವರ್ತಿಸ

ದಂತಾಗುವುದರಿಂದ, ಯಾವ ವಿಪತ್ತು ಬಂದರೂ ಬರಲಿ! ಕುಪಿತನಾದ ಆ ಮಹರ್ಷಿಯ ಶಾಪವೆಂಬ ಕಾಲಾಗ್ನಿಯು ಈಗಲೇ ನನ್ನ ಕುಲವನ್ನೂ, ನನ್ನ ರಾಜ್ಯವನ್ನೂ, ನನ್ನ ಧನವನ್ನೂ ದಹಿಸಿದರೂ ದಹಿಸಲಿ! ಇದರಿಂದಲಾದರೂ ನನ್ನ ಬುದ್ಧಿಯು ತಿರುಗಿ ಗೋಬ್ರಾಹ್ಮಣರಿಗೂ, ದೇವತೆಗಳಿಗೂ ಅಪಕಾರವನ್ನು ಮಾಡುವುದರಲ್ಲಿ ಪ್ರವರ್ತಿಸದಿರಲಿ!" ಎಂದು ಮನಸ್ಸಿನಲ್ಲಿ ಚಿಂತಿಸುತಿದ್ದನು. ಇಷ್ಟರಲ್ಲಿ ಆತನಿಗೆ ಆ ಮಹರ್ಷಿಯ ಶಾಪದಿಂದ ಏಳನೆಯ ದಿನದಲ್ಲಿ ತಕ್ಷಕನ ವಿಷಾಗ್ನಿಯಿಂದ ಮರಣವು ಪ್ರಾಪ್ತವಾಗುವುದೆಂಬ ಸಂಗತಿಯು ತಿಳಿದುಬಂದಿತು. ಇದನ್ನು ಕೇಳಿಯೂಕೂಡ ಪರೀಕ್ಷಿದ್ರಾಜನು ವಿಷಯಾಸಕ್ತನಾದ ತನಗೆ ಈ ವಿಪತ್ತೇ ವಿರಕ್ತಿಕಾರಣವಾಗುವುದೆಂದು ಸಂತೋಷಿಸುತ್ತಲೇ ಇದ್ದನು. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಪರೀಕ್ಷಿದ್ರಾಜನು ಇಹಲೋಕ ಸುಖವಾಗಲಿ, ಸ್ವರ್ಗಸುಖವಾಗಲಿ, ಆಶಾಶ್ವತಗಳೆಂದು ನಿಶ್ಚಯಿಸಿಕೊಂಡು, ಆಗಲೇ ತನ್ನ ರಾಜ್ಯವನ್ನು ಬಿಟ್ಟು ಶ್ರೀಹರಿಯ ಪಾದಭಜನವೊಂದೇ ನಿರತಿಶಯಪುರುಷಾರ್ಥಕ್ಕೆ ಸಾಧನವೆಂದು ನಿರ್ಧರಿಸಿ ಹೊರಟುಬಿಟ್ಟನು. ರಾಜ್ಯವನ್ನು ಬಿಟ್ಟೊಡನೆ ನೆಟ್ಟಗೆ ಗಂಗಾತೀರಕ್ಕೆ ಹೋದನು. ತುಲಸೀಮಿಶ್ರವಾದ ಶ್ರೀ ವಿಷ್ಣುಪಾದಥೂಳಿಯಿಂದ ಪ್ರಶಸ್ತವಾದ ಜಲಪ್ರವಾಹವುಳ್ಳದಾಗಿ, ಲೋಕ ಪಾಲಕರು ಮೊದಲುಗೊಂಡು ಸಮಸ್ತಜಗತ್ತನ್ನೂ ಪಾವನಮಾಡತಕ್ಕ ಗಂಗಾನದಿಯ ತೀರಕ್ಕೆ ಹೋಗಿ, ಅಲ್ಲಿ ಪ್ರಾಯೋಪವೇಶವನ್ನು ಮಾಡಬೇಕೆಂದು ನಿಶ್ಚಯಿಸಿಬಿಟ್ಟನು. ಇದೇ ಮೋಕ್ಷಸಾಧನವೆಂದೂ ತಿಳಿದು, ತನ್ನ ದೇಹದಲ್ಲಿಯೂ, ದೇಹಸಂಬಂಧಿಗಳಲ್ಲಿಯೂ ಅಭಿಲಾಷೆಯನ್ನು ಬಿಟ್ಟು, ಬೇರೆಯಾವ ವಸ್ತುಗಳಲ್ಲಿಯೂ ಮನಸ್ಸನ್ನಿಡದೆ, ಕೇವಲಮೌನದಿಂದ ಶ್ರೀಕೃಷ್ಣನ ಪಾದಾರವಿಂದಗಳನ್ನು ಧ್ಯಾನಿಸುತಿದ್ದನು. ಇಷ್ಟರಲ್ಲಿ, ತೀರ್ಥಯಾತ್ರೆಯೆಂಬ ನೆವದಿಂದ ಅನೇಕಪುಣ್ಯತೀರ್ಥಗಳಿಗೂತಮ್ಮ ಸಂಬಂಧದಿಂದ ಪವಿತ್ರತೆಯನ್ನುಂಟುಮಾಡತಕ್ಕ ಎಷ್ಟೋಮಂದಿ ಮಹರ್ಷಿಶ್ರೇಷ್ಠರು ತಮ್ಮತಮ್ಮ ಶಿಷ್ಯರೊಡಗೂಡಿ ಆ ಸ್ಥಳಕ್ಕೆಬಂದು ಸೇರಿದರು. ಅತ್ರಿಮುನಿ, ವಸಿಷ್ಠರು, ಚ್ಯವನರು, ಶರದ್ವಂತರು, ಅರಿಷ್ಟನೇಮಿ, ಭೃಗು, ಅಂಗಿರಸ್ಸು, ಪರಾಶರರು, ಮುಂತಾದ ಮುನಿಶ್ರೇಷ್ಠರೆಲ್ಲರೂ ಬಂದರು. ಹಾಗೆಯೇ ವಿಶ್ವಾಮಿತ್ರರು, ಪರಶುರಾ

ಮರು, ಉಚಥ್ಯ, ಇಂದ್ರಪ್ರಮದ, ಇಧ್ಮವಾಹ, ಮೇಧಾತಿಥಿ, ದೇವಲ, ಅಷ್ಟಿಷೇಣ, ಭಾರದ್ವಾಜ, ಗೌತಮ, ಪಿಪ್ಪಲಾದ, ಮೈತ್ರೇಯ, ಔರ್ವ, ಕವಷ, ಅಗಸ್ತ್ಯ, ವ್ಯಾಸ, ನಾರದರೇ ಮೊದಲಾದ ಮಹರ್ಷಿಗಳೆಲ್ಲರೂ ಬಂದು ನೆರೆದರು. ಇನ್ನೂ ಬೇರೆಬೇರೆ ದೇವರ್ಷಿಗಳೂ, ಬ್ರಹ್ಮರ್ಷಿಗಳೂ, ರಾಜರ್ಷಿಗಳೂ, ಅರುಣಾದಿಋಷೀಶ್ವರರೂ ಆ ಪರೀಕ್ಷಿತ್ತನ್ನು ನೋಡಬೇಕೆಂಬ ಕುತೂಹಲದಿಂದ ಬಂದರು. ಇವರೆಲ್ಲರೂ ಬಂದುದನ್ನು ನೋಡಿ ಪರೀಕ್ಷಿನ್ಮಹಾರಾಜನು, ಅವರನ್ನಿ ಬರುಗೊಂಡು ಪೂಜಾದಿಗಳಿಂದ ಸತ್ಕರಿಸಿ ನಮಸ್ಕರಿಸಿದನು. ಎಲ್ಲರೂ ಸುಖಾಸೀನರಾಗಿ ಕುಳಿತಮೇಲೆ, ಮತ್ತೊಮ್ಮೆ ಅವರೆಲ್ಲರನ್ನೂ ನಮಸ್ಕರಿಸಿ, ಆ ಮಹಾತ್ಮರ ಸಭೆಗಿದಿರಾಗಿ ಕೈಮುಗಿದು ನಿಂತು, ನಿಷ್ಕಲ್ಮಷವಾದ ಮನಸ್ಸಿನಿಂದ ತನ್ನ ಉದ್ದೇಶವನ್ನು ಅವರಲ್ಲಿ ಹೀಗೆಂದು ವಿಜ್ಞಾಪಿಸಿಕೊಳ್ಳುವನು. " ಎಲ್ಲೆ ಮಹರ್ಷಿಗಳೇ ! ನನ್ನ ಭಾಗ್ಯವೇ ಭಾಗ್ಯವು ! ರಾಜಕುಲದಲ್ಲಿ ನಮ್ಮ ಕುಲವೇ ಧನ್ಯವು. ಹಾಗಿಲ್ಲದಪಕ್ಷದಲ್ಲಿ ನಿಮ್ಮಂತಹ ಮಹಾತ್ಮರ ಅನುಗ್ರಹಕ್ಕೆ ನಾವು ಪಾತ್ರರಾಗುವುದೆಂದರೇನು ? ರಾಜಕುಲದವರ ಕಾರ್ಯವೇ ಬಹಳ ನಿಂದನೀಯವಾದುದು, ನಿಮ್ಮಂತಹ ಬ್ರಾಹ್ಮಣೋತ್ತಮರ ಪಾದಸೇವೆಯಿಂದುಂಟಾಗತಕ್ಕ ಪರಿಶುದ್ಧಿಗೂ, ನಿಂದ್ಯವಾದ ಈ ರಾಜವಂಶಕ್ಕೂ ಪರಸ್ಪರಸಂಬಂಧವು ಲಭಿಸುವುದೇ ದುರ್ಲಭವಲ್ಲವೆ? ಆಹಾ! ಇದಲ್ಲವೇ ಆಶ್ಚರ್ಯವು. ನಾನು ಭಯಂಕರವಾದ ಸಂಸಾರಪಾಶದಲ್ಲಿ ಸಿಕ್ಕಿ,ಆದರ ಬಾಧೆಯನ್ನು ತಪ್ಪಿಸಿಕೊಳ್ಳಲಾರದೆ ಈದೇಹವನ್ನು ಬಿಡುವುದಕ್ಕೆ ತಕ್ಕ ಮಾರ್ಗವಾವುದೆಂದು ಚಿಂತಿಸುತ್ತಿರುವಸಮಯಕ್ಕೆ ಸರಿಯಾಗಿ,ನನಗೆ ಬ್ರಾಹ್ಮಣಶಾಪವೊಂದು ಮುಕ್ತಿಕಾರಣವಾಗಿ ಬಂದೊದಗಿತು. ಅಹಂಕಾರಮಮಕಾರಗಳಿಂದ ಬೀಗಿ ಮೆರೆಯುತಿದ್ದ ನನ್ನಲ್ಲಿ, ಆ ಶ್ರೀಹರಿಯೇ ಕರುಣಿಸಿ, ಈ ಬ್ರಾಹ್ಮಣಶಾಪವೆಂಬ ನೆವದಿಂದ ಸರ್ವಸಂಗಪರಿತ್ಯಾಗವಾಗುವಂತೆ ಮಾಡಿದನು.ಎಲ್ಲೆಮಹರ್ಷಿಗಳೆ!ಶೀಘ್ರದಲ್ಲಿಯೇ ನೀವು ನನಗೆ ಅಭಯವನ್ನು ಕೊಟ್ಟು ರಕ್ಷಿಸಬೇಕು. ಮಹಾತ್ಮರಾದ ನೀವೂ,ಈಗಂಗಾದೇವಿಯೂ ಭಗವಂತನಲ್ಲಿಯೇದೃಢಮನಸ್ಸುಳ್ಳ ನನ್ನನ್ನು ನಿಮ್ಮಸೇವಕನನ್ನಾಗಿ ಗ್ರಹಿಸಬೇಕು. ಬ್ರಾಹ್ಮಣಶಾಪದಿಂದ ಪ್ರೇರಿತನಾದ ತಕ್ಷಕನು ತನಗಿಷ್ಟಬಂದಂತೆ

ನನ್ನನ್ನು ಕಚ್ಚಿದರೂ ಕಚ್ಚಲಿ ! ಅದಕ್ಕಾಗಿ ನಾನು ಹೆದರುವವನಲ್ಲ. ಅದರೆ ಅದುವರೆಗೂ ನೀವು ನನ್ನ ಕಿವಿಗೆ ಬೀಳುವಂತೆ ವಿಷ್ಣುಕಥೆಗಳನ್ನು ಗಾನಮಾಡುತ್ತ ನನ್ನನ್ನು ಧರಿಸಬೇಕು. ಭಗವಂತನಲ್ಲಿ ಭಕ್ತಿಯೂ, ಆತನ ಭಕ್ತರಲ್ಲಿ ಅನುರಾಗವೂ ನನಗೆ ದೃಢವಾಗಿ ಹುಟ್ಟುವಂತೆ ಅನುಗ್ರಹಿಸಬೇಕು. ಇನ್ನು ಮುಂದಿನ ಜನ್ಮಗಳಲ್ಲಿಯೂ ನನಗೆ ಆ ಶ್ರೀವಿಷ್ಣುವಿನಲ್ಲಿ ಭಕ್ತಿಯೂ, ಆ ಶ್ರೀಹರಿಯ ಗುಣಕೀರ್ತನಗಳನ್ನು ಕೇಳುವುದರಲ್ಲಿ ಆಸಕ್ತಿಯೂ, ಅಪರಮಾತ್ಮನ ಪಾದಸೇವೆಯನ್ನು ಮಾಡುವ ಭಾಗ್ಯವೂ ಲಭಿಸುವಂತೆ ಅನುಗ್ರಹಿಸಬೇಕು. ಎಂದು ಬದ್ಧಾಂಜಲಿಯಾಗಿ ಪ್ರಾರ್ಥಿಸಿ ಗಂಗೆಯ ದಕ್ಷಿಣತೀರದಲ್ಲಿ ಉತ್ತರಾಭಿಮುಖನಾಗಿ ಪೂರ್ವಾಗ್ರವಾದ ದರ್ಭಾಸನದಲ್ಲಿ ಕುಳಿತನು.ಆತನದೃಢನಿಶ್ಚಯವನ್ನು ಮಹರ್ಷಿಗಳೆಲ್ಲರೂ ಕೊಂಡಾಡುತಿದ್ದರು ಇದೇ ಸಮಯದಲ್ಲಿ ದೇವತೆಗಳು ಪರಮಸಂತೋಷದಿಂದ ದೇವದುಂದುಭಿಗಳನ್ನು ನುಡಿಸುತ್ತ ಆಕಾಶದಿಂದ ಪುಷ್ಪವರ್ಷಗಳನ್ನು ಕರೆದರು.ಅಲ್ಲಿ ಬಂದಿದ್ದ ಮಹರ್ಷಿಗಳೆಲ್ಲರೂಪರೀಕ್ಷಿದ್ರಾಜನ ಗುಣಾತಿಶಯಗಳನ್ನು ನೋಡಿ, ''ಭಲೆ, ಭಲೆ" ಎಂದು ಕೊಂಡಾಡುತ್ತ, ಆತನನ್ನು ಕುರಿತು '' ಎಲೈ ರಾಜಶ್ರೇಷ್ಠನೆ ! ಈಗ ನೀನು ಭಗವತ್ಸಾನ್ನಿಧ್ಯವೊಂದನ್ನೇ ಅಪೇಕ್ಷಿಸಿ, ಸಮಸ್ತರಾಜರಿಗೂ ಆಸೆಯನ್ನು ಹುಟ್ಟಿಸತಕ್ಕ ಸಾರ್ವಭೌಮಸಿಂಹಾಸನವನ್ನೇ ಬಿಟ್ಟು ಬಂದೆಯಲ್ಲವೆ ? ಯಾವಾಗಲೂ ಶ್ರೀಕೃಷ್ಣಪಾದಸೇವೆಯಲ್ಲಿ ನಿರತರಾದ ನಿನ್ನಂತಹ ಭಕ್ತರು ಈಕಾರ್ಯವನ್ನು ನಡೆಸುವದೇನೂ ಆಶ್ಚರ್ಯವಲ್ಲ" ಎಂದು ಹೇಳಿ, ತಮ್ಮೊಳಗೆ ತಾವು '' ಭಗವದ್ಭಕ್ತರಲ್ಲಿ ದೃಢವಿಶ್ವಾಸವುಳ್ಳ ಈತನು, ಈ ದೇಹವನ್ನು ಬಿಟ್ಟು, ಶುದ್ಧಸತ್ವಮಯವಾಗಿಯೂ, ಅಪಹತ ಪಾಪ್ಮತ್ವವೇ ಮೊದಲಾದ ಎಂಟು ಗುಣಗಳ ಉತ್ಪತ್ತಿಸ್ಥಾನವಾಗಿಯೂ ಇರುವ ಪರಲೋಕವನ್ನು ಹೊಂದುವವರೆಗೆ, ನಾವೆಲ್ಲರೂ ಇವನ ಸಮೀಪದಲ್ಲಿಯೇ ಇರುವೆವು " ಎಂದರು. ನಿಷ್ಕಪಟವಾಗಿಯೂ, ಅಮೃತಪ್ರಾಯವಾಗಿಯೂ ಇರುವ ಆ ಮಹರ್ಷಿಗಳ ವಾಕ್ಯವನ್ನು ಕೇಳಿದೊಡನೆ, ಪರೀಕ್ಷಿದ್ರಾಜನಿಗೆವಿಶೇಷ ಸಂತೋಷವು ಹುಟ್ಟಿತು. ತಿರುಗಿ ರಾಜನು ಅವರೆಲ್ಲರಿಗೂ ನಮಸ್ಕರಿಸಿ ಶ್ರೀಹರಿಚರಿತ್ರವನ್ನು ಕೇಳಬೇಕೆಂಬ ಕುತೂಹಲದಿಂದ ಹೀಗೆಂದು ಪ್ರಾರ್ಥಿಸುವನು.''ಎಲ್ಲೆ ಮಹ

ರ್ಷಿಗಳೇ! ಸತ್ಯಲೋಕದಲ್ಲಿ ಮೂರ್ತಿಮತ್ತಾದ ವೇದಸಮೂಹದಂತೆ ಪ್ರಕಾಶಿಸುವ ನೀವೆಲ್ಲರೂ ನಾನಾದಿಕ್ಕುಗಳಿಂದ ಇಲ್ಲಿಗೆಬಂದು ಸೇರಿರುವಿರಿ!ನಮ್ಮಂತವರನ್ನು ಅನಗ್ರಹಿಸುವುದೇ ನಿಮಗೆ ಸ್ವಭಾವವು. ಇಷ್ಟೇ ಹೊರತು ಈ ಲೋಕದಲ್ಲಿಯಾಗಲಿ, ಪರಲೋಕದಲ್ಲಿಯಾಗಲಿ, ನಿಮಗೆ ಆಗಬೇಕಾದ ಪ್ರಯೋಜನವೇನೂ ಇಲ್ಲವು. ಆದುದರಿಂದ ನಿಮ್ಮನ್ನಾಶ್ರಯಿಸಿ ನಾನು ನಡೆಸಬೇಕಾದ ಕಾರ್ಯವೊಂದುಂಟು. ಅದನ್ನು ಪ್ರಾರ್ಥಿಸಿಕೊಳ್ಳುವೆನು. ಸಾಯುವುದಕ್ಕೆ ಸಿದ್ಧನಾದ ಮನುಷ್ಯನು, ತನ್ನ ಕರಣತ್ರಯಗಳಿಂದಲೂ ನಡೆಸಬೇಕಾದ ಕರ್ಮವಾವುದುಂಟೋ ಅದನ್ನು, ನೀವು ಚೆನ್ನಾಗಿ ವಿಮರ್ಶಿಸಿ ನನಗೆ ತಿಳಿಸಬೇಕು" ಎಂದನು. ಹೀಗೆ ಪ್ರಶ್ನಮಾಡುತ್ತಿರುವ ಆ ಪರೀಕ್ಷಿದ್ರಾಜನಿಗೆ ತಕ್ಕ ಪ್ರತ್ಯುತ್ತರವನ್ನು ಹೇಳುವುದಕ್ಕಾಗಿ ಆ ಮಹರ್ಷಿಗಳೆಲ್ಲರೂ ಆಲೋಚಿಸುತ್ತಿರುವಸಮಯಕ್ಕೆ ಸರಿಯಾಗಿ, ಸ್ವೇಚ್ಛೆಯಿಂದ ಭೂಮಂಡಲವನ್ನು ಸುತ್ತುತಿದ್ದ ವ್ಯಾಸಪುತ್ರನಾದ ಶುಕಮುನಿಯು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ಸೇರಿದನು. ಆ ಶುಕಮಹರ್ಷಿಯು ಮಧ್ಯಯೌವನದಲ್ಲಿದ್ದರೂ ಸ್ವಲ್ಪ ಮಾತ್ರವೂ ವಿಷಯಾಸಕ್ತಿಯಿಲ್ಲದೆ, ಕೇವಲಪಿರಕ್ತನಾಗಿಯೇ ತಿರುಗುತಿದ್ದವನು ಮೈಮೇಲೆ ಆಶ್ರಮಸಂಬಂಧವಾದ ಚಿಹ್ನೆಗಳೊಂದಾದರೂ ಇಲ್ಲದೆ ಅವಧೂತವೇಷದಿಂದೊಪ್ಪುತಿದ್ದನು. ಮತ್ತು ಆತನು ಬ್ರಹ್ಮಾತ್ಮಕವಾದ ಆತ್ಮಾನುಭವದಿಂದಲೇ ಆನಂದಿಸುತಿದ್ದನು. ನೋಡಿದವರೆಲ್ಲರಿಗೂ ಅವನ ವೇಷವು ಕೇವಲಹಾಸ್ಯಾಸ್ಪದವಾದ ಸ್ಥಿತಿಯಲ್ಲಿದ್ದಿತು. ಇದಕ್ಕಾಗಿಯೇ ಅವನು ಹೋದಕಡೆಗಲ್ಲೆಲ್ಲಾ ಬಾಲಕರು ಅವನನ್ನು ಸುತ್ತಿಮುತ್ತಿಕೊಂಡು ಪರಿಹಾಸ್ಯಮಾಡುತ್ತಿರುವರು. ಅವನ ಕರಚರಣಾದ್ಯವಯವಗಳೆಲ್ಲವೂ ಬಹಳ ಸುಕುಮಾರಗಳಾಗಿದ್ದುವು. ಆತನು ಇನ್ನೂ ಹದಿನಾರುವರ್ಷವಯಸ್ಸಿನ ಕುಮಾರನು. ಅತಿಸುಂದರವಾದ ಅವನ ನೆತ್ತಿಯೂ, ವಿಶಾಲವಾದ ಕಣ್ಣುಗಳೂ, ಉಬ್ಬಿದ ಮೂಗೂ, ಒಂದಕ್ಕೊಂದು ಸಮಾನವಾದ ಕಿವಿಗಳೂ,ಬಾಗಿದಹುಬ್ಬುಗಳೂ,ಲೋಕಮೋಹಕಗಳಾಗಿದ್ದುವು. ಅವನ ಕಂಠವು ಶಂಖವನ್ನು ಹೋಲುತ್ತಿರುವುದು.ಅವನ ಭುಜಗಳೆರಡೂ ಮಾಂಸಪುಂಜ ತುಂಬಿಶೋಭಿಸುತಿದ್ದುವು ಅವನ ಎದೆಯು ವಿಶಾಲವಾಗಿ ಉಬ್ಬಿದ್ದಿತು. ಸುಳಿಯಂತಿರುವ ನಾಭಿಯಿಂದ

ಲೂ, ಸ್ಪಷ್ಟವಾಗಿ ಕಾಣುವ ತ್ರಿವಳಿಗಳಿಂದಲೂ ಕೂಡಿದ ಆತನ ಉದರಪ್ರದೇಶವು ಅತಿಸುಂದರವಾಗಿದ್ದಿತು. ಆತನು ಕಾಮಕ್ರೋಧಾದಿಗಳನ್ನು ಹೇಗೋಹಾಗೆ, ಮೈಮೇಲಿನ ಬಟ್ಟೆಯನ್ನೂ ಬಿಟ್ಟು,ಯಥೇಚ್ಛವಾಗಿ ತಿರುಗುತಿದ್ದನು. ಆತನ ಬಿಚ್ಚಿದ ಕೇಶಪಾಶಗಳು ಮೈಯೆಲ್ಲವನ್ನೂ ಮರೆಸುವಂತೆ ಕವರಿದ್ದುವು. ಆತನ ಉದ್ದವಾದ ತೋಳುಗಳು ಮೊಳಕಾಲಿನವರೆಗೆ ನೀಡಿದ್ದುವು ಆತನ ದಿವ್ಯತೇಜಸ್ಸು ನೋಡುವ್ರದಕ್ಕೆ ಬಹಳ ರಮ್ಯವಾಗಿ ಕಾಣುತಿತ್ತು. ಅವನ ಸೌಂದರ್ಯವು ಸಮಸ್ತಭಾಮಿನಿಯರಿಗೂ ಮೋಹಜನಕವಾಗಿದ್ದಿತು. ಇಂತಹ ಮಹಾನುಭಾವನಾದ ಶುಕಮುನಿಯನ್ನು ಕಂಡೊಡನೆ, ಅಲ್ಲಿದ್ದ ಮಹರ್ಷಿಗಳೆಲ್ಲರೂ ತಮ್ಮ ಮ್ಮ ಆಸನಗಳಿಂದ ಮೇಲೆದ್ದು ನಿಂತು, ಅವನನ್ನು ಗೌರವಿಸಿ ಬರಮಾಡಿಕೊಂಡರು. ಹಾಗೆಯೇ ಪರೀಕ್ಷಿನ್ಮಹಾರಾಜನೂಕೂಡ, ಪ್ರತ್ಯುತ್ಥಾನಮಾಡಿ ನಮಸ್ಕರಿಸಿ, ಯಥಾವಿಧಿಯಾಗಿ ಆ ಶುಕಮುನಿಯನ್ನು ಪೂಜಾದಿಗಳಿಂದ ಸತ್ಕರಿಸಿದನು. ಎಲೈ ಶೌನಕಾದಿಗಳೇ ! ಮೈಮೇಲೆ ಬಟ್ಟೆಯಿಲ್ಲದೆ,ತಲೆಕೂದಲನ್ನು ಕೆದರಿಕೊಂಡು, ಹುಚ್ಚನಂತೆ ತಿರುಗುತಿದ್ದ ಆ ಶುಕಮುನಿಯನ್ನು ಸುತ್ತಿಮುತ್ತಿಕೊಂಡು, ಆತನನ್ನು ಹಾಸ್ಯಮಾಡುತ್ತ, ಅವನ ಹಿಂದೆ ಬರುತಿದ್ದ ಅಜ್ಞರಾದ ಅನೇಕಬಾಲಕರೂ, ಸ್ತ್ರೀಯರೂ, ಅಲ್ಲಿ ಅನೇಕ ಮಹರ್ಷಿಗಳ ನಡುವೆ ಆತನಿಗುಂಟಾದ ಮಹಾಗೌರವವನ್ನೂ, ಸತ್ಕಾರಗಳನ್ನೂ ನೋಡಿದರು.ಆಮೇಲೆ,ಅವರಿಗೂ ಆತನು ಯಾರೋ ಮಹಾತ್ಮನೆಂಬ ಭಾವವು ಹುಟ್ಟಿತು. ಒಡನೆಯೇ ಅವರೆಲ್ಲರೂ ಭಯದಿಂದ ಹಿಂತಿರುಗಿಬಿಟ್ಟರು ಅಮೇಲೆ ಪರೀಕ್ಷಿದ್ರಾಜನು ಶುಕನಿಗೆ ಉನ್ನತಾಸನವೊಂದನ್ನು ಸಮರ್ಪಿಸಿ, ತಾನೂ ತನಗೆ ಯೋಗ್ಯವಾದ ಆಸನದಲ್ಲಿ ಕುಳಿತನು. ಮಹಾತ್ಮರಲ್ಲಿಯೂ ಮಹಾತ್ಮನಾದ ಆ ಶುಕನು, ಅನೇಕದೇವರ್ಷಿಗಳಿಂದಲೂ, ರಾಜರ್ಷಿಗಳಿಂದಲೂ, ಮಹರ್ಷಿಗಳಿಂದಲೂ ತುಂಬಿದ ಆ ಮಹಾಸಭೆಯಲ್ಲಿ ಪರೀಕ್ಷಿದ್ರಾಜನು ತನಗೆ ಕೊಟ್ಟ ಪೀಠದಲ್ಲಿ ಕುಳಿತು, ಅನೇಕಗ್ರಹನಕ್ಷತ್ರಗಳಿಂದ ತುಂಬಿದ ಆಕಾಶದಲ್ಲಿ ಪೂರ್ಣಕಳೆಗಳಿಂದ ಪ್ರಕಾಶಿಸುವ ಚಂದ್ರನಂತೆ ಶೋಭಿಸುತಿದ್ದನು. ಹೀಗೆ ಕೇವಲಶಾಂತಸ್ವರೂಪನಾಗಿಯೂ, ಅವಿದ್ಯಾಸಂಬಂಧದಿಂದುಂಟಾಗುವ ಜ್ಞಾನಸಂಕೋಚವಿಲ್ಲದೆ, ಮಹಾಧೀಮಂತನಾಗಿಯೂ ಇರುವ



208. ಪರೀಕ್ಷಿದ್ರಾಜನ ಬಳಿಗೆ ಶುಕಮುನಿಯು ಬಂದುದು.

ಆ ಶುಕಮಹಾಮುನಿಯು ಸಭಾಮಧ್ಯದಲ್ಲಿ ಕುಳಿತಿದ್ದಾಗ, ಪರೀಕ್ಷಿದ್ರಾಜನು ವಿನಯಭಕ್ತಿಗಳಿಂದ ಮೆಲ್ಲಗೆ ಆತನ ಬಳಿಗೆ ಬಂದು, ನಮಸ್ಕರಿಸಿ, ಬದ್ಧಾಂಜಲಿಯಾಗಿ ಅವನ ಮುಂದೆ ನಿಂತು ಮೃದುಮಧುರವಾಕ್ಯಗಳಿಂದ ವಿಜ್ಞಾಪಿಸುವನು. ''ಎಲ್ಲೆ ಮಹಾಮುನೀಂದ್ರನೆ! ಕ್ಷತ್ರಬಂಧುಗಳಾದ ನಾವು ನಿಮ್ಮಂತವರ ಪಾದಸೇವಕರು! ನಿಮ್ಮ ದರ್ಶನದಿಂದ ಈಗ ನಾನು ಕೃತಾರ್ಥನಾದೆನು. ತಮ್ಮ ಸೇವೆಯಿಂದ ನನ್ನ ಪಾಪಗಳೆಲ್ಲವೂ ನೀಗಿದುವು. ತಮ್ಮಂತಹ ಮಹಾತ್ಮರು ನಮ್ಮಲ್ಲಿಗೆ ಅತಿಥಿಭಾವದಿಂದ ಬಂದುದು ನಮ್ಮ ಪೂರ್ವಪುಣ್ಯವಲ್ಲದೆ ಬೇರೆಯಲ್ಲ! ತಮ್ಮಂತವರು ಸ್ಮರಿಸಿದಮಾತ್ರದಿಂದಲೇ ಗೃಹಸ್ಥರ ಮನೆಗಳು ಪರಮಪವಿತ್ರಗಳಾಗುವುವೆಂದು ಹೇಳಬಹುದು. ಹೀಗಿರುವಾಗ ಈಗ ನನಗೆ ತಮ್ಮ ಪ್ರತ್ಯಕ್ಷದರ್ಶನವೂ, ತಮ್ಮೊಡನೆ ಸಂಭಾಷಣವೂ ತಮ್ಮ ಪಾದಸೇವೆಯನ್ನು ಮಾಡತಕ್ಕ ಭಾಗ್ಯವೂ ಲಭಿಸಿದಮೇಲೆ, ನನ್ನ ಜನ್ಮವು ಪವಿತ್ರವಾಯಿತೆಂಬುದನ್ನು ಹೇಳಬೇಕೆ? ಶ್ರೀಮಹಾವಿಷ್ಣುವಿನ ಮುಂದೆ ರಾಕ್ಷಸರು ಹೇಗೋಹಾಗೆ ತಮ್ಮಂತಹ ಯೋಗೀಶ್ವರರ ಸನ್ನಿಧಿಯಲ್ಲಿ ಎಂತಹ ಮಹಾಪಾತಕಗಳಾದರೂ ತಲೆಯೆತ್ತಡಹಾಗೆ ಅಡಗಿಹೋಗುವುವು. ಎಲ್ಲೆ ಮಹಾತ್ಮನೆ! ಕೃಷ್ಣನು ಪಾಂಡವರಿಗೆ ಹಿತನಾಗಿಯೂ ಬಂಧುವಾಗಿಯೂ ಇದ್ದು, ಸಮುದ್ರಾಂತವಾದ ಸಮಸ್ತಭೂಮಿಗೂ ಅವರನ್ನು ರಾಜರನ್ನಾಗಿ ಮಾಡಿದನಲ್ಲವೆ? ಅವರ ವಂಶದಲ್ಲಿ ಹುಟ್ಟಿದ ನನ್ನಲ್ಲಿಯೂಕೂಡ ಆ ಕೃಷ್ಣನು ಅದೇವಿಧವಾದ ಬಂಧುವಾತ್ಸಲ್ಯವನ್ನು ತೋರಿಸುತ್ತಿರುವನೆಂಬುದರಲ್ಲಿ ಸ್ವಲ್ಪಮಾತ್ರವೂ ಸಂದೇಹವಿಲ್ಲ. ಹಾಗಿಲ್ಲದಪಕ್ಷದಲ್ಲಿ, ಬೇರೊಬ್ಬರಿಗೆ ತಿಳಿಯದ ಘನತೆಯುಳ್ಳ ನಿನ್ನ ದರ್ಶನವು ನಮ್ಮಂತಹ ಅಲ್ಪಮನುಷ್ಯರಿಗೆಲಭಿಸುವುದೆಂದರೇನು? ಮಹಾತ್ಮನಾದ ನಿನ್ನ ದರ್ಶನದಿಂದ ಈಗ ನನ್ನ ಕೋರಿಕೆಗಳೆಲ್ಲವೂ ಸಿದ್ಧಿಸಿದಂತೆಯೇ ಹೇಳಬಹುದು. ಆದರೆ ಯೋಗೀಶ್ವರರಿಗೂ ಗುರುವೆನಿಸಿಕೊಂಡ ನಿನ್ನಲ್ಲಿ ಒಂದುವಿಷಯವನ್ನು ಮಾತ್ರ ಕೇಳಿ ತಿಳಿಯಬೇಕೆಂದಿರುವೆನು. ಈಗಲೋ, ನಾಳೆಯೋ ಸಾಯುವುದಕ್ಕೆ ಸಿದ್ಧನಾಗಿರುವ ಮನುಷ್ಯನು, ಯಾವ ಉಪಾಯದಿಂದ ತನಗೆ ತಿರುಗಿ ಸಂಸಾರಸಂಬಂಧವಿಲ್ಲದಂತೆ ತಪ್ಪಿಸಿಕೊಳ್ಳಬಹುದು? ಅಂತವನು ಜಪಿಸಬೇಕಾದುದೇನು ? ಇತರರಿಂದ ಕೇಳಬೇ

ಕಾದುದೇನು? ಅವನು ಪಠಿಸಬೇಕಾದುದೇನು? ಯಾವುದನ್ನು ಭಜಿಸಬೇಕು? ಇವೆಲ್ಲಕ್ಕೂ ವಿರುದ್ಧವಾಗಿ ಅವನು ನಡೆಸಬಾರದ ಕೃತ್ಯಗಳಾವುವು? ಅವೆಲ್ಲವನ್ನೂ ನನಗೆ ತಿಳಿಸಬೇಕು. ಇಂದಿಗೆ ಏಳನೆಯದಿನದಲ್ಲಿ ನಾನು ಸಾಯುವುದಕ್ಕೆ ಸಿದ್ಧನಾಗಿರುವೆನು. ಇಷ್ಟರೊಳಗಾಗಿ ನನಗೆ ಮೋಕ್ಷೋಪಾಯವನ್ನು ಅನುಗ್ರಹಿಸಬೇಕು. ಎಲೈ ಮಹಾತ್ಮನೆ! ನೀನು ಗೃಹಸ್ಥರ ಮನೆಗಳಲ್ಲಿ ಪ್ರವೇತಿಸಿದರೂಕೂಡ, ಹಸುಗಳನ್ನು ಹಾಲುಕರೆಯುವಷ್ಟು ಕಾಲವಾದರೂ ಅಲ್ಲಿ ನೆಲೆಯಾಗಿ ನಿಲ್ಲುವವನಲ್ಲ! ಅಂತಹ ನೀನು ಈಗ ನನಗೆ ಈ ಅವಸಾನಕಾಲದಲ್ಲಿ ದರ್ಶನವನ್ನು ಕೊಟ್ಟುದೇ ನನ್ನ ಪೂರ್ವಪುಣ್ಯವಲ್ಲವೆ" ಎಂದನು. ಹೀಗೆ ಪ್ರಶ್ನೆಮಾಡುತ್ತಿರುವ ಪರಿಕ್ಷಿದ್ರಾಜನನ್ನು ನೋಡಿ, ಧರ್ಮಜ್ಞನಾಗಿಯೂ, ಪೂಜ್ಯನಾಗಿಯೂ ಇರುವ ಶುಕಮಹಾಮುನಿಯು, ಮೃದುವಾಕ್ಯದಿಂದ ಆತನಿಗೆ ಪ್ರತ್ಯುತ್ತರವನ್ನು ಕೊಡುವನು. ಇಲ್ಲಿಗೆ ಹತ್ತೊಂಬತ್ತನೆಯ ಅಧ್ಯಾಯವು.

ಪ್ರಥಮಸ್ಕಂಧವು ಸಮಾಪ್ತವು.

ಶ್ರೀ ಕೃಷ್ಣಾಯಪರಬ್ರಹ್ಮಣೇನಮಃ.

ಶ್ರೀಮದ್ಭಾಗವತವು

ದ್ವಿತೀಯಸ್ಕಂಧವು.

ಹರಿಕೀರ್ತನಪ್ರಶಂಸೆ ಋಷ್ಯಾಂಗಚರಿತ್ರವು.
ಅಷ್ಟಾಂಗಯೋಗವಿವರಣೆ, ವಿರಾಡ್ರೂಪವರ್ಣನೆ.

ಓ ಶೌನಕಾದಿಗಳೆ! ಪರೀಕ್ಷಿದ್ರಾಜನು ಕೇಳಿದ ಪ್ರಶ್ನೆಗಳಿಗಾಗಿ ಶುಕ ಮುನಿಯು ಬಹಳಸಂತೋಷಗೊಂಡು,ಆತನನ್ನು ಕುರಿತು.''ಎಲೈ ರಾಜೇಂದ್ರನೆ! ನೀನು ಕೇಳಿದ ಪ್ರಶ್ನವು ನಿನಗೆಮಾತ್ರವಲ್ಲದೆ ಸರ್ವಲೋಕಕ್ಕೂ ಹಿತಕರವಾದುದು. ಬಹಳಶ್ಲಾಘ್ಯವಾದ ಪ್ರಶ್ನವನ್ನು ಕೇಳಿದೆ! ಈ ಪ್ರಶ್ನವು ಆತ್ಮಜ್ಞಾನಿಗಳಿಗೂ ಮೆಚ್ಚತಕ್ಕುದಾಗಿರುವುದು. ನೀನು ಕೇಳಿದ ವಿಷಯವು ಶ್ರವಣಮನನಾದಿಗಳಿಗೆ ಯೋಗ್ಯಗಳಾದ ಅರ್ಥಗಳಲ್ಲಿ ಅತ್ಯುತ್ತಮವೆನಿಸಿರುವುದು. ಎಲೈ ರಾಜನೆ! ಮೋಕ್ಷಾಪೇಕ್ಷೆಯುಳ್ಳವರಿಗೆ ಪರಮಾತ್ಮತತ್ವವನ್ನು ತಿಳಿಯಬೇಕಾದುದೊಂದೇ ಕಾರ್ಯವು. ಆತ್ಮತತ್ತ್ವವನ್ನು ತಿಳಿಯದೆಲಾರದೆ ಐಹಿಕಾಮುಷ್ಮಿಕಫಲವೊಂದರಲ್ಲಿಯೇ ಆಸಕ್ತರಾಗಿರುವ ಗೃಹಸ್ಥರಿಗೆ, ಕೇಳಿ ತಿಳಿಯಬೇಕಾದ ವಿಷಯಗಳು ಬಹಳವಾಗಿರುವುವು. ಆದರೆ ಗೃಹಸ್ಥರಾದ ಮನುಷ್ಯರು ಆತ್ಮಜ್ಞಾನಕ್ಕಾಗಿ ಲೇಶಮಾತ್ರವೂ ಪ್ರಯತ್ನಿಸದೆ ಅಹೋರಾತ್ರವೂ ವ್ಯರ್ಥವಾಗಿ ಕಾಲವನ್ನು ಕಳೆದುಬಿಡುವರು. ರಾತ್ರಿಯೆ ಕಾಲಗಳನ್ನು ನಿದ್ರೆಯಿಂದಲೂ, ಮೈಥುನದಿಂದಲೂ ಕಳೆದುಬಿಡುವರು. ಹಗಲೆಲ್ಲವೂ ಕಟುಂಬಪೋಷಣೆಯಲ್ಲಿಯೂ, ಅರ್ಥಾರ್ಜನಚಿಂತೆಯಲ್ಲಿಯೂ ಕಳೆದು ಹೋಗುವುದು. ಇದರಿಂದ ಗೃಹಸ್ಥರಿಗೆ ಆತ್ಮಜ್ಞಾನದಲ್ಲಿ ಬುದ್ಧಿಹುಟ್ಟುವುದೇ ಕಷ್ಟವು. ಜೀವಾತ್ಮನು ತನಗೆ ಸರಿಕರಗಳಾದ ದೇಹಾದಿಗಳಲ್ಲಿಯೂ,ಹೆಂಡತಿ ಮಕ್ಕಳು ಮೊದಲಾದ ಪರಿವಾರಗಳಲ್ಲಿಯೂ ವಿಶೇಷಾಸಕ್ತನಾಗಿ,ಅವರಲ್ಲಿರು

ವ ಮೋಹದಿಂದ ಮೈಮರೆತಿರುವನು. ತನ್ನ ತಂದೆ ತಾಯಿ ಮೊದಲಾದವರ ಮರಣವನ್ನು ಆಗಾಗ ತನ್ನ ಕಣ್ಣಾರೆ ತಾನೇ ನೋಡುತಿದ್ದರೂ,ತನ್ನ ದೇಹಾದಿಗಳನ್ನು ನಿತ್ಯವೆಂದೇ ನಂಬುತ್ತಿರುವನೇಹೊರತು, ಅವುಗಳಲ್ಲಿ ಅನಿತ್ಯವೆಂಬ ಭಾವನೆಯೇ ಅತನಿಗೆ ಹುಟ್ಟಲಾರದು.ಮನುಷ್ಯನು ಕಂಡುಕಂಡೂ ಅದರ ತತ್ತ್ವವನ್ನು ತಿಳಿದುಕೊಳ್ಳಲಾರನು.ಅದುದರಿಂದಇಂದು ಮುಖ್ಯಾಂಶವನ್ನು ತಿಳಿಸುವೆನು ಕೇಳು! ಸರ್ವಾಂತರ್ಯಾಮಿಯಾಗಿ, ಷಡ್ಗುಣೈಶ್ವರ್ಯಪರಿಪೂರ್ಣನಾಗಿ, ಆಶ್ರಿತರ ಪಾಪಗಳನ್ನು ನೀಗಿಸತಕ್ಕವನಾಗಿ, ಸರ್ವಲೋಕನಿಯಾಮನಾಗಿರುವಭಗವಂತನ ಗುಣಗಳನ್ನು ಬಾಯಿಂದಕೀರ್ತಿಸುವುದೂ,ಅವನ ಚರಿತ್ರಗಳನ್ನು ಕಿವಿಯಿಂದ ಕೇಳುವುದೂ,ಅತನ ಗುಣಗಳನ್ನು ಮನಸ್ಸಿನಿಂದ ಸ್ಮರಿಸುವುದೂ,ಇವೇಮೋಕ್ಷಕ್ಕೆ ಮುಖ್ಯೋಪಾಯಗಳು! ಸಂಸಾರಭಯವನ್ನು ನೀಗಬೇಕೆಂದಿರುವವರಿಗೆಇವೇ ಮುಖ್ಯಸಾಧನಗಳು!ಎಲೈರಾಜೇಂದ್ರನೆ!ಜ್ಞಾನಯೋಗದಿಂದಾಗಲಿ,ಫಲಾಪೇಕ್ಷೆಯಿಲ್ಲದೆ ನಡೆಸುವಕರ್ಮಯೋಗದಿಂದಾಗಲಿ, ಭಗವತ್ಪಾರತಂತ್ರ್ಯರೂಪವಾದ ಸ್ವಧರ್ಮದಿಂದಾಗಲಿ, ದೇಹಾವಸಾನಕಾಲದಲ್ಲಿ ನಾರಾಯಣಸ್ಮರಣವೊಂದೇ ಮನುಷ್ಯನಿಗೆ ಶ್ರೇಯಸ್ಸಾಧನವೆನಿಸುವುದು. ಮನುಷ್ಯಜನ್ಮವನ್ನೆತ್ತಿದುದಕ್ಕೆ ನಾರಾಯಣಸ್ಮರಣವೇ ಉತ್ತಮವಾದ ಲಾಭವು. ಅದಿಲ್ಲದಿದ್ದಮೇಲೆ ಆ ಜನ್ಮವೇ ನಿರರ್ಥಕವು.ಇದರಿಂದಲೇ ಸನಕಾದಿಮುನೀಶ್ವರರೆಲ್ಲರೂ ಕಾಮ್ಯಕರ್ಮವಿಷಯವಾಗಿ ವೇದಬೋಧಿತಗಳಾದ ವಿಧಿನಿಷೇಧಾದಿಗಳೊಂದಕ್ಕೂ ಈಡಾಗದೆ,ಪರಬ್ರಹ್ಮೋಪಾಸನೆಮಾಡಿ, ಅನವರತವೂ ಶ್ರೀಹರಿಯ ಸದ್ಗುಣಗಳನ್ನು ಕೀರ್ತಿಸುವುದರಲ್ಲಿಯೇ ಆನಂದವನ್ನನುಭವಿಸುತ್ತಿರುವರು. ಎಲೈ ರಾಜನೆ ! ಈ ವಿಧಗಳಾದ ಭಗವದ್ಗುಣಗಳನ್ನು ಪ್ರಧಾನವಾಗಿ ವರ್ಣಿಸತಕ್ಕ ಭಾಗವತವೆಂಬ ಗ್ರಂಥವೊಂದುಂಟು. ಆಗ್ರಂಥವು ಬ್ರಹ್ಮಜ್ಞಾನಿಗಳೆಲ್ಲರಿಗೂ ಪರಮಸಮ್ಮತವಾದುದು.ಆ ಗ್ರಂಥವನ್ನು ಕಲಿಯುಗಾರಂಭದಲ್ಲಿ ನನ್ನ ತಂದೆಯಾದ ವ್ಯಾಸಮುನಿಯು ತಾನಾಗಿಯೇ ರಚಿಸಿ, ನನಗೆ ಅದನ್ನುಪದೇಶಿಸಿರುವನು. ನನ್ನ ಮನಸ್ಸು ಬೇರೊಂದರಲ್ಲಿ ಪ್ರವರ್ತಿಸದೆ ಕೇವಲಪರಬ್ರಹ್ಮವೊಂದರಲ್ಲಿಯೇ ಆಸಕ್ತವಾಗಿದ್ದರೂ, ಭಗವಲ್ಲೀಲೆಗಳು ನನ್ನ ಮನಸ್ಸನ್ನಾಕರ್ಷಿಸಿದುದರಿಂದ,ನಾನು ಆ ಉಪಾಖ್ಯಾನ

ವನ್ನು ಭಕ್ತಿಯಿಂದಭ್ಯಸಿಸಿದೆನು. ನೀನೂ ವಿಶೇಷವಾಗಿ ಭಗವದ್ಭಕ್ತಿಯುಳ್ಳವನಾದುದರಿಂದ, ಆ ಗ್ರಂಥವನ್ನೇ ನಿನಗುಪದೇಶಿಸುವೆನು ಕೇಳು! ಆ ಗ್ರಂಥವನ್ನು ಶ್ರದ್ಧೆಯಿಂದ ಕೇಳುವವರಿಗೆ ವಿಷ್ಣುಭಕ್ತಿಯಲ್ಲಿ ತಾನಾಗಿಯೇ ಆಸಕ್ತಿಯು ಹುಟ್ಟುವುದು. ಮೋಕ್ಷಾಪೇಕ್ಷಿಯಾದ ನಿನಗೆ ತಪ್ಪದೆ ಮೋಕ್ಷಪ್ರಾಪ್ತಿಯುಂಟಾಗುವುದು. ಆಧ್ಯಾತ್ಮಿಕಾದಿತಾಪತ್ರಯಗಳಲ್ಲಿ ಬೇಸರವನ್ನು ಹೊಂದಿ, ಮೋಕ್ಷದಲ್ಲಿ ಆಸೆಯಿಟ್ಟು, ಫಲಾಪೇಕ್ಷೆಯಿಲ್ಲದ ಕರ್ಮಯೋಗದಲ್ಲಿ ನಿಷ್ಠರಾದವರಿಗೆ, ಶ್ರೀಹರಿಯ ನಾಮಸಂಕೀರ್ತನಗಳೂ, ಆತನ ಸ್ವರೂಪಚಿಂತನೆಯೂ ಇವೆರಡುಹೊರತು ಬೇರೆ ಮೋಕ್ಷಸಾಧನವಿಲ್ಲವು. ''ಇನ್ನು ಆರೇಳು ದಿನಗಳೊಳಗಾಗಿ ಸಾಯುವುದಕ್ಕಿರುವ ನಾನು ಈ ಕಾರ್ಯವನ್ನು ಹೇಗೆತಾನೇ ಸಾಧಿಸಬಲ್ಲೆ'' ಎಂದು ನೀನು ಸಂದೇಹಿಸಬೇಕಾದುದಿಲ್ಲ. ಹೆಂಡತಿ ಮಕ್ಕಳು ಮೊದಲಾದ ದೇಹಾನುಬಂಧಗಳಲ್ಲಿಯೇ ವಿಶೇಷಾಸಕ್ತನಾಗಿರುವವನು, ಅನೇಕವರ್ಷಗಳವರೆಗೆ ಬದುಕಿದ್ದರೂ, ಆ ಆಯುಃಕಾಲವೆಲ್ಲವೂ ತಿಳಿಯದ ಹಾಗೆಯೇ ವ್ಯರ್ಥವಾಗಿ ಕಳೆದುಹೋಗುವುದು. ಅಂತವನು ಎಷ್ಟುಸಂವತ್ಸರಗಳವರೆಗೆ ಬದುಕಿದ್ದರೆತಾನೇ ಫಲವೇನು? ಕಾಲವು ವ್ಯರ್ಥವಾಗಿ ಕಳೆದುಹೋಗುವುದೆಂಬ ಪರಿಜ್ಞಾನವಿದ್ದವನಿಗೆ ಒಂದು ಮುಹೂರ್ತಮಾತ್ರವಿದ್ದರೆ ಸಾಕು! ಆ ಒಂದುಮುಹೂರ್ತಕಾಲದಲ್ಲಿಯೇ ಮೋಕ್ಷಸಾಧನೆಯಲ್ಲಿ ಪ್ರಯತ್ನಿಸಿ, ಸಿದ್ಧಿಯನ್ನು ಪಡೆಯಬಹುದು. ಇದಕ್ಕೆ ನಿದರ್ಶನವಾಗಿ ಒಂದು ಪೂರ್ವಕಥೆಯನ್ನು ಹೇಳುವೆನು ಕೇಳು.

ಪೂರ್ವದಲ್ಲಿ ಖಟ್ವಾಂಗನೆಂಬ ರಾಜನೊಬ್ಬನಿದ್ದನು. ಆತನು ಸಪ್ತದ್ವೀಪಪರಿಮಿತವಾದ ಸಮಸ್ತಭೂಮಿಯನ್ನೂ ನಿರಂಕುಶವಾಗಿ ಕೈವಶಮಾಡಿಕೊಂಡು ಪಾಲಿಸುವಷ್ಟು ಬಲಾಢ್ಯನು. ಒಮ್ಮೆ ದೇವದಾನವರಿಗೆ ಯುದ್ಧವು ಸಂಭವಿಸಿದಾಗ, ದೇವತೆಗಳು ದಾನವರೊಡನೆ ಇದಿರಿಸಿ ನಿಲ್ಲಲಾರದೆ, ಈ ಖಟ್ವಾಂಗನ ಸಹಾಯವನ್ನಪೇಕ್ಷಿಸಿ ಬಂದರು. ಇವರ ಪ್ರಾರ್ಥನೆಯಮೇಲೆ ಆ ರಾಜನು ದೇವತೆಗಳಕಡೆಗೆ ಸಹಾಯಕನಾಗಿ ನಿಂತು, ಯುದ್ಧಮಾಡಿ ದಾನವರನ್ನು ಜಯಿಸಿ ಬಂದನು. ಅದಕ್ಕಾಗಿ ದೇವತೆಗಳು ಸಂತೋಷಿಸಿ, ಆತನಿಗಿಷ್ಟವಾದ ಯಾವ ವರವನ್ನು ಕೇಳಿದರೂ ತಾವು ಕೊಡುವುದಾಗಿ ವಾಗ್ದಾನ

ಮಾಡಿದರು. ಅದಕ್ಕಾಕರಾಜನು ಬಹಳಸಂತೋಷಗೊಂಡವನಾಗಿ ''ಎಲೈ ದೇವತೆಗಳಿರಾ! ಮುಂದೆ ನನಗೆ ಆಯುಃಕಾಲವೆಷ್ಟೆಂಬುದನ್ನು ತಿಳಿಸಬೇಕು. ಇಹೇ ನೀವು ನನಗೆ ಅನುಗ್ರಹಿಸಬೇಕಾದ ವರವು" ಎಂದು ಪ್ರಾರ್ಥಿಸಿದನು. ಅದಕ್ಕಾ ದೇವತೆಗಳು ತಮ್ಮ ಧ್ಯಾನದೃಷ್ಟಿಯಿಂದಾಲೋಚಿಸಿ, ''ಎಲ್ಲೆ ರಾಜನೆ! ನಿನ್ನ ಆಯುಃಪರಿಮಾಣವು ಇನ್ನು ಮುಹೂರ್ತಮಾತ್ರವೇ ಉಳಿದಿರುವುದು."ಎಂದರು. ಈಮಾತನ್ನು ಕೇಳಿದೊಡನೆ ಖಟ್ವಾಂಗನು ವಿಮಾನವನ್ನೆರಿ ವೇಗದಿಂದ ತನ್ನ ಅಂತಃಪುರಕ್ಕೆ ಬಂದು, ಆಗಲೇ ತನ್ನ ರಾಜ್ಯಕೋಶಾದಿಗಳೆಲ್ಲವನ್ನೂ ತೊರೆದು, ದೃಢವಾದ ವೈರಾಗ್ಯವನ್ನು ವಹಿಸಿ. ಶ್ರೀಹರಿಯ ಪಾದಾರವಿಂದವೊಂದರಲ್ಲಿಯೇ ನಟ್ಟ ಮನಸ್ಸುಳ್ಳವನಾಗಿ,ಆ ಪರಮಾತ್ಮನ ನಾಮಸ್ಮರಣವನ್ನು ಮಾಡುತ್ತ, ಎರಡುಗಳಿಗೆಗಳ ಕಾಲದೊಳಗಾಗಿ ಮೋಕ್ಷವನ್ನೂ ಹೊಂದಿದನು. ಎಲೈ ಪರೀಕ್ಷಿದ್ರಾಜನೆ! ಖಟ್ವಾಂಗನು ಇಷ್ಟುಸ್ವಲ್ಪ ಕಾಲದೊಳಗಾಗಿಯೇ ಶ್ರೀಹರಿಯ ಕೃಪೆಗೆಪಾತ್ರನಾಗಿ ಮೋಕ್ಷವನ್ನು ಹೊಂದಿರುವಾಗ, ಇನ್ನೂ ಏಳುದಿನಗಳವರೆಗೆ ಜೀವಿಸಿರತಕ್ಕ ನೀನು ಅಷ್ಟರಲ್ಲಿ ಶ್ರೀಹರಿಯನ್ನು ಭಜಿಸಿ ಮೋಕ್ಷವನ್ನು ಸಂಪಾದಿಸುವುದೊಂದು ಹೆಜ್ಜೆ ? ಆದುದರಿಂದ ನಿನ್ನ ಕಾರ್ಯಸಾಧನೆಗೆ ತಕ್ಕಷ್ಟು ಕಾಲವಿಲ್ಲವೆಂಬ ಚಿಂತೆಯನ್ನು ಬಿಡು! ಉಳಿದಿರತಕ್ಕ ಈ ಏಳುದಿನಗಳದಲ್ಲಿಯೇ ಪರಲೋಕಪ್ರಾಪ್ತಿಗೆ ತಕ್ಕ ಕಾರ್ಯಗಳಲ್ಲಿ ಪ್ರಯತ್ನಿಸಿ ಮೋಕ್ಷವನ್ನು ಸಾಧಿಸು! ಮನುಷ್ಯನು ಅಂತ್ಯಕಾಲದಲ್ಲಿ ನಡೆಸಬೇಕಾದ ಕಾರ್ಯವೇನೆಂಬುದನ್ನು ತಿಳಿಸುವೆನು ಕೇಳು! ಪುರುಷನು ತನಗೆ ಅವಸಾನಕಾಲವು ಸಮೀಪಿಸಿದುದನ್ನು ತಿಳಿದೊಡನೆ, ಮನಸ್ಸಿನಲ್ಲಿ ಮರಣಭಯವನ್ನು ಬಿಟ್ಟು, ಸರ್ವಸಂಗಪರಿತ್ಯಾಗಮಾಡಿ, ದೇಹದಲ್ಲಿಯೂ, ಮನೆ ಮೊದಲಾದ ಸ್ವತ್ತುಗಳಲ್ಲಿಯೂ ನಿಶ್ಶೇಷವಾಗಿ ಮಮತೆಯನ್ನು ತೊರೆಯಬೇಕು*

* ಈ ವೈರಾಗ್ಯವನ್ನವಲಂಬಿಸಿದೊಡನೆ ಜಿತೇಂದ್ರಿಯನಾಗಿ, ಸನ್ನ್ಯಾಸವನ್ನು ವಹಿಸಿ, ಹೆಂಡತಿಮಕ್ಕಳನ್ನು ಬಿಟ್ಟುಬಂದೆನೆಂಬ ಚಿಂತೆಯನ್ನು ಸ್ವಲ್ಪವಾದ

---

* ಇಲ್ಲಿಂದ ಮುಂದೆ ಕ್ರಮವಾಗಿ ಅಷ್ಟಾಂಗಯೋಗಗಳು ನಿರೂಪಿಸಲ್ಪಡುವವು. ಇಲ್ಲಿ ನಿಯಮಾಂಗವು ಸೂಚಿತವಾಗಿದೆ.

ರೂ ಮನಸ್ಸಿನಲ್ಲಿಡದೆ ದೃಢಧೈರ್ಯದಿಂದಿರಬೇಕು. ಆಮೇಲೆ ಪುಣ್ಯತೀರ್ಥಸ್ನಾನ ಮಾಡಿ, ಪರಿಶುದ್ಧವಾದ ಒಂದು ವಿವಿಕ್ತಸ್ಥಳದಲ್ಲಿ ಸೇರಿ,*ಯಥಾವಿಧಿಯಾಗಿ ಕಲ್ಪಿಸಿದ ದರ್ಭಾಸನದಲ್ಲಿ ಕುಳ್ಳಿರಬೇಕು. ಹೀಗೆ ದೃಢಚಿತ್ತನಾಗಿ ಕುಳಿತ ಮೇಲೆ ಸರ್ವಲೋಕಪಾವನನಾಗಿಯೂ, ಅಕಾರ, ಉಕಾರ, ಮಕಾರಗಳೆಂಬ ವರ್ಣತ್ರಯಾತ್ಮಕವಾಗಿಯೂ, ಬ್ರಹ್ಮಪ್ರತಿಪಾದಕವಾಗಿಯೂ ಇರುವ ಓಂಕಾರವೆಂಬ ಪ್ರಣವಾಕ್ಷರವನ್ನು ಎಡೆಬಿಡದೆ ಮನನಮಾಡಬೇಕು. ರೇಚಕ ಪೂರಕ ಕುಂಭಕಗಳೆಂಬ†ಪ್ರಾಣಾಯಾಮತ್ರಯಗಳಿಂದ ಉಚ್ಛ್ವಾಸನಿಶ್ವಾಸವಾಯುವನ್ನು ನಿಗ್ರಹಿಸಿಡಬೇಕು. ಬ್ರಹ್ಮಬೀಜಾಕ್ಷರರೂಪವಾದ ಓಂಕಾರವನ್ನು ಮರೆಯದೆ, ಅದರಲ್ಲಿ ಮನಸ್ಸನ್ನು ನಿರ್ಬಂಧಿಸಿಡಬೇಕು.ಎಲೈ ರಾಜನೆ! ಜೀವಾತ್ಮನನ್ನು ಒಬ್ಬರಥಿಕನನ್ನಾಗಿ ತಿಳಿ ! ಅವನಿಗೆ ಶರೀರವೇ ರಥವು. ಬುದ್ಧಿಯೇ ಸಾರಥಿ ! ಇಂದ್ರಿಯಗಳೇ ಆ ರಥವನ್ನೆಳೆಯತಕ್ಕ ಕುದುರೆಗಳಂತಿರುವುವು. ಮನಸ್ಸೆಂಬುದು ಆ ಕುದುರೆಗಳಿಗೆ ಕಟ್ಟಿದ ಹಗ್ಗದಂತಿರುವುದು. ಸ್ಪರ್ಶಂದನಾದಿವಿಷಯಗಳೇ ಅದರ ಸಂಚಾರಮಾರ್ಗಗಳೆನಿಸಿರುವುವು. ‡ಆದುದರಿಂದ ಬುದ್ಧಿಯೆಂಬ ಸಾರಥಿಯ ಕೈಯಲ್ಲಿ,ಮನಸ್ಸೆಂಬ ಹಗ್ಗದಿಂದ ಹಿಡಿಯಲ್ಪಟ್ಟಿರುವ ಇಂದ್ರಿಯಗಳೆಂಬ ಕುದುರೆಗಳು, ದೇಹವೆಂಬ ರಥವನ್ನು ವಿಷಯಗಳೆಂಬ ಬೀದಿಗಳಲ್ಲಿ, ಸಿಕ್ಕಿದಕಡೆಗೆ ಎಳೆದುಕೊಂಡು ಹೋಗದಹಾಗೆ ತಡೆದಿಡಬೇಕಾದುದೇ ರಥಿಕನಾಗಿರುವ ಜೀವನ ಕಾರ್ಯವು. ಪೂರ್ವ ಜನ್ಮದಲ್ಲಿ ನಡೆಸಿದ ಪುಣ್ಯಪಾಪಕರ್ಮಗಳ ಸಂಬಂಧದಿಂದ ಮನಸ್ಸೆಂಬುದು ನಾನಾಕಡೆಗಳಿಗೆ ಬಲಾತ್ಕರಿಸಿ ಎಳೆಯಲ್ಪಡುವುದು. § ಆ ಮನಸ್ಸನ್ನು ಯುಕ್ತಾಯುಕ್ತವಿವೇಚನೆಯಳ್ಳ ಬುದ್ಧಿಯ ಬಲದಿಂದ ಶುಭಾಸ್ಪದವಾದ ಪರಮಾತ್ಮರೂಪವಾದ ವಸ್ತುವಿನಲ್ಲಿ ನಿಶ್ಚಲವಾಗಿ ನಿಲ್ಲಿಸಿಡಬೇಕು. ಹೀಗೆ ಮನಸ್ಸನ್ನು ಬೇರೆ ವಿಷಯಾಂತರಗಳಿಗೆ ಹೋಗದಂತೆ ನಿರ್ಬಂಧಿಸಿಟ್ಟಮೇಲೆ

---

* ಇಲ್ಲಿ ಆಸನರೂಪವಾದ ಅಂಗವು ಹೇಳಲ್ಪಟ್ಟಿದೆ.

† ಇದರಿಂದ ಪ್ರಾಣಾಯಾಮರೂಪವಾದ ಅಂಗವು ಸೂಚಿತವಾಗುವುದು.

‡ ಇದರಿಂದ ಪ್ರತ್ಯಾಹಾರವು ಸೂಚಿತವಾಗಿದೆ.

§ ಇದರಿಂದ ಧಾರಣರೂಪವಾದ ಅಂಗವು ವ್ಯಕ್ತವಾಗುವುದು.

ಆ ಭಗವಂತನ ಮುಖಾರವಿಂದವೊಂದನ್ನೇ * ಏಕಾಗ್ರತೆಯಿಂದ ಧ್ಯಾನಿಸುತ್ತಿರಬೇಕು. † ಸ್ಥಿರಧ್ಯಾನಾಸಕ್ತವಾದ ಈ ಮನಸ್ಸಿನಲ್ಲಿ ಆ ಭಗವಂತನನ್ನು ಬಿಟ್ಟು ಬೇರೆ ಯಾವ ಪದಾರ್ಥವನ್ನೂ ಸ್ಮರಿಸಬಾರದು. ಮನಸ್ಸಿನಲ್ಲಿ ಧಾರಣೆಗೆ ಯೋಗ್ಯವಾದ ಶುಭಾಶ್ರಯವಾದ ಆ ವಸ್ತುವಿನ ಸ್ವರೂಪವೆಂತದೆಂದು ಕೇಳುವೆಯಾ? ಆಗಾಗ ರಜಸ್ತಮೋಗುಣಗಳಿಂದ ಮೂಢವಾಗುತ್ತಿರುವ ಮನಸ್ಸು, ಯಾವನ ಧ್ಯಾನದಿಂದ ನಿರ್ಮಲವಾಗಿ ಪ್ರಸನ್ನತೆಯನ್ನು ಹೊಂದುವುದೋ ಸರ್ವೋತ್ತಮವಾದ ಆ ವಿಷ್ಣುವಿನ ಸ್ವರೂಪವೇ ಶುಭಾಶ್ರಯವಸ್ತುವೆನಿಸುವುದು. ಧೀರನಾದವನು ಮನೋಕಾಲುಷ್ಯವನ್ನು ನೀಗಿಸತಕ್ಕ ಈ ಧಾರಣಾಯೋಗವನ್ನೇ ಮೊದಲು ಸಂಪಾದಿಸಬೇಕು. ಇದನ್ನು ಸಾಧಿಸಿ, ಶುಭಾಶ್ರಯವಾಗಿ ತನಗಾಧಾರವಾಗಿರುವ ಪರವಸ್ತುವನ್ನು ಧ್ಯಾನಿಸತಕ್ಕವನಿಗೆ ಭಕ್ತಿಯೋಗವು ತಾನಾಗಿಯೇ ಹುಟ್ಟುವುದು." ಎಂದನು. ಶುಕಮುನಿಯು ಹೇಳಿದ ಈ ವಾಕ್ಯವನ್ನು ಕೇಳಿ ತಿರುಗಿ ಪರೀಕ್ಷಿದ್ರಾಜನು, "ಎಲೈ ಮಹರ್ಷಿಯೆ? ಧಾರಣೆಯೆಂಬುದೆಂತದು? ಅದಕ್ಕೆ ಆಶ್ರಯವಾದ ಭಗವದ್ರೂಪವಾವುದು? ಆ ಧಾರಣೆಯನ್ನು ಹೇಗೆ ನಡೆಸಿದರೆ ಮನಸ್ಸಿನ ಮೂಲಿನ್ಯವನ್ನು ನೀಗಿಸುವುದು? ಈ ವಿಷಯವನ್ನು ನೀನು ಇನ್ನೂ ವಿವರವಾಗಿ ನನಗೆ ತಿಳಿಸಬೇಕು." ಎಂದನು. ಅದಕ್ಕಾ ಶುಕಮುನಿಯು "ಎಲೈ ರಾಜನೆ! ನೀನು ಕೇಳಿದ ಪ್ರಶ್ನೆಯು ಉಚಿತವಾಗಿಯೇ ಇರುವುದು. ಧಾರಣೆಗೆ ಆಧಾರವಾವುದೆಂಬುದನ್ನು ಮೊದಲು ಹೇಳುವೆನು ಕೇಳು. ಹಿಂದೆ ಹೇಳಿದಂತೆ ಮನುಷ್ಯನು ಮೊದಲು ಆಸನಶಕ್ತಿಯನ್ನು ಸಾಧಿಸಿ, ರೇಚಕಾದಿಗಳಿಂದ ಪ್ರಾಣವಾಯುವನ್ನು ತಡೆದು, ಪತ್ನೀಪುತ್ರಾದಿಗಳಲ್ಲಿ ಸಂಗವನ್ನು ತೊರೆದು, ಇಂದ್ರಿಯಗಳನ್ನೂ ನಿಗ್ರಹಿಸಿದಮೇಲೆ, ಬುದ್ಧಿಬಲದಿಂದ ಭಗವಂತನ ವಿರಾಡ್ರೂಪದಲ್ಲಿ ಮನಸ್ಸನ್ನು ನಿಲ್ಲಿಸಿಡಬೇಕು. ಇದೇ ಧಾರಣೆಯೆನಿಸುವುದು. ಭೂತಭವಿಷ್ಯದ್ವರ್ತಮಾನಕಾಲಗಳಲ್ಲಿರುವ ಪ್ರಪಂಚವೆಲ್ಲವೂ ಮಹತ್ತಿಗಿಂತಲೂ ಮಹತ್ತಾದ ಯಾವ ಭಗವಂತನ ವಿರಾಡ್ರೂಪದಲ್ಲಿ ಗೋಚರಿಸುತ್ತಿರುವುದೋ, ಅಂತಹ ಪ

---

* ಇಲ್ಲಿ ಧ್ಯಾನಾಂಗವು ಹೇಳಲ್ಪಟ್ಟಿದೆ.

† ಇಲ್ಲಿ ಸಮಾಧಿರೂಪವಾದ ಅಂಗವು ಹೇಳಲ್ಪಟ್ಟಿದೆ.

ರಸ್ವರೂಪವೇ ಭಕ್ತಿಯೋಗಾವಲಂಬಿಯಾದ ಪುರುಷನ ಮನಸ್ಸಿಗೆ ವಿಷಯ ಭೂತವು. ಆಸಿರುವಾ೯ಂಶದಿಂದ ಹುಟ್ಟಿದ ಈ ಪುರುಷಸ್ವರೂಪವೇ ಅಂಡ ಕೋಶವೆನಿಸುವುದು. ಈ ರೂಪವು, ಭೂಮಿ, ನೀರು, ತೇಜಸ್ಸು, ವಾಯು ಆ ಕಾಶ, ಅಹಂಕಾರ,ಮಹತ್ತತ್ವಗಳೆಂಬ ಏಳುಬಗೆಯ ಆವರಣಗಳಿಂದೊಪ್ಪುತ್ತಿ ರುವುದು. ಈ ಶರೀರದಿಂದ ಕೂಡಿದವನೇ ವಿರಾಟ್ಪುರುಷನೆನಿಸುವನು. ಆ ಪು ರುಷನೇ ಭಕ್ತಿಗೆ ಸಾಧನವಾದ ಧಾರಣಾಯೋಗಕ್ಕೂ ಆಧಾರನೆನಿಸಿರುವನು ಆ ಮಹಾತ್ಮನಿಗೆ ಪಾತಾಳಲೋಕವೇ ಅಂಗಾಲೆನಿಸುವುದು. ರಸಾತಲವು ಹಿ ಮ್ಮಡಿಯಾಗಿಯೂ ಪಾದಾಗ್ರವಾಗಿಯೂ ಇರುವುದು. ತಲಾತಲವೇ ಆತನ ಜಂಘೆಗಳು ! ಸುತಲವೇ ಆತನ ಜಾನುಗಳು ! ಆತಲವಿತಲಗಳೆರಡೂ ಆತನ ತೊಡೆಗಳು! ಭೂಲೋಕವೇ ಆತನ ಕಟಿಪ್ರದೇಶವು. ಆಕಾಶವೆಂಬುದು ಆ ಆದಿಪುರುಷನ ನಾಭಿಯು ಗ್ರಹನಕ್ಷತ್ರಾದಿಗಳಿಂದ ಕೂಡಿದ ನಕ್ಷತ್ರಲೋಕ ವನ್ನು ಆತನ ವಕ್ಷಸ್ಥಲವೆಂದು ಹೇಳುವರು. ಮಹರ್ಲೋಕವೇ ಆ ಪುರುಷನ ಕಂಠವು. ಜನಲೋಕವು ಆತನ ಮುಖವು. ತಪೋಲೋಕವು ಆತನ ಫಾಲ ಪ್ರದೇಶವು.ಸತ್ಯಲೋಕವೇ ಆತನ ಶಿರಸ್ಸು. ಇಂದ್ರಾದಿದೇವತೆಗಳೇ ಆತನ ಬಾಹುಗಳು.ದಿಕ್ಕುಗಳೇ ಆತನ ಕಿವಿಗಳು.ಶಬ್ದವೇ ಆತನ ಶ್ರವಣೇಂದ್ರಿಯವು ಅಶ್ವಿನೀದೇವತೆಗಳಿಬ್ಬರೂ ಆತನ ನಾಸಾಪುಟಗಳು. ಗಂಧವೇ ಆತನ ಘ್ರಾ ಣೇಂದ್ರಿಯವು. ಅಗ್ನಿಹೋತ್ರನು ಆತನ ಬಾಯಿಯು. ದ್ಯುಲೋಕವು ಆತನ ನಯನಗಳು. ಸೂರ್ಯನೇ ಆತನ ನೇತ್ರೇಂದ್ರಿಯವು. ಹಗಲಿರುಳುಗಳೇ ಆತನ ನಿಮೇಷೋನ್ಮೇಷಗಳು. ಬ್ರಹ್ಮಪದವಿಯೇ ಆತನ ಹುಬ್ಬಿನಾಟಗಳು. ಜಲವೂ, ತದಭಿಮಾನಿದೇವತೆಯಾದ ವರುಣನೂ ಆತನ ದವಡೆಗಳು. ರಸ ವೇ ಆತನ ಜಿಹ್ವೇಂದ್ರಿಯವು ಛಂದಸ್ಸುಗಳೇ ಆತನ ಶಿರಸ್ಸು. ಯಮನೇ ಆತನ ಕೋರೆಹಲ್ಲುಗಳು.ನಿಮ್ಮಂತಹ ಜೀವಿಗಳಲ್ಲಿರುವ ಪುತ್ರಕಳತ್ರಾದಿಪ್ರೇ ಮವೇ ಆತನ ಹಲ್ಲುಗಳು.ಲೋಕದ ಜನರನ್ನು ಮರುಳುಗೊಳಿಸತಕ್ಕ ಆಶ್ಚರ್ಯ ಮಾಯೆಯೆನ್ನು ಆಮಹಾಪುರುಷನ ಮಂದಹಾಸವೆನ್ನುವರು.ಆಮಹಾತ್ಮನ ಕ ಡೆಗಣ್ಣಿನ ನೋಟವೇ ಪ್ರಪಂಚಸೃಷ್ಟಿಯು. ಲಜ್ಜೆ,ಲೋಭ,ಇವೆರಡೂ ಆತನ ಮೇಲಿನ ಮತ್ತು ಕೆಳಗಣ ತುಟಿಗಳು. ಧರ್ಮವೆಂಬುದೇ ಆ ಪುರುಷನಸ್ತನಗಳು

ಅಧರ್ಮಮಾರ್ಗವೇ ಆತನ ಬೆನ್ನು. ಪ್ರಜಾಪತಿಬ್ರಹ್ಮನೇ ಆತನ ಗುಹ್ಯವು, ಮಿತ್ರಾವರುಣರಿಬ್ಬರೂ ಆತನ ಅಂಡಬೀಜಗಳು. ಸಮುದ್ರವೇ ಆತನ ಜಠರವು. ಪರ್ವತಗಳೇ ಆತನ ಎಲುಬುಗಳು. ನದಿಗಳೆಲ್ಲವೂ ಆತನ ನಾಡಿಗಳು. ವೃಕ್ಷಗಳೆಲ್ಲವೂ ವಿಶ್ವಾತ್ಮನಾದ ಆತನ ಮೈಕೂದಲುಗಳು. ವಾಯುಸಮೂಹವೇ ಆತನ ಉಸಿರಾಟವು. ಕಾಲವೇ ಆತನ ನಡೆ! ಪ್ರಾಣಿಗಳಿಗೆ ಸತ್ವಾದಿತ್ರಿಗುಣ ಸಂಬಂಧದಿಂದುಂಟಾಗುವಸಂಸಾರವೆಂಬುದು, ಆತನುಕಾಲಕಾಲಕ್ಕೆನಡೆಸತಕ್ಕ ಲೀಲಾಕಾರ್ಯಗಳು. ಮೇಘಸಮೂಹಗಳೇ ಆತನ ತಲೆಕೂದಲುಗಳು. ಸಂಧ್ಯಾಕಾಲಗಳೆರಡೂ ಆತನ ವಸ್ತ್ರಗಳು. ಅವ್ಯಕ್ತವೆನಿಸಿದ ಪ್ರಕೃತಿಯೇ ಆತನ ಹೃದಯವೆನಿಸುವುದು. ಸರ್ವೌಷಧಿಗಳ ವಿಕಾರಕ್ಕಾಶ್ರಯನಾದ ಚಂದ್ರನೇ ಆತನಮನಸ್ಸು. ಮಹತ್ತತ್ವವೆಂಬುದೇ ಆತನ ವಿಜ್ಞಾನವ್ಯವಸಾಯಶಕ್ತಿಯು. ರುದ್ರನೇ ಆತನ ಅಹಂಕಾರವು. ಕುದುರೆಗಳು, ಹೇಸರಗತ್ತೆಗಳು, ಒಂಟೆಗಳು, ಆನೆಗಳು, ಇವೆಲ್ಲವೂ ಆತನ ನಖಗಳು. ಇತರಪಶುಮೃಗಾದಿಗಳೆಲ್ಲವೂ ಆ ಮಹಾತ್ಮನ ಶ್ರೋಣಿಭಾಗಗಳು. ಪಕ್ಷಿಜಾತಿಯೆಲ್ಲವೂ ಆತನ ಶಿಲ್ಪನೈಪುಣ್ಯವೆನಿಸುವುದು. ಮಂತ್ರಗಳೇ ಆತನ ಬುದ್ಧಿಯು. ಮನುಷ್ಯಜಾತಿಯೇ ಆತನಿಗೆ ನಿವಾಸಸ್ಥಾನವು ಗಂಧರ್ವಾದಿದೇವತೆಗಳು ಆತನ ಕಂಠಸ್ವರವು. ಪ್ರಹ್ಲಾದಾದಿಗಳೇ ಆತನ ಸ್ಮೃತಿಯು. ಇದಲ್ಲದೆ ಆ ಮಹಾತ್ಮನಿಗೆ ಬ್ರಾಹ್ಮಣರು ಮುಖವೆಂದೂ, ಕ್ಷತ್ರಿಯರು ಭುಜಗಳೆಂದೂ, ವೈಶ್ಯರು ತೊಡೆಗಳೆಂದೂ, ಶೂದ್ರರು ಪಾದಗಳೆಂದೂ, ವಸುರುದ್ರಾದಿದೇವತೆಗಳ ಹೆಸರುಗಳೇ ಆತನ ಪರ್ಯಾಯನಾಮಗಳೆಂದೂ, ಹವಿರ್ಭಾಗಗಳೆಲ್ಲವೂ ಪೂಜಾದ್ರವ್ಯಗಳೆಂದೂ, ಯಜ್ಞಪ್ರಯೋಗಗಳು ತದಾರಾಧನಕ್ರಿಯೆಗಳೆಂದೂ ಮಹರ್ಷಿಗಳು ಹೇಳುವರು. ಎಲೈ ರಾಜನೆ! ಇದೇ ಆ ಭಗವಂತನ ಅವಯವಸಂಸ್ಥಾನಗಳು. ಆತನ ಈ ರೂಪದಲ್ಲಿ ಬುದ್ಧಿಯನ್ನು ನೆಲೆಗೊಳಿಸಿದವನಿಗೆ, ಸರ್ವವೂ ಈಶ್ವರಾಂತರ್ಭೂತವೆಂದು ತೋರುವುದೇಹೊರತು, ಆ ಈಶ್ವರನಿಗಿಂತಲೂ ಭಿನ್ನವಾದ ಬೇರೆ ಯಾವ ವಸ್ತುವನ್ನೂ ಕಾಣುವುದಕ್ಕೇ ಅವಕಾಶವಿಲ್ಲ.* ಸ್ವಪ್ನಕಾಲಗಳಲ್ಲಿ ಒಂದೇ ಜೀವನು ತನಗೆ ಅನುಭವಯೋಗ್ಯಗಳಾಗಿ, ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ

* ಇಲ್ಲಿ ಅಧಿಷಾ ನಮಾತ್ರದಲ್ಲಿಯೇ ಜೀವಾತ್ಮದೃಷ್ಟಾಂತವೆಂದುತಿಳಿಯಬೇಕು.

ಮತ್ತು, ಆ ಸ್ವಪ್ನಕಾಲದಲ್ಲಿ ಮಾತ್ರವೇ ಇದ್ದು ನಾಶಹೊಂದತಕ್ಕವುಗಳಾದ ಪದಾರ್ಥಗಳೊಡನೆ ; ಸೇರಿ, ; ರಾಜ್ಯಾಭೀಕ, ಶಿರಶ್ಛೇದ ಮೊದಲಾದ ಸುಖದುಃಖಗಳನ್ನನುಭವಿಸುವಂತೆ, ಭಗವಂತನೂಕೂಡ ಪ್ರತ್ಯಕ್ಷಾನುಮಾನಗಳೇ ಮೊದಲಾದ ಸರ್ವವಿಧಜ್ಞಾನಗಳಿಂದಲೂ ಅನುಭವಿಸಲ್ಪಡುವ ಎಲ್ಲಾ ವಸ್ತುಗಳಲ್ಲಿಯೂ ನೆಲಸಿರುವನು. ಹೀಗೆ ಸರ್ವಶರೀರನಾಗಿದ್ದರೂ, ಆ ಶರೀರಗತವಾದ ದೋಷಗಳನ್ನು ಹೊಂದದೆ,*ನಿರ್ವಿಕಾರನಾಗಿ,† ಆನಂದಾಶ್ರಯನಾಗಿಯೂ ಆನಂದಸ್ವರೂಪನಾಗಿಯೂಇರುವನು, ಇಂತಹ ಭಗವಂತನನ್ನು ಮಾತ್ರ ಉಪಾಸನೆಮಾಡಬೇಕಹೊರತು, ಈ ಬ್ರಹ್ಮಕ್ಕಿಂತಲೂ ಬೇರೆಯಾದ ಸ್ವತಂತ್ರವಸ್ತುವೊಂದನ್ನು ಕಲ್ಪಿಸಿ, ಅದರಲ್ಲಿ ಆಸಕ್ತಿಯಿಡುವವನಿಗೆ, ಸಂಸಾರರೂಪವಾದ ಅಧೋಗತಿಯು ಎಂದಿದ್ದರೂ ತಪ್ಪದು. ಇಲ್ಲಿಗೆ ಮೊದಲನೆಯ ಅಧ್ಯಾಯವು.

ಭಕ್ತಿಯೋಗದ ಮಹಿಮೆ. ಧೂಮಾರ್ಚಿರಾದಿಗತಿಗಳ ವಿವರಣವು.

ಎಲೈ ಪರೀಕ್ಷಿದ್ರಾಜನೇ ಕೇಳು ! ‡ಸೃಷ್ಟಿಗೆ ಮೊದಲು ಬ್ರಹ್ಮದೇವನೂಕೂಡ ಹಿಂದೆ ಹೇಳಿದ ಧಾರಣಾಯೋಗದಿಂದಲೇ ಭಗವಂತನನ್ನು ಸಂ

---

* ಇಲ್ಲಿ ಸ್ವರೂಪದಿಂದಲೂ, ಗುಣಗಳಿಂದಲೂ ನಿರ್ವಿಕಾರನೆಂಬುದರಿಂದ ಅಚಿತ್ತಿಗೆ ವ್ಯಾವೃತ್ತಿಯು ಸೂಚಿತವಾಗುವುದು.

† ಇಲ್ಲಿ ಭಗವಂತನು ಆನಂದಾಶ್ರಯನೆಂದೂ, ಆನಂದಸ್ವರೂಪನೆಂದೂ ಹೇಳಿರುವುದರಿಂದ ಜೀವಾತ್ಮನಿಗೆ ವ್ಯಾವೃತ್ತಿಯು ಸೂಚಿತವಾಗುವುದು.

‡ ಇಲ್ಲಿ "ನಷ್ಟಾಂ ಸ್ಮೃತಿಂ ಪ್ರತ್ಯವರುಧ್ಯ" ಎಂದು ಮೂಲವು. ಇದರಿಂದ ಪೂರ್ವಕಲ್ಪದಲ್ಲಿದ್ದ ಚತುರ್ಮುಖನೇ ಪ್ರತಿಮಹಾಕಲ್ಪದಲ್ಲಿಯೂ ಇದ್ದು, ಹಿಂದೆ ನಷ್ಟವಾಗಿದ್ದ ಸೃಷ್ಟಿವಿಷಯಕಜ್ಞಾನವನ್ನು ಪುನಃಪುನಃ ಪಡೆದು ಸೃಷ್ಟಿಕಾರ್ಯವನ್ನು ನಡೆಸುವ ಹಾಗೆ ಅರ್ಥವಾಗುವುದು. ಹಾಗಿದ್ದರೂ ಪ್ರತಿಕಲ್ಪದಲ್ಲಿಯೂ ಬೇರೆಬೇರೆ ಚತುರ್ಮುಖನಿರಬೇಕೆಂದು ಭೇದವನ್ನೊಪ್ಪುವುದೇ ನ್ಯಾಯ್ಯವೆಂದು ತೋರುವುದು. "ಬ್ರಹ್ಮಣಾ ಸಹತೇ ಸರ್ವೇ ಸಂಪ್ರಾಪ್ತೇ ಪ್ರತಿಸಂಚರೇ" "ತೇ ಬ್ರಹ್ಮಲೋಕೇತು ಪರಾಂತಕಾಲೇ ಪರಾಮೃತಾತ್ಪರಿಮುಚ್ಯಂತಿ ಸರ್ವೇ" ಇತ್ಯಾದಿಪ್ರಮಾಣಗಳಿಂದ ಆಯಾಕಲ್ಪದಲ್ಲಿದ್ದ ಚತು

ತೋಷಪಡಿಸಿ, ಆತನ ಅನುಗ್ರಹದಿಂದ, ಹಿಂದಿನ ಪ್ರಳಯದಲ್ಲಿ ತನಗೆ ನಷ್ಟವಾಗಿದ್ದ ಸೃಷ್ಟಿಕಾರ್ಯವಿಷಯವಾದ ಜ್ಞಾನವನ್ನು ತಿರುಗಿ' ಪಡೆದನು. ಇದರಿಂದ ಆಯಾಪದಾರ್ಥಗಳ ವಿಷಯವಾದ ಜ್ಞಾನವನ್ನೂ ನೆನಪಿಗೆ

ರ್ಮಖರಿಗೆ ಆಯಾಕಲ್ಪಾಂತದಲ್ಲಿಯೇ ಮುಕ್ತಿಯೆಂದು ಸಿದ್ಧವಾಗುವುದು ಇದಲ್ಲದೆ ''ಋಷಿಮಾದ್ಯಂನಬಧ್ನಾತಿ ಪಾಪೀಯಾಂಸ್ತ್ವಂರಜೋಗುಣಂ।ನಾತ್ಮಾವಸೀದತ್ಯಸ್ಮಿಂ ಸ್ತೇ ವರ್ಷೀಯಾನ್ ಮದನುಗ್ರಹಃ '' ಎಂದು ಭಗವಂತನೇ ಹೇಳಿರುವುದರಿಂದ, ಬ್ರಹ್ಮನಿಗೆ ತಿರುಗಿ ಸಂಸಾರಪ್ರಾಪ್ತಿಯಿಲ್ಲವೆಂದೂ ಸ್ಪಷ್ಟವಾಗುವುದು ಇದರಿಂದ ಪ್ರತಿಕಲ್ಪಕ್ಕೂ ಬೇರೆಬೇರೆ ಚತುರ್ಮುಖಬ್ರಹ್ಮರುಂಟೆಂದೇ ಗ್ರಹಿಸಬೇಕು. ಈ ಕಾರಣಕ್ಕಾಗಿ ಮೇಲಿನ ಸ್ಮೃತಿಶಬ್ದಕ್ಕೆ ಸೃಷ್ಟಿಕಾರ್ಯದ ಜ್ಞಾನವೆಂದೇ ಅರ್ಥವನ್ನು ಗ್ರಹಿಸಬೇಕೇಪೊರತು, ಸ್ಮರಣವೆಂದು ಹೇಳುವುದಕ್ಕವಕಾಶವಿಲ್ಲ. ಆದರೆ ಚತುರ್ಮುಖಬ್ರಹ್ಮನು ಧಾರಣಾಯೋಗದಿಂದ ವಿರಾಟ್ಪುರುಷನನ್ನು ಭಜಿಸುವುದರಿಂದ ಸೃಷ್ಟಿಸಾಮರ್ಥ್ಯವನ್ನು ಪಡೆಯುವನೆಲ್ಲವೆ? ಆ ಸಾಮರ್ಥ್ಯವುಂಟಾದಮೇಲೆಯೇ ಪಾತಾಳಾದಿಲೋಕಗಳನ್ನು ಸೃಷ್ಟಿಸಬೇಕಷ್ಟೆ? ಈ ಪಾತಾಳಾದಿಲೋಕಗಳಾದ ರೋ ವಿರಾಟ್ಪುರುಷನಿಗೆ ಅನಯವಗಳಾಗಿ ನಿರೂಪಿಸಲ್ಪಟ್ಟಿವೆ. ಈ ಅನಯವಗಳು ವಿರಾಟ್ಪುರುಷನಿಗೆ ಮೊದಲೇ ಸಿದ್ಧವಾಗಿದ್ದಹೊರತು, ಆತನ ವಿಷಯಕವಾದ ಧಾರಣಾಯೋಗವು ಸಂಭವಿಸುವುದಕ್ಕೆ ಅವಕಾಶವಿಲ್ಲ. ಈ ಅವಯವಗಳು ಮೊದಲೇ ಸಿದ್ಧವಾಗಿದ್ದಪಕ್ಷದಲ್ಲಿ, ಬ್ರಹ್ಮನು, ಅದನ್ನು ಸೃಷ್ಟಿಸಬೇಕಾದ ಅವಶ್ಯಕತೆಯಿಲ್ಲ. ಹೀಗೆ ಅನ್ಯೋನ್ಯಾಶ್ರಯದೋಷವುಂಟಾಗುವುದಲ್ಲವೆ?ಇದನ್ನು ನಿವಾರಿಸುವುದು ಹೇಗೆ?"ಎಂದರೆ, ಭಗವಂತನ ನಾಭಿಕಮಲದಿಂದ ಚತುರ್ಮುಖನು ಉದಯಿಸಿ, ತಪಸ್ಸನ್ನು ಮಾಡಿ, ಆ ಭಗವಂತನನ್ನು ಸಾಕ್ಷಾತ್ಕರಿಸಿಕೊಂಡಮೇಲೆ, ಭಗವಂತನು ಆತನನ್ನು ಕುರಿತು,''ಭೂಯಸ್ತ್ವಂ ತಪ ಆತಿಷ್ಠ ವಿದ್ಯಾಂಚೈವ ಮದಾಶ್ರಯಾಂ।ತಾಭ್ಯಾಮಂತರ್ಹೃದಿ ಬ್ರಹ್ಮನ್ ಲೋಕಾನ್ ದ್ರಕ್ಷ್ಯಸಿಪಾವೃತಾನ್ । ತತ ಆತ್ಮನಿ ಲೋಕೇಚ. ಭಕ್ತೆಯುಕ್ತಸ್ತಮಾಹಿತಃ। ದ್ರಷ್ಟಾಸಿ ಮಾಂ ತತಂ ಬ್ರಹ್ಮನ್ ಮಯಿಲೋಕಾಂಸ್ತ್ವಮಾತ್ಮನಃ" ಎಂದುಮುಂದೆಹೇಳುವರೀತಿಯಿಂದ, ಸೃಷ್ಟಿಸಲ್ಪಡಬೇಕಾದ ಪದಾರ್ಥಗಳೇ ಬ್ರಹ್ಮನಿಗೆ ಮೊದಲು ದೃಷ್ಟಿಗೋಚರವಾಗುವುದರಿಂದ, ಅವೆಲ್ಲವನ್ನೂ ಭಗವದವಯವಗಳನ್ನಾಗಿ ಕಲ್ಪಿಸಿಕೊಂಡು, ಧಾರಣಮಾಡುವುದರಿಂದ ಬ್ರಹ್ಮನಿಗೆ ಸೃಷ್ಟಿವಿಷಯಕಜ್ಞಾನವೂ, ಸೃಷ್ಟಿಸಾಮರ್ಥ್ಯವೂ ಉಂಟಾಗುವುದೆಂದು ಗ್ರಹಿಸಬೇಕು.

ತಂದುಕೊಂಡು, ಪ್ರಳಯಕ್ಕೆ ಮೊದಲಿದ್ದ! ಸೃಷ್ಟಿಯನ್ನನುಸರಿಸಿಯೇ ನಿಶ್ಚಯಾತ್ಮಕವಾದ ಜ್ಞಾನದಿಂದ ಸಮಸ್ತಪ್ರಪಂಚವನ್ನೂ ಸೃಷ್ಟಿಸಿದನು,ಎಲೈ ರಾಜನೆ! ಮತ್ತೊಂದು ವಿಷಯವನ್ನು ಹೇಳುವೆನು ಕೇಳು. ವಿಶೇಷವಾಗಿ ಕರ್ಮಗಳನ್ನು ಕೊಂಡಾಡಿ, ಅವುಗಳ ವಿಷಯದಲ್ಲಿ ಬುದ್ಧಿಯನ್ನೆಳೆಯುವುದೇ ವೇದವಾಕ್ಯಗಳ ಪದ್ಧತಿ! ಇದರಿಂದ ಮೂಢಜನರ ಮನಸ್ಸು, ಸ್ವರ್ಗಾದಿಶಬ್ದಾಡಂಬರಗಳಿಂದ ಮೋಕ್ಷರೂಪವಾದ ಪರಮಪುರುಷಾರ್ಥವನ್ನು ಜನ್ಮಾಗಿ ತೋರಿಸುವ ಆ ವೇದಗಳಲ್ಲಿ ಹೇಳಲ್ಪಟ್ಟ ಕರ್ಮಗಳಲ್ಲಿಯೇ ವಿಶೇಷವಾಗಿ ಪ್ರವರ್ತಿಸುತ್ತಿರುವುದು. ಈ ಕರ್ಮಗಳವಿಷಯವಾಗಿಯೇ ತೊಳಲುತ್ತಿರುವ ಮನುಷ್ಯನ ಮನಸ್ಸು, ಅವುಗಳಿಂದುಂಟಾಗಬಹುದಾದ ಸ್ವರ್ಗಾದಿಸುಖಗಳಲ್ಲಿಯೇ ಆಸೆಯಿಟ್ಟು, ಅದರಿಂದಲೇ ತೃಪ್ತಿಹೊಂದುತ್ತಿರುವುದು ಇದರಿಂದ ಮನುಷ್ಯನು, ಅನಾದಿಕರ್ಮವಾಸನೆಯಿಂದ ಸ್ವಕೃತಿಮಯವಾದ ಈ ಪ್ರಪಂಚದಲ್ಲಿಯೇ ವರ್ತಿಸುತ್ತ,ಸ್ವರ್ಗಾದಿಸುಖಗಳಿಗಾಗಿ ಪ್ರಯತ್ನಿಸುತ್ತಿರುವನೇಹೊರತು,ಮೋಕ್ಷಕ್ಕಾಗಲಿ, ಆ ಮೋಕ್ಷಸಾಧನೆಗೆ ಬೇಕಾದ ಉಪಾಯಗಳಿಗಾಗಲಿ ಮನಸ್ಸನ್ನು ಕೊಡಲಾರನು. ಆದರೆ "ಲೋಕದಲ್ಲಿ ಮನುಷ್ಯನ ಆತ್ಮಾಜ್ಞಾನಕ್ಕಾಗಿಯೇ ಪ್ರವರ್ತಿಸಿರುವ ವೇದವುಸ್ವರ್ಗಾದಿಸಾಧನಗಳಾದ ಕರ್ಮಗಳನ್ನು ಬೋಧಿಸಿ ಹೀಗೆ ಜನರನ್ನು ವಂಚಿಸಬಹುದೆ?" ಎಂದು ನೀನು ಶಂಕಿಸಬಹುದು. ಎಲೈ ರಾಜೇಂದ್ರನೆ ! ಹಾಗೆಣಿಸಬಾರದು. ತತ್ತ್ವವನ್ನು ವಿಚಾರಿಸಿದರೆ ವೇದಗಳು ಎಂದಿಗೂ ಹಾಗೆ ವಂಚಿಸತಕ್ಕವುಗಳಲ್ಲ. ವೇದವೆಂಬುದು ಸತ್ತ್ವರಜಸ್ತಮೋಗುಣಪ್ರಚುರರಾದ ಮೂರುಬಗೆಯವರಿಗೂ ನಿಷ್ಪಕ್ಷಪಾತವಾಗಿ ಹಿತವನ್ನು ತಿಳಿಸುತ್ತಿರುವೇಹೊರತು, ರಜೋಗುಣ ತಮೋಗುಣ ಪ್ರಚುರರಾದವರಿಗೆ ಬೇಕಾದ ಸ್ವರ್ಗಾದಿಗಳನ್ನು ಮಾತ್ರವೇ ಸಾಧಿಸಬೇಕೆಂದು ನಿರ್ಬಂಧಿಸುವುದಿಲ್ಲ. ಹೀಗೆ ರಜಸ್ತಮೋಗುಣಪ್ರಧಾನರಿಗೆ ಅವರವರ ಗುಣಕ್ಕನುಸಾರವಾಗಿ ಸ್ವರ್ಗಾದಿಫಲಗಳನ್ನೂ, ಅದಕ್ಕೆ ಸಾಧನಗಳನ್ನೂ ಬೋಧಿಸಿದ್ದರೆ, ಅವರು ಸಾತ್ವಿಕಫಲರೂಪವಾದ ಮೋಕ್ಷಕ್ಕೂ ಪ್ರವರ್ತಿಸದೆ, ತಮ್ಮ ಇಷ್ಟಾನುಸಾರವಾದ ಸ್ವರ್ಗಾದಿಫಲಗಳನ್ನು ಸಾಧಿಸುವುದಕ್ಕೂ ದಾರಿತಿಳಿಯದೆ,ಕೇವಲಕಾಮಪ್ರವಣರಾಗಿ,ಇದ್ದುದರಲ್ಲಿಯೂ ಕೆಟ್ಟುಹೋಗುವರು.

ಆದುದರಿಂದಲೇ ವೇದಗಳು ಈ ಮೂವರಿಗೂ ಬೇಕಾದ ಫಲೋಪಾಯಗಳನ್ನು ತಿಳಿಸುತ್ತಿರುವುವು. ಆದರೇನು! ಬುದ್ಧಿಶಾಲಿಯಾದವನು ಮೋಕ್ಷಾಪೇಕ್ಷೆಯುಳ್ಳ ಕೇವಲಸಾತ್ವಿಕನಿಗೆ ಈ ಕರ್ಮಗಳೆಲ್ಲವೂ ಪರಿತ್ಯಾಜ್ಯಗಳೆಂಬುದನ್ನೂ, ಒಂದುವೇಳೆ ಆ ಕರ್ಮಗಳನ್ನು ನಡೆಸಿದರೂ ಅವುಗಳಿಗೆ ಮೋಕ್ಷವೊಂದೇ ಫಲವೆಂಬ ಭಾವದಿಂದ ಅನುಷ್ಠಿಸಬೇಕೆಂಬುದನ್ನೂ ತನ್ನ ವಿವೇಕಜ್ಞಾನದಿಂದ ತಾನೇ ನಿಶ್ಚಯಿಸಿಕೊಳ್ಳಬೇಕು. ಸ್ವರ್ಗಾದಿಗಳೆಲ್ಲವೂ ಅಶಾಶ್ವತಗಳಾದ ಅಲ್ಪಸುಖಗಳೆಂಬುದನ್ನೂ ತಿಳಿದು, ಎಚ್ಚರತಪ್ಪದೆ ಆ ಮೋಕ್ಷಸಾಧನೆಗಾಗಿಯೇ ಪ್ರಯತ್ನಿಸಬೇಕು. ವೇದಗಳಲ್ಲಿ ನಾನಾವಿಧಫಲಗಳೂ ಅದಕ್ಕೆ ಸಾಧನಗಳಾಗಿ ಅನೇಕಕರ್ಮಗಳೂ ಹೇಳಲ್ಪಟ್ಟಿದ್ದರೂ, ತನ್ನ ದೇಹಧಾರಣೆಗೆ ಬೇಕಾಗುವ ಭೋಗ್ಯವಸ್ತುಗಳನ್ನುಮಾತ್ರವೇ ಪರಿಗ್ರಹಿಸಿ, ಉಳಿದುವುಗಳನ್ನು ನಿಸ್ಸಾರಗಳೆಂದು ತ್ಯಜಿಸಬೇಕು. ''ಆದರೆ ದೇಹಧಾರಣಕ್ಕಾಗಿಯಾದರೂ ಕ್ಷುದ್ರಫಲಗಳಲ್ಲಿ ಪ್ರಯತ್ನಿಸಬೇಕಾಗುವುದಲ್ಲವೆ?'' ಎಂದರೆ, ಈ ದೇಹಧಾರಣಕ್ಕೆ ಬೇಕಾದ ಕೋರಿಕೆಗಳೂಕೂಡ, ಪೂರ್ವಕರ್ಮಾನುರೂಪವಾಗಿಯೋ, ಅಥವಾ ಬೇರೆ ಯಾವವಿಧದಿಂದಲೋ ಸಿದ್ಧಿಸುವಪಕ್ಷದಲ್ಲಿ ಅದನ್ನು ಮತ್ತೊಂದುವಿಧದಿಂದ ಸಾಧಿಸುವುದಕ್ಕಾಗಿ ಪ್ರಯತ್ನಿಸುವುದೂ ವೃಥಾಶ್ರಮವೆಂಬುದನ್ನು ತಿಳಿದು, ಆ ಪ್ರಯತ್ನವನ್ನು ಬಿಟ್ಟುಬಿಡುವುದೇ ಮೇಲು. ನಾವು ಎಷ್ಟೆಷ್ಟೇ ಶ್ರಮಪಟ್ಟರೂ ನಮಗೆ ಲಭ್ಯವಾದುದೆಷ್ಟೋ ಅಷ್ಟೇ ಅಷ್ಟೇಸಿಕ್ಕುವುದು. ನಮಗೆ ಕೇವಶ್ರಮವೊಂದೇ ಫಲವಾಗುವುದು ಎಲೈ ರಾಜನೆ! ಈ ದೇಹಧಾರಣೆಗೆ ಬೇಕಾದ ಪರಿಕರಗಳು ಪ್ರಯತ್ನವಿಲ್ಲದೆ ಹೇಗೆ ಲಭಿಸುವುದೆಂದು ನೀನು ಕೇಳಬಹುದು. ಆ ವಿಷಯವನ್ನೂ ತಿಳಿಸುವೆನು ಕೇಳು! ಮಲಗುವುದಕ್ಕೆ ವಿಶಾಲವಾದ ಈ ಭೂಮಿಯು ಸರ್ವಸುಲಭವಾಗಿರುವಾಗ ಸುಪ್ಪತಿಗೆ, ಮಂಚ,ಮೊದಲಾದ ಸಾಧನಗಳನ್ನು ಹುಡುಕುವುದೇಕೆ? ತನ್ನ ತಲೆದಿಸೆಗೆ ತನ್ನೊಡನೆ ಸಹಜವಾಗಿ ಹುಟ್ಟಿರುವ ತೋಳುಗಳಿರುವಾಗ, ದಿಂಬುಗಳನ್ನು ಹುಡುಕುವುದಕ್ಕಾಗಿ ಪ್ರಯತ್ನಿಸುವುದೇಕೆ?ಆಹಾರವನ್ನಿಟ್ಟುಕೊಂಡು ತಿನ್ನುವುದಕ್ಕೆ ತಮ್ಮತಮ್ಮ ಕೈಬೊಗಸೆಗಳಿರುವಾಗ, ಬೇರೆ ಬೇರೆ ಬಗೆಯ ಭೋಜನಪಾತ್ರಗಳನ್ನು ಸಂಗ್ರಹಿಸಿಡುವ ಪ್ರಯತ್ನವೇಕೆ?

*ದಿಕ್ಕುಗಳೇ ನಮಗೆ ಮೇಲುಬಟ್ಟೆಯಂತಿರುವಾಗ, ಬೆಲೆಯುಳ್ಳ ಪಟ್ಟೆಮಡಿಗಳನ್ನೇ ಸಂಗ್ರಹಿಸಬೇಕೆಂಬ ಚಿಂತೆಯೇಕೆ? ದಾರಿಯಲ್ಲಿ ಬಿದ್ದ ಒಂದೆರಡು ಹರುಕುಬಟ್ಟೆಗಳನ್ನು ಕೌಪೀನವಾಗಿ ಕಟ್ಟಿಕೊಂಡು ಕಾಲವನ್ನು ಕಳೆಯಬಾರದೇಕೆ? ಎಲೈ ಪರೀಕ್ಷಿದ್ರಾಜನೆ! ನಮ್ಮ ಉದರಭರಣಕ್ಕಾಗಿಯೂ ನಾವು ಶ್ರಮಪಡಬೇಕಾದುದಿಲ್ಲ. ವೃಕ್ಷಗಳೆಲ್ಲವೂ ಇತರರ ಪೋಷಣೆಗಾಗಿಯೇ ಫಲವನ್ನು ಬಿಡುವುವಲ್ಲವೆ? ಆ ಫಲವನ್ನೇ ತಿಂದು ನಾವೇಕೆ ಜೀವಿಸಬಾರದು. ಲೋಕದಲ್ಲೆರುವ ನದಿಗಳೆಲ್ಲವೂ ಒಣಗಿ ಹೋಗಿವೆಯೆ? ಇಲ್ಲವಷ್ಟೆ? ಆ ನದೀಜಲವನ್ನೇ ಕುಡಿದು ನಾವೇಕೆ ತೃಪ್ತರಾಗಬಾರದು? ನಾವು ವಾಸಮಾಡುವುದಕ್ಕಾಗಿ ಪರ್ವತಗುಹೆಗಳ ಬಾಗಿಲನ್ನು ತಡೆದು ನಿಲ್ಲುವವರೊಬ್ಬರೂ ಇಲ್ಲವಷ್ಟೆ? ಅಂತಹ ಪರ್ವತಗುಹೆಗಳಲ್ಲಿಯೇ ನಾವೇಕೆ ವಾಸಮಾಡಬಾರದು? ರಾಜೇಂದ್ರಾ? ಒಂದುವೇಳೆ ಇವೆಲ್ಲವೂ ಕಾಲವಶದಿಂದ ದುರ್ಲಭವಾದರೂ, ಶರಣಾಗತರಕ್ಷಣೆಗಾಗಿ ದೀಕ್ಷೆಯನ್ನು ವಹಿಸಿರುವ ಆ ಭಗವಂತನೊಬ್ಬನಿಲ್ಲವೆ? ಹೀಗಿರುವಾಗ ಧನಮದದಿಂದಲೂ, ಅಧಿಕಾರಮದದಿಂದಲೂ ಕೊಬ್ಬಿ, ಹಿಂದು ಮುಂದುತಿಳಿಯದೆ ಉನ್ಮಾರ್ಗದಲ್ಲಿ ವರ್ತಿಸುತ್ತಿರುವ ತುಚ್ಛಜನರನ್ನು ಸೇವಿಸಿ ಬದುಕಬೇಕೆಂಬುದು ಕೇವಲಮೌಢ್ಯವಲ್ಲವೆ? ನಮಗೆ ಬೇಕಾದ ವಸ್ತುಗಳು ಹೇಗೋ ಒಂದುವಿಧದಿಂದ ನಮಗೆ ಸಿಕ್ಕಬಹುದಾಗಿರುವಾಗ, ಅವುಗಳಿಗಾಗಿ ನಾವು ಚಿಂತಿಸಿ ಶ್ರಮಪಡುವುದುಚಿತವೆ? ಇವುಗಳಲ್ಲಿ ವಿರಕ್ತನಾಗಿ ಭಗವಂತನನ್ನು ಭಜಿಸಬೇಕಾದುದೇ ನಮ್ಮಕೃತ್ಯವು. ಆತನನ್ನು ಭಜಿಸಿದಪಕ್ಷದಲ್ಲಿ ಸಂಸಾರಬಂಧಕ್ಕೆ ಕಾರಣವಾದ ಅವಿದ್ಯೆಯೆಂಬುದು ಬಿಟ್ಟು ಹೋಗುವುದು. ಭಗವಂತನೇ ಜೀವಾತ್ಮಗಳಲ್ಲಿ ಪ್ರವೇತಿಸಿ ಅವುಗಳಿಗೆ ಧಾರಕನಾಗಿರುವನು,

---

* "ಇಲ್ಲಿ ದಿಗ್ವಲ್ಕಲಾದೌ ಸತಿ ಕಿಂ ದುಕೂಲೈಃ" ಎಂದು ಮೂಲವು. ಈ ವಾಕ್ಯದಿಂದ ದುಕೂಲಗಳನ್ನು ಬಿಟ್ಟು ದಿಗಂಬರನಾಗಿರಬೇಕೆಂಬ ಅರ್ಥವು ತೋರುತಿದ್ದರೂ,ಹಾಗೆ ಗ್ರಹಿಸಬಾರದು. ಇಲ್ಲಿ ವಲ್ಕಲಶಬ್ದಕ್ಕೆ ಉತ್ತರೀಯಮಾತ್ರವೆಂದೇ ಗ್ರಹಿಸಬೇಕಾದುದುಚಿತವು. ಏಕೆಂದರೆ. "ಅಪವಿತ್ರಕರೋ ನಗ್ನಃ" ಎಂಬ ಸ್ಮೃತಿವಾಕ್ಯದಿಂದ. ಮುಮುಕ್ಷುವಾದವನು ನಗ್ನನಾಗಿದ್ದಪಕ್ಷದಲ್ಲಿ, ಕರ್ಮಾರ್ಹತೆಯಿಲ್ಲದೆ ಅಪವಿತ್ರನೆನಿಸುವನು. ಆದುದರಿಂದ ಇಲ್ಲಿ ಕೇವಲನಗ್ನತ್ವವನ್ನು ಹೇಳಬಾರದು.

ಆದುದರಿಂದ ಈ ಜೀವನು ತನಗಾಯಶ್ರಭೂತನಾದ ಆ ಪರಮಾತ್ಮನನ್ನು ಅ
ನುವರ್ತಿಸುವುದೇ ನ್ಯಾಯವು. ಆ ಪರಮಾತ್ಮನೇ ಜೀವಾತ್ಮನಿಗೆ ವಿಶೇಷ
ಪ್ರೀತಿವಿಷಯನಾಗಿರಬೇಕಾದುದೂ ಯುಕ್ತವು. ಆ ಪರಮಾತ್ಮನು ನಿರತಿಶಯ
ಸುಖಸ್ವರೂಪನು. ಆತನೇ ಪರಮಪುರುಷಾರ್ಥಸ್ವರೂಪನು. ಅಂತಹ ಭಗ
ವಂತನನ್ನು ಸೇವಿಸಿ, ಆತನನ್ನು ಹೊಂದುವುದಕ್ಕೆ. ವಿರೋಧಿಯಾದ ಅವಿದ್ಯೆ
ಯ ಸಂಬಂಧವನ್ನು ತಪ್ಪಿಸಿಕೊಂಡು, ನಿರತಿಶಯಾನಂದಸ್ವರೂಪನಾದ ಆ
ಭಗವಂತನ ಉಪಾಸನೆಯೆಂಬ ಪರಮಸುಖವನ್ನು ಹೊಂದಿ, ಫಲಾಂತರಗಳಲ್ಲಿ
ವಿಮುಖನಾಗಿರಬೇಕು. ಇಂತಹ ಭಗವಂತನ ಚಿಂತೆಯನ್ನು ಬಿಟ್ಟು ಫಲಾಂ
ತರಗಳಲ್ಲಿ ಆಸೆಯಿಡುವವನು ಕೇವಲಪಶುಪ್ರಾಯನಲ್ಲದೆ ಬೇರೆಯಲ್ಲ. ಲೋ
ಕದಲ್ಲಿ ಎಷ್ಟೋಮಂದಿ ಮೂಢರು, ಭಗವಂತನನ್ನು ಬಿಟ್ಟು, ಇವರವಸ್ತುಗ
ಳಲ್ಲಿ ಆಸೆಯಿಟ್ಟು, ವೈತರಣೀನದಿಯಂತಿರುವ ಸಂಸಾರದಲ್ಲಿ ಬಿದ್ದು, ತಮ್ಮ
ತಮ್ಮ ಕರ್ಮಾನುಸಾರವಾಗಿ ಸಂಭವಿಸುವ ಆಧ್ಯಾತ್ಮಿಕಾದಿಬಾಧೆಗಳಲ್ಲಿ ಸಿಕ್ಕಿ
ಶ್ರಮಪಡುವರು. ಇವರ ಸ್ಥಿತಿಯನ್ನು ನೋಡಿಯೂ ಆ ಮಾರ್ಗದಲ್ಲಿಯೇ
ಪ್ರವರ್ತಿಸತಕ್ಕವನು ಪಶುವಲ್ಲದೆ ಬೇರೆನು ? ಜ್ಞಾನಿಯಾದ ಮನುಷ್ಯನೊ
ಬ್ಬನೇ ಯಾವ ವಿಪತ್ತುಗಳಿಗೂ ಈಡಾಗದೆ, ತನ್ನ ಹೃದಯಾಕಾಶದಲ್ಲಿ ಅಡ
ಗಿರುವ ಭಗವಂತನನ್ನು ಎಡೆಬಿಡದೆ ಸ್ತುತಿಸುತ್ತಿರುವನು. ಅಂತಹ ಜ್ಞಾನಿಗ
ಳ ಹೃದಯಕಮಲದಲ್ಲಿರುವವನೇ ಪರಮಪುರುಷನಾದ ಆ ಭಗವಂತನು. ಆ
ಪುರುಷನು ಶಂಖಚಕ್ರಗದಾಪದ್ಮಗಳಿಂದ ಶೋಭಿತಗಳಾದ ಚತುರ್ಭುಜಗಳಿಂ
ದೊಪ್ಪುತ್ತಿರುವನು. ಅವನೇ ಪುಂಡರೀಕಾಕ್ಷನು. ಅವನ ಮುಖವು ಯಾವಾ
ಗಲೂ ಪ್ರಸನ್ನವಾಗಿರುವುದು. ಆತನು ಧರಿಸಿದ ವಸ್ತ್ರವು ಕದಂಬಪುಷ್ಪಗಳ
ಕುಸುರಿಗಳಂತೆ ಹೊಂಬಣ್ಣದಿಂದೊಪ್ಪುತ್ತಿರುವುವು. ಆತನ ತೋಳುಗಳು
ರತ್ನಖಚಿತಗಳಾದ ಭುಜಕೀರ್ತಿಗಳಿಂದ ಪ್ರಕಾಶಿಸುತ್ತಿರುವುವು. ಆ ಮಹಾ
ತ್ಮನ ತಿರಸ್ಸಿನಲ್ಲಿ ಸುವರ್ಣಮಯವಾದ ಕೀರೀಟವು ಬೆಳಗುತ್ತಿರುವುದು, ಕಿವಿ
ಗಳು ಕುಂಡಲಗಳಿಂದ ಶೋಭಿಸುತ್ತಿರುವುವು.ಆ ಮಹಾತ್ಮನ ಪಾದಪಲ್ಲವಳಗ
ನ್ನೇ ಯೋಗೀಶ್ವರರೆಲ್ಲರೂ ಉಲ್ಲಾಸವಿಶೇಷವಾದ ತಮ್ಮ ಹೃದಯಕಮಲ
ದಲ್ಲಿಟ್ಟು ಪೂಜಿಸುತ್ತಿರುವರು. ಆ ಮಹಾತ್ಮನ ವಕ್ಷಸ್ಥಲವು ಶ್ರೀವತ್ಸವೆಂಬ

ಮಚ್ಛೆಯಿಂದಲೂ, ಆತನ ಕಂಠಪ್ರದೇಶವು ಕೌಸ್ತುಭರತ್ನದಿಂದಲೂ ಪ್ರಕಾಶಿಸುತ್ತಿರುವುದು. ಶಂಖವನ್ನು ಹೋಲುತ್ತಿರುವ ಆತನ ಕಂಠವು ವನಮಾಲಿಕೆಯಿಂದಲೂ, ಆತನ ಕಟಿಪ್ರದೇಶವು ಅಂದವಾದ ಕಟಿಸೂತ್ರದಿಂದಲೂ, ಆತನ ಬೆರಳುಗಳು ಬೆಲೆಯುಳ್ಳ ಉಂಗುರಗಳಿಂದಲೂ ಒಪ್ಪುತ್ತಿರುವುವು. ಆತನ ಮುಂಗೈಗಳು ಮನೋಹರಗಳಾದ ಕೈಬಳೆಗಳಿಂದಲೂ, ಆತನ ಪಾದಗಳು ಅಂದವಾದ ಕಾಲಂದುಗೆಯಿಂದಲೂ ಶೋಭಿಸುತ್ತಿರುವುದು.ಆ ಮಹಾತ್ಮನ ಮುಖವು ಸುರುಳಿಗಟ್ಟಿದ ನೀಲಕುಂತಲಗಳಿಂದಲೂ,ಮಂದಹಾಸದಿಂದಲೂ ಪ್ರಕಾಶಿಸುತ್ತಿರುವುದು. ಆ ಮಹಾಪುರುಷನು, ತನ್ನ ದೃಷ್ಟಿಯಿಂದಲೂ, ಹುಬ್ಬಿನಾಟಗಳಿಂದಲೂ ಕರುಣಾರಸವನ್ನು ಸುರಿಸುತ್ತಿರುವನು. ಎಲೈ ಪರೀಕ್ಷಿದ್ರಾಜನೆ! ಮನುಷ್ಯನು ಧಾರಣಾಶಕ್ತಿಯಿಂದ ಎಷ್ಟು ಕಾಲದವರೆಗೆ ತನ್ನ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸಬಲ್ಲನೋ ಅದುವರೆಗೂ ಇಂತಹ ಸರ್ವೇಶ್ವರನ ಮನೋಹರಾಕಾರವನ್ನು ಜ್ಞಾನದೃಷ್ಟಿಯಿಂದ ನೋಡುತ್ತಿರಬೇಕು. ಹೀಗೆ ಆ ಪರಮಪುರುಷನ ದಿವ್ಯಸ್ವರೂಪದಲ್ಲಿ ಅಂಗುಷ್ಠದಿಂದ ಹಿಡಿದು, ಮುಖಪರ್ಯಂತವಾಗಿ ಒಂದೊಂದವಯವವನ್ನೂ ಬೇರೆಬೇರೆಯಾಗಿ ಮನಸ್ಸಿನಲ್ಲಿಟ್ಟುಕೊಂಡು ಧ್ಯಾನಿಸುತ್ತಿದ್ದು, ಈ ಭಾವನೆಯಿಂದ ಯಾವುಯಾವ ಅವಯವಸೌಂದರ್ಯವು ಮನಸ್ಸಿನಲ್ಲಿ ದೃಢಪಡುವುದೋ, ಅದನ್ನು ಬಿಟ್ಟುಕ್ರಮವಾಗಿ ಮುಂದುಮುಂದಿನ ಅವಯವಗಳನ್ನು ಭಾವನೆಗೆ ತಂದುಕೊಂಡು, ತನ್ನ ಬುದ್ಧಿಯು ಪ್ರಸನ್ನವಾಗುವವರೆಗೆ ಧಾರಣಾಯೋಗದಿಂದ ಅವುಗಳನ್ನು ಧ್ಯಾನಿಸುತ್ತ ಬರಬೇಕು.ಹೀಗೆ ದಿವ್ಯಾತ್ಮಸ್ವರೂಪದ ಒಂದೊಂದವಯವವನ್ನೂ ಪ್ರತ್ಯೇಕವಾಗಿ ಧ್ಯಾನಿಸಿ, ಬುದ್ಧಿಯನ್ನು ನಿಷ್ಕಲ್ಮಷವಾಗಿ ಮಾಡಿಕೊಂಡಮೇಲೆಯೂ ಬಿಡಬಾರದು. ಸರ್ವೇಶ್ವರನಾಗಿಯೂ,ಬ್ರಹ್ಮಾದಿದೇವತೆಗಳಿಗಿಂತಲೂ ಉತ್ತಮನಾಗಿಯೂ,ಸರ್ವನಿಯಾಮಕನಾಗಿಯೂ ಇರುವ ಆ ಭಗವಂತನಲ್ಲಿ ದೃಢವಾದ ಭಕ್ತಿಯೋಗವು ಹುಟ್ಟಲಾರಂಭಿಸುವವರೆಗೂ,ಮುಮುಕ್ಷುವಾದವನು ತನಗೆ ಅವಶ್ಯಕವೆನಿಸಿದ ಅನುಷ್ಠಾನವನ್ನು ಮುಗಿಸಿಕೊಂಡಮೇಲೆ, ಆ ದಿವ್ಯಾತ್ಮಸ್ವರೂಪದ ಸ್ಥೂಲಾಕೃತಿಯನ್ನು (ವಿರಾಡ್ರೂಪವನ್ನು) ದೃಢಮನಸ್ಸಿನಿಂದ ಧ್ಯಾನಿಸಬೇಕು. ಹೀಗೆ

ಯೋಗಿಯಾದವನು ಪೂರ್ಣವಾದ ಭಕ್ತಿಯೋಗವನ್ನು ಸಂಪಾದಿಸಿ, ಈ ಶರೀರಕ್ಕೆ ಕಾರಣವಾದ ತನ್ನ ಪ್ರಾರಬ್ಧಕರ್ಮವೂ ಮುಗಿಯುತ್ತ ಬಂದಮೇಲೆ, ಕಾಲದೇಶಗಳೊಂದನ್ನೂ ಗಮನಿಸದೆ, ದೇಹತ್ಯಾಗಕ್ಕೆ ನಿಶ್ಚಯಿಸಿ, ನಿರಾತಂಕವಾದ ಸ್ಥಳದಲ್ಲಿ ಸುಖವಾಗಿ ಕುಳಿತು, ಪ್ರಾಣಗಳನ್ನೂ, ಇಂದ್ರಿಯಗಳನ್ನೂ ನಿರ್ಬಂಧಿಸಿಡಬೇಕು. ಭಗವದುಪಾಸನದಿಂದ ಪಾಪವನ್ನು ನೀಗಿ ನಿಷ್ಕಲ್ಮಷವಾಗಿರುವ ಬುದ್ಧಿಯಿಂದ ಮನಸ್ಸನ್ನು ಕಟ್ಟಿ, ಆ ಬುದ್ಧಿಯನ್ನು ಕ್ಷೇತ್ರಜ್ಞನೆನಿಸಿದ ಜೀವಾತ್ಮನಲ್ಲಿ ಸೇರಿಸಿಡಬೇಕು. ಹೀಗೆ ಜೀವಾತ್ಮನನ್ನು ಪರಮಾತ್ಮನಲ್ಲಿ ಸಮರ್ಪಿಸಿದಮೇಲೆ, ಬ್ರಹ್ಮಪದದಲ್ಲಿ ಬ್ರಹ್ಮಾನಂದಸುಖವನ್ನನುಭವಿಸುತ್ತ, ಸಮಸ್ತಕರ್ಮಗಳಿಂದಲೂ ನಿವೃತ್ತನಾಗುವನು. ಎಲ್ಲೆ ಪರೀಕ್ಷಿತ್ರಾಜನೆ! ಸಮಸ್ತಲೋಕಗಳನ್ನೂ ನಿಯಮಿಸತಕ್ಕ ಬ್ರಹ್ಮಾದಿದೇವತೆಗಳೂಕೂಡ ಕಾಲಕ್ಕೆ ವಶವಾಗಿರುವರು. ಇನ್ನು ದೇವತೆಗಳಿಗಾಗಲಿ ಮನುಷ್ಯರಿಗಾಗಲಿ, ಆ ಪರಮೇಲೆ ಯಾವಶಕ್ತಿಯೂ ಸಾಗದೆಂಬುದನ್ನು ಹೇಳತಕ್ಕುದೇನು ? ಆಕಾಲವಾಪರೂ ಬ್ರಹ್ಮಪದದಲ್ಲಿ ಯಾವಕಾರ್ಯವನ್ನು ಸಾಧಿಸುವುದಕ್ಕೂ ಸಮರ್ಥವಲ್ಲ. ಆ ಬ್ರಹ್ಮಪದವೆಂಬುದು ಕೇವಲಶುದ್ಧಸತ್ವಮಯವಾದುದು. ವಿಶುದ್ಧಸತ್ವಗುಣಕ್ಕಾದರೂ ಅಲ್ಲಿ ಪ್ರವೇಶವಿಲ್ಲ. ಹೀಗಿರುವಾಗ ರಜಸ್ತಮೋಗುಣಗಳಿಗಾಗಲಿ, ಅದರಿಂದುಂಟಾಗಿರುವ ದೇವಮನುಷ್ಯಾದಿಗಾಗಲಿ, ಅಲ್ಲಿ ಪ್ರವೇಶವೆಲ್ಲಿಯದು? ಇವುಗಳ ವಿಷಯವೂ ಹಾಗಿರಲಿ! ಸಮಸ್ತಪ್ರಪಂಚದ ಸೃಷ್ಟ್ಯಾದಿಗೂ ಕಾರಣಭೂತವಾದ ಪ್ರಕೃತಿಯಾಗಲಿ, ಆ ಪ್ರಕೃತಿಗುಣಗಳಾದ ಸತ್ವರಜಸ್ತಮಸ್ಸುಗಳಾಗಲಿ, ಆ ಗುಣಕಾರ್ಯಗಳಾದ ಮಹದಹಂಕಾರಗಳಾಗಲಿ, ಅಲ್ಲಿ ತಮ್ಮ ಕಾರ್ಯವನ್ನು ನಡೆಸುವುದಕ್ಕೆ ಸಮರ್ಥವಲ್ಲ. ಆ ಪರಬ್ರಹ್ಮವು ಅಪ್ರಾಕೃತವೆನಿಸಿರುವುದು. ಎಲ್ಲೆ ರಾಜನೆ! ಮತ್ತೊಂದು ವಿಷಯವನ್ನು ಹೇಳುವೆನು ಕೇಳು. ವೇದಾಂತಗಳೆಲ್ಲವೂ ವಿಷ್ಣುಸ್ಥಾನವಾದ ಪರಮಪದವೇ ನಮಗೆ ಪ್ರಾಪ್ಯವೆಂದು ಹೇಳುತ್ತಿರುವುವು. ಮತ್ತು ಬ್ರಹ್ಮಾತ್ಮಕವಿಲ್ಲದ ಸ್ವತಂತ್ರವಸ್ತುವೊಂದಾದರೂ ಪ್ರಪಂಚದಲ್ಲಿ ಇಲ್ಲವೇ ಇಲ್ಲವೆಂದೂ ಬೋಧಿಸುತ್ತಿರುವುವು. ಮತ್ತು ನಮಗೆ ಪ್ರಾಪ್ಯವಾದ ಆ ವಿಷ್ಣುಸ್ವರೂಪವೇ ಕಾಲಾದಿಗಳಿಗೂ ನಿಯಾಮಕವಾಗಿರುವುದೆಂದೂ, ಅದಕ್ಕೆ ಸತ್ವಾದಿಗುಣಕಾರ್ಯಗಳ ಸಂಬಂಧವಿಲ್ಲವೆಂದೂ

ನಿರೂಪಿಸುವುದು. ಆದುದರಿಂದ ಯೋಗಿಯಾದವನು ರಾಗದ್ವೇಷಾದಿಗಳನ್ನು ಬಿಟ್ಟು, ಬೇರೆ ಯಾವವಿಧವಾದ ಚಿಂತೆಯೂ ಇಲ್ಲದ ಶುದ್ಧ ಮನಸ್ಸಿನಿಂದ, ಭಗವಂತನ ಪಾದಗಳನ್ನು ಪ್ರತಿಕ್ಷಣವೂ ಅಲಂಗಿಸಿಕೊಂಡು, ಇತರ ಕೃತ್ಯಗಳಿಂದ ನಿವೃತ್ತನಾಗಬೇಕು. ಎಲೈ ರಾಜೇಂದ್ರನೆ! ಅಂತಹ ಯೋಗಿಯು ದೇಹತ್ಯಾಗಮಾಡಬೇಕಾದ ಕ್ರಮವನ್ನೂ ಹೇಳುವೆನು ಕೇಳು.ಅಂತಹ ಯೋಗಿಯು, ಸಮಸ್ತವೂ ಬ್ರಹ್ಮಾತ್ಮಕವೇ ಎಂದು ಬುದ್ಧಿಯಲ್ಲಿ ನಿರ್ಧರಿಸಿ, ಭಗವದುಪಾಸನಾತ್ಮಕವಾಗಿಯೂ, ತದ್ವರ್ಜನಾತ್ಮಕವಾಗಿಯೂ ಇರುವ ಜ್ಞಾನದ ಬಲದಿಂದ, ಸಮಸ್ತವಾಸನೆಗಳನ್ನೂ ತೊಲಗಿಸಿಕೊಂಡು, ತನ್ನ ಪಾದಮೂಲದಿಂದ ಗುದಸ್ಥಾನವನ್ನು ನಿರೋಧಿಸಬೇಕು. ಹೀಗೆ ಮಾಡಿದ ಮೇಲೆ ಮುಂದೆ ಹೇಳುವಕ್ರಮದಿಂದ ಪ್ರಾಣವಾಯುವನ್ನು ನಿರಾಯಾಸವಾಗಿ, ನಾಭಿ ಮೊದಲಾದ ಸ್ಥಾನಗಳಲ್ಲಿ ಸೇರಿಸಬಹುದು.ಅದರ ಕ್ರಮವೇನೆಂಬುದನ್ನು ಕೇಳು ! ಮೊದಲು ಮೂಲಾಧಾರಚಕ್ರದಲ್ಲಿರುವ ವಾಯುವನ್ನು, ನಾಭಿಯಲ್ಲಿರುವ ಮಣಿಪೂರಕವೆಂಬ ಚಕ್ರದಲ್ಲಿ ಸೇರಿಸಬೇಕು.ಅಲ್ಲಿಂದ ಹೃದಯದಲ್ಲಿರುವ ಅನಾಹತವೆಂಬ ಚಕ್ರಕ್ಕೆ ತಂದು ಸೇರಿಸಿ, ಅಲ್ಲಿಂದ ಕಂಠದಲ್ಲಿ ಉಪಾನವಾಯುಸಂಚಾರದಂತೆ ಅದಕ್ಕೆ ಗತಿಯನ್ನು ಕಲ್ಪಿಸಿ,ಕಂಠದ ಕೆಳಗಿರುವ ವಿಶುದ್ಧವೆಂಬ ಚಕ್ರದಲ್ಲಿ ಸೇರಿಸಬೇಕು.ಆಮೇಲೆ ನಿಶ್ಚಲವಾದ ಮನಸ್ಸುಳ್ಳವನಾಗಿ,ಆದು ಹೋಗಬೇಕಾದಪಾರಿಯನ್ನು ಚೆನ್ನಾಗಿ ಅನುಸಂಧಾನಮಾಡಿ,ಆವಿಶುದ್ಧವೆಂಬ ಚಕ್ರವಕೊನೆಗೆ ಸಂಬಂಧಿಸಿರುವ ತಾಲುವಿನ ಮೂಲಪ್ರದೇಶಕ್ಕೆ ಪ್ರಯತ್ನದಿಂದ ತಂದು ಸೇರಿಸಬೇಕು ಆಸ್ಥಳದಿಂದಪ್ರಾಣವಾಯುವನ್ನು ಹುಬ್ಬಿನ ನಡುವೆ ಇರುವ ಆಜ್ಞಾಚಕ್ರದಲ್ಲಿ ತಂದು ಸೇರಿಸಬೇಕು. ಆಗ ಆ ಯೋಗಿಯ ಬಾಯಿ,ಮೂಗು, ಕಿವಿ, ಕಣ್ಣುಮೊದಲಾದ ದ್ವಾರಗಳೆಲ್ಲವೂ ಮುಚ್ಚಿಹೋಗುವುವು. ಆತನಿಗೆ ವಿಷಯಾಂತರಗಳಲ್ಲಿ ಅಪೇಕ್ಷೆಯೂ ತಪ್ಪಿಹೋಗುವುದು. ತಾನು ಹೊಂದಬೇಕಾದ ಪ್ರದೇಶವೊಂದರಲ್ಲಿಯೇ ದೃಢಜ್ಞಾನವು ಹುಟುವುದು. ಈ ಆಜ್ಞಾಚಕ್ರದಲ್ಲಿ ತಂದು ಸೇರಿಸಿದ ವಾಯುವನ್ನು, ಆತನು ಮುಹೂರ್ತಕಾಲದವರೆಗೆ ಹಾಗೆಯೆ ತಡೆದಿಟ್ಟು, ಪರಮಾತ್ಮಪ್ರಾಪ್ತಿಗಾಗಿ ನಿರೀಕ್ಷಿಸುತಿದ್ದರೆ, ಆ ವಾಯುವು ಬ್ರಹ್ಮರಂಧ್ರವನ್ನು ಭೇದಿಸಿ

ಕೊಂಡು ಹೋಗುವುದು.ಯೋಗಿಯಾದವನು ತನ್ನ ಸ್ಥೂಲದೇಹವನು ಬಿಡ ಬೇಕಾದ ಕ್ರಮವೇ ಇದು. ಎಲೈ ರಾಜೇಂದ್ರನೆ! ಮತ್ತೊಂದು ವಿಷಯವನ್ನು ತಿಳಿಸುವೆನು ಕೇಳು. ದೇಹತ್ಯಾಗವಾದಮೇಲೆ ಜೀವನಿಗೆ ಅರ್ಚಿರಾದಿಗತಿಯೆಂದೂ ಧೂಮಾದಿಗತಿಯೆಂದೂ, ಎರಡುಮಾರ್ಗಗಳುಂಟು.ಅವುಗಳಲ್ಲಿ ನುಮುಕ್ಷುವಾದವನು ಅರ್ಚಿರಾದಿಗತಿಯನ್ನವಲಂಬಿಸುವುದೇ ಉಚಿತವು.ಎಲೈ ರಾಜನೆ!ಚತುರ್ಮುಖಬ್ರಹ್ಮನೇ ಮೊದಲಾದ ದೇವತೆಗಳು ಸ್ವತಂತ್ರರೆಂಬ ಭಾವನೆಯಿಂದ, ಆ ದೇವತೆಗಳನ್ನು ಭಜಿಸತಕ್ಕವರು ಧೂಮಾದಿಗತಿಯನ್ನು ಹಿಡಿದು ಹೋಗುವರು.ಸಿದ್ಧರಿಗೆ ಕ್ರೀಡಾಸ್ಥಾನವಾಗಿಯೂ, ಅಣಿಮಾದ್ಯಷ್ಟೈಶ್ವರ್ಯ ಸಮೃದ್ಧಿಯುಳ್ಳದಾಗಿಯೂ ಇರುವ ಆ ಚತುರ್ಮುಖಲೋಕವನ್ನು ಹೊಂದ ಬೇಕೆಂದಪೇಕ್ಷಿಸಿ,ಮೇಲೆ ಹೇಳಿದಂತೆ ಧೂಮಾದಿಗತಿಯನ್ನವಲಂಬಿಸಿ ಹೋಗ ತಕ್ಕವರಿಗೆ, ದೇಹಾವಸಾನಕಾಲದಲ್ಲಿ ಸ್ಥೂಲದೇಹವುಮಾತ್ರ ಬಿಟ್ಟುಹೋಗುವುದೇ ಹೊರತು, ಇಂದ್ರಿಯಗಳೂ, ಮನಸ್ಸೂ ಅವರೊಡನೆಯೇ ಸೇರಿ ಕೊಂಡಿರುವುವು. ಇವುಗಳಿಂದ ಕೂಡಿದ ಸೂಕ್ಷ್ಮದೇಹದಿಂದಲೇ ಅವರು ಲೋಕಾಂತರಗಳನ್ನು ಹೊಂದುವರು. ಇಂತಹ ದೇವತಾಂತರೋಪಾಸಕರಾದ ಯೋಗಿಗಳು, ಮೂರುಲೋಕಗಳ ಒಳಭಾಗದಲ್ಲಿಯೂ,ಹೊರಭಾಗದಲ್ಲಿಯೂ ಇರುವ ಜನಲೋಕಾದಿಗಳಲ್ಲಿ ವಾಯುವೇಗದಿಂದ ವರ್ತಿಸುವರು. ಶಾಸ್ತ್ರಜನ್ಯಜ್ಞಾನವನ್ನೂ, ಕರ್ಮಯೋಗವನ್ನೂ, ಯಮನಿಯಮಾದಿಗಳನ್ನೂ, ಸಮಾಧಿಯನ್ನೂ ಅವಲಂಬಿಸಿದವರಿಗೆ, ಬ್ರಹ್ಮಾಂಡದಲ್ಲಿ ಅಂತರ್ಗತಗಳಾದ ಲೋಕಗಳಲ್ಲಿ ಯಥೇಷ್ಟವಿಹಾರವು ಲಭಿಸುವಂತೆ, ಕಾಮ್ಯಕರ್ಮಗಳನ್ನು ನಡೆಸತಕ್ಕವರಿಗೆ ಲಭಿಸಲಾರದು. ಇದರಿಂದ ಕೇವಲಕರ್ಮಪರನಿಗಿಂತಲೂ ಇಂತಹ ಯೋಗೀಶ್ವರನೇ ಮೇಲೆಂದು ಸ್ಪಷ್ಟವಾಗುವುದು. ಅಂತಹ ಯೋಗಿಗಿಂತಲೂ ಭಗವದುಪಾಸಕನು ಇನ್ನೂ ಮೇಲೆನಿಸುವನು. ಆದುದರಿಂದಲೇ ಹೀಗೆ ಪರಮಾತ್ಮೋಪಾಸನದಿಂದ ಭಕ್ತಿಯೋಗನಿಷ್ಠರಾದವರು ತ್ರೈಲೋಕ್ಯದಲ್ಲಿ ಅಂತರ್ಭೂತವಾಗಿ, ಚತುರ್ದಶಭುವನಾತ್ಮಕವೆನಿಸಿದ ಅಂಡಕೋಶದ ಉಪರಿಭಾಗದಲ್ಲಿಯೂ ಸಂಚರಿಸಬಲ್ಲರು.ಮುಮುಕ್ಷುಗಳಿಗೆ ಅರ್ಚಿರಾದಿಗತಿಯೇ ಮುಖ್ಯವೆಂದು ಹೇಳಿದೆನಷ್ಟೆ? ಆ ದಾರಿಯನ್ನು ಹಿಡಿದು

ಹೋಗತಕ್ಕ ಕ್ರಮವನ್ನೂ ಹೇಳುವೆನು ಕೇಳು. ಮುಮುಕ್ಷುವಾದವನು ತನ್ನ ಹೃದಯಕಮಲದಲ್ಲಿರುವ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗೊಡನೆ, ಆ ಜೀವಕ್ಕೆ ಸ್ಥಾನಭೂತವಾದ ಹೃದಯಕಮಲದ ಅಗ್ರಭಾಗದಲ್ಲಿರುವ ಸುಷುಮ್ನೆಯೆಂಬ ನಾಡಿಯ ದ್ವಾರವು ಪ್ರಕಾಶವಾಗಿ ತೆರೆಯಲ್ಪಡುವುದು. ಬ್ರಹ್ಮಪ್ರಾಪ್ತಿಗೆ ಇದೇ ದಾರಿಯೆನಿಸಿರುವುದು. ಈ ಮಾರ್ಗವಾಗಿ ದೇಹವನ್ನು ಬಿಟ್ಟು ಹೊರಟು, ಅಲ್ಲಿಂದ ಶೀರ್ಷಕಪಾಲಕ್ಕೆ ಹೊರಗಿರುವ ಆಕಾಶ ಮಾರ್ಗವಾಗಿ, ಅರ್ಚಿಶ್ಶಬ್ದವಾಚ್ಯವಾದ ಅಗ್ನಿಯನ್ನು ಹೊಂದುವನು. ಅಲ್ಲಿ ಇವನಿಗೆ ಪುಣ್ಯಪಾಪಕರ್ಮಗಳೆಲ್ಲವೂ ಬಿಟ್ಟು ಹೋಗುವುವು. ಈ ವಿಧವಾದ ಕರ್ಮವಿಮೋಚನವು ಧೂಮಾದಿಗತಿಯನ್ನವಲಂಬಿಸತಕ್ಕವರಿಗೆ ಸಂಭವಿಸದು. * ಈ ಕರ್ಮವಿಮೋಚನವಾದಮೇಲೆ ಆತನು ಸೂರ್ಯನಿಗೆ ಉಪರಿಭಾಗದಲ್ಲಿರುವ ತೇಂಶುಮಾರಚಕ್ರವನ್ನು ಹೊಂದುವನು. ಈ ಚಕ್ರವು ವಿಷ್ಣುವಿಗೆ ಸ್ಥಾನಭೂತವಾದುದು. ಮತ್ತು ಬ್ರಹ್ಮಜ್ಞಾನಿಗಳೆಲ್ಲರಿಗೂ ನಮಸ್ಕಾರಾರ್ಹವಾದುದು. ಗ್ರಹ ತಾರಕ ನಕ್ಷತ್ರಾದಿಗಳೆಲ್ಲಕ್ಕೂ ಆಶ್ರಯಭೂತವಾದುದು. ಮುಮುಕ್ಷುವು ಈ ತೇಂಶುಮಾರಚಕ್ರವನ್ನತಿಕ್ರಮಿಸಿ, ಪುಣ್ಯಪಾಪರಹಿತವಾಗಿಯೂ, ಅತಿಸೂಕ್ಷ್ಮವಾಗಿಯೂ ಇರುವ ಲಿಂಗಶರೀರದೊಡನೆ ಅಸಹಾಯನಾಗಿ ಒಬ್ಬನೇ ಹೋಗುತ್ತ, ಕಲ್ಪಾಂತದವರೆಗೆಮಾತ್ರವೇ ಆಯುಃಪ್ರಮಾಣವುಳ್ಳ, ದೇವತೆಗಳಿಗೆ ವಿಹಾರಸ್ಥಾನವಾದ ಜನಲೋಕವನ್ನು ಸೇರುವನು. ಈ ಲೋಕವು ಅವಾಂತರಪ್ರಳಯಕಾಲದಲ್ಲಿ ಆದಿಶೇಷನ ವಿಷಾಗ್ನಿಯಿಂದ ದಗ್ಧವಾಗಿ ನಾಶಹೊಂದುವುದೆಂದು ತನ್ನ ಜ್ಞಾನದೃಷ್ಟಿಯಿಂದ ತಿಳಿದು, ಅಲ್ಲಿ ನಿಲ್ಲದೆ ಒಡನೆಯೇ ಚತುರ್ಮುಖಲೋಕವನ್ನು ಸೇರುವನು. ಈ ಲೋಕವು ಸ್ವರ್ಗಾದಿಲೋಕಗಳಿಗಿಂತಲೂ ಹೆಚ್ಚು ಕಾಲವಿರತಕ್ಕುದಾದರೂ, ಎರಡು ಪರಾರ್ಧಕಾಲಕ್ಕಿಂತಲೂ ಹೆಚ್ಚಾಗಿ ನಿಲ್ಲತಕ್ಕುದಲ್ಲ. ಆದರೆ ಆ ಲೋದಲ್ಲಿ ದುಃಖವಾಗಲಿ, ಕಳವಳವಾಗಲಿ, ಬೇರೆ ಮನೋವಿಕಾರಗಳಾಗಲಿ, ಭಯವಾಗಲಿ, ಚಳಿ, ಗಾಳಿ, ಮಳೆ, ಬಿಸಿಲುಗಳಿಂದುಂಟಾಗುವ ಬಾ

---

* ಈ ತೇಂಶುಮಾರಚಕ್ರಸ್ವರೂಪವು ಮುಂದೆ ಐದನೆಯ ಸ್ಕಂಧದಲ್ಲಿ ವಿವರವಾಗಿ ತಿಳಿಸಲ್ಪಡುವುದು.

ಥೆಯಾಗಲಿ ಯಾವುದೊಂದೂ ಇರುವುದಿಲ್ಲ. ಈ ಸ್ಥಾನವು ಯಾವಾಗಲೂ ಅನೇಕಯೋಗೀಶ್ವರರಿಂದೊಪ್ಪುತ್ತಿರುವ ದಿವ್ಯವಿಮಾನಗಳಿಂದ ಶೋಭಿತವಾಗಿರುವುದು. ಆದರೆ ಅಲ್ಲಿನವರು ಈ ಪ್ರತ್ಯಕ್ಷಪ್ರಪಂಚಕ್ಕಿಂತಲೂ ವಿಲಕ್ಷಣವಾದ ಪರಬ್ರಹ್ಮಸ್ವರೂಪವನ್ನು ಬಲ್ಲವರಾದರೂ, ಅವರಿಗೆ ತಾವು ನಡೆಸಿದ ಕರ್ಮಬಂಧದ ಮೂಲಕವಾಗಿ, ತಮಗೆ ಅಪಾರದುಃಖಕಾರಣವಾದ ಸಂಸಾರವು ತಿರುಗಿ ಸಂಭವಿಸಬಹುದೆಂಬ ಭಯವೊಂದುಮಾತ್ರ ಮನಸ್ಸನ್ನು ಆಗಾಗ ಕಳವಳಹೊಂದಿಸುತ್ತಿರುವುದು. ಈ ನ್ಯೂನತೆಯನ್ನು ನೋಡಿ ಅಲ್ಲೆಯೂ ನಿಲ್ಲದೆ ಮುಂದೆ ಹೊರಡುವನು. ಪೃಥಿವಿ, ಅಪ್ಪು, ತೇಜಸ್ಸು, ವಾಯು, ಆಕಾಶ, ಮಹತ್, ಅಹಂಕಾರಗಳೆಂಬ ಏಳುಬಗೆಯ ಆವರಣಗಳುಂಟು. ಆದುದರಿಂದ ಚತುರ್ಮುಖಲೋಕದಿಂದ ಪರಮಪದಕ್ಕೆ ಹೋಗಲುದ್ದೇಶಿಸಿದವನು, ಅಲ್ಲಿಂದ ಹೊರಟಕೂಡಲೆ ಪೃಥಿವೀಯೆಮವಾದ ಆವರಣವನ್ನು ಪ್ರವೇಶಿಸಿ ಅಲ್ಲಿ ನಿರ್ಭಯನಾಗಿರುತಿದ್ದು, ಆದೇಸ್ವರೂಪದೊಡನೆ ಆ ಆವರಣವನ್ನೂ ದಾಟಿ, ಜಲಾವರಣವನ್ನು ಹೊಂದುವನು. ಆದರಿಂದಾಚೆಗೆ ಆವರಣಾಗ್ನಿಯನ್ನು ಹೊಂದಿ, ಅಗ್ನಿಸ್ವರೂಪನಾಗಿ, ಆಲ್ಲಿ ತನಗೆ ಅಗ್ನಿಸಂಬಂಧವಾದ ಉರಿ, ಬೇಗೆ, ಮುಂತಾದ ಬಾಧೆಯೊಂದೂ ತೋರದುದರಿಂದ, ಅತುರವಿಲ್ಲದೆ ಮೆಲ್ಲಗೆ ಅದನ್ನತಿಕ್ರಮಿಸಿ ಹೋಗಿ ಆವರಣವಾಯುವನ್ನು ಸೇರುವನು. ವಾಯುಸ್ವರೂಪದಿಂದ ಅದನ್ನೂ ದಾಟಿದಮೇಲೆ, ಹಿಂದೆ ಹೇಳಿದ ವಾಯು ಮೊದಲಾದ ಎಲ್ಲಾ ಭೂತಗಳಿಗೂ ಉತ್ಪತ್ತಿಕಾರಣವಾಗಿ, ಅವೆಲ್ಲಕ್ಕಿಂತಲೂ ದೊಡ್ಡದಾಗಿ, ಶಬ್ದವೆಂಬ ಅಸಾಧಾರಣಗುಣವುಳ್ಳ ಆವರಣಾಕಾಶವನ್ನು ಸೇರುವನು. ಎಲ್ಲೆ ರಾಜನೆ! ಮುಮುಕ್ಷುವಾದವನು ಹೀಗೆ ತನ್ನ ಸೂಕ್ಷ್ಮದೇಹದಲ್ಲಿರುವ ಇಂದ್ರಿಯಗಳಿಂದ, ಆಯಾಭೂತಗಳಲ್ಲಿರುವ ಗುಣಗಳನ್ನು ಗ್ರಹಿಸುತ್ತ ಹೋಗುವನು. ಘ್ರಾಣೇಂದ್ರಿಯದಿಂದ ಭೂಮ್ಯಾವರಣಗುಣವಾದ ಗಂಧವನ್ನೂ, ಜಿಹ್ವೇಂದ್ರಿಯದಿಂದ ಜಲಾವರಣದಲ್ಲಿರುವ ರಸವನ್ನೂ, ನೇತ್ರೇಂದ್ರಿಯದಿಂದ ಅಗ್ನಿಗತವಾದ ರೂಪವನ್ನೂ, ತ್ವಗಿಂದ್ರಿಯದಿಂದ ವಾಯುಗತವಾದ ಸ್ಪರ್ಶವನ್ನೂ, ಶ್ರವಣೇಂದ್ರಿಯದಿಂದ ಆಕಾಶಗುಣವಾದ ಶಬ್ದವನ್ನೂ, ಅಂತಃಕರಣದಿಂದ ಅಭಿಪ್ರಾಯವನ್ನೂ ಗ್ರಹಿಸುವನು. ಒಂದೊಂದು ಭೂತಾವರ

ಣವನ್ನು ಭೇದಿಸುವಾಗಲೂ, ಹೀಗೆ ತನ್ನ ಇಂದ್ರಿಯಗಳಿಂದ ಆಯಾಭೂತ ಗುಣವನ್ನು ಗ್ರಹಿಸುತ್ತ ಹೋಗುವುದಲ್ಲದೆ, ಅಂತಹ ಯೋಗಿಯು ಆಕಾಶಾದಿಭೂತಗಳಿಗೂ, ಶಬ್ದಾದಿತನ್ಮಾತ್ರಗಳಿಗೂ, ಜ್ಞಾನಕರ್ಮೇಂದ್ರಿಯಗಳಿಗೂ ಕಾರಣನಾಗಿ, ಮತ್ತು ತನ್ನ ಕಾರ್ಯದಿಂದಲೇ ತಾನು ಮಾರ್ಪಡುತ್ತ, ದಿಕ್ಕು, ವಾಯು, ಮುಂತಾದ ದೇವತೆಗಳಿಂದಧಿಷ್ಠಿತಗಳಾದ ಇಂದ್ರಿಯಗಳಿಗೂ ಕಾರಣವಾಗಿ, ಸಾತ್ವಿಕ, ರಾಜಸ ತಾಮಸಗಳೆಂಬ ಮೂರು ವಿಭಾಗಗಳುಳ್ಳ ಅಹಂಕಾರತತ್ವವನ್ನು ಸೇರಿ, ಅದರೊಡನೆ ಸೇರಿದಂತೆಯೇ ವಿಜ್ಞಾನವೆಂಬ ಹೆಸರುಳ್ಳ ಮಹತ್ತತ್ತ್ವವರಣನ್ನು ಹೊಂದುವನು. ಅಲ್ಲಿಂದಾಚೆಗೆ ಸತ್ವರಜಸ್ತಮೋಗುಣಗಳ ಸಮಸ್ಥಿತಿಗೆ ಆಶ್ರಯವಾದ ಪ್ರಕೃತಿಗೆ ಬಂದು ಸೇರುವನು. ಅಲ್ಲಿಂದ ಹೊರಟು, ಅದರ ಎಲ್ಲೆಯನ್ನು ದಾಟಿ ಮೊಡನೆ, ಪುಣ್ಯಪಾಪಸಂಬಂಧವಿಲ್ಲದೆ ಪರಿಶುದ್ಧವಾಗಿರುವ ಸೂಕ್ಷ್ಮರೂಪವನ್ನು ಹೊಂದಿ, ಹಸಿವು ಬಾಯಾರಿಕೆ ಮೊದಲಾದ ವಿಕಾರಗಳೊಂದಕ್ಕೂ ಈ ಡಾಗದ ನಿತ್ಯಾನಂದಸ್ವರೂಪನಾದ ಪರಮಾತ್ಮನನ್ನು ಆದೇಪಿಥವಾದ ಆನಂದದೊಡನೆ ಬಂದುಸೇರುವನು ಎಲ್ಲೆ ಪರೀಕ್ಷಿದ್ರಾಜನೆ! ನಾನು ಹೇಳಿದ ಈ ಅರ್ಚಿರಾದಿಮಾರ್ಗವನ್ನು ಪರಮಭಾಗವತೋತ್ತಮರೆಲ್ಲರೂ ಅತ್ಯಾದರದಿಂದ ಅನುಸರಿಸುವರು. ಈ ಮಾರ್ಗವನ್ನು ಹಿಡಿದು ಮುಕ್ತಿಹೊಂದಿದವನು ಪುನರ್ಜನ್ಮವಿಲ್ಲದೆ ಪರಮಾನಂದವನ್ನನುಭವಿಸುತ್ತಿರುವನೆಂಬುದಕ್ಕೆ ಎಷ್ಟುಮಾತ್ರವೂ ಸಂದೇಹವಿಲ್ಲ. ಎಲ್ಲೆ ರಾಜೇಂದ್ರನೆ! ನೀನು ತಿಳಿಯಬೇಕಾದ ವಿಷಯಗಳೇನೆಂದು ಕೇಳಿದೆಯಲ್ಲವೆ ? ಇದೇ ನೀನು ಕೇಳಿ ತಿಳಿಯಬೇಕಾದ ಮುಖ್ಯವಿಷಯವು! ಅದನ್ನೇ ನಾನೂ ನಿನಗೆ ತಿಳಿಸಿರುವೆನು. ಧೂಮಾದಿಗತಿಯೆಂದೂ, ಅರ್ಚಿರಾದಿಗತಿಯೆಂದೂ ಹೇಳಲ್ಪಡುವ ಈ ಮಾರ್ಗಗಳೆರಡೂ ವೇದಗಳಲ್ಲಿ ವಿವರಿಸಲ್ಪಟ್ಟು ಅನಾದಿಯಾಗಿ ಬಂದಿರುವುವು. ಪೂರ್ವದಲ್ಲಿ ಬ್ರಹ್ಮದೇವನಿಂದ ಆರಾಧಿಸಲ್ಪಟ್ಟ ಶ್ರೀವಾಸುದೇವನು, ಆವನಲ್ಲಿ ಪ್ರಸನ್ನನಾಗಿ, ಈ ವಿವರಗಳೆಲ್ಲವನ್ನೂ ತಿಳಿಸಿದನು. ಸಂಸಾರಿಗಳಿಗೆ ಅರ್ಚಿರಾದಿಮಾರ್ಗಕ್ಕಿಂತಲೂ ಉತ್ತಮವಾದ ಮಾರ್ಗವಿಲ್ಲ. ಇದರ ಸ್ವರೂಪವನ್ನು ನೆನೆಸಿಕೊಂಡಾಗಲೇ ವಾಸುದೇವನಲ್ಲಿ ಭಕ್ತಿಯು ಜನಿಸುವುದು. ಇದಲ್ಲದೆ ಬ್ರಹ್ಮ

ದೇವನು ವೇದಗಳೆಲ್ಲವನ್ನೂ ಮೂರಾವರ್ತಿ ಮಗುಚಿನೋಡಿ, ಕೊನೆಗೆ ಮೋಕ್ಷವನ್ನು ಪಡೆಯುವುದಕ್ಕೆ ಭಕ್ತಿಗಿಂತಲೂ ಸುಲಭವಾದ ಬೇರೆ ಉಪಾಯವಿಲ್ಲವೆಂದು ನಿರ್ಧರಿಸಿರುವನು. ಈ ಭಕ್ತಿಮಾರ್ಗವನ್ನು ಹಿಡಿಯುವುದರಿಂದ ವಾಸುದೇವನೆಂಬ ವಿಕಾರಶೂನ್ಯನಾದ ಪರಬ್ರಹ್ಮನಲ್ಲಿ ಪೂರ್ಣಾನುರಾಗವು ಹುಟ್ಟದಿರದು. ಆದರೆ ''ಅನುಭವಿಸಿಕಂಡ ವಿಷಯಗಳಲ್ಲಿ ಅನುರಾಗವು ಹುಟ್ಟಬಹುದೇಹೊರತು, ಯಾವಾಗಲೂ ಕಂಡು ಕೇಳದ ಬ್ರಹ್ಮದಲ್ಲಿ ಅನುರಾಗವು ಹುಟ್ಟುವುದು ಹೇಗೆ" ಎಂದು ನೀನು ಶಂಕಿಸಬಹುದು. ಎಲ್ಲೆ ರಾಜನೆ! ಅದಕ್ಕೂ ತಕ್ಕ ಸಮಾಧಾನವನ್ನು ಹೇಳುವೆನು ಕೇಳು! ಶ್ರೀಹರಿಯು ಸರ್ವ ಭೂತಗಳಲ್ಲಿಯೂ ಅಂತರಾತ್ಮನಾಗಿದ್ದು, ಯಾವಾಗಲೂ ಪ್ರಕಾಶಿಸುತ್ತಿರುವನು. ಮಹದಾದಿಕಾರ್ಯಗಳಿಂದಲೂ ತನ್ನ ಶಕ್ತಿಯನ್ನು ಕಾಣಿಸುತ್ತಿರುವನು, ವೇದಗಳಿಂದಲೂ ಅವನ ಗುಣಗಳು ಹೊರಪಡುತ್ತಿರುವುವು. ಹೀಗಿರುವಾಗ ಆ ಭಗವಂತನಲ್ಲಿ ಅನುರಾಗವು ಹುಟ್ಟುವುದೊಂದು ಹೆಚ್ಚೆ! ಎಲ್ಲೆ ರಾಜೇಂದ್ರನೆ! ನಾವು ಸರ್ವವಿಧದಿಂದಲೂ ಅಂತಹ ಭಗವಂತನನ್ನು ಎಡೆಬಿಡದೆ ಧ್ಯಾನಿಸುತ್ತ, ಯಾವಾಗಲೂ ಅತನ ರೂಪವನ್ನೇ ಸ್ಮರಿಸುತ್ತ, ಕ್ಷಣಕ್ಷಣಕ್ಕೂ ಅತನಿಗೆ ನಮಸ್ಕರಿಸುತ್ತ, ಸರ್ವಕಾಲಗಳಲ್ಲಿಯೂ ಅತನ ಕಥೆಗಳನ್ನು ಕೇಳುತ್ತಿರಬೇಕು ಹೀಗೆ ಶ್ರೀಹರಿಕಥಾಮೃತವನ್ನು ಪಾನಮಾಡಿದವರು, ಮಲಿನವಾದ ಈ ದೇಹವನ್ನು ತೊರೆದು, ನಿತ್ಯಾನಂದಮಯವಾದ, ಮತ್ತು ಎಂದಿಗೂ ಸಾವಿಲ್ಲದ ರೂಪವನ್ನು ಹೊಂದಿ, ಶ್ರೀವಾಸುದೇವನ ಪಾದಾರವಿಂದವನ್ನು ಸೇರುವರು. ಇಲ್ಲಿಗೆ ಎರಡನೆಯ ಅಧ್ಯಾಯವು.

ಶುಕನು ಪರೀಕ್ಷಿತ್ತಿಗೆ ಹರಿಭಕ್ತಿಮಾರ್ಗದ ಪ್ರಾಶಸ್ತ್ಯವನ್ನೂ, ಆಹರಿಯೊಬ್ಬನೇ ಮೋಕ್ಷಾದಿ ಸರ್ವಫಲಪ್ರದನೆಂದೂ ತಿಳಿಸಿದುದು.

ತಿರುಗಿ ಶುಕಮುನಿಯು ಪರಿಕ್ಷಿನ್ಮಹಾರಾಜನನ್ನು ಕುರಿತು, ''ಎಲ್ಲೆ ರಾಜನೆ! ಲೋಕದಲ್ಲಿ ಮನುಷ್ಯಜನ್ಮವೇ ದುರ್ಲಭವು. ಅದೃಷ್ಟವಶದಿಂದ ಒಂದುವೇಳೆ ಮನುಷ್ಯನಾಗಿ ಹುಟ್ಟಿದರೂ, ಅವನಲ್ಲಿ ಸರಿಯಾದ ಬುದ್ಧಿಯು

ಳ್ಳವರು ವಿರಳರು. ಮನುಷ್ಯಜನ್ಮದಲ್ಲಿ ಹುಟ್ಟಿ ವಿವೇಕಿಯಾಗಿಯೂ ಇರುವವನು, ಮರಣಕಾಲದಲ್ಲಿ ಮಾಡಬೇಕಾದ ಕಾರ್ಯಗಳೇನೆಂದು ಕೇಳಿದೆಯಷ್ಟೆ? ಇದುವರೆಗೆ ಹೇಳಿದ ವಿಷಯಗಳಿಂದ ಆ ವಿಷಯವನ್ನು ನಿನಗೆ ಹೇಳಿತಿಳಿಸಿದೆನು. ಇನ್ನು ಕಾಮಿಗಳಾಗಿ ಇತರಫಲಗಳನ್ನಪೇಕ್ಷಿಸುವವರು ಬೇರೆ ಯಾವ ದೇವತೆಗಳನ್ನು ಹೇಗೆ ಭಜಿಸಬೇಕೆಂಬುದನ್ನೂ ತಿಳಿಸುವೆನು ಕೇಳು. ಬ್ರಹ್ಮತೇಜಸ್ಸನ್ನಪೇಕ್ಷಿಸುವವನು, ವೇದಗಳಿಗೆ ಪತಿಯಾದ ಬ್ರಹ್ಮದೇವನನ್ನು ಉಪಾಸಿಸಿಮಾಡಬೇಕು ಹಾಗೆಯೇ ಇಂದ್ರಿಯಬಲವನ್ನಪೇಕ್ಷಿಸುವವನು ಇಂದ್ರನನ್ನೂ, ಸಂತಾನಾಪೇಕ್ಷೆಯುಳ್ಳವನು ದಕ್ಷನೇ ಮೊದಲಾದ ಪ್ರಜಾಧಿಪತಿಗಳನ್ನೂ, ಶ್ರೀಯನ್ನಪೇಕ್ಷಿಸತಕ್ಕವನು ಅದ್ಭುತಶಕ್ತಿಯುಳ್ಳ ವಿಷ್ಣುಪತ್ನಿಯನ್ನೂ, ತೇಜಸ್ಸನ್ನು ಕೋರುವವನು ಸೂರ್ಯನನ್ನೂ, ಅರ್ಥದಲ್ಲಿ ಆಸೆಯುಳ್ಳವನು ಅಷ್ಟವಸುಗಳನ್ನೂ, ವೀರ್ಯವನ್ನು ಕೋರುವವನು ರುದ್ರದೇವತೆಗಳನ್ನೂ, ಅನ್ನಾಪೇಕ್ಷೆಯುಳ್ಳವನು ಅದಿತಿಯನ್ನೂ, ಸ್ವರ್ಗವನ್ನು ಕೋರುವವನು ಅದಿತಿಪುತ್ರರನ್ನೂ ಭಜಿಸಬೇಕು. ರಾಷ್ಟ್ರವನ್ನು ಕೋರುವವನು ವಿಶ್ವೇದೇವತೆಗಳನ್ನು ಪೂಜಿಸಬೇಕು. ನಾನಾದಿಕ್ಕುಗಳನ್ನು ಸಾಧಿಸಬೇಕೆಂದಪೇಕ್ಷಿಸತಕ್ಕವನು ಸಾಧ್ಯರನ್ನು ಭಜಿಸಬೇಕು. ಮತ್ತು ಆಯುಸ್ಸನ್ನು ಕೋರುವವನು ಅಶ್ವಿನೀದೇವತೆಗಳನ್ನೂ, ದೇಹಪುಷ್ಟಿಯನ್ನಪೇಕ್ಷಿಸತಕ್ಕವನು ಭೂದೇವಿಯನ್ನೂ, ಪ್ರತಿಷ್ಠಾಕಾಂಕ್ಷಿಯಾದವನು ಭೂಮ್ಯಾಕಾಶಗಳನ್ನೂ, ಸೌಂದರ್ಯವನ್ನು ಕೋರುವವನು ಗಂಧರ್ವರನ್ನೂ, ಸ್ತ್ರೀಯರಲ್ಲಿ ಆಸೆಯುಳ್ಳವನು ಊರ್ವಶಿಯೆಂಬ ಅಪ್ಸರಸ್ತ್ರೀಯನ್ನೂ, ಸಮಸ್ತಜನರಮೇಲೆ ಅಧಿಕಾರವನ್ನು ಕೋರುವನು ಪರಮೇಷ್ಠಿಯನ್ನೂ, ಯಶಸ್ಸನ್ನು ಕೋರುವವನು ಯಜ್ಞದೇವನಾದ ವಿಷ್ಣುವನ್ನೂ ಭಜಿಸಬೇಕು. ಹಾಗೆಯೇ ಹಣದಲ್ಲಿ ಆಸೆಯುಳ್ಳವನು ವೈಶ್ರವಣನನ್ನೂ, ವಿದ್ಯೆಯಲ್ಲಿ ಅಭಿಲಾಷೆಯುಳ್ಳವನು ರುದ್ರನನ್ನೂ, ಅನುಕೂಲದಾಂಪತ್ಯವನ್ನು ಕೋರವವನು ಪಾರ್ವತೀದೇವಿಯನ್ನೂ, ಧರ್ಮಾರ್ಥಗಳಲ್ಲಿ ಆಸೆಯುಳ್ಳವನು ಉತ್ತಮಶ್ಲೋಕನಾದ ವಿಷ್ಣುವನ್ನೂ, ಸಂತಾನವೃದ್ಧಿಯಲ್ಲಿ ಆಸೆಯುಳ್ಳವನು ಪಿತೃದೇವತೆಗಳನ್ನೂ, ರಕ್ಷಣೆಯನ್ನು ಕೋರವವನು ಯಕ್ಷರನ್ನೂ, ಬಲವನ್ನಪೇಕ್ಷಿಸತಕ್ಕವನು ಮರುದ್ಗಣಗಳನ್ನೂ, ರಾ

ಜ್ಯವನ್ನು ಕೋರುವವನು ಮನುರೂಪರಾದ ದೇವತೆಗಳನ್ನೂ, ಶತ್ರುಮರಣವನ್ನ ಪೇಕ್ಷಿಸುವವನು ನಿಋತಿಯೆಂಬ ರಾಕ್ಷಸಾಂಶವುಳ್ಳ ದುಷ್ಕಾಲಕನನ್ನೂ, ಯೋಗಾಪೇಕ್ಷೆಯುಳ್ಳವನು ಚಂದ್ರನನ್ನೂ ಭಜಿಸಬೇಕು. ಎಲೈ ರಾಜೇಂದ್ರನೆ! ಈ ಯಾವ ವಿಷಯಗಳಲ್ಲಿಯೂ ಅಪೇಕ್ಷೆಯಿಲ್ಲದೆ ವೈರಾಗ್ಯವೊಂದನ್ನೇ ಅಪೇಕ್ಷಿಸತಕ್ಕವನು ಆ ಪರಮಪುರುಷನೊಬ್ಬನ್ನನೇ ಪೂಜಿಸಬೇಕು. ಕೇವಲ ವಿರಕ್ತಿಮಾರ್ಗದಲ್ಲಿದ್ದವನಾಗಲಿ, ಇತರಫಲಗಳಲ್ಲಿ ಅಪೇಕ್ಷೆಯಿದ್ದವನಾಗಲಿ, ಮೋಕ್ಷದಲ್ಲಿ ಆಸೆಯುಳ್ಳವನಾದರೆ, ಅವಿಚ್ಛಿನ್ನವಾದ ಭಕ್ತಿಯೋಗವನ್ನವಲಂಬಿಸಿ ಪರಮಪುರುಷನನ್ನು ಪೂಜಿಸಬೇಕು. "ಆದರೆ ಹೀಗೆ ಭಜಿಸತಕ್ಕವರಿಗೆ ಮೋಕ್ಷಪ್ರಾಪ್ತಿಯುಂಟಾಗುವ ಕಾಲವಾವುದು?" ಎಂದು ನೀನು ಕೇಳಬಹುದು, ಎಲೈ ರಾಜನೆ! ಈ ಲೋಕದಲ್ಲಿ ಹಾಗೆ ಭಗವಂತನನ್ನು ಭಜಿಸುತ್ತಿರುವವರಿಗೆ ಭಗವದ್ಭಕ್ತರ ಸಹವಾಸವು ಲಭಿಸಿದಕೂಡಲೆ ತಪ್ಪದೆ ಮೋಕ್ಷವು ಕೈಗೂಡುವುದೆಂದು ತಿಳಿ. ಅದು ಹೇಗೆಂದು ಕೇಳುವೆಯಾ ? ಅಂತಹ ಸಜ್ಜನರ ಸಹವಾಸದಿಂದ ಭಗವಂತನಲ್ಲಿ ಮನಸ್ಸು ನಿಶ್ಚಲವಾಗಿ ನಿಲ್ಲುವುದು. ಆ ಮನೋದಾರ್ಢ್ಯವು ಹಟ್ಟಿದೊಡನೆ, ಮುಕ್ತಿಯುಂಟಾಗುವುದು. ಆದುದರಿಂದ ಭಗವಂತನಲ್ಲಿ ನಿಶ್ಚಲವಾದ ಭಕ್ತಿಯನ್ನು ಮೊದಲು ಸಂಪಾದಿಸಬೇಕು. ಎಲೈ ರಾಜನೆ! ಶ್ರೀಮನ್ನಾರಾಯಣನ ಚರಿತ್ರೆಗಳನ್ನು ಕೇಳುತಿದ್ದಪಕ್ಷದಲ್ಲಿ ಸತ್ವರಜಸ್ತಮೋಗುಣಕಾರ್ಯಗಳಾದ ಹಸಿವು, ಬಾಯಾರಿಕೆ ಶೋಕ, ಮೋಹ ಜರಾಮರಣಗಳೊಂದೂ ಸಂಭವಿಸವು. ಮನಸ್ಸು ನಿರ್ಮಲವಾಗುವುದು. ಈ ಲೋಕದಲ್ಲಿಯೂ, ಪರಲೋಕದಲ್ಲಿಯೂ ಶಬ್ದಾದಿವಿಷಯಗಳಲ್ಲಿ ವಿರಕ್ತಿಯು ಹುಟ್ಟುವುದು. ಮೋಕ್ಷಕ್ಕೆ ಪ್ರಧಾನೋಪಾಯವಾದ ಭಕ್ತಿಯೋಗವು ತಾನಾಗಿಯೇ ಲಭಿಸುವುದು. ಹೀಗಿರುವಾಗ ಸುಖಾಭಿಲಾಷಿಯಾದ ಯಾವ ಮನುಷ್ಯನು ತಾನೇ ಹರಿಕಥಾಶ್ರವಣದಲ್ಲಿ ಅನುರಾಗವನ್ನು ಹೊಂದದಿರುವನು?" ಎಂದನು. ಈ ಸಂಗತಿಯನ್ನು ಕೇಳಿ ಶೌನಕನು ಸೂತನನ್ನು ಕುರಿತು, "ಎಲೈ ಮಹಾತ್ಮನೆ! ಶುಕಮುನಿಯು ಹೇಳಿದ ಈ ಮಾತನ್ನು ಕೇಳಿದಮೇಲೆ ಪರೀಕ್ಷಿದ್ರಾಜನು ಮುಂದೆ ಯಾವಪ್ರಶ್ನವನ್ನು ಮಾಡಿದನು? ಅದಕ್ಕೆ ಶುಕನು ಕೊಟ್ಟ ಉತ್ತರವೇನು ? ನಮಗೆ ಅವೆಲ್ಲವನ್ನೂ ಕೇಳಿ

ತಿಳಿಯಬೇಕೆಂಬ ಕುತೂಹಲವು ಬಹಳವಾಗಿರುವುದು. ಆದುದರಿಂದ ಅವೆಲ್ಲ ವನ್ನೂ ನನಗೆ ವಿವರವಾಗಿ ತಿಳಿಸಬೇಕು. ಅವರ ಪ್ರಶ್ನೋತ್ತರಗಳೆಲ್ಲವೂ ಕೇವಲ ಹರಿಕಥಾಪ್ರಚುರವಾಗಿಯೇ ಇರುವುದು. ಅವರಿಬ್ಬರೂ ಪರಮಭಾಗವತೋತ್ತಮರು. ಆ ಪರೀಕ್ಷಿನ್ಮಹಾರಾಜನು ಬಾಲ್ಯದಲ್ಲಿ ಸಣ್ಣ ಮಕ್ಕಳೊಡನೆ ಆಡುತ್ತಿರುವಕಾಲದಲ್ಲಿಯೂಕೂಡ, ಕೃಷ್ಣನ ಕ್ರೀಡೆಗಳನ್ನೇ ಅನುಸರಿಸುತ್ತಿದ್ದನೇಹೊರತು, ಬೇರೆ ಮಾರ್ಗಕ್ಕೆ ಹೋಗುತ್ತಿರಲಿಲ್ಲ. ಅಂತಹ ಪರಮಭಾಗವತನಾದ ಪರೀಕ್ಷಿತ್ತಿಗೂ, ಶ್ರೀಹರಿಪರಾಯಣನಾದ ಶುಕಮುನಿಗೂ ನಡೆದ ಸಂವಾದವು ಶ್ರೀ ಕೃಷ್ಣಚರಿತ್ರೆಗಳನ್ನು ಬಿಟ್ಟು ಬೇರೊಂದರಲ್ಲಿ ಪ್ರವರ್ತಿಸಲಾರವು. ಆ ಕಥೆಗಳನ್ನು ಕೇಳುತ್ತಿರುವುದಕ್ಕಿಂತಲೂ ನನಗೆ ಬೇರೆ ಲಾಭವೇನುಂಟು ? ಎಲೈ ಸೂತನೆ ! ಸೂರ್ಯನು ತಾನು ಆಕಾಶದಲ್ಲಿ ಹುಟ್ಟಿ ಮುಳುಗುವಹಾಗೆಲ್ಲಾ ಜನಗಳ ಆಯುರ್ದಾಯವನ್ನು ಅಪಹರಿಸಿಕೊಂಡು ಹೋಗುತ್ತಿರುವನು. ಇಂತಹ ಸಂದರ್ಭದಲ್ಲಿ ಉತ್ತಮಶ್ಲೋಕನಾದ ಶ್ರೀಮನ್ನಾರಾಯಣನ ಕಥೆಗಳನ್ನು ಕೇಳುವುದರಿಂದ ನಾವು ಕಳೆಯತಕ್ಕ ಕಾಲವನ್ನು ಮಾತ್ರ ಆತನು ಸಾರ್ಥಕವಾಗಿ ಮಾಡಲಾರನು. ಕ್ಷಣಕ್ಷಣಕ್ಕೂ ಮನುಷ್ಯರ ಆಯುಸ್ಸು ಕಳೆದುಹೋಗುತ್ತಿದ್ದರೂ, ಅದರಲ್ಲಿ ಭವದ್ಭಗವಾನುಭವದಿಂದ ಕಳೆದ ಕಾಲವುಮಾತ್ರ ಸಾರ್ಥಕವೆನಿಸುವುದು. ಈ ಕಾಲವೊಂದನ್ನು ಮಾತ್ರ ಸೂರ್ಯಗತಿಯಿಂದಲೂ ಕಳೆದು ಹೋಗದಂತೆಯೇ ಎಣಿಸಬಹುದು. ಆದರೆ ನಮ್ಮ ಆಯುರ್ದಾಯಕ್ಕೆ ಈ ಲೋಕದಲ್ಲಿ ಬದುಕಿರುವುದೇ ಒಂದು ಫಲವಾಗಬಾರದೆ ? " ಎಂದು ಕೆಲವರು ಭಾವಿಸಬಹುದು ಈ ವಿಧದಿಂದ ಬದುಕಿದಮಾತ್ರಕ್ಕೆ ಫಲವೇನು ? ಲೋಕದಲ್ಲಿ ಎಷ್ಟೋ ವೃಕ್ಷಗಳೂ ಬದುಕಿರುವುವಲ್ಲವೆ ? ಆದರೆ ..ಅವುಗಳಿಗೆ ಶ್ವಾಸೋಚ್ಛ್ವಾಸಗಳೆಲ್ಲಿ? ನಮ್ಮಹಾಗೆ ಅವುಗಳಿಗೆ ಉಸಿರಾಡುವುದಿಲ್ಲವಷ್ಟೆ ? " ಎಂದು ಆಕ್ಷೇಪಿಸಬಹುದು. ಉಸಿರಾಡಿದಮಾತ್ರಕ್ಕೇನು ? ಕಮ್ಮಾರರ ಕೈಯಲ್ಲಿರುವ ತಿತ್ತಿಗಳೂಕೂಡ ಎಡೆಬಿಡದೆ ಉಸಿರಾಡಿಸುತ್ತಿರುವುವು. ಆದಮಾತ್ರಕ್ಕೆ ಫಲವೇನು ? ಅದರಂತೆಯೇ ಅಲ್ಲಲ್ಲಿ ಗ್ರಾಮಗಳಲ್ಲಿರುವ ನಾಲ್ಕು ಕಾಲಿನ ಜಂತುಗಳೆಲ್ಲವೂ ಆಹಾರಮೈಥುನಗಳನ್ನು ನಡಿಸುವುದಿಲ್ಲವೆ?ಇವೆಲ್ಲವನ್ನೂ ನಡೆಸಿದಮಾತ್ರಕ್ಕೆ ಫಲವೇನಾಯಿತು?

ಎಲೈ ಮಹಾತ್ಮನೆ! ಇನ್ನು ಹೆಚ್ಚುಮಾತಿನಿಂದೇನು. ಯಾವನ ಕಿವಿಯಲ್ಲಿ ಒಂದಾವರ್ತಿಯಾದರೂ ಭಗವನ್ನಾಮವು ಬಿಳುವುದಿಲ್ಲವೋ ,ಆ ಮನುಷ್ಯನು ನಾಯಿಗಳಿಗೂ, ಊರುಹಂದಿಗಳಿಗೂ, ಒಂಟೆಗಳಿಗೂ, ಕತ್ತೆಗಳಿಗೂ, ಸಮ ನೆಂಬಣಿಸಲ್ಪಡುವ ಕೇವಲಮೃಗಪ್ರಾಯನೇಹೊರತು ಬೇರೆಯಲ್ಲ. ತ್ರಿವಿ ಕ್ರಮಾವತಾರವನ್ನೆತ್ತಿ, ಸಮಸ್ತಲೋಕಗಳನ್ನೂ ತನ್ನ ಪಾದಸ್ಪರ್ಶದಿಂದ ಪವಿತ್ರವಾಗಿ ಮಾಡಿದ ಭಗವಂತನ ಚರಿತ್ರೆಗಳನ್ನು ಕೇಳದ ಕಿವಿಗಳು ಹಾಳು ಬಿದ್ದ ಗವಿಗಳೇ ಹೊರತು ಕಿವಿಗಳಲ್ಲ! ಯಾವನ ನಾಲಗೆಯು ಭಗವತಕ್ಕಥೆಗ ಳನ್ನು ಒಂದಾವರ್ತಿಯಾದರೂ ಗಾನಮಾಡುವುದಿಲ್ಲವೋ, ಅಂತವನ ನಾಲ ಗೆಯು,ಹಾಳುಬಾವಿಯಲ್ಲಿಬಿದ್ದು ಆರಚುತ್ತಿರುವ ಕಪ್ಪೆಗಳನಾಲಗೆಯಂತೆಯೇ ಹೊರತು ಬೇರೆಯಲ್ಲ. ಅಂತವನಿಗೆ ನಾಲಗೆಯಿಲ್ಲದಿದ್ದರೂ ಇಲ್ಲದಂತೆಯೇ ಎಣಿ ಸಬಹುದು. ಭೋಗವೋಕ್ಷಪ್ರದನಾದ ಭಗವಂತನ ಪಾದಗಳಿಗೆ ಒಂದಾವ ರ್ತಿಯಾದರೂ ಭಕ್ತಿಯಿಂದ ಬಗ್ಗದ ತಲೆಯು, ಎಷ್ಟೇ ಅಮೂಲ್ಯವಾದ ಪಟ್ಟುವಸ್ತ್ರಗಳಿಂದಲೂ, ರಾಜಕಿರೀಟಗಳಿಂದಲೂ ಶೋಭಿತವಾಗಿದ್ದರೂ ಮೈಗೆ ಅದೊಂದು ಭಾರವೇಹೊರತು ಬೇರೆಯಲ್ಲ. ತ್ರೀಹರಿಯ ಪಾದಪೂಜೆ ಗಳನ್ನು ಮಾಡದ ಕೈಗಳು ಎಷ್ಟೇ ಸುವರ್ಣಕಟಕಗಳಿಂದ ಶೋಭಿಸುತ್ತಿದ್ದ ರೂ,ಅವುಗಳು ಹೆಣದ ಕೈಗಳಂತಲ್ಲದೆ ಬೇರೆಯಲ್ಲ. ತ್ರೀಮಹಾವಿಷ್ಣುವಿನ ದಿ ವ್ಯಮಂಗಳವಿಗ್ರಹಗಳನ್ನು ನೋಡಿ ಆನಂದವನ್ನನುಭವಿಸದ ಕಣ್ಣುಗಳು ನವಿಲುಕಣ್ಣುಗಳೇಹೊರತು ಬೇರೆಯಲ್ಲ. ವಿಷ್ಣುಕ್ಷೇತ್ರಗಳಿಗೆ ಯಾತ್ರಾರ್ಥ ವಾಗಿ ಹೋಗದ ಮನುಷ್ಯರ ಪಾದಗಳು, ಮರದಕಾಲುಗಳಲ್ಲದೆ ಬೇರೆಯಲ್ಲ. ಮತ್ತು ಯಾವನು ಭಗವದ್ಭಕ್ತರ ಪಾದತೂಳಿಯಲ್ಲಿ ಅಭಿಲಾಷೆಯಿಲ್ಲದಿರು ವನೋ,ಯಾವನು ತ್ರೀಹರಿಯ ಪಾದಸಂಬಂಧವುಳ್ಳ ತುಳಸೀದಳದ ಸುಗಂ ಧವನ್ನು ಒಂದಾವರ್ತಿಯಾದರೂ ಆಘ್ರಾಣಿಸಿ ತಿಳಿದಿಲ್ಲವೋ ಅಂತವನನ್ನು ಜೀವಚ್ಛವವೆಂದೇಭಾವಿಸಬೇಕು. ಭಗವಂತನನಾಮಗಳನ್ನು ಕೇಳುವಾಗಲೂ ಹೇಳುವಾಗಲೂ, ಯಾವನಿಗೆ ಅದರಿಂದುಂಟಾದ ರಸಾನುಭವದಿಂದ ಕಣ್ಣು ಗಳಲ್ಲಿ ಆನಂದಬಾಷ್ಪವೂ,ಮುಖದಲ್ಲಿ ವಿಕಾಸವೂ,ದೇಹದಲ್ಲಿ ರೋಮಾಂಚ ವೂ, ಉಂಟಾಗುವುದಿಲ್ಲವೋ,ಅವನ ಹೃದಯವು ಉಕ್ಕಿನಿಂದ ನಿರ್ಮಿತವಾ

ದಂತೆಯೇ ತಿಳಿಯಬೇಕು. ಎಲೈ ಸೂತನೆ! ಅದುದರಿಂದ ಆತ್ಮವಿದ್ಯಾನಿಪುಣನಾದ ಶುಕಮುನಿಯು,ಪರೀಕ್ಷಿದ್ರಾಜನಿಗೆ ಮುಂದೆ ಯಾವ ವಿಷಯವನ್ನು ತಿಳಿಸಿದನೋ,ಅದನ್ನು ನೀನೂ ನಮಗೆ ವಿಸ್ತರಿಸಿ ತಿಳಿಸಬೇಕು. ಎಂದು ಪ್ರಾರ್ಥಿಸಿದರು. ಇಲ್ಲಿಗೆ ಮೂರನೆಯ ಅಧ್ಯಾಯವು.

ಪರೀಕ್ಷಿದ್ರಾಜನು ಶುಕಮುನಿಪುಂಗವನ್ನು ಕುರಿತು ಲೋಕಸೃಷ್ಟಿಯ ಕ್ರಮವನ್ನು ಕೇಳಿದುದು.

ಶೌನಕಾದಿಗಳ ವಾಕ್ಯವನ್ನು ಕೇಳಿ ಸೂತಪೌರಾಣಿಕನು ಅವರನ್ನು ಕುರಿತು, ‘‘ಎಲೈ ಮಹರ್ಷಿಗಳೇ ಕೇಳಿರಿ! ಹೀಗೆ ವ್ಯಾಸಪುತ್ರನಾದ ಶುಕಮುನಿಯು ಆತ್ಮತತ್ವವನ್ನು ಉಪದೇಶಿಸಿದನೆಂಬೆ, ಪರೀಕ್ಷಿದ್ರಾಜನು ಬುದ್ಧಿಯಲ್ಲಿ ತಿಳಿವುಹೊಂದಿ, ಆಗಲೇ ತನ್ನ ದೇಹದಲ್ಲಿಯೂ, ಗೃಹದಲ್ಲಿಯೂ, ಧನದಲ್ಲಿಯೂ, ಪಶುಗಳಲ್ಲಿಯೂ, ಪುತ್ರೀಪುತ್ರಾದಿಗಳಲ್ಲಿಯೂ, ಬಂಧುಗಳಲ್ಲಿಯೂ,ನಿರುಪದ್ರವವಾದ ರಾಜ್ಯದಲ್ಲಿಯೂ,ತನ್ನ ದೆಂಬ ಅಭಿಮಾನವನ್ನು ಬಿಟ್ಟು,ಕೃಷ್ಣಕಥಾಶ್ರವಣವೊಂದರಲ್ಲಿಯೇ ಆಸಕ್ತಿಯುಳ್ಳವನಾಗಿದ್ದನು. ತನಗೆ ಮರಣವು ಸಮೀಪಿಸಿರುವುದನ್ನು ತಿಳಿದಾಗಲೇ, ಧರ್ಮಾರ್ಥಕಾಮಗಳನ್ನು ಕೈಗೂಡಿಸ ತಕ್ಕಕರ್ಮಗಳೆಲ್ಲವನ್ನೂ ತ್ಯಜಿಸಿ,ಭಗವಂತನಾದ ವಾಸುದೇವನೊಬ್ಬನಲ್ಲಿಯೇ ತನ್ನ ಆತ್ಮವೂ, ತನ್ನ ಮನಸ್ಸೂ ದೃಢವಾಗಿ ನೆಲಸುವಂತೆ, ಬುದ್ಧಿಯನ್ನು ದೃಢಪಡಿಸಿಕೊಂಡನು. ಹೀಗೆ ಮನೋವಾಕ್ಯವೂ ಆದಮೇಲೆ ಆ ಪರೀಕ್ಷಿದ್ರಾಜನೂಕೂಡ ಈಗ ನೀವು ನನ್ನನ್ನು ಪ್ರಶ್ನೆಮಾಡಿದಂತೆಯೇ ಶುಕಮುನಿಯನ್ನು ಕುರಿತು ಪ್ರಶ್ನೆಮಾಡಿದನು. ಅದನ್ನು ಹೇಳುವೆನು ಕೇಳಿರಿ. ‘‘ಓ ಬ್ರಾಹ್ಮಣೋತ್ತಮಾ! ನೀವು ಹೇಳಿದ ಮಾತುಗಳು ಯಕ್ತವಾಗಿಯೇ ಇರುವುವು. ತಾವು ಹೇಳುತ್ತಿರುವ ಹರಿಕಥೆಗಳನ್ನು ಕೇಳುತ್ತಿರುವುದರಿಂದ,ನನ್ನ ಅವಿವೇಕಗಳೆಲ್ಲವೂ ನೀಗಿದುವು. ಭಗವಂತನಾದ ವಾಸುದೇವನು ತನ್ನ ಮಾಯೆಯಿಂದ ಲೋಕಗಳನ್ನು ಹೇಗೆ ಸೃಷ್ಟಿಸಿದನೋ, ಬ್ರಹ್ಮಾದಿದೇವತೆಗಳಿಂದಲೂ ಊಹಿಸುವುದಕ್ಕೆ ಶಕ್ಯವಲ್ಲದ ಈಪ್ರಪಂಚವನ್ನು ಭಗವಂತನು ಯಾವ ಶಕ್ತಿಯನ್ನವಲಂಬಿಸಿ ರಕ್ಷಿಸುತ್ತಿರುವನೋ,ಪ್ರಳಯಕಾಲದಲ್ಲಿ

ಯಾವಯಾವ ಶಕ್ತಿಗಳಿಂದ ಸಂಹರಿಸುವನೋ, ಆ ಸಂಗತಿಗಳೆಲ್ಲವನ್ನೂ ನಿನ್ನಿಂದ ಕೇಳಿ ತಿಳಿಯಬೇಕೆಂಬ ಕುತೂಹಲವುಂಟಾಗಿರುವುದು. ಆಶ್ರೀಹರಿಯ ಚರಿತ್ರವೊಂದೊಂದೂ ಆತ್ಯಾಶ್ಚರ್ಯವನ್ನುಂಟುಮಾಡುತ್ತಿರುವುದು. ಆಭಗವಂತನು ಭೂಮಿಯಲ್ಲಿ ತನ್ನ ಲೀಲೆಗಳನ್ನು ನಡೆಸುವುದಕ್ಕಾಗಿ ಯಾವಯಾವ ಶಕ್ತಿಗಳನ್ನು ಹಿಡಿದು, ಯಾವಯಾವ ಅವತಾರಗಳನ್ನು ಯಾವರೀತಿಯಿಂದ ನಿರ್ವಹಿಸಿರುವನೋ ಅವೆಲ್ಲವನ್ನೂ ತಿಳಿಸಿ, ನನಗೆ ಕರ್ಣಾನಂದವನ್ನುಂಟುಮಾಡಬೇಕು. ಆಭಗವಂತನು ತಾನೊಬ್ಬನೇ ಆಗಿದ್ದರೂ ಅನೇಕಾವತಾರಗಳನ್ನೆತ್ತಿ ಅನೇಕಕಾರ್ಯಗಳನ್ನು ನಡೆಸುತ್ತ ಬರುವನಷ್ಟೆ? ಭಗವಂತನು ಹೀಗೆ ನಡೆಸುವುದಕ್ಕಾಗಿ ಸತ್ವರಜಸ್ತಮೋಗುಣಗಳು ಮೂರನ್ನೂ ಒಂದಾಗಿಯೇ ತನ್ನಲ್ಲಿಟ್ಟುಕೊಂಡು ನಡೆಸುತ್ತಿರುವನೋ, ಅಥವಾ, ಆ ಗುಣಗಳಲ್ಲಿ ಕ್ರಮವಾಗಿ ಒಂದಾದಮೇಲೆ ಮತ್ತೊಂದನ್ನು ಅವಲಂಬಿಸಿ ಆಯಾಗುಣಕ್ಕನುಸಾರವಾದ ಕಾರ್ಯವನ್ನು ನಡೆಸುವನೋ, ಇದರ ತತ್ವವನ್ನು ನನಗೆ ತಿಳಿಸಬೇಕು. ಎಲೈ ಶುಕಮುನೀಂದ್ರನೆ! ಈ ನನ್ನ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಕೊಡಬೇಕಾದರೆ ನೀನೇ ಸಮರ್ಥನು. ವೇದಾರ್ಥಗಳು ನಿನಗೆ ತಿಳಿದಂತೆ ಮತ್ತೊಬ್ಬರಿಗೆ ತಿಳಿಯವು. ತತ್ವಜ್ಞಾನಿಗಳಲ್ಲಿಯೂ ಕೂಡ ನೀನೇ ಅಗ್ರಗಣ್ಯನು. ಹೀಗೆ ಉಭಯವಿಧದಲ್ಲಿಯೂ, ಪರಿಪೂರ್ಣಜ್ಞಾನವುಳ್ಳ ನಿನಗಿಂತಲೂ ಲೋಕದಲ್ಲಿ ಮೇಲೆನಿಸಿದವರಾರುಂಟು? ಆದುದರಿಂದ ನನ್ನಲ್ಲಿ ದಯೆಯಿಟ್ಟು ನನ್ನ ಮನಸ್ಸಂಶಯವು ನೀಗುವಂತೆ ಮಾಡಬೇಕು" ಎಂದು ಪ್ರಾರ್ಥಿಸಿದನು. ರಾಜನ ಪ್ರಾರ್ಥನೆಯನ್ನು ಕೇಳಿ ಶುಕಮುನಿಯು ಸಂತೋಷಗೊಂಡು, ಆತನ ಪ್ರಶ್ನೆಗಳಿಗೆ ಸದುತ್ತರವನ್ನು ಕೊಡಬೇಕೆಂದು ನಿಶ್ಚಯಿಸಿ, ಮೊದಲು ಈ ವಿಧವಾಗಿ ತನ್ನ ಮನಸ್ಸಿನಲ್ಲಿ ಶ್ರೀಹರಿಯನ್ನು ಧ್ಯಾನಮಾಡಿ ನಮಸ್ಕರಿಸುವನು. ''ಎಲೈ ದೇವದೇವನೆ! ನೀನು ಪ್ರಕೃತಿಗಿಂತಲೂ, ಜೀವನಿಗಿಂತಲೂ ಪರನು. ಆದುದರಿಂದಲೇ ನೀನು ಸ್ವರೂಪದಿಂದಲೂ, ಗುಣಗಳಿಂದಲೂ, ಪ್ರಪಂಚದ ಒಳಹೊರಭಾಗಗಳೆಲ್ಲವನ್ನೂ ವ್ಯಾಪಿಸಿ ವರ್ತಿಸತಕ್ಕವನು. ಲೋಕದ ಸೃಷ್ಟಿಸ್ಥಿತಿಸಂಹಾರವೆಂಬ ಈಮೂರುಕಾರ್ಯಗಳೂ ನಿನಗೆ ಲೀಲೆಗಳಾಗಿರುವುವು. ಆಲೀಲೆಗಳಿಂದಲೇ ನೀನು ಬ್ರಹ್ಮನೆಂದೂ, ನಿಜಾವತಾರವಾದ ವಿಷ್ಣುವೆಂದೂ, ರುದ್ರನೆಂ

ದೂ ಮೂರ್ತಿಭೇದವನ್ನು ಹೊಂದಿ,ಶಕ್ತಿತ್ರಯವನ್ನು ತೋರಿಸುವೆ. ಸಮಸ್ತ ಪ್ರಪಂಚದಲ್ಲಿಯೂ ಅಂತರ್ಯಾಮಿಯಾಗಿ ವರ್ತಿಸುವೆ. ನಿನ್ನ ಸ್ವರೂಪಾದಿಗಳೆಲ್ಲವೂ ಭಗವದುಪಾಸನಾರೂಪವಾದ ಜ್ಞಾನವೊಂದಕ್ಕೆ ಪ್ರತ್ಯಕ್ಷವಾಗುವುದೇಹೊರತು ಬೇರೆವಿಧದಲ್ಲಿ ಪ್ರತ್ಯಕ್ಷವಾಗಲಾರದು. ಅಂತಹ ವಿಲಕ್ಷಣ ಸ್ವರೂಪನಾದ ನಿನಗೆ ವಂದನೆಗಳನ್ನರ್ಪಿಸುವೆನು. ಓ ಮಹಾತ್ಮಾ ! ನೀನು ಸಜ್ಜನರ ಪಾಪಗಳನ್ನು ನೀಗಿಸತಕ್ಕವನು. ದುರ್ಜನರನ್ನು ಶಿಕ್ಷಿಸತಕ್ಕವನು. ಶುದ್ಧಸತ್ವಮಯವಾದ ದೇಹವುಳ್ಳವನು. ಪರಮಹಂಸಾಶ್ರಮದಲ್ಲಿದ್ದು ಆ ಆಶ್ರಮಕ್ಕನುಗುಣವಾದ ಕರ್ಮಗಳನ್ನನುಷ್ಠಿಸುವುದರಲ್ಲಿ ಆಸಕ್ತಿಯುಳ್ಳವರಿಗೆ ಇಷ್ಟಾರ್ಥಗಳನ್ನು ಕೊಡುವವನು. ಅಂತಹ ನಿನಗೆ ನಮಸ್ಕಾರವು ದೇವಾ ! ಆಶ್ರಿತವಾತ್ಸಲ್ಯದಿಂದಲೇ ನೀನು ಯಾದವಕುಲದಲ್ಲಿ ಹುಟ್ಟಿದೆ ! ನಿನ್ನ ಸ್ವರೂಪವು ಯೋಗಿಗಳಿಗೂ ದುರ್ಲಭವಾದುದು. ಎಣೆಯಿಲ್ಲದ, ಮತ್ತು ದಿವ್ಯವಾದ ತೇಜೋವಿಶೇಷದಿಂದ ನಿನ್ನ ಮಹಿಮೆಯಲ್ಲೆಯೇ ನೀನು ರಮಿಸುತ್ತಿರುವೆ. ಎಲೈ ಭಗವಂತನೆ! ನಿನ್ನನ್ನು ಸ್ತುತಿಸಿದರೂ, ನಿನ್ನನ್ನು ಧ್ಯಾನಿಸಿದರೂ, ನಿನ್ನ ಪೂಜನವನ್ನು ಮಾಡಿದರೂ, ನಿನ್ನ ಪಾದಗಳಿಗೆ ನಮಸ್ಕರಿಸಿದರೂ, ನಿನ್ನ ಕಥೆಗಳನ್ನು ಕೇಳಿದರೂ, ನಿನ್ನನ್ನು ಪೂಜಿಸಿದರೂ ಮನುಷ್ಯರ ಪಾಪಗಳೆಲ್ಲವೂ ಆ ಕ್ಷಣದಲ್ಲಿಯೇ ನಶಿಸುವುವು. ಅಂತಹ ಮಂಗಳಮೂರ್ತಿಯಾದ ನಿನಗೆ ನಮಸ್ಕಾರವು!ಜ್ಞಾನಿಗಳೆಲ್ಲರೂ ಯಾವ ನಿನ್ನ ಪಾದಾರವಿಂದವನ್ನು ನಂಬಿ, ಇಹಪರಲೋಕಸುಖಗಳಿಗೂ ಮನಸ್ಸುಕೊಡದೆ, ಸಂಸಾರತಾಪತ್ರಯಗಳನ್ನು ತೊಲಗಿಸಿಕೊಂಡು,ಪರಮಪದವನ್ನು ಹೊಂದುವರೋ ಅಂತಹ ದಿವ್ಯಮಂಗಳಮೂರ್ತಿಯಾದ ನಿನಗೆ ನಮಸ್ಕಾರವು. ಎಲೈ ದೇವದೇವನೆ!ದೇಹವನ್ನು ಬಳಲಿಸಿ ಚಾಂದ್ರಾಯಣಾದಿವ್ರತಗಳನ್ನು ನಡೆಸುವವರಾಗಲಿ, ವಿಶೇಷದಾನತೀರ್ಥರಾಗಲಿ, ಶೌರ್ಯಾದಾರ್ಯಾದಿಗಳಿಂದ ವಿಶೇಷಕೀರ್ತಿಯನ್ನು ಸಂಪಾದಿಸಿದವರಾಗಲಿ, ಮಂತ್ರಾರ್ಥಗಳನ್ನನುಸರಿಸಿ ಕರ್ಮಗಳನ್ನು ನಡೆಸುವವರಾಗಲಿ, ಸದಾಚಾರಪರರಾಗಲಿ, ತಾವು ನಡೆಸುವ ಆಯಾ ಸತ್ಕಾರ್ಯಗಳನ್ನು !ನಿನ್ನಲ್ಲಿಯೇ ಅರ್ಪಿತವನ್ನಾಗಿ ಮಾಡದಿದ್ದರೆ, ಅವರ ತಪಸ್ಸು ಮೊದಲಾದ ಸತ್ಕಾರ್ಯಗಳೊಂದಕ್ಕೂ ಉತ್ತಮಫಲವನು ಹೊಂದ

ಲಾರರು. ಆದುದರಿಂದ ಈ ತಪಸ್ಸು ಮೊದಲಾದುವುಗಳನ್ನು ಭಕ್ತಿಯೋಗಕ್ಕೆ ಅಂಗವಾಗಿ ನಡೆಸಿದಪಕ್ಷದಲ್ಲಿ, ನಿರತಿಶಯವಾದ ಫಲವನ್ನು ಹೊಂದುವರು. ಅಂತಹ ಭಕ್ತಿವಿಷಯನಾದ ನಿನಗೆ ನಮಸ್ಕಾರವು. ಕಿರಾತರಾಗಲಿ, ಶಕಯವನಾದಿಗಳಾಗಲಿ, ಆಂಧ್ರದೇಶದ ನಿಕೃಷ್ಟಜಾತಿಯವರಾಗಲಿ, ಬೇಡರಾಗಲಿ, ಚಂಡಾಲರೇ ಮೊದಲಾದವರಾಗಲಿ, ತುರುಷ್ಕರಾಗಲಿ, ಇನ್ನೂ ಎಷ್ಟೇನೀಚಕುಲದಲ್ಲಿ ಹುಟ್ಟಿದವರಾದರೂ, ಎಷ್ಟೇ ಪಾಪಾತ್ಮರಾಗಿದ್ದರೂ ನಿನ್ನನ್ನಾಶ್ರಯಿಸುವುದರಿಂದ ತಮ್ಮ ಪಾಪಗಳನ್ನು ನೀಗಿ ಶುದ್ಧರಾಗುವರು ಅಂತಹ ಮಹಾಮಹಿಮೆಯುಳ್ಳ ನಿನಗೆ ನಮಸ್ಕಾರವು. ಎಲೈ ಮಹಾಪುರುಷನೆ! ಭಕ್ತಿಯೋಗನಿಷ್ಠರಾದವರೆಲ್ಲರಿಗೂ ನೀನೇ ಅಧಿಪತಿಯು. ವೇದದ ಪೂರ್ವಭಾಗದಲ್ಲಿ ಹೇಳಿರುವ ಸಮಸ್ತ ಕರ್ಮಗಳಿಂದಲೂ ಆರಾಧಿಸಲ್ಪಡತಕ್ಕವನು ನೀನಲ್ಲದೆ ಬೇರೆಯಲ್ಲ. ಅದಕ್ಕೆ ಫಲವನ್ನು ಕೊಡತಕ್ಕವನೂ ನೀನೇ ಹೊರತು ಬೇರೆ ದೇವತೆಗಳಲ್ಲ. ಮತ್ತು ಶ್ರುತಿಗಳಲ್ಲಿ ಹೇಳಲ್ಪಟ್ಟ ದಾನ ಧರ್ಮಾದಿಗಳಿಂದಲೂ ನೀನೇ ಆರಾಧಿತನಾಗಿ ಅದಕ್ಕೆ ತಕ್ಕ ಫಲವನ್ನು ಕೊಡುತ್ತಿರುವೆ, ಉಪನಿಷದ್ಭಾಗಗಳಲ್ಲಿ ಹೇಳಲ್ಪಡುವ ಉಪಾಸನಾತ್ಮಕವಾ ಜ್ಞಾನಕ್ಕೂ ನೀನೇ ವೇದ್ಯನಾಗಿ. ಅದರ ಫಲಗಳನ್ನು ಕೊಡತಕ್ಕವನು. ನೀನು ದೋಷರಹಿತರಾದ ಬ್ರಹ್ಮರುದ್ರಾದಿಗಳಿಗೂ ಅಗೋಚರವಾದ ಚಿಹ್ನಗಳುಳ್ಳವನು, ಇಂತಹ ಸರ್ವೋತ್ತಮಗುಣವಿಶಿಷ್ಟನಾದ ನೀನು ನನ್ನಲ್ಲಿ ಪ್ರಸನ್ನನಾಗಬೇಕು. ಎಲೈ ದೇವನೆ! ನೀನು ಸಾಕ್ಷಾಲ್ಲಕ್ಷ್ಮೀದೇವಿಗೂ ಅಧಿಪತಿಯು, ನೀನೇ ಸಮಸ್ತಯಜ್ಞಗಳಿಗೂ ಫಲವನ್ನು ಕೊಡತಕ್ಕವನು, ನೀನೇ ಸಮಸ್ತಪ್ರಪಂಚಗಳನ್ನೂ ಸೃಷ್ಟಿಸತಕ್ಕವನು, ಮತ್ತು ಸಮಸ್ತಪ್ರಜೆಗಳಿಗೂ ನೀನೇ ಅಧಿಪತಿಯು. ಬುದ್ಧಿಗೂ ನೀನೇ ಅಧಿಪತಿಯು, ಭೂಮಂಡಲಕ್ಕೂ ನೀನೇ ಅಧಿಪತಿಯು, ಯಾದವಕುಲಕ್ಕೂ ನೀನೇ ಅಧಿಪತಿಯು, ನೀನೇ ಅವರೆಲ್ಲರಿಗೂ ಮುಖ್ಯಗತಿಯು. ಇಂತಹ ನೀನು ನನ್ನಲ್ಲಿ ಪ್ರಸನ್ನನಾಗಬೇಕು. ಓ ಮಹಾತ್ಮನೆ! ಯೋಗೀಶ್ವರರೆಲ್ಲರೂ ಯಾವ ನಿನ್ನ ಪಾದಪದ್ಮಗಳನ್ನು ಸ್ಮರಿಸುವುದರಿಂದ ತಮ್ಮ ಬುದ್ಧಿಯನ್ನು ಪವಿತ್ರವಾಗಿ ಮಾಡಿಕೊಂಡು, ಅದರಿಂದ ತತ್ವಜ್ಞಾನವನ್ನೂ ಸಂಪಾದಿಸಿ, ಅದನ್ನು ಇತರರಿಗೂ ಉಪದೇಶಿಸಿ, ಪರಮ

ಪದವನ್ನು ಹೊಂದುವರೋ, ಅಂತಹ ನೀನು ನನ್ನಲ್ಲಿ ಕೃಪೆಯಿಟ್ಟು ಪ್ರಸನ್ನನಾಗಬೇಕು. ಕಲ್ಪಾದಿಯಲ್ಲಿ ಬ್ರಹ್ಮನಿಗೆ ಸೃಷ್ಟಿವಿಷಯಕಜ್ಞಾನವನ್ನು ವಿವರಿಸಿದ ಯಾವ ನಿನ್ನಿಂದ, ವೇದರೂಪಿಣಿಯಾದ ಸರಸ್ವತಿಯು ಪ್ರೇರಿತೆಯಾಗಿ, ಸ್ವರವಿಶೇಷಾವಿಚಿಪ್ತಗಳೊಡನೆ ನಿನ್ನ ಮುಖಾಗ್ರದಿಂದ ಆವಿರ್ಭವಿಸಿದಳೋ, ಋಷಿಗಳಿಗೆ ಜ್ಞಾನಪ್ರದನಾದ ಅಂತಹ ನೀನು ನನ್ನಲ್ಲಿ ಪ್ರಸನ್ನನಾಗಬೇಕು. ಓ ವಾಸುದೇವಾ! ಪ್ರಾಣಕಾರಣನಾದ ನೀನು ಪಂಚಭೂತಗಳೆಂಬ ಸಮಸ್ತ ಶರೀರಗಳನ್ನೂ ಸೃಷ್ಟಿಸತಕ್ಕವನು. ಆಮೇಲೆ ನೀನೇ ಆ ಶರೀರಗಳಲ್ಲಿ ಅಂತರಾತ್ಮನಾಗಿಯೂ ವರ್ತಿಸತಕ್ಕವನು. ಮತ್ತು ಪಂಚಭೂತಗಳಿಂದಲೂ, ಏಕಾದಶೇಂದ್ರಿಯಗಳಿಂದಲೂ ವಿಘಟ್ಟಿಸುವ ಆ ಶರೀರಗಳಲ್ಲಿ ನೀನೇ ಅಧಿಷ್ಠಾನದೇವತೆಯಾಗಿದ್ದು, ಮೇಲೆಹೇಳಿದ ಭೂತೇಂದ್ರಿಯವರ್ಗಗಳೆಂಬ ಷೋಡಶಸ್ವರೂಪನಾಗಿ, ತದನುಭಾವ್ಯಗಳಾದ ಷೋಡಶಕಲೆಗಳನ್ನೂ ನೀನೇ ಅನುಭವಿಸತಕ್ಕವನು. ಇಂತಹ ಮಹಾತ್ಮನಾದ ನೀನು ನನ್ನ ವಾಕ್ಯಗಳಿಗೆ ಗೋಚರನಾಗಬೇಕು" ಎಂದು ಭಗವಂತನನ್ನು ಸ್ತುತಿಸಿ, ತನ್ನ ತಂದೆಯಾದ ವ್ಯಾಸಮುನಿಯನ್ನು ಧ್ಯಾನಿಸುವನು. " ಮಹಾತ್ಮನಾದ ಎಲೈ ಜನಕನೆ! ಯಾವ ನಿನ್ನ ಮುಖಪದ್ಮದಿಂದ ಸ್ರವಿಸುತ್ತಿರುವ ಜ್ಞಾನವೆಂಬ ಸುಕರಂದವನ್ನು, ಮಹಾನುಭಾವರಾದ ತಿಷ್ಯರೆಲ್ಲರೂ ಪಾನಮಾಡತ್ತಿರುವರೋ, ಅಂತಹ ನಿನಗೆ ನಮಸ್ಕಾರವು " ಎಂದು ಗುರುವಂದನವನ್ನು ಮಾಡಿ, ಪರೀಕ್ಷಿದ್ರಾಜನನ್ನು ಕುರಿತು " ಎಲೈ ರಾಜೇಂದ್ರನೆ! ಈಗ ನೀನು ಕೇಳುವಂತೆಯೇ ಪೂರ್ವದಲ್ಲಿ ನಾರದನು ಬ್ರಹ್ಮನನ್ನು ಪ್ರಾರ್ಥಿಸಿದುದರಮೇಲೆ, ಆ ಬ್ರಹ್ಮನು ತನಗೆ ವಿಷ್ಣುವಿನಿಂದುಪದೇಶಿಸಲ್ಪಟ್ಟ ಈ ಸೃಷ್ಟಿಕ್ರಮವನ್ನು ನಾರದನಿಗೆ ಹೇಳಿರುವನು. ಅದನ್ನೇ ನಿನಗೂ ತಿಳಿಸುವೆನು" ಎಂದನು. ಇದು ನಾಲ್ಕನೆಯ ಅಧ್ಯಾಯವು.

{ ನಾರದನು ಬ್ರಹ್ಮನಿಂದ ಪ್ರಪಂಚಸೃಷ್ಟಿಕ್ರಮವನ್ನು ಪ್ರಶ್ನೆಮಾಡಿ ತಿಳಿದುದು. }

" ಎಲೈ ರಾಜೇಂದ್ರನೆ! ನಾರದನು ಬ್ರಹ್ಮನನ್ನು ಪ್ರಶ್ನೆಮಾಡುವನು. " ಎಲೈ ದೇವದೇವನೆ! ವಂದಿಸುವೆನು. ನೀನು ಸಮಸ್ತಜಗತ್ತನ್ನೂ

ಸೃಷ್ಟಿಸಿದವನು. ಸಮಸ್ತಪ್ರಾಣಿಗಳಿಗೂ ಮೊದಲು ಹುಟ್ಟಿದವನು. ರುದ್ರಾದಿದೇವತೆಗಳಿಗೂ ದೇವತೆಯೆನಿಸಿದವನು. ಆದುದರಿಂದ ನನಗೆ ಆತ್ಮತತ್ತ್ವವನ್ನು ವಿವರಿಸಿ ಜ್ಞಾನೋದಯವನ್ನುಂಟುಮಾಡಬೇಕು. ಪ್ರಪಂಚ ಜ್ಞಾನವು ಸರಿಯಾಗಿ ಜನಿಸಿದರೆ ಆತ್ಮಜ್ಞಾನವೂ ಆಗಲೇ ಹುಟ್ಟುವುದು. ಓ ಜನಕಾ ! ಈ ಪ್ರಪಂಚವೆಂಬುದು ಯಾವ ಭಗವಂತನ ಶರೀರವು? ಇದಕ್ಕೆ ಉಪಾದಾನಕಾರಣವಾವುದು? ಇದು ಯಾವನ ಆಧಾರದಿಂದ ನಿಲ್ಲಿಸಲ್ಪಟ್ಟಿರುವುದು ? ಇದು ಪ್ರಳಯಕಾಲದಲ್ಲಿ ಲೀನವಾಗುವುದೆಲ್ಲಿ ? ಈ ಪ್ರಪಂಚಕ್ಕೆಲ್ಲವೂ ಅಧೀಶ್ವರನಾವನು? ಇವೆಲ್ಲವನ್ನೂ ನನಗೆ ತಿಳಿಸಬೇಕು. ನೀನು ಭೂತಭವಿಷ್ಯದ್ವರ್ತಮಾನಗಳೆಂಬ ಮೂರುಕಾಲಗಳಲ್ಲಿಯೂ ಗೋಚರಿಸತಕ್ಕ ವಸ್ತುಗಳೆಲ್ಲಕ್ಕೂ ಅಧಿಪತಿಯಾಗಿರುವುದರಿಂದ, ಈ ಪ್ರಪಂಚದಲ್ಲಿ ನಿನಗೆ ತಿಳಿಯದದೊಂದೂ ಇಲ್ಲ. ಇವೆಲ್ಲವೂ ನಿನಗೆ ಕೈಕನ್ನಡಿಯಂತೆ ಸ್ಪಷ್ಟವಾಗಿ ತಿಳಿದಿರುವುವು. ಹೀಗೆ ಇವೆಲ್ಲವನ್ನೂ ಸ್ಪಷ್ಟವಾಗಿ ತಿಳಿಯತಕ್ಕ ಜ್ಞಾನವು ನಿನಗೆ ಯಾರ ಅನುಗ್ರಹದಿಂದುಂಟಾಯಿತು?ನಿನಗೆ ಆಶ್ರಯನಾವನು? ನಿನಗೆ ಅಧಿಪತಿಯಾರು ? ನಿನಗೆ ಈ ಸ್ವರೂಪವು ಯಾರಿಂದುಂಟಾಯಿತು? ನೀನೊಬ್ಬನೇ ಪಂಚಭೂತಗಳನ್ನು ಸಾಧನವಾಗಿಟ್ಟುಕೊಂಡು, ಸಮಸ್ತಪ್ರಾಣಿಗಳನ್ನೂ ಸೃಷ್ಟಿಸುವೆಯೆಲ್ಲವೆ? ಹೀಗೆ ಸೃಷ್ಟಿಸಲ್ಪಟ್ಟ ಭೂತಗಳಿಗೆ ಯಾವ ವಿಧವಾದ ಪರಿಭವವೂ ಇಲ್ಲದೆ ಹೇಗೆ ರಕ್ಷಿಸುತ್ತಿರುವೆ ? ಎಲೈ ಮಹಾತ್ಮನೆ ! ಜೇಡರ ಹುಳುಗಳಂತೆ ನೀನು ನಿನ್ನ ಶಕ್ತಿಯನ್ನವಲಂಬಿಸಿ,ಸ್ವಲ್ಪವೂ ಶ್ರಮವಿಲ್ಲದಹಾಗೆ, ನಿನ್ನ ಶರೀರದಿಂದಲೇ ಸಮಸ್ತಭೂತಗಳನ್ನೂ ಹುಟ್ಟಿಸಿ, ಅದನ್ನು ರಕ್ಷಿಸುತಿದ್ದು, ಕೊನೆಗೆ ಅದನ್ನು ಸಂಹರಿಸುತ್ತಿರುವೆ. ಓ ! ದೇವಾ ! ನಾಮರೂಪಗಳಿಂದಲೂ, ಸತ್ವರಜಸ್ತಮೋಗುಣಗಳಿಂದಲೂ ಉತ್ತಮಾಧಮಮಧ್ಯಮಗಳಾಗಿ ಬೇರ್ಪಟ್ಟಿರುವ ಚೇತನಾಚೇತ್ಮಕವಾದ ಪ್ರಪಂಚವೆಲ್ಲವೂ ನಿನ್ನಿಂದಲೇ ನಿರ್ಮಿಸಲ್ಪಡುವುದು. ಒಂದು ವಸ್ತುವಾದರೂ ಬೇರೊಬ್ಬರಿಂದ ನಿರ್ಮಿತವಾದಹಾಗೆ ಊಹಿಸುವುದಕ್ಕೂ ಅವಕಾಶವಿಲ್ಲ. ಓಮಹಾತ್ಮಾ! ಸೃಷ್ಟಿಕರ್ತನಾದ ನೀನೂಕೂಡ ಬಹಳಸಮಾಹಿತನಾಗಿ ಘೋರತಪಸ್ಸನ್ನು ಮಾಡುತಿದ್ದೆಯೆಂದು ಕೇಳಿ, ನನ್ನ ಮನಸ್ಸಿಗೆ ಒಂದುವಿಧವಾದ ಶಂಕೆ

ಯು ಹುಟ್ಟಿರುವುದು. ಎಲ್ಲರಿಗಿಂತಲೂ ನೀನೇ ಮೇಲಾದವನೆಂದೂ, ನಿನಗಿಂತಲೂ ಉತ್ತಮರಿಲ್ಲವೆಂದೂ, ಇತರರೆಲ್ಲರೂ ನಿನ್ನನ್ನೇ ಉಪಾಸನೆಮಾಡಬೇಕೇಹೊರತು ನಿನ್ನಿಂದ ಉಪಾಸನೆಮಾಡಲ್ಪಡತಕ್ಕವರು ಬೇರೊಬ್ಬರೂ ಇಲ್ಲವೆಂದೂ ನಾವು ನಿಶ್ಚಯವಾಗಿ ನಂಬಿದ್ದೆವು. ಹೀಗಿರುವಾಗ ನೀನೂ ತಪಸ್ಸು ಮಾಡಿದೆಯೆಂದು ಕೇಳಿ ನಮ್ಮ ಮನಸ್ಸಿಗೆ ಸಂದೇಹವುಂಟಾಗಿರುವುದು. ಓ ದೇವಾ! ನೀನು ಸಮಸ್ತಕ್ಕೂ ಅಧಿಪತಿಯಾಗಿ ಸರ್ವಜ್ಞನಾಗಿರುವುದರಿಂದ, ಅದರ ಕಾರಣವನ್ನು ನೀನೇ ತಿಳಿಸಿ ನನ್ನ ಸಂದೇಹವನ್ನು ನೀಗಿಸಿ ಮನಸ್ಸಿಗೆ ಸಂತೋಷವನ್ನುಂಟುಮಾಡಬೇಕು " ಎಂದನು. ಈ ಮಾತನ್ನು ಕೇಳಿ ಬ್ರಹ್ಮನು ಸಂತೋಷಗೊಂಡು " ವತ್ಸ ನಾರದಾ! ನಿನ್ನ ಪ್ರಶ್ನೆವು ಯುಕ್ತವಾಗಿಯೇ ಇರುವುದು. ಇದು ಸಮಸ್ತಲೋಕಕ್ಕೂ ಹಿತವಾದುದು. ಇದರಿಂದ ನಿನ್ನ ಸುಸ್ವಭಾವವೂ ಹೊರಪಡುವುದು ಹೇಗೆಂದರೆ:-- ನೀನು ನನ್ನನ್ನು ಕುರಿತು ಬೇರೆಯಾವ ಪ್ರಶ್ನೆವನ್ನೂ ಮಾಡದೆ, ಕೇವಲ ಭಗವಂತನ ವಿಷಯವಾದ ಪ್ರಶ್ನೆವನ್ನೇ ಮಾಡುತ್ತಿರುವೆಯೆಲ್ಲವೆ! ಆ ಭಗವಂತನ ಶಕ್ತಿಯನ್ನು ನಿನಗೆ ತಿಳಿಸುವುದರಿಂದ ನಾನು ಎಣೆಯಿಲ್ಲದ ಪುಣ್ಯಕ್ಕೆ ಭಾಗಿಯಾಗುವೆನು. ಅಂತಹ ಪುಣ್ಯವು ನನಗೆ ಲಭಿಸುವಹಾಗೆ ನೀನು ಮಾಡುವುದರಿಂದ, ನಿನಗೆ ನನ್ನಲ್ಲಿರುವ ಕರುಣಾರಸವನ್ನು ಹೊರಪಡಿಸಿದಂತಾಗುವುದಿಲ್ಲವೆ! ನಾರದಾ! ನನಗೆ ಈ ಹದಿನಾಲ್ಕುಲೋಕಗಳಮೇಲೆ ಅಧಿಕಾರವಿರುವುದೇನೋ ನಿಜವು. ಆ ಅಧಿಕಾರವನ್ನು ನನಗೆ ಕೊಟ್ಟಿರತಕ್ಕ ಪರಮಪುರುಷನು ಬೇರೊಬ್ಬನಿರುವನು. ಅದನ್ನು ನೀನು ತಿಳಿಯದೆ ನಾನೇ,ಸಮಸ್ತಭೂತಗಳನ್ನೂ ಸೃಷ್ಟಿಸುತ್ತಿರುವೆನೆಂದು ಪ್ರಶ್ನೆಮಾಡಿದೆ. ಆದರೆ ಅದನ್ನೂ ಸಂಪೂರ್ಣವಾಗಿ ಅಸತ್ಯವೆಂದೂ ಹೇಳುವುದಕ್ಕಿಲ್ಲ, ಈ ನಿನ್ನ ಮಾತಿನಲ್ಲಿಯೂ ಸ್ವಲ್ಪನಿಜಾಂಶವಿರುವುದು. ನನಗಿಂತಲೂ ಮೇಲಾದ ಸರ್ವೇಶ್ವರನಾವನೆಂದು ಕೇಳಿದುದಕ್ಕೆ ಪ್ರತ್ಯುತ್ತರವನ್ನು ಹೇಳುವೆನು ಕೇಳು. ಯಾವ ಮಹಾಪುರುಷನ ಕಾಂತಿಯಿಂದಲೇ ಸೂರ್ಯ, ಚಂದ್ರ, ಗ್ರಹ, ನಕ್ಷತ್ರಾದಿಗಳೂ, ಅಗ್ನಿಹೋತ್ರನೂ ಕಾಂತಿವಿಶಿಷ್ಟರಾಗಿ ಪ್ರಕಾತಿಸುತ್ತಿರುವರೋ, ಆ ಭಗವಂತನ ತೇಜಸ್ಸಿನಿಂದಲೇ ಈ ಸಮಸ್ತಲೋಕವೂ ಪ್ರಕಾಶಗೊಂಡಿರುವುದು. ಹೀಗೆ ಆ ಭಗವಂ

ತನ ತೇಜಸ್ಸಿನಿಂದ ಪ್ರಕಾಶಗೊಂಡಿರುವ ಈ ವಿಶ್ವವನ್ನು ನಾನು ನಿಮಿತ್ತಮಾತ್ರನಾಗಿ ಪ್ರಕಾಶಗೊಳಿಸುತ್ತಿರುವೆನು. ಇಷ್ಟೇಹೊರತು ನನ್ನ ಸ್ವಶಕ್ತಿಯಿಂದ ನಾನು ಯಾವುದನ್ನೂ ನಡೆಸುವುದಕ್ಕೆ ಸಮರ್ಥನಲ್ಲ. ಈ ಸಮಸ್ತಪ್ರಪಂಚಕ್ಕೂ ಆಧಾರನಾದ ಸರ್ವೇಶ್ವರನು ಬೇರೊಬ್ಬನಿರುವನು. ಯಾವನ ಮಾಯೆಯಿಂದ ಮೋಹಿತರಾದ ನೀವೆಲ್ಲರೂ, ನನ್ನನ್ನೇ ಲೋಕಪತಿಯೆನ್ನಾಗಿ ಹೇಳುತ್ತಿರುವಿರೋ, ಅಂತಹ ಜಗದೀಶ್ವರನಿಗೆ ಈಗ ನಾನೂ ನನ್ನ ವಂದನಗಳನ್ನರ್ಪಿಸುವೆನು. ಮತ್ತು ವತ್ಸ ನಾರದಾ! ಆ ಭಗವಂತನ ಕಣ್ಣಿಗೆ ಸಿಲ್ಲುವುದಕ್ಕೂ ನಾಚುತ್ತಿರುವ ಮಾಯೆಯೆಂಬುದು, ನಿಮ್ಮೆಲ್ಲರನ್ನೂ ಹೀಗೆ ವಿವೇಕಶೂನ್ಯರನ್ನಾಗಿ ಮಾಡುತ್ತಿರುವುದು. ಆ ಮಾಯಾಸಂಬಂಧದಿಂದಲೇ ನಿಮ್ಮಂತವರೆಲ್ಲರೂ ನಿಜಸ್ಥಿತಿಯನ್ನು ತಿಳಿಯಲಾರದೆ, ಆ ಭಗವಂತನೊಬ್ಬನಿಗೆಹೊರತು ಬೇರೊಬ್ಬರಿಗೆ ಯಾವವಿಧದ ಸ್ವಾತಂತ್ರ್ಯವಿಲ್ಲದಿದ್ದರೂ, ನನ್ನನ್ನು ಸ್ವತಂತ್ರನನ್ನಾಗಿ ಭಾವಿಸುತ್ತಿರುವಿರಿ. ಈ ನಿಮ್ಮ ಅಜ್ಞಾನವನ್ನು ನೋಡಿ ನನಗೆ ಬಹಳವಾಗಿ ನಗೆಯುಂಟಾಗುತ್ತಿರುವುದು. ಓ ನಾರದಾ! ಪ್ರಕೃತಿ, ಮಹತ್ತು, ಅಹಂಕಾರ ಮೊದಲಾದುವುಗಳೂ, ಪುಣ್ಯಪಾಪಕರ್ಮಗಳೂ, ಕಾಲವೂ, ಸತ್ವರಜಸ್ತಮೋಗುಣಗಳೂ, ಎಲ್ಲಾ ಜೀವಕೋಟಿಯೂ, ಈ ಸಮಸ್ತವೂಕೂಡ ಆ ವಾಸುದೇವನಿಗಿಂತಲೂ ಬೇರೆಯಾದುದಲ್ಲವೆಂದು ನಿಶ್ಚಯವಾಗಿ ತಿಳಿ! ಸಮಸ್ತವೇದಗಳೂ ಆ ನಾರಾಯಣನೊಬ್ಬನನ್ನೇ ಪ್ರತಿಪಾದಿಸುತ್ತಿರುವುವು. ಸಮಸ್ತದೇವತೆಗಳೂ ಆ ನಾರಾಯಣನ ಶರೀರದಿಂದಲೇ ಹುಟ್ಟಿರುವರು. ಸಮಸ್ತಲೋಕವೂ ಆ ನಾರಾಯಣನೊಬ್ಬನಿಗೇ ಅಧೀನವಾಗಿರುವುದು. ಸಮಸ್ತಯಜ್ಞಗಳೂ ಆ ನಾರಾಯಣನ ಆರಾಧನರರೂಪವಾಗಿಯೇ ಇರುವುವು. ಪ್ರಾಣಾಯಾಮಾದಿಯೋಗಗಳೆಲ್ಲವೂ ಆ ನಾರಾಯಣನನ್ನೇ ವಿಷಯೀಕರಿಸುವುವು. ಕೃಚ್ಛ್ರ ಚಾಂದ್ರಾಯಣಾದಿವ್ರತಗಳೂ, ತಪಸ್ಸು ಮೊದಲಾದುವೂಕೂಡ ಆತನ ಆರಾಧನರೂಪವಾಗಿಯೇ ಇರುವುವು. ಸರ್ವೋತ್ತಮವಾದ ಭಕ್ತಿಯೂ ಕೂಡ ಆ ನಾರಾಯಣನ ಪೂಜಾರೂಪವಲ್ಲದೆ ಬೇರೆಯಲ್ಲ. ಸಮಸ್ತವಿಧಗಳಾದ ಪುರುಷಾರ್ಥಗಳ ಸಿದ್ಧಿಯೂ ಆ ಭಗವಂತನ ಆಧೀನವಾ

ಗಿರುವುವು. ಸಮಸ್ತವಸ್ತುಗಳನ್ನೂ ಸಾಕ್ಷಾತ್ಕರಿಸತಕ್ಕವನಾಗಿ, ಸಮಸ್ತ ಕ್ಕೂ ನಿಯಾಮಕನಾಗಿ, ವಿಕಾರಶೂನ್ಯನಾಗಿ, ಸರ್ವಾಂತರ್ಯಾಮಿಯಾಗಿರುವ ಆ ಭಗವಂತನ ಕಡೆಗಣ್ಣಿನ ನೋಟದಿಂದಲೇ ನಾನು ಸೃಷ್ಟಿಸಲ್ಪಟ್ಟವನು. ಅದರಿಂದ ಪ್ರೇರಿತನಾಗಿ ಈ ಕಾರ್ಯಗಳನ್ನು ನಡೆಸುತ್ತಿರುವೆನು. ಅವನಿಂದ ಮೊದಲು ಸೃಷ್ಟಿಸಲ್ಪಟ್ಟ ಪ್ರಪಂಚವನ್ನೇ ತಿರುಗಿ ನಾನು ಸೃಷ್ಟಿಸುತ್ತಿರುವೆನು. ಹೇಯಗುಣವಿಲ್ಲದ ಆ ಭಗವಂತನು, ಈ ಪ್ರಪಂಚದ ಸೃಷ್ಟಿಸ್ಥಿತಿ ಸಂಹಾರಗಳೆಂಬ ಲೀಲೆಗಳನ್ನು ನಡೆಸುವುದಕ್ಕಾಗಿ, ಸತ್ವರಜಸ್ತಮಸ್ಸುಗ ಳೆಂಬ ಮೂರು ಗುಣಗಳನ್ನು ಸ್ವೇಚ್ಛೆಯಿಂದ ಸ್ವೀಕರಿಸಿರುವನು. ಈ ಮೂರು ಗುಣಗಳೂ ಬೇರೆಬೇರೆ ಮೂರುಬಗೆಯ ಸ್ವಭಾವವುಳ್ಳವು. ಅದರಲ್ಲಿ ಸತ್ವಗುಣ ವೆಂಬುದು ಪ್ರಕಾಶಕವಾದ ಸ್ವಭಾವವುಳ್ಳದು. ರಜೋಗುಣವೆಂಬುದು ಪ್ರೇ ರಕಸ್ವಭಾವವುಳ್ಳದು. ತಮೋಗುಣವೆಂಬುದು ಮೋಹವನ್ನುಂಟುಮಾಡತಕ್ಕ ಸ್ವಭಾವವುಳ್ಳದು. ಈ ಮೂರುಗುಣಗಳೂಕೂಡ, ನಿಜಸ್ವರೂಪದಿಂದ ನಾಶ ರಹಿತನಾದ ಜೀವಾತ್ಮನನ್ನು, ಶರೀರೇಂದ್ರಿಯಗಳ ನಿಮಿತ್ತವಾಗಿ ಯಾವಾ ಗಲೂ ಬಂಧಿಸುತ್ತಿರುವುವು. ಹೀಗೆ ತನಗೆ ಶರೀರಭೂತವಾದ ಪ್ರಕೃತಿಯ ಲ್ಲಿರುವ ಸತ್ವಾದಿತ್ರಯಗುಣದಿಂದ ಸೇರುತ್ತಿರುವ ಆ ಭಗವಂತನೇ, ಸಮಸ್ತಪ್ರಪಂಚವನ್ನೂ, ನನ್ನನ್ನೂ ಕೂಡ ನೇಮಿಸುತ್ತಿರುವನೆಂದು ತಿಳಿ! ಆ ಭಗವಂತನೇ ಸಮಸ್ತಪ್ರಪಂಚಕ್ಕೂ ಕಾರಣಭೂತವಾದ ಮಾಯೆಗೆ ನಿಯಾ ಮಕನಾಗಿದ್ದು, ತನ್ನ ಸಂಕಲ್ಪದಿಂದಲೇ ಈ ಪ್ರಪಂಚರೂಪವಾಗಿ ಕಾಣಿಸಿ ಕೊಳ್ಳತ್ತ, ಕರ್ಮಗಳಿಗೆ ವಶನಾಗದೆ ಇರುವನು. ಆದರೆ ಕಾಲಕರ್ಮಸ್ವಭಾವಗಳೆಂ ಬಿವು ಮೂರನ್ನೂ ಪ್ರಪಂಚಸೃಷ್ಟಿಗಾಗಿ ತನಗೆ ಸಹಕಾರಿಗಳನ್ನಾಗಿ ಸ್ವೀಕರಿ ಸಿರುವನು. ಕಾಲವೆಂಬುದು ತನಗೆತಾನೇ ಅಪ್ರಯತ್ನವಾಗಿ ಬಂದು ಅವನಲ್ಲಿ ಸೇರಿ, ಮಹದಾದಿಕಾರ್ಯಗಳಿಗೆ ಪರಿಣಾಮಪನ್ನುಂಟುಮಾಡತಕ್ಕುದಾಗಿರು ವುದು. ಇಂತಹ ಕಾಲವನ್ನೂ, ಜೀವನ ಅದೃಷ್ಟರೂಪವಾದ ಕರ್ಮಫಲ ವನ್ನೂ, ಮೂಲಪ್ರಕೃತಿಯಲ್ಲಿರುವ ಪರಿಣಾಮರೂಪವಾದ ಸ್ವಭಾವಗುಣ ವನ್ನೂ, ಜಗತ್ಸೃಷ್ಟಿಗೆ ಸಹಕಾರಿಗಳನ್ನಾಗಿ ತಾನಾಗಿಯೇ ಸ್ವೇಚ್ಛೆಯಿಂದ ಸ್ವೀಕರಿಸಿರುವನು. ಈ ಮೂರರಲ್ಲಿ ಕಾಲವೆಂಬುದು ಸತ್ವರಜಸ್ತಮೋಗುಣ

ಗಳ ವ್ಯತ್ಯಾಸಕ್ಕೆ ಕಾರಣವಾಗಿರುವುದು. ಹೀಗೆ ಕಾಲವಶದಿಂದುಂಟಾಗುವ ಸತ್ವಾದಿಗುಣಗಳ ವೈಷಮ್ಯದಿಂದಲೂ, ಪ್ರಕೃತಿಯಲ್ಲಿರುವ ಪರಿಣಾಮಸ್ವಭಾವದಿಂದಲೂ, ಜೀವಾತ್ಮರ ಅದೃಷ್ಟದಿಂದಲೂ, ಪರಮಪುರುಷನಿಂದ ಪ್ರೇರಿತವಾದ ಪ್ರಕೃತಿಯಿಂದ ಮಹತ್ತೆಂಬ ತತ್ವವು ಜನಿಸಿತು. ಆ ಮಹತ್ತತ್ವದಿಂದ ಅಹಂಕಾರವೆಂಬ ತತ್ವವು ಜನಿಸಿತು. ಹೀಗೆ ಪರಮಪುರುಷನ ಸಂಕಲ್ಪದಿಂದ ವಿಕಾರಹೊಂದತಕ್ಕುದಾಗಿಯೂ, ಜ್ಞಾನಕರ್ಮಗಳನ್ನು ಮುಖ್ಯವಾಗಿ ಹೊಂದಿರುವುದರಿಂದ ಸತ್ವರಜೋಗುಣಗಳಿಗೆಮಾತ್ರವೇ ನೆಲೆಯಾಗಿಯೂ ಇರುವ ಆ ಮಹತ್ತತ್ವದಿಂದ ಹುಟ್ಟಿದ ಅಹಂಕಾರತತ್ವವೆಂಬುದು, ಕೇವಲ ತಮೋಗುಣಪ್ರಧಾನವೆನಿಸಿರುವುದು. ಇದು ವಿಕಾರಹೊಂದುತ್ತ ಸಾತ್ವಿಕಾಹಂಕಾರವೆಂದೂ, ರಾಜಸಾಹಂಕಾರವೆಂದೂ, ತಾಮಸಾಹಂಕಾರವೆಂದೂ ಮೂರುವಿಧವಾಗಿ ಬೇರ್ಪಟ್ಟಿರುವುದು. ಇವುಗಳಲ್ಲಿ ತಾಮಸಾಹಂಕಾರವೆಂಬುದು ಮಹಾಭೂತಗಳೆಂಬ ದ್ರವ್ಯಗಳನ್ನು ಸೃಷ್ಟಿಸತಕ್ಕ ಶಕ್ತಿಯುಳ್ಳದು. ತೈಜಸವೆಂದು ಹೇಳಲ್ಪಡುವ ರಾಜಸಾಹಂಕಾರವೆಂಬುದು ಕ್ರಿಯೆಗಳಲ್ಲಿ ಪ್ರವೃತ್ತಿಯುಂಟುಮಾಡತಕ್ಕ ಶಕ್ತಿಯುಳ್ಳದು. ವೈಕಾರವೆನಿಸುವ ಸಾತ್ವಿಕಾಹಂಕಾರವೆಂಬುದು ಶಬ್ದಾದಿವಿಷಯಗಳನ್ನು ತಿಳಿಸತಕ್ಕ ಜ್ಞಾನೇಂದ್ರಿಯಗಳನ್ನುಂಟುಮಾಡುವ ಶಕ್ತಿಯುಳ್ಳದು. ಭೂತಾದಿಯೆಂದು ಹೆಸರುಳ್ಳದಾಗಿಯೂ, ಪರಮಪುರುಷನ ಪ್ರೇರಣೆಯಿಂದಲೇ ವಿಕಾರಹೊಂದತಕ್ಕುದಾಗಿಯೂ ಇರುವ ತಾಮಸಾಹಂಕಾರದಿಂದ ಪಂಚಭೂತಗಳಲ್ಲಿ ಆಕಾಶವೆಂಬುದು ಮೊದಲು ಹುಟ್ಟಿತು. ಜೇತನಾಜೇತನಗಳ ಸ್ವರೂಪವನ್ನು ತಿಳಿಸುವುದಕ್ಕೆ ಪ್ರಮಾಣವಾಗಿಯೂ, ಆ ಆಕಾಶದ ಸೂಕ್ಷ್ಮರೂಪವಾಗಿಯೂ, ಆಕಾಶಕ್ಕೆ ಅಸಾಧಾರಣವಾಗಿಯೂ ಇರುವ ಶಬ್ದಗುಣವು ಮೊದಲು ಜನಿಸಿ,ಅದರಿಂದ ಆಕಾಶವು ಹುಟ್ಟಿತು ವಿಕಾರಹೊಂದುತ್ತಬಂದ ಆ ಆಕಾಶದಿಂದ ಸ್ಪರ್ಶಗುಣವುಳ್ಳ ವಾಯುವು ಹುಟ್ಟಿತು. ಆ ವಾಯುವಿನಲ್ಲಿ ತನಗೆ ಕಾರಣವಾದ ಆ ಆಕಾಶದಲ್ಲಿರುವ ಶಬ್ದಗುಣವೂ, ತನ್ನಲ್ಲಿ ಸ್ವತಸ್ಸಿದ್ಧವಾದ ಸ್ಪರ್ಶಗುಣವೂ ಇವೆರಡೂ ಸೇರಿದುವು ಮತ್ತು ಆ ವಾಯುವು ಪ್ರಾಣರೂಪವಾಗಿ ದೇಹದಲ್ಲಿ ಸೇರಿರುವುದರಿಂದ, ಇಂದ್ರಿಯಗಳಿಗೂ, ಶರೀರಕ್ಕೂ ಬಲ

ವನ್ನು ಕೊಡುತ್ತಿರುವುದು. ವಿಕಾರಹೊಂದುತ್ತಿರುವ ಆ ವಾಯುವೆಂಬ ಭೂತದಲ್ಲಿ, ಮೇಲೆ ಹೇಳಿದಂತೆ ಕಾಲಕರ್ಮಸ್ವಭಾವಗಳಿಂಬೀ ಮೂರರ ಸಹಾಯದಿಂದ ತೇಜಸ್ಸು ಜನಿಸಿತು. ಆ ತೇಜಸ್ಸಿನಲ್ಲಿ ತನಗೆ ಕಾರಣಭೂತಗಳಾದ ಆಕಾಶವಾಯುಗಳೆಂಬ ಭೂತಗಳಲ್ಲಿರುವ ಶಬ್ದ, ಸ್ಪರ್ಶ ಗುಣಗಳೆರಡೂ,ತನ್ನಲ್ಲಿಯೇ ಸ್ವತಸ್ಸಿದ್ಧವಾಗಿ ಹುಟ್ಟಿದ ರೂಪಗುಣವೂ ಈ ಮೂರೂ ಒಂದಾಗಿ ಸೇರಿದುವು. ವಿಕಾರಹೊಂದುತ್ತಿರುವ ಆ ತೇಜಸ್ಸಿನಿಂದ ರಸಾತ್ಮಕವಾದ ಜಲವು ಹುಟ್ಟಿತು. ಆ ಜಲದಲ್ಲಿ ತನಗೆ ಕಾರಣಭೂತವಾದ ತೇಜಸ್ಸಿನಲ್ಲಿರುವ ಶಬ್ದಸ್ಪರ್ಶರೂಪಗುಣಗಳೂ, ಮತ್ತು ತನ್ನಲ್ಲಿಯೇ ಹುಟ್ಟಿದ ರಸವೆಂಬ ಗುಣವೂ ಒಂದಾಗಿ ಸೇರಿದುವು. ಹಾಗೆಯೇ ವಿಕಾರಹೊಂದುತ್ತಿರುವ ಜಲದಿಂದ ಗಂಧಗುಣವುಳ್ಳ ಭೂಮಿಯು ಹುಟ್ಟಿತು. ಈ ಭೂಮಿಯಲ್ಲಿ ತನಗೆ ಕಾರಣವಾದ ಜಲದಲ್ಲಿರುವ ಶಬ್ದಾದಿನಾಲ್ಕುಗುಣಗಳಲ್ಲದೆ ಹೊಸದಾಗಿ ಗಂಧವೆಂಬ ಗುಣವೂ ಒಂದಾಗಿ ಸೇರಿದುವು. ಮೇಲೆ ಹೇಳಿದ ಪಂಚಮಹಾಭೂತಗಳ ಉತ್ಪತ್ತಿಯೆಲ್ಲವೂ ತಾಮಸಾಹಂಕಾರದ ಕಾರ್ಯಗಳು.ಸಾತ್ವಿಕಾಹಂಕಾರದ ಕಾರ್ಯಗಳನ್ನೂ ಹೇಳುವೆನು ಕೇಳು! ಸಾತ್ವಿಕಾಹಂಕಾರದಿಂದ ದಿಕ್ಕುಗಳು, ವಾಯು, ಸೂರ್ಯನು, ವರುಣನು, ಅಶ್ವಿನೀದೇವತೆಗಳೆಂಬಿವರನ್ನು ಅಧಿಷ್ಠಾನದೇವತೆಗಳನ್ನಾಗಿ ಪಡೆದ ಕಿವಿ, ತ್ವಕ್ಕು, ಕಣ್ಣು, ನಾಲಗೆ, ಮೂಗು, ಎಂಬ ಐದು ಜ್ಞಾನೇಂದ್ರಿಯಗಳೂ, ಇಂದ್ರನು, ಅಗ್ನಿ, ಉಪೇಂದ್ರನು, ಮಿತ್ರನು, ಬ್ರಹ್ಮನು, ಇವರನ್ನು ಅಧಿಷ್ಠಾನದೇವತೆಗಳನ್ನಾಗಿ ಪಡೆದ ವಾಕ್ಕು. ಪಾಣಿ, ಪಾದ, ಗುದ, ಉಪಸ್ಥಗಳೆಂಬ ಐದು ಕರ್ಮೇಂದ್ರಿಯಗಳೂ ಚಂದ್ರನನ್ನು ಅಧಿಷ್ಠಾನದೇವತೆಯಾಗಿ ಉಳ್ಳ ಮನಸ್ಸೂ, ಹೀಗೆ ಏಕಾದಶೇಂದ್ರಿಯಗಳು ಜನಿಸಿದುವು. ಈ ವಿಧವಾಗಿ ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು, ಮತ್ತು ಮನಸ್ಸು, ಇವೆಲ್ಲಕ್ಕೂ, ರಾಜಸಾಹಂಕಾರದಿಂದ ಸಹಕರಿಸಲ್ಪಟ್ಟು ವಿಕಾರಹೊಂದುತ್ತಿರುವ ಸಾತ್ವಿಕಾಹಂಕಾರವು ಕಾರಣವೆನಿಸಿರುವುದು. ಇದರಿಂದ ಈ ಇಂದ್ರಿಯಗಳಲ್ಲಿ ರಾಜಸಾಹಂಕಾರದ ಗುಣಗಳೂ ಕಲೆತಿರುವುವು. ಹೀಗೆ ಆಕಾಶಾದಿಭೂತಗಳೂ, ಇಂದ್ರಿಯಗಳೂ, ಮನಸ್ಸೂ, ಅವುಗಳಿಗೆ ವಿಷಯಗಳಾದ ತನ್ಮಾತ್ರಗಳೂ, ಬೇರೆಬೇರೆಯಾಗಿದ್ದುದರಿಂದ,

ಬಹ್ಮಾಂಡಸೃಷ್ಟಿಗೆ ಅಸಮರ್ಥಗಳಾಗಿದ್ದುವು. ಆಗ ಭಗವಂತನ ಶಕ್ತಿಯಿಂದ ಇವು ಪ್ರೇರಿತಗಳಾಗಿ, * ಪಂಚೀಕರಣಕ್ರಮವನ್ನನುಸರಿಸಿ, ಒಂದಕ್ಕೊಂದು ಸಂಯೋಗವನ್ನು ಹೊಂದಿ, ಸ್ಥೂಲಸೂಕ್ಷ್ಮಗಳೆಂಬ ರೂಪಭೇದದಿಂದ, ಕಾಲಕರ್ಮಸ್ವಭಾವಗಳನ್ನನುಸರಿಸಿ, ಈ ಬ್ರಹ್ಮಾಂಡದ ಉತ್ಪತ್ತಿಗೆ ಕಾರಣಗಳಾದುವು. ಬ್ರಹ್ಮಾಂಡವೆಂಬುದು ಈ ಭೂತೇಂದ್ರಿಯಸಂಯೋಗದಿಂದಲೇ ಉಂಟಾದುದರಿಂದ, ಆಕಾಶದಿಂದುಂಟಾದ ವಾಯುವಿನಂತೆ ಇದನ್ನು ಬೇರೊಂದು ತತ್ವವೆಂದೆಣಿಸುವುದಕ್ಕಿಲ್ಲ. ಇದಕ್ಕೆ ಆಕಾಶಾದಿಗಳಂತೆ ಬೇರೊಂದು ತತ್ವವನ್ನು ಹುಟ್ಟಿಸತಕ್ಕ ಶಕ್ತಿಯೂ ಇಲ್ಲ. ಆದುದರಿಂದ ಈ ಬ್ರಹ್ಮಾಂಡವೆಂಬುದು, ಕಾರ್ಯಕಾರಣರೂಪಗಳಾದ ಆ ಎರಡು ಬಗೆಯ ತತ್ವಗಳಿಗಿಂತಲೂ ಬೇರೆಯಾಗಿರುವುದು. ಈ ಬ್ರಹ್ಮಾಂಡವು ಕಲ್ಪಾಂತದಲ್ಲಿ ಗಟ್ಟಿಯಾದ ಮೊಟ್ಟೆಯೆಂಬ ನೀರಿನಲ್ಲಿರುವಾಗ, ಕಾಲಕರ್ಮಸ್ವಭಾವಗಳಿಗೀಡಾಗದೆ, ಸಮಸ್ತವನ್ನೂ ಸಜೀವವನ್ನಾಗಿ ಮಾಡತಕ್ಕ ಶಕ್ತಿಯುಳ್ಳ ಭಗವಂತನು, ಸಮಷ್ಟಿಪುರುಷನೆನಿಸಿದ ಬ್ರಹ್ಮನನ್ನು ತನಗೆ ಶರೀರವನ್ನಾಗಿ ಮಾಡಿಕೊಂಡು, ಆತನಲ್ಲಿ ಅಂತರಾತ್ಮನಾಗಿ, ಕಾಲಕರ್ಮಸ್ವಭಾವಗಳನ್ನನುಸರಿಸುತ್ತ, ಆ ಅಂಡವನ್ನೊಳಹೊಕ್ಕು, ಅದನ್ನು ಜೀವಸಹಿತವನ್ನಾಗಿ ಮಾಡಿಟ್ಟನು. ಒಡನೆಯೇ ಆ ಅಂಡವನ್ನು ಭೇದಿಸಿಕೊಂಡು ಪುರುಷಾಕೃತಿಯೊಂದು ಉದ್ಭವಿಸಿತು. ರಾಜಾ! ಆತನೂ ಚತುರ್ಮುಖರೂಪದಿಂದ ಹೊರಟುಬಂದ ಪರಮಪುರುಷನೇಹೊರತು

---

* ಪಂಚೀಕರಣವೆಂದರೆ, ಒಂದೊಂದು ಭೂತಗಳನ್ನೂ ಎರಡಾಗಿ ವಿಭಾಗಿಸಿ, ಅವುಗಳಲ್ಲಿ ಒಂದೊಂದು ಅರ್ಧಭಾಗವನ್ನು ತಿರುಗಿ ಐದುಭಾಗವಾಗಿ ಮಾಡಿ, ಆ ಐದುಭಾಗಗಳಲ್ಲಿ ಒಂದನ್ನು ಬಿಟ್ಟು ಉಳಿದ ನಾಲ್ಕುಭಾಗಗಳನ್ನೂ ಇತರ ಭೂತಗಳಲ್ಲಿ ಒಂದೊಂದಕ್ಕೆ ಒಂದೊಂದರಂತೆ ಸೇರಿಸಿಡುವುದು. ಇದರಿಂದ ಒಂದೊಂದು ಭೂತಗಳಲ್ಲಿಯೂ ಬೇರೆ ಎಲ್ಲಾಭೂತಗಳ ಅಂಶವೂ ಸ್ವಲ್ಪಸ್ವಲ್ಪವಾಗಿ ಸೇರುವುವು. ಮಹತ್ತು, ಅಹಂಕಾರಗಳೆಂಬ ಎರಡು ತತ್ವಗಳನ್ನೂ ಸೇರಿಸಿ, ಇದೇ ಕ್ರಮದಿಂದ ವಿಶ್ರಣಮಾಡುವುದನ್ನು ಸಪ್ತೀಕರಣವೆಂದು ಹೇಳುವರು. ಮೊದಲು ಮಂಗಳಶ್ಲೋಕದಲ್ಲಿ ''ತೇಜೋವಾರಿಮೃದಾಂ ಯಥಾ ವಿನಿಮಯಃ'' ಎಂಬ ವಾಕ್ಯದಿಂದ ಸೂಚಿತವಾದ ತ್ರಿವೃತ್ಕರಣವೆಂಬುದು ಇದಕ್ಕೇ ಉಪಲಕ್ಷಕವೆಂದು ತಿಳಿಯಬೇಕು.

ಬೇರೆಯಲ್ಲ. ಆದರೆ ಈ ರೂಪದಲ್ಲಿ ಅಂತರ್ಯಾಮಿಯಾಗಿದ್ದ ಪುರುಷನು, ಮೇಲೆ ಕಾಣುವಂತೆ ನಾಲ್ಕುಮುಖದವನಲ್ಲ. ಅವನಿಗೆ ಸಾವಿರತೊಡೆಗಳು ! ಸಾವಿರ ಕಾಲುಗಳು ! ಸಾವಿರತೋಳುಗಳು ! ಸಹಸ್ರಮುಖಗಳು ! ಸಾವಿರತಲೆಗಳು! ಅತನೇ ಸರ್ವಾಂತರ್ಯಾಮಿಯಾದ ಪರಮಪುರುಷನು ! ಅತನೇ ಮೊದಲು ಹೇಳಿದ ವಿರಾಟ್ಪುರುಷನು ! ಪಂಡಿತರು ಪಾತಾಳಾದಿಸಮಸ್ತಲೋಕಗಳನ್ನೂ ಈ ಪರಮಪುರುಷನ ಅಂಗಾಲು ಮೊಲಾದ ಶರೀರಾವಯವಗಳನ್ನಾಗಿ ಭಾವಿಸಿ ಧ್ಯಾನಿಸುವರು. ಅತನ ಕಟಿ(ಮಧ್ಯ) ಭಾಗದಿಂದ ಕೆಳಗಿರುವ ಅವಯವಗಳನ್ನು ಕೆಳಗಿನ ಏಳು ಲೋಕಗಳನ್ನಾಗಿಯೂ, ಜಘನಕ್ಕೆ ಮೇಲಿನ ಅವಯವಗಳನ್ನು ಮೇಲಿನ ಏಳುಲೋಕಗಳನ್ನಾಗಿಯೂ ಕಲ್ಪಿಸಿರುವರು. ಆ ಪರಮಪುರುಷನ ಮುಖದಿಂದ ಬ್ರಾಹ್ಮಣಜಾತಿಯೂ, ತೋಳುಗಳಿಂದ ಕ್ಷತ್ರಜಾತಿಯೂ, ತೊಡೆಗಳಿಂದ ವೈಶ್ಯಜಾತಿಯೂ, ಕಾಲುಗಳಿಂದ ಶೂದ್ರಜಾತಿಯೂ ಹುಟ್ಟಿರುವುವು. ಮತ್ತು ಆತನ ಪಾದಗಳಿಂದ ಭೂಲೋಕವೂ, ನಾಭಿಯಿಂದ ಭುವರ್ಲೋಕವೂ,ಹೃದಯದಿಂದ ಸ್ವರ್ಲೋಕವೂ, ಕಂಠದಿಂದ ಜನಲೋಕವೂ ಆತನ ಸ್ತನದ್ವಯಗಳಿಂದ ತಪೋಲೋಕವೂ, ಆತನ ಶಿರಸ್ಸಿನಿಂದ ಸತ್ಯಲೋಕವೆಂಬ ಹೆಸರುಳ್ಳದಾಗಿ ಇತರಲೋಕಗಳಿಂತಲೂ ಹೆಚ್ಚುಕಾಲದವರೆಗೆ ನಿಲ್ಲತಕ್ಕ ಚತುರ್ಮುಖಲೋಕವೂ ಉದ್ಭವಿಸಿರುವುದು. (ಆ ಮಹಾತ್ಮನ ನಿಜಸ್ಥಾನವಾದ ಪರಮಪದ (ವೈಕುಂಠ) ವಾದರೋ, ಈ ಲೋಕಗಳಂತೆ ಮತ್ತೊಂದುಕಾರಣದಿಂದ ಉದ್ಭವಿಸಿದುದುದಲ್ಲ. ಅದು ಎಂದೆಂದಿಗೂ ನಾಶವಿಲ್ಲದೆ ಶಾಶ್ವತವಾಗಿರುವುದು.ಅದನ್ನೇ ಬ್ರಹ್ಮ ಲೋಕವೆನ್ನುವರು.) ಮತ್ತು ಆ ಪರಮಪುರುಷನ ಮಧ್ಯಪ್ರದೇಶದಿಂದ ಅತಲವೂ, ತೊಡೆಗಳಿಂದ ವಿತಲವೂ, ಮಂಡಿಗಳಿಂದ ಸುತಲವೂ, ಮೊಳಕಾಲುಗಳಿಂದ ತಲಾತಲವೂ, ಹರಡುಗಳಿಂದ ಮಹಾತಲವೂ, ಪಾದಾಗ್ರಗಳಿಂದ ರಸಾತಲವೂ, ಅಂಗಾಲಿನಿಂದ ಪಾತಾಳವೂ ಕಲ್ಪಿಸಲ್ಪಟ್ಟಿರುವುವು. ಇದರಿಂದ ಆ ಪರಮಪುರುಷನೇ ಲೋಕಸ್ವರೂಪನೆನಿಸಿರುವನು. ಇದಲ್ಲದೆ ಆ ಪರಮಪುರುಷನ ಅಂಗಾಲು ಮೊದಲಾಗಿ ನಾಭಿಯವರೆಗಿರುವ ಅವಯವಗಳಿಂದ ಭೂಲೋಕವೂ, ಮೇಲೆ ಕಂಠಪರ್ಯಂತವಾಗಿರುವ ಅವಯವಗಳಿಂದ ಭುವರ್ಲೋಕವೂ, ಅತನ

ತಿರಸ್ಸಿನಿಂದ ಸ್ವರ್ಲೋಕವೂ, ಕಲ್ಪಿತಗಳಾಗಿರುವುವೆಂದು ಲೋಕಸೃಷ್ಟಿ ಕ್ರಮವನ್ನು ಹೀಗೆ ಸಂಗ್ರಹಿಸಿಯೂ ಹೇಳುವುದುಂಟು. ಇಲ್ಲಿಗೆ ಐದನೆಯ ಅಧ್ಯಾಯವು.

ಪುರುಷಸೂಕ್ತಕ್ಕನುಗುಣದಿಂದ ಪರಮಪುರುಷನ ಸ್ವರೂಪವನ್ನು ವಿವರಿಸಿದುದು.

ವಿರಾಡ್ವಿಭೂತಿವರ್ಣನವು.

ತಿರುಗಿ ಬ್ರಹ್ಮದೇವನು ನಾರದನನ್ನು ಕುರಿತು, "ನಾರದಾ! ಕೇಳು! ವಾಗಿಂದ್ರಿಯಕ್ಕೂ, ಆದಕ್ಕೆ ಅಧಿಷ್ಠಾನದೇವತೆಯಾದ ಅಗ್ನಿದೇವನಿಗೂ, ಆ ಪರಮಪುರುಷನ ಮುಖವೇ ಆಶ್ರಯಸ್ಥಾನವು. ದೇವತೆಗಳ ಆಹಾರವಾದ ಹವ್ಯ, ಪಿತೃಗಳ ಆಹಾರವಾದ ಕವ್ಯ, ಅವರಿಬ್ಬರಿಂದಲೂ ಭುಕ್ತಶೇಷವಾದ ಅಮೃತ, ಈ ಮೂರುಬಗೆಯ ಅನ್ನ ಬಲ್ಲೆರುವ ಷಡ್ವಿಧರಸಗಳಿಗೂ, ಮತ್ತು ನಮ್ಮ ರಸನೇಂದ್ರಿಯಕ್ಕೂ, ಆ ಇಂದ್ರಿಯಕ್ಕೆ ಅಧಿದೇವತೆಯಾದ ವರುಣನಿಗೂ, ಆ ಪರಮಪುರುಷನನಾಲಗೆಯೇ ಆಶ್ರಯಸ್ಥಾನವು ಸಮಸ್ತ ಜೀವರಾಶಿಗಳಪ್ರಾಣಗಳಿಗೂ, ಆ ಪ್ರಾಣಕ್ಕೆ ಅಧಿದೇವತೆಯಾದ ವಾಯುವಿಗೂ ಆತನ ನಾಸಾರಂಧ್ರಗಳೇ ಆಶ್ರಯಸ್ಥಾನವು. ಓಷಧಿಗಳಿಗೂ, ಅಶ್ವಿನೀದೇವತೆಗಳಿಗೂ, ಇಷ್ಟವಸ್ತುಲಾಭದಿಂದುಂಟಾಗುವ ಸುಖರೂಪವಾದಮೋದಕ್ಕೂ, ಅನಿಷ್ಟವಸ್ತುವಿನಲ್ಲಿ ಮಮತೆಯಿಂದ ಹುಟ್ಟುವ ಸುಖರೂಪವಾದ ಪ್ರಮೋದಕ್ಕೂ, ಅವನ ಘ್ರಾಣೇಂದ್ರಿಯವೇ ಸ್ಥಾನವು. ಮತ್ತು ಕಪ್ಪು, ಬಿಳುಪು ಮೊದಲಾದ ವರ್ಣಗಳಿಗೂ, ಅವುಗಳನ್ನು ಪ್ರಕಾಶಗೊಳಿಸುವ ತೇಜಸ್ಸಿಗೂ, ಆತನ ಚಕ್ಷುರಿಂದ್ರಿಯವೇ ಸ್ಥಾನವು. ದ್ಯುಲೋಕಕ್ಕೂ, ಸೂರ್ಯನಿಗೂ, ಆತನ ಕಣ್ಣುಗಳೆರಡೂ ಆವಾಸಸ್ಥಾನವು. ದಿಕ್ಕುಗಳಿಗೂ, ತೀರ್ಥಗಳಿಗೂ, ಆತನ ಕಿವಿಗಳು ಸ್ಥಾನವೆನಿಸುವುವು. ಆಕಾಶಕ್ಕೂ, ಆಕಾಶಗುಣವೆನಿಸಿದ ಶಬ್ದಕ್ಕೂ, ಆತನ ಶ್ರೋತ್ರೇಂದ್ರಿಯವು ಆಶ್ರಯವೆನಿಸುವುದು. ಸಮಸ್ತವಸ್ತುಗಳ ಸಾರಾಂಶಗಳಿಗೂ, ಅವುಗಳಸೌಂದರ್ಯಕ್ಕೂ ಆ ಪರಮಪುರುಷನ ಶರೀರವೇ ಸ್ಥಾನವು. ಸ್ಪರ್ಶಗುಣಕ್ಕೂ, ವಾಯುವಿಗೂ, ಸಮಸ್ತಯಜ್ಞಕ್ಕೂ ಅವನ ಚರ್ಮವೇ ಸ್ಥಾನವೆನಿಸುವುದು. ಸಮಸ್ತವೃಕ್ಷಗಳಿಗೂ, (ಯಜ್ಞಸಾಧನಗಳಾದ ವೃಕ್ಷಗಳಿಗೂ) ಆತನ ದೇಹದಲ್ಲಿರುವ

ಕೂದಲುಗಳೇ ಸ್ಥಾನವು. ಕಲ್ಲು,ಲೋಹಗಳು,ಮೇಘಗಳು,ಮಿಂಜು ಇವುಗಳಿಗೆ ಆತನ ತಲೆಕೂದಲು, ವೀಸೆ, ಉಗುರು, ಮುಂತಾದುವುಗಳು ಸ್ಥಾನವೆನಿಸುವುವು, ವಿಶೇಷವಾಗಿ ಲೋಕಕ್ಷೇಮಕಾರಿಗಳಾದ ಇಂದ್ರಾದಿಲೋಕಪಾಲಕರಿಗೆ ಆತನ ತೋಳುಗಳೇ ವಾಸಸ್ಥಾನವು. ಭೂಲೋಕ, ಭುವರ್ಲೋಕಗಳಿಗೆ ಆತನ ಮೂರಡಿಗಳು ಸ್ಥಾನವೆನಿಸುವುವು. ಸಮಸ್ತಲೋಕದ ಕ್ಷೇಮಕ್ಕೂ, ಅದರ ಅಸಿಷ್ಟನಿವಾರಣೆಗೂ, ಇಷ್ಟಪ್ರಾಪ್ತಿಗೂ, ಆತನ ಪಾದವೇ ಆಶ್ರಯವು. ಜಲದ ವೀರ್ಯವೆನಿಸಿದ ಶುಕ್ಲಕ್ಕೂ, ಸೃಷ್ಟಿಗೂ, ಪರ್ಜನ್ಯದೇವತೆಗೂ, ಪ್ರಜಾಧಿಪತಿಗೂ, ಆ ಭಗವಂತನ ಪುರುಷಲಿಂಗಸ್ಥಾನವೇ ಆಶ್ರಯವು. ಸಂತಾನಕ್ಕಾಗಿ ನಡೆಸುವ ಸಂಭೋಗದಿಂದುಂಟಾದ ಆನಂದಕ್ಕೆ ಆತನ ಉಪಸ್ಥೇಂದ್ರಿಯವೇ ಸ್ಥಾನವು. ಓ ನಾರದಾ! ಯಮಮಿತ್ರರೆಂಬ ದೇವತೆಗಳಿಗೂ, ಮಲವಿಸರ್ಜನೆಗೂ ಆತನ ಪಾಯುವೆಂಬ ಇಂದ್ರಿಯವು ಸ್ಥಾನವೆನಿಸುವುದು. ಹಿಂಸೆ, ಮೃತ್ಯು, ನಿರುತಿ, ನರಕವೆಂಬಿವುಗಳಿಗೆ ಆತನ ಗುದ ಸ್ಥಾನವೇ ಆಶ್ರಯವು. ಅಲಕ್ಷ್ಮಿ, ಅಧರ್ಮ, ಅಜ್ಞಾನವೆಂಬಿವುಗಳಿಗೆ ಆತನ ಪೃಷ್ಠಭಾಗವು ಸ್ಥಾನವೆನಿಸುವುದು. ನಧ್ಯನದಿಗಳಿಗೆ ಆತನ ನಾಡಿಗಳೂ, ಪರ್ವತಗಳಿಗೆ ಆತನ ಅಸ್ಥಿಪಂಜರವೂ ಸ್ಥಾನವೆನಿಸುವುವು. ಪ್ರಕೃತಿಗೂ, ಅನ್ನಾದಿಗಳಲ್ಲಿರುವ ರಸಕ್ಕೂ, ಸಮುದ್ರಗಳಿಗೂ, ಪ್ರಾಣಿಗಳ ಸಾವಿಗೂ, ಆತನ ಉದರಪ್ರದೇಶವೇ ಸ್ಥಾನವು. ಧರ್ಮಕ್ಕೂ, ನಮ್ಮಮಕ್ಕಳಾದ ಸನಕಾದಿಗಳಿಗೂ, ರುದ್ರನಿಗೂ, ಮಹತ್ತೆಂಬ ತತ್ತ್ವಕ್ಕೂ, ಆ ಪರಮಪುರುಷನ ಮನಸ್ಸೇ ಆಶ್ರಯವು. ಹೀಗೆ ಆ ಪರಮಪುರುಷನಿಂದುಂಟಾದ ಜಗತ್ತೆಲ್ಲವೂ, ಆತನ ವಿಭೂತಿಗಳೆನಿಸಿ, ಅವನಿಗೆ ಶರೀರರೂಪವಾಗಿಯೂ ಇರುವುದರಿಂದ,ಈಪ್ರಪಂಚದಲ್ಲಿ ಅವನಿಗಿಂತಲೂ ಬೇರೆಯಾದ ವಸ್ತುವೊಂದೂ ಇಲ್ಲ. ನಾರದಾ! ಮುಖ್ಯವಾಗಿ ಚತುರ್ಮುಖನಾದ ನಾನೂ, ನೀನೂ, ರುದ್ರನೂ, ಮೊದಲು ಹುಟ್ಟಿದ ಈ ಸನಕಾದಿಮಹರ್ಷಿಗಳೂ, ದೇವತೆಗಳೂ, ದಾನವರೂ, ಪರ್ವತಗಳೂ, ನಾಗರೂ, ಗಂಧರ್ವರೂ, ಅಪ್ಸರಸ್ಸುಗಳೂ, ಯಕ್ಷರೂ, ರಾಕ್ಷಸರೂ, ಭೂತಗಣಗಳೂ, ಪನ್ನಗರೂ, ಪಶುಗಳೂ, ಪಿತೃಗಳೂ, ಸಿದ್ಧವಿದ್ಯಾಧರಚಾರಣರೂ, ಸಮಸ್ತವೃಕ್ಷಗಳೂ, ಇನ್ನೂ ಜಲದಲ್ಲಿಯೂ,

ಸ್ಥಲದಲ್ಲಿಯೂ, ಆಕಾಶದಲ್ಲಿಯೂ ಜೀವಿಸತಕ್ಕ ಸಮಸ್ತಪ್ರಾಣಿಗಳೂ, ಗ್ರಹನಕ್ಷತ್ರತಾರೆಗಳೂ, ಮಿಂಚು, ಮೇಘ, ಮೊದಲಾದುವುಗಳೂ, ಇವೆಲ್ಲವೂ ಆ ಪರಮಪುರುಷನೆಂದೇ ತಿಳಿ! ಇನ್ನು ಹೆಚ್ಚು ಮಾತಿನಿಂದೇನು!*ಹಿಂದೆ ಹುಟ್ಟಿದುದಾಗಲಿ, ಈಗ ಹುಟ್ಟುತ್ತಿರುವುದಾಗಲಿ, ಮುಂದೆ ಹುಟ್ಟುವುದಾಗಲಿ,ಲೋಕದಲ್ಲಿ ಯಾವಯಾವ ವಸ್ತುವುಂಟೋ,ಅವೆಲ್ಲವೂ ಭಗವತ್ಸ್ವರೂಪವೇ!ಹೀಗೆ ಭೂತಭವಿಷ್ಯದ್ವರ್ತಮಾನಗಳಲ್ಲಿರುವ ಸಮಸ್ತವಸ್ತುಗಳೂ ಆತನಿಗೆ ಶರೀರ ಭೂತಗಳಾಗುವುದರಿಂದ, ಆತನಿಗಿಂತ ಬೇರೆಯಾದ ಸ್ವತಂತ್ರವಸ್ತುವೊಂದಾದರೂ ಇಲ್ಲ. † ನಾಭಿಯಿಂದ ಹಿಂದು ಗೋಣಳತೆಗೆ ಮೇಲೆ ನೆಲೆಗೊಂಡಿರುವ ನನ್ನ ಹೃದಯಕಮಲದಲ್ಲಿ ಅಡಗಿರುವ ಆ ಭಗವಂತನೆಂದಲೇ ಈ ಸಮಸ್ತಜಗತ್ತೂ ಅವರಿಸಲ್ಪಟ್ಟಿರುವುದು. ಹೀಗೆ ಹೃದಯಾಂತರ್ಯಾಮಿಯಾದ ಆ ಪರಮಪುರುಷನು ತನಗೆ ವಾಸಸ್ಥಾನವಾದ ಜೀವಶರೀರವನ್ನು ಒಳಭಾಗದಲ್ಲಿ ಸಂಪೂರ್ಣವಾಗಿ ವ್ಯಾಪಿಸಿ, ಶರೀರಸಹಿತವಾದ ಆ ಜೀವನನ್ನು ತನ್ನ ಅಧಿಕಾರಕ್ಕೊಳಪಡಿಸಿಕೊಂಡಿರುವನು. ಇದರಂತೆಯೇ ತನ್ನ ಶರೀರಕ್ಕಿಂತಲೂ ಹೊರಗಿರುವ ವಸ್ತುಗಳನ್ನೂ ತನಗಧೀನವಾಗಿ ಮಾಡಿಕೊಂಡು, ಸರ್ವ

---

* ಇಲ್ಲಿ "ಪುರುಷ ಏವೇದಂ ಸರ್ವಂ ಯದ್ಭೂತಂ ಯಚ್ಚ ಭವ್ಯಂ" ಎಂಬ ಶ್ರುತ್ಯರ್ಥವು ಸೂಚಿತವಾಗಿದೆ. ಚರಾಚರಾತ್ಮಕವಾತ ಪ್ರಪಂಚವು ಭಗವಂತನಿಗೆ ಶರೀರಭೂತವೆಂದು ಹೇಳುವುದರಿಂದ, ಜೀವಶರೀರಗಳಿಗೆ ಭೇದವಿರುವಂತೆ, ಪರಮಾತ್ಮನನ್ನೂ, ಪ್ರಪಂಚವನ್ನೂ ಬೇರೆವಸ್ತುಗಳೆನ್ನಾಗಿ ಗ್ರಹಿಸಬಾರದು. ಏಕೆಂದರೆ, ನಾಮರೂಪವಿಭಾಗಗಳೊಂದೂ ತೋರದಂತೆ ಸೂಕ್ಷ್ಮಾವಸ್ಥೆಯಲ್ಲಿದ್ದ ಪ್ರಕೃತಿಪುರುಷಕಾಲಗಳನ್ನು ಶರೀರವಾಗಿ ಹೊಂದಿದ ಪರಮಪುರುಷನೇ, ನಾಮರೂಪವಿಭಾಗಗಳಿಂದ ಕಾಣತಕ್ಕ ಸ್ಥೂಲಾವಸ್ಥೆಯನ್ನು ಹೊಂದಿದ ಪ್ರಕೃತಿ ಮೊದಲಾದ ಶರೀರದೊಡನೆ ಸ್ವಸ್ವರೂಪವಾದ ಜಗತ್ತಾಗಿ ಪರಿಣಮಿಸುವುದರಿಂದ, ಏಕತ್ವವೇ ಸಂಭವಿಸುವುದು "ಸರ್ವಂ ಖಲ್ವಿದಂಬ್ರಹ್ಮ" "ಅಯಮಾತ್ಮಾ ಬ್ರಹ್ಮ" "ತತ್ತ್ವಮಸಿ" ಇತ್ಯಾದಿವೇದಾಂತವಾಕ್ಯಗಳಿಗೆ ಇದೇ ಅಭಿಪ್ರಾಯವು.

† ಇಲ್ಲಿ "ಅಧೋ ನಿಷ್ಠ್ಯಾವಿತಸ್ಯಾಂತು ನಾಭ್ಯಾಮುಪರಿ ಶಿಷ್ಠತಿ, ಹೃದಯಂ ತದ್ವಿಜಾನೀಯಾದ್ವಿಶ್ವಸ್ಯಾಯತನಂ ಮಹತ್" ಎಂಬ ಶ್ರುತ್ಯರ್ಥಗಳು ಸೂಚಿತವಾಗಿವೆ.

ವ್ಯಾಪಿಯಾಗಿರುವನು. ಅನಿರುದ್ಧರೂಪಿಯಾದ * ಆ ವಿರಾಟ್ಪುರುಷನಿಂದ ಸೃಷ್ಟವಾದ ಈ ಬ್ರಹ್ಮಾಂಡವೆಲ್ಲವೂ ಆತನ ಅಧಿಕಾರಕ್ಕೊಳಪಟ್ಟು ಬಳಿಗೆ ಹೊರಗೆಲ್ಲಾ ಆತನಿಂದಲೇ ಆವರಿಸಲ್ಪಟ್ಟಿರುವುವು.† ಆ ಭಗವಂತನು ಅನಿತ್ಯವಾಗಿಯೂ, ಅನುಭವಿಸಿ ಕೆಲವು ಕಾಲದನಂತರ ಬಿಡತಕ್ಕುದಾಗಿಯೂ ಇರುವ ಕರ್ಮಫಲವನ್ನು ಅತಿಕ್ರಮಿಸಿದವನಾಗುವುದರಿಂದ, ನಿರ್ಭಯವಾದ ಮೋಕ್ಷವನ್ನು ಕೊಡುವುದಕ್ಕೆ ಆತನೊಬ್ಬನಲ್ಲದೆ ಬೇರೊಬ್ಬರು ‡ಸಮರ್ಥರಲ್ಲ. ಹೀಗೆ ಶರೀರದಲ್ಲಿದ್ದರೂ ಜೀವನಿಗಿಂತಲೂ ವಿಲಕ್ಷಣನಾದ ಆ ಪರಮಾತ್ಮನಲ್ಲಿ ಇದೊಂದು ಅದ್ಭುತವಾದ ಮಹಿಮೆಯುಂಟು. ಅವನ ಮಹಿಮೆಯನ್ನು ಹೀಗೆಂದು ನಿರ್ಣಯಿಸುವುದೇ ಸಾಧ್ಯವಲ್ಲ. ಸಮಸ್ತಪ್ರಪಂಚಸ್ವರೂಪನಾಗಿದ್ದರೂ, ಅದರ ದೋಷವನ್ನು ಮಾತ್ರ ತನ್ನಲ್ಲಿ ಅಂಟಿಸಿಕೊಳ್ಳದಂತಿರುವನು. ಆವನಲ್ಲಿ ಎಂತಹ ಅಸಾಧಾರಣಗುಣಗಳನ್ನು ಹೇಳಿದರೂ ಹೊಂದುವುದು. ಭೂರಾದಿಲೋಕಗಳೆಲ್ಲವನ್ನೂ §ತನಗೆ ಅಂಶಭೂತವಾಗಿ ಹೊಂದಿರುವ ಆಪರಮಾತ್ಮನ ಏಕದೇಶದಲ್ಲಿಯೇ ದೇವಾದಿಜಗತ್ಸೃಷ್ಟಿಭೂತಗಳೂ, ಅಡಗಿಕೊಂಡಿರುವುವೆಂದು ಹಿರಿಯರು ತನ್ನ ಬಾಹ್ಯಾಸಮೃಷ್ಟಿಯಿಂದ ತಿಳಿಯುವರು. ನಾರದಾ!¶ ಸಾವು ಮೊದಲಾದ ವಿಕಾರಗಳಿಲ್ಲದಿರುವುದು, ಅವುಗಳನ್ನು ಕುರಿತ ಭಯವಿಲ್ಲದಿರುವುದು, ಎಲ್ಲರೂ ಆಸೆಪಡತಕ್ಕುದಾದ ಮಹಾನಂದವನ್ನನುಭವಿಸುವುದು, ಈ ಮೂರುಬಗೆಯ ಐಶ್ವರ್ಯವನ್ನೂ ಆತನು ಆ ಪರಮಪದವೊಂದರ

* ಇಲ್ಲಿ "ಸ ಭೂಮಿಂ ವಿಶ್ವತೋ ವೃತ್ವಾ" ಎಂದು ಶ್ರುತಿಯು.

† ಇಲ್ಲಿ "ಉತಾಮೃತತ್ವಸ್ಯ" ಎಂಬುದು ಶ್ರುತಿವಾಕ್ಯವು.

‡ ಇಲ್ಲಿ "ಏತಾವಾನಸ್ಯಮಹಿಮಾ" ಎಂಬುದು ಶ್ರುತಿವಾಕ್ಯವು.

§ ಇಲ್ಲಿ "ಯಸ್ಯಾಯುತಾಯುತಶತೈಕಕಲಾಂಶಕಾಂಶೇ ವಿಶ್ವಂ ವಿಚಿತ್ರ ಚಿದಚಿತ್ಪ್ರವಿಭಾಗವೃತ್ತಮ್" ಎಂಬ ವಾಕ್ಯಾರ್ಥವು ಹೇಳಲ್ಪಡುವುದು.

¶ ಇಲ್ಲಿ "ಅಮೃತಂ ಕ್ಷೇಮಮುಭಯಂ ತ್ರಿಮೂರ್ಧಾಥಾಯಿ ಮೂರ್ಧನಿ" ಎಂದು ಮೂಲವು. ಇಲ್ಲಿ ಅಮೃತಾದಿ ವಿಶೇಷಣತ್ರಯದಿಂದ, ಆತ್ಮನಿಗೆ ಮುಕ್ತಿಯಲ್ಲಿ ಪ್ರಾಪ್ತವಾಗುವ "ಏಷ ಆತ್ಮಾ ಅಪಹತಪಾಪ್ಮಾ ವಿಜರೋ ವಿಮೃತ್ಯುರ್ವಿಶೋಕೋ ವಿಜಿಘತ್ಸೋಽಪಿಪಾಸಸ್ಸತ್ಯಕಾಮ ಸ್ಸತ್ಯಸಂಕಲ್ಪಃ" ಎಂಬ ಶ್ರುತ್ಯುಕ್ತಗುಣಾದ ಎಂಟು ಗುಣಗಳೂ ಸೂಚಿತವಾಗುವುವು.

ಲ್ಲಿಯೇ ಅಡಗಿಸಿಟ್ಟಿರುವನು ಅದು ಈ ಪ್ರಕೃತಿಮಂಡಲಕ್ಕಿಂತಲೂ ಹೊರಗಾಗಿ,ಆ ಪರಮಪುರುಷನ ನಿವಾಸಸ್ಥಾನವಾಗಿರುವುದು. ಆ ಲೋಕವನ್ನು ಸೇರಿದವರುಮಾತ್ರವೇ ಎಂದೆಂದಿಗೂ ಮರಣವಿಲ್ಲದೆ, ಮರಣಭಯವೂ ಇಲ್ಲದೆ ನಿರತಿಶಯಾನಂದವನ್ನನುಭವಿಸಬಲ್ಲರು. ಅಲ್ಲಿ ಸೇರಿದವರಿಗೆ ಯಾವವಿಧವಾದ ದುಃಖವೂ ಇರುವುದಿಲ್ಲ. ಆ ವೈಕುಂಠಲೋಕವೆಂಬುದು ಭಗವದ್ವಿಭೂತಿಗಳಲ್ಲಿ ಮೂರುಪಾಲನ್ನೊಳಕೊಂಡು,ತ್ರಿಪಾದ್ವಿಭೂತಿಯೆನಿಸಿ ಪ್ರಕೃತಿಮಂಡಲಕ್ಕಿಂತಲೂ ಅತಿವಿಪುಲವಾಗಿರುವುದು ಅಲ್ಲಿ ಪುನರ್ಜನ್ಮವಿಲ್ಲದ ನಿತ್ಯಮುಕ್ತರುಮಾತ್ರವಾಸಮಾಡುವರು. ಉಳಿದ ನಾಲ್ಕನೆಯಭಾಗವುಮಾತ್ರ ಏಕಪಾದ್ವಿಭೂತಿಯೆನಿಸಿ, ಈ ಮೂರುಲೋಕವನ್ನೊಳಕೊಂಡಿರುವದು. ಇದು ಸಂಸಾರಿಗಳಾದ ಜೀವರಾಶಿಗಳಿಗೆ ನಿವಾಸಸ್ಥಾನವು. ಅಹಂಕಾರ ಮಮಕಾರಾದಿಗಳಿಗೂ,ವರ್ಣಾಶ್ರಮ ನಿಬಂಧನೆಗಳಿಗೂ ಕಟ್ಟುಬಿದ್ದು,ಪುಣ್ಯಪಾಪರೂಪವಾದ ಕರ್ಮಗಳ ಫಲವನ್ನು ಅನುಭವಿಸತಕ್ಕವರಿಗೆ ಇದೇ ನಿವಾಸಸ್ಥಾನವಾಗಿರುವುದು. ಈ ಲೋಕದಲ್ಲಿ ಜನನಮರಣಗಳಿಗೆ ಸಿಕ್ಕಿ ಬಿದ್ದಿರುವ ಸಂಸಾರಿಗಳಲ್ಲಿಯೂಕೂಡ ಭೋಗಾಪೇಕ್ಷೆಗಳೆಂದೂ, ಮೋಕ್ಷಾಪೇಕ್ಷೆಗಳೆಂದೂ ಎರಡು ಬಗೆಯುಂಟು. ಆ ಎರಡು ಬಗೆಯವರಲ್ಲಿ, ಭೋಗಾಪೇಕ್ಷೆಗಳು ತಮ್ಮತಮ್ಮ ಕರ್ಮಾನುಸಾರವಾಗಿ ಭೋಗಗಳನ್ನನುಭವಿಸುವುದಕ್ಕೆ ತಕ್ಕ ಸ್ಥಾನಗಳಾದ ಸ್ವರ್ಗಾದಿಲೋಕಗಳನ್ನು ಸೇರಬೇಕಾದರೆ, ಅವರು ಹೋಗಬೇಕಾದ ದಾರಿಯೊಂದುಂಟು. ಇದಕ್ಕೆ ಧೂಮಾದಿಮಾರ್ಗವೆಂದು ಹೆಸರು. ಇದನ್ನು ಬಿಟ್ಟು ಮೋಕ್ಷಕ್ಕೆ ಹೋಗಬೇಕಾದ ದಾರಿಯೇ ಬೇರೆ! ಅದನ್ನು ಅರ್ಚಿರಾದಿಮಾರ್ಗವೆಂದು ಹೇಳುವರು. ಇಂತವರು ಕರ್ಮಗಳನ್ನು ತೊರೆದು, ಪ್ರಕೃತಿಸಂಬಂಧವಿಲ್ಲದೆ, ಅಪ್ರಾಕೃತವಾದ ದಿವ್ಯಶರೀರದೊಡನೆ ಭಗವಂತನನ್ನು ಅನುಭವಿಸುವರು.ಧೂಮಾದಿಮಾರ್ಗದಿಂದ ಸ್ವರ್ಗ ಮೊದಲಾದ ಸ್ಥಾನಗಳನ್ನು ಸೇರಬೇಕೆಂದು ಕೋರುವವರಿಗೆ,ಯಾಗಾದಿಕರ್ಮರೂಪಗಳಾದ ಅವಿದ್ಯೆಯೇ ಸಾಧನವು.ಅರ್ಚಿರಾದಿಮಾರ್ಗದಿಂದ ವೈಕುಂಠಲೋಕವನ್ನು ಸೇರುವುದಕ್ಕೆ ಭಗವದುಪಾಸನವೆಂಬ ವಿದ್ಯೆಯೊಂದೇ ಮುಖ್ಯಸಾಧನವು. ಜೀವಾತ್ಮನಿಗೆ ಈ ಮೇಲೆ ಹೇಳಿದ ಎರಡು ಸ್ಥಾನಗಳಿಗೂ ಪ್ರವೇಶವುಂಟು. ಇವನು ಅವಕ್ಕೆ

ಬೇಕಾದ ಎರಡು ಬಗೆಯ ಉಪಾಯಗಳಲ್ಲಿ ಯಾವುದನ್ನಾದರೂ ಹಿಡಿಯಬಹುದು. ಆದುದರಿಂದ ಮನುಷ್ಯರು ಅವರವರ ಅಭಿರುಚಿಗೆ ತಕ್ಕಂತೆ ಆಯಾ ಉಪಾಯಗಳಲ್ಲಿ ಪ್ರವರ್ತಿಸುವರು. ಅದುಹಾಗಿರಲಿ! ಪ್ರಪಂಚಸೃಷ್ಟಿಗೆಮೊದಲು *ವಿರಾಟ್ಪುರುಷನೆಂದೂ, ಅನಿರುದ್ಧನೆಂದೂ, ಪ್ರಖ್ಯಾತನಾದ ಅತನು, ತನಗೆ ಶರೀರಭೂತವಾಗಿಯೂ, ಈ ಪ್ರಪಂಚನಿರ್ಮಾಣಕ್ಕೆ ಬೇಕಾದ (ಉಪಾದಾನ) ಸಾಮಗ್ರಿಯಾಗಿಯೂ ಇದ್ದ ಪ್ರಕೃತಿಯಿಂದ, ಮಹತ್ತು, ಅಹಂಕಾರ, ಭೂತಗುಣಗಳೈದು, ಭೂತಗಳೈದು, ಇವೆಲ್ಲವನ್ನೂ ಗ್ರಹಿಸಿ, ಸಪ್ತೀಕರಣರೀತಿಯಿಂದ ಒಂದಕ್ಕೊಂದನ್ನು ಕಲೆಸಿ,ಅಂಡವನ್ನು ಸೃಷ್ಟಿಸಿದನು. ಆಮೇಲೆ ಪಂಚಭೂತಗಳಿಂದಲೂ, ಏಕಾದಶೇಂದ್ರಿಯಗಳಿಂದಲೂ,ಸತ್ವರಜಸ್ತಮೋಗುಣಗಳಿಂದಲೂ ಕೂಡಿದ ದೇವಮನುಷ್ಯಾದಿಪ್ರಪಂಚಗಳನ್ನು ಸೃಷ್ಟಿಸಬೇಕೆಂದೆಣಿಸಿ,ಅದಕ್ಕೆ ತಕ್ಕ ಆಕಾರದಿಂದ ತಾನೂ ಗೋಚರಿಸಿದನು. ಮತ್ತು ಆ ಪರಮಪುರುಷನು ತಾನು ಆ ಅಂಡದಲ್ಲಿ ಮಾತ್ರವೇ ಅಡಗಿರದೆ,ಸೂರ್ಯನು ಘಟಾದಿವಸ್ತುಗಳಲ್ಲಿ ತನ್ನ ಕಿರಣಗಳಿಂದ ಒಳಹೊಕ್ಕು, ಅವುಗಳ ಒಳಭಾಗದಲ್ಲಿಮಾತ್ರವೇ ಅಡಗಿರದೆ, ತನ್ನ ಕಿರಣಗಳಿಂದ ಅವುಗಳ ಹೊರ

---

* ಇಲ್ಲಿ "ತಸ್ಮಾದ್ವಿರಾಡಜಾಯತ" ಎಂದು ಶ್ರುತಿಯು. ಇಲ್ಲಿ ಕಾರಣಪುರುಷನಿಂದ ಅನಿರುದ್ಧರೂಪಿಯಾದ ವಿರಾಟ್ಪುರುಷನು ಹುಟ್ಟಿ, ತಾನೇ ಬ್ರಹ್ಮಾಂಡಕಾರಣನಾದ ವೈರಾಜಪುರುಷನೂ ಆದುದಾಗಿ ಗ್ರಾಹ್ಯವು. ಈ ವೈರಾಜಪುರುಷನೇ ತನಗೆ ಶರೀರಭೂತವಾದ ಪ್ರಕೃತಿಯೆಂಬ ಉಪಾದಾನಕಾರಣದಿಂದ ಅಂಡವನ್ನು ಸೃಷ್ಟಿಸಿ, ಅದರ ಒಳಹೊರಭಾಗಗಳನ್ನೆಲ್ಲಾ ತಾನೇ ಆವರಿಸಿದ್ದನು. ಇಲ್ಲಿ ಗ್ರಹಿಸಬೇಕಾದ ಮುಖ್ಯಾಂಶವೇನೆಂದರೆ, ಸೂಕ್ಷ್ಮಪ್ರಕೃತಿಪುರುಷಶರೀರಿಯಾದ ಪರಮಾತ್ಮನೇ, ಸ್ಥೂಲ ಪ್ರಕೃತಿ ಪುರುಷವಿಶಿಷ್ಟವಾದ ಪ್ರಪಂಚರೂಪದಿಂದ ಪರಿಣಾಮಹೊಂದಿರುವನು. ಆದುದರಿಂದ ಪ್ರಕೃತಿ, ಜೀವ, ಈಶ್ವರರೆಂಬ ಈ ಮೂರು ತತ್ವಗಳ ಪರಿಣಾಮದಲ್ಲಿಯೂ ಮೂರುಬಗೆಯ ವ್ಯತ್ಯಾಸವುಂಟು. ಪ್ರಕೃತಿಯಲ್ಲಿ ರೂಪದ ಬದಲಾವಣೆ, ಜೀವನಲ್ಲಿ ಸ್ವಭಾವದ ಬದಲಾವಣೆ,ಈಶ್ವರನಲ್ಲಿ ನಿಯಮನಕ್ಕನುದ ಬದಲಾವಣೆಯೆಂದು ಭೇದವನ್ನು ಗ್ರಹಿಸಬೇಕು. ಮತ್ತು ವಸ್ತ್ರದಲ್ಲಿರುವ ನೂಲಿನ ಕಪ್ಪು, ಬಿಳುಪು ಮೊದಲಾದ ಬಣ್ಣಗಳು, ವಸ್ತ್ರದಲ್ಲಿ ಕಂಡರೂ, ಆ ನೂಲನ್ನು ಬಿಟ್ಟು ಬೇರೆಕಡೆಗಳಿಗೆ ಕದಲದಂತೆ ಪ್ರಕೃತಿ ಜೀವಗಳ ಪರಿಣಾಮಗುಣಗಳೂ ಪರಮಾತ್ಮನಲ್ಲಿ ಸೇರಲಾರವೆಂದು ಗ್ರಾಹ್ಯವು.

ಭಾಗವನ್ನೂ ವ್ಯಾಪಿಸಿ ನಿಲ್ಲುವಂತೆ,ಭಗವಂತನೂಕೂಡ ಆ ಅಂಡವೆಲ್ಲವನ್ನೂ ತನ್ನ ಸ್ವರೂಪದಿಂದ ವ್ಯಾಪಿಸಿದನು. ಆದುದರಿಂದ ಭಗವಂತನು ಆ ಪ್ರಕೃತಿಗಿಂತಲೂ ವಿಲಕ್ಷಣನಾಗಿಯೂ, ತನಗೆ ಶರೀರಭೂತಗಳಾದ ಚೇತನಾಚೇತನಗಳಲ್ಲಿರುವ ದೋಷಗಳಿಗೆ ಭಾಗಿಯಾಗದೆಯೂ ಇರುವನೆಂದು ತಿಳಿ ! ಆದರೆ ಸಮಸ್ತವೂ ಆ ಪುರುಷಸ್ವರೂಪವೇ ಆಗಿದ್ದಪಕ್ಷದಲ್ಲಿ, ಯಜ್ಞಯಾಗಾದಿಗಳೂ, ಅವುಗಳನ್ನು ನಡೆಸುವುದಕ್ಕೆ ಬೇಕಾದ ಸಾಧನಸಾಮಗ್ರಿಗಳೂ, ಅವನಿಗಿಂತಲೂ ಬೇರೆಯಾಗಿರುವುವೆಂದು ಹೇಳುವುದಕ್ಕಿಲ್ಲವಷ್ಟೆ ? ಹಾಗಿದ್ದರೆ ಆ ಯಾಗಾದಿಗಳಿಂದ ಅವನನ್ನು ಆರಾಧಿಸಬೇಕೆಂಬುದು ಹೇಗೆ" ಎಂದು ನಿನಗೆ ಶಂಕೆಯುಂಟಾಗಬಹುದು. ಅದಕ್ಕೂ ಸಮಾಧಾನವನ್ನು ಹೇಳುವೆನು ಕೇಳು. ಆ ಪರಮಪುರುಷನು ಅಸಾಧಾರಣನುಹಿಮೆಯುಳ್ಳವನು ಮೊದಲು ಆ ವಿರಾಟ್ಪುರುಷನ ನಾಭಿಕಮಲದಿಂದ ಚತುರ್ಮುಖನಾದ ನಾನು ಹುಟ್ಟಿದೆನು. ಅವನನ್ನು ಯಾಗಗಳಿಂದ ಆರಾಧಿಸಬೇಕೆಂದು ನನ್ನ ಮನಸ್ಸಿಗೆ ತೋರಿತು. ಆಗ ಆ ಪರಮಪುರುಷನ ಅವಯವಗಳುಹೊರತು ಬೇರೆ ಯಾವ ಯಾಗೋಪಕರಣಗಳೂ ನನಗೆ ಗೋಚರಿಸಲಿಲ್ಲ. ನಾನು ಇದಕ್ಕಾಗಿ ಚಿಂತಿಸುತ್ತ, ಆ ಪರಮಪುರುಷನ ಅವಯವಗಳನ್ನೇ ಮನಸ್ಸಿನಲ್ಲಿ ದೃಢನಾಗಿ ನಿಲ್ಲಿಸಿಕೊಂಡು ಧ್ಯಾನಿಸುತಿದ್ದೆನು. ಆ ಅವಯವಗಳೇ ನನಗೆ ಯಾಗೋಪಕರಣಗಳಾಗಿ ಒದಗಿ ಬಂದುವು. ಯಜ್ಞಕ್ಕೆ ತಕ್ಕ ಪಶುಗಳೂ, ಯೂಪಸ್ತಂಭವೊದಲಾದುವುಗಳಿಗೆ ಉಪಯೋಗಪಡುವ ವೃಕ್ಷಗಳೂ, ಇದೋ ನಾನಿರುವ ಈ ಯಾಗಭೂಮಿಯೂ, ಯಾಗಕ್ಕೆ ತಕ್ಕ ವಸಂತಾದಿಕಾಲವೂ, ಪುರೋಡಾಶ ಮೊದಲಾದ ವಸ್ತುಗಳೂ,ಅದಕ್ಕೆ ಬೇಕಾದ ಬತ್ತ, ಗೋಧುವೆ, ಮುಂತಾದ ಔಷಧಿಗಳೂ,ತುಪ್ಪ ಮೊದಲಾದುವೂ,ಸೋಮರಸ ಮೊದಲಾದ ರಸಗಳೂ, ಸ್ವರ್ಣಾದಿಲೋಹಗಳೂ,ಕಪಾಲಮೊದಲಾದುವುಗಳಿಗೆ ಬೇಕಾದ ಮಣ್ಣು, ನೀರು ಮುಂತಾದುವೂ,ಋಗ್ಯಜುಸ್ಸಾಮಗಳೆಂಬ ವೇದಗಳೂ, ಚತುರ್ಹೋತ್ರಮಂತ್ರಗಳಿಂದ ಪ್ರಕಾಶಿತಗಳಾದ ಕರ್ಮಗಳೂ, ಜ್ಯೋತಿಷ್ಟೋಮಾದಿನಾಮಗಳೂ, ಸ್ವಾಹಾಕಾರವೇ ಮೊದಲಾದ ಮಂತ್ರಗಳೂ, ದಕ್ಷಿಣೆಗಳೂ ವ್ರತಗಳೂ, ದೇವತಾನುಕ್ರಮವೂ, ಪ್ರಯೋಗವಿಧಿಗಳೂ, ಸಂಕಲ್ಪವೂ

ಕ್ರಿಯಾಕಲಾಪಗಳೂ, ವಿಷ್ಣುಕ್ರಮವೇ ಮೊದಲಾದ ಗತಿಗಳೂ, ದೇವ
ತಾಧ್ಯಾನಗಳೂ, ಶ್ರದ್ಧೆಯೂ, ಪ್ರಾಯಶ್ಚಿತ್ತಗಳೂ, ಕರ್ಮಸಮರ್ಪಣ
ವೂ, ಇನ್ನೂ ಯಾಗಕ್ಕೆ ಯಾವಯಾವ ಅಂಗಗಳುಂಟೋ ಅವೆಲ್ಲವನ್ನೂ,
ನಾನು ಆ ಭಗವಂತನ ಅವಯವಗಳಿಂದಲೇ ಕಲ್ಪಿಸಿಕೊಂಡೆನು. ಹೀಗೆ ನಾ
ನು ಆ ವಿರಾಟ್ಪುರುಷನ ಅವಯವಗಳಿಂದ ಸಮಸ್ತಯಾಗಸಾಧನಗಳನ್ನೂ
ಕಲ್ಪಿಸಿಟ್ಟುಕೊಂಡು, ಅವುಗಳಿಂದ ಅತನ ಪ್ರೀತಿಗಾಗಿ ಯಾಗಗಳನ್ನು
ನಡೆಸಿ ಅವನನ್ನಾರಾಧಿಸಿದೆನು. ಆಗ ನಿನ್ನ ಒಡಹುಟ್ಟಿದವರಾದ ಮರೀಚಿ
ಮೊದಲಾದ ಈ ಒಂಭತ್ತುಮಂದಿ ಪ್ರಜಾಧಿಪತಿಗಳೂ, ನಾನು ಮಾಡಿದ
ಯಾಗವನ್ನು ನೋಡಿ, ಬಹಳ ಭಕ್ತಿಯುಕ್ತರಾಗಿ, ನಿಜಸ್ವರೂಪದಿಂದ ಕಣ್ಣಿಗೆ
ಕಾಣದಿದ್ದರೂ,ಇಂದ್ರಾದಿರೂಪದಿಂದ ಗೋಚರಿಸುತಿದ್ದ ಆ ಪರಮಪುರುಷ
ನನ್ನು ಯಾಗಗಳಿಂದಾರಾಧಿಸಿದರು ಆಮೇಲೆ ಮನುಗಳೂಕೂಡ ಅದನ್ನು
ನೋಡಿ ತಮತಮನುಗೆ ಅನುಕೂಲವಾದ ಕಾಲಗಳಲ್ಲಿ ಯಾಗಗಳನ್ನು ನಡೆಸಿ
ಸರ್ವಾಂತರ್ಯಾಮಿಯಾದ ಆ ಭಗವಂತನನ್ನಾರಾಧಿಸಿದರು. ಅದರಂತೆಯೇ
ದೇವದಾನವರೂ, ರಾಜರೂ, ಮುನೀಶ್ವರರೂ, ದೃಢವಾದ ನಿಯಮದಿಂದ
ಭಗವದಾರಾಧನಗಳನ್ನು ನಡೆಸಿದರು. ಹಾಗೆಯೇ ವಿಷ್ಣುಪ್ರೀತಿಗಾಗಿ ಇನ್ನೂ
ಅನೇಕರು ಯಜ್ಞವನ್ನು ನಡೆಸುತ್ತಿರುವರು. ಪ್ರಕೃತಿಸಂಬಂಧವಾದ ಗುಣ
ಗಳಿಲ್ಲದ ಪರಮಾತ್ಮನು, ತನ್ನಲ್ಲಿ ಸೂಕ್ಷ್ಮರೂಪದಿಂದ ಸೇರಿದ್ದ ಜಗತ್ತನ್ನು
ಸೃಷ್ಟಿಸುವುದಕ್ಕಾಗಿಯೇ, ಮಾಯಾಗುಣಗಳಾದ ಸತ್ವರಜಸ್ತಮೋಗುಣಗ
ಳನ್ನು ಸ್ವೀಕರಿಸಿ,ಸೃಷ್ಟಿಕಾರ್ಯಕ್ಕಾಗಿ ನನ್ನನ್ನು ನಿಯಮಿಸಲು,ನಾನು ಅತನ
ಅನುಮತಿಯಿಂದ ಲೋಕಗಳನ್ನು ಸೃಷ್ಟಿಸುತ್ತಿರುವೆನು. ರುದ್ರನೂಕೂಡ
ನನ್ನಂತೆಯೇ ಅತನ ಆಜ್ಞಾಧೀನನಾಗಿ ಈ ಪ್ರಪಂಚದ ಸಂಹಾರಕಾರ್ಯ
ವನ್ನು ನಡೆಸುತ್ತಿರುವನು. ಆ ಭಗವಂತನು ತಾನೇ ವಿಷ್ಣುವಾಗಿ ಅವತರಿಸಿ
ಈ ಪ್ರಪಂಚವನ್ನು ರಕ್ಷಿಸುತ್ತ ಬರುವನು. ಬ್ರಹ್ಮರುದ್ರರಲ್ಲಿ ಅಂತರ್ಯಾ
ಮಿಯಾಗಿದ್ದು ಸೃಷ್ಟಿಸಂಹಾರಗಳನ್ನೂ,ನಿಜಸ್ವರೂಪದಿಂದ ರಕ್ಷಣಕಾರ್ಯ
ವನ್ನೂ ಆ ಪರಮಪುರುಷನು ತಾನಾಗಿಯೇ ನಡೆಸುತ್ತಿರುವನು.ಹೀಗೆ ಸೃಷ್ಟಿ
ಸ್ಥಿತಿಸಂಹಾರಗಳೆಂಬ ಈಮೂರು ಕಾರ್ಯಗಳನ್ನು ನಡೆಸತಕ್ಕಮೂರು ಶಕ್ತಿ

ಯೂ ಅವನೊಬ್ಬನಲ್ಲಿರುವುದೇಹೊರತು, ಜೇತನಾಜೇತನರೂಪವಾದ ಈ ಪ್ರಪಂಚದಲ್ಲಿ, ಆ ಭಗವಂತನಿಗಿಂತಲೂ ಬೇರೆಯಾದ ಸ್ವತಂತ್ರವಸ್ತುವಾಗಲಿ, ಅವನಿಗೆ ಮೇಲಾದುದಾಗಲಿ, ಅವನಿಗೆ ಸಮವಾದುದಾಗಲಿ, ಯಾವುದೊಂದೂ ಇಲ್ಲವೆಂದು ತಿಳಿ! ಇದನ್ನು ನೀನು ದೃಢವಾಗಿ ನಂಬು!(ನೀನು ಆ ಭಗವಂತನ ನಿಜಸ್ಥಿತಿಯನ್ನು ಇನ್ನೂ ಚೆನ್ನಾಗಿ ತಿಳಿಯದವನಾದುದರಿಂದ, ನನ್ನನ್ನೇ ಸೃಷ್ಟಿಕರ್ತನನ್ನಾಗಿ ತಿಳಿದು, ಪ್ರಪಂಚದಲ್ಲಿ ನನಗೆಮೇಲೆ ಬೇರೊಬ್ಬರೂ ಇಲ್ಲವೆಂದು ಭ್ರಮೆಗೊಂಡಿರುವಂತಿದೆ ! ನನಗೂ ಆತನೇ ಪ್ರಭುವು. ಆತನೇ ನನ್ನಲ್ಲಿ ಅಂತರ್ಯಾಮಿಯಾಗಿದ್ದು ನನ್ನನ್ನು ಆಯಾ ಕಾರ್ಯಗಳಲ್ಲಿ ಪ್ರೇರಿಸುತ್ತಿರುವನು) ನಾರದಾ ! ನನ್ನ ಮಾತನ್ನು ಎಂದಿಗೂ ಸುಳ್ಳೆಂದು ತಿಳಿಯಬೇಡ ! ನನ್ನ ಮನಸ್ಸಿನ ಭಾವನೆಯೂಕೂಡ ಸುಳ್ಳಾಗಲಾರದು! ಆ ಭಗವಂತನ ಗುಣವರ್ಣನಗಳಿಂದುಂಟಾದ ಮಹಿಮೆಯಿಂದ, ನನ್ನ ಬಾಯಲ್ಲಿ ಹೊರಟ ವಾಕ್ಯವೊಂದಾದರೂ ಅಸತ್ಯವಾಗಲಾರದು. ನನ್ನ ಇಂದ್ರಿಯಗಳೂ ದುರ್ಮಾರ್ಗಕ್ಕೆ ಹೋಗಲಾರವು. ನಾನು ಶ್ರದ್ಧೆಯಿಂದ ಭಗವದುಪಾಸನವನು ಮಾಡುತ್ತಿರುವುದೇ ಇವಕ್ಕೆಲ್ಲಾ ಕಾರಣವು. ಆ ಭಗವಂತನ ಅನುಗ್ರಹಬಲದಿಂದಲ್ಲದೆ ನನ್ನ ಶಕ್ತಿಯಿಂದ ಯಾವುದೂ ನಡೆಯಲಾರದು, ವತ್ಸ ನಾರದಾ ! ಮತ್ತೊಂದಾಶ್ಚರ್ಯವನ್ನು ಹೇಳುವೆನು ಕೇಳು! ಆ ಭಗವದನುಗ್ರಹದಿಂದ ನಾನು ಎಷ್ಟೋವಿಧದಲ್ಲಿ ಮೇಲ್ಮೆಯನ್ನು ಪಡೆದಿರುವೆನು. ಸಮಸ್ತವೇದಗಳೂ ನನಗೆ ಹೃದ್ಗತವಾಗಿ ನಾನೇ ವೇದಮಯನೆನಿಸಿಕೊಂಡಿರುವೆನು. ಅನೇಕತಪಸ್ಸುಗಳನ್ನು ಮಾಡಿ ತಪೋಮಯನೆನಿಸಿರುವೆನು. ಮರೀಚಿ ಮೊದಲಾದ ನವಬ್ರಹ್ಮರಿಂದಲೂ ನಾನು ಎಷ್ಟೋ ಗೌರವಪೂರ್ವಕವಾಗಿ ನಮಸ್ಕರಿಸಲ್ಪಡುತ್ತಿರುವೆನು. ಆ ಭಗವದನುಗ್ರಹದಿಂದಲೇ ಜ್ಞಾನಸಂಪತ್ತನ್ನೂ ಪಡೆದಿರುವೆನು. ಅಂತಹ ನಾನು ಎಷ್ಟೋಶ್ರದ್ಧೆಯಿಂದ ನಿರ್ವಿಘ್ನವಾದ ಯೋಗವನ್ನವಲಂಬಿಸಿ, ಆ ಭಗವಂತನನ್ನು ಧ್ಯಾನಿಸುತ್ತಿದ್ದರೂ, ತನ್ನ ಮಾಯಾಪ್ರಭಾವದಿಂದ ಇತರರಿಗೆ ಯಥಾಸ್ಥಿತವಾಗಿ ತನ್ನ ನಿಜವನ್ನು ಕಾಣಿಸದ ಆ ಭಗವಂತನ ಸ್ವರೂಪಗುಣಗಳನ್ನು ನಾನೂ ಹೀಗೆಂದು ನಿಶ್ಚಯಿಸಿ ತಿಳಿಯಲಾ

ರದಿರುವೆನು. ನನ್ನ ಸ್ಥಿತಿಯೇ ಹೀಗಿರುವಾಗ,ಇತರಜೀವರಾತಿಗಳು ಹೇಗೆತಾನೇ ಆತನ ನಿಜಸ್ಥಿತಿಯನ್ನು ತಿಳಿಯಬಲ್ಲುವು? ತನ್ನನ್ನು ಮರೆಹೊಕ್ಕವರಿಗೆ ಸಂಸಾರಭಯವನ್ನು ತಪ್ಪಿಸಿ, ಶುಭವನ್ನು ಕೈಗೂಡಿಸತಕ್ಕವುಗಳಾಗಿಯೂ, (ಶುಭಾಶ್ರಯಗಳಾಗಿಯೂ) ಸರ್ವಜನಸೇವ್ಯಗಳಾಗಿಯೂ, ಇರುವ ಆ ಭಗವಂತನ ಪಾದಾರವಿಂದಗಳನ್ನು ನಾನು ದೃಢಮನಸ್ಸಿನಿಂದ ನಂಬಿ ನಿಂತಿರುವೆನು.ವಾಯುವನ್ನು ಕೈಯಿಂದಹಿಡಿಯುವುದು ಹೇಗೆ ಅಸಾಧ್ಯವೋ,ಹಾಗೆ ಸ್ವಮಾಯೆಯನ್ನು ತಾನೇ ಹಿಡಿದಿರುವ ಆತನ ನಿಜಸ್ಥಿತಿಯನ್ನು ಗ್ರಹಿಸಲು ನಾನೂ ಸಮರ್ಥನಲ್ಲ!ನೀವೂ ಸಮರ್ಥರಲ್ಲ! ರುದ್ರನಾದರೂ ಅದನ್ನು ತಿಳಿಯಲಾರನು!ಇಂತಹ ಜ್ಞಾನಿಗಳಿಗೇ ಅಗೋಚರನಾದ ಆ ಪರಮಪುರುಷನ ನಿಜಸ್ಥಿತಿಯನ್ನು ತಿಳಿಯಬೇಕಾದರೆ, ಸಾಮಾನ್ಯರಾದ ಬೇರೆ ದೇವತೆಗಳಿಂದಾಗಲಿ,ಮನುಷ್ಯರಿಂದಾಗಲಿ ಸಾಧ್ಯವೆ? ಎಂದಿಗೂ ಸಾಧ್ಯವಲ್ಲ ! ನಮ್ಮೆಲ್ಲರಿಗೂ ಆ ಭಗವಂತನ ಮಾಯೆಯು ಆವರಿಸಿಕೊಂಡಿರುವುದರಿಂದ, ನಾವೊಬ್ಬರೂ ನಿಜನ್ನರಿಯಲಾರದೆ, ಅವನಿಂದ ನಿರ್ಮಿತವಾದ ಅಚೇತನವಾದ ಈ ಶರೀರವನ್ನೂ ಆತ್ಮವೆಂದೇ ಭ್ರಮಿಸುತ್ತಿರುವು. ನಮ್ಮ ದೇಹಕ್ಕೂ, ಆತ್ಮಕ್ಕೂ, ಇರುವ ಭೇದವನೇ ತಿಳಿದುಕೊಳ್ಳಲಾರದ ನಮಗೆ, ಆ ಪರಮಾತ್ಮನ ತತ್ತ್ವವನ್ನು ತಿಳಿಯಬೇಕೆಂದರೆ ಹೇಗೆತಾನೇ ಸಾಧ್ಯವು? ‘‘ ಆದರೆ ಆ ಮಾಯೆಯ ಸಂಬಂಧವನ್ನು ತಪ್ಪಿಸಿಕೊಳ್ಳುವದಕ್ಕೆ ನಮಗೆ ಉಪಾಯವೇನೂ ಇಲ್ಲವೆ ?” ಎಂದು ನೀನು ಕೇಳಬಹುದು. ಅದಕ್ಕೂ ಸುಲಭೋಪಾಯಗಳು ಕೆಲವುಂಟು. ನಮ್ಮಂತಿರುವವರೆಲ್ಲರೂ ಆ ಭಗವಂತನ ಅವತಾರಚರಿತ್ರಗಳನ್ನು ಕೀರ್ತಿಸಿಗಾನಮಾಡುವುದೊಂದೇ ನಮ್ಮನ್ನು ನಾವು ಉದ್ಧರಿಸಿಕೊಳ್ಳುವುದಕ್ಕೆ ಬೇಕಾದ ಮುಖ್ಯೋಪಾಯವು. ಅವನ ನಿಜಸ್ಥಿತಿಯನ್ನು ನಾವು ಬೇರೆ ತಿಳಿಯಲಾರೆವು. ಅವನ ಅವತಾರಚರಿತ್ರಗಳನ್ನು ನಾವು ಭಕ್ತಿಯಿಂದ ಕೀರ್ತಿಸುತಿದ್ದು, ಅದರಿಂದಲೇ ನಾವು ಅವನ ಮಾಯೆಯನ್ನು ತಪ್ಪಿಸಿಕೊಳ್ಳಬೇಕೇ ಹೊರತು ಉಪಾಯಾಂತರವಿಲ್ಲ. ಅಂತಹ ಮಹಾಮಹಿಮೆಯುಳ್ಳ ಭಗವಂತನಿಗೆ ಈಗ ನಾವು ಮಾಡಬೇಕಾದುದು, ಇದೋ! ನಮ್ಮಿಂದ ಸುಲಭವಾಗಿ ಸಾಧ್ಯವಾದ ಈ ನಮಸ್ಕಾರವುಹೊರತು ಬೇರೆಯಲ್ಲ. ನಾರದಾ ! ಇದ

ರಲ್ಲಿರುವ ಒಂದು ರಹಸ್ಯವನ್ನು ಹೇಳುವೆನು ಕೇಳು. ಕರ್ಮಾಧೀನವಾದ ಈ ಜಗತ್ತಿಗೆಲ್ಲವೂ ಕಾರಣಭೂತನಾದ ಆ ಪರಮಪುರುಷನು, ಪ್ರತಿಕಲ್ಪದಲ್ಲಿಯೂ ತಾನೇ ಕರ್ತನಾಗಿದ್ದು, ತನ್ನನ್ನೇ ಆಧಾರವಾಗಿ ಮಾಡಿಕೊಂಡು, ತನ್ನಿಂದ, ತನ್ನನ್ನೇ ತಾನು ಸೃಷ್ಟಿಸುತ್ತಲೂ,ಅದನ್ನು ತಾನೇ ರಕ್ಷಿಸುತ್ತಲೂ ತಾನೇ ಕೊಲ್ಲುತ್ತಲೂ ಇರುವನು. ''ಆದರೆ ಈ ಜಗದ್ವ್ಯಾಪಾರವೆಂಬುದು ಭಗವಂತನಿಗೆ ಕರ್ಮಾಧೀನವಾಗಿ ಬಂದುದೇ ಅಥವಾ ಅವನು ಲೀಲಾರ್ಥವಾಗಿ ನಡೆಸುವನೆ?"ಎಂದು ನೀನು ಶಂಕಿಸಬಹುದು. ಈ ಕಾರ್ಯವು ಅವನಿಗೆ ಕರ್ಮಾಧೀನವಾದುದಲ್ಲ. ಆತನಿಗೆ ಪುಣ್ಯಪಾಪಕರ್ಮಗಳ ಸಂಬಂಧವೇ ಇರುವುದಿಲ್ಲ. ಆದುದರಿಂದ ಜೀವಾತ್ಮನ ವ್ಯಾಪಾರಗಳಂತೆ ಇದು ಅವನಿಗೆ ಕರ್ಮಾಧೀನವಲ್ಲ. ಆತನು ಕೇವಲಜ್ಞಾನಸ್ವರೂಪನು. ಸ್ವಯಂಪ್ರಕಾಶವುಳ್ಳವನು. ಜೀವನಂತೆ ಅವನು ಬೇರೊಂದರ ಆಧಾರವನ್ನಪೇಕ್ಷಿಸುವವನಲ್ಲ. ಸ್ವರೂಪದಿಂದಾಗಲಿ, ಗುಣದಿಂದಾಗಲಿ ವಿಕಾರಹೊಂದತಕ್ಕವನಲ್ಲ. ಪೂರ್ಣಕಾಮನಾದುದರಿಂದ ಅವನು ಪ್ರಯತ್ನಮಾಡಿ ಪಡೆಯಬೇಕಾದ ಕೋರಿಕೆಗಳೊಂದೂ ಇರುವುದಿಲ್ಲ. ಪ್ರಕೃತಿಸಂಬಂಧವಾದ ಗುಣಗಳೊಂದೂ ಆತನಲ್ಲಿ ಸೇರಲಾರವು. ಆತನು ಉತ್ಪತ್ತಿವಿನಾಶಗಳಿಲ್ಲದವನು. ನಿತ್ಯನು ! ಆತನಿಗೆ ಸಮಾನವಾದ ಬೇರೆ ಯಾವವಸ್ತುವೂ ಇಲ್ಲ. ಅಂತಹ ಭಗವಂತನ ಸ್ವರೂಪವನ್ನು ಶಾಂತಾತ್ಮರಾಗಿಯೂ, ಜಿತೇಂದ್ರಿಯರಾಗಿಯೂ ಇರುವ ಯೋಗೀಶ್ವರರು,ಕುಯುಕ್ತಿಗಳಿಗೊಳಗಾಗದ ತಮ್ಮ ಊಹೆಗಳಿಂದ ತಾವೇ ತಿಳಿದುಕೊಳ್ಳುವರು. ಇಷ್ಟೇಹೊರತು ಕುತರ್ಕಗಳನ್ನು ಮಾಡತಕ್ಕವರಿಗೆಮಾತ್ರ ಆತನ ನಿಜಸ್ಥಿತಿಯು ತಿಳಿಯಲಾರವು. ನ್ಯಾಯಕ್ಕೇ ಡಾಗದ ಕುಯುಕ್ತಿಗಳಿಂದ ಆ ಪರಮಾತ್ಮನ ಸ್ವರೂಪವನ್ನು ಚರ್ಚಿಸತೊಡಗಿ,ತೊಂದರೆಗೊಳಿಸುವವರಿಗೆ, ಆತನ ತತ್ವವು ಅಗೋಚರವಾಗಿಯೇ ಹೋಗುವುದು. ನಾರದಾ ! ಇನ್ನು ಆ ಭಗವಂತನ ಅವತಾರಕ್ರಮಗಳನ್ನು ಹೇಳುವೆನು ಕೇಳು. ವಿರಾಟ್ಪುರುಷನೇ ಆತನ ಪ್ರಥಮಾವತಾರವು. ಕಾಲವೂ, ಪ್ರಕೃತಿಯಲ್ಲಿರುವ ಪರಿಣಾಮಸ್ವಭಾವವೂ, ಚೇತನಾಚೇತನಗಳೂ, ಮನಸ್ಸೂ, ಸ್ಥೂಲಸೂಕ್ಷ್ಮದ್ರವ್ಯಗಳೂ, ಭೂಮಿ ಮೊದಲಾದ ಪ್ರಕೃತಿಯಿಂ

ದುಂಟಾಗತಕ್ಕ ವಿಕಾರಗಳೂ, ಸತ್ವರಜಸ್ತಮೋಗುಣಗಳೂ, ಜ್ಞಾನೇಂದ್ರಿಯಕರ್ಮೇಂದ್ರಿಯಗಳೂ, ಅಂತರಿಕ್ಷವೂ, ಸ್ವರ್ಗವೂ, ಸ್ಥಾವರಜಂಗಮಗಳೂ, ನಾನೂ, ರುದ್ರನೂ, ಯಜ್ಞಸ್ವರೂಪನಾದ ವಿಷ್ಣುವೂ, ದಕ್ಷಾದಿ ಪ್ರಜಾಪತಿಗಳೂ, ನಿನ್ನಂತಹ ಋಷಿಗಳೂ, ಇಂದ್ರಾದಿದೇವತೆಗಳೂ, ಪಕ್ಷಿಶ್ರೇಷ್ಠರೂ, ಪಾತಾಳಲೋಕಾಧಿಪತಿಗಳಾದ ವಾಸುಕಿ ಮೊದಲಾದವರೂ, ಭೂಲೋಕಕ್ಕೊಡೆಯರಾದ ರಾಜರೂ, ಯಕ್ಷಗಂಧರ್ವವಿದ್ಯಾಧರರೂ, ಚಾರಣರೂ, ರಾಕ್ಷಸರೂ, ನಾಗರೂ, ಗಜಪತಿಗಳೂ, ಋಷಿಗಳಲ್ಲಿ ಮೇಲ್ಮೆಯುಳ್ಳವರೂ, ಪಿತೃದೇವತೆಗಳಲ್ಲಿ ಪ್ರಧಾನರೂ, ದೈತ್ಯದಾನವಸಿದ್ಧೇಶ್ವರರೂ, ಭೂತಪ್ರೇತಪಿಶಾಚಾಧಿಪತಿಗಳೂ, ಜಲಚರಸ್ಥಲಚರಗಳಲ್ಲಿ ಪ್ರಧಾನರೆನಿಸಿಕೊಂಡವರೂ, ಮೃಗಶ್ರೇಷ್ಠಗಳೂ, ಇವರೆಲ್ಲರೂ ಆ ಭಗವಂತನ ವಿಭೂತಿಗಳೆಂದೇ ತಿಳಿ ! ಇಷ್ಟುಮಾತ್ರವೇ ಅಲ್ಲದೆ, ಲೋಕದಲ್ಲಿ ಯಾವುದು ಐಶ್ವರ್ಯವುಳ್ಳದೋ, ಯಾವುದು ತೇಜಸ್ಸುಳ್ಳದೋ, ಯಾವಯಾವುದರಲ್ಲಿ ಧೈರ್ಯೋತ್ಸಾಹವೇಗಗಳ ಅತಿಶಯವುಂಟೋ, ಯಾವುದರಲ್ಲಿ ಧಾರಣಾಸಾಮರ್ಥ್ಯವಿರುವುದೋ, ಯಾವುದರಲ್ಲಿ, ಬಲ, ತಾಳ್ಮೆ,ಮುಂತಾದ ಗುಣಗಳುಂಟೋ, ಆ ವಸ್ತುಸಮುದಾಯಗಳೆಲ್ಲವೂ ಆ ಭಗವಂತನ ವಿಭೂತಿಯೆಂದೇ ತಿಳಿ! ಮತ್ತು, ಕಾಂತಿ, ಲಜ್ಜೆ, ಅಧಿಕಾರಸಂಪತ್ತು, ಬುದ್ಧಿ, ಇವುಗಳನ್ನುಳ್ಳ ಸಮಸ್ತವಸ್ತುಗಳೂ, ಅತ್ಯಾಶ್ಚರ್ಯಕ್ಕೆಡೆಯಾದುವುಗಳೂ, ಇವೆಲ್ಲವೂ, ಕರ್ಮಸಂಬಂಧವಿಲ್ಲದೆ ತನಗೆತಾನೇ ಸ್ವೇಚ್ಛೆಯಿಂದ ದಿವ್ಯಮಂಗಳವಿಗ್ರಹವನ್ನು ಧರಿಸಿದ ಆ ವಿರಾಟ್ಪುರುಷನ ವಿಭೂತಿಗಳೆಂದೇ ತಿಳಿ ! ನಾರದಾ ! ಈ ವಿಧವಾದ ಸ್ವರೂಪವುಳ್ಳ ವಿರಾಟ್ಪುರುಷನೇ ಭಗವಂತನ ಮೊದಲನೆಯ ಅವತಾರವು. ಇನ್ನೂ ಆತನ ಅವತಾರಗಳು ಎಣಿಸಲಾರದಷ್ಟು ಅನಂತವಾಗಿರುವುವು. ಆ ಮಹಾಪುರುಷನು ಆಯಾ ಅವತಾರಗಳಲ್ಲಿ ನಡೆಸಿದ ಅದ್ಭುತ ಕಾರ್ಯಗಳನ್ನು ಇಷ್ಟೆಂದು ನಿರ್ಣಯಿಸುವುದಕ್ಕೂ ಸಾಧ್ಯವಿಲ್ಲ. ಅದುದರಿಂದ ಆ ಅವತಾರಗಳಲ್ಲಿ ಪ್ರಸಿದ್ಧವಾದ ಕೆಲವನ್ನುಮಾತ್ರ ನಿನಗೆ ತಿಳಿಸುವೆನು ಕೇಳು. ಅಸತ್ಕಥೆಗಳನ್ನು ಕೇಳುವುದರಿಂದ ಕಿವಿಗಳಿಗುಂಟಾದ ಮಾಲಿನ್ಯವನ್ನು ನೀಗಿಸತಕ್ಕವುಗಳಾಗಿಯೂ, ಕರ್ಣಾಮೃತಪ್ರಾಯವಾಗಿಯೂ

ಇರುವ ಆ ಭಗವಂತನ ಅವತಾರಚರಿತ್ರಗಳಲ್ಲಿ, ಪ್ರಧಾನವಾದ ಕೆಲವನ್ನು ಮಾತ್ರ ಮಹರ್ಷಿಗಳು ಹೇಳಿರುವರು. ಅವುಗಳನ್ನು ನಿನಗೂ ಕ್ರಮವಾಗಿ ಹೇಳುವೆನು. ಆ ಕಥಾಮೃತಗಳನ್ನು ನೀನೂ ಪಾನಮಾಡುವನಾಗು! ಇಲ್ಲಿಗೆ ಆರನೆಯ ಅಧ್ಯಾಯವು.

ಬ್ರಹ್ಮದೇವನು ನಾರದನಿಗೆ ಭಗವದವತಾರಗಳನ್ನೂ ಆಯಾಅವತಾರಗಳಲ್ಲಿ ನಡೆದ ಕಾರ್ಯಗಳನ್ನೂ, ಅವತಾರಪ್ರಯೋಜನಗಳನ್ನೂ ತಿಳಿಸಿದುದು

ವರಾಹಾವತಾರವು.

ನಾರದಾ ! ಎಣೆಯಿಲ್ಲದ ಮಹಾಮಹಿಮೆಯುಳ್ಳ ಆ ಭಗವಂತನ ಅವತಾರಚರಿತ್ರಗಳನ್ನು ಕ್ರಮವಾಗಿ ಹೇಳುವೆನು ಕೇಳು! ಪೂರ್ವದಲ್ಲಿ ದಿತಿಗೆ ಹಿರಿಯಮಗನಾದ ಹಿರಣ್ಯಾಕ್ಷನೆಂಬ ರಾಕ್ಷಸನು ಮದೋನ್ಮತ್ತನಾಗಿ, ಈ ಭೂಮಂಡಲವನ್ನು ಚಾಪೆಯಂತೆ ಸುತ್ತಿಕೊಂಡು, ಸಮುದ್ರದೊಳಗೆ ಪ್ರವೇಶಿಸಲು, ಇದನ್ನು ಕಂಡು, ದಯಾಸಾಗರನಾದ ಭಗವಂತನು, ಆ ಭೂಮಿಯನ್ನು ಉದ್ಧರಿಸಬೇಕೆಂಬುದಕ್ಕಾಗಿ, ಸಮಸ್ತ ಯಜ್ಞಸ್ವರೂಪವಾದ ವರಾಹಾಕೃತಿಯನ್ನು ತಾಳಿ,ಇಂದ್ರನು ಪರ್ವತವನ್ನು ಭೇದಿಸುವಂತೆ, ತನ್ನ ಕೋರೆದಾಡೆಯಿಂದ ಆ ದೈತ್ಯನನ್ನು ಕೊಂದು,ನೀರಿನಲ್ಲಿ ಮುಳುಗಿದ್ದ ಭೂಮಿಯನ್ನು ಉದ್ಧರಿಸಿದನು. ಇದನ್ನು ವರಾಹಾವತಾರವೆನ್ನುವರು.

ಸುಯಜ್ಞಾವತಾರವು.

ಅಮೇಲೆ ಮತ್ತೊಂದುಕಾಲದಲ್ಲಿ, ರುಚಿಯೆಂಬ ಪ್ರಜಾಧಿಪತಿಗೆ ಆಕೂತಿಯೆಂಬ ಭಾರ್ಯೆಯಲ್ಲಿ ಸುಯಜ್ಞನೆಂಬ ಹೆಸರಿಂದ ಹುಟ್ಟಿದನು. ಈ ಅವತಾರದಲ್ಲಿ ತನಗೆ ಭಾರ್ಯೆಯಾದ ದಕ್ಷಿಣಾದೇವಿಯಲ್ಲಿ (ಯಮವೆಂಬ ಇಂದ್ರಿಯನಿಗ್ರಹಶಕ್ತಿಯುಳ್ಳವರಾದುದರಿಂದ) ಯಾಮರೆಂದು ಪ್ರಸಿದ್ಧಿಗೊಂಡ ಹನ್ನೆರಡುಮಂದಿ ದೇವತೆಗಳನ್ನು ಹಡೆದನು. ಆಕೂತಿಪುತ್ರನಾದ ಈತನೇ, ಅಮೇಲೆ ಇಂದ್ರನೆನಿಸಿಕೊಂಡು, ಸಮಸ್ತಲೋಕಗಳ ಬಾಧೆಗಳ

ನ್ನೂ ಪರಿಹರಿಸಿದನು. ಇದನ್ನು ನೋಡಿ ಇವನಿಗೆ ಮಾತಾಮಹನಾದ ಸ್ವಾಯಂಭುವಮನುವು, ಆ ಸುಯಜ್ಞನ ಕಾರ್ಯಕ್ಕಾಗಿ ಸಂತೋಷಿಸಿ, ಲೋಕಾರ್ತಿಹರನಾದ ಈತನಿಗೆ ಹರಿಯೆಂಬ ಹೆಸರನ್ನೂ ಕೊಟ್ಟನು. ಹೀಗೆ ದೇವತೆಗಳ ಉತ್ಪತ್ತಿಗೂ, ಲೋಕಬಾಧೆಯ ನಿವೃತ್ತಿಗೂ ಕಾರಣವಾದ ಈ ಅವತಾರದಲ್ಲಿ, ಈತನಿಗೆ ಸುಯಜ್ಞನೆಂದೂ, ಹರಿಯೆಂದೂ ನಾಮಭೇದವುಂಟಾಯಿತು.

ಕಪಿಲಾವತಾರವು.

ಆಮೇಲೆ ಆ ಭಗವಂತನೇ, ಕರ್ದಮಪ್ರಜಾಪತಿಗೆ ದೇವಹೂತಿಯೆಂಬ ಭಾರ್ಯೆಯಲ್ಲಿ ಕಪಿಲರೂಪದಿಂದವತರಿಸಿದನು. ಇವನಿಗೆ ಒಂಬತ್ತುಮಂದಿ ಕನ್ಯೆಯರು ಸಹೋದರಿಯರಾಗಿ ಹುಟ್ಟಿದರು. ಹೀಗೆ ಕಪಿಲಾವತಾರವನ್ನೆತ್ತಿದ ಭಗವಂತನು, ತನ್ನ ತಾಯಿಯಾದ ದೇವಹೂತಿಗೆ ಸಾಂಖ್ಯವನ್ನುಪದೇಶಿಸಿದನು. ಈ ಉಪದೇಶದಿಂದ ದೇವಹೂತಿಯು ಆತ್ಮಜ್ಞಾನವನ್ನು ಪಡೆದು, ಪಾಪಸಂಬಂಧವನ್ನು ಬಿಟ್ಟು, ಮುಕ್ತಿಯನ್ನು ಹೊಂದಿದಳು. ಇದೇ ಕಪಿಲಾವತಾರವು.

ದತ್ತಾತ್ರೇಯಾವತಾರವು.

ಹಿಂದೆ ಅತ್ರಿಮುನಿಯು ಪುತ್ರನನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ತಪಸ್ಸುಮಾಡಲು, ಭಗವಂತನು ಅವನ ತಪಸ್ಸಿಗೆ ಮೆಚ್ಚಿ, ಅವನಿಗೆ ಪ್ರತ್ಯಕ್ಷನಾಗಿ ಅವನನ್ನು ಕುರಿತು. ''ಎಲ್ಲೆ ಮಹರ್ಷಿಯೇ! ಇದೋ! ನಾನೇ ನನ್ನನ್ನು ನಿನಗೆ ಪುತ್ರನನ್ನಾಗಿ ಕೊಟ್ಟಿರುವೆನು!'' ಎಂದು ಅನುಗ್ರಹಿಸಿದನು. ಹೀಗೆ ತನ್ನನ್ನು ಅತ್ರಿಗೆ ದತ್ತುಮಗನನ್ನಾಗಿ ಒಪ್ಪಿಸುದರಿಂದ, ಅವನಿಗೆ ದತ್ತಾತ್ರೇಯನೆಂಬ ಪ್ರಸಿದ್ಧಿಯುಂಟಾಯಿತು. ಈ ಅವತಾರದಲ್ಲಿ ಭಗವಂತನು, ತನ್ನ ಪಾದಸೇವೆಯನ್ನು ಮಾಡಿ ಪರಿಶುದ್ಧಿಯನ್ನು ಹೊಂದಿದ ಹೈಹಯನೇ ಮೊದಲಾದವರಿಗೆ, ಇಹಲೋಕಸುಖಕ್ಕೆ ಬೇಕಾದ ಅಣಿಮಾದ್ಯಷ್ಟೈಶ್ವರ್ಯಸಿದ್ಧಿಯನ್ನೂ, ಪಾರಲೌಕಿಕವಾದ ಮೋಕ್ಷವನ್ನೂ ಅನುಗ್ರಹಿಸಿದನು. ಈ ದತ್ತಾತ್ರೇಯಾವತಾರದ ಚರಿತ್ರವು ಸರ್ವಲೋಕಪ್ರಸಿದ್ಧವಾಗಿರುವುದು.

ಮುನಿಕುಮಾರಾವತಾರವು.

ನಾರದಾ ! ನಾನು ಪೂರ್ವದಲ್ಲಿ ಲೋಕಸೃಷ್ಟಿಯನ್ನು ಮಾಡಬೇಕೆಂದುದ್ದೇಶಿಸಿ, ಘೋರವಾದ ತಪಸ್ಸನ್ನು ಮಾಡಿದೆನಷ್ಟೆ? ಇದರಿಂದ ಪ್ರಸನ್ನನಾದ ಭಗವಂತನು, ಮೊದಲು ಸನತ್ಕುಮಾರ ಹೆಸರುಳ್ಳ ಕುಮಾರನಾಗಿ ಹುಟ್ಟಿದನು. ಆದರಿಂದಾಚೆಗೆ ಕ್ರಮವಾಗಿ ಸನಾತನನೆಂದೂ, ಸನಂದನನೆಂದೂ, ಸನಕನೆಂದೂ ಪ್ರಸಿದ್ಧವಾದ ಮೂರುಹೆಸರನ್ನು ಧರಿಸಿ ಮೂವರು ಕುಮಾರರಾಗಿ ಹುಟ್ಟಿದನು. ಸನಕಸನಂದನಾದಿಗಳು ನಾಲ್ವರೂ ಲೋಕದಲ್ಲಿ ಬಹಳ ಖ್ಯಾತಿಯನ್ನು ಹೊಂದಿದರು. ಕಲ್ಪಾಂತದಲ್ಲಿ ಯಾವ ಪ್ರಾಣಿಯೂ ಇಲ್ಲದೆ ನಾಶಹೊಂದಿದಾಗ, ಮುಂದಿನ ಕಲ್ಪಾದಿಯಲ್ಲಿ ಆತ್ಮತತ್ತ್ವವನ್ನು ತಿಳಿಸತಕ್ಕವರೊಬ್ಬರೂ ಇಲ್ಲದೆ, ಅದರ ಸಂಪ್ರದಾಯವೇ ಕೆಡುವಂತಾಯಿತು. ಅದನ್ನು ಮೊದಲು ಲೋಕಕ್ಕೆ ತಿಳಿಸಬೇಕೆಂಬುದಕ್ಕಾಗಿಯೇ,ಭಗವಂತನು ಈ ವಿಧವಾದ ನಾಲ್ಕುರೂಪಗಳಿಂದವತರಿಸಿ, ಮೊದಲು ಅದನ್ನುಪದೇಶಿಸಿದನು. ಇವರಿಂದ ಅನೇಕಮಹರ್ಷಿಗಳು ತತ್ತ್ವಜ್ಞಾನೋಪದೇಶವನ್ನುಹೊಂದಿ, ಅದನ್ನು ತನ್ಮ ಶಿಷ್ಯಪರಂಪರೆಯಾಗಿ ಉಪದೇಶಿಸುತ್ತ ಬಂದರು. ಈ ನಾಲ್ವರು ಕುಮಾರರೂ ಸಾಕ್ಷಾತ್ತಾಗಿ ವಿಷ್ಣುಕಳೆಯೆಂದೇ ಒಪ್ಪುತ್ತಿದ್ದರು. ಇದನ್ನೇ ಕುಮಾರಾವತಾರವೆಂದು ಹೇಳುವರು.

ನರನಾರಾಯಣಾವತಾರವು.

ಆಮೇಲೆ ಮತ್ತೊಮ್ಮೆ ಭಗವಂತನು ಧರ್ಮನೆಂಬ ಮುನಿಗೆ ದಕ್ಷಪುತ್ರಿಯಾದ ಮೂರ್ತಿಯೆಂಬವಳಲ್ಲಿ ನರನಾರಾಯಣರೆಂಬ ರೂಪದಿಂದ ಜನಿಸಿದನು. ಈ ನರನಾರಾಯಣರ ತಪಶ್ಶಕ್ತಿಯನ್ನು ಹೀಗೆಂದು ನಿರ್ಣಯಿಸುವುದಕ್ಕೂ ಬೇರೊಬ್ಬರಿಗೆ ಸಾಧ್ಯವಲ್ಲ. ಹೀಗೆ ಎರಡು ರೂಪದಿಂದವತರಿಸಿದ ಭಗವಂತನು, ತಪಸ್ಸುಮಾಡಿ ಉಪಾಸಿಸತಕ್ಕ ದೈವವು ಬೇರೊಂದಿಲ್ಲದೆ, ಇತರ ಸಮಸ್ತದೇವತೆಗಳಿಗೂ ತಾನೇ ಉಪಾಸ್ಯದೈವವಾಗಿದ್ದರೂ. ಇತರರಿಗೆ ತಪೋಮಾರ್ಗವನ್ನು ತೋರಿಸಬೇಕೆಂಬುದಕ್ಕಾಗಿಯೇ ಅಸಾಧ್ಯವಾದ ಈ ತಪಸ್ಸನ್ನು ಮಾಡಲಾರಂಭಿಸಿದನು. ಹೀಗೆ ಭಗವಂತನು ನರನಾ

ರಾಯಣರೆಂಬ ಸ್ವರೂಪದಿಂದ ಬದರಿಕಾಶ್ರಮದಲ್ಲಿ ಮಹಾತಪಸ್ಸನ್ನು ಹಿಡಿದು ಕುಳಿತಿದ್ದಕಾಲದಲ್ಲಿ, ದೇವೇಂದ್ರನು ಭಯಪಟ್ಟು, ಇವರ ತಪೋಭಂಗಕ್ಕಾಗಿ ಅಪ್ಸರಸ್ತ್ರೀಯರನ್ನು ಪ್ರೇರಿಸಿದನು. ಇಂದ್ರಾಜ್ಞೆಯನ್ನು ಕೇಳಿ ರಂಭೆ, ಮೇನಕೆ, ಮೊದಲಾದ ಅಪ್ಸರಸ್ತ್ರೀಯರು ಮನ್ಮಥನನ್ನು ಮುಂದಿಟ್ಟುಕೊಂಡು ಬಂದು, ತಮ್ಮ ಹಾವಭಾವವಿಲಾಸಗಳಿಂದ ಮೋಹಗೊಳಿಸುವುದಕ್ಕೆ ತೊಡಗಿದರು. ಅವರಲ್ಲಿ ಕೆಲವರು ದೃಢಮನಸ್ಸಿನಿಂದ ಕುಳಿತಿದ್ದ ಆ ಮುನಿಗಳಮುಂದೆ ಕಾಮೋದ್ರೇಕವನ್ನುಂಟುಮಾಡುವ ಹಾಸ್ಯವಾಕ್ಯಗಳನ್ನಾಡುತಿದ್ದರು. ಕೆಲವರು ಇಂಪಾದ ಗಾನವನ್ನಾರಂಭಿಸಿದರು. ಕೆಲವರು ನರ್ತಿಸುವುದಕ್ಕೆ ತೊಡಗಿದರು. ಇಷ್ಟಾದರೂ ಆ ಮಹರ್ಷಿಗಳ ಮನಸ್ಸು ಸ್ವಲ್ಪಮಾತ್ರವೂ ಚಲಿಸಲಿಲ್ಲ. ಒಂದುವೇಳೆ ಕೋಪದಿಂದ ಶಾಪವನ್ನು ಕೊಟ್ಟರೂ, ತಮ್ಮ ತಪಸ್ಸಿಗೆ ಭಂಗವುಂಟಾಗುವುದೆಂಬ ಭಾವದಿಂದ ಮನಸ್ಸಿನಲ್ಲಿ ಕೋಪವನ್ನಾದರೂ ವಹಿಸದೆ, ಮನಸ್ಸನ್ನೂ, ಇಂದ್ರಿಯಗಳನ್ನೂ ನಿಗ್ರಹಿಸಿಟ್ಟುಕೊಂಡರು. ನಾರದಾ ! ಕೇವಲಸತ್ವಗುಣಪ್ರಧಾನನಾದ ಆ ಭಗವಂತನಲ್ಲಿ ಕೋಪಪ್ರಸಕ್ತಿಯೆಲ್ಲಿಯದು ? ಹಿಂದೊಮ್ಮೆ ಮನ್ಮಥನು ಇದೇರೀತಿಯಲ್ಲಿ ತಪೋನಿರತನಾಗಿದ್ದ ರುದ್ರನನ್ನು ಮೋಹಗೊಳಿಸುವುದಕ್ಕೆ ಪ್ರಯತ್ನಿಸಿದಾಗ, ರುದ್ರನು ಕೋಪವನ್ನು ತಡೆಯಲಾರದೆ, ತನ್ನ ಹಣೆಗಣ್ಣಿಂದ ಆ ಕಾಮನನ್ನು ದಹಿಸಿದನು. ಹೀಗೆ ರುದ್ರಾದಿಗಳೂಕೂಡ ತಮ್ಮ ದೇಹವನ್ನೇ ತಪಿಸತಕ್ಕ ಕೋಪವನ್ನು ತಾವು ದಹಿಸಲಸಮರ್ಥರಾಗಿರುವರು. ಕಾಮವನ್ನು ಜಯಿಸಬಲ್ಲವರಾದರೂ ಕೋಪವನ್ನು ನಿಗ್ರಹಿಸಲಾರರು. ಅಂತಹ ದುರ್ಜಯವಾದ ಕೋಪವನ್ನು ಜಯಿಸಬೇಕೆಂದರೆ, ಕೇವಲ ಸತ್ವಗುಣಪ್ರಧಾನನಾದ ಆ ಮಹಾವಿಷ್ಣುವಿಗೊಬ್ಬನಿಗೆ ಕೊರತು ಬೇರೆ ಯಾರಿಗೆ ತಾನೇ ಈ ಶಕ್ತಿಯುಂಟು? ಹೀಗೆ ಕಾಮಕ್ರೋಧಗಳೊಂದಕ್ಕೂ ಈಡಾಗದೆ ಜಿತೇಂದ್ರಿಯನಾಗಿದ್ದ ನಾರಾಯಣನು, ಆ ಅಪ್ಸರಸಿಯರೆಲ್ಲರೂ ನೋಡುತಿದ್ದಹಾಗೆಯೇ ತನ್ನ ತೊಡೆಯಿಂದ ಲೋಕಮೋಹನೆಯಾದ ಒಬ್ಬ ಸ್ತ್ರೀಯನ್ನು ಹುಟ್ಟಿಸಿದನು ತನ್ನ ತೊಡೆಯಲ್ಲಿ ಹುಟ್ಟಿದುದರಿಂದ ಅವಳಿಗೆ ಊರ್ವಶಿಯೆಂಬ ಹೆಸರನ್ನುಕೊಟ್ಟು, ಮುಂದಿದ್ದ ಅಪ್ಸರಸಿಯರನ್ನು ನೋಡಿ

"ಎಲೈ ಸ್ತ್ರೀಯರೆ! ನೀವೇಕೆ ಹೀಗೆ ವ್ಯರ್ಥವಾಗಿ ಆಯಾಸಪಡುವಿರಿ! ನಿಮ್ಮಂತಹ ಸ್ತ್ರೀಯರನ್ನು ನಾನು ನನ್ನ ಅಂಗಾಂಗಗಳಲ್ಲಿಯೂ ಸೃಷ್ಟಿಸಬಲ್ಲೆನು. ಹೀಗಿರುವಾಗ ನಿಮ್ಮ ಮೋಹಕ್ಕೆ ನಾನು ಮರುಳಾಗುವೆನೆ?" ಎಂದು ಹೇಳಿ ಆ ಊರ್ವಶಿಯನ್ನೂ ಆ ಅಪ್ಸರಸಿಯರಿದ್ದ ಸ್ಥಳಕ್ಕೇ ಕಳುಹಿಸಿಕೊಟ್ಟನು. ರಂಭಾದಿಗಳೆಲ್ಲರೂ ಆ ಸ್ತ್ರೀವ್ಯಕ್ತಿಯ ರೂಪಾತಿಶಯವನ್ನು ನೋಡಿ, ಆಶ್ಚರ್ಯಗೊಂಡು, ತಮಗೆ ತಾವೇ ನಾಚಿ ಸುಮ್ಮನಾದರು. ಆಮೇಲೆ ಅವರೆಲ್ಲರೂ ಆ ಊರ್ವಶಿಗೇ ತಮ್ಮಲ್ಲಿ ಪ್ರಾಧಾನ್ಯವನ್ನುಕೊಟ್ಟು ಅವಳೊಡನೆ ತಮ್ಮತಮ್ಮ ಸ್ಥಾನಕ್ಕೆ ಹೊರಟುಹೋದರು. ಇದೇ ನರನಾರಾಯಣಾವತಾರವು.

ಧ್ರುವವರಪ್ರದಾವತಾರವು.

ಉತ್ತಾನಪಾದನೆಂಬ ರಾಜನ ಮಗನಾದ ಧ್ರುವನೆಂಬ ಬಾಲಕನು, ಒಮ್ಮೆ ತನ್ನ ಸವತಿತಾಯಾದ ಸುರುಚಿಯೆಂಬವಳೊಡನೆ ತನ್ನ ತಂದೆಯು ಸಿಂಹಾಸನದಲ್ಲಿ ಕುಳಿತಿದ್ದಾಗ, ತಾನೂ ಅವರೊಡನೆ ಕಲೆತು ತಂದೆಯ ತೊಡೆಯಲ್ಲಿ ಕುಳ್ಳಿರುವುದಕ್ಕಾಗಿ ಹೋದನು. ಆಗ ಕೇವಲಮತ್ಸರ (ಹೊಟ್ಟೇಕಿಚ್ಚಿನ) ಸ್ವಭಾವವುಳ್ಳ ಸುರುಚಿಯು, ತಂದೆಯ ಸಮೀಪಕ್ಕೆ ಬರುತಿದ್ದ ಬಾಲಕನನ್ನು ಹೀಗಳೆದು ಧಿಕ್ಕರಿಸಿದಳು. ಧ್ರುವನು ಅತಿಕ್ರೂರವಾದ ಅವಳ ವಾಗ್ಬಾಣದಿಂದ ಬಹಳನೊಂದವನಾಗಿ, ಕೇವಲ ಬಾಲನಾಗಿದ್ದರೂ, ಆ ಅವಮಾನವನ್ನು ಸಹಿಸಲಾರದೆ, ತಪಸ್ಸಿಗಾಗಿ ಕಾಡಿಗೆ ಹೊರಟನು. ಹೀಗೆ ಬಹಳ ಸಣ್ಣವಯಸ್ಸಿನಲ್ಲಿಯೇ ಕಾಡಿನಲ್ಲಿ ದೃಢವಾದ ತಪಸ್ಸನ್ನು ಹಿಡಿದು ಕುಳಿತಿದ್ದ ಆ ಧ್ರುವನಲ್ಲಿ ಭಗವಂತನು ಕರುಣೆಗೊಂಡು, ಆತನಿಗೆ ಶಾಶ್ವತವಾದ ಮತ್ತು ಮಹೋನ್ನತವಾದ ಒಂದು ಪದವಿಯನ್ನು ಕೊಟ್ಟನು. ಸಪ್ತರ್ಷಿಗಳೂ ಆ ಪದವಿಯ ಮಹಿಮೆಯನ್ನು ಅನವರತವೂ ಸ್ತುತಿಸುತ್ತಿರುವರು ಈ ಧ್ರುವಮಂಡಲವೆಂಬುದು ಸಪ್ತರ್ಷಿಮಂಡಲಕ್ಕಿಂತಲೂ ಊರ್ಧ್ವಭಾಗದಲ್ಲಿ, ತೇಜೋಮಯವಾಗಿ ಪ್ರಕಾಶಿಸುತ್ತಿರುವುದು. ಹೀಗೆ ಧ್ರುವನಿಗೆ ಪ್ರತ್ಯಕ್ಷವಾಗಿ ವರವನ್ನು ಕೊಟ್ಟ ವಿಷ್ಣುಮೂರ್ತಿಯನ್ನೂ ಒಂದವತಾರವನ್ನಾಗಿ ಹೇಳುವರು.

ಪೃಥುಚಕ್ರವರ್ತಿಯ ಅವತಾರವು.

ಹಿಂದೆ ವೇನನೆಂಬ ರಾಜನೊಬ್ಬನಿದ್ದನು. ಅವನು ಬಹಳ ದುಸ್ಸ್ವಭಾವವುಳ್ಳವನು. ಇವನ ಕೆಟ್ಟಕೃತ್ಯಗಳನ್ನು ನೋಡಿ ಸಹಿಸಲಾರದೆ ಒಬ್ಬ ಬ್ರಾಹ್ಮಣನು ಇವನನ್ನು ಶಪಿಸಿದನು. ಈ ಬ್ರಾಹ್ಮಣಶಾಪದಿಂದ ಆ ವೇನನಿಗೆ ದೇಹಾವಸಾನದಲ್ಲಿ ನರಕಗತಿಯುಂಟಾಯಿತು. ಈ ವೇನನ ಮಗನೇ ಪೃಥುಚಕ್ರವರ್ತಿಯು. ಈ ಪೃಥುವು, ಯಾಗಗಳೇ ಮೊದಲಾದ ಅನೇಕಸತ್ಕಾರ್ಯಗಳನ್ನು ನಡೆಸಿ, ತನ್ನ ತಂದೆಯನ್ನು ನರಕದಿಂದ ತಪ್ಪಿಸಿ, ತನ್ನ ಪುತ್ರಶಬ್ದವನ್ನು ಸಾರ್ಥಕಗೊಳಿಸಿಕೊಂಡನು, ಮತ್ತು ಈ ಪೃಥುಚಕ್ರವರ್ತಿಯೇ ಭೂದೇವಿಯನ್ನು ಹಸುವನ್ನಾಗಿಯೂ, ಹಿಮವತ್ಪರ್ವತವನ್ನು ಕರುವನ್ನಾಗಿಯೂ ಮಾಡಿ, ಹಾಲುಕರೆಯುವಂತೆ ಈ ಭೂಮಿಯಿಂದ ಸಮಸ್ತಸಾರವಸ್ತುಗಳನ್ನೂ ಹೊರಕ್ಕೆ ತೆಗೆದನು. ಈ ಅಸಾಧ್ಯಕಾರ್ಯಗಳನ್ನು ನಡೆಸುವುದಕ್ಕಾಗಿ, ಭಗವಂತನೇ ವೇನನೆಂಬ ರಾಜನಿಗೆ ಪೃಥುಚಕ್ರವರ್ತಿಯೆಂಬ ಹೆಸರಿನಿಂದ ಹುಟ್ಟಿದನಲ್ಲದೆ ಬೇರೆಯಲ್ಲ. ಆದುದರಿಂದ ಇದೂ ಭಗವದವತಾರಗಳಲ್ಲಿ ಒಂದಾಗಿರುವುದು.

ಋಷಭಾವತಾರವು.

ಆಗ್ನೀಧ್ರನ ಮಗನಾದ ನಾಭಿಯೆಂಬ ರಾಜನೊಬ್ಬನಿದ್ದನು. ಆತನಭಾರ್ಯೆಗೆ ಸುದೇವಿಯೆಂದು ಹೆಸರು. ನಾರದಾ! ಯಾವ ಭಗವಂತನ ಸ್ವರೂಪವನ್ನು ಪರಮಹಂಸರೆನಿಸಿದ ಮಹಾಯೋಗಿಗಳು ಹೊರತು ಬೇರೆಯವರು ತಿಳಿಯಲಾರರೆಂದು ಸಮಸ್ತವೇದಗಳೂ ಹೇಳುವುವೋ, ಆ ಪರಮಪುರುಷನೇ ಆ ನಾಭಿರಾಜನಿಗೆ ಋಷಭನೆಂಬ ಹೆಸರಿನಿಂದ ಪುತ್ರನಾಗಿ ಹುಟ್ಟಿದನು. ಈ ಋಷಭನು ಏನೂತಿಳಿಯದ ಮೂಢನಂತೆಯೇ ಕಾಣಿಸಿಕೊಳ್ಳುತ್ತ ದೃಢವಾದ ಯೋಗಮಾರ್ಗವನ್ನು ಹಿಡಿದಿದ್ದನು. ಭಗವದಂಶದಿಂದ ಅವತರಿಸಿದ್ದ ಋಷಭನಿಗೆ, ಈ ಸಮಸ್ತಪ್ರಪಂಚವೂ ತನ್ನ ಸ್ವರೂಪವೇ ಎಂಬ ಭಾವವು ದೃಢವಾಗಿದ್ದುದರಿಂದ, ಯಾವುದರಲ್ಲಿಯೂ ಬೇಡಬುದ್ಧಿಯನ್ನಿಡದೆ, ಸಮಸ್ತಭೂತಗಳಲ್ಲಿಯೂ ಸಮದೃಷ್ಟಿಯಿಂದಿದ್ದನು.

ಆತನ ಮನಸ್ಸು ಎಂತಹ ಕಾರಣಗಳಿಂದಲೂ ಕದಲುತ್ತಿರಲಿಲ್ಲ. ಸಮಸ್ತ ಸಂಗಗಳನ್ನೂ ತೊರೆದು ಜೀತೇಂದ್ರಿಯನಾಗಿಯೇ ವರ್ತಿಸುತ್ತಿದ್ದನು. ಈ ಮಹಾತ್ಮನು ನೋಡಿದವರಿಗೆ ಏನೂ ತಿಳಿಯದ ಜಡನಂತೆಯೇ ಕಾಣುತ್ತ ಯೋಗಚರ್ಯೆಯನ್ನು ನಡೆಸಿದನು. ಇದೇ ಋಷಭಾವತಾರವು.

ಹಯಗ್ರೀವಾವತಾರವು.

ಹಿಂದೊಮ್ಮೆ ಆ ಭಗವಂತನು ತಾನಾಗಿಯೇ ಬಂದು ನನ್ನ ಯಾಗಭೂಮಿಯಲ್ಲಿ ಹಯಗ್ರೀವಸ್ವರೂಪದಿಂದ ಕಾಣಿಸಿಕೊಂಡನು. ಹೊಂಬಣ್ಣದ ಮೈಯುಳ್ಳವನಾಗಿ ಗೋಚರಿಸಿದ ಆತನನ್ನೇ ವೇದಸ್ವರೂಪನೆಂದೂ, ಯಾಗಾರಥ್ಯನೆಂದೂ ಹೇಳಬಹುದು. ಸಮಸ್ತದೇವತೆಗಳಲ್ಲಿಯೂ ಆತನು ಅಂತರ್ಯಾಮಿಯಾಗಿರುವನು. ಆತನ ಮೂಗಿನ ರಂಧ್ರಗಳಿಂದ ನಿಶ್ವಾಸರೂಪವಾಗಿ ಹೊರಟ ಘುಘುರ್ಘುರಧ್ವನಿಯೇ ವೇದಸ್ವರೂಪವನ್ನು ಹೊಂದಿದುವು. ಇದೇ ಹಯಗ್ರೀವಾವತಾರವು.

ಮತ್ಸ್ಯಾವತಾರವು.

ಆ ಭಗವಂತನು ಪ್ರಳಯಕಾಲದಲ್ಲಿ ಮತ್ಸ್ಯರೂಪವನ್ನು ತಾಳಿ ನನ್ನ ಮುಖದಿಂದ ಜಾರಿದ ವೇದಮಾರ್ಗಗಳನ್ನು ನನಗೆ ಹಿಂತಿರುಗಿ ಅನುಗ್ರಹಿಸಿಕೊಟ್ಟನು. ಪ್ರಳಯಕಾಲದಲ್ಲಿ ಭೂಮಿಯೇ ತಿಳಿಯದಂತೆ ಎಲ್ಲವೂ ಜಲಮಯವಾಗಿದ್ದುವು. ಆಗ ಮತ್ಸ್ಯರೂಪದಿಂದಿದ್ದ ಈ ಭಗವಂತನು, ಮುಂದಿನ ಸೃಷ್ಟಿಗೆ ಉಪಯುಕ್ತಗಳಾದ ಪಾರ್ಥಿವದ್ರವ್ಯಗಳೆಲ್ಲಕ್ಕೂ ಆಧಾರನಾಗಿ, ಆ ನೆವದಿಂದ ಸಮಸ್ತಪ್ರಾಣಿಗಳಿಗೂ ನಿವಾಸಭೂತನಾಗಿ, ಮೊದಲು ವೈವಸ್ವತಮನುವಿಗೆ ಗೋಚರಿಸಿದನು. ಇದೇ ಆ ಭಗವಂತನ ಮತ್ಸ್ಯಾವತಾರವು.

ಕೂರ್ಮಾವತಾರವು.

ಪೂರ್ವದಲ್ಲಿ ದೇವಾಸುರರು ಅಮೃತವನ್ನು ಪಡೆಯುವುದಕ್ಕಾಗಿ ಸಮುದ್ರವನ್ನು ಕಲಶವನ್ನಾಗಿಯೂ, ವಾಸುಕಿಯನ್ನು ಕಡೆಯುವ ಹಗ್ಗವನ್ನಾಗಿಯೂ, ಮಂದರಪರ್ವತವನ್ನು ಕಡೆಗೋಲನ್ನಾಗಿಯೂ ಮಾಡಿ ದೇವಶ್ರೀ

ಷ್ಠರೂ,ಅಸುರಶ್ರೇಷ್ಠರೂ ಉಭಯಪಾರ್ಶ್ವದಲ್ಲಿಯೂನಿಂತು,ಕಡೆಯುವಾಗ ಆ ಪರ್ವತವು ಭಾರದಿಂದ ಸಮುದ್ರದಲ್ಲಿ ಮುಳುಗಿಹೋಗುವಸಂಭವವು ತೋರಿತು. ಆಗ ಆದಿದೇವನಾದ ಭಗವಂತನು ಕೂರ್ಮಾವತಾರವನ್ನೆತ್ತಿ, ಆ ಪರ್ವತವನ್ನು ಬೆನ್ನಮೇಲೆ ಹೊತ್ತನು, ತನ್ನ ಮೈನವೆಯನ್ನಾರಿಸುವಂತೆ ಆ ಪರ್ವತವು ಸುತ್ತುವುದರಿಂದುಂಟಾದ ಘರ್ಷಣದಿಂದ ಕೂರ್ಮರೂಪಿಯಾದ ಆ ಭಗವಂತನು, ಆ ಕಾಲದಲ್ಲಿ ನಿದ್ರಾಸುಖವನ್ನನುಭವಿಸುತಿದ್ದನು, ನಾರದಾ! ಭಗವಂತನ ನಿದ್ರೆಯೆಂಬುದು ಪ್ರಜಾಕ್ಷೇಮಚಿಂತನೆಯಿಂದ ಶಯನಿಸುವುದೇಹೊರತು ಬೇರೆಯಲ್ಲ. ಪ್ರಾಕೃತಜನಗಳಲ್ಲಿ ಕಾಣುವ ತಮೋಗುಣ ಕಾರ್ಯವಾದ ನಿದ್ರೆಯೆಂಬುದು, ಅಪ್ರಾಕೃತ ದಿವ್ಯಮಂಗಳವಿಗ್ರಹವುಳ್ಳ ಮತ್ತು ಗುಣಸಂಪರ್ಕವಿಲ್ಲದ ಆ ಭಗವಂತನಲ್ಲಿ ಸಂಭವಿಸದು. ಇದೇ ಅವನ ಕೂರ್ಮಾವತಾರವು.

ನೃಸಿಂಹಾವತಾರವು.

ನಾರದಾ! ಆ ಭಗವಂತನು ದೇವತೆಗಳ ಭಯವನ್ನು ನೀಗಿಸುವುದಕ್ಕಾಗಿ, ಲೋಕಭಯಂಕರವಾದ ನಾರಸಿಂಹಸ್ವರೂಪವನ್ನು ಸ್ವೀಕರಿಸಿದನು. ಪೂರ್ವದಲ್ಲಿ ಹಿರಣ್ಯಕಶಿಪುವೆಂಬ ರಾಕ್ಷಸನು, ತನ್ನ ಹುಬ್ಬುಗಂಟುಗಳಿಂದಲೂ, ತೀಕ್ಷ್ಣವಾದ ಕೋರೆದಾಡೆಗಳಿಂದಲೂ ಘೋರವಾದ ಮುಖವುಳ್ಳವನಾಗಿ ಗದೆಯನ್ನು ಪಿಡಿದು ತನಗಿದಿರಾಗಿ ಬರುವುದನ್ನುನೋಡಿ ಅವನಿಗೂ ಭಯವನ್ನು ಹುಟ್ಟಿಸುವಂತೆ ಭಗವಂತನು ಈ ಸಿಂಹಸ್ವರೂಪವನ್ನು ಧರಿಸಿಬಂದು, ಆ ರಾಕ್ಷಸನನ್ನೆಳೆದು ತನ್ನ ತೊಡೆಯಮೇಲೆ ಮಲಗಿಸಿಕೊಂಡು,ತನ್ನ ನಖಾಗ್ರಗಳಿಂದಲೇ ಅವನನ್ನು ಸೀಳಿಬಿಟ್ಟನು. ಇದೇ ಆ ಭಗವಂತನ ನೃಸಿಂಹಾವತಾರವು.

ಗಜೇಂದ್ರವರದಾವತಾರವು.

ಪೂರ್ವದಲ್ಲಿ ; ಯೂಥಪತಿಯೆನಿಸಿಕೊಂಡ ಒಂದಾನೊಂದು ಮಹಾ ಗಜವು, ತನ್ನ ಸ್ವಜಾತಿಯ ಆನೆಗಳೊಡನೆ ಕಾಡಿನಲ್ಲಿ ಸುತ್ತುತ್ತ ಬಹಳ ಆಯಾಸಪಟ್ಟು,, ಬಾಯಾರಿಕೆಯಿಂದ ಪೀಡಿತವಾಗಿ, ಸರೋವರದಲ್ಲಿದ್ದ ಒಂದು ಮಡುವನ್ನುನೋಡಿ, ಅಲ್ಲಿ ನೀರನ್ನು ಕುಡಿಯುತಿದ್ದಿತು. ಆಗ ಅತಿಬ

ಲಾಢ್ಯವಾಗಿಯೂ, ಭಯಂಕರವಾಗಿಯೂ ಇದ್ದ ಒಂದಾನೊಂದು ಮೊಸಳೆಯು ಆ ಆನೆಯ ಕಾಲನ್ನು ಹಿಡಿಯಿತು. ಆ ಗಜಯೂಥಪವು ಬಹಳ ಹೊತ್ತಿನವರೆಗೆ ಆ ಮೊಸಳೆಯೊಡನೆ ಹೋರಾಡುತಿದ್ದರೂ, ತಪ್ಪಿಸಿಕೊಂಡು ಬರುವುದಕ್ಕೆ ಸಾಧ್ಯವಿಲ್ಲದೆ, ಕ್ರಮಕ್ರಮವಾಗಿ ಶಕ್ತಿಗುಂದುತ್ತ ಬಂದಿತು. ಕೊನೆಗೆ ಮುಂದೆ ಮಾಡಬೇಕಾದ ಪ್ರಯತ್ನವೊಂದೂ ತೋರದೆ, ತನ್ನ ಪ್ರಯತ್ನವನ್ನು ಬಿಟ್ಟು, ಆ ಕೊಳದಲ್ಲಿದ್ದ ಒಂದಾನೊಂದು ಕಮಲವನ್ನು ತನ್ನ ಸುಂಡಿಲಿನಿಂದ ಮೇಲಕ್ಕೆತ್ತಿ ಹಿಡಿದು, ಭಕ್ತಿಯಿಂದ ಭಗವಂತನನ್ನು ಕುರಿತು, "ಎಲೈ ಕಾರಣಪುರುಷನೆ! ಓ ವಿಶುದ್ಧಕೀರ್ತೀ! ಕವಿಯಿಂದ ಕೇಳಿದ ಮಾತ್ರಕ್ಕೇ ಸಮಸ್ತಕಲ್ಯಾಣಗಳನ್ನೂ ಕೈಗೂಡಿಸತಕ್ಕ ನಾಮಧೇಯವುಳ್ಳವನೆ! ಓ ಲೋಕನಾಯಕಾ! ನನ್ನನ್ನು ರಕ್ಷಿಸು" ಎಂದು ದೈನ್ಯದಿಂದ ಮೊರೆಯಿಟ್ಟಿತು. ಹೀಗೆ ತನ್ನಲ್ಲಿ ಮರಹೊಕ್ಕು ಮೊರೆಯಿಡುತ್ತಿರುವ ಗಜೇಂದ್ರನಲ್ಲಿ ಶ್ರೀಹರಿಯು ದಯಾರ್ದ್ರಹೃದಯನಾಗಿ, ಗರುಡಾರೂಢನಾಗಿ ಬಂದು ತನ್ನ ಚಕ್ರಾಯುಧದಿಂದ ಆ ಜಲಜನಕ್ರವನ್ನು ಸೀಳಿ, ಗಜೇಂದ್ರನನ್ನು ಬಿಡಿಸಿ, ಅದಕ್ಕೆ ಮೋಕ್ಷವನ್ನೂ ಕೊಟ್ಟನು. ಇದೇ ಆ ಭಗವಂತನ ಗಜೇಂದ್ರವರದಾವತಾರವು. ಇದನ್ನು ಹರ್ಯವತಾರವೆಂದೂ ಹೇಳುವರು.

ವಾಮನಾವತಾರವು.

ಯಜ್ಞಾಧಿರಾಧ್ಯನಾದ ಆ ಪರಮಪುರುಷನು ಮತ್ತೊಮ್ಮೆ ಅದಿತಿಯ ಪುತ್ರನಾಗಿ ಹುಟ್ಟಿದನು. ಆ ಅದಿತಿಯಲ್ಲಿ ಜನಿಸಿದ ದ್ವಾದಶಾದಿತ್ಯರೆಂಬ ಹನ್ನೆರಡು ಮಕ್ಕಳಲ್ಲಿ ಈತನೇ ಕಿರಿಯವನಾಗಿದ್ದರೂ, ಗುಣಗಳಲ್ಲಿ ಮಾತ್ರ ಅವರೆಲ್ಲರಿಗಿಂತಲೂ ಹಿರಿಯನೆನಿಸಿಕೊಂಡು, ಲೋಕವಿಖ್ಯಾತಿಯನ್ನು ಹೊಂದಿದನು. ಈತನು ಆಕಾರದಲ್ಲಿ ಬಹಳಚಿಕ್ಕವನಂತೆ ತೋರಿದರೂ, ಈ ಚತುರ್ದಶಭುವನಗಳನ್ನೂ ತನ್ನ ಎರಡಡಿಗಳಿಂದಲೇ ಅಳೆದುಬಿಟ್ಟನು. ಇದಕ್ಕೆ ಕಾರಣವನ್ನು ಹೇಳುವೆನು ಕೇಳು! ಪೂರ್ವದಲ್ಲಿ ಬಲಿಯೆಂಬ ದಾನವನ್ನು ಇಂದ್ರನನು, ಜಯಿಸಿ, ತ್ರೈಲೋಕ್ಯವನ್ನೂ ತನಗಧೀನವಾಗಿ ಮಾಡಿಕೊಂಡಿದ್ದನು. ಆಗ ಭಗವಂತನು ದೇವತೆಗಳ ಕಷ್ಟವನ್ನು ನೀಗಿಸುವುದಕ್ಕಾಗಿ ಒಂದು ವಾಮನ (ಗುಜ್ಜಾರಿಯ) ರೂಪವನು ಧರಿಸಿ, ಆ ಬಲಿಯು ಯಾಗಮಾಡುತಿದ್ದ ಕಾಲ

ದಲ್ಲಿ ಬ್ರಾಹ್ಮಣವೇಷದಿಂದ ಆ ಯಜ್ಞಶಾಲೆಗೆ ಹೋದನು. ಆ ಯಾಗಕಾಲದಲ್ಲಿ ಬಲಿಚಕ್ರವರ್ತಿಯು ಕೇಳಿದವರಿಗೆ ಕೇಳಿದುದನ್ನು ಕೊಡುವಹಾಗೆ ಪ್ರತಿಜ್ಞೆಮಾಡಿದ್ದುದರಿಂದ, ಅಲ್ಲಿ ಈ ವಾಮನರೂಪಿಯಾದ ಬ್ರಾಹ್ಮಣನು, ತನಗಾಗಿಮೂರಡಿಯ ನೆಲವನ್ನು ಮಾತ್ರ ಯಾಚಿಸಿ, ಆ ವಿಷಯದಲ್ಲಿ ಮೊದಲು ಬಲಿಚಕ್ರವರ್ತಿ ಯವಾಗ್ದಾನವನ್ನು ಪಡೆದು,ಒಡನೆಯೇ ಮಹಾದ್ಭುತವಾದ ಆಕಾರವನ್ನು ತಾಳಿ, ಒಂದಡಿಯಿಂದ ಭೂವೀಯೆಲ್ಲವನ್ನೂ ಆಕ್ರಮಿಸಿ, ಮತ್ತೊಂದಡಿಯಿಂದ ಆಕಾಶವೆಲ್ಲವನ್ನೂ ಆಕ್ರಮಿಸಿ ನಿಂತನು. ಮೂರನೆಯ ಹಜ್ಜೆಗೆ ಬೇರೆಲ್ಲಿಯೂ ಸ್ಥಲವಿಲ್ಲದುದನ್ನು ನೋಡಿ, ಬಲಿಯು ತನ್ನ ತಲೆಯನ್ನೇ ಒಡ್ಡಿದನು. ಆಗ ಭಗವಂತನು ಅವನ ತಲೆಯಮೇಲೆ ತನ್ನ ಪಾದವನ್ನಿಟ್ಟು, ಅವನನ್ನು ಪಾತಾಳದವರೆಗೆ ಮೆಟ್ಟಿ,ತ್ರೈಲೋಕ್ಯವನ್ನೂ ಇಂದ್ರನಿಗೆ ಅಧೀನವಾಗಿ ಮಾಡಿದನು ಹೀಗೆ ಮೂರಡಿಯ ನೆಲವನ್ನು ಯಾಚಿಸುವ ನೆವದಿಂದಲೇ ಭಗವಂತನು ತ್ರೈಲೋಕ್ಯವನ್ನೂ ತನ್ನ ವಶಮಾಡಿಕೊಂಡನು. ಆದರೆ ‘‘ಸರ್ವಲೋಕೇಶ್ವರನಾಗಿಯೂ, ಸರ್ವಶಕ್ತನಾಗಿಯೂ ಇರುವ ಭಗವಂತನು ಕೇವಲ ದುರ್ಬಲನಂತೆ ಹೀಗೆ ಕಪಟಭಾವದಿಂದ ಯಾಚಿಸಿ, ಆ ಬಲಿಯನ್ನು ನಿಗ್ರಹಿಸಿದುದು ಯುಕ್ತವೆ?” ಎಂದು ನೀನು ಶಂಕಿಸಬಹುದು! ನಾರದಾ! ಹಾಗೆಣಿಸಬೇಡ! ಆ ಬಲಿಚಕ್ರವರ್ತಿಯಾದರೋ ಬಹಳ ಧರ್ಮಶೀಲನು! ಬಹಳ ಉದಾರಸ್ವಭಾವವುಳ್ಳವನು! ಹೀಗೆ ಧರ್ಮವನ್ನು ಮೀರದೆ ನಡೆಯುವ ಸಜ್ಜನರನ್ನು ವಿನಯದಿಂದಲೇ ವಶಪಡಿಸಿಕೊಳ್ಳಬೇಕೇಹೊರತು ಬಲಾತ್ಕರಿಸಿ ನಿಗ್ರಹಿಸಬಾರದು. ಅಂತವರನ್ನು ಹಾಗೆ ನಿಗ್ರಹಿಸುವುದು ಸಾಧ್ಯವೂ ಅಲ್ಲ! ಇದಕ್ಕಾಗಿಯೇ ದಯಾಸಮುದ್ರನಾದ ವಿಷ್ಣುವು ಅವನನ್ನು ವಿನಯಭಾವದಿಂದಲೇ ಜಯಿಸಬೇಕಾಯಿತು. ಆದರೆ ವಿನಯದಿಂದಾದರೂ ಸಜ್ಜನರನ್ನು ವಂಚಿಸಬಹುದೆ?” ಎಂದು ಕೇಳುವೆಯಾ? ನಾರದಾ! ಇದರಿಂದ ಭಗವಂತನು ಆ ಬಲಿಯು ಇಷ್ಟಾರ್ಥವನ್ನೇ ಕೈಗೂಡಿಸಿಕೊಟ್ಟನೇ ಹೊರತು ವಂಚಿಸಿದವನಲ್ಲ. ಆ ಬಲಿಯು ತ್ರೈಲೋಕ್ಯಾಧಿಪತ್ಯದ ಕಿರೀಟವನ್ನು ತಲೆಯಲ್ಲಿ ಧರಿಸುವುದಕ್ಕಿಂತಲೂ, ಶ್ರೀಮಹಾವಿಷ್ಣುವಿನ ಪಾದತೀರ್ಥವನ್ನು ಶಿರಸ್ಸಿನಿಂದ ಧರಿಸುವುದೇ ತನಗೆ ಪರಮಶ್ರೇಯಸ್ಕರವೆಂದು ಖಾವಿಸಿದ್ದ

ವನು. ಇದರಿಂದಲೇ ಅತನು,ಆ ಕಾಲದಲ್ಲಿ ಶುಕ್ರನ ಕೋಪವನ್ನೂ ಲಕ್ಷಿಸದೆ, ಆತನ ಶಾಪಕ್ಕೂ ಭಯಪಡದೆ, ತನ್ನ ಪ್ರತಿಜ್ಞಾಪೂರ್ತಿಗಾಗಿ, ತನ್ನ ತಲೆಯನ್ನೇ ಆ ಶ್ರೀಮಹಾವಿಷ್ಣುವಿನ ಪಾದಾರವಿಂದಕ್ಕೊಪ್ಪಿಸಿ ಬಿಟ್ಟನು. ನಾರದಾ! ಆ ಬಲಿಯು ಎಂತಹ ಮಹಾತ್ಮನೋ ನೋಡು ! ಹೀಗೆ ಬಲಿಯನ್ನು ನಿಗ್ರಹಿಸುವ ವ್ಯಾಜದಿಂದ ಅವನನ್ನು ಧನ್ಯರಿಸಿದುದೇ ಆ ಭಗವಂತನ ತ್ರಿವಿಕ್ರಮಾವತಾರದ ಕಾರ್ಯವು.

ಹಂಸಾವತಾರವು.

ಓ ನಾರದಾ ! ನೀನೊಮ್ಮೆ ಅತಿಸ್ನೇಹವಶನಾಗಿ, ಭಗವಂತನನ್ನು ಕುರಿತು ಯೋಗಾದಿವಿಷಯಗಳನ್ನು ಸಂಪೂರ್ಣವಾಗಿ ವಿವರಿಸಬೇಕೆಂದು ಪ್ರಾರ್ಥಿಸಲು, ಆತನು ಹಂಸಾವತಾರವನ್ನೆತ್ತಿ ಅವೆಲ್ಲವನ್ನೂ ನಿನಗೆ ವಿವರಿಸಿದನು. ಅದರಲ್ಲಿ ಫಲಾಪೇಕ್ಷೆಯಿಲ್ಲದ ಕರ್ಮಯೋಗವನ್ನೂ, ಭಗವದುಪಾಸನಾತ್ಮಕವಾದ ಭಕ್ತಿಯನ್ನೂ,ದೀಪವು ಇತರವಸ್ತುಗಳನ್ನು ಪ್ರಕಾಶಗೊಳಿಸುವಂತೆ ಆತ್ಮತತ್ವವನ್ನು ಪ್ರಕಾಶಗೊಳಿಸುವ ಜ್ಞಾನಯೋಗವನ್ನೂ ಉಪದೇಶಿಸಿದನು. ಹಂಸರೂಪಿಯಾದ ಆ ಭಗವಂತನು ಉಪದೇಶಿಸಿದ ಯೋಗಸ್ವರೂಪವನ್ನವಲಂಬಿಸಿಯೇ, ಈಗಲೂ ಮಹಾತ್ಮರು, ಭಗವಂತನಾದ ವಾಸುದೇವನಲ್ಲಿ ಶರಣಹೊಂದಿ, ಆತನ ಕೃಪೆಗೆ ಪಾತ್ರರಾಗುವರು. ಇದೇ ಆ ಭಗವಂತನ ಹಂಸಾವತಾವು.

ಆಯಾಮನ್ವಂತರಗಳಲ್ಲಿ ಬೇರೆಬೇರೆಯಾಗಿ ಕೈಕೊಂಡ ಅವತಾರಗಳು.

ಭಗವಂತನು ಆಯಾಮನ್ವಂತರಗಳಲ್ಲಿ ಆಯಾ ಮನುಗಳ ವಂಶಗಳನ್ನು ರಕ್ಷಿಸುವುದಕ್ಕಾಗಿ ಪ್ರಯತ್ನಿಸಿ, ದಶದಿಕ್ಕುಗಳಲ್ಲಿಯೂ ಅಪ್ರತಿಹತವಾದ ಪರಾಕ್ರಮದಿಂದ ಕೂಡಿದವನಾಗಿ,ನಿರಂಕುಶವಾಗಿರುವತನ್ನ ಆಜ್ಞಾರೂಪವಾದ ಚಕ್ರವನ್ನು ಧರಿಸಿರುವನು. ಮತ್ತು ಅವನು ಮೂರನೆಯ ಲೋಕವಾದ ಸತ್ಯಲೋಕದವರೆಗೂ ತನ್ನ ಕೀರ್ತಿಯನ್ನು ವಿಸ್ತರಿಸಿ,ಆಗಾಗ ಮದೋನ್ಮತ್ತರಾದ ರಾಜರನ್ನು ನಿಗ್ರಹಿಸಿ, ಸಾಧುಗಳನ್ನು ರಕ್ಷಿಸುತ್ತಿರುವನು

ಧನ್ವಂತರಿಯ ಅವತಾರವು

ಮತ್ತು ಆ ಭಗವಂತನು ದೇವವೈದ್ಯನಾದ ಧನ್ವಂತರಿಯ ಅವತಾರವನ್ನೆತ್ತಿ, ತನ್ನ ನಾಮಸ್ಮರಣಮಾತ್ರದಿಂದಲೇ ಸಮಸ್ತರೋಗಗಳನ್ನೂ ನೀಗಿಸುತ್ತಿರುವನಲ್ಲದೆ, ಲೋಕೋಪಕಾರಾರ್ಥವಾಗಿ ಆಯುರ್ವೇದವನ್ನು ಲೋಕದಲ್ಲಿ ಹರಡಿರುವನು. ದೇವತೆಗಳಿಗೆ ಸಮಾನವಾಗಿ ಯಜ್ಞಭಾಗಗಳನ್ನೂ ಸ್ವೀಕರಿಸುತ್ತಿರುವನು.

ಪರಶುರಾಮಾವತಾರವು

ಮಹಾತ್ಮನಾದ ಆ ಭಗವಂತನು ದುಷ್ಟರಾಜರನ್ನು ಶಿಕ್ಷಿಸುವುದಕ್ಕಾಗಿ ಜಮದಗ್ನಿಯೆಂಬ ಮಹರ್ಷಿಯ ಗರ್ಭದಲ್ಲಿ ಜನಿಸಿ, ಕೈಯಲ್ಲಿ ಗಂಡುಗೊಡಲಿಯನ್ನು ಹಿಡಿದು ಸಮಸ್ತಲೋಕಗಳನ್ನೂ ಸುತ್ತುತ್ತ, ಬ್ರಾಹ್ಮಣರಿಗೆ ದ್ರೋಹಿಗಳಾಗಿಯೂ, ವೇದಮಾರ್ಗಗಳನ್ನು ಬಿಟ್ಟವರಾಗಿಯೂ, ಲೋಕಕಂಟಕರಾಗಿಯೂ ಇದ್ದ ಕ್ಷತ್ರಿಯರನ್ನು ಇಪ್ಪತ್ತೊಂದಾವರ್ತಿ ವಧಿಸಿ ಬಂದನು. ಹೀಗೆ ಕ್ಷತ್ರಿಯರನ್ನು ಕೊಂದಮೇಲೆ ತನಗಧೀನವಾಗಿ ಮಾಡಿಕೊಂಡ ಸಮಸ್ತಭೂಮಂಡಲವನ್ನೂ, ಬ್ರಾಹ್ಮಣರಿಗೆ ದಾನವಾಗಿ ಕೊಟ್ಟನು. ಈ ವಿಧವಾಗಿ ಪರಶುರಾಮನೆಂಬ ಹೆಸರಿನಿಂದ ಲೋಕದಲ್ಲಿ ತನ್ನ ಸತ್ಕೀರ್ತಿಯನ್ನು ಹರಡಿರುವನು.

ಶ್ರೀರಾಮಾವತಾರವು.

ಓ ! ನಾರದಾ ! ನಾವೆಲ್ಲರೂ ರಾವಣನೆಂಬ ರಾಕ್ಷಸನ ಬಾಧೆಯನ್ನು ತಡೆಯಲಾರದೆ ಮಹಾವಿಷ್ಣುವಿನಲ್ಲಿ ಮೊರೆಯಿಡಲು, ಜೀವಪ್ರಕೃತಿಗಳೆರಡಕ್ಕೂ ನಿಯಾಮಕನಾದ ಆ ಭಗವಂತನು, ಭರತನೇ ಮೊದಲಾದ ಮೂವರು ಸಹೋದರರೊಡನೆ ಇಕ್ಷ್ವಾಕುವಂಶದಲ್ಲಿ ರಾಮನಾಗಿ ಅವತರಿಸುವನು. ಈತನು ಪಿತೃವಾಕ್ಯಪರಿಪಾಲನವೆಂಬ ವ್ರತವನ್ನು ಹಿಡಿದು, ಕೈಕೇಯಿಯೆಂಬ ತನ್ನ ಬಲತಾಯಿಯ ಕೋರಿಕೆಯನ್ನನುಸರಿಸಿ, ತಂದೆಯ ಮಾತಿನ ಮೇಲೆ ತನ್ನ ತಮ್ಮನಾದ ಲಕ್ಷ್ಮಣನೊಡನೆಯೂ, ಭಾರ್ಯೆಯಾದ ಸೀತೆಯೊಡನೆಯೂ ಸೇರಿ, ಹದಿನಾಲ್ಕುವರ್ಷಗಳವರೆಗೆ ವನವಾಸದಲ್ಲಿರುವನು. ಅವನು

ದಂಡಕಾರಣ್ಯದಲ್ಲಿರುವಾಗ ದುರಾತ್ಮನಾದ ರಾವಣನು ಆತನ ಪತ್ನಿಯಾದ ಸೀತೆಯನ್ನು ವಂಚನೆಯಿಂದ ಕದ್ದುಯ್ಯುವನು. ಆಮೇಲೆ ರಾಮನು ಸುಗ್ರೀವನೊಡನೆ ಸ್ನೇಹವನ್ನು ಬೆಳೆಸಿ, ವಾಲಿಯನ್ನು ಕೊಂದು ವಾನರಸೈನ್ಯದೊಡನೆ ಲಂಕೆಗೆ ಹೊರಡುವನು. ದಾರಿಯಲ್ಲಿ ಸಮುದ್ರವು ಅಡ್ಡಲಾಗಿರುವುದನ್ನು ನೋಡಿ,ಅದನ್ನು ದಾಟುವುದಕ್ಕೆ ಉಪಾಯವೇನೂ ತೋರದಿದ್ದುದರಿಂದ, ತನ್ನಲ್ಲಿ ತಾನೇ ವಿಚಾರಿಸುತಿದ್ದು, ಕೊನೆಗೆ ತ್ರಿಪುರಸಂಹಾರಿಯಾದ ರುದ್ರನಂತೆ ಕೋಪದಿಂದ ಜ್ವಲಿಸುತ್ತ, ಕ್ರೂರದೃಷ್ಟಿಯಿಂದ ಆ ಸಮುದ್ರವನ್ನು ನೋಡುವನು. ಆಗ ಸಮುದ್ರನು ಈತನ ಕೋಪಕ್ಕೆ ಹೆದರಿ ಪುರುಷರೂಪದಿಂದ ಮುಂದೆ ಬಂದು ರಾಮನಲ್ಲಿ ಶರಣಾಗತನಾಗಿ ದಾರಿಯನ್ನು ಕೊಡುವನು. ಆಗ ರಾಮನು ಸೇತುಬಂಧನಪೂರ್ವಕವಾಗಿ ಸಮುದ್ರವನ್ನು ದಾಟಿ ಲಂಕೆಗೆ ಬಂದು, ಐರಾವತದ ಕೊಂಬಿನ ತಿವಿತದಿಂದ ಜಿಡ್ಡುಗಟ್ಟಿದ ಎದೆಯುಳ್ಳವನಾಗಿಯೂ, ಗರ್ವವಿತಿಷ್ಟವಾದ ತನ್ನ ಅಟ್ಟಹಾಸದಿಂದಲೇ ಸಮಸ್ತದಿಕ್ಕುಗಳನ್ನೂ ಭೇದಿಸುವಂತೆ ಮದೋನ್ಮತ್ತನಾಗಿಯೂ ಇದ್ದ ರಾವಣನನ್ನು ಲೀಲಾಮಾತ್ರದಿಂದಲೇ ತನ್ನ ಬಾಣಗಳಿಂದ ಕೊಲ್ಲುವನು. ಇದು ಮುಂದೆ ನಡೆಯುವ ರಾಮಾವತಾರವೃತ್ತಾಂತವು.

ಕೃಷ್ಣಾವತಾರವು.

ನಾರದಾ! ಲೋಕದಲ್ಲಿ ಅಸುರಸ್ವಭಾವದಿಂದ ಹುಟ್ಟಿ,ಮದೋನ್ಮತ್ತರಾದ ದುಷ್ಟಕ್ಷತ್ರಿಯರ ಸೈನ್ಯಗಳ ಭಾರದಿಂದ ಮುಂದೆ ಭೂಭಾರವು ಹೆಚ್ಚಿ ಹೋಗುವುದು. ಈ ಭಾರವನ್ನು ಪರಿಹರಿಸಿ ಭೂದೇವಿಗೆ ಅದರಿಂದುಂಟಾದ ಬಾಧೆಯನ್ನು ತೊಲಗಿಸುವುದಕ್ಕಾಗಿಯೇ ಭಗವಂತನು ಯಾದವಕುಲದಲ್ಲಿ ಬಲರಾಮಕೃಷ್ಣರೆಂಬ ರೂಪದಿಂದವತರಿಸುವನು. *ಕಪ್ಪು,ಬಿಳುಪು ಬಣ್ಣದ ಕೂದ

* ಭಗವಂತನು ತನ್ನ ತಲೆಯೆಲ್ಲಿದ್ದ ಬಿಳುಪು, ಕಪ್ಪು ಬಣ್ಣದ ಕೂದಲೆರಡನ್ನು ಕಿತ್ತೆಸೆಯಲು, ಅವೆರಡೂ ರಾಮಕೃಷ್ಣರೂಪದಿಂದ ಹುಟ್ಟಿದುದಾಗಿ ಭಾರತವಿಷ್ಣುಪುರಾಣಾದಿಗಳಲ್ಲಿ ಹೇಳಲ್ಪಟ್ಟಿರುವುದು. ಆದರೆ ಹೀಗೆ ಹೇಳಿದುದು ರಾಮಕೃಷ್ಣರ ಮೈಬಣ್ಣವನ್ನೂ, ಆ ಭಗವಂತನ ಕೇಶಗಳೇ ಭೂಭಾರವನ್ನು ನೀಗಿಸುವುದಕ್ಕೆ ಸಮ

ಲುಗಳಿಂದ ಕೂಡಿದ ಭಗವಂತನು, ಆ ತನ್ನ ಎರಡು ಕೂದಲುಗಳೇ ಈ ಭೂ ಭಾರವನ್ನು ನೀಗಿಸಬಲ್ಲವೆಂಬ ಭಾವವನ್ನು ತೋರಿಸುವುದಕ್ಕಾಗಿ, ಈ ಎರಡು ಬಣ್ಣಗಳುಳ್ಳ ಎರಡುರೂಪದಿಂದವತರಿಸುವನು. ಇವರಿಬ್ಬರೂ ವಸು ದೇವನಿಗೆ ಪುತ್ರರಾಗುವರು. ರೋಹಿಣೀದೇವಿಯಲ್ಲಿ ಬಲರಾಮನೂ, ದೇವ ಕೀದೇವಿಯಲ್ಲಿ ಕೃಷ್ಣನೂ ಜನಿಸುವರು. ಇವರಿಬ್ಬರಲ್ಲಿ ಶ್ರೀಕೃಷ್ಣನನ್ನು ಸಾಕ್ಷಾದ್ವಿಷ್ಣುವೆಂದೇಹೇಳವರು. ಅಂತಹ ಕೃಷ್ಣನು ಜನಗಳಿಗೆ ಸಾಮಾನ್ಯ ಮನುಷ್ಯನಂತೆಯೇ ಕಾಣುತ್ತ, ಅತಿಮಾನುಷಕೃತ್ಯಗಳಿಂದ ತನ್ನ ಮಹಿಮೆ ಯನ್ನು ಆಗಾಗ ತೋರಿಸುತ್ತಿರುವನು. ಈತನು ನಡೆಸುವ ಒಂದೆರಡು ಅದ್ಭುತಕಾರ್ಯಗಳನ್ನೂ ತಿಳಿಸುವೆನು ಕೇಳು. ಈ ಕೃಷ್ಣನು ಮೂರುತಿಂಗಳ ಕೂಸಾಗಿರುವಾಗಲೇ ಕಂಸನಿಂದ ಪ್ರೇರಿತೆಯಾದ * ಪೂತನೆಯೆಂಬ ರಾಕ್ಷಸಿ ಯು, ಸ್ತನದಲ್ಲಿ ವಿಷವನ್ನು ತುಂಬಿಕೊಂಡು, ಆ ಸಣ್ಣಮಗುವಿಗೆ ಮೊಲೆ ಯೂಡಿಸುವ ನೆವದಿಂದ ಅವನನ್ನು ಕೊಲ್ಲಬೇಕೆಂದು ನಂದಗೋಕುಲಕ್ಕೆ ಬರು ವಳು. ಇವಳ ನಡೆತೆಯನ್ನು ನೋಡಿ ಗೋಪಸ್ತ್ರೀಯರು ಸಂದೇಹಪಟ್ಟು, ಅನೇಕವಿಧದಿಂದ ತಡೆಯುತಿದ್ದರೂ ಕೇಳದೆ, ಆ ರಾಕ್ಷಸಿಯು ಮಗುವನ್ನು ಬಲಾತ್ಕಾರದಿಂದೆತ್ತಿ ತೊಡೆಯಲ್ಲಿರಿಸಿಕೊಂಡು ಸ್ತನ್ಯವನ್ನು ಕೊಡುತ್ತಿರುವಾ ಗ, ಸಣ್ಣಮಗುವಾದ ಕೃಷ್ಣನು, ಹಾಲುಕುಡಿಯುವ ನೆವದಿಂದಲೇ ಆಕೆಯ ಪ್ರಾಣವಾಯುಗಳನ್ನು ಹೀರಿಬಿಡುವನು. ಹೀಗೆಯೇ ಮತ್ತೊಮ್ಮೆ ಕಂಸ ನಿಂದ ಪ್ರೇರಿತನಾದ ಶಕಟಾಸುರನೆಂಬ ರಾಕ್ಷಸನು, ಈತನನ್ನು ಕೊಲ್ಲುವುದ ಕ್ಕಾಗಿ ಬಂಡಿಯ ರೂಪದಿಂದ ಬರಲು, ಬಾಲನಾದ ಕೃಷ್ಣನು ಬಂಡಿಯ ನ್ನು ತನ್ನ ಕಾಲಿನಿಂದ ಮೆಟ್ಟುವ ನೆವದಿಂದ ಆ ರಾಕ್ಷಸನನ್ನು ಕೊಲ್ಲು ವನು. ಮತ್ತೊಮ್ಮೆ ಕೃಷ್ಣನು ದುಶ್ಚೇಷ್ಟೆಯನ್ನು ಮಾಡಿದನೆಂದು ಕೇಳಿ ಯಶೋದಾದೇವಿಯು ಕೋಪಗೊಂಡು, ಅವನನ್ನು ಹಗ್ಗದಿಂದ ಬಿಗಿದು

ರ್ಥಗಳೆಂಬ ಭಾವವನ್ನೂ ತಿಳಿಸುವುದಕ್ಕೇ ಹೊರತು, ರಾಮಕೃಷ್ಣರು ಕೇಶಾವತಾರ ವೆಂಬ ಅಭಿಪ್ರಾಯದಿಂದ ಹೇಳಿದುದಲ್ಲವೆಂದು ಗ್ರಾಹ್ಯವು.

* ಇಲ್ಲಿ ಪೂತನೆಯು ಉಲೂಕಾ (ಗೂಬೆಯ) ರೂಪದಿಂದ ಬಂದುದಾಗಿ ಪುರಾ ಣಾಂತರಪ್ರಸಿದ್ಧಿಯುಂಟು.

ಒಂದು ಒರಳುಕಲ್ಲಿಗೆ ಕಟ್ಟಿಹಾಕುವಳು. ವಿಚಿತ್ರವೀರ್ಯವುಳ್ಳ ಈ ಬಾಲಕನು ಆ ಒರಳುಕಲ್ಲನ್ನು ತನ್ನೊಡನೆಯೇ ಎಳೆದುಕೊಂಡು ಹೋಗುತ್ತ, ದಾರಿಯಲ್ಲಿ ಬಹುಕಾಲದಿಂದ ರೂಢಮೂಲವಾಗಿ ಬೆಳೆದಿದ್ದ ಎರಡು ಮರಗಳ ನಡುವೆ ಪ್ರವೇಶಿಸಿ, ಅವೆರಡನ್ನೂ ಆ ನೆವದಿಂದಲೇ ಮುರಿದು ಕೆಡಹುವನು. ನಾರದಾ ! ಇವೆಲ್ಲವೂ ಅಮಾನುಷಕೃತ್ಯಗಳೆಂಬುದನ್ನು ಹೇಳಬೇಕಾದುದೇನು ! ಮತ್ತೊಮ್ಮೆ ಶ್ರೀಕೃಷ್ಣನು ಗೋಕುಲದಲ್ಲೆ ತನ್ನ ಕುಲವೃತ್ತಿಯನ್ನು ಹಿಡಿದು, ತನ್ನ ಸಂಗಡಿಗರಾದ ಗೊಲ್ಲರೊಡನೆ ಸೇರಿ ದನಗಳನ್ನಟ್ಟಿಕೊಂಡು ಕಾಡಿಗೆಹೋಗಲು, ಆಗ ಕೆಲವುಮಂದಿ ಗೋಪಾಲಕರು ಯಮುನಾನದಿಯ ಒಂದು ಭಾಗದಲ್ಲಿ, ವಿಷಮಿಶ್ರವಾದ ಜಲವುಳ್ಳ ಕಾಳಿಯವೆಂಬ ಮಡುವಿನಲ್ಲಿ, ದನಗಳನ್ನು ನೀರುಕುಡಿಯವುದಕ್ಕಾಗಿ ಬಿಟ್ಟು, ತಾವೂ ನೀರನ್ನು ಕುಡಿದು ಮೂರ್ಛಿತರಾಗಿ ಬೀಳುವರು. ಅದನ್ನು ನೋಡಿ ಕೃಷ್ಣನು ಕೋಪಗೊಂಡು, ಆಲ್ಲಿದ್ದ ಕಾಳಿಯೆಸೆಂಬ ಕ್ರೂರಸರ್ಪವನ್ನು ಕಾಲಿನಿಂದ ಮೆಟ್ಟಿ, ಅವನನ್ನು ಭಂಗಿಸಿ, ಆಸ್ಥಳದಿಂದ ಅವನನ್ನು ಹೊರಡಿಸುವನು. ಮೂರ್ಛಿತರಾಗಿ ಬಿದ್ದಿರುವ ಗೋವ್ರಗಳನ್ನೂ ಗೋಪಾಲಕರನ್ನೂ ಅಮೃತವರ್ಷದಿಂದ ಬದುಕಿಸುವನು. ಮತ್ತೊಮ್ಮೆ ಗೋಪಾಲಕರೆಲ್ಲರೂ ರಾತ್ರಿಯಲ್ಲೆ ನಿದ್ರೆಯಿಂದ ಮೈಮರೆತು ಮಲಗಿರುವಾಗ, ಭಯಂಕರವಾದ ಕಾಡುಗಿಚ್ಚು ಸುತ್ತಲೂ ಆವರಿಸಿಕೊಳ್ಳುವುದು ಅದನ್ನು ನೋಡಿ ಗೋಪಾಲಕರೆಲ್ಲರೂ ಹೆದರಿ, ಬದುಕಿಬರುವುದಕ್ಕೆ ದಾರಿ ಕಾಣದೆ, ಕೃಷ್ಣನನ್ನು ಕುರಿತು ಮೊರೆಯಿಡುವರು. ಆಗ ಕೃಷ್ಣನು ಅವರೆಲ್ಲರನ್ನೂ ಸ್ವಲ್ಪಕಾಲದವರೆಗೆ ಕಣ್ಣುಮುಚ್ಚಿಕೊಂಡಿರುವಂತೆ ಹೇಳಿ, ಅವರುಕಣ್ಣನ್ನು ತೆರೆಯುವಷ್ಟರೊಳಗಾಗಿ ಆ ಕಾಡುಗಿಚ್ಚನ್ನು ನುಂಗಿ, ಈ ಮಹಾಪತ್ತಿನಿಂದ ಅವರನ್ನು ರಕ್ಷಿಸುವನು. ನಾರದಾ ಇಂತಹ ಸಾಹಸಕಾರ್ಯಗಳನ್ನು ಆ ಪರಮಪುರುಷನೊಬ್ಬನಲ್ಲದೆ ಬೇರೆ ಯಾರು ತಾನೇ ನಡೆಸಬಲ್ಲರು ! ಮತ್ತೊಮ್ಮೆ ಕೆಲವು ಮಂದಿ ಬಾಲಕರು ಯಶೋದೆಯ ಬಳಿಗೆ ಹೋಗಿ, ಕೃಷ್ಣನು ಮಣ್ಣನ್ನು ತಿನ್ನುತ್ತಿರುವನೆಂದು ದೂರುವರು. ಆಗ ಯಶೋದೆಯು ಕೋಪದಿಂದ ಬಂದು ಕೃಷ್ಣನನ್ನು ನೋಡಿ. ಅವನನ್ನು ಕಟ್ಟಿ ಹಾಕುವುದಕ್ಕಾಗಿ ಯತ್ನಿಸುವಳು. ಆಗ ಕೃಷ್ಣನು ತಾನು ನಿರ್ದೋಷಿಯೆಂಬುದನ್ನು ತೋರಿಸುವ

ನಿವದಿಂದ, ತನ್ನ ಬಾಯನ್ನು ತೆರೆದು ತೋರಿಸಲು, ಅದರಲ್ಲಿ ಯಶೋದೆಯ ಕಣ್ಣಿಗೆ ಚರಾಚರಾತ್ಮಕವಾದ ಸಮಸ್ತಪ್ರಪಂಚವೂ ಗೋಚರಿಸುವುದು. ಈ ವಿಶ್ವರೂಪವನ್ನು ನೋಡಿ ಯಶೋದೆಯು ಪ್ರಜ್ಞೆತಪ್ಪಿ ಬಿಳುವಳು. ಆಗ ಕೃಷ್ಣನೇ ಅವಳನ್ನು ಸಮಾಧಾನಪಡಿಸಿ ಚೇತರಿಸಿಕೊಳ್ಳುವ ಹಾಗೆ ಮಾಡುವನು. ಮತ್ತೊಮ್ಮೆ ಕೃಷ್ಣನ ತಂದೆಯಾದ ನಂದಗೋಪನು ಸ್ನಾನಾರ್ಥವಾಗಿ ಯಮುನಾನದಿಗೆ ಹೋಗುವನು. ಆಗ ವರುಣದೂತರು ಕೃಷ್ಣನ ಶಕ್ತಿಯನ್ನು ಪರೀಕ್ಷಿಸಬೇಕೆಂದು ಯೋಚಿಸಿ, ನಂದನನ್ನು ಹಿಡಿದು ವರುಣಪಾಶದಿಂದ ಕಟ್ಟಿ ತಮ್ಮ ಲೋಕಕ್ಕೆ ಎಳೆದುಕೊಂಡು ಹೋಗುವರು. ಆಗ ಕೃಷ್ಣನೂಕೂಡ ತನ್ನ ತಂದೆಯನ್ನು ಬಿಟ್ಟಿರಲಾರದೆ ವರುಣಲೋಕಕ್ಕೆ ಹೋಗುವನು. ಆಗ ವರುಣನು ಕೃಷ್ಣದರ್ಶನದಿಂದ ಪರಮಾನಂದಭರಿತನಾಗಿ, ಅವನನ್ನು ಪೂಜಿಸಿ, ನಂದನನ್ನು ಕೊಟ್ಟು ಕಳುಹಿಸುವನು. ಮತ್ತೊಮ್ಮೆ ಬಹಳ ಮಾಯಾವಿಯಾದ ವ್ಯೋಮಾಸುರನೆಂಬವನು, ಕೃಷ್ಣನ ಸಂಗಡಿಗರಾದ ಗೋಪಾಲಬಾಲಕರನ್ನು ಹಿಡಿದು, ಒಂದು ಗುಹೆಯಲ್ಲಿ ಸೇರಿಸಿ ಬಚ್ಚಿಟ್ಟುಕೊಳ್ಳುವನು. ಇದನ್ನು ತಿಳಿದು ಕೃಷ್ಣನು ಆ ದುರಾತ್ಮನನ್ನು ಕೊಂದು ತನ್ನ ಸಂಗಡಿಗರನ್ನು ಬಿಡಿಸಿ ಕರೆತರುವನು. ಮತ್ತೊಮ್ಮೆ ಎಣೆಯಿಲ್ಲದ ಮಹಾಮಹಿಮೆಯುಳ್ಳ ಈ ಕೃಷ್ಣನು, ತನ್ನ ಸಂಗಡಿಗರಾದ ಗೋಪಾಲಕರೆಲ್ಲರೂ ಹಗಲಿನಲ್ಲಿ ಬಹಳವಾಗಿ ಶ್ರಮಪಟ್ಟು ರಾತ್ರಿಯಲ್ಲಿ ಗಾಢನಿದ್ರೆಯಿಂದ ಮಲಗಿರುವಾಗ, ಅವರಿಗೆ ತಿಳಿಯದಹಾಗೆಯೇ ಅವರೆಲ್ಲರನ್ನೂ ವೈಕುಂಠಕ್ಕೆ ಸಾಗಿಸಿ, ಅಲ್ಲಿನ ನಿರತಿಶಯಾನಂದವನ್ನು, ಅವರಿಗೆ ತೋರಿಸುವನು ಒಮ್ಮೆ ಗೋಪಾಲಕರೆಲ್ಲರೂ ದೇವೇಂದ್ರನ ಪ್ರೀತಿಗಾಗಿ ಬಂದು ಯಾಗವನ್ನು ಮಾಡಬೇಕೆಂದು ಯತ್ನಿಸುವರು. ಅದನ್ನು ನೋಡಿ ಕೃಷ್ಣನು, ಇಂದ್ರಪ್ರೀತಿಗಾಗಿ ಯಾಗವನ್ನು ಮಾಡಬೇಕಾದ ಅವಶ್ಯವಿಲ್ಲವೆಂದು ನಿರೋಧಿಸುವನು. ಇದರಿಂದ ದೇವೇಂದ್ರನು ಕೋಪಗೊಂಡು, ಕೃಷ್ಣನನ್ನು ನಿಗ್ರಹಿಸಬೇಕೆಂದೆಣಿಸಿ, ಭಯಂಕರವಾದ ಕಲ್ಲುಮಳೆಯನ್ನು ಕರೆಯುವನು. ಈತೆರಲಾವರ್ಷದ ಪ್ರಹಾರವನ್ನು ತಡೆಯಲಾರದೆ, ಗೋವುಗಳೂ, ಗೋಪಾಲಕರೂ ಸಾಯುವ ಸ್ಥಿತಿಯಲ್ಲಿರುವುದನ್ನು ನೋಡಿ ಕೃಷ್ಣನು, ಸಮೀಪದಲ್ಲಿದ್ದ ಹಿಂದು

ದೊಡ್ಡ ಬೆಟ್ಟವನ್ನು ತನ್ನ ಕಿರುಬೆರಳಿನಿಂದ ಮೇಲಕ್ಕೆತ್ತಿ, ಅದರ ಕೆಳಗೆ ಗೋವುಗಳನ್ನೂ, ಗೋಪಾಲಕರನ್ನೂ ನಿಲ್ಲುವಂತೆ ಹೇಳಿ,ಅವರನ್ನು ರಕ್ಷಿಸುವನು. ನಾರದಾ ! ಇದರಲ್ಲಿ ಮತ್ತೊಂದಾಶ್ಚರ್ಯವುಂಟು ! ಆ ಕೃಷ್ಣನು ತನ್ನ ಕಿರುಬೆರಳಿನಿಂದ ಮೇಲೆತ್ತಿಹಿಡಿದ ಆ ಬೆಟ್ಟವನ್ನು ಏಳುದಿನಗಳವರೆಗೆ ಅಹೋರಾತ್ರವೂ ಒಂದೇ ಸಮಾನಾಗಿ ಹಿಡಿದಿರುವನು. ಆಗ ದೇವೇಂದ್ರನು ಮುಂದೆ ತನ್ನ ವೀರ್ಯವೊಂದೂ ಸಾಗದುದಕ್ಕಾಗಿ, ತಾನಾಗಿಯೇ ಕೃಷ್ಣನ ಬಳಿಗೆ ಬಂದು, ಅವನನ್ನು ಸ್ತುತಿಸಿ ಮರೆಹೊಕ್ಕು ಅವನ ದಯೆಗೆ ಪಾತ್ರನಾಗುವನು. ಮತ್ತೊಮ್ಮೆ ಕೃಷ್ಣನು ವನದಲ್ಲಿ ಸಂಚರಿಸುತ್ತ, ಒಂದಾನೊಂದು ರಾತ್ರಿಯಲ್ಲಿ ಶರತ್ಕಾಲದ ಚಂದ್ರಿಕೆಯು ಭೂಮಿಯೆಲ್ಲವನ್ನೂ ಪಟ್ಟವಾಗಿ ವ್ಯಾಪಿಸಿರುವಾಗ, ತಾನು ಕೈಯಲ್ಲಿ ಕೊಳಲನ್ನು ಹಿಡಿದು, ಅವ್ಯಕ್ತಮಧುರವಾದ ಧ್ವನಿಯಿಂದ ನಾನಾಬಗೆಯ ಆಲಾಪಗಳನ್ನು ನುಡಿಸುವುದಕ್ಕೆ ತೊಡಗುವನು. ಆಗ ಈ ಗಾನಮಾಧುರ್ಯವನ್ನು ಕೇಳಿ ಗೋಪಸ್ತ್ರೀಯರೆಲ್ಲರೂ ಮೈಮರೆತಿರುವರು ಆ ಸಮಯದಲ್ಲಿ ಇವರನ್ನು ಕುಬೇರದೂತನಾದ ಶಂಖಚೂಡನೆಂಬವನು ಕದ್ದುಯ್ಯಬೇಕೆಂದು ಪ್ರಯತ್ನಿಸುತ್ತಿರುವುದನ್ನು ನೋಡಿ ಕೃಷ್ಣನು, ಆ ಕ್ಷಣವೇ ಅವನನ್ನು ಕೊಲ್ಲುವನು. ನಾರದಾ !ಇಷ್ಟು ಮಾತ್ರವೇ ಅಲ್ಲ. ಈ ಕೃಷ್ಣನು ಪ್ರಲಂಬನೆಂದೂ, ಧೇನುಕನೆಂದೂ, ಬಕಾಸುರನೆಂದೂ, ಕೇತಿಯೆಂದೂ, ಅರಿಷ್ಟನೆಂದೂ, ಪ್ರಸಿದ್ಧರಾದ ರಾಕ್ಷಸರನ್ನೂ, ಚಾಣೂರಮುಷ್ಟಿಕರೆಂಬ ಜಟ್ಟಿಗಳನ್ನೂ ಕುವಲಯಾಪೀಡವೆಂಬ ಮಹಾಗಜವನ್ನೂ, ತನ್ನ ಬಲದಿಂದ ಕೊಲ್ಲುವನು. ಮತ್ತು ಕಂಸನನ್ನೂ, ಕಾಲಯವನನ್ನೂ,ನರಕಾಸುರನನ್ನೂ, ಪೌಂಡ್ರಕಾದಿಗಳನ್ನೂ, ಸಾಲ್ವದ್ವಿವಿದಪಲ್ವಲರನ್ನೂ, ಶಿಶುಪಾಲದಂತವಕ್ತ್ರರನ್ನೂ,ಸಪ್ತವೃಷಭಗಳನ್ನೂ ಶಂಬರವಿಡೂರಥರನ್ನೂ, ರುಕ್ಮ ಮೊದಲಾದವರನ್ನೂ, ಭಾರತಯುದ್ಧದಲ್ಲಿ ಮಹಾರಥನುರ್ಧಾರಿಗಳಾದ ಕಾಂಭೋಜ, ಮತ್ಸ್ಯ, ಕುರು, ಕೇಕಯಾಧಿಪತಿಗಳನ್ನೂ, ತನ್ನ ಕೈಯಿಂದಲೂ, ತನ್ನ ಅಂಶದಿಂದ ಹುಟ್ಟಿದ ಭೀಮಾರ್ಜುನಾದಿಗಳ ಕೈಯಿಂದಲೂ ಕೊಲ್ಲಿಸುವನು. ಈ ಕೃಷ್ಣನ ವೀರ್ಯದಿಂದ ಹತರಾದವರೆಲ್ಲರೂ, ಪ್ರಕೃತಿಸಂಬಂಧವಾದ ಇಂದ್ರಿಯಗಳಿಗೆ ಅಗೋಚ

ವೆನಿಸಿದ ವೈಕುಂಠವನ್ನು ಹೊಂದುವರು. ಹೀಗೆ ಶ್ರೀಕೃಷ್ಣನು ನಡೆಸುವ ಕಾರ್ಯಗಳೆಲ್ಲವೂ ಅನಂತವಾಗಿಯೂ, ಅದ್ಭುತವಾಗಿಯೂ ಇರುವುವು. ನಾರದಾ! ನನಗೆ ತಿಳಿದಮಟ್ಟಿಗೆ ನಾನು ಸಂಗ್ರಹವಾಗಿ ಅತನ ಚರಿತ್ರವನ್ನು ವಿವರಿಸಿರುವೆನು.

ವ್ಯಾಸಾವತಾರವು.

ಭಗವಂತನಾದ ಶ್ರೀಮನ್ನಾರಾಯಣನು ವ್ಯಾಸಮಹರ್ಷಿಯಾಗಿ ಹುಟ್ಟಿ, ಕಲಿಯುಗದಲ್ಲಿ ಮುಂದೆ ಕ್ರಮಕ್ರಮವಾಗಿ ಜನರಲ್ಲರೂ ಅಲ್ಪಾಯುಸ್ಸುಳ್ಳವರಾಗಿಯೂ, ಮಂದಬುದ್ಧಿಯುಳ್ಳವರಾಗಿಯೂ ಹುಟ್ಟುವರೆಂದೂ, ಅವರಿಗೆ ವೇದಾರ್ಥವನ್ನು ಗ್ರಹಿಸತಕ್ಕ ಶಕ್ತಿಯಿರಲಾರದೆಂದೂ ಎಣಿಸಿ, ಅಲ್ಪಬುದ್ಧಿಯುಳ್ಳವರೂಕೂಡ ಅವುಗಳ ಸಾರಾರ್ಥಗಳನ್ನು ಗ್ರಹಿಸುವಂತೆ ವೇದಗಳನ್ನು ವಿಭಾಗಿಸಿಡುವನು.

ಬೌದ್ಧಾವತಾರವು.

ದೇವದ್ವೇಷಿಗಳಾದ ಅಸುರರು ವೈದಿಕಮಾರ್ಗದಲ್ಲಿ ಬಹಳಶ್ರದ್ಧೆಯನ್ನು ವಹಿಸಿ ನಿಂತು, ಮಯನಿರ್ಮಿತಗಳಾಗಿಯೂ, ಎಣೆಯಿಲ್ಲದ ವೇಗವುಳ್ಳವುಗಳಾಗಿಯೂ ಇದ್ದ ತ್ರಿಪುರಗಳಿಂದ ಲೋಕಗಳನ್ನು ನಾಶಮಾಡುತ್ತಿರುವಾಗ ಅವರನ್ನು ಮೋಸಗೊಳಿಸಿ ವಂಚಿಸುವುದಕ್ಕಾಗಿ ಭಗವಂತನು ಪಾಷಂಡವೇಷವನ್ನು ಧರಿಸಿ, ಅಭಾಸಧರ್ಮವಾದ ಆ ಪಾಷಂಡಧರ್ಮವನ್ನೇ ಹಿಡಿದು ಅವರಿಗೂ ಆ ಧರ್ಮವನ್ನು ಪದೇಶಿಸುವನು.

ಕಲ್ಕ್ಯವತಾರವು

ನಾರದಾ! ಸತ್ಪುರುಷರ ಗೃಹಗಳಲ್ಲಿ ಭಗವತ್ಕಥಾಶ್ರವಣವೂ, ಸ್ವಾಹಾ, ಸ್ವಧಾ, ವಷಟ್ಕಾರಗಳೂ ಯಾವಾಗ ನಿಂತು ಹೋಗುವುವೋ ಆಗ ಭಗವಂತನು ಈ ಕಲ್ಕ್ಯವತಾರವನ್ನೆತ್ತುವನು. ಅದೇ ಕಲಿಯುಗಕ್ಕೆ ಕೊನೆಯು. ಹೀಗೆ ಕಲ್ಕಿರೂಪಿಯಾದ ಭಗವಂತನು, ಕರ್ಮಭ್ರಷ್ಟರಾದವರೆಲ್ಲರನ್ನೂ ಶಿಕ್ಷಿಸು

ವನು. ಯಾವಾಗ ಮೂರುವರ್ಣಗಳೂ ಪಾಷಂಡಿಗಳಂತಾಗುವರೋ, ಯಾವಾಗ ಶೂದ್ರರೇ ರಾಜರಾಗುವರೋ ಆಕಾಲದಲ್ಲಿಯೇ ಭಗವಂತನು ಈ ಕಲ್ಕ್ಯವತಾರವನ್ನೆತ್ತಿ ಜನರನ್ನು ನಿಯಮಿಸುವನು.

ಓ ನಾರದಾ! ಸೃಷ್ಟಿವಿಷಯದಲ್ಲಿ ಚತುರ್ಮುಖನಾದ ನಾನೂ, ನವಬ್ರಹ್ಮರೂ, ಮರೀಚಿ ಮೊದಲಾದ ಮಹರ್ಷಿಗಳೂ, ಆ ಭಗವಂತನಿಗೆ ಸಾಧನರೂಪವಾಗಿದ್ದುಕೊಂಡು, ಅವನಿಗಧೀನರಾಗಿ ಅವನಪ್ರೇರಣೆಯಿಂದಲೇ ಆಕಾರ್ಯಗಳನ್ನು ನಡೆಸುವೆವು. ಧರ್ಮವೂ,ಆ ವಿಷ್ಣುವಿನಲ್ಲಿರುವ ಪಾಲನಶಕ್ತಿಯೂ, ಮನುಗಳೂ,ಇಂದ್ರಾದಿದೇವತೆಗಳೂ,ರಾಜರೂ,ಪ್ರಪಂಚದ ರಕ್ಷಣಕಾರ್ಯದಲ್ಲಿ ನಿಯಮಿಸಲ್ಪಟ್ಟಿರುವರು. ಅಧರ್ಮವೂ, ರುದ್ರನೂ, ಕೋಪಸ್ವಭಾವವುಳ್ಳ ಸರ್ಪಗಳೂ,ಕ್ರೂರಸ್ವಭಾವವುಳ್ಳ ರಾಕ್ಷಸಾದಿಗಳೂ ಲೋಕಸಂಹಾರಕಾರ್ಯಕ್ಕಾಗಿ ನಿಯಮಿಸಲ್ಪಟ್ಟಿರುವರು. ಇವೆಲ್ಲಕ್ಕೂ ಸರ್ವಾತ್ಮಕನಾದ ಆನಾರಾಯಣನೊಬ್ಬನೇ ಪ್ರೇರಕನಾಗಿಯೂ, ಮೂಲಕಾರಣನಾಗಿಯೂ ಇರುವನು. ಈ ಕಾರ್ಯಗಳನ್ನು ನಡೆಸುವವಿಷಯದಲ್ಲಿ, ಅವನು ತೋರಿಸತಕ್ಕ ಲೀಲೆಗಳೂ, ಅವತಾರಗಳೂ: ಅದ್ಭುತಕಾರ್ಯಗಳೂ, ಕೊನೆಮೊದಲಿಲ್ಲದಂತಿರುವುವು. ನಾರದಾ! ಭೂಮಿಯಲ್ಲಿರುವ ರೇಣುಗಳ ಕಣಗಳನ್ನಾದರೂ ಲೆಕ್ಕಮಾಡಿ ತಿಳಿಯಬಹುದೇಹೊರತು, ಆ ನಾರಾಯಣನ ದಿವ್ಯಜೇಷ್ಟಗಳನ್ನು ಮಾತ್ರ ಲೆಕ್ಕವಿಡಲು ಯಾರಿಗೂ ಸಾಧ್ಯವಲ್ಲ. ಹಾಗಿದ್ದರೂ ನನಗೆ ತಿಳಿದಷ್ಟನ್ನು ನಿನಗೂ ಸಂಗ್ರಹಿಸಿ ತಿಳಿಸಿರುವನು. ವಿಸ್ತರಿಸಿ ಹೇಳಬೇಕೆಂದರೆ ನನಗೂ ಸಾಧ್ಯವಲ್ಲ. ಪೂರ್ವದಲ್ಲಿ ಭಗವಂತನು ತ್ರಿವಿಕ್ರಮಾವತಾರವನ್ನೆತ್ತಿದಾಗ. ನಿರಂಕುಶವಾದ ಆತನ ಪಾದವೇಗದಿಂದ ಕದಲಿ ತಮ್ಮ ತಮ್ಮ ನಿವಾಸಗಳಿಂದ ಜಾರಿಬಿಳುತ್ತಿದ್ದ ಪ್ರಾಣಿಗಳನ್ನು ನೋಡಿ ಸತ್ಯಲೋಕವಾಸಿಗಳೆಲ್ಲರೂ ಭಯದಿಂದ ನಡುಗಿ ಸ್ತಬ್ಧರಾದರು. ಅಂತಹ ಮಹಾಪುರುಷನ ದಿವ್ಯಕರ್ಮವನ್ನೂ, ವೀರ್ಯವನ್ನೂ ಯಾರು ತಾನೇ ಲೆಕ್ಕವಿಡಬಲ್ಲರು?ನಾರದಾ!ಆ ವಾಸುದೇವನ ಮಾಯಾಬಲವನ್ನು ನಾನೂ ಕಂಡರಿಯೆನು! ನಿನ್ನ ಒಡಹುಟ್ಟಿದವರಾದ ಸನಕಾದಿಗಳೂ ಕಂಡರಿಯರು ! ಅಷ್ಟೇಕೆ ? ನಮ್ಮೆಲ್ಲರ ಸಂಗತಿಯೂ ಹಾಗಿರಲಿ! ಅಪರಮಪುರುಷನ ಅಪರಾವತಾರವೆಂದೆನಿ

ಸಿಕೊಂಡ ಆದಿಶೇಷನು ಎರಡು ಸಾವಿರನಾಲಿಗೆಯುಳ್ಳವನಾಗಿ, ಅನವರತವೂ ಆ ಭಗವಂತನ ಗುಣಗಳನ್ನು ತನ್ನ ಸಹಸ್ರಮುಖಗಳಿಂದ ಗಾನಮಾಡುತಿದ್ದರೂ, ಇನ್ನೂ ಅವುಗಳ ಕೊನೆಯನ್ನು ಕಾಣಲಾರದಿರುವನು. ಇನ್ನು ನಮ್ಮಂತವರ ಪಾಡೇನು? ಆದರೆ "ಆ ಭಗವಂತನ ಮಾಯಾಬಲವನ್ನ ತಿಕ್ರಮಿಸಿ ಉತ್ತೀರ್ಣರಾಗುವರೊಬ್ಬರೂ ಇಲ್ಲವೆ?" ಎಂದು ನೀನು ಶಂಕಿಸಬಹುದು. ನಾರದಾ! ಅಂತವರೂ ಕೆಲವರುಂಟು, ಹೇಳುವೆನು ಕೇಳು. ಸರ್ವಸಂಗಪರಿತ್ಯಾಗಮಾಡಿ, ನಿಷ್ಕಪಟವಾದ ಭಕ್ತಿಯಿಂದ ತನ್ನನ್ನು ಯಾರು ಸೇವಿಸುವರೋ ಅಂತವರಲ್ಲಿ ಭಗವಂತನು ತಾನಾಗಿಯೇ ಒಲಿಯುವನು. ಹೀಗೆ ಅವನ ದಯೆಗೆ ಪಾತ್ರರಾದವರು, ಸಂಸಾರದಲ್ಲಿ ಸಿಕ್ಕಿ ಕಾಲವನ್ನು ವ್ಯರ್ಥವಾಗಿ ಕಳೆಯಲಾರರು. ಅಂತವರು ನಾಯಿನರಿಗಳಿಗೆ ಆಹಾರಯೋಗ್ಯವಾದ ಈ ದೇಹದಲ್ಲಿ ಅಹಂಕಾರಮಮಕಾರಗಳನ್ನು ಬಿಟ್ಟು, ಆ ಭಗವಂತನ ಮಾಯೆಯನ್ನ ತಿಕ್ರಮಿಸಿ, ಅತನ ನಿಜತತ್ವವನ್ನು ಸ್ವಲ್ಪಮಾತ್ರವಾದರೂ ತಿಳಿದುಕೊಳ್ಳಬಲ್ಲರು. ಅಂತಹ ಮಹಾತ್ಮರು ಎಲ್ಲಿಯೋ ಕೆಲವರುಮಾತ್ರವೇ ಇರುವರು. ಆ ಭಗವಂತನ ಮಹಿಮೆಗೆ ಕೊನೆಯಿಲ್ಲವೆಂಬುದನ್ನು ಮಾತ್ರ ದೃಢವಾಗಿ ತಿಳಿದುಕೊಂಡರೂ ಸಾಕು! ಇದರಿಂದಲೇ ಅವನ ನಿಜಸ್ಥಿತಿಯನ್ನು ಕಂಡಂತಾಗುವುದು. ನಾರದಾ! ಈ ವಿಧವಾದ ಜ್ಞಾನವುಳ್ಳವರು ಯಾರೆಂಬುದನ್ನು ತಿಳಿಸುವೆನು ಕೇಳು. ನಾನೊಬ್ಬನು ಆ ತತ್ವವನ್ನು ತಿಳಿದು ಮಾಯೆಯನ್ನು ದಾಟಿರುವೆನು. ಕೇವಲ ಭಕ್ತಿಯೋಗಾವಲಂಬಿಗಳಾದ ಸನಕಾದಿಗಳೂ ಅದನ್ನು ತಿಳಿದಿರುವರು. ಹಾಗೆಯೇ ಶಂಕರನೂ, ದೈತ್ಯಕುಲಪ್ರಭುವಾದ ಪ್ರಹ್ಲಾದನೂ, ಸ್ವಾಯಂಭುವಮನುವೂ, ಆತನ ಪತ್ನಿಯಾದ ಶತರೂಪೆಯೆಂಬವಳೂ, ಅವಳ ಮಕ್ಕಳಾದ ಪ್ರಿಯವ್ರತಾದಿಗಳೂ, ಇವರ ಸಹೋದರಿಯೆರಾದ ದೇವಹೂತಿ ಮೊದಲಾದ ನಾರೀಮಣಿಗಳೂ, ಆ ಪರಮಪುರುಷನ ತತ್ವವನ್ನು ತಿಳಿದು ಮಾಯೆಯನ್ನೂ ದಾಟಿರುವರು. ಮತ್ತು ಪ್ರಾಚೀನಬರ್ಹಿಯೆಂಬ ರಾಜೇಂದ್ರನೂ, ಋಭುಮಹರ್ಷಿಯೂ, ಉತ್ತಾನಪಾದನ ಮಗನಾದ ಧ್ರುವನೂ, ಇಕ್ಷ್ವಾಕು, ದಿಲೀಪ, ಭೀಷ್ಮ, ಯಯಾತಿ, ಮುಚುಕುಂದ, ರಂತಿದೇವ, ಶ್ರುತದೇವ, ವಿಭೀಷಣ

ವಿದುರ, ದೇವಲ, ಜನಕ, ಹನುಮಾದಿ ಮಹಾತ್ಮರೂ, ಗಯ ನಹುಷಾದಿ ಗಳೂ, ಸೌಭರಿಯೂ, ಉದಂಕನೂ, ಶಿಬಿಯೂ, ಪಿಪ್ಪಲಾದನೂ, ಪರಾಶರ ನೂ, ಭರಿಷೇಣನೂ. ಉಪೇಂದ್ರದತ್ತನೂ, ಪಾರ್ಥನೂ, ಶ್ರುತಸೇನನೂ, ಇವರಂತೆ ಇನ್ನೂ ಕೆಲವರೂ ಆ ಭಗವಂತನಲ್ಲಿ ತಮಗಿರುವ ಭಕ್ತಿವಿಶೇಷದಿಂ ದ ಆತನನ್ನು ತಿಳಿದು ಮಾಯೆಯನ್ನು ದಾಟಿರುವರು. ನಾರದಾ! ಮತ್ತೊಂ ದು ರಹಸ್ಯವನ್ನು ಹೇಳುವೆನು ಕೇಳು! ಸ್ತ್ರೀಯರಾಗಲಿ, ಶೂದ್ರರಾಗಲಿ, ಬೇ ಡರಾಗಲಿ, ಮ್ಲೇಚ್ಛರಾಗಲಿ, ಪಾಪಜೀವಿಗಳಾದ ಬೇರೆ ಯಾರಾಗಲಿ ಆ ನಾ ರಾಯಣನ ಪಾದಾರವಿಂದಗಳನ್ನೇ ನಂಬಿ,ನಿರಂತರವೂ ಆತನ ಸೇವೆಯಲ್ಲಿದ್ದರೆ ಅವನದಯೆಗೆ ಪಾತ್ರರಾಗಿ, ಅವನ ತತ್ವವನ್ನು ತಿಳಿದು ಮಾಯೆಯನ್ನು ತಪ್ಪಿಸಿ ಕೊಳ್ಳಬಲ್ಲರು. ಹೀಗಿರುವಾಗ ಧಾರಣಾಯೋಗದಲ್ಲಿ ಸಮರ್ಥರಾದ ಮಹಾತ್ಮರು ಅವನ ನಿಜವನ್ನು ತಿಳಿದು ಮಾಯೆಯನ್ನತಿಕ್ರಮಿಸಬಲ್ಲರೆಂಬು ದನ್ನು ಹೇಳಬೇಕಾದುದೇನು ? ನಾರದಾ ! ಹಿಂದೆ ಹೇಳಿದಂತೆ ನಾವೆಲ್ಲರೂ ಆ ಭಗವಂತನ ಸ್ವರೂಪವನ್ನು ಯಾವವಿಧವಾಗಿ ತಿಳಿದಿರುವೆವೋ ಅದೇರೀತಿ ಯಾಗಿ ನಿನಗೂ ಆತನ ಸ್ವರೂಪವನ್ನು ಸಂಗ್ರಹಿಸಿಹೇಳುವೆನು ಕೇಳು! ದುಃಖ ಮೋಹಾದಿವಿಕಾರಗಳೊಂದೂ ಇಲ್ಲದೆ, ನಿತ್ಯಾನಂದಸ್ವರೂಪವಾಗಿ, ವೆಧಾಂ ತಗಳಿಂದ ಪರಬ್ರಹ್ಮವೆಂದು ಹೇಳಲ್ಪಡುವುದು ಯಾವುದೋ ಅದೇ ಆ ಪರಮಪುರುಷನ ಸ್ವರೂಪವು. ಆದರೆ " ವೇದವಾಕ್ಯಪ್ರಮಾಣಗಳಿಂದ ಹೊರತು ಬೇರೆ ಯಾವ ಮಾರ್ಗದಿಂದಲೂ ಆ ಸ್ವರೂಪವನ್ನು ತಿಳಿಯು ವುದಕ್ಕೆ ಸಾಧ್ಯವಿಲ್ಲವೆ ? " ಎಂದು ನೀನು ಕೇಳಬಹುದು ! ಸಾಧ್ಯವಿಲ್ಲ. ಏಕೆಂದರೆ, ಜಡಸ್ವರೂಪವಾದ ಪ್ರಕೃತಿಯ (ಮಾಯೆಯ) ಕಾರ್ಯಗ ಳಾದ ಮನಸ್ಸು ಮೊದಲಾದ ಇಂದ್ರಿಯಗಳು ಅವನ ಸ್ವರೂಪವನ್ನು ತಾವಾಗಿ ತಿಳಿದುಕೊಳ್ಳಲಾರವು. ಆದುದರಿಂದ ಅವನ ಸ್ವರೂಪವನ್ನು ವೇದವಾಕ್ಯಪ್ರಮಾಣಗಳಿಂದ ತಿಳಿದುಕೊಳ್ಳಬೇಕಲ್ಲದೆ, ಬೇರೆ ವಿಧವಾದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ತಿಳಿಯಲು ಸಾಧ್ಯವಿಲ್ಲ. ಇಷ್ಟು ಮಾತ್ರ ವಲ್ಲದೆ, ವೇದಗಳಲ್ಲಿಯೂ ಪೂರ್ವಭಾಗದಲ್ಲಿ ಹೇಳಲ್ಪಟ್ಟ ವಿಷಯಗಳಿಂದ ಯಥಾವತ್ತಾಗಿ ಆ ಭಗವಂತನ ಸ್ವರೂಪವನ್ನು ತಿಳಿಯುವುದು ಸಾಧ್ಯವಲ್ಲ.

ಸಾಧ್ಯಸಾಧನಗಳೇ ಮೊದಲಾದ ವಿಷಯಗಳೊಡನೆ ಕೇವಲ ಕರ್ಮಕಲಾಪಗಳನ್ನೇ ವಿಶೇಷವಾಗಿ ಬೋಧಿಸುತ್ತಿರುವ ವೇದದ ಪೂರ್ವಭಾಗವು, ಆ ಪರಮಾತ್ಮನ ವಿಷಯವನ್ನು ಪೂರ್ಣವಾಗಿ ತಿಳಿಸಲಾರವು. ಆದುದರಿಂದ ನಾವು ವೇದಾಂತಗಳೆನಿಸುವ ಉಪನಿಷತ್ತುಗಳಿಂದಲೇ ಆ ಪರಮಾತ್ಮತತ್ವವನ್ನು ತಿಳಿದುಕೊಳ್ಳಬೇಕಾಗಿರುವುದು. ಆ ಪರಮಾತ್ಮಸ್ವರೂಪವು ಕೇವಲ ಸುಖರೂಪವಾದುದು. ಆದರೆ " ಜೀವನಿಗೂ ಆ ವಿಧವಾದ ಸುಖಾನುಭವವುಂಟಲ್ಲವೆ?" ಎಂದರೆ; ನಾರದಾ ! ಜೀವಾತ್ಮ ಪರಮಾತ್ಮರಲ್ಲಿರುವ ಸುಖದಲ್ಲಿ ಬಹಳ ತಾರತಮ್ಯವುಂಟು ! ಜೀವಾತ್ಮನು ಅನುಭವಿಸುವ ಸುಖಕ್ಕೆ ಎಲ್ಲೆಯುಂಟು ! ಮತ್ತು ಇವನ ಸುಖವು ದುಃಖಮಿಶ್ರವಾಗಿರುವುದು! ದುಃಖಸಂಬಂಧವಿಲ್ಲದೆಯೂ, ಎಲ್ಲೆಯಿಲ್ಲದೆಯೂ ಇರುವ ನಿತ್ಯಾನಂದಸ್ವರೂಪವು ಆ ಪರಮಾತ್ಮನೊಬ್ಬನಿಗೇ ಹೊರತು ಬೇರೊಬ್ಬರಿಗಿಲ್ಲವು. ಜೀವನಂತೆ ಅವನಿಗೆ ಕರ್ಮಸಂಬಂಧವೂ ಇರುವುದಿಲ್ಲ, ಆ ಸ್ವರೂಪವು ಪ್ರಕೃತಿಪುರುಷರಿಗಿಂತಲೂ ವಿಲಕ್ಷಣವಾಗಿ, ವಿಕಾರವಿಲ್ಲದೆ,ಯಾವಾಗಲೂ ಏಕಸ್ವರೂಪವಾಗಿರುವುದು. ಆ ಪರಮಾತ್ಮನು ಸಮಸ್ತಚಿದಚಿತ್ತುಗಳಲ್ಲಿಯೂ ಅಂತರ್ಯಾಮಿಯಾಗಿ ನೆಲೆಗೊಂಡಿದ್ದರೂ, ಆಯಾ ವಸ್ತುವಿನಲ್ಲಿರತಕ್ಕ ದೋಷಗಳನ್ನು ತನಗೆ ಅಂಟಿಸಿಕೊಳ್ಳದೆ ಇರಬಲ್ಲನು. ಆತನ ಸ್ವರೂಪವು ಕೇವಲ ಜ್ಞಾನಮಯವಾದುದರಿಂದ, ಯಾವಾಗಲೂ ಜಡತ್ವವನ್ನು ಹೊಂದದು. ಆದಕ್ಕೆ ಆಶ್ರಿತರ ಸಂಸಾರಬಂಧನವನ್ನು ನೀಗಿಸತಕ್ಕ ಶಕ್ತಿಯುಂಟು!ಆ ಭಗವಂತನು ಹಸಿವು,ಬಾಯಾರಿಕೆ ಮುಂತಾದ ವಿಕಾರಗಳಿಗೆ ಈಡಾಗತಕ್ಕವನಲ್ಲ. ಆತನು ತನ್ನನ್ನು ಉಪಾಸನೆಮಾಡತಕ್ಕವರಿಗೂ ಆ ಬಗೆಯ ವಿಕಾರಗಳಿಲ್ಲದಂತೆ ತಪ್ಪಿಸಿ ಶಾಂತಿಯನ್ನು ಒದಗಿಸಬಲ್ಲನು. ಯೋಗೀಶ್ವರರುಮಾತ್ರ ಜೀವಾತ್ಮನಿಗೆ ಸಹಜರವಾದ ಮನಸ್ಸನ್ನು ಚೆನ್ನಾಗಿ ನಿಗ್ರಹಿಸಿ, ಆ ಭಗವಂತನ ಸ್ವರೂಪದಲ್ಲಿ ಅದನ್ನು ದೃಢವಾಗಿ ನೆಲೆಗೊಳಿಸಿ, ಸಮಸ್ತಸಂಶಯಗಳನ್ನೂ ನೀಗಿಬಿಡುವರು. ತಾನಾಗಿಯೇ ಬೇಕಾದಷ್ಟು ಮಳೆಯನ್ನು ಸುರಿಸಬಲ್ಲ ದೇವೇಂದ್ರನು, ಕೊಳ ಬಾವಿ ಮುಂತಾದುವುಗಳನ್ನು ತೋಡುವುದಕ್ಕೆ ಬೇಕಾದ ಗುದ್ದಲಿ, ಮುಂತಾದಸಾಧನಗಳನ್ನು ಲಕ್ಷಿಸದೆ ತೊರೆದುಬಿಡುವಂತೆ,ಅಂತಹ ಭಗವದುಪಾಸಕರು, ಸ್ವರ್ಗಾದಿಸುಖ

ಗಳೆಂಬ ಸ್ವಲ್ಪಫಲಗಳಿಗೆ ಸಾಧನವಾದ ಕರ್ಮಸಂಬಂಧವನ್ನು ತೊರೆದುಬಿಡುವರು ,,ಅದರೆ ಕರ್ಮವನ್ನು ಬಿಟ್ಟರೆ ಸ್ವರ್ಗಾದಿಸುಖಗಳನ್ನಪೇಕ್ಷಿಸತ್ಕವರ ಕೋರಿಕೆಯು ನೆರವೇರುವುದು ಹೇಗೆ?" ಎಂದು ಕೇಳುವೆಯಾ ? ನಾರದಾ ! ಭಗವದುಪಾಸನವನ್ನು ಮಾಡತಕ್ಕವರಿಗೆ ಯಾವಪಥದಲ್ಲಿಯೂ ಕೊರತೆಯಿಲ್ಲ ! ಆತನು ಸರ್ವಾಂತರ್ಯಾಮಿಯಾದುದರಿಂದ ವರ್ಣಾಶ್ರಮೋಚಿತಗಳಾದ ಕರ್ಮಗಳಿಗೆ ಫಲವನ್ನು ಕೊಡಬಲ್ಲವನೂ ಆತನಲ್ಲದೆ ಬೇರೆಯಲ್ಲ. ಆದುದರಿಂದ ಸ್ವರ್ಗಾದಿಗಳನ್ನು ಕೋರುವವರೂ ಭಗವದುಪಾಸನದಿಂದಲೇ ತಮ್ಮ ಕೋರಿಕೆಯನ್ನು ಈಡೇರಿಸಿಕೊಳ್ಳಬೇಕು. ಇಂದ್ರಾದಿದೇವತೆಗಳಲ್ಲಿರುವ ಮಹಿಮೆಯೂಕೂಡ ಅವರಲ್ಲಿ ಅಂತರಾತ್ಮನಾದ ಭಗವಂತನಿಂದಲೇ ಉಂಟಾದುದಲ್ಲದೆ ಬೇರೆಯಲ್ಲ ಆದರೆ ,, ಭಗವಂತನು ಸರ್ವಾಂತರ್ಯಾಮಿಯಾಗಿರುವಾಗ, ಚೇತನಾಚೇತನಗಳಲ್ಲಿರುವ ದೋಷಕ್ಕೆ ಅವನೂಭಾಗಿಯಾಗದಿರುವನೆ ?" ಎಂದು ನೀನು ಶಂಕಿಸಬೇಕಾದುದಿಲ್ಲ. ಆ ಭಗವಂತನು ಕರ್ಮಸಂಬಂಧದಿಂದುಂಟಾಗುವ ಉತ್ಪತ್ತಿವಿನಾಶಾದಿಗಳೊಂದೂ ಇಲ್ಲದವನು ಆದುದರಿಂದ, ಈ ಮನುಷ್ಯದೇಹಕ್ಕೆ ಕಾರಣಗಳಾದ ಭೂತಸೂಕ್ಷ್ಮಗಳು ಕದಲಿಹೋಗುವುದರಿಂದ, ಈ ದೇಹವು ನಶಿಸಿಹೋದರೂ, ಆ ದೇಹದಲ್ಲಿ ಅಂತರ್ಯಾಮಿಯಾಗಿರುವ ಭಗವಂತನುಮಾತ್ರ ಆಕಾಶದಂತೆ ನಿತ್ಯನಾಗಿರುವನೇಹೊರತು ದೇಹದೊಡನೆ ನಾಶಹೊಂದಲಾರನು. ಶರೀರಗತವಾದ ದೋಷಕ್ಕೆ ಆತನೂ ಭಾಗಿಯಾಗಿದ್ದಪಕ್ಷದಲ್ಲಿ, ಅವನೂ ಆ ಶರೀರದಂತೆಯೇ ನಾಶಕ್ಕೀಡಾಗಬೇಕಲ್ಲವೆ ! ಹಾಗಿಲ್ಲದುದರಿಂದಲೇ ಪ್ರಕೃತಿಸಂಬಂಧವಾದ ದೋಷವು ಅವನಲ್ಲಿ ಅಂಟಲಾರದು. ಓ ನಾರದಾ ! ಲೋಕಕಾರಣನಾಗಿಯೂ, ಚಾಕ್ಷುಷಾದಿಸೃಷ್ಟ್ಯಪರಿಪೂರ್ಣನಾಗಿಯೂ ಇರುವ ಆ ಭಗವಂತನ ವಿಭೂತಿಗಳೆಲ್ಲವನ್ನೂ ನಿನಗೆ ನಾನು ಸಂಗ್ರಹವಾಗಿ ವಿವರಿಸಿರುವೆನು. ಇದನ್ನೆ ನೀನು ಇನ್ನೂ ವಿವರವಾಗಿ ಇತರರಿಗೂ ಬೋಧಿಸಬೇಕು. ಈ ಭಗದ್ವಿಭೂತಿವೃತ್ತಾಂತವನ್ನು ಮೊದಲು ಭಗವಂತನು ತಾನಾಗಿಯೇ ನನಗೆ ತಿಳಿಸಿದನು. ಸಾಕ್ಷಾತ್ತಾಗಿ ಭಗವಂತನಿಂದ ಬಂದುದರಿಂದಲೇ ಇದು ಭಾಗವತವೆನಿಸಿರುವುದು. ಈ ವಿಷಯವನ್ನು ನೀನು ಚೆನ್ನಾಗಿ ಮನಸ್ಸಿನಲ್ಲಿ ಮನನಮಾಡಿ

ಕೊಂಡು,ಸರ್ವಾಂತರಾತ್ಮನಾದ ಆ ಭಗವಂತನಲ್ಲಿ ಮನುಷ್ಯರಿಗೆ ದೃಢವಾದ ಭಕ್ತಿಯುಂಟಾಗುವಂತೆ ಅದನ್ನು ಲೋಕದಲ್ಲಿ ಚೆನ್ನಾಗಿ ವಿವರಿಸಿ, ಚೇತನರನ್ನು ಧರಿಸಬೇಕು. ನಾರದಾ! "ಹಾಗಿದ್ದರೆ ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳಿಂದ ಪ್ರಯೋಜನವೇನು?" ಎಂದು ನೀನು ಕೇಳಬಹುದು. ಮನುಷ್ಯರು ಭೂಮಿಯಲ್ಲಿ ಹುಟ್ಟಿ, ತಾವು ನಡೆಸುವ ಕರ್ಮಕಲಾಪಗಳಿಂದ ಭಗವಂತನನ್ನು ಸಂತೋಷಪಡಿಸದಿದ್ದಪಕ್ಷದಲ್ಲಿ, ಅಂತಹ ಕರ್ಮಗಳೆಲ್ಲವೂ ನಿಷ್ಫಲವೆಂಬುದರಲ್ಲಿ ಸಂದೇಹವೇ ಇಲ್ಲ! ಆತನನ್ನು ಸಂತೋಷಪಡಿಸಬೇಕಾದರೆ ಭಕ್ತಿಗಿಂತಲೂ ಮೇಲಾದ ಬೇರೆ ಉಪಾಯವಿಲ್ಲ. ಆದುದರಿಂದ ಎಂತವನಾದರೂ ಭಕ್ತಿಯನ್ನೇ ಮುಖ್ಯವಾಗಿ ಹಿಡಿಯಬೇಕೇಹೊರತು,ತ್ರಿವರ್ಗಸಾಧನಗಳಾದ ಕರ್ಮವನ್ನು ಮಾತ್ರವೇ ಅವಲಂಬಿಸಬಾರದು. ಆ ಭಗವಂತನಲ್ಲಿ ದೃಢವಾದ ಭಕ್ತಿಯೊಂದು ಮಾತ್ರ ಹುಟ್ಟಿದಪಕ್ಷದಲ್ಲಿ,ವರ್ಣಾಶ್ರಮಾಚಾರಗಳಿಂದಲಾಗಲಿ, ಜ್ಞಾನದಿಂದಾಗಲಿ, ತಪಸ್ಸಿನಿಂದಾಗಲಿ, ವೇದಾಧ್ಯಯನದಿಂದಾಗಲಿ, ಪಡೆಯಬೇಕಾದ ಪ್ರಯೋಜನವೊಂದೂ ಇರುವುದಿಲ್ಲ. ಭಕ್ತಿಹೀನನಾದವನು ಅವೆಲ್ಲವನ್ನೂ ಕ್ರಮವಾಗಿ ನಡೆಸಿದರೂ ಫಲವಿಲ್ಲ. ಮಾಯೆಯಲ್ಲಿ ಕಟ್ಟುಬಿದ್ದಿರುವ ನನಗೆ, ಆ ವಿಧವಾದ ದೃಢಭಕ್ತಿಯು ಹೇಗೆ ಹುಟ್ಟುವುದೆಂದು ಕೇಳುವೆಯಾ ? "ನಾರದಾ ! ಆ ಮಾಯೆಯನ್ನು ಬಿಡಿಸಿಕೊಳ್ಳುವುದೇನೂ ಅಷ್ಟೊಂದು ಅಸಾಧ್ಯಕಾರ್ಯವಲ್ಲ! ಯಾವಾಗಲೂ ಆ ಭಗವಂತನ ಚರಿತ್ರಗಳನ್ನು ಕೇಳುತ್ತ, ಆಗಾಗ ಅವುಗಳನ್ನು ಗಾನಮಾಡುತ್ತ, ಅನವರತವೂ ಆ ಮಹಾತ್ಮನ ನಾಮವನ್ನು ಸ್ಮರಿಸುತ್ತಿರುವವರನ್ನು, ಮಾಯೆಯು ಎಷ್ಟುಮಾತ್ರವೂ ಮೋಹಗೊಳಿಸಲಾರದು! ಭಕ್ತಿಯೂ ಅವರಲ್ಲಿ ತಾನಾಗಿಯೇ ಹುಟ್ಟಬರದು. ಆದುದರಿಂದ ನಾನು ಹೇಳಿದಂತೆ ಆ ಭಗವಚ್ಚರಿತ್ರಗಳನ್ನು ನೀನು ವಿಶದೀಕರಿಸಿ, ಮನುಷ್ಯರಿಗೆ ಭಕ್ತಿಯುಂಟಾಗುವಂತೆ ಮಾಡಬೇಕಾದುದು ಅತ್ಯವಶ್ಯವು" ಎಂದು ಬ್ರಹ್ಮನು ನಾರದನಿಗೆ ಉಪದೇಶಿಸಿ ಕಳುಹಿಸಿದನು. ಇದು ಏಳನೆಯ ಅಧ್ಯಾಯವು.

{ ಪರೀಕ್ಷಿದ್ರಾಜನು ಇನ್ನೂ ಬೇರೆಬೇರೆವಿಷಯಗಳನ್ನು ಕುರಿತು ಶುಕಮುನಿಯನ್ನು ಪ್ರಶ್ನೆಮಾಡಿದುದು. }

ಈ ವಿಧವಾದ ಬ್ರಹ್ಮನಾರದಸಂವಾದವನ್ನು ಕೇಳಿದಮೇಲೆ, ಪರೀಕ್ಷಿದ್ರಾಜನು ತಿರುಗಿ ಶುಕಮುನಿಯನ್ನು ಕುರಿತು. ''ಎಲೈ ಯೋಗೀಂದ್ರನೆ ! ತತ್ವಜ್ಞನಾದ ನಾರದನು, ತನ್ನ ಜನಕನಾದ ಚತುರ್ಮುಖನಿಂದ ಪ್ರಕೃತಿ ಸಂಬಂಧವಿಲ್ಲದ ಭಗವಂತನ ಗುಣಗಳನ್ನು ಲೋಕದಲ್ಲಿ ಪ್ರಚಾರಗೊಳಿಸ ಬೇಕೆಂದು ಪ್ರೇರಿಸಲ್ಪಟ್ಟನಷ್ಟೆ ? ! ಅದರಂತೆ ನಾರದನು ಲೋಕದಲ್ಲಿ ಯಾರುಯಾರಿಗೆ ಯಾವಯಾವ ವಿಧದಿಂದ ತತ್ವಜ್ಞಾನವನ್ನು ತಿಳಿಸಿದನು ? ಅವೆಲ್ಲವನ್ನೂ ಕೇಳಬೇಕೆಂದು ನನ್ನ ಮನಸ್ಸು ಬಹಳವಾಗಿ ಕುತೂಹಲಗೊಂಡಿರುವುದು. ಎಲೈ ಮಹಾತ್ಮನೆ! ಅವೆಲ್ಲವನ್ನೂ ನೀನು ಕೃಪೆಯಿಟ್ಟು ನನಗೆ ತಿಳಿಸಬೇಕು! ಆ ಭಗವಂತನ ಚರಿತ್ರೆಗಳೆಲ್ಲವೂ ಸಮಸ್ತವಿಧದಲ್ಲಿಯೂ ಮಂಗಳಪ್ರದಗಳಾದುದರಿಂದ, ಆ ಚರಿತ್ರೆಗಳೆಲ್ಲವನ್ನೂ ವಿವರವಾಗಿ ತಿಳಿಸು ! ಅವುಗಳನ್ನು ನೀನು ಉಪದೇಶಿಸುವುದರಿಂದ ನನ್ನ ಮನಸ್ಸಿನ ಸಂಶಯಗಳೆಲ್ಲವೂ ನೀಗಿ ನಿಷ್ಕಲ್ಮಷವಾದಮೇಲೆ, ಆ ಪರಮಾತ್ಮನಲ್ಲಿ ಅದನ್ನು ನೆಲೆಗೊಳಿಸಿ ತುಚ್ಛವಾದ ಈ ದೇಹವನ್ನು ಬಿಟ್ಟುಬಿಡುವೆನು. ಓ ! ಮಹಾತ್ಮಾ ! ಸರ್ವಾಂತರ್ಯಾಮಿಯಾದ ಆ ಭಗವಂತನ ಕಥೆಗಳನ್ನು ಕಿವಿಯಿಂದ ಕೇಳುತ್ತ, ಆತನನ್ನು ಧ್ಯಾನಿಸುತಿದ್ದಹಾಗೆಯೇ ಈ ದೇಹವನ್ನು ತ್ಯಜಿಸಬೆಕೆಂದುದ್ದೇತಿಸುವೆನು. ಅವನ ಚರಿತ್ರೆಗಳನ್ನು ಕೇಳಿದಮಾತ್ರಕ್ಕೆ,ಭಗವಂತನು ತಾನಾಗಿಯೇ ಬಂದು ಅವರ ಹೃದಯದಲ್ಲಿ ನೆಲೆಸುವನು.ಆ ಭಗವಂತನ ಕಥೆಗಳನ್ನು ಭಕ್ತಿಪೂರ್ವಕವಾಗಿ ಕಿವಿಯಿಂದ ಕೇಳುತಿದ್ದರೆ, ಅಂತವನ ಕರ್ಣಮಾರ್ಗದಿಂದಲೇ ಭಗವಂತನು ಹೃದಯದಲ್ಲಿ ಪ್ರವೇಶಿಸುವನೆಂದೂ, ಶರತ್ಕಾಲವು ಕೆರೆಕೂಳಗಲ್ಲಿರುವ ನೀರಿನ ಕಲ್ಮಷವನ್ನು ನಿಗಿಸುವಂತೆ,ಭಗವಂತನು ಅಂತವರ ಹೃದಯದಲ್ಲಿರುವ ಕಲ್ಮಷವನ್ನು ನೀಗಿಸಿ ನಿರ್ಮಲವಾಗಿ ಮಾಡುವನೆಂದೂ ನಾನು ಹಿರಿಯರಿಂದ ಕೇಳಿರುವೆನು. ಇದಲ್ಲದೆ ಲೋಕದಲ್ಲಿ ಮನುಷ್ಯರು ಬೇರೆಬೇರೆ ಕಾರ್ಯಗಳಿಗಾಗಿ ದೇಶದೇಶಗಳನ್ನು ಸುತ್ತಿ, ಆ ಸುತ್ತಾಟದಿಂದ ಬಹಳವಾಗಿ ಬಳಲಿ, ತಮ್ಮ ಮನೆಗೆ ಬಂದು ಸೇರಿದಮೇಲೆ, ವಿಶ್ರಾಂತಿಸುವದಲ್ಲಿಯೇ ಇದ್ದು ಬಿಡುವಂತೆ

ಭಗವದ್ಭಕ್ತರೂಕೂಡ,ಬಹಳದಿನಗಳವರೆಗೆ ಸಂಸಾರಬಾಧೆಯಲ್ಲಿ ಸಿಕ್ಕಿ ನರಳಿ, ಆತನ ಕೃಪೆಯಿಂದ ಅದನ್ನು ತಪ್ಪಿಸಿಕೊಂಡು,ಅವನ ಪಾದಾರವಿಂದಗಳನ್ನು ಸೇರಿದಮೇಲೆ,ಅದನು ಬಿಟ್ಟುಬರುವುದಕ್ಕೆ ಎಷ್ಟುಮಾತ್ರವೂ ಇಷ್ಟಪಡಲಾರರು. ಇದಲ್ಲದೆ ಸಹಜವಾಗಿ ಭೌತಿಕದೋಷವಿಲ್ಲದ ಜೀವನಿಗೆ, ಆ ಭೂತಸೂಕ್ಷ್ಮಗಳ ಸಂಯೋಗದಿಂದಲೇ ಈ ಶರೀರಸಂಬಂಧವುಂಟಾಗುವುದೆಂದು ಕೇಳಿದೆನು. ಜೀವನಿಗೆ ಈ ವಿಧವಾದ ದೇಹಸಂಬಂಧವುಂಟಾಗುವುದು ಬೇರೆಯಾವ ಕಾರಣವೂ ಇಲ್ಲದೆ ಸ್ವೇಚ್ಛೆಯಿಂದಲೇ ಸಂಭವಿಸುವುದೆ?ಅಥವಾ ಇದಕ್ಕೆ ಕಾರಣವೇನಾದರೂ ಉಂಟೆ? ಆವಿಷಯದಲ್ಲಿ ನಿನಗೆ ತಿಳಿದ ಸಂಗತಿಯನ್ನು ನನಗೂವಿವರಿಸಬೇಕು. ಸಮಸ್ತಲೋಕಗಳಸ್ಥಿತಿಗೂ ಕಾರಣವಾಗಿ ಆಲೋಕಸನ್ನಿವೇಶವನ್ನೇ ಆಕಾರವನ್ನಾಗಿ ಹೊಂದಿದ ಕಮಲವು, ಯಾವನ ನಾಭಿಯಿಂದ ಮೊದಲು ಹೊರಟಿತೋ, ಅಂತಹ ಪರಮಪುರುಷನ ಸ್ವರೂಪವು, ಬೇರೆಬೇರೆಯಾಗಿ ವಿಭಾಗಿಸಿ ಇಷ್ಟೇ ಎಂದು ನಿರ್ಣಯಿಸಬಹುದಾದ ಅವಯವವುಳ್ಳದೆಂದೂ,ನಿಮ್ಮ ವಾಕ್ಯದಿಂದ ತೋರುವುದು. ಅಂತಹ ಜಗತ್ಕಾರಣನಾದ ಪುರುಷನು (ವಿರಾಟ್ಪುರುಷನು) ಎಷ್ಟುಪ್ರಮಾಣವುಳ್ಳವನು.?ಜಗದ್ರೂಪವಾದ ಪದ್ಮದಲ್ಲಿ ಹುಟ್ಟಿದ ಬ್ರಹ್ಮನು ಯಾವನ ಅನುಗ್ರಹದಿಂದ ಈ ಲೋಕವನ್ನು ಸೃಷ್ಟಿಸತಕ್ಕ ಶಕ್ತಿಯನ್ನು ಪಡೆದಿರುವನು ? ಮತ್ತು ಆ ಬ್ರಹ್ಮನು ಪರಮಪುರುಷನ ರೂಪವನ್ನು ಯಾವವಿಧದಿಂದ ಕಂಡುಕೊಂಡನು? ಇದಲ್ಲದೆ ಹಿಂದೆ ನೀವು ಹೇಳಿದ ವಾಕ್ಯಗಳಿಂದ ಸರ್ವೇಶ್ವರನೂ ಕೂಡ ಸಂಸಾರದಲ್ಲಿರುವ ಜೀವನಂತೆ ಒಬ್ಬನಾಗಿ ಗೋಚರಿಸಿದನೆಂದು ಹೇಳಿದಹಾಗೆ ತೋರುವುದು. ಹಾಗಿದ್ದಪಕ್ಷದಲ್ಲಿ ಜೀವನಿಗಿಂತಲೂ ಪರಮಾತ್ಮನಲ್ಲಿರುವ ವಿಶೇಷವೇನು? ಆ ಪರಮಪುರುಷನು, ಸೃಷ್ಟಿಸ್ಥಿತಿಸಂಹಾರಗಳಿಗೆ ಕಾರಣವಾದ ಮಾಯೆಯೆನ್ನು ಬಿಟ್ಟು,ಲೋಕವ್ಯಾಪಾರಗಳಲ್ಲಿಯೂ ವಿಮುಖನಾಗಿ ಸಮಸ್ತಗುಣಗಳಿಗೂ ಆಶ್ರಯನಾಗಿ ಯಾವಸ್ಥಳದಲ್ಲಿ ಶಯನಿಸುತ್ತಿರುವನು. ಪೂರ್ವಕಲ್ಪದಲ್ಲಿ ಅನಿರುದ್ಧನಿಂದ ಹುಟ್ಟಿದ ಚತುರ್ಮುಖನ ಅವಯವದಿಂದಲೇ ಸಮಸ್ತಲೋಕಪಾಲಕರಿಂದ ಕೂಡಿದ ಈ ಲೋಕಗಳೆಲ್ಲವೂ ನಿರ್ಮಿತವಾದುದೆಂದು ಹೇಳಿದಿರಷ್ಟೆ?ಇದರಿಂದ ಬ್ರಹ್ಮನು ಪೂರ್ವಕಲ್ಪಾನುಸಾರವಾ

ಗಿಯೇ ಸೃಷ್ಟಿಸಿದನೆಂಬ ಶ್ರುತಿಗೆ ವಿರೋಧವು ತೋರುವುದು. ಈ ವಿರೋಧಕ್ಕೆ ಪರಿಹಾರವೇನೆಂಬುದನ್ನೂ ತಿಳಿಸಬೇಕು. ಮತ್ತು ಅವಾಂತರಕಲ್ಪಕ್ಕೂ, ಮಹಾಕಲ್ಪಕ್ಕೂ ಇರುವ ಕಾಲಪ್ರಮಾಣದ ಭೇದವೇನು? ಭೂತ ಭವಿಷ್ಯದ್ವರ್ತಮಾನರೂಪವಾದ ಕಾಲವು, ಗ್ರಹಗಳ ಸಂಚಾರವನ್ನನುಸರಿಸಿ ಯಾವ ರೀತಿಯಾಗಿ ಎಣಿಸಲ್ಪಡುವುದು? ಮನುಷ್ಯನ ಆಯುಃಪ್ರಮಾಣವೆಷ್ಟು? ದೇವತೆಗಳಿಗೂ, ಪಿತೃದೇವತೆಗಳಿಗೂ, ನಿರ್ಣಯಿಸಲ್ಪಟ್ಟ ಆಯುಃಕಾಲವೆಷ್ಟು?ಕಾಲದಲ್ಲಿ ನಿಮಿಷವೇ ಮೊದಲಾದ ಸೂಕ್ಷ್ಮವಿಭಾಗಗಳನ್ನೂ, ಸಂವತ್ಸರವೇ ಮೊದಲಾದ ದೊಡ್ಡವಿಭಾಗಗಳನ್ನೂ ನಿರ್ಣಯಿಸುವ ಕ್ರಮವು ಹೇಗೆ? ಯಾವಯಾವ ಕರ್ಮಗಳಿಂದ ಯಾವಯಾವ ಲೋಕವು ಲಭಿಸುವುದು? ಕರ್ಮಗಳಲ್ಲಿರುವ ಭೇದವೆಷ್ಟು? ಕರ್ಮಗಳಿಂದ ಸುಲಭವಾಗಿ ಫಲಗಳನ್ನು ಕೈಗೂಡಿಸಿಕೊಳ್ಳುವುದಕ್ಕೆ ಯಾವಕ್ಷೇತ್ರವು ಉತ್ತಮವೆನಿಸುವುದು? ಯಾವಯಾವ ಕರ್ಮಗಳಿಗೆ ಯಾವಯಾವ ದೇವತೆಗಳಿಂದ ಫಲಪ್ರಾಪ್ತಿಯಾಗುವುದು? ಸತ್ತ್ವಾದಿಗುಣಗಳ ಪರಿಣಾಮಕ್ರಮವೇನು? ಆ ಗುಣಗಳು ದೇವಮನುಷ್ಯಾದಿಶರೀರಗಳಾಗಿ ಮಾರ್ಪಡುವ ರೀತಿಯನ್ನೂ, ಜೀವಾತ್ಮಗಳು ದೇವಾದಿಶರೀರಗಳನ್ನು ಪಡೆಯುವುದಕ್ಕೆ ಕಾರಣವೇನೆಂಬುದನ್ನೂ ವಿಶದವಾಗಿ ತಿಳಿಸಬೇಕು. ಭೂಮಿ, ಪಾತಾಳ, ದಿಕ್ಕುಗಳು, ಆಕಾಶ, ಸೂರ್ಯ ಚಂದ್ರಾದಿಗಳೂ, ಆಶ್ವಿನಿ ಮೊದಲಾದ ತಾರೆಗಳು, ಪರ್ವತಗಳು, ನದಿಗಳು, ಸಮುದ್ರಗಳು, ದ್ವೀಪಗಳು, ಇವೆಲ್ಲವುಗಳ ಉತ್ಪತ್ತಿಕ್ರಮವೇನು? ಇವುಗಳಲ್ಲಿರುವ ಪ್ರಾಣಿಗಳು ಹುಟ್ಟಿದ ರೀತಿಯನ್ನೂ ತಿಳಿಸಬೇಕು. ಬ್ರಹ್ಮಾಂಡದ ಮತ್ತು ಅದರ ಹೊರಗಿನ ಆವರಣದ ಅಳತೆಯೆಷ್ಟು? ಇವುಗಳೊಳಗಿನ ಬೇರೆಬೇರೆ ವಸ್ತುಗಳ ಸ್ವರೂಪವೇನು? ಮಹಾತ್ಮರಾದ ಭಗವದ್ಭಕ್ತರ ಚರಿತ್ರವನ್ನೂ, ವರ್ಣಾಶ್ರಮಗಳ ಸ್ವಭಾವಭೇದವನ್ನೂ, ವಿವರಿಸಬೇಕು! ಮಹಾದ್ಭುತಗಳಾದ ಭಗವದವತಾರ ಚರಿತ್ರಗಳನ್ನೂ, ಯುಗಭೇದವನ್ನೂ, ಒಂದೊಂದು ಯುಗದ ಕಾಲಪ್ರಮಾಣವನ್ನೂ, ಆಯಾಯುಗಗಳಲ್ಲಿ ನಡೆಯುವ ಧರ್ಮಗಳನ್ನೂ, ವಿಶದವಾಗಿ ತಿಳಿಸಬೇಕು. ಮನುಷ್ಯವರ್ಗಕ್ಕೆ ಸಾಮಾನ್ಯವಾದ ಧರ್ಮವಾವುದು? ವರ್ಣಾಶ್ರಮಭೇದಗಳನ್ನು ಕುರಿ

ತವಿಶೇಷಧರ್ಮಗಳಾವುವು? ಆಯಾವೃತ್ತಿಗಳನ್ನು ಹಿಡಿದು ಜೀವಿಸುವ ಜನರು ತಮ್ಮತಮ್ಮ ವೃತ್ತಿಗಳಲ್ಲಿ ಅನುಸರಿಸಬೇಕಾದ ಧರ್ಮವಾವುದು? ಪ್ರಜಾ ರಕ್ಷಣವೆಂಬ ಕಾರ್ಯದಲ್ಲಿ ನೆಲಸಿದ ರಾಜಋಷಿಗಳ ಧರ್ಮವೆಂತದು? ಆಪ ತ್ಕಾಲದಲ್ಲಿ ಜನರು ಅನುಸರಿಸಬಹುದಾದ ಧರ್ಮವೇನು? ಮಹತ್ತು ಮೊದಲಾದ ತತ್ವಗಳೆಷ್ಟು? ಅವುಗಳ ಸ್ವರೂಪವೇನು? ಅವುಗಳಿಗೆ ಕಾರಣಭೂತವಾದ ವಸ್ತುವಿನ ಲಕ್ಷಣವೇನು? ಭಗವದುಪಾಸನಕ್ರಮ ವು ಹೇಗೆ? ಪ್ರಕೃತಿಯೆನ್ನು ಬಿಟ್ಟು ಹೋದಮೇಲೆ ಆತ್ಮವಸ್ತುವಿನ ವಿಷಯ ವಾದ ಜ್ಞಾನಯೋಗದ ಪ್ರಕಾರವೂ, ಯೋಗೀಶ್ವರರು ಹೊಂದಬಹು ದಾದ ಅಣಿಮಾದ್ಯಷ್ಟೈಶ್ವರ್ಯಗಳ ಸ್ವರೂಪವೂ, ಯೋಗಿಗಳು ಶರೀರತ್ಯಾ ಗಮಾಡುವ ಕ್ರಮವೂ ಹೇಗೆ? ಋಕ್ಕು ಮೊದಲಾದ ವೇದಗಳು ,ಥನು ರ್ವೇದವೇ ಮೊದಲಾದ ಉಪವೇದಗಳು, ಅವುಗಳಲ್ಲಿ ಹೇಳಲ್ಪಟ್ಟ ಧರ್ಮ ಗಳು, ಇತಿಹಾಸ ಪುರಾಣಗಳು, ಇವುಗಳ ಸ್ವರೂಪಲಕ್ಷಣಗಳನ್ನೂ ಸಮಸ್ತಜೀವರಾತಿಗಳ ಉತ್ಪತ್ತಿಯೆನ್ನೂ, ಅವುಗಳಿಗುಂಟಾಗುವ ಅವಾಂತರ ಪ್ರಳಯವನ್ನೂ, ಈ ಉತ್ಪತ್ತಿವಿನಾಶಗಳ ನಡುವೆ ಅವುಗಳ ಸ್ಥಿತಿಯೆನ್ನೂ, ಮಹಾಪ್ರಳಯದ ಕ್ರಮವನ್ನೂ,ಯಾಗಾದಿವೈಧಿಕ ಕರ್ಮಗಳನ್ನೂ,ಕೆರೆಬಾವಿ ಗಳ ನಿರ್ಮಾಣವೇ ಮೊದಲಾದ, ಸ್ಮಾರ್ತ (ಪೂರ್ತ) ಕರ್ಮಗಳ ಕ್ರಮವನ್ನೂ, ಕಾಮ್ಯಕರ್ಮಗಳ ಸ್ವರೂಪವನ್ನೂ, ಧರ್ಮಾರ್ಥಕಾಮಗಳೆಂಬ ತ್ರಿವರ್ಗಗಳ ಪ್ರಕಾರವನ್ನೂ, ಇದ್ದುದಿದ್ದಂತೆ ವಿವರಿಸಬೇಕು. ಜೀವಾತ್ಮನು ಕಾಮ್ಯಕ ರ್ಮಗಳ ಫಲವನ್ನನುಭವಿಸಿ ಪರಲೋಕದಿಂದ ಜಾರಿ ಬಿದ್ದಮೇಲೆ, ಆ ಜೀವನ ಪುನಸ್ಸೃಷ್ಟಿಪ್ರಕಾರವು ಹೇಗೆ? ಪಾಷಂಡಧರ್ಮದ ಉತ್ಪತ್ತಿಕ್ರಮ ವೇನು? ಜೀವಾತ್ಮನಿಗುಂಟಾಗತಕ್ಕ ಬಂಧಮೋಕ್ಷಗಳನ್ನೂ, ಆ ಜೀವಾತ್ಮ ನಿಗೆ ಮೋಕ್ಷದಶೆಯಲ್ಲಿ ಪ್ರಾಪ್ತವಾಗುವ ಸ್ವರೂಪವನ್ನೂ ವಿಶದವಾಗಿ ತಿಳಿ ಸಬೇಕು. ಮತ್ತೊಬ್ಬರಿಗೆ ವಶನಲ್ಲದೆ ಸರ್ವಸ್ವತಂತ್ರನಾಗಿ, ಸರ್ವಾಂತರಾತ್ಮ ನೆನಿಸಿದ ಭಗವಂತನು, ತನ್ನ ಆಜ್ಞಾಧೀನವಾಗಿರುವ ಮಾಯೆಯನ್ನು ಹಿಡಿದು ಪ್ರಪಂಚಲೀಲೆಗಳನ್ನು ನಡೆಸುವ ರೀತಿಯನ್ನೂ, ಆಮೇಲೆ ತನಗೆತಾನೇ ಆ ಮಾಯೆಯನ್ನು ತೊರೆದು, ಪ್ರಳಯಕಾಲದಲ್ಲಿ ಕೇವಲ ಉದಾಸೀನನಂತೆ ನೋ

ಡುತ್ತ ನುಮ್ಮನಿರುವಕ್ರಮವನ್ನೂ,ನನಗೆ ವಿಶದವಾಗಿ ತಿಳಿಸಬೇಕು. ೇ ಎಲ್ಲೆ ಮಹಾತ್ಮನೆ ! ನೀನು ಸರ್ವಜ್ಞನಾದುದರಿಂದ ಇವೆಲ್ಲವನ್ನೂ ವಿವರಿಸಿ ತಿಳಿಸ: ವುದಕ್ಕೆ ನೀನು ಸಮರ್ಥನೆಂಬುದರಲ್ಲಿ ಸಂದೇಹವಿಲ್ಲ. ಮಹಾವಿಪತ್ತಿನ ಬಾ ಯಿಯಲ್ಲಿ ಸಿಕ್ಕಿ ಬಿದ್ದಿರುವ ನನಗೆ ಈಗ ನಿನ್ನನ್ನು ಬಿಟ್ಟರೆ ಬೇರೆ ದಿಕ್ಕಿಲ್ಲ ! ಓ ಮುನೀಂದ್ರಾ!ನನ್ನಲ್ಲಿ ಕರುಣೆಯಿಟ್ಟು ಇವೆಲ್ಲವನ್ನೂ ನನಗೆ ವಿವರವಾಗಿ ತಿಳಿಸಿ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ಹಿಂದೆ ಬ್ರಹ್ಮನಾರದಸಂವಾದ ದಲ್ಲಿ ವಿದಿತವಾದ ಸಂಪ್ರದಾಯಾರ್ಥಗಳೆಲ್ಲವೂ ನಿನಗೆ ತಿಳಿದಂತೆ ಮತ್ತೊ ಬ್ಬರಿಗೆ ತಿಳಿಯವು. ಆದುದರಿಂದ ಈ ನನ್ನ ಪ್ರಶ್ನೆಗಳೆಲ್ಲಕ್ಕೂ ತಕ್ಕ ಉತ್ತರವ ನ್ನು ಕೊಡುವುದಕ್ಕೆ ನೀನೊಬ್ಬನೇ ಸಮರ್ಥನು. ಬ್ರಾಹ್ಮಣಶಾಪದಿಂದ ಬೆಂ ದು, ಅನ್ನಪಾನಗಳನ್ನು ಬಿಟ್ಟು,ತತ್ತ್ವಳಿಸುತ್ತಿರುವ ನಾನು, ಈ ನಿನ್ನ ತತ್ತ್ವೋ ಪದೇಶಗಳೆಲ್ಲವನ್ನೂ ಸಾವಧಾನದಿಂದ ಹೇಗೆ ಕೇಳಬಲ್ಲೆನೆಂದು ಸಂದೇಹಿಸ ಬೇಡ ! ಓ ಮಹಾತ್ಮಾ! ನಾನು ಬ್ರಾಹ್ಮಣಶಾಪದಿಂದ ಬೆಂದವನಾದರೂ, ನಿರಾಹಾರನಾಗಿದ್ದರೂ, ಈಗ ನಿನ್ನ ಮುಖಪದ್ಮದಿಂದ ಹೊರಟ ಹರಿಕಥಾ ಮೃತವನ್ನು ಕುಡಿದಮೇಲೆ, ನನ್ನ ಪ್ರಾಣಗಳು ನನ್ನನ್ನು ಬಿಟ್ಟುಹೋಗಲಾ ರದೆ ಉತ್ಸಾಹವಿಶಿಷ್ಟವಾಗಿಯೇ ಇರುವುವು. ನನ್ನ ಇಂದ್ರಿಯಗಳು ವ್ಯಾ ಕುಲತೆಯಿಲ್ಲದೆ ಪ್ರಸನ್ನವಾಗಿಯೇ ಇರುವುವು. ! ಆದುದರಿಂದ ನೀನು ನನ್ನ ಮನಸ್ಸಿನ ಸಂದೇಹಗಳೆಲ್ಲವೂ ನೀಗುವಂತೆ,ನಾನು ಕೇಳಿದ ಪ್ರಶ್ನೆಗಳಿಗೆಲ್ಲಕ್ಕೂ ಉತ್ತರವನ್ನು ಕೊಟ್ಟು ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು." ಎಂದನು. ಹೀಗೆ ಪರೀಕ್ಷಿದ್ರಾಜನು ಪ್ರಶ್ನೆ ಮಾಡಿದುದನ್ನು ಕೇಳಿ, ತತ್ತ್ವೋಪದೇಶದಲ್ಲಿ ನಿಪುಣನಾದ ಶುಕಮುನಿಯು ಬಹಳಸಂತೋಷಗೊಂಡು, ಆ ಮಹಾಸಭೆಯ ಲ್ಲಿ, ವೇದತುಲ್ಯವಾದ ಭಾಗವತವೆಂಬ ಪುರಾಣವನ್ನು ಪರೀಕ್ಷಿದ್ರಾಜನಿಗೆ ಉ ಪದೇಶಿಸತೊಡಗಿದನು. ಮೊದಲು ಸೃಷ್ಟ್ಯಾರಂಭದಲ್ಲಿ ಭಗವಂತನೇ ಬ್ರಹ್ಮ ದೇವನಿಗೆ ಉಪದೇಶಿಸಿದುದರಿಂದ, ಭಾಗವತವೆನಿಸಿದ ಪುರಾಣರತ್ನವನ್ನು,ಅದೇ ಕ್ರಮದಲ್ಲಿಯೇ ಪಾಂಡುಕುಲತಿಲಕನಾದ ಪರೀಕ್ಷಿತ್ತಿಗೆ ಕ್ರಮವಾಗಿ ತಿಳಿಸ ಲಾರಂಭಿಸಿದನು. ಇಲ್ಲಿಗೆ ಎಂಟನೆಯ ಅಧ್ಯಾಯವು.

ಶುಕಮುನಿಯು ಪರೀಕ್ಷಿದ್ರಾಜನ ಪ್ರಶ್ನೆಗಳಿಗೆ ಕ್ರಮವಾಗಿ ಉತ್ತರವನ್ನು ಹೇಳಿದುದು.

ಹೀಗೆ ಪ್ರಶ್ನೆಮಾಡಿದ ಪರೀಕ್ಷಿದ್ರಾಜನನ್ನು ಕುರಿತು ಶುಕಮುನಿಯು "ಎಲೈ ರಾಜೇಂದ್ರನೆ! ಜ್ಞಾನಸ್ವರೂಪನಾಗಿಯೂ, ದೇಹಾದಿರೂಪದಿಂದಿರುವ ಪ್ರಕೃತಿಗಿಂತಲೂ ವಿಲಕ್ಷಣನಾಗಿಯೂ ಇರುವ ಜೀವನಿಗೆ, ಶಬ್ದಾದಿವಿಷಯಗಳನ್ನು ಅನುಭವಿಸತಕ್ಕ ಭೋಕ್ತೃತ್ವವೆಂಬ ಸಂಬಂಧವು, ಆ ಪರಮಪುರುಷನ ಮಾಯಾಬಲದಿಂದ ಹೊರತು ಬೇರೆ ಯಾವವಿಧದಿಂದಲೂ ಸಂಭವಿಸಿದುದಲ್ಲ! ಕನಸನ್ನು ಕಾಣುವವನು ಆ ಕಾಲದಲ್ಲಿ ನಿದ್ರೆಯಿಂದ ನಿಶ್ಚೇಷ್ಟನಾಗಿ, ಸತ್ತಹಾಗೆ ಬಿದ್ದಿರುವಾಗಲೂ, ಬೇರೆಬೇರೆ ವಸ್ತುಗಳನ್ನು ತಾನು ಅನುಭವಿಸಿದಹಾಗೆ ಭ್ರಮೆಗೊಳ್ಳುವುದು ಹೇಗೆ? ಆ ಭಗವಂತನ ಮಾಯೆಯಿಂದಲ್ಲವೆ? ಹಾಗೆಯೇ ಇದೂ ಕಾರಣಾಂತರದಿಂದ ಸಂಭವಿಸಲಾರದು! ಜೀವಾತ್ಮರಿಗೆ ಅವರವರ ಪುಣ್ಯಪಾಪಗಳಿಗೆ ತಕ್ಕಂತೆ, ಆಯಾಕಾಲಗಳಲ್ಲಿ ಅನುಭವಿಸತಕ್ಕುದಾದ ದೇವ ಮನುಷ್ಯಾದಿಶರೀರಗಳನ್ನು ಪರಮಪುರುಷನು, ತನ್ನ ಮಾಯೆಯಿಂದ ಸೃಷ್ಟಿಸಿ, ಅವರವರಿಗೆ ಕೊಡುವನು. ಅವನ ಮಾಯೆಯಿಂದಲ್ಲದೆ ಬೇರೆ ಯಾವ ಕಾರಣದಿಂದಲೂ ಈ ಕಾರ್ಯವು ನಡೆಯಲಾರದು. ಆದುದರಿಂದ ಜೀವಾತ್ಮನು ಸಹಜವಾಗಿ ಜ್ಞಾನಸ್ವರೂಪನಾಗಿದ್ದರೂ, ಆ ಸ್ವರೂಪವುಮಾಯೆಯ ಕಾರ್ಯಗಳಾದ ದೇಹಾದಿಗಳಿಂದ ಮರೆಸಲ್ಪಡುವುದು. ಆದುದರಿಂದ ಭಗವನ್ಮಾಯೆಯೇ ಜೀವನ ದೇಹಾರಂಭಕ್ಕೆ ಕಾರಣವು. ಭಗವನ್ಮಾಯೆಯು (ಪ್ರಕೃತಿಯು) ಆಶ್ಚರ್ಯಕರಗಳಾದ ಅನೇಕಶಕ್ತಿಗಳಿಂದ ಪರಿಣಾಮಹೊಂದುವ ಸ್ವಭಾವವುಳ್ಳದು. ಇದರ ಕಾರ್ಯದಿಂದ ಮರೆಸಲ್ಪಟ್ಟ ಸಹಜಸ್ವರೂಪವುಳ್ಳ ಜೀವನು, ಮೇಲೆ ಕಾಣುತ್ತಿರುವ ದೇವಾದ್ಯಾಕಾರಗಳನ್ನೇ ಆತ್ಮನಲ್ಲಿ ಆರೋಪಿಸಿಕೊಂಡು, ಬಹುರೂಪಗಳನ್ನು ಹೊಂದುತ್ತಿರುವಂತೆ ಕಾಣುವನು. ಜೀವನು ವಾಸ್ತವದಲ್ಲಿ ಪ್ರಕೃತಿಗಿಂತಲೂ ವಿಲಕ್ಷಣನಾಗಿದ್ದರೂ, ಮಾಯೆಯ ಗುಣಗಳಾದ ಸತ್ವರಜಸ್ತಮಸ್ಸುಗಳ ಕಾರ್ಯಗಳೆನಿಸಿಕೊಂಡ ಶಬ್ದಾದಿವಿಷಯಗಳಲ್ಲಿ ಆಸಕ್ತನಾಗಿ, ದೇಹಾತ್ಮ ವಿವೇಚನೆಯಿಲ್ಲದೆ "ನಾನು, ನನ್ನದು" ಎಂಬ ಅಹಂಕಾರ ಮಮಕಾರಗಳಲ್ಲಿ ಸಿಕ್ಕಿ ಬಿದ್ದು ಸಂಸಾರಾಸಕ್ತನಾಗಿರುವನು.

ಹೀಗೆ ಸಂಸಾರಬಂಧದಲ್ಲಿ ಸಿಕ್ಕಿದವನಿಗೂಕೂಡ ಮೋಕ್ಷಸಾಧನವಾದ ಜ್ಞಾನವೊಂದುಂಟು ! ಯಾವಾಗ ಜೀವನು, ತನಗೆ ಮಾಯಾಸಂಬಂಧದಿಂದುಂಟಾಗಿರುವ ಅಹಂಕಾರ ಮಮಕಾರಾದಿಗಳನ್ನು ಬಿಟ್ಟು, ಸಹಜವಾದ ತನ್ನ ಶುದ್ಧಸ್ವರೂಪವು ಕಾಲಕ್ಕೂ, ಪ್ರಕೃತಿಗೂ ಈಡಾದುದಲ್ಲವೆಂದೂ, ಪಾಪ ಸಂಬಂಧವಾಗಲಿ, ಹಸಿವು, ಬಾಯಾರಿಕೆ, ಮುಪ್ಪು, ಸಾವು, ದುಃಖ, ಮೊದಲಾದ ಕಷ್ಟಗಳಾಗಲಿ ಇಲ್ಲದೆ, ಅಷ್ಟಗುಣಗಳಿಗೂ ನೆಲೆಯಾದುದೆಂದೂ, ತನ್ನ ಮಹಿಮೆಯನ್ನು ತಾನು ಚೆನ್ನಾಗಿ ನಿಶ್ಚಯಜ್ಞಾನದಿಂದ ತಿಳಿಯುವನೋ, ಆಗಲೇ, ಪ್ರಕೃತಿ, ಮತ್ತು ಕಾಲವೆಂಬಿವುಗಳ ನಿರ್ಬಂಧವನ್ನು ತಪ್ಪಿಸಿಕೊಂಡು, ಶಬ್ದಾದಿವಿಷಯಗಳಲ್ಲಿಯೂ ವಿಮುಖನಾಗಿ, ಭಗವದ್ಭಕ್ತಿಯಿಂದುಂಟಾದ ಆನಂದಾತಿಶಯದಲ್ಲಿರುವನು. * (ಕಾಲದಿಂದಲೂ, ಪ್ರಕೃತಿಯಿಂದಲೂ ಬದ್ಧನಾಗದೆ, ಇವುಗಳಿಗೆ ತಾನೇ ನಿಯಾಮಕನಾಗಿ, ಸತ್ಯಕಾಮತ್ವಾದಿಗುಣಗಳುಳ್ಳವನಾಗಿರುವ ಪರಮಾತ್ಮನ ಮಹಿಮೆಯನ್ನು ಯಾವಾಗ ತಿಳಿಯುವನೋ, ಆಗ ತಾನೂ ಕಾಲಪ್ರಕೃತಿಗಳನ್ನು ಮೀರಿ, ಶಬ್ದಾದಿವಿಷಯಗಳಿಂದ ವಿಮುಖನಾಗುವನು). ಜೀವಾತ್ಮನಲ್ಲಿ ಪಾಪಸಂವೃತ್ತಿ, ಮುಂತಾದ ಸ್ವಭಾವಗುಣಗಳು ತಲೆದೋರುವುದೇ ಮುಕ್ತದಶೆಯಲ್ಲಿರುವ ಸ್ವರೂಪವು. ಈ ಸ್ಥಿತಿಯಲ್ಲಿ ಮಹಾನಂದಸ್ವರೂಪನಾದ ಪರಮಾತ್ಮನನ್ನು ಅನುಭವಿಸುವುದೂ, ಆ ಪರಮಾತ್ಮನಿಗೆ ಶರೀರದಂತಿರುವ ತನ್ನ ಸ್ವರೂಪವನ್ನು ಅನುಭವಿಸುವುದೂ, ಇವೆರಡೂ ಆ ಜೀವನಿಗೆ ಶಬ್ದಾದಿವಿಷಯಗಳಲ್ಲಿರುವ ಆಸೆಯೆನ್ನು ತಾನೇ ನೀಗಿಸಿಬಿಡುವುದು. ಮೋಕ್ಷದಶೆಯಲ್ಲಿ ಜೀವಾತ್ಮನು ಯಾವಸ್ಥಿತಿಯಲ್ಲಿರುವನೆಂಬುದನ್ನು ಇದುವರೆಗಿನ ವಿಷಯಗಳಿಂದ ತಿಳಿಸಿದೆನು. ಇನ್ನು ಮುಂದೆ ''ಜೀವನಂತೆಯೇ ಭಗವಂತನೂಕೂಡ ! ಲೋಕರೂಪಗಳಾದ ಅವಯವಗಳಿಂದ ಪರಿಮಿತವಾದ ಶರೀರವುಳ್ಳವನಾಗಿರುವಾಗ ಅವನನ್ನು ಮಾತ್ರ ಉಪಾಸನವನ್ನು ಮಾಡಿ ಮೋಕ್ಷವನ್ನು ಪಡೆಯುವುದು ಹೇಗೆ ಸಾಧ್ಯ" ವೆಂದು ನೀನು ಕೇಳಿದುದಕ್ಕೆ ಸಮಾಧಾನವನ್ನು ಹೇಳುವೆನು ಕೇಳು ವ್ರತನಿಷ್ಠರಾದ ಮಹಾ

---

* ಇಲ್ಲಿ ಇದೂ ಒಂದು ಅರ್ಥಾಂತರವುಂಟು.

ತ್ಮರಿಂದ ಉಪಾಸ್ಯನಾದ ಭಗವಂತನು, ಮೊದಲು ಬ್ರಹ್ಮದೇವನಿಗೆ ಅಪ್ರಾಕೃತವಾದ ತನ್ನ ದಿವ್ಯಮಂಗಳವಿಗ್ರಹವನ್ನು ತೋರಿಸಿದನು. ಜೀವನಿಗಿಂತಲೂ ವಿಲಕ್ಷಣವಾದ ತನ್ನ ನಿಜಸ್ಥಿತಿಯನ್ನು ಬ್ರಹ್ಮನಿಗೆ ತಿಳಿಸಬೇಕೆಂದು ಆಗ ಭಗವಂತನು ತಾನಾಗಿಯೇ ಉಪದೇಶಿಸಿದ ವಿಷಯಗಳನ್ನೂ ಹೇಳುವೆನು ಕೇಳು. ಸರ್ವಭೂತಪ್ರಭುವಾಗಿಯೂ, ಧರ್ಮೋಪದೇಶಕನಾಗಿಯೂ, ಆದಿದೇವನಾಗಿಯೂ ಇರುವ ಚತುರ್ಮುಖನು, ಭಗವಂತನ ನಾಭಿಕಮಲದಿಂದ ಹುಟ್ಟಿದಮೇಲೆ, ಆಗ ತಾನಿದ್ದಸ್ಥಳವನ್ನು ಪರೀಕ್ಷಿಸಿ ನೋಡುವುದಕ್ಕಾಗಿ, ಮೊದಲು ಜಲದಲ್ಲಿ ಮುಳುಗಿ, ಏನನ್ನೂ ಕಾಣದೆ, ತಿರುಗಿ ತಾನಿದ್ದಸ್ಥಳಕ್ಕೆ ಬಂದು, ಅಲ್ಲಿ ಜಗತ್ಸೃಷ್ಟಿಯನ್ನಾರಂಭಿಸುವುದು ಹೇಗೆಂದು ಯೋಚಿಸುತ್ತಿದ್ದನು. ಹೀಗೆ ಆಲೋಚಿಸುತ್ತಿದ್ದ ಬ್ರಹ್ಮದೇವನಿಗೆ ಎಷ್ಟೆಷ್ಟೋ ವಿಧದಿಂದ ಚಿಂತಿಸಿದರೂ, ಸೃಷ್ಟಿವಿಷಯಕವಾದ ತಿಳುವಳಿಕೆಯು ಹುಟ್ಟದೆ ಹೋಯಿತು. ಇದರಿಂದ ಬ್ರಹ್ಮನು ಚಿಂತಾಕುಲನಾಗಿದ್ದಸಮಯದಲ್ಲಿ, ಒಮ್ಮೆ ಆ ಪ್ರಳಯಸಮುದ್ರಜಲಮಧ್ಯದಿಂದ ಎರಡಕ್ಷರಗಳುಳ್ಳ ಯಾವುದೋ ಒಂದು ವಾಕ್ಯವು ಎರಡಾವರ್ತಿ ಉಚ್ಚರಿಸಲ್ಪಟ್ಟಹಾಗೆ ಕೇಳಿಸಿತು. ರಾಜಾ! ಆ ಅಕ್ಷರದ್ವಯವೇ ಸಮಸ್ತ ಯೋಗೀಶ್ವರರಿಗೂ ಧನರೂಪವು! ಆ ಶಬ್ದದಲ್ಲಿ ಕಕಾರದಿಂದ ಮಕಾರದವರೆಗಿರುವ ಇಪ್ಪತ್ತೈದು ವರ್ಗಾಕ್ಷರಗಳಲ್ಲಿ ಹಮಿನಾರನೆಯ ಅಕ್ಷರವಾದ ತಕಾರವೂ, ಇಪ್ಪತ್ತೊಂದನೆಯ ವರ್ಣವಾದ ಪಕಾರವೂ ಕಲೆತು ''ತಪ" ವೆಂಬ ಪದವು ಸಿದ್ಧಿಸಿತು. ಹೀಗೆ ''ತಪ!ತಪ!" ವೆಂದು ಎರಡಾವರ್ತಿ ಉಚ್ಚರಿಸಲ್ಪಟ್ಟ ವಾಕ್ಯವನ್ನು ಕೇಳಿ ಚತುರ್ಮುಖನು, ಆ ವಾಕ್ಯವು ಎಲ್ಲಿಂದ ಹೊರಟಿತೆಂಬುದನ್ನು ಪರೀಕ್ಷಿಸುವುದಕ್ಕಾಗಿ ನಾಲ್ಕು ದಿಕ್ಕುಗಳನ್ನೂ ತಿರುಗಿ ತಿರುಗಿ ನೋಡಿದನು. ಆದರೆ ಅಲ್ಲಿ ಸುತ್ತಲೂ ಮಹಾಭಯಂಕರವಾದ ಸಮುದ್ರವೊಂದಲ್ಲದೆ ಬೇರೊಂದೂ ಕಾಣಿಸಲಿಲ್ಲ. ಇದರಿಂದ ಬ್ರಹ್ಮನು ಮುಂದೆ ಮಾಡಬೇಕಾದ ಕಾರ್ಯವೇನೂ ತೋರದೆ, ತಿರುಗಿ ತನಗೆ ಜನ್ಮಸ್ಥಾನವಾದ ಆ ಕಮಲದಲ್ಲಿಯೇ ಸೇರಿ, ಸ್ವಲ್ಪಕಾಲದವರೆಗೆ ತನ್ನಲ್ಲಿ ತಾನೇ ಆಲೋಚಿಸುತಿದ್ದು, ತಪಸ್ಸನ್ನು ಮಾಡಬೇಕೆಂದು ನಿಶ್ಚಯಿಸಿಕೊಂಡನು. ಹೀಗೆ ನಿಶ್ಚಯಿಸಿಕೊಂಡು ನಿಶ್ಚಲಚಿತ್ತನಾಗಿ, ಜಾಹ್ನಾ

ನೇಂದ್ರಿಯ ಕರ್ಮೇಂದ್ರಿಯಗಳನ್ನು ನಿಗ್ರಹಿಸಿ,ಶ್ವಾಸವನ್ನು ತಡೆದು, ಅಮೋಘಸಂಕಲ್ಪನಾಗಿ, ಸಮಸ್ತಲೋಕಗಳನ್ನೂ ತನಗೆ ಪ್ರಕಾಶಗೊಳಿಸುವಂತೆ ಮಾಡುವ ಶಕ್ತಿಯುಳ್ಳ ಆ ತಪಸ್ಸನ್ನು ಒಂದು ಸಹಸ್ರದೇವವರುಷಗಳವರೆಗೆ ನಡೆಸಿದನು.ಇದರಿಂದ ಪ್ರಸನ್ನನಾದ ನಾರಾಯಣನು,ಬ್ರಹ್ಮದೇವನಿಗೆ ಪ್ರತ್ಯಕ್ಷನಾಗಿ, ಅವನಿಗೆ ಮನುಷ್ಯಲೋಕವನ್ನೂ ತನಗೆ ನಿವಾಸಭೂತವಾದ ವೈಕಂಠ ಲೋಕವನ್ನೂ ತೋರಿಸಿದನು ! ರಾಜೇಂದ್ರಾ! ಆ ವೈಕುಂಠದ ಮಹಾವೈಭವವನ್ನು ಕೇಳಬೇಕೆ! ಅದಕ್ಕಿಂತಲೂ ಉತ್ತಮಸ್ಥಾನವು ಬೇರೊಂಬಿಲ್ಲ ! ಅಲ್ಲಿ,ಅವಿದ್ಯೆ,ಕರ್ಮವಾಸನೆ, ಪ್ರಕೃತಿಸಂಬಂಧ, ಮುಂತಾದ ದೋಷಗಳಾಗಲಿ, ಅಹಂಕಾರ ಮಮಕಾರಗಳಿಂದುಂಟಾಗುವ ಬುದ್ಧಿವ್ಯೋಹವಾಗಲಿ, ಎಷ್ಟು ಮಾತ್ರವೂ ಸಂಭವಿಸಲಾರದು. ತಮ್ಮನ್ನು ಶರೀರವಾಗಿ ಹೊಂದಿರುವ ಪರಮಾತ್ಮನನ್ನು ಅನುಭವಿಸುವ ನಿತ್ಯಮುಕ್ತರಿಗೆ ಅದೇ ವಾಸಸ್ಥಾನವಾಗಿರುವುದು. ಅಲ್ಲಿ ಆಧ್ಯಾತ್ಮಿಕಾಧಿತಾಪತ್ರಯಗಳಾಗಲಿ, ಅಜ್ಞಾನವಾಗಲಿ, ಭಯವಾಗಲಿ, ರಜಸ್ತಮೋಗುಣಗಳಾಗಲಿ, ಇವುಗಳಿಂದ ಮಿಶ್ರವಾದ ಸತ್ವಗುಣವಾಗಲಿ ಎಷ್ಟುಮಾತ್ರವೂ ತಲೆದೋರದೆ, ಕೇವಲ ಸತ್ವಗುಣವೊಂದೇ ಇರುವುದರಿಂದ, ಆ ಸ್ಥಾನವು ಶುದ್ಧಸತ್ವಮಯವೆನಿಸುವುದು. ಅಲ್ಲಿರುವ ನಿತ್ಯಮುಕ್ತರನ್ನು ದೇವಾಸುರರೂಕೂಡ ಪೂಜಿಸುವರು. ಅಲ್ಲಿನವರೆಲ್ಲರೂ ಶ್ಯಾಮಲವರ್ಣವುಳ್ಳವರಾಗಿ, ಜಗತ್ತನ್ನು ಮೋಹಗೊಳಿಸುವಂತೆ ಪ್ರಕಾಶಿಸುವರು. ಅವರೆಲ್ಲರೂ ತಾವರೆಯೆಸಳಿನಂತೆ ವಿಶಾಲವಾದ ಕಣ್ಣುಳ್ಳವರು. ಪೀತಾಂಬರದಿಂದ ಶೋಭಿಸುವ, ಮತ್ತು ಮನೋಹರವಾದ ಕಾಂತಿಯೊಡಗೂಡಿದ ಸುಕುಮಾರದೇಹವುಳ್ಳವರು. ಅವರೆಲ್ಲರೂ ಭಗವಂತನೊಡನೆ ಸಮಾನರೂಪವನ್ನು ಹೊಂದಿ, ನಾಲ್ಕು ಭುಜಗಳಿಂದಲೇ ಶೋಭಿಸುವರು. ಅತ್ಯುತ್ತಮಗಳಾದ ರತ್ನಾಭರಣಗಳಿಂದ ಭೂಷಿತರಾಗಿರುವರು. ಅವರ ದೇಹವು ಅತ್ಯುತ್ತಮವಾದ ಲಾವಣ್ಯದಿಂದ ಕೂಡಿ, ಹವಳದಂತೆಯೂ, ವೈಡೂರ್ಯದಂತೆಯೂ, ತಾವರೆಯ ದಂಟಿನಂತೆಯೂ, ಹೊಳೆಯುವ ಬಣ್ಣದಿಂದ ಪ್ರಕಾಶಿಸುವುದು.ಅಲ್ಲಿನವರೊಬ್ಬೊಬ್ಬರೂ ಜಾಜ್ವಲ್ಯಮಾನಗಳಾದ ಕಿರೀಟಗಳಿಂದಲೂ, ಮಕರಕುಂಡಲಗಳಿಂದಲೂ, ವನಮಾಲಿಕೆಗಳಿಂದಲೂ ಶೋ

ಭಿಸುತ್ತಿರುವರು. ಇಂತಹ ಮಹಾತ್ಮರ ದಿವ್ಯವಿಮಾನಗಳೇ ಆಲೋಕದಲ್ಲಿ ದಟ್ಟವಾಗಿ ತುಂಬಿರುವುವು. ಮತ್ತು! ಅನೇಕ ದಿವ್ಯಕಾಂತೆಯರು ತಮ್ಮತಮ್ಮ ದಿವ್ಯವಿಮಾನಗಳನ್ನೇರಿ ಅಲ್ಲಲ್ಲಿ ಸಂಚರಿಸುತ್ತಿರುವುದನ್ನು ನೋಡಿದರೆ ಆ ಸ್ಥಳವು ಮಿಂಚಿನಿಂದ ಹೊಳೆಯುವ ಮೇಘಪರಂಪರೆಗಳಿಂದ ಶೋಭಿತವಾದ ವಿಶಾಲವಾದ ಆಕಾಶದಂತೆ ತೋರುತ್ತಿರುವುದು.ಆಲೋಕದಲ್ಲಿಶ್ರೀಮಹಾಲಕ್ಷ್ಮಿಯು ಭೂನೀಳಾದೇವಿಯರೊಡನೆ ಸೇರಿ, ತನ್ನ ಪತಿಯಾದ ಶ್ರೀಮನ್ನಾರಾಯಣನ ಪಾದಪದ್ಮಗಳನ್ನು ಪೂಜಿಸುತ್ತ, ದಿವ್ಯವಿಗ್ರಹದಿಂದ ಪ್ರಕಾಶಿಸುತ್ತಿರುವಳು. ಮತ್ತು ಆಗಾಗ ಆ ಮಹಾಲಕ್ಷ್ಮಿಯು ಕೆಲವು ಕಾಲಗಳಲ್ಲಿ ಉಯ್ಯಾಲೆಯಲ್ಲಿ ಕುಳಿತು ತೂಗಾಡುತ್ತ, ವಸಂತಕಾಲದಲ್ಲಿ ಉಲ್ಲಾಸದಿಂದ ಕೂಗುತ್ತಿರುವ ಗಿಳಿ,ಕೋಗಿಲೆ ಮುಂತಾದಪಕ್ಷಿಗಳಗಾನಧ್ವನಿಯೊಡನೆ ಸೇರಿದಂತೆ ತಾನೂ ತನ್ನ ಮನೋಹರಧ್ವನಿಯಿಂದ ಆ ಭಗವಂತನ ಚರಿತ್ರಗಳನ್ನು ಹಾಡುತ್ತಿರುವಳು. ಎಲೈ ಪರೀಕ್ಷಿದ್ರಾಜನೆ! ಹೀಗೆ ನಿಜಸ್ವರೂಪದಿಂದೊಪ್ಪುತ್ತಿರುವ ಲಕ್ಷ್ಮೀನಾರಾಯಣರಿಗೆ ನಿವಾಸಸ್ಥಾನವಾದ ಆ ವೈಕುಂಠಕ್ಕಿಂತಲೂ ಉತ್ತಮವಾದ ಬೇರೆ ಸ್ಥಳವುಂಟೆ? ಆವೈಕುಂಠವಾಸಿಗಳ ಭಾಗ್ಯಕ್ಕಿಂತಲೂ ಮೇಲಾದ ಭಾಗ್ಯವುಂಟೆ?ಬ್ರಹ್ಮನಿಗೆ ಇಂತಹ ಲೋಕವುಗೋಚರಿಸಿದೊಡನೆ ಅತನು ಪರಮಾನಂದಭರಿತನಾಗಿ,ಅಲ್ಲಿ ಶ್ರೀಮನ್ನಾರಾಯಣಮೂರ್ತಿಯ,ದರ್ಶನಾನಂದವನ್ನೇ ಅನುಭವಿಸುತಿದ್ದನು.ತಪಸ್ಸುಮೊದಲಾದ ಸತ್ಕರ್ಮಗಳಿಗೆ ತಾನೇ ಕರ್ತನಾಗಿಯೂ, ಅವುಗಳಿಗೆ ತಾನೇ ಆರಾಧ್ಯನಾಗಿಯೂ, ಅವುಗಳಿಗೆ ತಕ್ಕಫಲವನ್ನು ತಾನೇ ಕೊಡತಕ್ಕವನಾಗಿಯೂ, ಸಕಲಜಗನ್ನಾಯಕನಾಗಿಯೂ, ಪಾಂಚರಾತ್ರಧರ್ಮದಲ್ಲಿ ನೆಲೆಗೊಂಡ ಭಕ್ತರಿಗೆ ತನ್ನ ಲೋಕವನ್ನು ಕೊಟ್ಟು ರಕ್ಷಿಸತಕ್ಕವನಾಗಿಯೂ,ಲಕ್ಷ್ಮೀವಲ್ಲಭನಾಗಿಯೂ ಇರುವ ಆಪರಮಪುರುಷನನ್ನು ಬ್ರಹ್ಮದೇವನು ಅತ್ಯಾನಂದದಿಂದ ಎವೆಮುಚ್ಚದೆ ನೋಡುತ್ತಿದ್ದನು. ಆ ಪರಮಪುರುಷನ ಸುತ್ತಲೂ ಸುನಂದ, ನಂದರೇ ಮೊದಲಾದ ಅನುಚರರು ಅವನನ್ನು ಪರಿಚರಿಸುತಿದ್ದರು. ರಾಜೇಂದ್ರಾ! ಆ ಪರಮಪುರುಷನ ಎಣೆಯಿಲ್ಲದ ಮಹಾಮಹಿಮೆಯನ್ನು ಕೇಳಬೇಕೆ? ಆ ಶ್ರೀಮನ್ನಾರಾಮಣನು ಯಾವಾಗಲೂ ತನ್ನ ಭೃತ್ಯರನ್ನ

ನುಗ್ರಹಿಸುವುದಕ್ಕಾಗಿಯೇ ಇದಿರುನೋಡುತ್ತಿರುವನು ! ತನ್ನ ಕಟಾಕ್ಷಗಳಿಂ ದಲೇ ಸುಧಾರಸವನ್ನು ಸುರಿಸುತ್ತಿರುವನು! ಯಾವಾಗ ನೋಡಿದರೂ ಅವನ ಮುಖದಲ್ಲಿ ನಿರ್ಮಲವಾದ ಮಂದಹಾಸವೇ ಮಿನುಗುತ್ತಿರುವದು! ರಕ್ತಾಂತ ಲೋಚನಗಳಿಂದ ಶೋಭಿಸುತ್ತಿರುವನು! ಆತನ ತಲೆಯಲ್ಲಿ ಜಾಜ್ವಲ್ಯಮಾನ ವಾದ ಕೀರೀಟವು ಬೆಳಗುತ್ತಿರುವುದು! ಕಿವಿಯಲ್ಲಿರುವ ಕುಂಡಲಗಳು ತಮ್ಮ ಕಾಂತಿಸಮೂಹದಿಂದ ಅವನ ಗಂಡಸ್ಥಲವನ್ನು ಮತ್ತಷ್ಟು ಬೆಳಗುತ್ತಿ ರುವುವು ! ಆ ಮಹಾಪುರುಷನ ಶರೀರವು ಪೀತಾಂಬರದಿಂದಲೂ,ಚತುರ್ಭುಜ ಗಳಿಂದಲೂ ಶೋಭಿಸುತ್ತಿರುವುದು ! ಆತನ ವಕ್ಷಸ್ಥಲವು ಶ್ರೀಮಹಾಲಕ್ಷ್ಮಿ ಯಿಂದಲಂಕೃತವಾಗಿರುವುದು ! ಮತ್ತು ಆ ಪರಮಪುರುಷನು ಸರ್ವಲೋಕ ಪೂಜ್ಯವಾದ ತನ್ನ ಆಸನದಮೇಲೆ ಕುಳಿತು, ಇಪ್ಪತ್ತೈದು ತತ್ವಗಳಿಗೆ ಅಧಿ ಷ್ಠಾನದೇವತೆಗಳಾದ ಶಕ್ತಿಗಳಿಂದ ಪರಿವೃತನಾಗಿ, ಜ್ಞಾನ, ಶಕ್ತಿ,ಮೊದಲಾ ದ ಮಿತಿಯಿಲ್ಲದ ಕಲ್ಯಾಣಗುಣಗಳಿಂದಲೂ ಪರಿಪೂರ್ಣನಾಗಿ, ತನ್ನ ದಿವ್ಯಮ ಹಿಮೆಯಲ್ಲಿ ತಾನು ವಿಹರಿಸುತ್ತಿರುವನು.ಬ್ರಹ್ಮದೇವನುಈ ದಿವ್ಯರೂಪವನ್ನು ನೋಡಿನೋಡಿ ಅಪಾರವಾದ ಆನಂದಸಾಗರದಲ್ಲಿ ಮುಳುಗಿ ತೇಲುತ್ತಿದ್ದನು. ಆತನ ಕಣ್ಣುಗಳಲ್ಲಿ ಆನಂದಬಾಷ್ಪವು ಧಾರೆಧಾರೆಯಾಗಿ ಸುರಿಯತೊಡಗಿತು. ಅವನ ಸರ್ವಾವಯವಗಳಲ್ಲಿಯೂ ರೋಮಾಂಚವು ಹುಟ್ಟಿತು. ಹೀಗೆಮಹಾ ನಂದಭರಿತನಾದಚತುರ್ಮುಖಬ್ರಹ್ಮನು,ಕೇವಲಭಕ್ತಿಮಾರ್ಗನಿಷ್ಠರಾದ ಪರ ಮಹಂಸರಿಗೆಮಾತ್ರಪಡೆಯ ಬಹುದಾದ ಆ ಭಗವಂತನ ಪಾದಾರವಿಂದಗಳ ನ್ನು ಹಿಡಿದು ನಮಸ್ಕರಿಸಿದನು. ಆಗ ಭಗವಂತನು ತನ್ನ ಅಜ್ಞಾಧೀನನಾಗಿ ಯೂ, ಸೃಷ್ಟಿಕಾರ್ಯದಲ್ಲಿ ಉದ್ಯುಕ್ತನಾಗಿಯೂ, ತನಗೆ ಪರಮಭಕ್ತನಾಗಿ ಯೂ ಇರುವ ಆಬ್ರಹ್ಮನನ್ನು ಕೈಹಿಡಿದು ಮೇಲಕ್ಕೆತ್ತಿ,ಮಂದಹಾಸಪೂರ್ವ ಕವಾದ ಪ್ರಿಯವಾಕ್ಯದಿಂದ ಹೀಗೆಂದು ಹೇಳುವನು. ‘‘ಓ!ಚತುರ್ಮುಖಾ! ನೀ ನು ನನ್ನಿಂದುಪದೇಶಿಸಲ್ಪಟ್ಟ ವೇದಗಳೆಲ್ಲವನ್ನೂ ಹೃದಯದಲ್ಲಿ ಧರಿಸಿರುವೆ. ಈಗ ನೀನು ಜಗತ್ತನ್ನು ಸೃಷ್ಟಿಸಬೇಕೆಂದು ಉದ್ಯುಕ್ತನಾಗಿ, ಬಹುಕಾಲ ದಿಂದ ಇದುವರೆಗೆ ನನ್ನನ್ನುಕುರಿತು ತಪಸ್ಸುಮಾಡಿದುದಕ್ಕಾಗಿ, ನಾನು ಬಹಳ ಸಂತೋಷಿಸಿದೆನು. ಮುಖ್ಯವಾಗಿ ನೀನು ನಿಷ್ಕಲ್ಮಷವಾದ ಭಕ್ತಿ

ಯಿಂದ ನನ್ನನ್ನಾರಾಧಿಸಿದುದಕ್ಕಾಗಿ ನಿನ್ನಲ್ಲಿ ನಾನು ಪೂರ್ಣಾನುಗ್ರಹವನ್ನು ತೋರಿಸುವೆನು. ಹೀಗಿಲ್ಲದೆ ಕೇವಲ ಡಂಭಕ್ಕಾಗಿ ಕಪಟವೇಷವನ್ನು ಹಿಡಿದ ಕುತ್ಸಿತಯೋಗಿಗಳು ನನ್ನನ್ನು ಕುರಿತು ಎಷ್ಟುದಿನಗಳವರೆಗೆ ತಪಸ್ಸು ಮಾಡಿದರೂ ನಾನು ಸಂತೋಷಿಸುವನಲ್ಲ. ವತ್ಸ ಚತುರ್ಮುಖಾ ! ನಾನು ನಿನ್ನನ್ನು ಅನುಗ್ರಹಿಸಿರುವೆನು! ನಿನಗೆ ಇಷ್ಟವಾದ ವರವನ್ನು ಕೇಳು!ತಪ್ಪದೆ ಕೊಡುವೆನು! ನಿನಗೆ ಕ್ಷೇಮವುಂಟಾಗಲಿ! ಬ್ರಹ್ಮಾ! ಲೋಕದಲ್ಲಿ ಪ್ರಾಣಿಗಳು,ತಮತಮಗೆ ಬೇಕಾದ ಕೋರಿಕೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ, ನಡೆಸತಕ್ಕ ಪ್ರಯಾಸಗಳೆಲ್ಲವೂ ನನ್ನ ದರ್ಶನವನ್ನು ಪಡೆಯುವವರೆಗೆ. ಮಾತ್ರವೇ ಅಲ್ಲದೆ ಇದಕ್ಕಿಂತಲೂ ಮೇಲಿನ ಅಭೀಷ್ಟಗಳೊಂದೂ ಇರುವುದಿಲ್ಲ ! ಆ ವಿಧವಾದ ಕೋರಿಕೆಯೇ ಈಗ ನಿನಗೆ ಲಭಿಸಿದಮೇಲೆ, ಇನ್ನು ನಿನಗೆ ಬೇಕಾದುದೇನು? ಇದರಿಂದ :ನಿನಗೆ ಸಮಸ್ತಕಲ್ಯಾಣಗಳೂ ಸಿದ್ಧಿಸುವುವು! ಓ ಕುಮಾರಾ!ನಿನಗೆ ಈಗ ಈ ನನ್ನ ಲೋಕವನ್ನು ಕಣ್ಣಾರೆ ಕಾಣತಕ್ಕ ಭಾಗ್ಯವು ಲಭಿಸಿದುದು,ನಿನ್ನ ತಪಃಪ್ರಭಾವದಿಂದಲೇ ಎಂದು ತಿಳಿಯಬೇಡ! ನಿನಗೆ ಈ ಭಾಗ್ಯವು ಲಭಿಸಿದುದೂ ನನ್ನ ಸಂಕಲ್ಪಪ್ರಭಾವದಿಂದಲ್ಲದೆ ಬೇರೆಯಲ್ಲ ! ಇದನ್ನು ನೀನು ನಿಸ್ಸಂಶಯವಾಗಿ ನಂಬು! ವತ್ಸಾ! ಇದಕ್ಕೆ ಬೇರೆ ನಿದರ್ಶನವೇಕೆ? ನಾನು ಮೊದಲು ನಿನ್ನ ಕಣ್ಣಿಗೆ ಕಾಣಿಸದಂತೆ, ಏಕಾಂತಸ್ಥಳದಲ್ಲಿದ್ದು. ‘‘ತಪ ’’ ‘‘ತಪ ’’ಎಂದು ನುಡಿದ ವಾಕ್ಯವನ್ನು ಕೇಳಿದಮೇಲಲ್ಲವೇ ನಿನಗೆ ಈಬುದ್ಧಿಯು ಹುಟ್ಟಿತು ? ಆದುದರಿಂದ ನಿನಗೆ ಯಾವವಿಧದಲ್ಲಿಯೂ ಸ್ವಾತಂತ್ರ್ಯವಿಲ್ಲ.ಇದಲ್ಲದೆ ನೀನು ಕೇವಲಕರ್ಮಪ್ರವಣನಾಗಿ,ಅದಕ್ಕೆ ಸಾಧನಗಳನ್ನು ಕಾಣದೆ ಚಿಂತಿಸುತಿದ್ದಾಗಲೂ ನನ್ನ ಪ್ರೇರಣೆಯಿಂದಲ್ಲವೇ ನಿನಗೆ ಈ ತಪಸ್ಸಿನಲ್ಲಿ ಬುದ್ಧಿಯು ಹುಟ್ಟಿತು? ಆದುದರಿಂದ ನನ್ನ ಪ್ರೇರಣೆಯಿಲ್ಲದೆ ಯಾರೂ ಯಾವ ಕಾರ್ಯವನ್ನೂ ನಡೆಸಲಾರರು. ಮತ್ತು ನನ್ನ ಆಜ್ಞೆಯನ್ನನುಸರಿಸಿ ನೀನು ನಡೆಸಿದ ತಪಸ್ಸಿಗಾಗಿ ನಾನು ಪ್ರಸನ್ನನಾದೆನೇಹೊರತು ನಿನ್ನ ನಿಯಮನುಗಳಿಗೆ ಮೆಚ್ಚಿ ನಿನಗೆ ಗೋಚರಿಸಿದವನಲ್ಲ. ಆದುದರಿಂದ ಕಾರ್ಯಸಾಧನೆಗಳಿಗೆ ತಪಸ್ಸಿಗಿಂತಲೂ ಉತ್ತಮ ಸಾಧನವು ಬೇರೊಂದಿಲ್ಲ! ಎಲೈ ವತ್ಸನೆ ! ಮುಖ್ಯವಾಗಿ ತಪಸ್ಸೆಂಬುದೇ

ನನ್ನ ಹೃದಯವೆಂದು ತಿಳಿ! ನಾನೇ ತಪಸ್ಸ್ವರೂಪನು! ತಪಸ್ಸಿನಿಂದಲೇ ನಾನೂ ನನ್ನನ್ನು ಈ ಪ್ರಪಂಚರೂಪವಾಗಿ ಮಾರ್ಪಡಿಸಿಕೊಳ್ಳುವೆನು! ತಪಸ್ಸಿನಿಂದಲೇ ಇವೆಲ್ಲವನ್ನೂ ಸಂಹರಿಸುವೆನು! ಈ ಪ್ರಪಂಚವನ್ನು ರಕ್ಷಿಸುತ್ತಿರುವುದೂ ತಪಸ್ಸಿನಿಂದಲೇ ಹೊರತು ಬೇರೆಯಲ್ಲ! ನನ್ನಲ್ಲಿರುವ ಅಮಿತ ವೀರ್ಯವೆಲ್ಲವೂ ತಪೋಮಯವೆಂದೇ ತಿಳಿ! ತಪಃಪ್ರಭಾವವೆಂಬುದು ಹೀಗಿರುವುದರಿಂದ ಇದನ್ನು ಹಿಡಿದೇ ನೀನು ಸೃಷ್ಟಿಕಾರ್ಯವನ್ನು ನೆರವೇರಿಸಬಹುದು." ಎಂದನು. ಹೀಗೆ ಭಗವಂತನಿಂದ ಅನುಗ್ರಹಿಸಲ್ಪಟ್ಟ ಬ್ರಹ್ಮದೇವನು, ತಾನು ತಿಳಿಯಬೇಕೆಂದುದ್ದೇಶಿಸಿದ ಎರಡು ವಿಷಯಗಳನ್ನು ಕುರಿತು ಶ್ರೀಮನ್ನಾರಾಯಣನಲ್ಲಿ ಹೀಗೆಂದು ವಿಜ್ಞಾಪಿಸುವನು. "ಎಲೈ ಭಗವಂತನೆ! ನೀನು ಸಮಸ್ತಪ್ರಾಣಿಗಳ ಹೃದಯದಲ್ಲಿಯೂ ಅಂತರ್ಯಾಮಿಯಾಗಿರತಕ್ಕವನು. ಇದರಿಂದ ಆಯಾಪ್ರಾಣಿಗಳ ಇಂದ್ರಿಯ ವ್ಯಾಪಾರಗಳೆಲ್ಲವನ್ನೂ ನೀನು ಪ್ರತ್ಯಕ್ಷದಲ್ಲಿ ಕಂಡುಕೊಳ್ಳಬಲ್ಲವನು. ಈ ವಿಧವಾದ ದಿವ್ಯಜ್ಞಾನದಿಂದ, ಆಯಾಭೂತಗಳು ಮನಸ್ಸಿನಲ್ಲಿ ಉದ್ದೇಶಿಸಿದ ಕಾರ್ಯಗಳೆಲ್ಲವೂ ನಿನಗೆ ಮೊದಲೇ ಚೆನ್ನಾಗಿ ತಿಳಿದುಹೋಗುವುದರಲ್ಲಿ ಸ್ವಲ್ಪಮಾತ್ರವೂ ಸಂದೇಹವಿಲ್ಲ. ಆದರೂ, ನಾಥಾ! ನನ್ನದೊಂದು ಪ್ರಾರ್ಥನೆಯುಂಟು! ಈ ನನ್ನ ಪ್ರಾರ್ಥನೆಯನ್ನು ಈಡೇರಿಸಿಕೊಡಬೇಕು! ಕರ್ಮಸಂಬಂಧವಾದ ಪ್ರಾಕೃತದೇಹವಿಲ್ಲದ ನಿನ್ನ ದಿವ್ಯಾತ್ಮಸ್ವರೂಪವನ್ನೂ, ನೀನು ಜೀತನಾಜೀತನವಸ್ತುಗಳನ್ನು ಶರೀರರೂಪವಾಗಿ ಹೊಂದಿ, ಅವುಗಳಲ್ಲಿ ಒಳಹೊಕ್ಕು, ಆಯಾವಸ್ತುಗಳ ಸ್ವರೂಪವೇ ನೀನೆಂಬಂತೆ ಕಾಣಿಸಿಕೊಳ್ಳುವ ನಿನ್ನ ಮತ್ತೊಂದು ರೂಪವನ್ನೂ, ಯಥಾಸ್ಥಿತವಾಗಿ ತಿಳಿದುಕೊಳ್ಳುವಂತೆ ನನಗೆ ನೀನು ಶಕ್ತಿಯನ್ನನುಗ್ರಹಿಸಬೇಕು. ನಾನಾಬಗೆಯ ಅದ್ಭುತಶಕ್ತಿಯುಳ್ಳ, ಮತ್ತು ಸತ್ಯಸಂಕಲ್ಪನಾದ ನೀನು ಇಪ್ಪತ್ತೈದು ತತ್ತ್ವಗಳೆಂಬ ಶಕ್ತಿಗಳನ್ನು ಹಿಡಿದು,ನೀನೇ ನಿನ್ನನ್ನು ಪ್ರಪಂಚರೂಪವಾಗಿ ಕಾಣಿಸಿಕೊಳ್ಳುವುದೂ, ಕೊನೆಗೆ ನೀನೇ ಅದನ್ನು ನಿನ್ನ ಆಶ್ಚರ್ಯಶಕ್ತಿಯಿಂದ ಉಪಸಂಹಾರಮಾಡಿಕೊಳ್ಳುವುದೂ, ಈ ಉತ್ಪತ್ತಿವಿನಾಶಗಳನಡುವೆ ಅದನ್ನು ರಕ್ಷಿಸುತ್ತಿರುವುದೂ ಇವೆಲ್ಲವೂ ನಿನಗೆ ಲೀಲೆಗಳಾಗಿರುವುವಷ್ಟೆ? ನಾಥಾ!

ಅಮೋಘಸಂಕಲ್ಪನಾದ ನೀನು ಪಟ್ಟೆಯೆ (ರೇಷ್ಮೆಯೆ) ಹುಳುಗಳು ತನ್ನ ದೇಹದಿಂದಲೇ ನೂಲನ್ನು ಬಿಟ್ಟು,ತನ್ನ ಮೈಮೇಲೆ ಗೂಡನ್ನು ಕಟ್ಟಿಕೊಳ್ಳು ವಂತೆ,ನಿನ್ನನ್ನೇ ನೀನು ಒಳಗೆ ಆಧಾರವಾಗಿ ಮಾಡಿಕೊಂಡುಪ್ರಪಂಚಸೃಷ್ಟಿ ಯೆಂಬ ಲೀಲೆಗಳನ್ನು ನಡೆಸುತ್ತಿರುವೆ! ಮತ್ತು ಪೂರ್ವಸೃಷ್ಟಿಯನ್ನು ಸಂ ಹರಿಸಿ ತಿರುಗಿ ನಿನ್ನನ್ನೇ ಉಪಾದಾನಕಾರಣವಾಗಿ ಮಾಡಿಕೊಂಡು, ಅಸ್ಮ ದಾದಿರೂಪವನ್ನು ಹೊಂದಿ,ನಾನಾವಿಧಪ್ರಪಂಚವನ್ನು ಸೃಷ್ಟಿಸುತ್ತಲೂ, ಪೋಷಿಸುತ್ತಲೂ, ಕೊನೆಗೆ ಸಂಹರಿಸುತ್ತಲೂ ವಿಹರಿಸುತ್ತಿರುವೆ! ಮಾಧ ವಾ!¡ಹೀಗೆ¡ನೀನು ನಡೆಸುವ ಸೃಷ್ಟ್ಯಾದಿಕಾರ್ಯಗಳನ್ನು ನಾನು ಯಥಾವ ತ್ತಾಗಿ ತಿಳಿಯುವಂತೆ ನನಗೆ ಬುದ್ಧಿಯನ್ನುಕೊಟ್ಟು ಅನುಗ್ರಹಿಸಬೇಕು. ಈ ನನ್ನ ಎರಡು ಪ್ರಾರ್ಥನೆಗಳನ್ನು ನೀನು ಕೃಪೆಯಿಟ್ಟು ನಡೆಸಿಕೊಡಬೇಕು! ನಿನ್ನ ಆಜ್ಞಾಧೀನನಾಗಿದ್ದು, ನಾನು ನೀನು ಹೇಳಿಕೊಟ್ಟ ಕ್ರಮದಲ್ಲಿ ಎಚ್ಚ ರಿಕೆಯಿಂದ ಸೃಷ್ಟಿಕಾರ್ಯವನ್ನು ನಡೆಸುವೆನು. ಆದರೆ ನಿನ್ನ ಅನುಗ್ರಹಬಲ ದಿಂದ ನಾನು ಆ ಸೃಷ್ಟಿಕಾರ್ಯವನ್ನು ನಡೆಸಿದರೂ, ಅದರಿಂದುಂಟಾಗ ಬಹುದಾದ ಅಹಂಕಾರ ಮಮಕಾರಗಳಿಗೆ ನಾನು ಕಟ್ಟುಬಿದ್ದು ಕೆಟ್ಟುಹೋ ಗದಂತೆಯೂ, ನನಗೆ ನೀನು ಸದ್ಬುದ್ಧಿಯನ್ನು ಕೊಟ್ಟುರಕ್ಷಿಸಬೇಕು. ದೇವಾ! ನಾನು ನಿನ್ನ ದಯೆಗೆ ಪಾತ್ರನಾಗಿ ಸೃಷ್ಟಿಸಾಮರ್ಥ್ಯವನ್ನು ಪಡೆದರೂ ನಾನು ನಿನಗೆ ಆ ಸೃಷ್ಟಿವಿಷಯದಲ್ಲಿ ಸೇವಕನಾಗಿ ಕೆಲಸಮಾಡುವವನಲ್ಲದೆ ಬೇರೆಯಲ್ಲ. ಸ್ವಾಮೀ! ಲೋಕದಲ್ಲಿ ಮಿತ್ರನಾದವನೊಬ್ಬನು, ತನ್ನ ಮಿತ್ರನನ್ನು ಪ್ರೀತಿಯಿಂದಲೂ,ಸಲಿಗೆಯಿಂದಲೂ ಗೌರವಿಸಿ ಮನ್ನಿಸುವಂತೆ ಸರ್ವೇಶ್ವರನಾನ ನೀನು ದಾಸಭೂತನಾದ ನನ್ನನ್ನು ಈ ವಿಧವಾಗಿ ಗೌರವಿಸಿ ನನಗೆ ಸೃಷ್ಟಿಸಾಮರ್ಥ್ಯವನ್ನು ಅನುಗ್ರಹಿಸಿಬಿಟ್ಟಮಾತ್ರಕ್ಕೆ ಸಾಲದು! ಈ ನಿನ್ನ ಆಜ್ಞಾಪ್ರಭಾವದಿಂದಲೇ ನನಗೆ ಸೃಷ್ಟಿಸಾಮರ್ಥ್ಯವೂ, ಆ ಕಾರ್ಯವ ನ್ನು ನಡೆಸುವ ವಿಷಯದಲ್ಲಿ ಧೈರ್ಯವೂ ಉಂಟಾದಮೇಲೆ, ನಿನ್ನ ಸೇವಾರೂಪ ವಾಗಿ ನಾನು ಆ ಕಾರ್ಯದಲ್ಲಿ ಕೈಯಿಟ್ಟು,!ಉತ್ತಮ ಮಧ್ಯಮಾಧಮಭೇದ ಗಳಿಂದ ಲೋಕವನ್ನು ಸೃಷ್ಟಿಸುತ್ತ ಬಂದರೆ, ಆಗ ನನ್ನ ಮನಸ್ಸಿನಲ್ಲಿ ಉತ್ಕಟ ವಾದ ಒಂದು ಗರ್ವವು ಹುಟ್ಟಬಹುದು! ನಾನೇ ಈ ಸಮಸ್ತಜಗತ್ತನ್ನೂ ಸೃ

ಷ್ಟಿಸತಕ್ಕವನೆಂದೂ, ಪ್ರಪಂಚವೆಲ್ಲವೂ ನನ್ನ ಕೈಗೆ ವಶವಾಗಿರುವುದೆಂದೂ, ನನ್ನ ಸಾಮರ್ಥ್ಯಕ್ಕೆಮೇಲೆ ಸಾಮರ್ಥ್ಯವಿಲ್ಲವೆಂದೂ,ನನಗೆ ಸಾವೇ ಇಲ್ಲವೆಂದೂ ನನ್ನ ಮನಸ್ಸಿನಲ್ಲಿ ಮಹತ್ತಾದ ಅಹಂಕಾರ ಮಮಕಾರಗಳು ಹುಟ್ಟುವುದಕ್ಕೆ ಪೂರ್ಣವಾದ ಅವಕಾಶವುಂಟು. ಈ ಗರ್ವವುಮಾತ್ರ ನನ್ನ ಮನಸ್ಸಿನಲ್ಲಿ ತಲೆದೋರದಂತೆ ಅನುಗ್ರಹಿಸಬೇಕು." ಎಂದನು. ಹೀಗೆ ಬ್ರಹ್ಮದೇವನಿಂದ ಪ್ರಾರ್ಥಿತನಾದ ಭಗವಂತನು, ಅವನಲ್ಲಿ ಪ್ರಸನ್ನನಾಗಿ, ತನ್ನ ಪರಾವರಸ್ವರೂಪಗಳೆರಡನ್ನೂ ಆತನಿಗೆ ತಿಳಿಸಲಾರಂಭಿಸಿದನು.''ಓ ಕುಮಾರಾ !ಮುಖ್ಯವಾಗಿ ತಿಳಿಯಬೇಕಾದ ಪರಸ್ವರೂಪದ ಜ್ಞಾನವನ್ನೂ,ಅದಕ್ಕೆ ಅಂಗವಾಗಿ ತಿಳಿದುಕೊಳ್ಳಬೇಕಾದ ಚೇತನಾಚೇತನಸ್ವರೂಪದ ಜ್ಞಾನವನ್ನೂ, ಶಾಸ್ತ್ರಗಳನ್ನೂ, ಅದರಿಂದ ತಿಳಿಯಬಹುದಾದ ಜ್ಞಾನಯೋಗಾದಿಗಳನ್ನೂ, ಅವುಗಳ ರಹಸ್ಯಮಂತ್ರಗಳನ್ನೂ ನಿನಗೆ ಕ್ರಮವಾಗಿ ತಿಳಿಸುವೆನು ಕೇಳು. ಈ ಜ್ಞಾನವನ್ನು ಪಡೆದಮೇಲೆ ನಿಧಿಯಂತೆ ಅದನ್ನು ನೀನು ಗೋಪ್ಯವಾಗಿ ಕಾಪಾಡುತ್ತ ಬರಬೇಕು. ಆತುರದಿಂದ ಬೇರೆಯಾರಿಗೂ ಉಪದೇಶಿಸಬಾರದು. ಆದರೆ ನಿನಗೆ ನಾನು ಹೇಳುವ ತತ್ವಗಳೆಲ್ಲವನ್ನೂ ತಿಳಿದು ಕೊಳ್ಳುವ ಶಕ್ತಿಯು ಇರಲಾರದೆಂಬ ಭಯವನ್ನು ಬಿಟ್ಟುಬಿಡು. ಅದನ್ನು ತಿಳಿದುಕೊಳ್ಳತಕ್ಕ ಶಕ್ತಿಯೂ,ನನ್ನ ಅನುಗ್ರಹದಿಂದಲೇ ನಿನಗೆಪ್ರಾಪ್ತವಾಗುವುದು. ನಾನು ಯಾವಪರಿಮಾಣವುಳ್ಳವನೋ,ನನ್ನ ಸ್ವರೂಪವೂ, ನನ್ನ ಸ್ವಭಾವವೂ,ನನ್ನ ಗುಣಗಳೂ ಎಂತವುಗಳೋ, ನಾನು ನಡೆಸತಕ್ಕ ಸೃಷ್ಟಿಸ್ಥಿತಿಸಂಹಾರರೂಪಗಳಾದ ದಿವ್ಯಲೀಲೆಗಳು ಎಂತವುಗಳೋ,ನಾನು ಯಾವಾಗಯಾವಯಾವ ಕರ್ಮಗಳನ್ನು ನಡೆಸುವೆನೋ, ಅವೆಲ್ಲವೂ ನಿನಗೆ ಸ್ಪಷ್ಟವಾಗಿ ತಿಳಿಯುವುವು. ಚೇತನಾಚೇತನಗಳಿಗಿಂತಲೂ ವಿಲಕ್ಷಣವಾದ ಯಾವುದೊಂದು ಪರವಸ್ತುವುಂಟೋ ಆ ವಸ್ತುವೇ ನಾನೆಂದು ತಿಳಿ!ಮತ್ತು ಆ ಚೇತನಾಚೇತನಗಳಲ್ಲಿ ಅಂತರ್ಗತನಾಗಿರತಕ್ಕವನೂ ನಾನಲ್ಲದೆ ಬೇರೆಯಲ್ಲ! ಸೃಷ್ಟಿಗೆ ಮೊದಲು ನಾಮರೂಪವಿಭಾಗಗಳಲ್ಲದೆ ಸಮಷ್ಟಿರೂಪದಿಂದಿದ್ದ ಪ್ರಕೃತಿಪುರುಷರನ್ನು ಶರೀರವಾಗಿ ಧರಿಸಿದ್ದವನೂ ನಾನೇ ಹೊರತು ಬೇರೆಯಲ್ಲ ! ಸೃಷ್ಟಿಕಾಲದಲ್ಲಿ ನಾಮರೂಪವಿಭಾಗಗಳಿಂದ ತೋರುವ ಪ್ರಕೃತಿಪುರುಷರನ್ನು

ಶರೀರವಾಗಿ ಹೊಂದುವವನೂ ನಾನೇ! ಸಮಸ್ತಜಗತ್ತನ್ನೂ ಉಪಸಂಹಾರ ಮಾಡಿಕೊಂಡು ಕೊನೆಗೆ ನಿಲ್ಲತಕ್ಕವನೂ ನಾನೊಬ್ಬನೇ ! ಹೀಗೆ ಕಾರ್ಯಕಾರಣಾವಸ್ಥೆಗಳೆರಡರಲ್ಲಿಯೂ ಪ್ರಕೃತಿಪುರುಷರನ್ನೇ ನಾನುಶರೀರವಾಗಿ ಹೊಂದಿದ್ದರೂ, ಹಾಗೆ ಶರೀರಭೂತಗಳಾದ ಚೇತನಾಚೇತನಗಳಲ್ಲಿರುವ ಅಜ್ಞಾತ್ವಾದಿ ದೋಷಗಳುಮಾತ್ರ ನನ್ನಲ್ಲಿ ಅಂಟಲಾರವು. ಶರೀರದ ಕಾರ್ಯಗಳಾದ ಬಾಲ್ಯ, ಯೌವನ, ವಾರ್ಧಕ ಮುಂತಾದ ವಿಕಾರಗಳು ಜೀವನಿಗೆ ಹೇಗೆ ಸಂಬಂಧಿಸುವುದಿಲ್ಲವೋ ಹಾಗೆಯೇ, ಜೀವಪ್ರಕೃತಿಗಳೆರಡನ್ನೂ, ಶರೀರರೂಪವಾಗಿ ಹೊಂದಿದ ನನ್ನಲ್ಲಿ, ಜೀವನಿಗುಂಟಾಗುವ ಅಜ್ಞತೆಯಾಗಲಿ,ಶೋಕ ಮೋಹಗಳಾಗಲಿ, ಇನ್ನೂ ಇತರ ವಿಥವಾದ ಯಾವದೋಷಗಳಾಗಲಿ ಅಂಟಲಾರವು. ಹಾಗೆಯೇ ಅಚೇತನಗಳಲ್ಲಿರುವ ಜಡತ್ವವಾಗಲಿ, ಪರಿಣಾಮ ಸ್ವಭಾವವಾಗಲಿ ನನ್ನಲ್ಲಿ ಸಂಬಂಧಿಸಲಾರವು. ನಾನು ಕಾಣಿಸತಕ್ಕ ಈ ಕಾರ್ಯಕಾರಣಸ್ವರೂಪಗಳೆರಡನ್ನೂ ನನಗೆ ಶರೀರಭೂತಗಳಾದ ಚೇತನಾಚೇತನಗಳ ಮೂಲಕವಾಗಿಯೇ ನಡೆಸುವೆನು. ಹೀಗೆ ಚಿದಚಿತ್ತುಗಳಿಗಿಂತಲೂ ವಿಲಕ್ಷಣವಾದ ನನ್ನ ಸ್ವರೂಪವನ್ನು ನಿನಗೆ ತಿಳಿಸಿದೆನಷ್ಟೆ? ಇನ್ನು ಅದಕ್ಕೆ ಅಂಗಭೂತಗಳಾಗಿ ತಿಳಿಯಬೇಕಾದ ಚೇತನಾಚೇತನಗಳ ಸ್ವರೂಪವನ್ನೂ ತಿಳಿಸುವೆನುಕೇಳು. ಜೀವಾತ್ಮನು ಜ್ಞಾನಾನಂದಸ್ವರೂಪನಾಗಿರುವನು. ಲೋಕದಲ್ಲಿ ಎಲ್ಲರೂ ಆಶೆಪಡತಕ್ಕ ಪುರುಷಾರ್ಥಗಳು ಜ್ಞಾನಾನಂದಗಳೆರಡೇ ಹೊರತು ಬೇರೆಯಲ್ಲ. ಹೀಗೆ ಜ್ಞಾನಾನಂದಸ್ವರೂಪನಾದುದರಿಂದ ಉತ್ತಮಪುರುಷಾರ್ಥವೆನಿಸಿಕೊಂಡ ಚೇತನತತ್ತ್ವಕ್ಕಿಂತಲೂ, ಪ್ರಕೃತಿಯೆಂಬುದು ಪ್ರತ್ಯೇಕವಾಗಿ ಬೇರ್ಪಟ್ಟಿರುವುದು. ಪ್ರಕೃತಿಯು ತೋರುವಾಗ ಚೇತನತತ್ವವು ಕಾಣಲಾರದು. ಹಾಗೆಯೇ ಚೇತನತತ್ವವು ತೋರುವಾಗ ಪ್ರಕೃತಿತತ್ವವು ತೋರಲಾರದು. ಅಂಧಕಾರವಿರುವಾಗ ತೇಜಸ್ಸೂ, ತೇಜಸ್ಸಿರುವಾಗ ಅಂಧಕಾರವೂ ಹೇಗೆ ತೋರಲಾರದೋ, ಹಾಗೆಯೇ ಜೀವಪ್ರಕೃತಿಗಳೆಂಬೆರಡರಲ್ಲಿ ಒಂದು ತೋರುವಾಗ ಮತ್ತೊಂದು ತೋರಲಾರದು. ಹೀಗೆ ಮಾಡುವುದು ನನ್ನ ಮಾಯೆಯ ಕಾರ್ಯವೆಂದೇತಿಳಿ.ಈಜೀವಪ್ರಕೃತಿ ತತ್ವಗಳಲ್ಲಿರುವ ಭೇದವನ್ನು ತಿಳಿಸುವೆನು ಕೇಳು. ಚೇತನವಾದ ಆತ್ಮತತ್ವವೆಂಬುದು ಅಣುವಾಗಿಯೂ,

ನಿತ್ಯವಾಗಿಯೂ, ಸ್ವಯಂಪ್ರಕಾಶವುಳ್ಳದಾಗಿಯೂ ಇರುವುದು. ಅಚೇತನವಾದ ಪ್ರಕೃತಿತತ್ವವೆಂಬುದು ಸ್ಥೂಲವಾಗಿಯೂ, ಅನಿತ್ಯವಾಗಿಯೂ, ಜಡವಾಗಿಯೂ ಇರುವುದು. ಹೀಗೆ ಇವೆರಡಲ್ಲಿ ಕೇವಲ ವಿರುದ್ಧಸ್ವಭಾವಗಳಿರುವುದರಿಂದಲೇ ಒಂದನ್ನೊಂದು ಹೊಂದಿಕೊಂಡಿರಲಾರವು. ಹೀಗೆ ಪರಸ್ಪರವಿರುದ್ಧಸ್ವಭಾವವುಳ್ಳ ಚೇತನಾಚೇತನಗಳ ಸ್ವರೂಪವನ್ನು ತಿಳಿದೆಯಷ್ಟೆ. ಇನ್ನು ನಾನು ಆ ಚೇತನಾಚೇತನಗಳಲ್ಲಿ ಒಳಹೊಕ್ಕು ಅವುಗಳನ್ನು ಪೋಷಿಸುತ್ತ, ಅವುಗಳಲ್ಲಿರುವ ದೋಷಗಳನ್ನು ಮಾತ್ರ ಅಂಟಿಸಿಕೊಳ್ಳದೆ ಇರುವ ಕ್ರಮವನ್ನು ತಿಳಿಸುವೆನು ಕೇಳು. ಆಕಾಶ, ವಾಯು, ತೇಜಸ್ಸು, ಎಂಬ ಈ ಮಹಾಭೂತಗಳು ಗಡಿಗೆ ಮೊದಲಾದ ಇತರವಸ್ತುಗಳಲ್ಲಿ ಸೇರಿದ್ದಾಗಲೂ, ಆ ಘಟಾದಿವಸ್ತುಗಳಿಗೆ ಅಕಸ್ಮಾತ್ತಾಗಿ ಸಂಭವಿಸಬಹುದಾದ ಅಪಾಯಗಳಿಗೂ, ಅದರಿಂದುಂಟಾಗುವ ವಿಕಾರಗಳಿಗೂ, ಹೇಗೆ ಈಡಾಗಲಾರವೋ, ಮತ್ತು ಆ ಬಗೆಯ ಆಶ್ರಯವಸ್ತುಗಳಿಗೆ ನಾಶವುಂಟಾದ ಮೇಲೆ ಅದರಸಂಬಂಧವೇ ತಮಗಿಲ್ಲದಂತೆ ಹೇಗೆ ಬೇರ್ಪಟ್ಟು ಹೋಗುವುವೋ, ಹಾಗೆಯೇ ನಾನೂಕೂಡ ಚೇತನಾಚೇತನಗಳಲ್ಲಿ ಅಂತರ್ಯಾಮಿಯಾಗಿದ್ದರೂ, ಅವುಗಳಲ್ಲಿ ನಡೆಯುವ ದೋಷಗಳಿಗಾಗಲಿ, ಬದಲಾವಣೆಗಳಿಗಾಗಲಿ, ಗುರಿಯಾಗಲಾರೆನು. ಮತ್ತು ಆಕಾಶವೇ ಮೊದಲಾದ ಆ ಮಹಾಭೂತಗಳು, ಗಡಿಗೆ ಮೊದಲಾದ ವಸ್ತುಗಳಲ್ಲಿ ಒಳಹೊಕ್ಕು, ಅಲ್ಲಿನಮಾತ್ರವೇ ನಿಲ್ಲದೆ ಹೊರಭಾಗವನ್ನೂ ಹ್ಯಾಗೆ ವ್ಯಾಪಿಸುತ್ತಿರುವುದೋ, ಹಾಗೆಯೇ ನಾನೂ ಚೇತನಾಚೇತನಗಳಲ್ಲಿ ಅಡಗಿರುವುದಲ್ಲದೆ, ಅವುಗಳ ಹೊರಭಾಗವನ್ನೂ ವ್ಯಾಪಿಸಿರುವೆನು. ಮತ್ತು ಆಕಾಶವನ್ನಳೆಯುವುದು ಹೇಗೆ ಸಾಧ್ಯವಲ್ಲವೋ, ಹಾಗೆಯೇ ನನ್ನ ಪರಿಮಾಣವನ್ನು ಇಷ್ಟೆಂದು ನಿರ್ಣಯಿಸುವುದೂ ಸಾಧ್ಯವಲ್ಲ. ಹೀಗೆ ಅಪ್ರಮೇಯವಾದ ನನ್ನ ಸ್ವರೂಪವನ್ನೂ, ಸರ್ವಜ್ಞತ್ವ, ಸರ್ವಶಕ್ತತ್ವ ಮೊದಲಾದ ನನ್ನ ಸ್ವಭಾವವನ್ನೂ, ಚೇತನಾಚೇತನಗಳೆಂಬ ನನ್ನ ಶರೀರವನ್ನೂ, ಅವುಗಳ ದೋಷಕ್ಕೆ ನಾನು ಭಾಗಿಯಾಗದೆ ಇರುವ ರೀತಿಯನ್ನೂ, ಲೋಕದ ಸೃಷ್ಟಿಸ್ಥಿತಿಸಂಹಾರಗಳೆಂಬ ನನ್ನ ಲೀಲೆಗಳನ್ನೂ ನಿನಗೆ ತಿಳಿಸಿರುವೆನು. ಇನ್ನು ಮುಂದೆ ಮತ್ತೊಂದು ವಿಷಯವನ್ನು ಹೇಳುವೆನು ಕೇಳು. ಪರ

ಮಾತ್ಮನ ಸ್ವರೂಪವನ್ನು ತಿಳಿಯಲಪೇಕ್ಷೆಯುಳ್ಳವನು ‘‘ಪರಸ್ಪರವಿಲಕ್ಷಣ ಸ್ವಭಾವವುಳ್ಳ ಚೇತನಾಚೇತನಗಳೆರಡಕ್ಕೂ ಅಂತರಾತ್ಮನಾದ ಆ ಪರಮಾತ್ಮನ, ಸ್ವರೂಪವೊಂದೇ ಕಾರ್ಯಕಾರಣರೂಪದಿಂದ ಬದಲಾಯಿಸುತ್ತಿರುವುದೆಂದೂ, ಅದುಹೊರತು ಬೇರೆಯಾವುದೂ ಇಲ್ಲವೆಂದೂ, ಮೊದಲು ತನ್ನ ಮನಸ್ಸಿಗೆ ನಿರ್ಧಾರವಾಗಿ ತಿಳಿದುಕೊಳ್ಳಬೇಕು. ಇದೇ ಮುಖ್ಯವಾಗಿ ತಿಳಿದುಕೊಳ್ಳಬೇಕಾದ ವಿಷಯವು. ಈ ಜ್ಞಾನವುಂಟಾದಮೇಲೆ ತಿಳಿದುಕೊಳ್ಳಬೇಕಾದ ವಿಷಯವು. ಮತ್ತೊಂದೂ ಇಲ್ಲವು. ನನ್ನನ್ನು ತಿಳಿಯುವುದರಿಂದ ಎಲ್ಲವನ್ನೂ ತಿಳಿದಂತೆಯೇ ಆಗುವುದು.ಇದಲ್ಲದೆ ನನ್ನ ಸ್ವರೂಪವುವಿಕಾರ ಹೊಂದದೆ ಯಾವಾಗಲೂ ಒಂದೇಸ್ಥಿತವಾಗಿರುವುದರಿಂದ, ಜೀವಪ್ರಕೃತಿಗಳೆರಡಕ್ಕಿಂತಲೂ ವಿಲಕ್ಷಣವೆನಿಸಿಕೊಂಡಿರುವುದು. ಜೀವಾತ್ಮನಿಗೂ, ನನಗೂ ಇರುವ ಮತ್ತೊಂದು ಮುಖ್ಯವ್ಯತ್ಯಾಸವನ್ನು ತಿಳಿಸುವೆನು ಕೇಳು. ನಾನು ಸಮಸ್ತ ವಸ್ತುಗಳಲ್ಲಿಯೂ ವರ್ತಿಸತಕ್ಕವನು. ಜೀವಾತ್ಮನಾದರೋ ಅಣುಮಾತ್ರವಾಗಿ ಏಕದೇಶದಲ್ಲಿಮಾತ್ರವೇ ಇರತಕ್ಕವನು. ಇದೇ ನಮ್ಮಿಬ್ಬರಿಗೂ ಇರುವ ಭೇದವು. ಅಚೇತನವಾದ ಪ್ರಕೃತಿಯು ನನ್ನಂತೆಯೇ ಎಲ್ಲಾ ಕಡೆಯಲ್ಲಿ ವರ್ತಿಸತಕ್ಕುದಾದರೂ ಕ್ಷಣಕ್ಷಣಕ್ಕೂ ವಿಕಾರಹೊಂದುತ್ತಿರುವುದು. ಇದಕ್ಕೆ ಒಂದು ನಿದರ್ಶನವನ್ನು ಹೇಳುವೆನು ಕೇಳು. ಗಡಿಗೆಗೆ ಬೇಕಾದ ಮಣ್ಣು ಮೊದಲು ಮುದ್ದೆಯಾಗಿರುವುದು. ಆಮೇಲೆ ಘಟರೂಪವನ್ನು ಹೊಂದುವುದು ! ಕಾಲಕ್ರಮದಿಂದ ಒಡೆದು ಎರಡು ಹೋಳಾಗುವುದು! ಆಮೇಲೆ ಚೂರುಚೂರಾಗಿ ಒಡೆದು ಹೋಗುವುದು ! ಕೊನೆಗೆ ಧೂಳಾಗಿ ಮಣ್ಣಿನಲ್ಲಿ ಸೇರಿಹೋಗುವುದು. ನನ್ನ ಸ್ವರೂಪಕ್ಕೆ ಇಂತಹ ವಿಕಾರವೊಂದೂ ಯಾವಕಾರಣದಿಂದಲೂ ಉಂಟಾಗಲಾರದು. ಆದುದರಿಂದ ಪ್ರಕೃತಿಗಿಂತಲೂ ನಾನು ವಿಲಕ್ಷಣನಾಗಿರುವೆನು. ಕುಮಾರಾ ! ನೀನು ಕೇಳಿದಂತೆ ನನ್ನ ಪರಾವರಸ್ವರೂಪಗಳೆರಡನ್ನೂ ನಿನಗೆ ತಿಳಿಸಿರುವೆನು. ಇನ್ನು ನೀನು ಲೋಕಸೃಷ್ಟಿಯನ್ನು ಮಾಡುವ ಕಾಲದಲ್ಲಿ, ಅದರಿಂದ ನಿನಗೆ ಅಹಂಕಾರ ಮಮಕಾರಗಳೊಂದೂ ಇಲ್ಲದಿರಬೇಕೆಂದು ಕೇಳಿಕೊಂಡೆಯಲ್ಲವೆ?ಅದಕ್ಕೊಂದುಪಾಯವನ್ನು ಹೇಳುವೆನು ಕೇಳು! ಚೇತನಾಚೇತನಗಳೆಲ್ಲವೂ ನನಗೆ ಶರೀರವಾಗಿ,

ನನ್ನ ವಶವಾಗಿರುವುದರಿಂದ,ನನ್ನನ್ನು ಬಿಟ್ಟು ಬೇರೆ ವಸ್ತುವಿಲ್ಲವೆಂದು ಮೊದಲೇ ಹೇಳಿದೆನಷ್ಟೆ? ಈ ರಹಸ್ಯವನ್ನು ಮಾತ್ರ ನೀನು ಯಾವಾಗಲೂ ಮರೆಯದೆ ಮನಸ್ಸಿನಲ್ಲಿ ಶ್ರದ್ಧೆಯಿಂದ ಭಾವಿಸಿಕೊಂಡು ಬರುತಿದ್ದಪಕ್ಷದಲ್ಲಿ ನಿನಗೆ ಸೃಷ್ಟಿಕಾಲದಲ್ಲಿ ಯಾವ ವಸ್ತುವಿನಲ್ಲಿಯೂ ಮೋಹವಾಗಲಿ, ಮಮತೆಯಾಗಲಿ, ಅಹಂಕಾರವಾಗಲಿ, ಉಂಟಾಗಲಾರದು. ಈ ನನ್ನ ಶಾಸನವನ್ನನುಸರಿಸಿ ಸೃಷ್ಟಿಕಾರ್ಯವನ್ನು ನಡೆಸು ! ನಿನಗೆ ಮೋಹಾದಿಗಳೊಂದೂ ಉಂಟಾಗದಂತೆ ವರವನ್ನು ಕೊಟ್ಟಿರುವೆನು. ನನ್ನನ್ನು ಬಿಟ್ಟು ಬೇರೆ ವಸ್ತುವಿಲ್ಲವೆಂಬ ಇದೇ ಅಭಿಪ್ರಾಯವನ್ನು ರುದ್ರನೂಕೂಡ ತನ್ನ ಮನಸ್ಸಿನಲ್ಲಿ ಮರೆಯದೆ ದೃಢವಾಗಿಟ್ಟುಕೊಂಡಿದ್ದಪಕ್ಷದಲ್ಲಿ ಅವನೂ ತಾನು ನಡೆಸಬೇಕಾದ ಸಂಹಾರ ಕಾರ್ಯದಲ್ಲಿ ಅಹಂಕಾರವಿಲ್ಲದಂತಿರುವನು". ಎಂದನು. ಕರ್ಮಸಂಬಂಧಗಳಾದ ಉತ್ಪತ್ತಿ ವಿನಾಶಗಳಿಲ್ಲದವನಾಗಿಯೂ, ಆಶ್ರಿತರ ಪಾಪಗಳನ್ನು ನೀಗಿಸತಕ್ಕವನಾಗಿಯೂ ಇರುವ ಭಗವಂತನು ಸೃಷ್ಟ್ಯರೂಪಗಳಾದ ದೇವಾದಿ ಭೂತಗಳಿಗೆ ಮುಖ್ಯಾಧಿಪತಿಯಾದ ಬ್ರಹ್ಮದೇವನನ್ನು ಕುರಿತು ಈ ವಿಧವಾಗಿ ಉಪದೇಶಿಸಿ, ಆ ಬ್ರಹ್ಮನು ನೋಡುತ್ತಿರುವಹಾಗೆಯೇ ತನ್ನ ನಿವಾಸಸ್ಥಾನವಾದ ವೈಕುಂಠಲೋಕದೊಡನೆ ಕಣ್ಮರೆಯಾಗಿ ಬಿಟ್ಟನು. ಆಗ ಬ್ರಹ್ಮದೇವನು ಅತ್ಯಂತ ಭಕ್ತಿವಿಶಿಷ್ಟನಾಗಿ ಆ ನಾರಾಯಣನ ಮಹಿಮೆಯನ್ನು ಮನಸ್ಸಿನಲ್ಲಿ ಬಾರಿಬಾರಿಗೂ ಕೊಂಡಾಡಿ ಹಿಗ್ಗುತ್ತ,ಸ್ವಲ್ಪಹೊತ್ತಿನವರೆಗೆ ಕೈಜೋಡಿಸಿದಂತೆಯೇ ಸ್ತಬ್ಧನಾಗಿನಿಂತಿದ್ದನು. ಮುಂದೆ ತಾನು ಸೃಷ್ಟಿಸಬೇಕಾದ ದೇವಮನುಷ್ಯಾದಿ ಸಮಸ್ತಪ್ರಾಣಿಗಳನ್ನೂ, ಮನಸ್ಸಿನಲ್ಲಿ ಭಾವಿಸಿಕೊಂಡಿದ್ದುದರಿಂದ ಸಮಸ್ತಭೂತಸ್ವರೂಪನಾದ ಆ ಬ್ರಹ್ಮದೇವನು ಪೂರ್ವಕಲ್ಪದಲ್ಲಿದ್ದಂತೆಯೇ ಸಮಸ್ತ ಪ್ರಪಂಚವನ್ನೂ ಸೃಷ್ಟಿಸಿದನು. ಎಲೈ ಪರೀಕ್ಷಿದ್ರಾಜನೆ ! ಆಮೇಲೆ ಬ್ರಹ್ಮನು ತಾನು ಸೃಷ್ಟಿಸಿದ ಪ್ರಪಂಚಕ್ಕೆ ಯಾವವಿಧದಿಂದ ಹಿತವನ್ನುಂಟುಮಾಡಬಹುದೆಂದು ಮನಸ್ಸಿನಲ್ಲಿ ಆಲೋಚಿಸುತಿದ್ದು ಒಮ್ಮೆ ಇದಕ್ಕಾಗಿ ಯಮನಿಯಮರೂಪವಾದ ತಪಸ್ಸನ್ನು ತೊಡಗಿದನು. ಈ ಸಮಯಕ್ಕೆ ಸರಿಯಾಗಿ ಆತನ ಪುತ್ರನಾದ ನಾರದನು ಅಕಸ್ಮಾತ್ತಾಗಿ ಅಲ್ಲಿಗೆ ಬಂದು ಸೇರಿದನು. ಆ ನಾರದಮಹ

ಷಿಯು ತಂದೆಯಾದ ಬ್ರಹ್ಮನಿಗೆ ನಮಸ್ಕರಿಸಿ, ಅತನಿಗೆ ಪರಿಚರ್ಯೆಗಳನ್ನು ಮಾಡುತ್ತ, ಭಕ್ತಿಪೂರ್ವಕವಾದ ತನ್ನ ಸೇವೆಯಿಂದ ಅವನನ್ನು ಸಂತೋಷ ಪಡಿಸಿ, ವಿನಯದಿಂದ ಅವನ ಮುಂದೆ ನಿಂತು, ಈಗ ನೀನು ನನ್ನನ್ನು ಪ್ರಶ್ನೆ ಮಾಡಿದಂತೆಯೇ ವಿಷ್ಣುವಿನ ಮಾಯಾಪ್ರಕಾರವನ್ನು (ಆಶ್ಚರ್ಯಶಕ್ತಿಯನ್ನು) ಕುರಿತು ವಿವರಿಸಬೇಕೆಂದು ಪ್ರಾರ್ಥಿಸಿ ಕೇಳಿದನು. ಆಗ ಬ್ರಹ್ಮದೇವನು ನಾರದನಲ್ಲಿ ಪ್ರಸನ್ನನಾಗಿ, ಹಿಂದೆ ತನಗೆ ಶ್ರೀಮನ್ನಾರಾಯಣನು ಉಪದೇಶಿಸಿದ ವಿಷಯಗಳೆಲ್ಲವನ್ನೂ ವಿವರಿಸಿ ತಿಳಿಸಿದನು. ಇದನ್ನು ಕೇಳಿ ನಾರದನು ಪರಮಸಂತೋಷಭರಿತನಾಗಿ ಲೋಕಸಂಚಾರಕ್ಕಾಗಿ ಹೊರಟನು. ಹೀಗೆ ಬಹುಕಾಲವು ಕಳೆದಮೇಲೆ ಒಮ್ಮೆ ನಾರದನು ಸರಸ್ವತೀನದೀತೀರದಲ್ಲಿ ಚಿಂತಾಕ್ರಾಂತನಾಗಿ ಕುಳಿತಿದ್ದ ಮಹಾತೇಜಸ್ವಿಯಾದ ವ್ಯಾಸಮಹರ್ಷಿಯಬಳಿಗೆ ಬಂದು ಅವನನ್ನು ಸಂಧಿಸಿದನು. ಮತ್ತು ಆ ವ್ಯಾಸಮಹಾಮುನಿಯ ಪ್ರಾರ್ಥನೆಯಮೇಲೆ, ತನಗೆ ಹಿಂದೆ ತನ್ನ ತಂದೆಯಾದ ಬ್ರಹ್ಮನು ಉಪದೇಶಿಸಿದ ರೀತಿಯಲ್ಲಿಯೇ ಭಾಗವತಪುರಾಣವನ್ನು ತಿಳಿಸಿದನು. ಎಲೈ ಪರೀಕ್ಷಿದ್ರಾಜನೆ ! ನನ್ನ ತಂದೆಯಾದ ವ್ಯಾಸಮುನಿಯೂಕೂಡ ತನಗೆ ನಾರದನಿಂದ ಉಪದೇಶಿಸಲ್ಪಟ್ಟ ವಿಷಯಗಳೆಲ್ಲವನ್ನೂ ಸೇರಿಸಿ, ದಶಲಕ್ಷಣಪೂರ್ಣವಾದ ಭಾಗವತವೆಂಬ ಗ್ರಂಥವನ್ನು ರಚಿಸಿದನು. ಎಲೈ ರಾಜೇಂದ್ರನೆ ! ನೀನು ವಿರಾಟ್ಪುರುಷನಿಂದ ಈ ಪ್ರಪಂಚವೆಲ್ಲವೂ ಹೇಗೆ ಹುಟ್ಟಿತೆಂದು ಕೇಳಿದೆಯಷ್ಟೆ? ಆ ವೃತ್ತಾಂತವೆಲ್ಲವನ್ನೂ ವಿವರವಾಗಿ ನಿನಗೆ ತಿಳಿಸಿ, ಮುಂದೆ ನೀನು ಕೇಳಿದ ಬೇರೆಬೇರೆ ಪ್ರಶ್ನೆಗಳಿಗೂ ಕ್ರಮವಾಗಿ ಉತ್ತರವನ್ನು ಹೇಳುವೆನು ಕೇಳು." ಎಂದು ಹೇಳಿ ಶುಕಮುನಿಯು, ತಿರುಗಿ ಮತ್ತೆ ಕೆಲವು ವಿಷಯಗಳನ್ನು ತಿಳಿಸುವುದಕ್ಕೆ ತೊಡಗಿದನು. ಇಲ್ಲಿಗೆ ಒಂಭತ್ತನೆಯ ಅಧ್ಯಾಯವು.

ಶುಕಮುನಿಯು ಪರೀಕ್ಷಿದ್ರಾಜನಿಗೆ ಸೃಷ್ಟ್ಯುದ್ಭವಕ್ರಮವನ್ನೂ, ಜೀವಾತ್ಮಪರಮಾತ್ಮಸ್ವರೂಪವನ್ನೂ ಇತರ ವಿಷಯಗಳನ್ನೂ ತಿಳಿಸಿದುದು.

ಶುಕಮುನಿಯು ತಿರುಗಿ ಪರೀಕ್ಷಿದ್ರಾಜನನ್ನು ಕುರಿತು "ಎಲೈ ರಾಜೇಂದ್ರನೆ! ನನ್ನ ತಂದೆಯಾದ ವ್ಯಾಸಮುನಿಯು ಭಾಗವತವನ್ನು ರಚಿಸಿದ ಮೇಲೆ ಅದನ್ನು ನನಗೆ ಉಪದೇಶಿಸಿದನೆಂದು ನಾನು ಮೊದಲೇ ನಿನಗೆ ಹೇ

ಳಿರುವೆನಷ್ಟೆ? ಆ ಪುರಾಣವನ್ನೇ ನಿನಗೆ ಕ್ರಮವಾಗಿ ಉಪದೇಶಿಸುತ್ತ ಬಂದ ಪಕ್ಷದಲ್ಲಿ ನೀನು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ತಾನಾಗಿಯೇ ಉತ್ತರವನ್ನು ಹೇಳಿದಂತಾಗುವುದು. ಮೊದಲು ಪುರಾಣದಲ್ಲಿರಬೇಕಾದ ಲಕ್ಷಣಗಳಾವುವೆಂಬುದನ್ನು ಹೇಳುವೆನು ಕೇಳು! ಸೃಷ್ಟಿ, ಪ್ರತಿಸೃಷ್ಟಿ ಸ್ಥಾನ, ಪೋಷಣ, ಊತಿ, ಮನ್ವಂತರಗಳು, ಈಶಾನುಕಥನ, ನಿರೋಧ, ಮುಕ್ತಿ, ಆಶ್ರಯ; ಎಂಬಿವು ಹತ್ತೂ ಪುರಾಣಲಕ್ಷಣಗಳು. ಈ ಲಕ್ಷಣಗಳಿರುವುದರಿಂದಲೇ ಈ ಭಾಗವತವು ಪುರಾಣವೆಂಬ ಹೆಸರನ್ನು ಹೊಂದಿರುವುದು. ಈ ಹತ್ತರಲ್ಲಿ ಕೊನೆಯದಾದ ಆಶ್ರಯವೆಂಬುದು ಒಂದೊಂದು ಪುರಾಣಕ್ಕೂ ಅತಿಮುಖ್ಯವಾದುದು. ಆಶ್ರಯವೆಂಬುದೇ ಪರಬ್ರಹ್ಮವು. ಈ ಪರಬ್ರಹ್ಮದ ಸ್ವರೂಪವು ಚೆನ್ನಾಗಿ ತಿಳಿಯಬೇಕೆಂಬುದಕ್ಕಾಗಿಯೇ ಪರಾಪರವಸ್ತುಗಳ ಸ್ವರೂಪವನ್ನು ಚೆನ್ನಾಗಿ ಕಂಡುಕೊಂಡಿರುವ ಮಹರ್ಷಿಗಳು ಸೃಷ್ಟಿ ಮೊದಲಾದ ಉಳಿದ ಒಂಭತ್ತುಲಕ್ಷಣಗಳನ್ನೂ, ತಾವು ತಮ್ಮ ಗುರು ಪರಂಪರೆಯೆಂದ ತಿಳಿದಂತೆ ಅದಕ್ಕೆ ಸಾಧನವಾಗಿ ವರ್ಣಿಸುವರು. ಇದರಿಂದ ಹತ್ತನೆಯದಾದ ಆಶ್ರಯವೆಂಬ ಲಕ್ಷಣವನ್ನು ಚೆನ್ನಾಗಿ ತಿಳಿಯಪಡಿಸುವುದಕ್ಕೆ ಹಿಂದಿನ ಲಕ್ಷಣಗಳೆಲ್ಲವೂ ಅಂಗಗಳಾಗಿರುವುದರಿಂದ, ಈ ಪ್ರಬಂಧವೆಲ್ಲಾ ಮುಖ್ಯವಾಗಿ ಪರಬ್ರಹ್ಮಸ್ವರೂಪವನ್ನು ವಿವರಿಸತಕ್ಕ ಒಂದೇ ಶಾಸ್ತ್ರರೂಪವಾಗಿರುವುದು. ಇದರಲ್ಲಿ ಬೇರೆಬೇರೆ ಅನೇಕಾರ್ಥಗಳು ವಿವರಿಸಲ್ಪಟ್ಟಿದ್ದರೂ, ಅವೆಲ್ಲವನ್ನೂ ಬೇರೆಬೇರೆ ಗ್ರಂಥಗಳೆಂದು ಶಂಕಿಸುವುದಕ್ಕೆ ಅವಕಾಶವಿಲ್ಲ. ರಾಜೇಂದ್ರಾ! ಹಿಂದೆ ಹೇಳಿದ ಹತ್ತೂ ವಿಧಲಕ್ಷಣಗಳನ್ನೂ ಬೇರೆಬೇರೆಯಾಗಿ ವಿವರಿಸಿ ಹೇಳುವೆನು ಕೇಳು.ಭೂಮಿ ಮೊದಲಾದ ಮಹಾಭೂತಗಳೈದು, ಅವುಗಳಿಗೆ ಅಸಾಧಾರಣಧರ್ಮವಾದ ಗಂಧಾದಿ ತನ್ಮಾತ್ರಗಳೈದು, ಜ್ಞಾನೇಂದ್ರಿಯಗಳೈದು, ಕರ್ಮೇಂದ್ರಿಯಗಳೈದು, ಬುದ್ಧಿಯೆಂದು ಹೇಳಲ್ಪಡುವ ಮಹತ್ತತ್ವವೊಂದು. ಇವುಗಳ ಸೃಷ್ಟಿಯೇ ಸರ್ಗವೆಂದು ಹೇಳಲ್ಪಡುವುದು. ಅದರಿಂದಾಚೆಗೆ ಚತುರ್ಮುಖಬ್ರಹ್ಮನು ವಿರಾಟ್ಪುರುಷನ ನಾಭಿಯಿಂದ ಹುಟ್ಟಿ, ಸತ್ವರಜಸ್ತಮೋಗುಣಗಳ ವೈಷಮ್ಯದಿಂದ ರಜೋಗುಣದ ಪ್ರಾಧಾನ್ಯವನ್ನು ಹೊಂದಿ,ವ್ಯಷ್ಟಿರೂಪವಾದ ದೇವ ಮನುಷ್ಯಾದಿ ಸೃಷ್ಟಿಯನ್ನು ನಡೆಸಿದನೆಂದು ಹೇಳಿದನಷ್ಟೆ?ಆ ಭೂತಸೃಷ್ಟಿಗೇ ಪ್ರತಿಸರ್ಗ

ವೆಂದು! ಹೆಸರು. ಅದರಿಂದಾಚೆಗೆ ಶ್ರೀಮನ್ನಾರಾಯಣಮೂರ್ತಿಯು ಪುಷ್ಪ ರನ್ನಡಗಿಸಿ ಲೋಕವನ್ನು ಕ್ಷೇಮದಿಂದ ನಿಲ್ಲಿಸಿದನು. ಇದಕ್ಕೇ ಸ್ಥಿತಿ ಅಥವಾ ಸ್ಥಾನವೆಂದು ಹೆಸರು. ಭಗವಂತನಾದ ನಾರಾಯಣನು ಪ್ರತಿಯುಗದಲ್ಲಿ ಯೂ, ಅವತಾರಗಳನ್ನೆತ್ತಿ ತನ್ನ ಭಕ್ತರನ್ನು ಪೋಷಿಸುವುದಕ್ಕೆ ಪೋಷಣವೆಂ ದು ಹೆಸರು. ಜೀವಾತ್ಮಗಳಿಗೆ ಜನ್ಮಾಂತರದಿಂದ ಅನುಸರಿಸಿ ಬರುತ್ತಿರುವ ಕರ್ಮವಾಸನೆಗಳೇ ಊತಿಯೆನಿಸುವುವು. ಭಗವದನುಗ್ರಹದಿಂದ ರಕ್ಷಣ ಕಾರ್ಯದಲ್ಲಿ ನಿಯುಕ್ತರಾದ ಮಹಾತ್ಮರ ಧರ್ಮಗಳನ್ನು ವಿಸ್ತರಿಸಿ ವರ್ಣಿಸುವು ದೇ ಮನ್ವಂತರವೆನಿಸುವುದು. ಭಗವಂತನು ಆಯಾ ಅವತಾರಗಳಲ್ಲಿ ನಡೆಸಿದ ಅದ್ಭುತಕಾರ್ಯಗಳನ್ನು ವರ್ಣಿಸುವುದೇ ಈಶಾನುಕಥನವೆಂದೆನಿಸುವುದು. ಈ ಜೀವಾತ್ಮಗಳು ಕರ್ಮರೂಪಗಳಾದ ಶಕ್ತಿಗಳೊಡಗೂಡಿ ಸೂಕ್ಷ್ಮಪ್ರ ಕೃತಿಯಲ್ಲಿರುವುದೇ ನಿರೋಧವೆನಿಸುವುದು. ಜೀವಾತ್ಮನು ಭಗವದನುಗ್ರಹ ಕ್ಕೆ ಪಾತ್ರನಾದಮೇಲೆ, ದೇವಾದಿರೂಪಗಳನ್ನು ತ್ಯಜಿಸಿ, ಪಾಪಹತಿ ಮೊದ ಲಾದ ಅಷ್ಟಗುಣಗಳಿಂದ ಕೂಡಿದ ರೂಪವನ್ನು ಹೊಂದುವುದೇ ಮುಕ್ತಿ ಯೆನಿಸುವುದು. ಯಾವ ಪರಬ್ರಹ್ಮನಿಂದ ಪ್ರಪಂಚದ ಸೃಷ್ಟಿ, ಸ್ಥಿತಿ, ಸಂ ಹಾರಗಳು ನಡೆಯುವವೋ, ಯಾವನು ಪರಮಾತ್ಮನೆಂದು ಕರೆಯಲ್ಪಡುವ ನೋ ಅವನೇ ಆಶ್ರಯನೆನಿಸುವನು. ಈ ಪರಮಪುರುಷನೇ ಜೀವಾತ್ಮನಲ್ಲಿ ಒಳಹೊಕ್ಕು ಅವನಿಗೆ ನಿಯಾಮಕನಾಗಿರುವನು. ಇದರಿಂದಲೇ ಇವನು ಆ ಧ್ಯಾತ್ಮಿಕನೆಂದೂ, ಅಧಿದೈವಿಕನೆಂದೂ ಹೇಳಲ್ಪಡುವನು. ಈತನೇ ಪ್ರತ್ಯ ಕ್ಷವೇ ಮೊದಲಾದ ಜ್ಞಾನಗಳಿಗೆ ಕಾರಣವೆನಿಸಿದ ಚಕ್ಷುರಾದೀಂದ್ರಿಯಗಳಿಗೆ ಅಭಿಮಾನಿದೇವತೆಗಳೆನಿಸಿಕೊಂಡ ಸೂರ್ಯಾದಿದೇವತೆಗಳಲ್ಲಿಯೂ ಅಂತರ್ಯಾ ಮಿಯಾಗಿ ವರ್ತಿಸುವನು. ಈತನೇ ಜೀವನಿಗಿಂತಲೂ, ನುತ್ತು ಜ್ಞಾನಕಾರಣಗ ಳಾದ ಇಂದ್ರಿಯಗಳಿಗಿಂತಲೂ ವಿಲಕ್ಷಣಗಳೆನಿಸಿಕೊಂಡ ಆಕಾಶಾದಿ ಭೂತಗ ಳಲ್ಲಿರುವ ಶಬ್ದಾದಿವಿಷಯಗಳಲ್ಲಿಯೂ, ಅಂತರ್ಗತನಾಗಿ ಆಧಿಭೌತಿಕನೆನಿಸಿ ಕೊಂಡಿರುವನು. ಆದುದರಿಂದ ಜ್ಞಾನಾಶ್ರಯನಾದ ಆತ್ಮವೂ, ಜ್ಞಾನಕಾರ ಣಗಳಾದ ಇಂದ್ರಿಯಗಳೂ, ಆ ಜ್ಞಾನಕ್ಕೆ ವಿಷಯವಾದ ಶಬ್ದಾದಿಗಳೂ, ಇ ವೆಲ್ಲವೂ ಭಗವದಾತ್ಮಕವೆಂದೇ ತಿಳಿ! ಎಲೈ ರಾಜೇಂದ್ರನೆ! ಕಣ್ಣು ಮೊದಾಗಿ

ದ ಇಂದ್ರಿಯಗಳಿಲ್ಲದಪಕ್ಷದಲ್ಲಿ ನಾವು ಯಾವ ವಸ್ತುಗಳನ್ನೂ ಅರಿಯಲಾರೆವು. ಮತ್ತು ಇಂದ್ರಿಯಸಂಬಂಧಕ್ಕೆ ಅವಕಾಶವಿಲ್ಲದ ಸೂಕ್ಷ್ಮವಸ್ತುಗಳನ್ನಾಗಲಿ, ಇಂದ್ರಿಯಸಂಬಂಧಕ್ಕೆ ಅವಕಾಶವನ್ನು ಕೊಡುವ ಯೋಗ್ಯತೆಯಿದ್ದರೂ ಕಣ್ಮರೆಯಾಗಿರುವುದರಿಂದ ಇಂದ್ರಿಯಗಳಿಗೆ ಗೋಚರಿಸದ ವಸ್ತುಗಳನ್ನಾಗಲಿ ನಾವು ತಿಳಿಯಲಾರೆವು. ಆದುದರಿಂದ ಮೇಲೆ ಹೇಳಿದ ಜಾಗ್ರತ್ತು, ಜ್ಞಾನ, ಜ್ಞೇಯಗಳೆಂಬ ಮೂರರಲ್ಲಿ ಯಾವುದೊಂದಿಲ್ಲದಿದ್ದರೂ, ಯಾವ ವಿಷಯವನ್ನೂ ಗ್ರಹಿಸಲು ಸಾಧ್ಯವಲ್ಲ. ಪರಮಪುರುಷನಾದರೋ ಇಂದ್ರಿಯಗಳ ಸಹಾಯದಿಂದ ಇತರವಸ್ತುಗಳನ್ನು ತಿಳಿಯುವಶಕ್ತಿಯುಳ್ಳ ಆತ್ಮನನ್ನೂ,ಅವನ ಜ್ಞಾನಕ್ಕೆ ಸಾಧನಗಳಾದ ಇಂದ್ರಿಯಗಳನ್ನೂ. ಆ ಇಂದ್ರಿಯಗಳಿಂದ ತಿಳಿಯಬಹುದಾದ ವಸ್ತುಗಳನ್ನೂ ಸಾಕ್ಷಾತ್ಕರಿಸಬಲ್ಲ ಶಕ್ತಿಯುಳ್ಳವನು. ಆತನು ಇಂದ್ರಿಯಗಳ ಸಹಾಯವಿಲ್ಲದೆಯೇ ಎಲ್ಲವನ್ನೂ ತಿಳಿಯಬಲ್ಲನು. ಆದುದರಿಂದ ಇಂದ್ರಿಯಸಂಬಂಧಕ್ಕೆ ಅವಕಾಶಕೊಡದ ಸೂಕ್ಷ್ಮವಸ್ತುಗಳನ್ನಾಗಲಿ, ಮರೆಯಲ್ಲಿರುವ ವಸ್ತುಗಳನ್ನಾಗಲಿ ತಿಳಿಯಬಲ್ಲನು. ಆ ಪರಮಪುರುಷನೇ ಜಡಪ್ರಕೃತಿಗೆ ಆಧಾರವೆನಿಸಿಕೊಂಡ ಜೀವಾತ್ಮಕ್ಕೂ ಆಧಾರನೆನಿಸಿರುವನು. ಅಷ್ಟೇಕೆ? ಆತನು ತನಗೆ ತಾನೇ ಆಧಾರವೆನಿಸಿರುವನೇ. ಹೊರತು,ಬೇರೆ ಆಧಾರವನ್ನು ಅಪೇಕ್ಷಿಸತಕ್ಕವನಲ್ಲ. ಆತನಿಗೆ ಆಧಾರವಾಗತಕ್ಕ ಬೇರೆವಸ್ತುವೂ ಇಲ್ಲ. ಎಲೈ ಪರೀಕ್ಷಿದ್ರಾಜನೆ ! ಹೀಗೆ ಸೃಷ್ಟಿವೊದಲಾಗಿ ಹತ್ತು ಬಗೆಯ ಪುರಾಣಲಕ್ಷಣಗಳೆಲ್ಲವನ್ನೂ ನಿನಗೆ ತಿಳಿಸಿದೆನು. ಇನ್ನು ವಿರಾಟ್ಪುರುಷನಿಂದ ಈ ಲೋಕವು ಹೇಗೆ ಹುಟ್ಟಿತೆಂಬುದನ್ನು ತಿಳಿಸುವೆನು ಕೇಳು. ಮೊದಲು ವಿರಾಟ್ಪುರುಷನು ಬ್ರಹ್ಮಾಂಡವನ್ನು ಭೇದಿಸಿಕೊಂಡು ಬಂದು,ಚತುರ್ಮುಖರೂಪವುಳ್ಳ ಪುರುಷನನ್ನು ಪಡೆಯುವುದಕ್ಕೆ ಮೊದಲು, ಶುದ್ಧನಾದ ತನಗೆ ವಾಸಮಾಡುವುದಕ್ಕೆ ಯೋಗ್ಯವಾದ ಪರಿಶುದ್ಧವಾದ ಸ್ಥಳವೊಂದನ್ನು ಕೋರಿ, ಅದಕ್ಕಾಗಿ ಮೊದಲು ಪವಿತ್ರವೆನಿಸಿದ ಜಲವನ್ನು ಸೃಷ್ಟಿಸಿದನು. ತಾನು ಸೃಷ್ಟಿಸಿದ ಆ ಜಲದಲ್ಲಿಯೇ ಸಹಸ್ರಸಂವತ್ಸರಗಳವರೆಗೆ ವಾಸಮಾಡುತಿದ್ದನು. ಹೀಗೆ ನರಶಬ್ದವಾಚ್ಯನಾದ ತನ್ನಿಂದ ಸೃಷ್ಟಿಸಲ್ಪಟ್ಟ ಜಲರಾಶಿಯನ್ನೇ ತಾ

ನು ತನಗೆ ಆಶ್ರಯಸ್ಥಾನವಾಗಿ ಮಾಡಿಕೊಂಡಿದ್ದುದರಿಂದ, ಅವನು ನಾರಾಯಣನೆನಿಸಿಕೊಂಡನು. ಮಹತ್ತತ್ವದಿಂದ ಹಿಡಿದು ಪೃಥಿವಿಯವರೆಗಿರತಕ್ಕ ದ್ರವ್ಯವು ಎಂದರೆ, ಭೂತಗರ್ವವೂ, ಜೀವಾತ್ಮನ ಪುಣ್ಯಪಾಪರೂಪವಾದ ಕರ್ಮವೂ, ಸತ್ವಾದಿಗುಣಗಳ ಹೆಚ್ಚುಕಡಿಮೆಗೆ ಕಾರಣವೆನಿಸಿದ ಕಾಲವೂ, ಪ್ರಕೃತಿಯಲ್ಲಿರುವ ವಿಕಾರಹೊಂದುವ ಸ್ವಭಾವವೂ, ಇವೆಲ್ಲವೂ ಆ ಪರಮ ಪುರುಷನ ಅನುಗ್ರಹದಿಂದಲೇ ಆಗಿರುವುವು. ಅತನು ಉಪೇಕ್ಷಿಸಿದ ಪಕ್ಷದಲ್ಲಿ ಇವೊಂದಕ್ಕೂ ಸತ್ತೆಯೇ ಇಲ್ಲವು. ದ್ರವ್ಯಾದಿಗಳ ಸ್ಥಿತಿ, ಪ್ರವೃತ್ತಿಮುಂತಾದುವುಗಳೆಲ್ಲಾ ಭಗವಂತನ ಸಂಕಲ್ಪವನ್ನನುಸರಿಸಿಯೇ ಬರುವುವು. ಇಂತಹ ನಾರಾಯಣನು ಸೃಷ್ಟಿಗೆಮೊದಲು ಬೇರೆಬೇರೆಯಾಗಿ ವಿಭಾಗಿಸಿ ನೋಡುವುದಕ್ಕಾಗಲಿ, ಹೇಳುವುದಕ್ಕಾಗಲಿ ಸಾಧ್ಯಪಿಲ್ಲದೆ ಏಕಾಕಾರವಾಗಿಯೂ, ಸೂಕ್ಷ್ಮವಾಗಿಯೂ ಇದ್ದ ಚೇತನಾಚೇತನಗಳೆಲ್ಲವನ್ನೂ ತನಗೆ ಶರೀರವನ್ನಾಗಿ ಮಾಡಿಕೊಂಡು, ತಾನೊಬ್ಬನೇ ಇರುತಿದ್ದನು. ಆಮೇಲೆ ದೇವಮನುಷ್ಯಾದಿಗಳಾದ ಬೇರೆಬೇರೆ ನಾಮರೂಪಗಳನ್ನು ಹೊಂದಬೇಕೆಂಬ ಉದ್ದೇಶವು ಆತನಿಗೆ ಹುಟ್ಟಿತು. ಆಗ ತನ್ನನ್ನೇ ತಾನು ಅನುಭವಿಸುತ್ತ ಮಲಗಿದ್ದ ತನ್ನ ಯೋಗತಲ್ಪದಿಂದ ಮೇಲೆದ್ದು,ತನಗೆ ಶರೀರಭೂತವಾಗಿಯೂ, ಚೇತನಾಚೇತನ ಸ್ವರೂಪವುಳ್ಳದಾಗಿಯೂ ಇದ್ದ ಕಾರಣದ್ರವ್ಯವನ್ನೇ ಹಿಡಿದು ಪ್ರಕೃತಿಯ ತ್ರಿಗುಣಗಳಲ್ಲಿ ಒಂದಾದ ರಜೋಗುಣವನ್ನೇ ಪ್ರಧಾನವಾಗಿ ಹೊಂದಿದ ಚತುರ್ಮುಖನನ್ನು ತನ್ನ ಸಂಕಲ್ಪದಿಂದ ಪಡೆದು, ಆತನಿಗೆ ತಾನು ಅಂತರಾತ್ಮನಾಗಿದ್ದು, ಜ್ಞಾತೃ, ಜ್ಞಾನ, ಜ್ಞೇಯರೂಪವಾದ ಮೂರುವಿಧದಿಂದ ಆ ಚಿದಚಿದಾತ್ಮಕಕಾರಣದ್ರವ್ಯವನ್ನೇ ವ್ಯಷ್ಟಿರೂಪವಾಗಿ ಸೃಷ್ಟಿಸಿದನು. ಅವುಗಳಲ್ಲಿಬಿಕ್ಕುಮೊದಲಾದ ದೇವತೆಗಳಿಂದ ಅಧಿಷ್ಠಿತವಾದ ಏಕಾದಶೇಂದ್ರಿಯವರ್ಗವು ಅಧಿದೈವವೆನಿಸುವುದು. ಜ್ಞಾತೃವೆನಿಸಿಕೊಂಡ ಆತ್ಮವರ್ಗವೇ ಅಧ್ಯಾತ್ಮವೆನಿಸುವುದು.ಪೃಥಿವ್ಯಾದಿಗಳಲ್ಲಿರುವ ಗಂಧಾದಿಗುಣಗಳೇಅಧಿಭೂತವೆನಿಸುವುದು.ಹೀಗೆ ಭಗವಂತನು ಮೊದಲು ಪುರುಷಾಧಿಷ್ಠಿತವಾಗಿಸಮಷ್ಟಿರೂಪದಿಂದಒಂದೇಆಗಿದ್ದ ಕಾರಣದ್ರವ್ಯವನ್ನೇ,ಅಧಿಭೂತವೆಂದೂ, ಅಧ್ಯಾತ್ಮವೆಂದೂ,ಅಧಿದೈವವೆಂದೂ ಮೂರುವಿಭಾಗಗಳಿಂದ ಸೃಷ್ಟಿಸಿದನು. ಎಲೈರಾಜೇಂ

ಪ್ರನೆ ! ಇಲ್ಲಿ ಜ್ಞಾತೃವಾದ ಆತ್ಮನನ್ನು ಸೃಷ್ಟಿಸುವುದೆಂದರೆ ಆ ಜೀವಾತ್ಮ ಗಳಿಗೆ ದೇವಮನುಷ್ಯಾದಿಶರೀರಗಳನ್ನು ಸೇರಿಸಿಕೊಡುವುದೇ ಕೊರತು ಹೊಸ ದಾಗಿ ಜೀವವನ್ನು ಸೃಷ್ಟಿಸುವುದೆಂದೆಣಿಸಬೇಡ. ಮೇಲೆ ಹೇಳಿದಂತೆ ಕಾರಣ ಪ್ರವ್ಯವನ್ನು ಜ್ಞಾತೃ ಜ್ಞಾನ ವಿಷಯಗಳೆಂಬ ಮೂರುವಿಧದಿಂದ ಸೃಷ್ಟಿಸಿದ ಕ್ರಮವನ್ನೂ ಹೇಳುವೆನು ಕೇಳು ! ಸೃಷ್ಟಿಯಲ್ಲಿ ಸಮಷ್ಟಿಯೆಂದೂ, ವ್ಯಷ್ಟಿಯೆಂದೂ ಎರಡು ಮುಖ್ಯವಿಭಾಗಗಳುಂಟು. ಪ್ರಕೃತಿ, ಮಹತ್ತು, ಅಹಂಕಾರ, ಶಬ್ದತನ್ಮಾತ್ರ ಮೊದಲಾದ ತನ್ಮಾತ್ರಗಳು, ಆಕಾಶಾದಿ ಭೂತಗಳು, ಶಬ್ದಾದಿ ವಿಷಯಗಳು, ಇವೆಲ್ಲವನ್ನೂ ಸೃಷ್ಟಿಸಿದಮೇಲೆ ಆಕಾಶಾದಿಭೂತಗಳೈದು, ಮಹತ್ತು, ಅಹಂಕಾರಗಳೆಂಬಿವೆರಡು ತತ್ವಗಳು, ಇವುಗಳನ್ನೂ ಸಪ್ತೀಕರಣರೀತಿಯಿಂದ ಒಂದಕ್ಕೊಂದನ್ನು ಸೇರಿಸಿ ಅಂಡವನ್ನು ಸೃಷ್ಟಿಸಿ,ಅದರಲ್ಲಿ ಬ್ರಹ್ಮದೇವನನ್ನು ಪಡೆಯುವವರೆಗೆ ನಡೆದ ಸೃಷ್ಟಿಕಾರ್ಯಗಳೆಲ್ಲವೂ ಸಮಷ್ಟಿಸೃಷ್ಟಿಯೆನಿಸುವುದು. ಈ ಸಮಷ್ಟಿಸೃಷ್ಟಿಯನ್ನು ಪರಮಪುರುಷನು ತಾನೇ ಸಾಕ್ಷಾತ್ತಾಗಿ ನಡೆಸುವನು. ಅದರಿಂದಾಚೆಗೆ ಆಪರಮಪುರುಷನು ಬ್ರಹ್ಮದೇವನಲ್ಲಿ ಅಂತರ್ಯಾಮಿಯಾಗಿದ್ದು,ಅವನಮೂಲಕವಾಗಿ ನಡೆಸುವ ದೇವಮನುಷ್ಯಾದಿಸೃಷ್ಟಿಯನ್ನು ವ್ಯಷ್ಟಿಸೃಷ್ಟಿಯೆಂದು ಹೇಳುವರು. ಆಬ್ರಹ್ಮನಿಗೆ ಸಮಷ್ಟಿಪುರುಷನೆಂದೂ ಹೆಸರುಂಟು. ಈಚತುರ್ಮುಖನು ಪ್ರಾಣವ್ಯಾಪಾರವನ್ನು ನಡೆಸುತ್ತಿರುವಾಗ (ಎಂದರೆ ಉಚ್ಛ್ವಾಸನಿಶ್ವಾಸಗಳನ್ನು ನಡೆಸುವಾಗ),ಅವನ ಶರೀರಾಂತರ್ಗತವಾಗಿಯೂ,ಆಕಾಶದ ಕಾರ್ಯರೂಪವಾಗಿಯೂ ಇರುವ ಪ್ರಾಣವಾಯುವಿನಿಂದ,ಓಜಸ್ಸು,ಸಹಸ್ಸು, ಬಲವೆಂಬ ಮೂರುಧರ್ಮಗಳುಂಟಾದುವು. ಓಜಸ್ಸೆಂಬುದು ಪ್ರಯತ್ನವೆನಿಸಿಕೊಳ್ಳುವ ಪ್ರವೃತ್ತಿಸಾಮರ್ಥ್ಯವು. ಸಹಸ್ಸೆಂಬುದು ವೇಗಸಾಮರ್ಥ್ಯವು.ಬಲವೆಂಬುದು ಧಾರಣಾಸಾಮರ್ಥ್ಯವು. ಈ ಮೂರುಧರ್ಮಗಳೊಡಗೂಡಿ ಆ ಚತುರ್ಮುಖನ ಶರೀರಾಂತರ್ಗತವಾಗಿದ್ದ ಬೇರೆ ಪ್ರಾಣಂಡಿಂದ ಎಲ್ಲಾ ಪ್ರಾಣಿಗಳ ಜೀವಕ್ಕೆ ಹೇತುವಾಗಿಯೂ, ಪ್ರಧಾನವಾಗಿಯೂ ಇರುವ ಪ್ರಾಣಗಳುಂಟಾದುವು.ರಾಜಾ! ಲೋಕದಲ್ಲಿ ರಾಜಸೇವಕರು ರಾಜನನ್ನ ನುವರ್ತಿಸಿ ನಡೆಯುವಂತೆ, ಇಂದ್ರಿಯಗಳೆಲ್ಲವೂ ಈ ಪ್ರಾಣವನ್ನೇ ತಮಗೆ ಪ್ರಭುವನ್ನಾ

ಗಿಟ್ಟುಕೊಂಡು, ಅದನ್ನೇ ಅನುಸರಿಸಿ ತನ್ಮ್ಯವ್ಯಾಪಾರಗಳನ್ನು ನಡೆಸುವುವು. ಆ ಪ್ರಾಣವಾಯುವು ಶಾಂತವಾದರೆ ಇಂದ್ರಿಯಗಳೆಲ್ಲವೂ ಶಾಂತವಾಗುವುವು. ದೇವಮನುಷ್ಯಾದಿಶರೀರಗಳಲ್ಲಿ ಸೇರತಕ್ಕ ಈ ವ್ಯಷ್ಟಿಪ್ರಾಣಗಳೂ ಕೂಡ, ಜತರ್ಮುಖನ ಶರೀರದಲ್ಲಿ ತನುಗೆ ಕಾರಣಭೂತವಾಗಿದ್ದ ಪ್ರಾಣನ ಸ್ವಭಾವವನ್ನೇ ಅನುಸರಿಸುತ್ತ, ಅದರಂತೆಯೇ ಓಜಸ್ಸು, ಸಹಸ್ಸು, ಬಲವೆಂಬ ಮೂರುಶಕ್ತಿಗಳನ್ನೂ ಹೊಂದಿ,ಪ್ರಾಣ,ಅಪಾನ ಮುಂತಾದ,ವ್ಯಾಪಾರಗಳನ್ನು ನಡೆಸುವುವು.ಹೀಗೆ ಚತುರ್ಮುಖನಶರೀರದೊಳಗೆ ಪ್ರಾಣವಾಯುವು ತನ್ನ ಶಕ್ತಿಯನ್ನು ತೋರಿಸುತ್ತಿದ್ದುದರಿಂದ ಅವನ ಹೃದಯದಲ್ಲಿರುವ ಜಠರಾಗ್ನಿಯು ಜ್ವಲಿಸತೊಡಗಿತು. ಈ ಜಠರಾಗ್ನಿಯ ಉರಿಯಿಂದ ಹಸಿವು ಬಾಯಾರಿಕೆ ಮುಂತಾದುವು ಹುಟ್ಟಿದುವು. ಇದರಿಂದ ಅನ್ನಪಾನಗಳಲ್ಲಿ ಆಶೆಯು ಹುಟ್ಟಿತು. ಆಮೇಲೆ ಆ ಚತುರ್ಮುಖನಿಗೆ ಈ ಅನ್ನಪಾನಾಭಿಲಾಷೆಯನ್ನು ತೀರಿಸಿಕೊಳ್ಳುವುದಕ್ಕಾಗಿ,ವ್ಯಷ್ಟಿಶರೀರಕ್ಕೆ ತಕ್ಕ ಮುಖವು ಏರ್ಪಟ್ಟಿತು.ಆಮುಖವುಂಟಾದಕೂಡಲೆ ಅದರಲ್ಲಿಅಣ್ಣಾಲಗೆ(ತಾಲು)ಯುಂಟಾಯಿತು ಅದರಿಂದ ರಸನೇಂದ್ರಿಯವು ಜನಿಸಿತು.ಅದರಿಂದ ಆ ಇಂದ್ರಿಯಕ್ಕೆಅಭಿನಿವೇತೆಯಾದ ವರುಣನು ಹುಟ್ಟಿದನು. ಅದರಮೇಲೆ ರಸನೆಂದ್ರಿಯಗಳಿಗೆ ಅನುಭವಯೋಗ್ಯಗಳಾದ ಉಪ್ಪು,ಹುಳಿ, ಮುಂತಾದ ಷಡ್ರಸಗಳೂ ಹುಟ್ಟಿದುವು. ಆಮೇಲೆ ಆ ಚತುರ್ಮುಖನಿಗೆ ಬಾಯಿಂದ ಮಾತಾಡಬೇಕೆಂಬ ಅಭಿಲಾಷೆಯು ಹುಟ್ಟಲು, ಆತನ ಮುಖದಿಂದ ವಾಗಿಂದ್ರಿಯವೂ, ಅದಕ್ಕೆ ಅಧಿಷ್ಠಾನದೇವತೆಯಾದ ವಹ್ನಿಯೂ, ಇವೆರಡೂ ಉದ್ಭವಿಸಿದುವು. ಅವೆರಡರಿಂದ ಇಂದ್ರಿಯವ್ಯಾಪಾರವಾದ ವಾಕ್ಯವು ಹೊರಟಿತು.ಅದರಿಂದಾಚೆಗೆ ಆ ಬ್ರಹ್ಮನ ಕಂಠದಲ್ಲಿ ಬಹುಕಾಲದವರೆಗೆ ವಾಯುವು ತಡೆದುನಿಂತುಹೋಯಿತು. ಹೀಗೆ ವಾಯುವು ಹೊರಗೆ ಬರುವುದಕ್ಕೆ ದಾರಿಯಿಲ್ಲದುದರಿಂದ ಅದು ಕಂಠಸ್ಥಾನದಲ್ಲಿಯೇ ನಿಂತು, ಬಲಾತ್ಕಾರದಿಂದ ಹೊರಗೆ ಬರಲು ಪ್ರಯತ್ನಿಸುತ್ತಿರುವಾಗ,ಅದಕ್ಕೆ ನಿರ್ಗಮನಮಾರ್ಗವಾಗಿಮೂಗಿನ ರಂಧ್ರಗಳುಂಟಾದುವು. ಆಗ ಬ್ರಹ್ಮನಿಗೆ ಗಂಧವನ್ನು ಆಘ್ರಾಣಿಸಬೇಕೆಂಬ ಅಭಿಲಾಷೆಯು ಹುಟ್ಟಿದುದರಿಂದ, ಕೂಡಲೇಘ್ರಾಣೆಂದ್ರಿಯವೂ, ಅದಕ್ಕೆ ಅಭಿ

ಮಾನಿದೇವತೆಯಾದ ವಾಯುವೂ ಉದ್ಭವಿಸಿದುವು. ಆಮೇಲೆ ಆ ಬ್ರಹ್ಮನಿಗೆ ತನ್ನ ದೇಹವನ್ನೂ ಇತರವಸ್ತುಗಳನ್ನೂ, ನೋಡಬೇಕೆಂಬ ಅಭಿಲಾಷೆಯು ಹುಟ್ಟಿತು. ಅವನಿಗೆ ಈ ಅಭಿಲಾಷೆಯು ಹುಟ್ಟಿದೊಡನೆ ಅವನಮುಖದಲ್ಲಿ ಕಣ್ಣಿನ ಗುಡ್ಡೆಗಳು ಹುಟ್ಟಿದುವು. ಅದರಿಂದ ನೇತ್ರೇಂದ್ರಿಯವೂ, ಆ ಇಂದ್ರಿಯಕ್ಕೆ ಅಭಿಮಾನದೇವತೆಯಾದ ಸೂರ್ಯನೂ ಹುಟ್ಟಿದರು. ಆಮೇಲೆ ಆ ಬ್ರಹ್ಮನಿಗೆ ಶಬ್ದಗಳನ್ನು ಗ್ರಹಿಸಬೇಕೆಂಬ ಇಚ್ಛೆಯುಂಟಾಗಲು, ಒಡನೆಯೇ ಅವನಿಗೆ ಕಿವಿಗಳುಂಟಾದುವು. ಅದರಲ್ಲಿ ಶಬ್ದವನ್ನು ಗ್ರಹಿಸುವುದಕ್ಕೆ ಸಮರ್ಥವಾದ ಕರ್ಣೇಂದ್ರಿಯವೂ, ಆ ಇಂದ್ರಿಯಕ್ಕೆ ಅಧಿಷ್ಠಾನದೇವತೆಗಳಾದ ದಿಕ್ಕುಗಳೂ ಹುಟ್ಟಿದುವು. ಆಮೇಲೆ ಆ ಪುರುಷನಿಗೆ ಇತರವಸ್ತುಗಳಲ್ಲಿರುವ ಮೃದುತ್ವ, ಕಾಠಿಣ್ಯ, ಶೀತೋಷ್ಣಗಳೆಂಬ ಗುಣಗಳನ್ನು ಗ್ರಹಿಸಬೇಕೆಂಬ ಇಚ್ಛೆಯು ಹುಟ್ಟಿತು. ಒಡನೆಯೇ ಅವನಲ್ಲಿ ಸ್ಪರ್ಶೇಂದ್ರಿಯಕ್ಕೆ ಸ್ಥಾನವಾದ ಚರ್ಮವು ಹುಟ್ಟಿತು. ಅದರಿಂದ ಇಚ್ಛೆಗೆ ಕಾಠಿಣ್ಯಾದಿಗಳನ್ನು ಗ್ರಹಿಸತಕ್ಕ ತ್ವಗಿಂದ್ರಿಯವೂ, ಆ ಚರ್ಮದಮೇಲೆ ರೋಮಗಳೂ ಹುಟ್ಟಿದುವು. ಈ ರೋಮಗಳಿಗೆ ವೃಕ್ಷಗಳು ಅಧಿದೇವತೆಗಳೆನಿಸಿಕೊಂಡುವು. ತ್ವಗಿಂದ್ರಿಯಕ್ಕೆ ವಾಯುವು ಅಧಿಷ್ಠಾನದೇವತೆಯಾಗಿ, ಆ ಇಂದ್ರಿಯದಿಂದಲೇ ಒಳಭಾಗದಲ್ಲಿಯೂ, ಹೊರಭಾಗದಲ್ಲಿಯೂ ಸ್ಪರ್ಶಗುಣಗಳನ್ನು ಗ್ರಹಿಸುತ್ತಿರುವನು. ಮೇಲೆ ಹೇಳಿದ ತ್ವಗಿಂದ್ರಿಯಕ್ಕೆ ಸೂಕ್ಷ್ಮವಾದ ಮೇಲಿನ ಚರ್ಮವೊಂದು, ಮಂದವಾದ ಅಡಿಯಚರ್ಮವೊಂದು, ಇನ್ನೆರಡೂ ಆಧಾರಗಳಾದುವು. ಈ ಆಧಾರಭೇದದಿಂದ ತ್ವಗಿಂದ್ರಿಯದಿಂದ ಗ್ರಹಿಸಬೇಕಾದ ವಿಷಯಗಳೂ ಬೇರ್ಪಟ್ಟವು. ಒಂದಕ್ಕೆ ನವೆಯೂ ಮತ್ತೊಂದಕ್ಕೆ ಸ್ಪರ್ಶವೂ ವಿಷಯಗಳಾದುವು. ಈ ವಿಷಯಭೇದದಿಂದಲೇ ಮೇಲೆಹೇಳಿದಂತೆ ವೃಕ್ಷವಾಯುಗಳೆಂಬ ಅಭಿಮಾನದೇವತೆಗಳೂ ಬೇರ್ಪಟ್ಟಿರುವರು. ಹೀಗೆ ಒಂದೇ ತ್ವಗಿಂದ್ರಿಯವು ಹೊರಗಿನ ಚರ್ಮದಲ್ಲಿರುವ ರೋಮಗಳಲ್ಲಿ ವ್ಯಾಪಿಸಿ, ಓಷಧಿಗಳನ್ನು ಅಧಿದೇವತೆಗಳನ್ನಾಗಿ ಹೊಂದಿ, ನವೆಯನ್ನು ತಿಳಿಸುವುವು. ಇನೇ ಒಳಗಿನ ಚರ್ಮದಲ್ಲಿದ್ದು ವಾಯುವನ್ನು ಅಭಿಮಾನದೇವತೆಯನ್ನಾಗಿ ಹೊಂದಿ ಸ್ಪರ್ಶವನ್ನು ತಿಳಿಸುವುವು. ಆಮೇಲೆ ಆ ಬ್ರಹ್ಮನು ಕರ್ಮಗಳನ್ನು

ನಡೆಸಬೇಕೆಂಬ ಉದ್ದೇಶದಿಂದಿರಲು,ಆತನಿಗೆ ಕಾರ್ಯಗಳನ್ನು ನಡೆಸುವುದಕ್ಕೆ ಬೇಕಾದ ಹಸ್ತಗಳು ಹುಟ್ಟಿದುವು. ಅದಕ್ಕೆ ಇಂದ್ರನು ಅಧಿಷ್ಠಾನದೇವತೆಯಾದನು ಅದರಿಂದಾಚೆಗೆ ಬ್ರಹ್ಮನಿಗೆ ಸಂಚರಿಸಬೇಕೆಂಬ ಆಶೆಯು ಹುಟ್ಟಿದುದರಿಂದ ಪಾದಗಳುಂಟಾದುವು. ಅದಕ್ಕೆ ಯಜ್ಞಸ್ವರೂಪನಾದ ವಿಷ್ಣುವು ಅಧಿದೇವತೆಯಾದನು. ಆಮೇಲೆ ಬ್ರಹ್ಮನಿಗೆ ಪ್ರಜೋತ್ಪಾದನದಲ್ಲಿಯೂ, ಸುಖಾನುಭವದಲ್ಲಿಯೂ ಆಶೆಯು ಹುಟ್ಟಿತು.ಒಡನೆಯೇ ಅವನಿಗೆ ಆ ಕಾರ್ಯಕ್ಕುಪಯೋಗಪಡುವ ಉಪಸ್ಥಸ್ಥಾನದಲ್ಲಿ ಪುರುಷಲಿಂಗವು ಹುಟ್ಟಿತು. ಅದಕ್ಕೆ ಪ್ರಜಾಧಿಪತಿಯು ಅಧಿಷ್ಠಾನದೇವತೆಯಾದನು. ಆಮೇಲೆ ಬ್ರಹ್ಮನಿಗೆ ತಿಂದ ಪದಾರ್ಥಗಳಲ್ಲಿ ನಿಸ್ಸಾರವಾದ ಚರಟಗಳನ್ನು ದೇಹದಿಂದ ಹೊರಗೆ ಬಿಡಬೇಕೆಂಬ ಉದ್ದೇಶವು ಹುಟ್ಟಿತು. ಒಡನೆಯೇ ಅವನಿಗೆ ಗುದಸ್ಥಾನವು ಏರ್ಪಟ್ಟಿತು. ಆ ಸ್ಥಾನದಲ್ಲಿ ಪಾಯುವೆಂಬ ಇಂದ್ರಿಯವು ಹುಟ್ಟಿತು. ಅದಕ್ಕೆ ಮಿತ್ರನು ಅಧಿದೇವತೆಯಾದನು.ಆಮೇಲೆ ಈದೇಹವನ್ನು ಬಿಟ್ಟು ಮತ್ತೊಂದು ದೇಹಕ್ಕೆ ಹೋಗಬೇಕೆಂದು ಬ್ರಹ್ಮನಿಗೆ ಇಚ್ಛೆಯುಂಟಾಗಲು, ಆತನ ಅಪಾನ ಸ್ಥಾನವಾದ ನಾಭಿಯಿಂದ ದೇವಮನುಷ್ಯಾದಿಗಳ ನಾಭಿದ್ವಾರವುಂಟಾಯಿತು. ಆ ಬ್ರಹ್ಮನ ಸನುಷ್ಟಿರೂಪವಾದ ಅಪಾನವಾಯುವಿನಿಂದ ಸೃಷ್ಟಿರೂಪವಾದ ಅಪಾನವೂ, ಅದಕ್ಕೆ ಅಧಿದೇವತೆಯಾದ ಮೃತ್ಯುವೂ, ಪ್ರಾಣಾಪಾನಗಳೆಂಬ ಈ ಎರಡು ವಾಯುಗಳನ್ನೂ ಮುಖ್ಯಾಧಾರನಾಗಿ ಉಳ್ಳ ಮರಣವೂ ಉಂಟಾದುವು, ಆಮೇಲೆ ಆ ಬ್ರಹ್ಮನು ಅನ್ನಪಾನಗಳನ್ನು ಗ್ರಹಿಸಬೇಕೆಂದು ಇಚ್ಛೆಯಿಸಲು, ಅವುಗಳಿಗೆ ಆಶ್ರಯಗಳಾದ ಹೊಟ್ಟೆ, ಕರುಳು, ಜಲಮಾರ್ಗಗಳಾದ ನಾಡಿಗಳು,ಇವೆಲ್ಲವೂ ಉಂಟಾದುವು. ಈ ನಾಡಿಗಳಿಗೂ ಆಂತ್ರಗಳೆಂದು ಕರೆಯಲ್ಪಡುವ ಕರುಳುಗಳಿಗೂ, ಕ್ರಮವಾಗಿ ನದಿಗಳೂ, ಸಮುದ್ರಗಳೂ, ಅಧಿದೇವತೆಗಳಾದುವು. ಅದರಿಂದಾಚೆಗೆ ಆತ್ಮಸ್ವರೂಪವನ್ನು ಮರೆಸತಕ್ಕ ಗುಣವುಳ್ಳ ಪ್ರಕೃತಿಯ ಸ್ವಭಾವವನ್ನು ನಿರೂಪಿಸಬೇಕೆಂದು ತೋರಿ,ಮಾಯೆಯನ್ನು ಧ್ಯಾನಿಸಲು, ಅವನಲ್ಲಿ ಕಮಲದ ಆಕೃತಿಯುಳ್ಳ ಹೃದಯವೆಂಬ ಸ್ಥಾನವು ಹುಟ್ಟಿತು. ಅದರಲ್ಲಿ ಮನಸ್ಸೆಂಬ ಇಂದ್ರಿಯವೂ, ಆ ಇಂದ್ರಿಯಕ್ಕೆ ಅಧಿದೇವತೆಯಾದ ಚಂದ್ರನೂ, ಆ ಮನಸ್ಸಿನಲ್ಲಿ ನಡೆಯಬೇಕಾದ

ಸಂಕಲ್ಪ,ಕಾಮ,ಮುಂತಾದುವುಗಳೂ ಉಂಟಾದುವು. ತ್ವಕ್ಕೆಂಬ ಮಂದ ವಾದ ಚರ್ಮ,ಅದಕ್ಕೆ ಮೇಲಿನ ಸೂಕ್ಷ್ಮ ಚರ್ಮ,ಮಾಂಸ,ರಕ್ತ, ಮೇದಸ್ಸು, ಅಸ್ಥಿ,ಮಜ್ಜೆ,ಈ ಏಳುಧಾತುಗಳೂ ಭೂಮಿ, ನೀರು,ತೇಜಸ್ಸು,ಎಂಬ ಮೂರು ಭೂತಗಳಿಂದ ಏರ್ಪ್ಪಟ್ಟಿರುವುವು. ಆಕಾಶ, ನೀರು, ವಾಯು, ಈ ಮೂರು ಭೂತಗಳಿಂದ ಪ್ರಾಣಗಳು ಏರ್ಪ್ಪಟ್ಟುವು. ಶಬ್ದಾದಿಗುಣಗಳು ಅಹಂಕಾರ ದಿಂದ ಹುಟ್ಟಿದುವುಗಳು. ಇಂದ್ರಿಯಗಳು ಶಬ್ದಾದಿಗುಣಗಳಿಂದ ಹುಟ್ಟಿ ದಂತವು. ಕಾಮ, ಸಂಕಲ್ಪ, ಮೊದಲಾದುವುಗಳಿಗೆ ಮನಸ್ಸೇ ಆಧಾರವಾ ಯಿತು. ಬುದ್ಧಿಯೆಂಬುದು ವಿಜ್ಞಾನ(ಮಹತ್ತತ್ವ)ಸ್ವರೂಪವೆನಿಸಿತು. ಎಲೈ ಪರೀಕ್ಷಿದ್ರಾಜನೆ ! ದೇವಮನುಷ್ಯಾದಿಚೇತನಾಚೇತನಗಳನ್ನು ತನ್ನೊಳಗೆ ಅಡಗಿಸಿಕೊಂಡುದಾಗಿಯೂ,ಹೊರಭಾಗದಲ್ಲಿ ಭೂಮಿ, ನೀರು,ತೇಜಸ್ಸು,ವಾ ಯು,ಆಕಾಶ,ಅಹಂಕಾರ,ಮಹತ್ತು, ಅವ್ಯಕ್ತಗಳೆಂಬಆಷ್ಟಾವರಣಗಳಿಂದವ್ಯಾ ಪ್ತವಾಗಿಯೂ ಇರುವ ಇದನ್ನು, ಭಗವಂತನ ಸ್ಥೂಲರೂಪವೆನ್ನುವರು. ಭಗ ವಂತನಿಗೆ ಈ ಸ್ಥೂಲರೂಪಕ್ಕಿಂತಲೂ ಅತಿಸೂಕ್ಷ್ಮವಾದಬೇರೊಂದುರೂಪ ವುಂಟು. ಅದು ಕಣ್ಣು ಮೊದಲಾದ ಇಂದ್ರಿಯಗಳಿಗೆ ಗೋಚರಿಸತಕ್ಕುದಲ್ಲ. ಮತ್ತು ದೇವಮನುಷ್ಯಾದಿಗಳ ಬುದ್ಧಿಗಾಗಲಿ, ವಾಕ್ಕುಗಳಿಗಾಗಲಿ ಗೋಚರಿಸಲಾರದು. ಅದಕ್ಕೆ ಉತ್ಪತ್ತಿಸ್ಥಿತಿ ವಿನಾಶಗಳೊಂದೂ ಇಲ್ಲವು. ಮತ್ತು ,ಕಾಲಪರಿಮಾಣಕ್ಕೆ ಒಳಪಡದೆ ನಿತ್ಯವಸ್ತುವೆನಿಸಿಕೊಂಡಿರುವುದು. ಇದೇ ಮುಕ್ತಾತ್ಮಸ್ವರೂಪವೆನಿಸುವುದು. (ಮುಕ್ತಾತ್ಮಸ್ವರೂಪವೆಂದರೆ, ಭಗವನ್ಮುಗ್ರಹಕ್ಕೆ ಪಾತ್ರನಾಗಿ,ಸಂಸಾರಸಂಬಂಧವಿಲ್ಲದೆ ದೇಹವನ್ನು ತ್ಯಜಿಸಿ, ಪ್ರಕೃತಿಮಂಡಲವನ್ನು ದಾಟಿ, ಪರಮಪದವನ್ನು ಸೇರಿದ ಜೀವಾತ್ಮಸ್ವರೂಪ ವು. ಇದನ್ನೇ ಭಗವಂತನ ಸೂಕ್ಷ್ಮರೂಪವೆಂದು ಹೇಳುವರು. ಇದಕ್ಕೆ ಅ ಮೂರ್ತವೆಂದೂ ಪರವೆಂದೂ ಹೆಸರುಂಟು. ಮೊದಲು ಹೇಳಿದ ಸ್ಥೂಲ ರೂಪವನ್ನು ಮೂರ್ತವೆಂದೂ, ಅಪರವೆಂದೂ ಹೇಳುವರು.)ಎಲೈ ರಾಜೇಂ ದ್ರನೆ! ಭಗವಂತನ ಈ ಪರಾವರಸ್ವರೂಪಗಳೆರಡನ್ನೂ ತಿಳಿದುಕೊಂಡೆಯೆ ಷ್ಟೆ ,, ಆದರೆ ಇವು ಭಗವದ್ರೂಪಗಳಾಗಿದ್ದ ಮೇಲೆ ಈ ಸ್ಥೂಲಸೂಕ್ಷ್ಮ ರೂಪಗಳನ್ನೇ ಏಕೆ ಭಜಿಸಬಾರದು"? ಎಂದು ನಿನಗೆ ಶಂಕೆಯುಂಟಾಗಬಹು

ದು. ಜ್ಞಾನಿಗಳು ಈ ಸ್ಥೂಲಸೂಕ್ಷ್ಮರೂಪಗಳೆರಡನ್ನೂ ಧ್ಯಾನಯೋಗ್ಯಗಳಾದ ಶುಭಾಶ್ರಯವಸ್ತುಗಳನ್ನಾಗಿ ಅಂಗೀಕರಿಸಲಾರರು. ಏಕೆಂದರೆ, ಇವೆರಡುರೂಪಗಳಿಗೂ ಮಾಯಾಸಂಬಂಧವುಂಟು. ಅಜೇತನವಾದ ಪ್ರಕೃತಿಯೇ ಮಾಯೆಯೆನಿಸುವುದು. ಈ ಮೇಲಿನ ಎರಡುರೂಪಗಳಲ್ಲಿ ಸ್ಥೂಲರೂಪವೆಂಬುದು ದೇವಮನುಷ್ಯಾದಿಚೇತನಾಚೇತನಸ್ವರೂಪಗಳಾದುದರಿಂದ ಅನೇಕದೋಷಗಳಿಗೆಡೆಯಾದ ಪ್ರಕೃತಿಯ ಸಂಬಂಧವು ಇದಕ್ಕಿದ್ದೇ ಇರಬೇಕು. ಮುಕ್ತಾತ್ವಸ್ವರೂಪವೆಂಬ ಸೂಕ್ಷ್ಮರೂಪಕ್ಕೆ ಭಗವದನುಗ್ರಹದಿಂದ ಪ್ರಕೃತಿಸಂಬಂಧವು ಬಿಟ್ಟು ಹೋಗಿದ್ದರೂ, ಹಿಂದೆ ಅದಕ್ಕೆ ಪ್ರಕೃತಿಸಂಬಂಧವಿದ್ದುದರಿಂದ, ಯೋಗಿಗಳು ಅದನ್ನೂ ಶುಭಾಶ್ರಯವಾದ ಧ್ಯೇಯವಸ್ತುವನ್ನಾಗಿ ಎಣಿಸಲಾರರು. ಜೀವನ ಬಂಧಮೋಕ್ಷಗಳೆರಡೂ ಭಗವಂತನ ಸಂಕಲ್ಪದಿಂದಲೇ ನಡೆಯಬೇಕಾದುದರಿಂದ, ಆ ಸ್ವರೂಪಕ್ಕೆ ಶುದ್ಧಿಯೆಂಬುದು ಸ್ವತಸ್ಸಿದ್ಧವಲ್ಲ. ಇದರಿಂದಲೇ ಯೋಗಿಗಳು ಅವೆರಡನ್ನೂ ಉಪಾಸನೆಮಾಡಲಾರರು.ಭಗವಂತನ ಸ್ವರೂಪವನ್ನು ಉಪಾಸಿಸಬೇಕೆಂದರೆ, ಬಹುದಿನಗಳವರೆಗೆ ಶಬ್ದಾದಿವಿಷಯಗಳಲ್ಲಿ ಬಳಿಕೆಗೊಂಡ ಮನಸ್ಸನ್ನು ಸ್ವಾಧೀನಪಡಿಸುವುದು ಕಷ್ಟವಾಗುವುದು. ಆದುದರಿಂದ ಮೊದಲು ಭಗವಂತನ ಅವತಾರಗಳನ್ನೇ ಧ್ಯಾನಿಸಿ, ಮನಸ್ಸನ್ನು ಕ್ರಮಕ್ರಮವಾಗಿ ವಶಪಡಿಸಿಕೊಂಡು,ಆಮೇಲೆ ಭಗವಂತನಲ್ಲಿಯೇ ಸಾಕ್ಷಾತ್ತಾಗಿ ಮನಸ್ಸನ್ನು ನೆಲೆಗೊಳಿಸಬೇಕು. ಭಗವಂತನ ಅಕೃತಿಗಳು ಸ್ಥೂಲವೆಂದೂ, ಸೂಕ್ಷ್ಮವೆಂದೂ, ದಿವ್ಯಮಂಗಳ ವಿಗ್ರಹವೆಂದೂ ಮೂರುವಿಧವಾಗಿರುವುವು. ಸ್ಥೂಲಸೂಕ್ಷ್ಮರೂಪಗಳೆರಡೂ, ಧ್ಯಾನಕ್ಕೆ ಆಶ್ರಯವಾಗಲಾರದೆಂದು ಮೊದಲೇ ಹೇಳಿದೆನಷ್ಟೆ? ಆದುದರಿಂದ ಭಗವಂತನ ದಿವ್ಯಮಂಗಳವಿಗ್ರಹವೇ ಧ್ಯಾನಯೋಗ್ಯವು. ಇದೇ ಶುಭಾಶ್ರಯವೆನಿಸುವುದು. ಶುಭಾಶ್ರಯವೆಂದರೆ ಮನಸ್ಸನ್ನು ಬೇರೆವಿಷಯಗಳಲ್ಲಿ ಪ್ರವರ್ತಿಸದಂತೆ ಮಾಡಿ, ಆದರಲ್ಲಿರುವ ಕಲ್ಮಷಗಳನ್ನು ನೀಗಿಸಿ,ಶುದ್ಧಮಾಡಿಡುವ ಶಕ್ತಿಯುಳ್ಳ ಭಗವಂತನ ದಿವ್ಯವಿಗ್ರಹವೇಹೊರತು ಬೇರೆಯಲ್ಲ. ಇದು ರಾಮಕೃಷ್ಣಾದಿರೂಪಗಳಿಂದ ಅನೇಕವಿಧವಾಗಿರುವುದು. ಎಲೈ ಪರೀಕ್ಷಿತ್ರಾಜನೆ! "ಚತುರ್ಮುಖನಿಂದ ಸೃಷ್ಟಿಸಲ್ಪಟ್ಟ ಈ ಬ್ರಹ್ಮಾಂಡವನ್ನು ಪರ

ಮಪುರುಷನ ಸ್ವರೂಪವೆಂದು ಹೇಳುವುದು ಯುಕ್ತವೆ? ಎಂದು ನೀನುಶಂಕಿಸ ಬೇಡ! ಆ ಬ್ರಹದೇವನಲ್ಲಿಯೂ ಪರಮಪುರುಷನೇ ಅಂತರ್ಯಾಮಿಯಾಗಿದ್ದು ಇದನ್ನು ಸೃಷ್ಟಿಸುವನು. ಅವನು ಈ ಜಗತ್ತೆಲ್ಲವನ್ನೂ ಶರೀರವಾಗಿ ಹೊಂದಿದವನಾದುದರಿಂದ ಸಮಸ್ತವೂ ಭಗವತ್ಸ್ವರೂಪವು. ಆ ವಸ್ತುಗಳಿಗೆ ವಾಚಕಗಳಾದ ಶಬ್ದಗಳೂ ಅವನಲ್ಲದೆ ಬೇರೆಯಲ್ಲ. ಅವನು ಬ್ರಹ್ಮನನ್ನೇ ತನಗೆ ಶರೀರವನ್ನಾಗಿ ಹೊಂದಿ, ದೇವಮನುಷ್ಯಾದಿಗಳೆಂಬ ನಾಮರೂಪಭೇದಗಳನ್ನೂ, ಅವುಗಳ ವ್ಯಾಪಾರಗಳನ್ನೂ ನಡೆಸುತ್ತಿರುವನು. ಜೀವನಂತೆ ಕರ್ಮಾಧೀನನಲ್ಲದೆಯೇ ಕಾರ್ಯಗಳನ್ನು ನಡೆಸುವನು. ಈ ಜಗತ್ತನ್ನು ಸೃಷ್ಟಿಸುವುದಕ್ಕೆ ಬೇರೊಬ್ಬರ ಸಹಾಯವನ್ನೂ ಅಪೇಕ್ಷಿಸುವವನಲ್ಲ. ಅವನ ಮನಸ್ಸಂಕಲ್ಪದಿಂದಲೇ ಜಗದ್ವ್ಯಾಪಾರಗಳೆಲ್ಲವೂ ನಡೆದುಹೋಗುವುವು. ಆ ಭಗವಂತನು ದೇವಾದಿರೂಪಗಳನ್ನೂ,ಆಯಾ ನಾಮಗಳನ್ನೂ,ಅವರವರ ಕೃತ್ಯಗಳನ್ನೂ ಬೇರೆಬೇರೆಯಾಗಿ ಉಂಟುಮಾಡಿದ ರೀತಿಯನ್ನು ಹೇಳುವೆನು ಕೇಳು, ಪ್ರಜಾಧಿಪತಿಗಳು, ದೇವತೆಗಳು, ಋಷಿಗಳು,ಪಿತೃದೇವತೆಗಳು,ಸಿದ್ಧರು, ಚಾರಣರು, ಗಂಧರ್ವರು, ವಿದ್ಯಾಧರರು. ಅಸುರರು, ಗುಹ್ಯಕರು, ಕಿನ್ನರರು, ಅಪ್ಸರಸ್ಸುಗಳು, ಯಕ್ಷರು, ರಾಕ್ಷಸರು, ಕಿಂಪುರುಷರು, ಭೂತಪ್ರೇತ ಪಿಶಾಚಾದಿಗಳು, ಯಾತುಧಾನರು, ಗ್ರಹಗಳು, ಮೃಗಪಕ್ಷಿಗಳು, ಪಶುಗಳು, ವೃಕ್ಷಗಳು, ಪರ್ವತಗಳು, ಸರೀಸೃಪಗಳು, (ಸರ್ಪಗಳು) ಇವೆಲ್ಲವನ್ನೂ ಬೇರೆ ಬೇರೆಯಾಗಿ ಸೃಷ್ಟಿಸಿ,ಅವಕ್ಕೆ ಬೇರೆಬೇರೆನಾಮಗಳನ್ನೂ, ವ್ಯಾಪಾರಗಳನ್ನೂ ಕಲ್ಪಿಸಿರುವನು ಇದಲ್ಲದೆ ಸ್ಥಾವರಜಂಗಮಗಳೆಂಬ ಎರಡುವರ್ಗಗಳನ್ನೂ. ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಗ ನಾಲ್ಕುವರ್ಗಗಳನ್ನೂ, ಜಲದಲ್ಲಿಯೂ, ಸ್ಥಲದಲ್ಲಿಯೂ,ಆಕಾಶದಲ್ಲಿಯೂ ವರ್ತಿಸುವ ಸಮಸ್ತವಸ್ತುಗಳನ್ನೂ ಸೃಷ್ಟಿಸಿರುವನು. ಆದರೆ ‘‘ಈಸಮಸ್ತವಸ್ತುಗಳನ್ನೂ ಒಂದೇವಿಧವಾಗಿ ಸೃಷ್ಟಿಸದೆ ಬೇರೆಬೇರೆ ಇಷ್ಟೊಂದು ವಿಧದಿಂದ ಸೃಷ್ಟಿಸಿದುದೇಕ” ಎಂದು ಕೇಳುವೆಯಾ? ರಾಜೇಂದ್ರಾ! ಜೀವನ (ಕ್ಷೇತ್ರಜ್ಞನ) ಪುಣ್ಯಪಾಪರೂಪವಾದ ಕರ್ಮಗಳೂ, ಉತ್ತಮಮಧ್ಯಮಾಧಮಭೇದದಿಂದ ನಾನಾರೂಪವಾಗಿರುವುವು. ಇದಕ್ಕಾಗಿ ಸೃಷ್ಟಿಯೂ ಅದೇತರದಲ್ಲಿ ಬೇರ್ಪಟ್ಟಿತೇ

ಹೊರತು ಬೇರೆಯಲ್ಲ. ಹೀಗೆ ಜೀವಾತ್ಮನ ಕರ್ಮಗಳು ವಿಚಿತ್ರಗಳಾಗಿರುವುದರಿಂದ, ಆ ಕರ್ಮಫಲಗಳೂ ವಿಚಿತ್ರಗಳಾಗಿ, ಆಯಾ ಕರ್ಮಗಳಿಗೆ ತಕ್ಕಂತೆ ದೇವಮನುಷ್ಯಾದಿಗಳಾದ ಹಲವು ಬಗೆಯ ರೂಪಗಳೂ, ನಾಮಗಳೂ, ವ್ಯಾಪಾರಗಳೂ ಬೇರ್ಪಡುವುವು. ಇಷ್ಟೇ ಹೊರತು ಸರ್ವೇಶ್ವರನು ಪಕ್ಷಪಾತದಿಂದ ನಾಮರೂಪಭೇದಗಳನ್ನುಂಟುಮಾಡಿರುವನೆಂದೆಣಿಸಬಾರದು ಸತ್ವ ರಜಸ್ತಮಸ್ಸುಗಳೆಂಬ ಈ ಮೂರುಗುಣಗಳ ವ್ಯತ್ಯಾಸದಿಂದ ಕರ್ಮಗಳ ಗತಿಯೂ ಮೂರುಬಗೆಯಾಗಿರುವುವು. ಇವುಗಳಲ್ಲಿ ಸಾತ್ವಿಕಕರ್ಮಗಳನ್ನು ನಡೆಸಿದವರು ಸುಖಹೇತುವಾಗಿಯೂ, ಉತ್ತಮವಾಗಿಯೂ ಇರುವ ದೇವತ್ವವನ್ನು ಹೊಂದುವರು. ರಾಜಸಕರ್ಮವನ್ನು ನಡೆಸಿದವರು ಮಧ್ಯಮವಾದ ಮನುಷ್ಯಜನ್ಮವನ್ನೆತ್ತುವರು. ತಾಮಸಕರ್ಮಗಳನ್ನಾಚರಿಸಿದವರು ಜಡರೂಪವಾದ ಪಶು,ಪಕ್ಷಿ,ಕ್ರಿಮಿ, ಕೀಟ ಸ್ಥಾವರಾದಿ ಜನ್ಮಗಳನ್ನೆತ್ತುವರು.ಈ ಮೂರು ತರಗತಿಯವರೂಕೂಡ ಒಂದೇಸ್ಥಿತಿಯಲ್ಲಿರಲಾರರು!ಅವರಲ್ಲಿ ಪ್ರಧಾನವೆನಿಸಿಕೊಂಡ ರಜೋಗುಣವಾಗಲಿ,ತಮೋಗುಣವಾಗಲಿ,ಸತ್ವಗುಣವಾಗಲಿ ಮತ್ತೊಂದು ಗುಣದಿಂದ ಉಪಹತವಾದಾಗ, ಆ ಒಂದೊಂದು ಗುಣವುಳ್ಳವರಲ್ಲಿಯೇ ಮೂರುವಿಭಾಗಗಳುಂಟಾಗುವುವು. ಹೇಗೆಂದರೆ, ರಜೋಗುಣಪ್ರಧಾನವಾದ ಮಾನವಜನ್ಮದಲ್ಲಿಯೇ ಕೇವಲರಜೋಗುಣವುಳ್ಳವರೆಂದೂ, ಸತ್ವಮಿಶ್ರವಾದ ರಜೋಗುಣವುಳ್ಳವರೆಂದೂ, ತಮೋಮಿಶ್ರವಾದ ರಜೋಗುಣವುಳ್ಳವರೆಂದೂ ಮೂರುಬಗೆಯಾಗಿರುವರು. ಇದೇರೀತಿಯಲ್ಲಿ ಸತ್ವಪ್ರಧಾನರಾದ ದೇವತೆಗಳಲ್ಲಿಯೂ, ತಮಃಪ್ರಧಾನಗಳಾದ ಮೃಗಾದಿಗಳಲ್ಲಿಯೂ ಮೂರುವಿಧಗಳುಂಟು. ಎಲ್ಲೈ ರಾಜೇಂದ್ರನೆ! ಕರ್ಮಗಳ ಫಲವನ್ನೂ, ಸೃಷ್ಟಿಕ್ರಮವನ್ನೂ ಕೇಳಿದೆಯಷ್ಟೆ? ಇನ್ನು ಮೇಲೆ ಆ ಭಗವಂತನು ತನ್ನಿಂದ ಸೃಷ್ಟವಾದ ಜಗತ್ತನ್ನು ತಾನಾಗಿಯೇ ಹೇಗೆ ರಕ್ಷಿಸುತ್ತಿರುವನೆಂಬುದನ್ನು ತಿಳಿಸುವೆನು ಕೇಳು! ಜಗತ್ಕರ್ತನಾದ ಆ ಭಗವಂತನು, ತಿರ್ಯಕ್ಕುಗಳಲ್ಲಿ ಮತ್ಸ್ಯಕೂರ್ಮವರಾಹಾದ್ಯವತಾರಗಳನ್ನೂ, ಮನುಷ್ಯರಲ್ಲಿ ರಾಮಕೃಷ್ಣಾದ್ಯವತಾರಗಳನ್ನೂ, ದೇವತೆಗಳಲ್ಲಿ ವಾಮನಾದ್ಯವತಾರಗಳನ್ನೂ ಸ್ವೀಕರಿಸಿ, ಧರ್ಮಶರೀರಕನಾಗಿ, ಈ ವಿಶ್ವವನ್ನು ಪಾಲಿಸುತ್ತಿರುವನು. ಆ ಭಗವಂತನೇ

ಕಲ್ಪಾಂತರದಲ್ಲಿ ಕಾಲಾಗ್ನಿರುದ್ರಶರೀರವುಳ್ಳವನಾಗಿ,ತನ್ನಿಂದ ಸೃಷ್ಟವಾದ ಈ ಸಮಸ್ತಜಗತ್ತನ್ನೂ ವಾಯುವು ಮೇಘಪಙ್ತಿಯನ್ನು ನಾಶಮಾಡುವಂತೆ ನಾಶಹೊಂದಿಸುವನು. ಹೀಗೆ ಜಗತ್ತಿನ ಸೃಷ್ಟ್ಯಾದಿಗಳಿಗೆ ಕಾರಣನಾಗಿ ಜ್ಞಾನಶಕ್ತಿಬಲಾದಿಷಡ್ಗುಣಪರಿಪೂರ್ಣನಾದ ಭಗವಂತನ ಸ್ವರೂಪವನ್ನು ನಿನಗೆ ತಿಳಿಸಿದುದಾಯಿತು. ಬ್ರಹ್ಮಜ್ಞಾನಿಗಳು ಅವನನ್ನು ಕೇವಲ ಚಿದ ಚಿದ್ರೂಪನನ್ನಾಗಿ ಭಾವಿಸದೆ ಇವುಗಳಿಗಿಂತಲೂ ವಿಲಕ್ಷಣವನ್ನಾಗಿಯೇ ಭಾವಿಸುವರು. ಜೀವನಿಗೆ ಜ್ಞಾನಾದಿಗುಣಗಳ ಪೂರ್ಣತೆಯಿಲ್ಲದುದರಿಂದ ಅವನ ಕಾರ್ಯಗಳೆಲ್ಲವೂ ಕರ್ಮಾಧೀನವಾಗಿರುವುವು. ಪರಮಾತ್ಮನ ಕಾರ್ಯಗಳಾದರೋ ಆತನ ಸಂಕಲ್ಪಮಾತ್ರದಿಂದಲೇ ನಡೆಯುವುವು.ಆದರೆ ,,ಆ ಭಗವಂತನೇ ಸೃಷ್ಟಿಕರ್ತನಾಗಿಯೂ, ಸೃಷ್ಟಿಸಲ್ಪಡತಕ್ಕವನಾಗಿಯೂ ಇರುವನೆಂಬುದು ಹೇಗೆ? ಮತ್ತು ಅವನೇ ಸೃಷ್ಟಿಕರ್ತನಾಗಿದ್ದರೂ ಆತನು ಕರ್ತನಲ್ಲವೆಂಬುದು ಹೇಗೆ? ಹೀಗೆ ಒಬ್ಬನಲ್ಲಿಯೇ ಪರಸ್ಪರವಿರುದ್ಧಧರ್ಮಗಳಿಗೆ ಅವಕಾಶವುಂಟೆ?" ಎಂದು ನೀನು ಆಕ್ಷೇಪಿಸಬಹುದು. ಅದಕ್ಕೂಸಮಾಧಾನವನ್ನು ಹೇಳುವೆನು ಕೇಳು! ಪರಮಾತ್ಮನು ಸೃಷ್ಟ್ಯಾದಿಕಾರ್ಯಗಳನ್ನು ನಡೆಸುವಾಗ, ಆಯಾಕಾಲದಲ್ಲಿ ಆಯಾಕಾರ್ಯಗಳಿಗೆ ತಾನೂ ಭಾಗಿಯಾಗಿ ನಿಲ್ಲುವನು. ಆದರೆ ಅವನ ಸ್ವರೂಪವು ವಾಸ್ತವದಲ್ಲಿ ಈ ವಿಕಾರಗಳಿಗೆ! ಈಡಾದುದಲ್ಲ. ಹೇಗೆಂದರೆ, ಆತನು ಸೃಷ್ಟಿಸ್ಥಿತಿಸಂಹಾರಗಳಿಗೆ ಈಡಾಗತಕ್ಕ ಸಮಸ್ತವಸ್ತುಗಳಲ್ಲಿಯೂ ಅಂತರಾತ್ಮನಾಗಿರುವುದರಿಂದ, ಅವುಗಳ ಮೂಲಕವಾಗಿ ಅವನಿಗೂ ಈ ಅವಸ್ಥೆಗಳುಂಟಾಗುವುವೆಂದು ಹೇಳುವುವೇ ಹೊರತು, ಇವೊಂದೂ ಅವನಿಗೆ ಸ್ವರೂಪಸಿದ್ಧವಲ್ಲ ಇನ್ನು ಅವನಿಗೆ ಕರ್ತೃತ್ವದ ಸಂಬಂಧವು ಹೇಗೆಂಬುದನ್ನು ತಿಳಿಸುವೆನುಕೇಳು.ಪ್ರಕೃತಿಸಂಬಂಧದಿಂದ ಜೀವಾತ್ಮನಲ್ಲಿ ಆರೋಪಿತವಾಗಿಯೂ, ಆ ಪ್ರಕೃತಿಯ ಪರಿಣಾಮದಿಂದುಂಟಾದ ಶರೀರೇಂದ್ರಿಯಗಳನ್ನು ಹೊಂದತಕ್ಕುದಾಗಿಯೂ ಇರುವ ಕರ್ತೃತ್ವವು ಪರಮಾತ್ಮನಲ್ಲಿ ಎಂದಿಗೂ ಸೇರಲಾರದು. ಇದರಿಂದಲೇ ಆತನು ಕರ್ತನಲ್ಲವೆಂದು ಸಿದ್ಧವಾಗುವುದು. ಜೀವನಂತೆ ಪ್ರಕೃತಿಸಂಬಂಧದಿಂದ ಬಂದ ಕರ್ತೃತ್ವವು ಆತನಿಗಿಲ್ಲವೆಂಬ ಅಭಿಸಂಧ್ಯಾಯದಿಂದಲೇ

ಅವನಿಗೆ ಕರ್ತೃತ್ವವಿಲ್ಲವೆಂದು ಹೇಳುವರು. ತನ್ನ ಸಂಕಲ್ಪಮಾತ್ರದಿಂದಲೇ ಸೃಷ್ಟ್ಯಾದಿಗಳಾದ ಕಾರ್ಯಗಳನ್ನು ನಡೆಸುವನೆಂಬ ಭಾವದಿಂದ ಅವನನ್ನು ಕರ್ತನೆಂದೂ ಹೇಳುವರು. ಇದರಿಂದ ಕರ್ತೃತ್ವಾಕರ್ತೃತ್ವಗಳೆರಡೂ, ಅವನಲ್ಲಿ ಹೊಂದುವುವು. ಅದುದರಿಂದ ಎಲೈ ಪರೀಕ್ಷಿದ್ರಾಜನೆ! ನೀನು ಹೇಳಿದ ವಿರೋಧವು ಪರಿಹೃತವಾಯಿತಷ್ಟೆ? ಪ್ರಪಂಚದಂತೆ ಕರ್ಮಸಂಬಂಧದಿಂದುಂಟಾಗುವ ಜನ್ಮಾದಿಗಳೊಂದೂ ಪರಮಾತ್ಮನಲ್ಲಿ ಸೇರಲಾರವು. ಆ ಭಗವಂತನ ಜನ್ಮಾದಿಗಳೂ, ವ್ಯಾಪಾರಗಳೂ, ಅವನ ಸಂಕಲ್ಪದಿಂದಲೂ, ಜ್ಞಾನದಿಂದಲೂ ನಡೆಯುವುದೇ ಹೊರತು ಬೇರೆಯೆಲ್ಲ! ಕರ್ಮಸಂಬಂಧದಿಂದುಂಟಾಗುವ ಕರ್ತೃತ್ವವು ತನಗಿಲ್ಲವೆಂಬುದನ್ನು ತೋರಿಸುವುದಕ್ಕಾಗಿಯೇ, ತನ್ನ ಸಂಕಲ್ಪದಿಂದ ದೇವಮನುಷ್ಯಾದಿಜನ್ಮಗಳನ್ನೂ, ಅವರ ವ್ಯಾಪಾರಗಳನ್ನೂ ತನ್ನಲ್ಲಿ ಆರೋಪಿಸಿಕೊಂಡು, ಅವತಾರಗಳನ್ನೆತ್ತಿ, ಅಮಾನುಷಕೃತ್ಯಗಳಿಂದ ತಾನೇ ಪರಮಪುರುಷನೆಂಬುದನ್ನು ತೋರಿಸುತ್ತಿರುವನು. ಓ ರಾಜೇಂದ್ರನೆ! ಬ್ರಹ್ಮನಿಗೆ ಸಂಬಂಧಪಟ್ಟ ಮಹಾಕಲ್ಪವನ್ನೂ ಅವಾಂತರಕಲ್ಪವನ್ನೂ ಸಂಗ್ರಹಿಸಿ ನಿನಗೆ ಹೇಳಿರುವೆನು. ಮಹತ್ತತ್ವದಿಂದ ಭೂಮಿಯವರೆಗಿರುವ ಪ್ರಾಕೃತಸೃಷ್ಟಿಗಳೂ, ಪೃಥಿವ್ಯಾದಿವಿಕಾರಗಳಾದ ಸೃಷ್ಟಿಗಳೂ, ಮಹಾಕಲ್ಪದಲ್ಲಿಯೇ ಉಂಟಾಗುವುವು. ಒಂದೊಂದು ಮಹಾಕಲ್ಪದಲ್ಲಿಯೂ ಇದೇ ವಿಧವಾದ ಸೃಷ್ಟಿಯು ನಡೆಯುತ್ತಿರುವುದು. ಎಲೈ ಪರೀಕ್ಷಿದ್ರಾಜನೆ! ನೀನು ಕೇಳಿದ ಪ್ರಶ್ನೆಗಳಲ್ಲ ಕಲವಕ್ಕೆಮಾತ್ರ ಉತ್ತರವನ್ನು ಹೇಳಿರುವೆನು. ಸ್ಥೂಲಸೂಕ್ಷ್ಮಗಳೆಂಬ ಕಾಲಪರಿಮಾಣವನ್ನೂ, ಕಲ್ಪಲಕ್ಷಣಗಳನ್ನೂ, ಮನ್ವಂತರಾದಿಗಳನ್ನೂ, ಮುಂದಿನ ಸ್ಕಂಧದಲ್ಲಿ ವಿವರಿಸಿ ಹೇಳುವೆನು. ಅಲ್ಲಿಯೇ ಪದ್ಮಕಲ್ಪವನ್ನೂ ವಿಸ್ತರಿಸಿ ತಿಳಿಸುವೆನು. ಅವೆಲ್ಲವನ್ನೂ ನೀನು ಸಾವಧಾನವಾಗಿ ಕೇಳಬೇಕು." ಎಂದನು. ಹೀಗೆಂದು ಶುಕಮಹಾಮುನಿಯು ಪರೀಕ್ಷಿದ್ರಾಜನಿಗೆ ಹೇಳಿದ ವಿಷಯಗಳನ್ನು, ಸೂತಪೌರಾಣಿಕನು ಶೌನಕಾದಿಗಳಿಗೆ ತಿಳಿಸಲು, ಶೌನಕಮಹಾಮುನಿಯು ತಿರುಗಿ ಸೂತನನ್ನು ಕುರಿತು, "ಓ ಮಹಾತ್ಮಾ! ಭಕ್ತೋತ್ತಮನಾಗಿಯೂ ತತ್ವಜ್ಞಾನಿಯಾಗಿಯೂ ಇರುವ ವಿದುರನು ತನ್ನ ಬಂಧುವರ್ಗವೆಲ್ಲವನ್ನೂ ತೊರೆದು, ಪುಣ್ಯತೀರ್ಥಯಾತ್ರೆಗೆ ಹೊರಟನೆಂ

ದೂ, ಈ ಸಂದರ್ಭದಲ್ಲಿ ವಿದುರನಿಗೂ ಮೈತ್ರೇಯಮಹರ್ಷಿಗೂ ಸಮಾಗ ಮವುಂಟಾಯಿತೆಂದೂ ಮೊದಲು ನೀನು ಹೇಳಿದೆಯಷ್ಟೆ! ಆ ವಿದುರನು ಮೈತ್ರೇಯನನ್ನು ಸಂಧಿಸಿದ ಸ್ಥಳವಾವುದು? ಮೈತ್ರೇಯನು ವಿದುರನಿಗೆ ಉಪದೇಶಿಸಿದ ವೇದಾಂತವಿಷಯಗಳಾವುವು? ಅವರಿಬ್ಬರಿಗೂ ನಡೆದ ಸಂವಾದದ ಕ್ರಮವೇನು? ಆ ವಿದುರನ ಮುಂದಿನ ವೃತ್ತಾಂತವೇನು? ಆತನು ತನ್ನ ಇಷ್ಟಬಂಧುಗಳನ್ನೆಲ್ಲಾ ತೊರೆದು ಬರುವುದಕ್ಕೆ ಕಾರಣವೇನು? ಈ ಸಿವರಗಳೆಲ್ಲವನ್ನೂ ನಮಗೆ ವಿಸ್ತರವಾಗಿ ತಿಳಿಸಬೇಕು!" ಎಂದು ಪ್ರಾರ್ಥಿಸಿದನು. ಅದಕ್ಕಾ ಸೂತನು ಶೌನಕಾದಿಗಳನ್ನು ಕುರಿತು "ಎಲೈ ಮುನಿಶ್ರೇಷ್ಠರೆ! ನೀವು ಕೇಳುವ ಇದೇ ವಿಷಯವನ್ನು ಕುರಿತು ಪರೀಕ್ಷಿದ್ರಾಜನು ಶುಕಮುನಿಯನ್ನು ಪ್ರಶ್ನೆಮಾಡಿದುದರಮೇಲೆ, ಶುಕನು ಆ ವಿಷಯಗಳೆಲ್ಲವನ್ನೂ ಕ್ರಮವಾಗಿ ತಿಳಿಸಿರುವನು. ಅದನ್ನೇ ನಿಮಗೆ ತಿಳಿಸುವೆನು. ಕೇಳಿರಿ!"ಎಂದನು. ಇದು ಹತ್ತನೆಯ ಅಧ್ಯಾಯವು.

ದ್ವಿತೀಯ ಸ್ಕಂಧವು ಸಮಾಪ್ತವು.

ಶ್ರೀಕೃಷ್ಣಾಯ ಪರಬ್ರಹ್ಮಣೇನಮಃ.

ಶುಭಂ ಭೂಯಾತ್.